# ರನ್ನ

## ಗದಾಯುದ್ಧ ಕಾವ್ಯ ಪ್ರಸಂಗ ಓದು



ಸಿ.ಪಿ. ನಾಗರಾಜ್

# ರನ್ನ
# ಗದಾಯುದ್ಧ ಕಾವ್ಯ ಪ್ರಸಂಗ ಓದು

**ಸಿ.ಪಿ. ನಾಗರಾಜ**

**ನಾಗು ಸ್ಮಾರಕ ಪ್ರಕಾಶನ**
75, 5ನೆಯ ಕ್ರಾಸ್, ‘ಎ ‘ಬ್ಲಾಕ್, ಕ್ರಿಶ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–560 059

**RANNA GADAYUDDHA KAVYA**
**PRASANGA ODU** by C.P.Nagaraja.
Published by Nagu Smaraka Prakashana, 75,
5th cross, ' A ' Block, Krishna Garden, Bengaluru-560 059.
Mobile : 9986347521.

| | | |
|---|---|---|
| First Edition | : | 2025 |
| Page | : | 348 |
| Price | : | **Rs. 450/-** |
| Paper | : | Stora Cremy |
| Size | : | Demy 1/8 |
| Copy right | : | Author |
| Cover Design | : | Vinyas Badigera |
| Page Layout | : | Harish K.R., 8553184584 |

# ನನ್ನ ನುಡಿ

ಕ್ರಿ.ಶ.೧೯೪೯ ರಲ್ಲಿ ತೀ.ನಂ.ಶ್ರೀಕಂಠಯ್ಯನವರು ಸಂಪಾದಕರಾಗಿ ಪ್ರಕಟಿಸಿದ 'ಕವಿ ರನ್ನನ ಗದಾಯುದ್ಧ ಸಂಗ್ರಹಂ' ಕೃತಿಯನ್ನು ಆಕರವಾಗಿಟ್ಟುಕೊಂಡು 'ಗದಾಯುದ್ಧ ಕಾವ್ಯ ಪ್ರಸಂಗ ಓದು' ಎಂಬ ಈ ಹೊತ್ತಗೆಯನ್ನು ಸಿದ್ಧಪಡಿಸಿದ್ದೇನೆ. ಗದಾಯುದ್ಧ ಕಾವ್ಯ ಸಂಗ್ರಹದಲ್ಲಿನ ಪಠ್ಯವನ್ನು ಇಪ್ಪತ್ತೊಂಬತ್ತು ಪ್ರಸಂಗಗಳನ್ನಾಗಿ ವಿಂಗಡಿಸಿಕೊಂಡು, ಕಾವ್ಯದ ನುಡಿರಚನೆಯನ್ನು ನಾಟಕ ರೂಪಕ್ಕೆ ಅಳವಡಿಸಿ, ಹಳಗನ್ನಡದ ನುಡಿಗೆ ಹೊಸಗನ್ನಡದಲ್ಲಿ ತಿರುಳನ್ನು ಬರೆದಿದ್ದೇನೆ. ಈ ಬರಹದ ರಚನೆಗೆ ಗುರುಗಳಾದ ಕೆ.ವಿ.ನಾರಾಯಣ ಅವರು ಮಾರ್ಗದರ್ಶನ ನೀಡಿದ್ದಾರೆ. ಆನ್ ಲೈನ್ ಮ್ಯಾಗಜಿನ್ 'ಹೊನಲು' (honalu.net) ಮಿಂದಾಣದಲ್ಲಿ ಇಪ್ಪತ್ತೊಂಬತ್ತು ಕಂತುಗಳಲ್ಲಿ ಈ ಬರಹ ಪ್ರಕಟಗೊಂಡಿದೆ. ಮೂಡಿಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗರು ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಈ ರೀತಿ ಬರಹ ರೂಪುಗೊಳ್ಳಲು ಗುರುಗಳಾದ ಕೆ.ವಿ.ನಾರಾಯಣ ಅವರ ಮಾರ್ಗದರ್ಶನ, ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ನೀಡಿದ ಉತ್ತೇಜನವೇ ಕಾರಣವಾಗಿದೆ.

ಈ ಬರಹದ ಕರಡು ಪ್ರತಿಯನ್ನು ನನ್ನ ಗುರು ಹಿರಿಯರು ಮತ್ತು ಗೆಳೆಯರಿಗೆ ಅಂಚೆ ಮೂಲಕ ಕಳುಹಿಸಿದ್ದೆನು. ಅವರೆಲ್ಲರೂ ಓದಿ ನೋಡಿ ಉತ್ತೇಜನದ ನುಡಿಗಳನ್ನಾಡಿದ್ದಾರೆ. ನನ್ನ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿ ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ. ಗೆಳೆಯರಾದ ವಿನ್ಯಾಸ್ ಬಡಿಗೇರ ಅವರು ಮುಖಪುಟವನ್ನು ರಚಿಸಿಕೊಟ್ಟಿದ್ದಾರೆ. ಈ ಹೊತ್ತಗೆಯ ಪುಟ ವಿನ್ಯಾಸವನ್ನು ಕೆ.ಆರ್.ಹರೀಶ್ ಅವರು ಸಿದ್ಧಪಡಿಸಿದ್ದಾರೆ.

ಹಳಗನ್ನಡ ಕಾವ್ಯದ ನುಡಿರಚನೆಗೆ ಹೊಸಗನ್ನಡದ ವಾಕ್ಯಗಳನ್ನು ಬರೆಯುವಾಗ ಗುರು ಸಮಾನರಾದ ಡಿ.ಎನ್.ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸ ಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ.

ಮಹಾಕವಿ ಕುವೆಂಪು ಅವರು ಮಹಾಕವಿ ರನ್ನನ ಗದಾಯುದ್ಧ ಕಾವ್ಯವನ್ನು ಕುರಿತು ಬರೆದಿರುವ 'ಶಕ್ತಿ ಕವಿ' ರನ್ನ ಎಂಬ ಬರಹದಿಂದ ಕೆಲವು ಸಾಲುಗಳನ್ನು ಈ ಹೊತ್ತಗೆಯ ಬೆನ್ನುಡಿಯಲ್ಲಿ ಹಾಕಿಕೊಂಡಿದ್ದೇನೆ.

'ರನ್ನನ ಗದಾಯುದ್ಧ ಕಾವ್ಯ ಪ್ರಸಂಗ ಓದು' ಹೊತ್ತಗೆಯ ರಚನೆಗೆ ನೆರವಾದ ಈ ಎಲ್ಲಾ ಗುರು ಹಿರಿಯರಿಗೆ, ಗೆಳೆಯರಿಗೆ, ಸಂಪಾದಕರ ವರ್ಗದವರಿಗೆ, ಓದುಗರಿಗೆ ಮತ್ತು ಕುವೆಂಪು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

**ಸಿ.ಪಿ.ನಾಗರಾಜ**

# ಓದಿಗೆ ನೆರವಾದ ಪುಸ್ತಕಗಳು

೧. **ತೀ.ನಂ.ಶ್ರೀಕಂಠಯ್ಯ**
ಸಂಪಾದಕರು
**ಕವಿ ರನ್ನನ ಗದಾ ಯುದ್ಧ ಸಂಗ್ರಹಂ,**
೧ನೆಯ ಸಂಪುಟ, (ಕಾವ್ಯ ಭಾಗ ಮತ್ತು ಟಿಪ್ಪಣಿಗಳು)
ಪ್ರಕಾಶಕರು: ಕಾವ್ಯಾಲಯ, ಮೈಸೂರು.
ಮೊದಲ ಮುದ್ರಣ: ೧೯೪೯

೨. **ಪಿ.ಸುಬ್ರಾಯ ಭಟ್**
**ಗದಾಯುದ್ಧ ದರ್ಪಣಂ**
ಕವಿ ಚಕ್ರವರ್ತಿ ಕವಿ ರನ್ನ ವಿರಚಿತ ಗದಾಯುದ್ಧದ
(ಸಾಹಸ ಭೀಮ ವಿಜಯದ) ಮೂಲಸಹಿತ ವಿವರಣಾತ್ಮಕ ವ್ಯಾಖ್ಯಾನ.
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಮೊದಲ ಮುದ್ರಣ : ೧೯೭೫

೩. **ಶ್ರೀ**
(ಬಿ.ಎಂ. ಶ್ರೀಕಂಠಯ್ಯ)
**ಗದಾಯುದ್ಧ ನಾಟಕಂ**
ಶಾರದಾ ಮಂದಿರ, ಮೈಸೂರು
ಮೊದಲ ಮುದ್ರಣ : ೧೯೮೨

೪. **ಆರ್.ವಿ.ಕುಲಕರ್ಣಿ**

ಗದ್ಯಾನುವಾದ

**ಸಾಹಸ ಭೀಮ ವಿಜಯಂ**

(ಗದಾಯುದ್ಧಂ)

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮೊದಲ ಮುದ್ರಣ: ೧೯೮೫

೫. **ಕೆ.ಸಿ.ಶಿವಾರೆಡ್ಡಿ**

ಸಂಪಾದಕರು

**ಕುವೆಂಪು ಸಮಗ್ರ ಗದ್ಯ**

ಸಂಪುಟ–೧

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮೊದಲ ಮುದ್ರಣ : ೨೦೦೩

೬. **ಎಲ್.ಬಸವರಾಜು**

**ರನ್ನನ ಸರಳ ಗದಾಯುದ್ಧ ವ್ಯಾಖ್ಯಾನ ಸಹಿತ**

ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್

ಕೃಷ್ಣಾಪುರ ದೊಡ್ಡಿ.

ಮೊದಲ ಮುದ್ರಣ: ೨೦೦೬

೬. **ಹಂಪ ನಾಗರಾಜಯ್ಯ**

ಸಂಪಾದಕರು

**ರನ್ನ ಸಂಪುಟ** :

ಅಜಿತ ತೀರ್ಥಂಕರ ಪುರಾಣ ತಿಲಕಂ

ಸಾಹಸ ಭೀಮ ವಿಜಯಂ

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೊದಲ ಮುದ್ರಣ:೨೦೦೬

**೭. ಮೈನುದ್ದೀನ ರೇವಡಿಗಾರ**

ಅನ್ವಯಾನುಸಾರ ಅರ್ಥ ಮತ್ತು ಹೊಸಗನ್ನಡ ಪದ್ಯಾನುವಾದಕರು

**ರನ್ನನ ಸಾಹಸ ಭೀಮ ವಿಜಯಂ**

(ಗದಾಯುದ್ಧ )

ಹಂಬಲ ಪ್ರಕಾಶನ, ಬಾಗಿಲಕೋಟೆ.

ಮೊದಲ ಮುದ್ರಣ: ೨೦೧೮

**೮. ಟಿ.ವಿ.ವೆಂಕಟಾಚಲ ಶಾಸ್ತ್ರೀ**

ಸಂಪಾದಕರು

**ಕವಿ ರನ್ನ ವಿರಚಿತಮ್ ಸಾಹಸ ಭೀಮ ವಿಜಯಮ್**

(ಗದಾಯುದ್ಧಮ್)

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಮೊದಲ ಮುದ್ರಣ : ೨೦೨೨

# ಪ ರಿ ವಿ ಡಿ

# ಕವಿ ಪರಿಚಯ

| | | |
|---|---|---|
| **ಕವಿಯ ಹೆಸರು** | : | ರನ್ನ |
| **ಕಾಲ** | : | ಕ್ರಿ.ಶ.೯೪೯ |
| **ಹುಟ್ಟಿದ ಊರು** | : | ಮುದೋಳ/ಮುದವೊಳಲು,<br>ಬಾಗಲಕೋಟೆ (ಜಿಲ್ಲೆ) |
| **ತಾಯಿ** | : | ಅಬ್ಬಲಬ್ಬೆ |
| **ತಂದೆ** | : | ಜಿನವಲ್ಲಭ |
| **ಗುರು** | : | ಅಜಿತಸೇನಾಚಾರ್ಯ |
| **ಪೋಷಕರು** | : | ಚಾವುಂಡರಾಯ<br>ಅತ್ತಿಮಬ್ಬೆ |
| **ಆಶ್ರಯ** | : | ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನ ಒಡ್ಡೋಲಗದಲ್ಲಿ ಕವಿ |
| **ರಚಿಸಿದ ಕಾವ್ಯಗಳು** | : | ೧. ಗದಾಯುದ್ಧ / ಸಾಹಸ ಭೀಮ ವಿಜಯ<br>೨. ಅಜಿತನಾಥ ಪುರಾಣ |
| **ರಚಿಸಿದ ಶಬ್ದಕೋಶ** | : | ರನ್ನ ಕಂದ |

## ನೋಟ–ಒಂದು

# ಭೀಮಸೇನನ ಪ್ರತಿಜ್ಞೆ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'**ಭೀಮಸೇನ ಪ್ರತಿಜ್ಞೆ**'** ಎಂಬ ಹೆಸರಿನ ಎರಡನೆಯ ಅಧ್ಯಾಯದ 2 ನೆಯ ಗದ್ಯದಿಂದ 22 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ ಅಳವಡಿಸಿದೆ.

## ಪಾತ್ರಗಳು

**ದ್ರೌಪದಿ** : ದ್ರುಪದ ರಾಜನ ಮಗಳು. ಪಾಂಡವರ ಹೆಂಡತಿ.

**ಭೀಮ** : ಕುಂತಿ ಮತ್ತು ಪಾಂಡುರಾಜನ ಮಗ. ಧರ್ಮರಾಯ ಈತನ ಅಣ್ಣ. ಅರ್ಜುನ–ನಕುಲ–ಸಹದೇವ ಈತನ ತಮ್ಮಂದಿರು.

**ವಿದೂಷಕ** : ಭೀಮನ ಆಪ್ತ ಸಚಿವ ಮತ್ತು ಹಾಸ್ಯಗಾರ.

## ಭೀಮಸೇನನ ಪ್ರತಿಜ್ಞೆ

ಆ ಪ್ರಸ್ತಾವದೊಳ್ ಯಜ್ಞವೇದೀಸಂಭವೆಯುಮ್ ಯಾಜ್ಞಸೇನಿಯುಮ್... ದ್ರುಪದ ರಾಜೋಪವನ ಜಯ ವೈಜಯಂತಿಯುಮ್ ಎನಿಸಿದ ಪಾಂಚಾಲರಾಜ ತನೂಜೆ... ಅನವರತ ಬಾಷ್ಪವಾರಿ ಧಾರಾಪೂರ ಪರಿವಾರಿತ ಪಲ್ಲವನೇತ್ರೆ ಯುಮ್... ಅಸಹ್ಯಪರಿಭವಾನಲ ದಂದಹ್ಯಮಾನಗಾತ್ರೆಯುಮಾಗಿ... ದೃಷ್ಟಾದೃಷ್ಟ ಪರಂಪರೆಯೆಂಬ ವೃದ್ಧ ಕಂಚುಕಿಯುಮ್... ಬುದ್ಧಿಮತಿಯೆಂಬ ಮೇಳದ ಕೆಳದಿಯುಮ್ ಬೆರಸು ದೇವಾಸುರ ಯುದ್ಧಕ್ಕೆ ಕರಗಮ್ ಪೊತ್ತಳ್ ಎಂಬಂತೆ ಪವಮಾನ ತನುಜನಲ್ಲಿಗೆ ಬಂದು..

**ದ್ರೌಪದಿ** : ದನುಜವಿರೋಧಿ ಮಾಡಿದೊಡಮ್ ಆಗದ ಸಂಧಿಯೊಳೇನೊ ... ನಿನ್ನ ಸೈಪಿನೊಳ್ ಅರಿಸೇನೆ ಅವಶಿಷ್ಟ ನಿರ್ಧನ ಸುಯೋಧನ ಮಾಯ್ತು... ಇಂದು ಸಿಂಧುನಂದನ ಧೃತರಾಷ್ಟ್ರರಿರ್ದು ಒರೆಯೆ... ನಮ್ಮ ಅರಸನ್ ಮರಳ್ದು ಇಂಬುಕೆಯ್ಗುಮೆಂದು ಎನಗೆ ಅನುಶಯಮಾದುದು... ಕೌರವಾಂತಕಾ, ಸಂಶಯಮಮ್ ಕಳೆ... ಖಳ ದುಶ್ಶಾಸನ ವಕ್ಷಸ್ಥಳೋಚ್ಚಲತ್ ಕೃಷ್ಣ ರಕ್ತ ಜಲದಿಮ್ ಕೋಪಾನಳನಮ್ ಮಳ್ಗಿಸಿ... ನೀನುಮ್ ಗಳಾ... ಗಳಿತ ಕೋಪನಿರ್ಪ ತೆರದಿಂದೆ ಇರ್ದಯ್. ಅಹಿತರೊಳ್ ಸಮವಾಯಮ್ ಸಂಧಿ ಮಾಡಿ ಯಮಸೂನು ಪೇಳೆ... ನಿಮಗೆ ದಲ್ ವನವಾಸವೆ ಶರಣ್... ಅಂದು ಅಗ್ನಿಮುಖದೆ ಪುಟ್ಟಿದುದರಿಂದೆ... ಎನಗಮ್ ಅಗ್ನಿಮುಖಮ್ ಶರಣ್.

(ಎಂದು ನೊಂದು ನುಡಿಯೆ, ಮರುನ್ನಂದನನ್ ದರಹಸಿತ ವದನಾರವಿಂದನಾಗಿ ತನ್ನ ಅಂತರ್ಗತದೊಳ್)

**ಭೀಮಸೇನ :** ಕುರುರಾಜಾನುಜ ಭೀಕರ ಕರವಿಲುಳಿತ ನೀಲಕಬರಿಭರಮಮ್ ಪಿಡಿದುಮ್ ಪರಿಭವಿಸಲ್... ಕೃಷ್ಣೆಗೆ ಮಿಗೆ ಕೋಪಮಮ್ ಮನಸ್ತಾಪಮುಮನ್ ದೊರೆಕೊಳಿಸದೆ.

(ಎಂದು ಉಪಲಕ್ಷಿಸಿ)

ಯಮಪುತ್ರನ್ ಜೂದಿಮ್ ಧಾತ್ರಿಯುಮನ್... ಈ ಹುತಾಶನ ಪುತ್ರಿಯುಮನ್ ಬರಿದೆ ಸೋಲ್ತನಲ್ಲನ್... ರಿಪುಗೆ ಕ್ಷತ್ರಿಯ ತೇಜಮುಮಮ್ ಅಂದೆ ಸೋಲ್ತನಾಗಲೆವೇಡಾ.

(ಎಂದು ಅನಿಲಸುತನ್ ನಿಜಾಗ್ರಜಂಗೆ ಮುಳಿದು)

ದ್ರೌಪದಿಯನ್ ಪರಿಭವಿಸುವಲ್ಲಿ ಪವನಸೂನುಗಮ್ ಪಾರ್ಥಂಗಮ್ ನೋಡುತ್ತಿರಲಕ್ಕುಮೆ... ಪರವಶದೊಳಿರ್ದರೋ ಮೇಣ್... ಪರಾರ್ಜಿತ ಪ್ರಾಣರಾದರೋ

(ಎಂದು ತನಗಮ್ ಅರ್ಜುನಂಗಮ್ ಒಡನೆ ಮುಳಿದು)

ಅಂದು ಅಣ್ಣನ ಸೂನೃತವಚನಮ್ ಎಂಬ ಮಂತ್ರಾಕ್ಷರದಿಮ್ ನರನುಮ್ ಆನುಮ್ ವಿನಯಮನೆ ಬಗೆದು, ವಿಕ್ರಮಮನೆ ಬಗೆಯೆವೆ... ಎನಗಮ್ ಸಮ್ಮೋಹನಮ್ ಆದುದಕ್ಕುಮ್.

(ಎಂದು ಪಶ್ಚಾತ್ತಾಪಮ್ ಗೆಯ್ದು, ಕುರುಕುಲ ವಿಳಯಜ್ವಾಲೆ ಸುಯೋಧನ ಪ್ರಳಯಕಾಲೆ ಪಾಂಚಾಲಿಯ ವದನಮಮ್ ನೋಡಿ)

**ಭೀಮಸೇನ :** (ಈಗ ದ್ರೌಪದಿಯನ್ನು ಉದ್ದೇಶಿಸಿ ಮಾತನಾಡತೊಡಗುತ್ತಾನೆ.)

ನಳಿನಾನನೆ, ನಿನ್ನ ಆನನದಿಮ್ ನಯನವಾರಿ ಗಳಿಯಿಸುತಿರೆ... ಕಬರಿಭರಮ್ ಗಳಿಯಿಸುತಿರೆ... ನೀನಿರೆ... ಕುರುಕುಳಾಂತಕನ್ ಈ ಭೀಮನ್ ಗಳಿತಕೋಪನೇ. ಸತ್ಯಪ್ರತಿಜ್ಞನ್ ಎನೆ... ಕುರುಪತ್ಯೂರು ಕಿರೀಟ ಭಂಗಮಮ್ ಪಡೆದು... ಜಗತ್ ಸ್ತುತ್ಯ ಕೃತಕೃತ್ಯನ್ ಎನಿಸದೆ ಸತ್ಯಾಶ್ರಯ ಪೆಸರ್ಗೆ ಮುಯ್ಯನಾಂಪನೆ ಭೀಮನ್. ನೀನ್ ಅಗ್ನಿಪುತ್ರಿಯಯ್... ಪವಮಾನ ತನೂಭವನೆನ್ ಆನ್... ಅಣಮ್ ಕೂಡಿರೆ ಅರಿನೃಪರೊಳ್ ಸಂಧಾನಮ್ ಎಂತು... ಅನಲ ಅನಿಲ ಸಂಯೋಗಮ್ ಉರಿಪದಿರ್ಕುಮೆ ಪಗೆಯಮ್.

ಪರಾಭವ ಜ್ವಲನ ಧೂಮಕೃಷ್ಣಮ್ ಕೃಷ್ಣೇ... ಪರಮೇಶ್ವರಿ

ಕುರುಕುಲಜೀವಾಕರ್ಷಣ ಪರಿಣತಮ್ ಇದು ಕಾಳಹಸ್ತಮಲ್ಲದೆ... ಕೇಶಹಸ್ತಮಕ್ಕುಮೆ. ಕುರುನಂದನರಮ್ ಕೊಂದೆನ್. ಕುರುಶಾಬಾನುಜನ ನೆತ್ತರಮ್ ಕುಡಿದೆನ್. ಪೂಣ್ದ ಎರಡಮ್ ತೀರ್ಚಿದೆನ್. ಇರ್ದಪುವು ಎರಡುಮಮ್. ಅವಮ್ ತೀರ್ಚಿ ಪಗೆಯಮ್ ತೀರ್ಚದಿರ್ಪೆನೆ...

ಊರುಗಳನ್ ಉಡಿವೆನ್. ಕೌರಪಪರಿವೃಢನ ಮಕುಟಮಮ್ ಒದೆವೆನ್. ವೇಣೀಸಂಹಾರಮ್ ಮಾಡುವೆನ್. ಅದರಿಮ್ ಭಾರಮದು ಇನಿತಲ್ಲದು ಎನ್ನ ಪರಿಭವಭಾವಮ್. ಕುರುಕುಲ ಶೋಣಿತ ಪಾದಪದ್ಮತಳಮ್ ವೃಕೋದರನ್ ತಳೋದರಿಗೆ ಕಚಬಂಧ ಬಂಧುರತೆಯನ್ ಆಗಿಪನ್. ಆತನ ಪೂಣ್ದ ಪೂಣ್ಕೆ ಶಿಲಾತಳಾಕ್ಷರಮ್ ಎನಿಸಿರ್ಪ ಜನೋಕ್ತಿಯಮ್ ಪುಸಿ ಮಾಳ್ಪೆನೇ. ಅರನ ಮಗನ್ ಪ್ರಾರ್ಥಿಸೆ... ಬಾಂದೊರೆಯ ಮಗನ್ ಮಾಡೆ... ಸಂಧಿಯಾದಪುದು ಎನುತುಮ್ ಮರುಗದಿರ್... ಅಣ್ಣನ ಮಾತನ್ ಪೆರಗಿಕ್ಕುವೆನ್... ಅಜ್ಜನಿರ್ದು ಮಾಣ್ಬೊಡಮ್ ಈಯೆನ್.

(ಎಂದು ಕೌರವ್ಯ ಕುಲಕಾಲಾನಲನುಮ್ ಕುರುರಾಜ ನಿರ್ವ್ಯಾಜ ನಿಬಿಡ ಊರುದ್ವಯಭಂಗ ಪ್ರತಿಜ್ಞಾಭಾರನುಮ್... ಫಣಿಪತಿಕೇತನ ಧೂಮಕೇತುವುಮ್... ಪಾಂಡವಬಲ ಪ್ರಾಕಾರನುಮ್... ಏಕಾಂಗವೀರನುಮ್... ಜರಾಸಂಧಸಂಧಿಬಂಧ ವಿಘಟನನುಮ್... ಇರಿವ ಬೆಡಂಗನುಮ್... ಅಕಲಂಕಚರಿತನುಮ್... ಅಮ್ಮನ ಗಂಧವಾರಣನುಮ್... ಸಾಹಸಾಂಕನುಮ್... ಎನಿಸಿದ ಭೀಮಸೇನನ್ ಅಂತು ಆರೂಢಕೋಪನುಮ್ ಪ್ರತಿಜ್ಞಾರೂಢನುಮ್ ಆಗೆ)

**ದ್ರೌಪದಿ** : ಸಮದೇಭಕುಂಭಭೇದನ ಸಮಯೋಗ್ರನಖಂಗೆ ಹರಿಗೆ ಮೃಗರಿಪು ಪೆಸರ್ ಉತ್ತಮಿಕೆಯೆ... ನಿನಗೆ ಜರಾಸಂಧಮಥನ ಕುರುವೈರಿ ಪೆಸರ್ ಅದೇನ್ ಉನ್ನತಿಯೇ... ಇರಿವಬೆಡಂಗ ದೇವ... ಪರಮೇಶ್ವರ ಸಾಹಸಭೀಮ... ನಿನ್ನೊಳ್ ಆರ್ ಇರಿದು ಬರ್ದುಂಕುವರ್... ಯುದ್ಧದೊಳ್ ನಿಜಭುಜ ಉಗ್ರಗದಾಪರಿಘ ಪ್ರಹಾರದಿಮ್ ಪರಿವರಿಯಾಗಿ... ಪುಣ್ಣುವೆಣನಾಗಿ... ಮರುಳ್ಗೆ ಉಣಿಸಾಗಿ... ಕುರಿದರಿಯಾಗಿ ಬಿಳ್ದ ಅರಿಬಲಂಗಳೆ ಪೇಳವೆ ನಿನ್ನ ಬೀರಮಮ್.

(ಎಂದು ಅನಲನಂದನೆ ಅನಿಲನಂದನನನ್ ಪೊಗಳ್ದು)

ಇರಿವ ಬೆಡಂಗಾ, ಒಡಲ್ ಒಡಮೆ ಎಂಬ ಇವೆರಡುಮ್ ಕೆಡಲಿರ್ಪುವು... ಕೆಡದ ಕಸವರಮ್ ಜಸಮ್... ಅದರಿಮ್ ಕೆಡುವ ಒಡಲ್ ಒಡಮೆಯನ್ ಎಂದುಮ್ ಕೆಡದ ಒಡಮೆಗೆ ಮಾರುಗುಡುವುದು... ಮಣಿ ಕನಕಮ್ ವಸ್ತು ವಿಭೂಷಣಂಗಳಮ್ ಕೊಟ್ಟು ಪೆಂಡಿರ್ ಒಲ್ವರೆ... ಗಂಡರ್ ಗುಣಮನೆ ಮೆರೆವುದು... ಇರಿವ ಬೆಡಂಗಾ, ನಿನ್ನಂತೆ ಶಸ್ತ್ರವ್ರಣಮಮ್ ಮೆರೆವುದು.

(ಎಂದು ಮೂದಲಿಸಿ ನುಡಿಯೆ, ಭೀಮಸೇನನ ಅನುಮತದೊಳ್ ನರ್ಮ ಸಚಿವನುಮ್... ಪರಿಹಾಸಕ ಶೀಲನುಮ್ ಎನಿಸಿದ ವಿದೂಷಕನ್ ಎಂದನ್)

**ವಿದೂಷಕ** : ಇನ್ನೆಲ್ಲಿಯ ಧೃತರಾಷ್ಟ್ರನ್... ಎತ್ತಣ ಗಾಂಗೇಯನ್... ಎಲ್ಲಿಯ ಸಂಧಿ ಕಾರ್ಯಮ್... ದುಶ್ಶಾಸನಾದಿಗಳಪ್ಪ ನೂರ್ವರ್ ಕೌರವರುಮನ್ ಅಗುರ್ವಾಗೆ ಕೊಂದಿಕ್ಕಿದನ್... ಇನ್ನೊರ್ಬನ್ ಉಳಿದನ್... ದುರ್ಯೋಧನನನ್ ಕೊಲ್ವುದುಮ್ ಗೆಲ್ವುದುಮ್ ನಮ್ಮ ಅರಸಂಗೆ ಆವುದು ಗಹನಮ್... ಅದರ್ಕೆ ಚಿಂತಿಸದಿರಿಮ್.

(ಎಂದು ಪಾಂಚಾಲರಾಜ ತನೂಜೆಯ ಮೊಗಮಮ್ ನೋಡಿ)

**ವಿದೂಷಕ** : ಕುರುಕುಲಮಮ್ ನುಂಗಿದಯ್... ಕುರುಪತಿಯುಮನ್ ಇನ್ನರೆಬರುಮಮ್ ನುಂಗಲಿರ್ಪೆ... ಇನ್ನೆರಡನೆಯ ಹಿಡಿಂಬಿಯನ್ ರಕ್ಕಸಿಯನ್ ನಿನ್ನನ್... ಎಮ್ಮರಸನ್ ಎಲ್ಲಿ ತಂದನೊ...

(ಎಂದು ವಿದೂಷಕನ್ ಅಳುತ್ತುಮ್ ಬಂದ ತನ್ನನ್... ನಗುತ್ತುಮ್ ಪೋಪಂತೆ ಸಂತೋಷಮ್ ಮಾಡಿಸಿದುದರ್ಕೆ ಒಡಂಬಟ್ಟು... ಚಾರುಹಾಸಿನಿ ನಿಜನಿವಾಸಕ್ಕೆ ಪೋದಳ್.)

❖

## ನೋಟ–ಎರಡು

# ದುರ್ಯೋಧನನು ಅಶ್ವತ್ಥಾಮ ಮತ್ತು ದ್ರೋಣರನ್ನು ತೆಗಳುವುದು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಸಂಜಯ ವಚನಮ್' ಎಂಬ ಹೆಸರಿನ 3 ನೆಯ ಅಧ್ಯಾಯದ 1 ನೆಯ ಗದ್ಯದಿಂದ 8 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

# ದುರ್ಯೋಧನನು ಅಶ್ವತ್ಥಾಮ ಮತ್ತು ದ್ರೋಣರನ್ನು ತೆಗಳುವುದು

ಅನ್ನೆಗಮ್ ಇತ್ತ ಕುರುಕುಲಪಿತಾಮಹನುಮ್ ಆಹವಭೀಷ್ಮನುಮ್ ಎನಿಸಿದ ಭೀಷ್ಮನ ಶರಶಯನದೊಳಮ್... ಬಿಲ್ಲ ಜಾಣಮ್ ದ್ರೋಣನ ಅಳಿವಿನೊಳಮ್... ತನ್ನ ಮಯ್ದುನಮ್ ಜಯದ್ರಥನ ವಿಪತ್ತಿನೊಳಮ್... ತನ್ನ ಅಣುಗದಮ್ಮನ್ ದುಶ್ಶಾಸನನ ಪಂಚತ್ವ ಪ್ರಪಂಚದೊಳಮ್... ತನ್ನ ಅಣುಗಾಳಪ್ಪ ಕರ್ಣನ ಸಾವಿನೊಳಮ್... ತನ್ನ ಮಾವನಪ್ಪ ಶಲ್ಯನ ಸಂಹರಣದೊಳಮ್... ಕುರುಕುಲ ಚೂಡಾಮಣಿಯುಮ್... ಪನ್ನಗಪತಾಕನುಮ್... ಕನಕಲತಾಲಾಂಛಿತ ಉತ್ತುಂಗ ಘನಗದಾಯುಧನುಮ್... ದಿವ್ಯಮುನಿವರ ಅಪರಾಧನುಮ್... ಸಕಲ ಲಕ್ಷ್ಮೀ ನಿವಾಸನುಮ್... ಸಮರ ಧೈರ್ಯನುಮ್... ಮಹಾ ಶೌರ್ಯನುಮ್... ರಾಧೇಯ ನಿಜ ಸಹಾಯನುಮ್... ಛಲದಂಕಮಲ್ಲನುಮ್... ಸಕಲಭೋಗ ಲಕ್ಷ್ಮೀಪತಿಯುಮ್... ಅಭಿಮಾನಧನನುಮ್ ಎನಿಸಿದ ಸುಯೋಧನನ್ ಚಿಂತಾಕ್ರಾಂತನಾಗಿ

**ದುರ್ಯೋಧನ :** ಅಸುಹೃತ್ಸೇನೆಗೆ ಸಾಲ್ವನ್ ಒರ್ವನೆ ಗಡಮ್... ರುದ್ರಾವತಾರನ್ ಗಡಮ್... ನೊಸಲೊಳ್ ಕಣ್ ಗಡಮ್ ಎಂದು ನಚ್ಚಿ ಪೊರೆದೆನ್. ತಾನಕ್ಕೆ... ತಮ್ಮಮ್ಮನಕ್ಕೆ... ಅಂಬಮ್ ತಿರುವಾಯ್ಗೆ ತಂದು ಇಸಲ್ ಅರಿವರೇ... ತಾಮ್ ಇರ್ವರುಮ್ ಕಯ್ದುವಮ್ ಬಿಸುಟರ್... ದ್ರೌಣಿಯುಮ್ ದ್ರೋಣನುಮ್ ಜೋಳದ ಪಾಳಿಯಮ್ ಬಗೆದರಿಲ್ಲಾ. ಪದುಳಮ್ ಕುಳ್ಳಿರ್ದು ಎಮಗೆ ಆಯದ ಮಾತಮ್ ತಗುಳೆ ಗಳಪಿ ಪೋದನ್.

ಬಿಲ್ಲೋಜನ್ ಸಂದಿರ್ದ ಅದಟರೊಳ್ ಇರಿದು ಅರಿಯನ್ ತಪ್ಪದೆ ಕಮ್ಮರಿಯೋಜನ್ ಎನಿಸಿದನ್... ಈಯಲ್... ಇರಿಯಲ್... ಶರಣ್ಬುಗೆ ಕಾಯಲ್... ಕ್ಷತ್ರಿಯರೆ ಬಲ್ಲರ್; ಬ್ರಾಹ್ಮಣರ್ ಅಬ್ರಣ್ಯಮ್ ಭೋ ಎನಲುಮ್... ಅವಿಧಾ ಎನಲುಮ್ ಬಲ್ಲರ್... ಅವರ್ ಇರಿಯಲ್ ಎತ್ತ ಅರಿವರ್... ಓಜಮ್ ಗಡ... ಚಿಃ ಭಾರದ್ವಾಜಮ್ ಗಡ... ಪಾಂಡುತನೂಜರ ಪಕ್ಕದೊಳೆ ಪಾಳಿಗಿಡೆ ನೆಗಳ್ದುದರಿಮ್... ಬಿಲ್ಲ ಬಲ್ಮೆಯುಮ್ ಕುಲಮುಮ್ ನಿರ್ವ್ಯಾಜಮ್ ಮಸುಳ್ದುವು.

ತಪನ ಸುತಮ್ ಬೇರೆ... ಆನ್ ಬೇರೆ ಪೊಲ್ಲದಮ್ ನುಡಿದನ್. ಆವಗಮ್ ರಕ್ಷಿಪ ಕಯ್ದುವನ್ ಬಿಸುಟನ್... ಬಗೆದು ನೋಳ್ಪೊಡೆ... ಎಮಗೆ ಆ ಅಶ್ವತ್ಥಾಮನ್ ಮರೆಯ ಪಾಂಡವಮ್. ಗೆಲಲಾರ್ಪೊಡೆ ಇರಿದು ಗೆಲ್ವುದು... ಗೆಲಲಾರದೊಡೆ ಅಣ್ಮಿ ಸಾವುದು... ಆಳ್ಗೆ ಇನಿತೆ ಗುಣಮ್... ಗೆಲಲುಮ್ ಸಾಯಲುಮ್ ಆರದೆ ತೊಲಗಿದಡೆ... ಮೆಯ್ಯಮ್ ನೆಗಳ್ತೆ ತೊಲಗದಿರ್ಕುಮೆ...

ಕರವಾಳಮ್ ಮಸೆವ ಅಂದದೆ ಮರವಾಳಮ್ ಮಸೆಯೆ ಕೂರಿತಕ್ಕುಮೆ... ಕಲಿಯಮ್ ಪೊರೆದೊಡೆ ಸಂಗರದೆಡೆಯೊಳ್ ಕೂರ್ಪಮ್ ತೋರ್ಪರ್ಂತಿರೆ... ಪಂದೆ ಪತಿಗೆ ತೋರ್ಕುಮೆ. ತುರುಗೋಳೊಳ್... ಪೆಣ್ಬುಯ್ಯಲೊಳ್... ಎರೆವೆಸದೊಳ್... ನಂಟನ ಎಡರೊಳ್... ಊರ ಅಳಿವಿನೊಳಮ್... ತರಿಸಂದು... ಗಂಡುತನಮನೆ ನೆರಪದವನ್ ಗಂಡನಲ್ಲನ್... ಎಂತುಮ್ ಷಂಡಮ್.

(ಎಂದು ಅರಸನ್ ಅವರ್ಗೆ ವಿರಸಮಾಗಿ ಪರುಷಮ್ ನುಡಿಯೆ... ಸಂಜಯನ್ ತನ್ನ ಅಂತರ್ಗತದೊಳ್)

❖

## ನೋಟ–3

# ಸಂಜಯನು ಭೀಮಾರ್ಜುನರ ಪರಾಕ್ರಮವನ್ನು ಹೊಗಳುವುದು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಸಂಜಯ ವಚನಮ್' ಎಂಬ ಹೆಸರಿನ 3 ನೆಯ ಅಧ್ಯಾಯದ 9 ನೆಯ ಪದ್ಯದಿಂದ 22 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

# ಸಂಜಯನು ಭೀಮಾರ್ಜುನರ ಪರಾಕ್ರಮವನ್ನು ಹೊಗಳುವುದು

ಅರಸನ್ ಅವರ್ಗೆ ವಿರಸಮಾಗಿ ಪರುಷಮ್ ನುಡಿಯೆ... ಸಂಜಯನ್ ತನ್ನ ಅಂತರ್ಗತದೊಳ್

**ಸಂಜಯ** : ಅಕಾರ್ಯರ್ಂಗೆ ಅಹಿಕೇತನಂಗೆ ಕಾರ್ಯಸಖನ್ ಶಕುನಿ ಗಡಮ್... ಶೌರ್ಯಸಖನ್ ಸೂತಜನ್ ಗಡಮ್... ವಿಧಿವಿಳಸನದಿಮ್ ಭೀಷ್ಮ ಶರಾಚಾರ್ಯರ ನುಡಿ ಕೈಪೆ ಗಡಮ್... ಗುರು ಕವಚಮ್... ಕರ್ಣನ್ ಬಾಹು ರಕ್ಕೆ... ಸುರಸಿಂಧು ನಂದನನ್ ಸೀಸಕಮಾಗಿರೆ... ಮೆಯ್ಗೆ ಮುಳಿಯಲ್ ಅರಿಯದೆ... ಭೀಮನ್ ಕುರುರಾಜನ ತೊಡೆಯನ್ ಉಡಿವೆನ್ ಎಂದನ್.

(ಎಂದು ಸಂಜಯನ್ ಕುರುರಾಜನನ್ ನೋಡಿ)

**ಸಂಜಯ** : ಭುವನಕ್ಕೆ ಆರಾಧ್ಯನೆಂಬ ಈ ನೆಗಳ್ದ ಬಿರುದಿನ ಅಂಕಕ್ಕೆ ತಕ್ಕ ಅಂದದಿಮ್... ಮುನ್ ಭಾರ್ಗವನೊಳ್ ದಿವ್ಯಾಸ್ತ್ರಮಮ್ ಪಡೆದು ನೆಗಳ್ದ ಶೌರ್ಯಕ್ಕೆ ತಕ್ಕ ಅಂದದಿಮ್... ಪಾಂಡವರುಮ್ ಕೌರವ್ಯರುಮ್ ಕೈಮುಗಿಯೆ ನೆಗಳ್ದ ಪೆಂಪಿಂಗೆ ತಕ್ಕ ಅಂದದಿಮ್... ಬಿಲ್ಲೊವಜನ್ ಗಾಂಡೀವಿಯೊಳ್ ಕಾದಿದನ್... ಅವರ ಶರಾಸಾರಮಮ್ ನೀನೇ ಕಂಡೈ...

ಇದು ದಲ್ ಗಂಗಾತ್ಮಜನ್ಮಕ್ಕೆ ಅನುಗುಣಮ್... ಇದು ರಾಜಪ್ರಸಾದಕ್ಕೆ ಪೋ ತಕ್ಕುದು... ಇದು ಈ ದೋರ್ದಂಡ ಕಂಡೂಯನಕೆ

ಸದೃಶಮ್... ಭೀಷ್ಮನಾಮಕ್ಕೆ ಇದು ಸಮುಚಿತಮ್ ಎಂಬಂತೆ ಸಂಗ್ರಾಮರಂಗ ಉನ್ಮದರೆಲ್ಲರ್ ನೋಡೆ... ಅದಟನ್ ಸಿಂಧುಪುತ್ರನ್ ಕದನದೊಳ್ ಪೆಂಪಮ್ ತೋರಿದನ್... ಕಳಶ ನದೀಜರ್ ಭಕ್ತಿಗೆ ಇದು ಕಳಶಾರೋಹಣಮ್ ಎನಿಸಿ ನೆರಪಿದರ್... ಕಾದಿ ಗೆಲಲ್ ಅವರ ಒಂದು ಅಳವಲ್ತು... ಆರ ಅಳವಲ್ತು... ಅರ್ಜುನನ ಶೌರ್ಯಮಮ್ ನೀನ್ ಅರಿಯಾ...

ನೃಪ, ನಿನ್ನನ್ ಪಿಡಿದು ಉಯ್ಯೆ... ಭಾನುಮತಿಯನ್ ಸಂತೈಸಿ... ಗಾಂಡೀವಿ, ಚಿತ್ರಾಂಗದಂಗೆ ಉಪಯೋಗಾಸ್ತ್ರಮನ್ ಎಚ್ಚು ಕೂಡೆ ನಭದಿಮ್ ತರ್ಪಾಗಳ್... ಈ ಕೃಪನ್... ಈ ಸೈಂಧವನ್... ಈ ಸರಿತ್ ತನಯನ್... ಈ ರಾಧೇಯನ್... ಈ ಮದ್ರಭೂಮಿಪನ್... ಈ ಕುಂಭಜನ್... ಈ ಕುರುಪ್ರಭವರ್... ಅಂದು ಏನ್ ಹಮ್ಮದಮ್ ಪೋದರೇ... ಕಲಿ ಪನ್ನೊಂದಕ್ಷೋಹಿಣಿ ಬಲವೆಲ್ಲಮನ್ ಒಂದೆ ರಥದೊಳ್ ಒರ್ವನೆ ಗೆಲ್ದನ್... ಗೋಗ್ರಹಣದ ಕಲಹದೊಳ್ ಅರಿಯನ್ ಗೆಲಲ್ ವಿಜಯನ್ ಏಕಾಂಗವಿಜಯನಾದನ್...

ಉರಿ ಕೊಳೆ... ಕೋಳ್ಮಿಗಮ್ ಕೊಳೆ... ವಿಷಾಹಿಕುಲಮ್ ಕೊಳೆ... ಶತ್ರುಭೂಮಿಯೊಳ್... ಗಿರಿಗಹನಂಗಳೊಳ್... ವಿಷಮ ರಾಕ್ಷಸ ಸಂಕುಲದೊಳ್... ವರಾಹ ಸಿಂಧುರ ಖರ ಶಯ್ಯೆಯೊಳ್... ವಿಪುಳ ಭೀಕರದೊಳ್... ವೃಕೋದರನ್ ನಿಜ ಬಾಹು ವಜ್ರಪಂಜರದೊಳಗಿಟ್ಟು ಸಹೋದರರಮ್ ರಕ್ಷಿಸಿದನಲ್ತೆ... ಬಕನನ್ ಹಿಡಿಂಬನನ್ ಕೀಚಕನನ್ ಕಿಮ್ಮೀರನನ್ ಜಟಾಸುರನನ್ ಕೊಂದ ಕಲಿ... ಜರಾಸಂಧನನ್ ಇಕ್ಕಿ ಕೊಂದ ಬಲ್ಲಾಳ್... ಮರುತ್ ಸುತನ್ ಕೇವಳನೇ

(ಎಂದು ಸಂಜಯನ್ ಸಾಹಸಭೀಮನ ಸಾಹಸಂಗಳನ್ ಅಭಿವರ್ಣಿಸಿ)

ನೆಗಳ್ದ ಆ ಭಾರತಮಲ್ಲ ಶಕ್ರಸುತ ಬಾಣಾಘಾತದಿಮ್... ಭೀಮ ಭೀಮಗದಾದಂಡ ವಿಘಾತದಿಮ್... ಕುರುನೃಪ ಆನೀಕಮ್ ಪಡಲ್ವಟ್ಟು ಜೀರಗೆಯೊಕ್ಕಲ್ಗೆ ಎಣೆಯಾಗಿ... ಆ ಕುರುಕ್ಷೇತ್ರದೊಳ್ ಎತ್ತಮ್ ಬಿಳ್ದ ಭಟರಿಮ್... ಬಿಳ್ದ ಅಶ್ವದಿಮ್... ಬಿಳ್ದ ದಂತಿಗಳಿಂದಮ್... ಜವನ್ ಉಂಡು ಕಾರಿದವೊಲ್ ಆಯ್ತು.

ಪವನಸುತನ್ ಗದೆಗೊಳೆ... ಗಾಂಡಿವಿ ಬಿಲ್ಗೊಳೆ... ಕಯ್ದುಗೊಳ್ವ ಮಾರ್ಕೊಳ್ವ ಅದಟರ್ ಭುವನದೊಳಿಲ್ಲ... ಕೌರವರಾಜಾ, ಅವರ್ಗಳ ಬಾಹು ವಿಕ್ರಮಮ್ ನಿನಗೆ ಪೊಸತೆ... ಜವನ ಮುಳಿಸೆ ಅವನ ಮುಳಿಸೆನೆ... ಜವನೇ ಬರ್ಚಿದವೊಲ್ ಇಂತು ಕುರುದರಿ ತರಿದನ್...

ಜವನನ್ ಮುಳಿಯಿಸಿ ಸುಭಟರ ಜವನನ್ ಮುಳಿಯಿಸಿ... ಬರ್ದುರ್ಂಕುವನ್ನರುಮ್ ಒಳರೇ. ಪ್ರಿಯವಾಕ್ಸಹಿತಮ್ ದಾನಮ್ ಅಗರ್ವಮ್ ಜ್ಞಾನಮ್ ಕ್ಷಮಾನ್ವಿತಮ್ ಶೌರ್ಯಮ್ ಎನಿಪ್ಪ ಈ ನುಡಿಯನೆ ಧರ್ಮಜನಾ ದಾನಮ್ ಜ್ಞಾನಮ್ ಕ್ಷಮಾ ಗುಣಮ್ ನುಡಿಯಿಸಿದುದು... ಅಮಳ್ಗಳ್ ವಿನಯದೆ ವಿಕ್ರಮದ ಅಮಳ್ಗಳ್ ಅವರ್ ಮುಳಿಯೆ ಗಂಡರಿಲ್ಲ... ಕುರುಕುಲಾಂಬರ ಭಾನು, ಅವರ ಪರಾಕ್ರಮಮಮ್ ನೀನ್ ಅರಿದು ಇರ್ದುಮ್... ಸಮರದೊಳ್ ಇಳಿಸುವುದೆ

(ಎಂದು ನುಡಿದ ಸಂಜಯನ ನುಡಿಗೆ ಫಣಿರಾಜ ಕೇತನನ್ ಸಿಡಿಲ್ದು)

❖

## ನೋಟ–4

# ದುರ್ಯೋಧನನ ಆಕ್ರೋಶ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಸಂಜಯ ವಚನಮ್'** ಎಂಬ ಹೆಸರಿನ 3 ನೆಯ ಅಧ್ಯಾಯದ 23 ನೆಯ ಪದ್ಯದಿಂದ 34 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

# ದುರ್ಯೋಧನನ ಆಕ್ರೋಶ

ಸಂಜಯನ ನುಡಿಗೆ ಫಣಿರಾಜಕೇತನನ್ ಸಿಡಿಲ್ದು…

**ದುರ್ಯೋಧನ** : ಆ ಧರ್ಮಪುತ್ರನ್ ಸ್ಥಿರಸತ್ಯವ್ರತಿಯೆಂದು… ಧರ್ಮರುಚಿಯೆಂದು… ದಯಾಪರನೆಂದು ಎಲ್ಲರ ಪೇಳ್ದ ಮಾತು… ಆ ಕಾರ್ಮುಕಾಚಾರ್ಯನನ್ ಗುರುವನ್ ಬ್ರಾಹ್ಮಣನನ್ ತೊದಳ್ ನುಡಿದು ಕೊಂದಂದು ಪುಸಿಯಾಯ್ತು. 'ಮೃಷಾಪಾತಕಮ್ ಪರಮ್' ಎಂಬ ಈ ನುಡಿಯಿಮ್ ಪೃಥಾಪ್ರಿಯಸುತನ್ ಪಾಪಕ್ಕೆ ಪಕ್ಕಾಗನೇ… **'ಈ ದೊರೆಯ ಅರಮಗನುಮ್ ಮೃಷವಾದನ್ ನೋಡು'** ಎಂದು ಧರ್ಮನನ್ ಮೂದಲಿಸಲ್… ಯಮಪುರಕೆ ಮುಕ್ತಬಾಣನ್ ದ್ರೋಣನ್ ಪೋದನ್… ಪುತ್ರನನ್ ಅರಸಲ್ ಪೋದನೆ.

ಸಭೆಯೊಳ್ ಎನ್ನ ಅನುಜನ್ ವನಿತೆಯ ಕೇಶಮಮ್ ತೆಗೆವಲ್ಲಿ ಗಂಡನಾಗನೆ; ಭಗದತ್ತನ ಆನೆ ಬರಿಯೆಲ್ವು ಉಡಿವನ್ನೆಗಮ್ ಒತ್ತೆ ಗಂಡನಾಗನೆ; ಅಂಗಪತಿ ಕೊಲಲ್ ಒಲ್ಲದೆ ಬಿಲ್ಲೊಳೆ ಕೋದು ಎಳೆವಲ್ಲಿ ಗಂಡನಾಗನೆ; ಕುರುಬಾಲಸಂಹರಣ ಮಾತ್ರದೆ ಮಾರುತಿ ಗಂಡನಾದನೇ…

ಒಡವುಟ್ಟಿದರಮ್ ಕೊಂದು… ಅವರ ಅಡಗಮ್ ತಿಂದು… ಅವರ ನೆತ್ತರಮ್ ಬೆಲಗಸೆಯೊಳ್ ಕುಡಿವ ಈ ನಿಸ್ತ್ರಿಂಶತೆಯಮ್… ಭೀಮನ್ ಹಿಡಿಂಬಿಯನ್ ಪೊರ್ದಿ ಕಲ್ತನಾಗನೆ. ಎನಗೆ ಆ ಜೂದಿನೊಳ್ ಪೃಥಾನಂದನನ್

ಅಗ್ರಜಾನುಜ ಸಮೇತಮ್ ಗಂಡು ತೊಳ್ತಾಗಿ... ಕಾನನದೊಳ್ ವಲ್ಕಲಧಾರಿಯಾಗಿ... ಹರನೊಳ್ ದಿವ್ಯಾಸ್ತ್ರಮಮ್ ಬೇಡೆ ಬೆಳ್ತನದಿಮ್ ತಾಪಸನಾಗಿ... ಮತ್ಸ್ಯಾವಾಸದೊಳ್ ಪೇಡಿಯೆನೆ ವಾಸುದೇವನ ನಂಟಮ್ ನಟನಾಗಿ... ಬಾರದ ಭವಮ್ ಬಂದನ್; ಗುರುವನ್ ಪ್ರೋಜ್ಝಿತ ಚಾಪನನ್ ಪುಸಿದು ಕೊಂದ ಆ ಬೀರಮಮ್... ಶರಶಯ್ಯಾಗತರಮ್ ಭೀಷ್ಮರನ್ ಕರುತ್ತು ಗುರಿಯೆಚ್ಚ ಆ ಪೊಚ್ಚರಮ್... ವಿರಥಜ್ಯಾಯುಧನ್ ಎನ್ನದೆ ಕರ್ಣನನ್ ಎಚ್ಚು ತಲೆಗೊಂಡ ಆ ಶೌರ್ಯಮಮ್ ಮೆರೆಯಲ್ಕೆ ಪಾಂಡುಪುತ್ರರೆ ಬಲ್ಲರ್... ಸಾಹಸಧನಮ್ ದುರ್ಯೋಧನನ್ ಬಲ್ಲನೇ...

ಅಕ್ಕಟ, ಯಮಜನ್ ದರ್ಭಪಾಣಿ... ವಾಯುಪುತ್ರಕನುಮ್ ದರ್ವೀಕರಮ್... ಇಂದ್ರತನಯನ್ ಜರ್ಜರ ಹಸ್ತನ್... ದಸ್ರಾತ್ಮಜರ್ ದಂಡಮುಷ್ಟಿಕರರ್... ಸೊಕಮ್ ಇರ್ಕೆ ಅವರ್ಗಮ್... ಶಸ್ತ್ರ ವಿಡಂಬಮ್ ಏವುದು... ಪಾಂಚಾಲಿಯುಮ್ ಗಂಧದಾಯಕಿಯಾಗಿರ್ಪಿನಮ್ ಅಂದು ಮತ್ಸ್ಯಗೃಹದಿಂದೆ ಈ ನಿಗ್ರಹಮ್ ಪೊಲ್ಲದೇ. ಸಭೆಯೊಳ್ ತಮ್ಮಯ ಪಕ್ಕದೆ ಎನ್ನ ಅನುಜನ್ ಆ ಪಂಚವಲ್ಲಭೆಯನ್ ಪಾಂಚಾಲಿಯನ್ ಮೋದೆಯುಮ್... ಅಲ್ಲಿ ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳ್... ಇಲ್ಲಿ ಭರಂಗೆಯ್ದಪರ್. ಈ ಪರಾಕ್ರಮುಮ್... ಈ ಪೆರ್ಮಾತುಮ್ ಈ ಗಂಡುಮ್... ಈ ಸುಭಟ ಆಲಾಪಮುಮೆಲ್ಲಮ್... ಆ ನೃಪತಿಗಳ್ಗೆ ಅಂದು ಎಲ್ಲಿ ಪೊಕ್ಕಿರ್ದುದೊ.

(ಎಂದು ಧೃತರಾಷ್ಟ್ರನಂದನನ್ ಧರ್ಮನಂದನನುಮನ್, ವಾಯುನಂದನನುಮನ್, ಸಂಕ್ರಂದನ ನಂದನನುಮನ್, ಅಶ್ವಿನೀನಂದನರುಮನ್ ನಿರಾಕರಣಮ್ ಗೆಯ್ದು... ಅನಿತರೊಳಮ್ ಮಾಣದೆ)

ಪವನಂಗೆ ಪುಟ್ಟಿದನ್ ರಾಘವನ ಅಣುಗಾಳ್ ತ್ರಿಣಯನಾಂಶಮ್ ಎನಿಪ ಅಣುವನ್ ಪಾಂಡವಕೇತುದಂಡದೊಳ್ ನೆಲಸುವುದು ಆವ ಅಗ್ಗಳಿಕೆ... ಕಪಿಗೆ ಚಪಲತೆ ಸಹಜಮ್... ಕೃಷ್ಣನ್ ನರಂಗೆ ಅನುಜೆಯನ್

ಇತ್ತು... ಆತನ ತನಯಂಗೆ ತನ್ನ ಮಗಳನ್ ಇತ್ತು... ತಾನ್ ಆತನ ರಥಮನ್ ಎಸಗಿ... ಧರ್ಮಜನ ಅನುಜನ ನೆವದಿಂದಮ್ ಅರಸುಗೆಯ್ವನ್. ಪುರುಷರ್ ಮೂವರೊಳ್ ಒರ್ಬನ್ ಎಂಬರ್... ಅಸುರ ಪ್ರಧ್ವಂಸಿಯೆಂಬರ್... ಜಗದ್ಗುರುವೆಂಬರ್... ಪೆರರ್ಗೆ ಏಕೆ ತೇರನ್ ಎಸಪನ್...

ಧರ್ಮಾನುಜಂಗೆ ಏಕೆ ಕಿಂಕರನಾದನ್... ಕರವೇಳಿಯಾದನ್... ಅದರಿಮ್ **'ಕೃಷ್ಣಂಗೆ ಸೂತನ್ ಭಟನ್ ಪೇಳಿ'** ಎಂಬರ ಮಾತು ಒಪ್ಪುಗುಮ್. ಆದಿ ದೇವನ್ ಎನಿಸಲ್ ಅದು ಎಂತು ಒಪ್ಪುಗುಮ್... ಅನಿಮೇಷಾದ್ಯವತಾರಮ್... ದಶಾವತಾರಮ್ ತನಗಾಯ್ತು. ಅನಿತರೊಳ್ ಇರದೆ... ಅರ್ಜುನನ ರಥಮ್ ಎಸಪ ಪನ್ನೊಂದನೆಯದು ಸೂತಾವತಾರಮುಮ್ ಹರಿಗಾಯ್ತೇ.

(ಎಂದು ದುರ್ಯೋಧನನ್ ಕಪಿರಾಜನುಮನ್ ಕಂಜೋದರನುಮನ್ ನಿರಾಕರಣಮ್ ಗೆಯ್ದು... ಅನಿತರೊಳಮ್ ಮಾಣ್ದು ಸೈರಿಸಲಾರದೆ... ಸಮರೋದ್ಯೋಗಮ್ ಗೆಯ್ಯೆ... ಸಂಜಯನ್ ಅಂಜದೆ ಮಾರ್ಕೊಂಡು)

❖

## ನೋಟ–5

# ಸಂಜಯನ ಹಿತನುಡಿ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಸಂಜಯ ವಚನಮ್'** ಎಂಬ ಹೆಸರಿನ 3 ನೆಯ ಅಧ್ಯಾಯದ 35 ನೆಯ ಪದ್ಯದಿಂದ 43 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

## ಸಂಜಯನ ಹಿತನುಡಿ

ದುರ್ಯೋಧನನ್ ಕಪಿರಾಜನುಮನ್ ಕಂಜೋದರನುಮನ್ ನಿರಾಕರಣಮ್ ಗೆಯ್ದು... ಅನಿತರೊಳಮ್ ಮಾಣ್ದು ಸೈರಿಸಲಾರದೆ... ಸಮರೋದ್ಯೋಗಮ್ ಗೆಯ್ಯೆ... ಸಂಜಯನ್ ಅಂಜದೆ ಮಾರ್ಕೊಂಡು

**ಸಂಜಯ** : ನೀನ್ ಪ್ರತಿಕೂಲ ದೈವನಯ್... ಪ್ರತಿನೃಪರ್ ಅನುಕೂಲ ದೈವರ್; ನೀನ್ ಅಸಹಾಯನೆ... ಪ್ರತಿನೃಪರ್ ಅಸಹಾಯರ್; ನೀನ್ ಪ್ರತಿಬಲನ್... ಅದರಿಂದೆ ವಾಕ್ಯಾರ್ಥಮ್ ಅನರ್ಥಕಮ್.

(ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನನ್ ನಿರ್ವೈಸಿ)

**ದುರ್ಯೋಧನ** : ಸಮರಜಯಮ್ ದೈವಾಯತ್ತಮ್. ಅದರಿನ್ ಆ ಪುರುಷಕಾರಮ್ ಎಮಗಾಯ್ತು. ಈಗಳ್ ಯಮನಂದ ನಾದಿಗಳೊಳ್ ಒಂದೆ ಮೆಯ್ಯೊಳ್ ಆಂತು ಇರಿವೆನ್... ಎನ್ನ ಛಲಮಮ್ ಮೆರೆವೆನ್. **"ಸುರಸಿಂಧೂದ್ಭವ ಕುಂಭಜನ್ಮ ದಿನಕೃತ್ಪುತ್ರಾದಿಗಳ್ ಸಂಗರದೊಳ್ ಸಾಯೆ... ಏಕಾಕಿ ದುರ್ಯೋಧನನ್ ಪಾಂಡವರಮ್ ಗೆಲಲ್ ನೆರೆದನಿಲ್ಲ... ಸೆರಗಮ್ ಪಾರ್ದಪನ್"** ಈ ಧರೆ ಎಂಗುಮ್. ಸಂಜಯ, ಭುಜಾದಂಡಮ್ ಗದಾದಂಡಮ್ ಎಂಬ ಎರಡುಮ್ ಮತ್ ಜಯಕ್ಕೆ ಒದವಿರಲ್... ಮತ್ತನ್ಯರಮ್ ಪಾರ್ವೆನೇ. ಮದವತ್ ಕರಿಗಳ ಬಿದುವಮ್ ವಿದಾರಣಮ್ ಗೆಯ್ದು ಕೊಲ್ವ

ಕಂಠೀರವಕಮ್... ಕದನದೊಳ್ ಅರಿನೃಪರಮ್ ಕೋಪದೆ ಕೊಲ್ವ ಎನಗಮ್ ಸಹಾಯರ್ ಎಂಬರುಮ್ ಒಳರೇ.

(ಎಂದು ನುಡಿದು, ಕಾಲದಂಡ ಪ್ರಚಂಡಮಪ್ಪ ತನ್ನ ಗದಾದಂಡಮಮ್ ಭುಜಾದಂಡದೊಳ್ ಅಳವಡಿಸಿಕೊಂಡು ಸಮರಾಭಿಮುಖನಾಗಿ ನಡೆವ ಫಣಿರಾಜಕೇತನನನ್ ಸಂಜಯನ್ ಅಂಜದೆ ಮಾರ್ಕೊಂಡು..)

**ಸಂಜಯ** : ಪವನಾತ್ಮಜನ್ ಮಹಾರಥನ್... ಅವನಿಪ, ನೀನ್ ಸಮರಥನೆ... ಅದರ್ಕೆ ಅಧಿಕನೊಳ್ ಆ ಪವನಾತ್ಮಜನೊಳ್ ಬದ್ಧವೈರಮಮ್ ಮರೆ... ಸಂಧಿಮಾಳ್ಪುದು ಉತ್ತಮ ಪಕ್ಷಮ್.

(ಎಂದು ನುಡಿದ ಸಂಜಯನ ನುಡಿಗೆ ಪಿಂಗಾಕ್ಷನ್ ಅತಿವಿಷಮ ಪರುಷವೇಷಾವೇಶಧರನಾಗಿ)

**ದುರ್ಯೋಧನ** : ಬಲಯುತ ಸಮರಥನ್ ಎನ್ನೊಳ್ ಆತನ್ ಅತಿರಥನ್ ಗಡ... ಅಧಿಕ ಬಲವಂತನ್ ಮಾರುತಿ ಗಡ... ಮಹಾರಥನ್ ಮಾರುತಿಯುಮ್... ತದ್ರಥದ ಗಾಲಿಗಳ್ ದೊಡ್ಡಿದುವೇ... ಪೆರರಮ್ ಪೊಗಳ್ದಪೆ... ಎಮ್ಮನ್ ಕಿರಿಯರ್ ಮಾಡಿದಪೆ. ಎಲವೊ ಸಂಜಯ, ನೀನುಮ್ ಪೆರನೊರ್ವನ್ ಬಿಲ್ಲೋಜನ್... ಪೆರನೊರ್ವನ್ ಸಿಂಧುಪುತ್ರನಾಗಲ್ ಬಗೆವೋ.

(ಎಂದು ಅರಸನ್ ಅವಂಗೆ ವಿರಸಮಾಗಿ ಪರುಷಮಮ್ ನುಡಿಯೆ... ಸಂಜಯನ್ ಅಂಜಿ..)

**ಸಂಜಯ** : (ತನ್ನಲ್ಲಿಯೇ)

ಎನಿತೆನಿತಮ್ ಕಲಿಸಿದೊಡೆ... ಅಂತು ಅನಿತನಿತುಮ್ ನೈಜಭಾವಮ್ ಅಕ್ಕುಮ್. ಉನ್ನತವಂಶಮ್ ಕರ್ಕಶತನು ಅಂತಃಶೂನ್ಯಮಕ್ಕುಮ್... ನೃಪನಂದನನ್ ಎಂತುಮ್ ಅಂತು.

(ಎಂದು ಅರಿದು)

**'ಮೌನಮ್ ಸರ್ವಾರ್ಥಸಾಧನಮ್'** ಎಂಬುದು ಈತಂಗೆ ಅನುಕೂಲವೃತ್ತಿಯುಮ್ ಸ್ವಚ್ಛಂದನಾವೃತ್ತಿಯುಮಾಗಿ

ನೆಗಳ್ದುದು. ಎಂತುಮ್ **'ಆರಾಧ್ಯನ್ ನ ಪ್ರಕೋಪಯೇತ್.'**

(ಎಂದು ಮೋನಂಗೊಂಡು ಸಂಜಯನ್ ಕಿರಿದು ಬೇಗಮಿರ್ದು... ಫಣಿರಾಜಕೇತನನ್ ಯುದ್ಧಸನ್ನದ್ಧನಾಗಿ ನಡೆವುದಮ್ ಕಂಡು... ಮತ್ತಮ್ ಆ ಸಂಜಯನ್ ನಿಸರ್ಗ ಮೂರ್ಖನುಮ್ ಸ್ವಭಾವದೃಢನುಮ್ ಸ್ವಾಮಿ ಹಿತನುಮಪ್ಪುದರಿಂದೆ... ಇರಲಾರದೆ..)

**ಸಂಜಯ** : ಬಲದೆ ಅಶ್ವತ್ಥಾಮನ್ ಒಳನ್... ಬಲನೊಳನ್... ಇರ್ವರುಮನ್ ಆಸೆಗೆಯ್ಯದೆ... ವಿದ್ಯಾಬಲದಿಮ್ ಕಾದದೆ... ಅರಸ, ನಿಜಭುಜಬಲದಿಮ್ ಪಾಂಡವರೊಳ್ ಕಾದಲ್ ಬಗೆದಯ್... ಆ ಬಲದೇವ ಅಶ್ವತ್ಥಾಮರುಮ್ ಇರ್ದರ್... ಅವರ್ ಇರ್ವರುಮಲ್ಲದೆ ಕೃಪ ಕೃತವರ್ಮರುಮ್ ಇರ್ದರ್... ಅಂತು ನಾಲ್ವರೊಳ್ ಒಬರ್ಗೆ ವೀರಪಟ್ಟಮಮ್ ಕಟ್ಟಿ, ವೀರಪ್ರಮುಖಂಗೆ ಸೇನಾಧಿಪತ್ಯಾಭಿಷೇಕಮಮ್ ಮಾಡಿ... ಪಗೆಯನ್ ಕಯ್ಗೆ ಮಾಳ್ಪುದು.

(ಎಂಬುದುಮ್ ಸಂಜಯನ ನುಡಿಗೆ ದುರ್ಯೋಧನನ್ ಇಂತು ಎಂದನ್.)

❖

## ನೋಟ–6

# ದುರ್ಯೋಧನನ ಸಂಕಟ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಸಂಜಯ ವಚನಮ್'** ಎಂಬ ಹೆಸರಿನ 3 ನೆಯ ಅಧ್ಯಾಯದ 44 ನೆಯ ಪದ್ಯದಿಂದ 59 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

# ದುರ್ಯೋಧನನ ಸಂಕಟ

ಸಂಜಯನ ನುಡಿಗೆ ದುರ್ಯೋಧನನ್ ಇಂತು ಎಂದನ್.

**ದುರ್ಯೋಧನ** : ಮುನ್ನೆ ತ್ರಿದಶನದೀಸುತನಿಮ್ ತೀರದ ಕಜ್ಜಮ್... ಕಳಶಸಂಭವನಿಮ್ ತೀರದ ಕಜ್ಜಮ್... ಇನಜನಿಮ್ ತೀರದ ಕಜ್ಜಮ್... ದ್ರೋಣಪುತ್ರನಿಮ್ ತೀರ್ದಪುದೇ. ದ್ರೋಣನ್ ಎಮಗೆ ಒಳ್ಳಿಕೆಯ್ದನ್... ದ್ರೋಣನ ಸುತನ್ ಒಳ್ಳಿಕೆಯ್ಯದಿರ್ಕುಮೆ. ಸಮರ ಕ್ಷೋಣಿಯೊಳ್ ಇನ್ನವನ ಆಸೆಯೆ ಮಾಣೆ ಅಣಮ್... ಕಯ್ಪೊರೆಯ ಕುಡಿಯೇಮ್ ಮಿಡಿಯೇಮ್... ರಣಕೇಳಿ ಕುತೂಹಲಿಯಮ್ ಹಲಿಯನ್ ನಚ್ಚಿರ್ದೆನ್. ಅವನುಮ್ ಆಹವಕೋಲಾಹಲದಲ್ಲಿ ತೀರ್ಥಯಾತ್ರಾಚ್ಛಲದಿಂದಮ್ ಅಗಲ್ದು ಪೋದನ್ ಇನ್ನುಮ್ ಬಾರನ್

ಪಗೆ ಮಡಿವೊಡೆ... ರವಿಸುತನಿಮ್ ಮಡಿಗುಮ್... ಮೇಣ್... ಶೌರ್ಯಶಾಳಿ ದುಶ್ಶಾಸನನಿಮ್ ಮಡಿಗುಮ್... ಮೇಣ್ ಎನ್ನಿಂದಮ್ ಮಡಿಗುಮ್... ಪೆರಪೆರರಿನ್ ಎನ್ನ ಪಗೆ ಮಡಿದಪುದೇ... ಉಕ್ಕಿನೊಳ್ ಒಡಗೂಡಿದ ಪಚ್ಚೆ ಕಡುಗೂರಿತಕ್ಕುಮ್ ಬೇರೆ ಕೂರ್ಪಿಲ್ಲ... ಅರ್ಕನಂದನನ್ ಒಡನಿಲ್ಲದೆ ಆರುಮ್ ತೊಡರ್ದು ಇರಿವರ್... ತಾಮೆ ಬೇರೆ ಕೂರಿದರ್ ಒಳರೇ. ..ಕಾನೀನನ್ ದ್ರೋಣ ನದೀಸೂನುಗಳ್ ಅಳಿದಿಮ್ ಬಳಿಕ್ಕೆ... ಪೆರರ್ ಎನಗಿಲ್ಲ ಎಂದು ಆನೆ

ಗಳಿತಾಶ್ರುಜಲದಿಮ್ ಸೇನಾಪತ್ಯಾಭಿಷೇಕಮಮ್ ಮಾಡಿದಪೆನ್.

ಯುವರಾಜನುಮ್ ಅಂಗರಾಜನುಮ್ ಇರ್ವರುಮ್... ಎನಗೆ ಎರಡುಮ್ ತೋಳ್... ಎರಡು ಕಣ್ಗಳ್... ಅನ್ನರೆ ಪೋರೆನೆ... ಸಂಜಯ ಮತ್ತಮ್ ಎನಗೆ ಮಾನಸವಾಳೇ. ದಿನಕರತನಯನ್ ಕಳಿದನ್... ಯುವರಾಜನಪ್ಪ ದುಶ್ಶಾಸನನುಮ್ ಕಳಿದನ್... ತುಳಿಲಾಳ್ಗಳನ್ ಇರ್ವರುಮನ್ ಕಳಿಪಿ... ಸುಯೋಧನನ ಬಾಳ್ವುದಮ್ ನಂಬಿದಿರೇ... ಎನಗೆ ಮನಮಿಂದು ಶೂನ್ಯಮ್... ಮನೆ ಶೂನ್ಯಮ್... ಬೀಡು ಶೂನ್ಯಮಾದುದು... ಸಕಲ ಅವನಿ ಶೂನ್ಯಮಾಯ್ತು... ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ ಆನ್ ಎಂತು ಇರ್ಪೆನ್... ಬಾಂಧವರಮ್ ಸರಸಿಜಬಾಂಧವತನಯನುಮನ್ ಎನ್ನ ತಮ್ಮನುಮನ್ ಇರಿಸಿ... ನಮ್ಮ ಅಂಧ ನರೇಂದ್ರನ ಮೊಗಮನ್ ಗಾಂಧಾರಿಯ ಮೊಗಮನ್... ಆವ ಮೊಗದೊಳೆ ನೋಳ್ಪೆನ್.

(ಎನೆ ಸಂಜಯನ್ ಆ ಪ್ರಸ್ತಾವದೊಳ್)

**ಸಂಜಯ** : ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವ ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನೊಳ್ ಸರ್ವಾಂಗ ವಿಕಳರಾಗಿರ್ದ ಧೃತರಾಷ್ಟ್ರ ಗಾಂಧಾರಿಯರ ಚರಣಾರವಿಂದ ವಂದನಮ್ ಗೆಯ್ದು... ದೇವರ ಮನಃಕ್ಷತಮನ್ ಆರಿಸಲ್ವೇಳ್ಪುದು... ಬೀಡಿಂಗೆ ಬಿಜಯಂಗೆಯ್ವುದು.

(ಎನೆ)

**ದುರ್ಯೋಧನ** : ಸವಳದೆ ಯುವರಾಜನುಮ್ ಅಂಗರಾಜನುಮ್ ಬೆರಸು ಗುರುಜನದಲ್ಲಿಗೆ ರಣೋತ್ಸವದಿಮ್ ಪೋಗಲ್ ಅವರ್ ಇರ್ವರುಮ್ ಇಲ್ಲದೆ... ಈಗಳ್ ಅಲ್ಲಿಗೆ ಪೋಗಲ್ ನಾಣ್ಚುವೆನ್... ಸಂಜಯ, ಪತಿಶೋಕವಿಕಳ ಪಾರ್ಥಿವ ನಿತಂಬಿನೀಜನಮನ್... ಎನ್ನ ಇರ್ಪ ಇರವಿಂದೆ ಈಕ್ಷಿಸಲ್ ಲಜ್ಜಿತನೆನ್... ಏಕೆ ತೋರ್ಪೆನ್ ಆನ್ ಮೊಗಮಮ್ ಅತಿದುಃಖಿತನೆನ್.

(ಎಂಬನ್ನೆಗಮ್, ಸಕಲ ಚತುರಂಗಬಲ ವಿಕಳನಾಗಿ ಸಪ್ತಾಂಗರಾಜ್ಯ ಸಮಾಲಿಂಗಿತನಾಗಿ ಸಂಗ್ರಾಮರಂಗದೊಳ್ ಇರ್ದನ್ ಎಂಬುದಮ್ ಆಪ್ತಚರರ್ ಅರಿಪೆ ಕೇಳ್ದು... ಗಾಂಧಾರಿಯುಮ್ ಧೃತರಾಷ್ಟ್ರನುಮ್ ಶೋಕಾಕುಲೀಕೃತ ಚಿತ್ತರಾಗಿ... ತಮ್ಮ ಮಗನನ್ ಆರಯ್ಯಲುಮ್ ಮನಃ ಕ್ಷತಮನ್ ಆರಿಸಲುಮ್ ಎಂದು ಅರಸುತ್ತುಮ್ ಬಂದು)

**ಧೃತರಾಷ್ಟ್ರ/ಗಾಂಧಾರಿ** : ಪಡೆ ಪನ್ನೊಂದಕ್ಷೋಹಿಣಿಗೆ ಒಡೆಯನೆ, ಮೂರ್ಧಾಭಿಷಕ್ತನಯ್... ಮೂರುಮ್ ಬೆಳ್ಗೊಡೆಯ ನಡುವಿರ್ಪ ನೀನ್ ಇರ್ದ ಎಡೆಯುಮ್ ಅದು ಎಮಗೆ ಅರಿಯದಂತುಟಾದುದೆ ಮಗನೇ

(ಎಂದು ಪಳಿಯಿಸುತ್ತುಮ್ ಬರ್ಪ ಗುರುಜನದ ಸರಮಮ್ ಸಂಜಯನ್ ಅರಿದು... ಕರಕಮಲ ಮುಕುಳಿತ ಅಂಜಲಿಯಾಗಿ)

**ಸಂಜಯ** : ದೇವಾ, ನಿನ್ನಲ್ಲಿಗೆ ನಿಜಜನನೀಜನಕರ್ ಅರಸುತ್ತುಮ್ ಬಂದರ್.

(ಎಂಬುದುಮ್, ಉದ್ಧೃತ ಗೋತ್ರಾಭಿಮುಖನ್ ವಜ್ರಾಘಾತಮ್ ಆದಂತೆ ಸಿಗ್ಗಾಗಿ... ತಲೆಯಮ್ ಬಾಗಿ..)

**ದುರ್ಯೋಧನ** : ಅರಿಭೂಪಾಲರನ್ ಇಕ್ಕಿ ಗೆಲ್ದ ಒಸಗೆಯಿಮ್ ತೂರ್ಯತ್ರಯಮ್ ಪೊಣ್ಮೆ... ಸೋದರರುಮ್ ಮಕ್ಕಳುಮ್ ಆಪ್ತರುಮ್ ಬೆರಸು ಬಂದು... ಆನಂದದಿಮ್ ಮದ್ಗುರು ಗಳಮ್ ಕಾಣ್ಬೆನ್ ಎಂದಿರಲ್... ವಿಧಾತ್ರ, ದುಃಖಾತ್ಮರಮ್ ಶೋಕತತ್ಪರರಮ್... ಮೆಯ್ಯೊಳೆ ಬೀಳ್ವ ಉದಶ್ರುಮುಖರಮ್ ಕಾಣ್ಬಂತುಟಮ್ ಮಾಡಿದಯ್... ಕಂದ, ನಿಜಾನುಜರ್ ಎಲ್ಲಿದರ್ ಎಂದು ಎನ್ನನ್ ಜನನಿ ಬಂದು ಬೆಸಗೊಂಡೊಡೆ... ಅದೇನೆಂದು ಮರುಮಾತು ಕುಡುವೆನ್... ಕೌಂತೇಯರ್ ಕೊಂದರ್ ಎಂದು ಬಿನ್ನೈಸುವೆನೋ...

(ಶೋಕಮ್ ಮಿಗೆ ವಿಗಳಿತ ವಿವೇಕನ್... ಅವಿರಳ ಬಾಷ್ಪೋದ್ರೇಕನ್... ಫಣಿರಾಜಪತಾಕನ್)

**ದುರ್ಯೋಧನ** : ಹಾ ದುಶ್ಶಾಸನ... ಹಾ ಕರ್ಣ

(ಎನುತಮ್ ಅಂತೆ ಮೂರ್ಛೆಗೆ ಸಂದನ್.)

❖

## ನೋಟ–7

# ಧೃತರಾಷ್ಟ್ರನ ಕೋರಿಕೆ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಧೃತರಾಷ್ಟ್ರ ವಚನಂ' ಎಂಬ ಹೆಸರಿನ 4 ನೆಯ ಅಧ್ಯಾಯದ 1 ನೆಯ ಪದ್ಯದಿಂದ 20 ನೆಯ ಗದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಗಾಂಧಾರಿ** : ಧೃತರಾಷ್ಟ್ರನ ಹೆಂಡತಿ. ದುರ್ಯೋಧನನ ತಾಯಿ.

**ಧೃತರಾಷ್ಟ್ರ** : ಹಸ್ತಿನಾವತಿಯ ಮಹಾರಾಜ. ದುರ್ಯೋಧನನ ತಂದೆ.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

## ಧೃತರಾಷ್ಟ್ರನ ಕೋರಿಕೆ

ಅಂತು ಮೂರ್ಛಾಪ್ರಸಂಗನಾದ ಪನ್ನಗಪತಾಕಂಗೆ ಶಿಶಿರೋಪಚಾರ ಕ್ರಿಯೆಗಳಮ್ ಮಾಳ್ಪ ಸಂಜಯನ ಇರವಮ್... ತತ್ ಪರಿಜನಮ್ ಕಂಡು ಪೇಳೆ, ಗಾಂಧಾರಿ ಮನದೊಳ್ ಅಳ್ಕಿ ಬಳ್ಕಿ ನನೆಕೊನೆವೋಗಿ...

**ಗಾಂಧಾರಿ** : ಮಗನೆ, ಮೃಗಧರಕುಲ ಲಕ್ಷ್ಮೀವಲ್ಲಿಗೆ ಪೆರರಾರ್... ನೀನೆ ಮುನ್ನಡರ್ಪು ಎನಲ್ ಇರ್ದಯ್... ಲಯಕಾಲ ಭೀಮೋರಗನ್ ಉರಗಪತಾಕ ನಿನ್ನುಮನ್ ನುಂಗಿದನೇ... ಎಮಗೆ ಅಂಧಯಷ್ಟಿಯಾಗಿರ್ದೆ ಮಗನೆ... ನೀನ್ ಉಳ್ಳೊಡೆ ಎಲ್ಲಮ್ ಒಳವು ಎಂದಿರೆ... ನಿನ್ನುಮನ್ ಇರಿಸದೆ ಕುರುವಂಶ ಅನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ... ಕುರುಕುಲ ತಿಲಕಾ, ಗುರುಚರಣಂಗಳ್ಗೆ ಎರಗದೆ... ಪರಕೆಯನ್ ಆದರದಿನ್ ಆಂತುಕೊಳ್ಳದೆ ಮೋನಮ್ ಬೆರಸಿರ್ಪುದು ನಿನಗೆ ಉಚಿತಮೆ... ಕುರುನರೇಂದ್ರ, ಗುರು ವಿನಯಮನ್ ಏಕೆ ಮರೆದೆ... ಮಡಿದ ಈ ದುಶ್ಶಾಸನನ್ ಏನ್ ನುಡಿಯಿಸುವನೊ... ದುರ್ಮರ್ಷಣನ್ ಏನ್ ನುಡಿಯಿಸುವನೊ... ದುಷ್ಕರ್ಣನ್ ನುಡಿಯಿಸುವನೊ... ನೀನುಮ್ ಉಸಿರದಿರ್ಪುದೆ ಮಗನೇ

(ಎಂದು ಗಾಂಧಾರಿ ವಿಪ್ರಲಾಪಮ್ ಗೆಯ್ಯೆ... ಧೃತರಾಷ್ಟ್ರನ್ ತನ್ನ ನಂದನನ ಕಾಲ ಮೇಲೆ ಕವಿದು ಬಿಳ್ದು)

**ಧೃತರಾಷ್ಟ್ರ** : ಹಾ ಕುರುಕುಲ ಚೂಡಾಮಣಿ... ಹಾ ಕುರುಕುಲ ಚಕ್ರವರ್ತಿ... ಹಾ ಸಕಲಧರಿತ್ರೀಕಾಂತ... ಮಾಯ್ದು ವಿಧಾತ್ರನ್ ಕಾಯ್ದು ನಿನ್ನುಮನ್ ಪರಲೋಕಕ್ಕೆ ಅಟ್ಟಿದನೆ .

(ಎಂದು ಕರುಣಾಕ್ರಂದನಮ್ ಗೆಯ್ದು ಗುರುಜನಂಗಳ ಸರಮಮ್ ಸಂಜಯನ್ ಮಾಣಿಸಿ)

**ಸಂಜಯ** : ಕರ್ಣ ದುಶ್ಶಾಸನಾದಿಗಳ ಸಾವಿನೊಳ್ ಶೋಕೋದ್ರೇಕದಿಮ್ ಮೂರ್ಛಾಗತನಾಗಿರ್ದಪನ್... ಈಗಳೆ ಚೇತರಿಸುಗುಮ್... ಅನ್ನೆಗಮ್ ವಿಪ್ರಲಾಪಮನ್ ಉಪಸಂಹರಿಪುದು.

(ಎನೆ ಸಮಾಹಿತ ಅಂತಃಕರಣರುಮಾಗಿ... ನಿಜ ಗುರುಗಳ ನಯನಾಂಬು ತಳಿವ ಜಲಮಾಗಿರೆ... ತದ್ಗುರು ಜನದೀರ್ಘ ಉಚ್ಛ್ವಾಸಮೆ ಪರಿವೀಜನಮಾಗೆ... ಕುರುಕುಲ ಚೂಡಾಮಣಿ ಮೂರ್ಛೆಯಿಂದ ಎಳ್ಚತ್ತನ್... ಅಂತು ಮೂರ್ಛೆಯಿಂದ ಎಳ್ಚತ್ತು... ನಿಜ ಜನನೀ ಜನಕರಮ್ ಕಂಡು... ಲಜ್ಜಾಭರದಿಮ್ ಶಿರಮನ್ ಆನತಮ್ ಮಾಡೆ... ಸಂಜಯನ್ ಧೃತರಾಷ್ಟ್ರಂಗಮ್ ಗಾಂಧಾರಿಗಮ್)

**ಸಂಜಯ** : ಅವಧರಿಸುವುದು, ನಿಜ ತನೂಜನಪ್ಪ ರಾಜರಾಜನ್ ನಿಮಗೆ ವಿನಯ ವಿನಮಿತ ಉತ್ತಮಾಂಗನಾದನ್

(ಎನೆ ತದೀಯವಚನಾಮೃತ ಸ್ಪರ್ಶನದಿಂದೆ ಆನಂದಿತಚಿತ್ತರಾಗಿ... ತಡವರಿಸಿಯುಮ್... ತೆಬ್ಬರಿಸಿಯುಮ್... ತೆಗೆದಪ್ಪಿಯುಮ್ ಮನಃಕ್ಷತ ಶರೀರನಮ್ ಪರಮಾಶೀರ್ವಚನ ಶತಸಹಸ್ರಂಗಳಿಮ್ ಪರಸಿ... ಪುನಃ ಪುನರಾಲಿಂಗನಮ್ ಗೆಯ್ದು... ಕಿರಿದಾನುಮ್ ಬೇಗದಿಮ್ ವಿಗತಪರಿಜನಮ್ ಮಾಡಿ)

**ಧೃತರಾಷ್ಟ್ರ** : ಯಮಸುತನ್ ಇನ್ನುಮ್ ಎಮಗೆ ಇಂಬುಕೆಯ್ವನ್ ಕಂದ... ಸಂಧಿಯಮ್ ಸಮಗೊಳಿಸಲ್ಕೆ ಒಡಂಬಡು... ಸಂಜಯನನ್ ಅಟ್ಟುವೆ... ಭೀಮನೊಳಾದ ಬದ್ಧವೈರಮನ್ ಉಳಿ... ಸುತಸಹೋದರ ದುಃಖಮಮ್ ನೋಡದಿರ್... ಅವರ್ಗೆ ಅರ್ಧರಾಜ್ಯಮನ್ ಈವುದು.

(ಎಂದು ಅಂಧನೃಪಾಲ ಪುತ್ರನನ್ ಕಾಲ್ವಿಡಿದು ಬೇಡಿದನ್...

ಅಂತು ಕುರು ನರೇಂದ್ರನನ್ ಅಂಧ ನರೇಂದ್ರನ್ ಅಭ್ಯರ್ಥಿಸಿ)

**ಧೃತರಾಷ್ಟ್ರ** : ಶ್ರೀವನಿತೆಗೆ ನಿಜವಿಜಯ ಶ್ರೀವನಿತೆಯೆ ಸವತಿಯಾಗೆ... ರಿಪುನೃಪರಮ್ ಶೌರ್ಯಾವಷ್ಟಂಭದೆ ಗೆಲ್ದ ಸಾಹಸ ಭೀಮನ್... ಜಯಾವಸಥನ್ ಅಸಾಧ್ಯನಲ್ತೆ... ಅದರಿನ್ ಆತನೊಳಪ್ಪ ಸಮರಾನುಬಂಧಮಮ್ ಮಾಣ್ಬುದು... ಎನ್ನ ಎಂಬುದನ್ ಇಂಬುಕೆಯ್ವುದು.

(ಎಂದ ಧೃತರಾಷ್ಟ್ರನ ನುಡಿಯಮ್ ಗಾಂಧಾರಿ ಸಮಭ್ಯರ್ಥಿಸಿ... ತಾನುಮ್ ಪ್ರಾರ್ಥಿಸಿ)

**ಗಾಂಧಾರಿ** : ಮಗನೇ, ಪರಿಣತ ವಯಸರೆಮ್... ಇರ್ಕಣ್ ಕುರುಡರೆಮ್... ಎಮಗೆ ಇಂಬುಕೆಯ್ವುದು ಉಚಿತಮ್... ನಿನ್ನ ಈ ಗುರು ನುಡಿದ ನುಡಿಗೆ ಒಡಂಬಡು... ಗುರುವಚನಮ್ ಅಲಂಘನೀಯಮ್ ಎಂಬುದು... ಮಗನೆ, ಸಮರ ವ್ಯಾಪಾರಮ್ ಮಾಣ್ದು... ನಿಜಶಿಬಿರದತ್ತ ಬಿಜಯಂಗೆಯ್... ಸತ್ತ ಮಗಂದಿರ್ ಸತ್ತರ್... ಅವರನ್ ಇನ್ ತಂದಪೆವೇ, ನೀನ್ ಎಮಗೆ ಉಳ್ಕೊಡೆ ಸಾಲ್ವುದು

(ಎಂದು ಗಾಂಧಾರಿ ತನ್ನ ಮತ್ತಿನ ಮಕ್ಕಳಮ್ ನೆನೆದು ದುಃಖಂಗೆಯ್ಯೆ... ಸಂಜಯನ್ ಜಡಿದು)

**ಸಂಜಯ** : ಬಂದುಮ್... ಪ್ರಿಯಸುತನನ್ ಸಂತಯಿಸುವುದು... ಅದುಗೆಟ್ಟು... ನೀನೆ ಗಳ... ಶೋಕಾಕ್ರಾಂತೆಯುಮಾಗಿ ಶೋಕಿಸಲ್ ಅಂಧನೃಪತಿಯನ್ ನೃಪತಿಯುಮನ್ ಸಂತಯಿಸುವರಾರ್ .

(ಎಂಬುದುಮ್... ವೃದ್ಧರಾಜನ್ ಕುರುರಾಜಂಗೆ ಅಭಿಮುಖನಾಗಿ)

**ಧೃತರಾಷ್ಟ್ರ** : ವೀರಶತ ಜನನಿಗೆ... ಈ ಗಾಂಧಾರಿಗೆ... ಈಗಳ್ ಕೌರವಪತಿ ದುಃಖ ಮಹಾಭಾರಮನ್ ಆಂತ ಆಯಾಸಕ್ಕೆ ಗುರಿಯಾದುದರಿಮ್... ಶತದುಃಖ ಜನನಿ ಪೆಸರಾಯ್ತು ಧಾತ್ರಿವಲ್ಲಭ ಧರ್ಮಜನ್ ಭವತ್ ಅನುಜಕ್ಷಯನ್ ಕಂಡು... ಶೋಕಾನಿವಹಮ್ ಸಂಧಿ ಮಾಡಲ್ ಬಗೆವನ್... ಅವನಾ ಕೃತಕ ಪ್ರತಿಜ್ಞೆಯಮ್ ಕೇಳ್ದರಿಯಾ... ಸಮರದೊಳ್

ಸಮವಾಯಮ್ ಅದೃಷ್ಟವಶದಿಮ್ ನಾಲ್ವರ್ ಅನುಜರೊಳ್ ಒರ್ವನ್ ಸಾಯೆ... ಯಮಭರನ್ ಯಮನಂದನನ್ ಅತೀತನಪ್ಪನ್... ಅದರಿಮ್ ಆ ನೃಪಂಗಮ್ ಜಯಮೇ.

(ಎಂದು ನುಡಿದ ನರೇಂದ್ರನ ನುಡಿಗೆ ಸಂಜಯನ್ ಒಡಂಬಟ್ಟು...)

**ಸಂಜಯ** : ನೃಪ, ನಿನ್ನ ತಂದೆ ಎಂದುದನ್ ಉಪಪತ್ತಿಯುಕ್ತಮ್ ಇದಮ್ ಇನ್ ಕಯ್ಕೊಳ್

(ಎನೆ ಭೂಮಿಪನ್)

**ದುರ್ಯೋಧನ** : ನಿಮ್ಮಯ ಪೂರ್ವಪಕ್ಷಮ್ ಎಮಗೆ ವಲಮ್ ಸಿದ್ಧಾಂತಮ್ ಆದುದೇ... ತನ್ನ ಒಡವುಟ್ಟಿದರ್ ಪೆಸರ ನಾಲ್ವರೊಳ್ ಒರ್ವರುಮ್ ಇಲ್ಲದಿರ್ದೊಡಮ್... ಧರ್ಮತನೂಜನ್ ಅಗ್ನಿಗೆ ತನ್ನ ಅಸುವಮ್ ನಿವೇದಿಸುವನ್ ಎಂದೊಡೆ... ಆನ್ ಎನ್ನ ಒಡವುಟ್ಟಿದರ್ ಪೆಸರ ನೂರ್ವರೊಳ್ ಒರ್ವರುಮ್ ಇಲ್ಲ... ಬಾಳ್ವೆನ್ ಎಂಬ ಎನ್ನ ಅಳಿಯಾಸೆಯಮ್ ಬಿಸುಟೆನ್... ಇನ್ ಅವರ್ ಆದುದನ್ ಆಗದಿರ್ಪನೇ...

ಹಾ ಕರ್ಣಾ, ಸಾಧಿಸುವೆನ್ ಫಲ್ಗುಣನನ್... ಸಾಧಿಸುವೆನ್ ಪವನಸುತನ ಬಸಿರಿಮ್ ದುಶ್ಶಾಸನ ತೆಗೆವೆನ್... ಬಳಿಕೆ ನಿರ್ದೋಷಿ ಯಮಜನೊಳ್ ಪುದುವಾಳ್ವೆನ್... ಪಾಂಡುರಾಜನುಮ್ ನೀನುಮ್ ಧರೆಯಮ್ ಪಚ್ಚಾಳ್ದಿರ್. ಅದನೆ ಕೈತವದಿಂದೆ ಅಯ್ವರ ಕೆಯ್ಯೊಳ್ ಎಳೆದುಕೊಂಡು ಈ ಕುರುರಾಜನ್ ಮತ್ತಮ್ ಅವರ್ಗೆ ಪುದುವಿತ್ತಪನೇ... ಆನ್ ಮಗನೆನ್ ಆಗೆ... ಧರ್ಮಜನ್ ಏನ್ ಮಗನಲ್ಲನೆ... ಬಳಿಕ್ಕೆ ನೀಮುಮ್ ತಾಮುಮ್ ನಿಮ್ಮೊಳ್ ನೇರ್ಪಡುಗಿಡದೆ... ಮುನ್ನಿನ ತೆರದೆ ಸುಖಮ್ ಬಾಳ್ವುದು... ಆನ್ ಬೆಸಕೆಯ್ವೆನ್... ಬಿಡಿಮ್ ಎನ್ನನ್.

(ಎಂದು ಮುಂದಿರ್ದು ಅಡಿಗೆರಗಿದ ಮಗನನ್ ಅಪ್ಪಿಕೊಂಡು... ಅಶ್ರುಜಲಮ್ ಗುಡುಗುಡನೆ ಸುರಿಯೆ... ನಾಲಗೆ ತಡತಡವರೆ... ಅಂಧನೃಪನ್ ಆ ನೃಪನನ್ ನುಡಿದನ್.)

**ಧೃತರಾಷ್ಟ್ರ** : ನೀನ್ ಎಂತುಮ್ ಎಮ್ಮ ಪೇಳ್ವುದಮ್ ಕೈಕೊಳ್ಳದೆ... ಛಲಮನೆ ಕಯ್ ಕೊಂಡು... ಪಾಂಡುನಂದನರೊಳ್ ಕಾದಿದಲ್ಲದೆ ಸಂಧಿಯನ್ ಒಡಂಬಡೆಯಪ್ಪಿನಮ್... ನೀನ್ ಎಮಗೆ ಇನಿತನ್ ಒಳ್ಪಿಕಯ್ಯಲ್ವೇಳ್ವುದು... ನೆಗಳ್ವ ಕಜ್ಜಮ್ ಆವುದುಮಮ್ ನಿಮ್ಮಜ್ಜನೊಳ್ ಆಲೋಚಿಸಿ ನೆಗಳ್ವುದು... ಅಲ್ಲಿಗೆ ಬಿಜಯಮ್ ಗೆಯ್ವುದು.

(ಎನೆ)

**ದುರ್ಯೋಧನ** : ಮಹಾಪ್ರಸಾದಮ್.

(ಎಂದು ಅದನ್ ಒಡಂಬಟ್ಟು)

**ದುರ್ಯೋಧನ** : ಅಂತೆ ಗೆಯ್ವೆನ್.

(ಎಂದು ಗುರುಜನಮಮ್ ಬೀಳ್ಕೊಂಡು ಅವರಮ್ ಬೀಡಿಂಗೆ ಪೋಗಲ್ವೇಳ್ದು... ಕಿರಿದು ಪೊಲ್ತು ಶೋಕಾನುಬಂಧದೊಳ್ ಕೋಪಾನುಬಂಧಮಮ್ ಸಮರಾನುಬಂಧಮಮ್ ಅಂತರಿಸಿರ್ದು... ಸಂಜಯ ದ್ವಿತೀಯನುಮ್ ನಿಜಭುಜಗದಾಸಹಾಯನುಮ್ ಆಗಿ ಸಂಗ್ರಾಮ ಭೂಮಿಯೊಳಗನೆ ಬರುತುಮ್ ಇರ್ದನ್.)

❖

## ನೋಟ–8

# ಮರುಳುಗಳು ದುರ್ಯೋಧನನನ್ನು ಕೆಣಕಿ ಕಾಡುವುದು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನ ವಿಲಾಪಮ್' ಎಂಬ ಹೆಸರಿನ 5 ನೆಯ ಅಧ್ಯಾಯದ 1 ನೆಯ ಪದ್ಯದಿಂದ 9 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

**ಮರುಳುಗಳು** : ಮರುಳು=ದೆವ್ವ/ಪಿಶಾಚಿ; ದೆವ್ವಗಳು ದುರ್ಯೋಧನನನ್ನು ಕೆರಳಿ ಕಾಡುವ ಈ ಪ್ರಸಂಗವು ಒಂದು ಕವಿ ಕಲ್ಪಿತವಾದ ರೂಪಕ. ಚಕ್ರವರ್ತಿಯಾದ ರಾಜನಾದ ದಾಯಾದಿ ಮತ್ಸರದ ಕಾರಣದಿಂದಾಗಿ ಮಾಡಿದ ಯುದ್ಧದಿಂದ ತಮ್ಮಂದಿರನ್ನು ಮತ್ತು ಮಕ್ಕಳನ್ನು ಕಳೆದುಕೊಂಡು, ಲೋಕದ ತಿರಸ್ಕಾರಕ್ಕೆ ಹೇಗೆ ಗುರಿಯಾಗಿದ್ದಾನೆ ಎಂಬುದನ್ನು ದೆವ್ವಗಳ ಅಣಕದ ಮಾತುಗಳಿಂದ ಚಿತ್ರಿಸಲಾಗಿದೆ.

## ಮರುಳುಗಳು ದುರ್ಯೋಧನನನ್ನು ಕೆಣಕಿ ಕಾಡುವುದು

ಸಂಗ್ರಾಮ ಭೂಮಿಯೊಳಗನೆ ಬರ್ಪಲ್ಲಿ... ನೆತ್ತರ ಕಡಲೊಳಗೆ ಉಡಿದಿರ್ದ ಕಯ್ದು ಅಡಿಗಡಿಗೆ ತಳಮನ್ ಉರ್ಚುತ್ತಿರೆ... ಕಾಲಿಡಲ್ ಎಡೆವಡೆಯದೆ... ಕುರುಪತಿ ದಡಿಗ ಪೆಣಂಗಳನೆ ಮೆಟ್ಟಿ ನಡೆಯುತ್ತಿರ್ದನ್... ಹಲ ಚಕ್ರ ಅಂಕುಶಮ್ ಹಲ ಚಕ್ರಾಂಕುಶ ರೇಖಾ ವಿಲಸಿತ ಪದತಳಕೆ ಪುನರುಕ್ತೆಯಮ್ ಮಾಡೆ... ಆ ಕುರುಕುಲಜನ್ ಕುಸಿಕುಸಿದು ಮೆಲ್ಲಮೆಲ್ಲನೆ ನಡೆದನ್... ಆಗಳ್ ಅದಮ್ ಸಂಜಯನ್ ಕಂಡು ಮನ್ಯೂದ್ಗತಕಂಠನುಮಾಗಿ

**ಸಂಜಯ** : ನಿಮ್ಮಯ ಮೆಲ್ಲಡಿ ವಿನುತ ವಿರೋಧಿ ಮಂಡಳಿಕ ಮೌಳಿ ವಿರಾಜಿತ ಪಾದಪೀಠ ಕಾಂಚನ ಕಮಳಾಯಮಾನಮ್ ಇವು... ಭಿಂಡಿವಾಳದ ಅಂಬಿನ ಕರವಾಳ ಕಕ್ಕಡೆಯ ಕೊಂತದ ಧಾರೆಗಳ್ ಉರ್ಚೆ... ಸಂಯುಗ ಅವನಿತಳದೊಳ್ ವಿಧಾತ್ರವಶದಿಮ್ ನಿಮಗಮ್ ನಡೆವಂತುಟಾದುದೇ.

(ಎಂದು ಗಳಗಳನೆ ಕಣ್ಣೀರಮ್ ನೆರಪುವ ಸಂಜಯನನ್ ಅಭಿಮಾನಧನನ್ ಮಾಣಿಸಿ)

**ದುರ್ಯೋಧನ** : ವಜ್ರಮನನಪ್ಪ ಎನ್ನನ್... ತನುಜಾನುಜರ ವಿಯೋಗದ ಮನಃಕ್ಷತಮ್ ನೋಯಿಸಲ್ಕೆ ನೆರೆಯದೆ... ಸಮರ ಅವನಿಜಾತಮ್ ಚರಣಕ್ಷತಮ್ ಇನಿಸುಮ್ ನೋಯಿಕುಮೆ.

(ಎಂದು ಕುರುಕುಲಾವಷ್ಟಂಭನ್ ಕಾರ್ಯಾವಷ್ಟಂಭನಾಗಿ ಬರುತ್ತಮ್... ಮೊನೆಯೊಳ್ ಇದಿರ್ಚಿ ಸತ್ತ ಭಟನನ್... ಗಜದಂತದೊಳ್ ಅಣ್ಮಿ ಸತ್ತ ಬೀರನನ್... ರಣದೊಳ್ ಅದಟಿಮ್ ಸಹಸ್ರಭಟರಮ್ ಪೆಣೆದಿಕ್ಕಿ ಸತ್ತ ಗಂಡನನ್ ಅರಸುತ್ತೆ ಬರ್ಪ ಸುರಸುಂದರಿಯರ್ಕಳನ್... ಆ

ಪರಾಕ್ರಮನಿಕೇತನನ್ ಫಣಿರಾಜಕೇತನನ್ ಈಕ್ಷಿಸುತ್ತುಮ್ ಒಯ್ಯನೆ ನಡೆದನ್... ಅಂತು ಬರೆವರೆ)

**ಮರುಳ್–1** : ಗುರುವಿನ ನೆತ್ತರಮ್ ಕುಡಿವೆನಪ್ಪೊಡೆ, ಅವನ್ ದ್ವಿಜವಂಶಜನ್... ನಿಜಾವರಜನ ನೆತ್ತರಮ್ ಕುಡಿವನಪ್ಪೊಡೆ, ಭೀಮನೆ ಎಯ್ದೆ ಪೀರ್ದನ್... ಭೀಷ್ಮರ ಬಿಸಿನೆತ್ತರಮ್ ಕುಡಿವೊಡೆ, ಇನ್ನುಮ್ ಒಳನ್... ಕುರುರಾಜ, ನಿನ್ನ ನೆತ್ತರ ಸವಿನೋಳ್ಪಡೆ, ಆನ್ ಬಯಸಿ ಬಂದಪೆನ್.

(ಎಂದುದು ಅದೊಂದು ಪುಲ್ಮರುಳ್... ಅದಮ್ ಕೇಳುತ್ತುಮ್ ಬರೆವರೆ... ಕದನದೊಳ್ ಉಣ್ಮಿದ ಉಳ್ಮಿದುಳ ಕರ್ದಮದೊಳ್ ಜಗುಳ್ದು ಅಂಘ್ರಿ ಜಾರಿ ಪೋಪುದುಮ್... ಒಡನಿರ್ದ ಸಂಜಯನ್ ಇಳೇಶ್ವರನನ್ ಪಿಡಿದು)

**ಸಂಜಯ** : ಊರುಭಂಗಮಾಗದೆ ವಲಮ್.

(ಎಂದೊಡೆ)

**ದುರ್ಯೋಧನ** : ಆಗದು.

(ಎನೆ, ಪುಲ್ಮರುಳ್ ಒಂದೆಡೆವೋಗಿ)

**ಮರುಳ್–1** : ಭೀಮಕೋಪದೆ ನಿನಗೆ ಊರುಭಂಗ ಭಯಮಾಗದೆ ಪೋಕುಮೆ ಕೌರವೇಶ್ವರಾ

(ಎಂದ ಮರುಳ ಮಾತು ತನಗೆ ಕರ್ಣಕಠೋರಮಾಗೆ... ತನಗೆ ಮುನ್ನಮ್ ಮೈತ್ರೇಯರ್ ಕೊಟ್ಟ ಊರುಭಂಗ ಶಾಪಮಮ್ ನೆನೆನೆನೆದು... ಮನದೊಳ್ ಕಟ್ಟುಕಡೆದು... ತಾನ್ ಮಹಾಸತ್ತ್ವನ್ ಅಪ್ಪುದರಿಂದಮ್ ಒಂದುಮನ್ ಬಗೆಯದೆ)

**ದುರ್ಯೋಧನ** : ಮರುಳ ಮಾತಿನೊಳ್ ಪುರುಳೇನ್

(ಎಂದು ಅರಸನ್ ಪೋಗೆವೋಗೆ)

**ಮರುಳ್–1** : ಅರಗಿನ ಮಾಡದೊಳ್... ವಿಷದ ಲಡ್ಡುಗೆಯೊಳ್ ಕೊಲಲೊಡ್ಡಿ... ಬದ್ಧಮತ್ಸರದೊಳೆ ವೈರಮಮ್ ಪದೆದು... ಭೀಮನನ್ ಇನ್ ಇನಿತರ್ಕೆ ತಂದ ನೀನ್ ಮರುಳಯೊ ಫಣಿರಾಜಕೇತನಾ... ಭೂತಕೋಟಿವೆರಸು

ಆಹವರಂಗದೊಳ್ ಆಡುತಿರ್ಪ ತಾನ್ ಮರುಳನೊ... ಇರ್ವರ ಮರುಳ್ತನಮಮ್ ನೋಳ್ಪಮ್ ನುಡಿಯದೆ ಪೋಗಲೀಯೆನ್... ಪೋದೊಡೆ ಧೂರ್ಜಟಿಯಾಣೆ... ಮೀರಿ ಪೋದಡೆ ಕಲಿಭೀಮನಾಣೆ.

(ಎನೆ, ಧೂರ್ಜಟಿಯಾಣೆಗೆ ನಿಂದು... ಭೀಮನೆಂದೊಡೆ ಮುಳಿದಟ್ಟಿ ಕುಟ್ಟಲ್ ಅರಸಮ್ ಗದೆಗೊಂಡಡೆ... ಭೂತಕೋಟಿಯುಮ್ ಬಡಿಗೊಳೆ... ಸಂಜಯನ್ ನಯದೆ ಬಗ್ಗಿಸಿದನ್ ಫಣಿರಾಜಕೇತುವನ್... ಅಂತು ಬಹುಳ ಪ್ರತ್ಯವಾಯ ಪ್ರದೇಶಗಳನ್ ಎಂತಾನುಮ್ ಕಳೆದು ಪೋಗೆವೋಗೆ)

❖

## ನೋಟ–9

# ದ್ರೋಣಾಚಾರ್ಯರಿಗೆ ನಮನ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'**ದುರ್ಯೋಧನ ವಿಲಾಪಮ್**'** ಎಂಬ ಹೆಸರಿನ 5 ನೆಯ ಅಧ್ಯಾಯದ 10 ನೆಯ ಪದ್ಯದಿಂದ 13 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

# ದ್ರೋಣಾಚಾರ್ಯರಿಗೆ ನಮನ

ಅಂತು ಬಹುಳ ಪ್ರತ್ಯವಾಯ ಪ್ರದೇಶಗಳನ್ ಎಂತಾನುಮ್ ಕಳೆದು ಪೋಗೆವೋಗೆ...

**ಸಂಜಯ** : ಆ ದ್ರೌಪದೀದ್ರೋಹನನ್... ಭವತ್ ಅನುಜನನ್... ಭೀಮನ್ ಮುನಿದು ಎಯ್ತಂದು... ಇಲ್ಲಿ ಕೊಂದನ್.

(ಎನಲ್ಕೆ)

**ದುರ್ಯೋಧನ** : ಆನ್ ಪರಿಭವಮನ್ ಅದನ್ ಕೇಳಲಾರೆನ್... ಮುಂದೆ ಮುಂದೆ

(ಎಂದು ಬಾಷ್ಪಾಂಬು ನಿಮಗ್ನನ್ ಭಗ್ನಚಿತ್ತನ್ ತಲೆಯನೆರಗಿ)

**ದುರ್ಯೋಧನ** : ಬಿಲ್ಲೋಜನ್ ಎಲ್ಲಿರ್ದನ್... ಭೀಷ್ಮನ್ ಎಲ್ಲಿರ್ದನೊ ನೋಡುವೆನ್... ತೋರ್.

(ಎನೆ, ಕುರುಕುಲನನ್ ಸಂಜಯನ್ ಕೊಂಡುಪೋದನ್... ಅಂತು ಪೋಗೆ... ಸಂಜಯ ಶಿರಸ್ಕಂಧ ಅವಲಂಬನ್ ಕುರುಪ್ರಭು ಇಭಶೈಲಂಗಳಮ್ ಏರಿಯೇರಿ... ರುಧಿರಸ್ರೋತಂಗಳಮ್ ದಾಂಟಿ ದಾಂಟಿ... ಇಭದೋಃ ನೀಲಲತಾ ಪ್ರತಾನ ವಿಪಿನವ್ರಾತಂಗಳೊಳ್ ಸಿಲ್ಕಿ ಸಿಲ್ಕಿ... ಭರಂಗೆಯ್ದು ಉರದೆ ಎಯ್ದಿ... ಶರಜಾಲ ಜರ್ಜರಿತಗಾತ್ರತ್ರಾಣನನ್ ದ್ರೋಣನನ್ ಕಂಡನ್... ಅಂತು ಎನಿಸಿರ್ದ ನಿಸರ್ಗದುಷ್ಟ ಧೃಷ್ಟದ್ಯುಮ್ನ ಕಚನಿಗ್ರಹಕರ

ವಿಲುಳಿತ ಮೌಳಿಯಾಗಿರ್ದ ಭಾರಧ್ವಾಜನ ಇರವಮ್ ರಾಜರಾಜನ್ ನೋಡಿ)

**ದುರ್ಯೋಧನ** : ಕುಂಭಸಂಭವಾ, ಅರಿಯೆಮೆ... ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು... ಪಿನಾಕಪಾಣಿಯುಮ್ ನಿಮ್ಮೊಡನೆ ಇದಿರ್ಚಿ ಕಾದಿ ಗೆಲಲ್ಕೆ ನೆರೆಯನ್... ಅದು ನಿಮ್ಮ ಉಪೇಕ್ಷೆಯೆಂದು ಅರಿಯೆನ್... ಇದು ಎನ್ನ ಕರ್ಮವಶಮ್ ಎಂದು ಅರಿಯೆನ್... ನಿಮಗಿಂತು ಸಾವುಮ್ ಏತೆರದಿಮ್ ಅಕಾರಣಮ್ ನೆರೆಯೆ ಸಂಭವಿಸಿರ್ದುದೊ

(ಎಂದು ದುಃಖಮ್ ಗೆಯ್ದು)

**ದುರ್ಯೋಧನ** : ಅನ್ಯಸೈನ್ಯದ ಒಡಲೊಳ್ ಶರಸಂಧಾನಮನ್... ತನ್ನ ಶಿಷ್ಯರ ಮೆಯ್ಯೊಳ್ ಬಿಲ್ಬಲ್ಮೆಯಮ್... ನಿಖಿಲ ದಿಕ್ಚಕ್ರಂಗಳೊಳ್ ನಿಜಕೀರ್ತಿಯಮ್... ಹರಪಾದಾಂಬುಯುಗ್ಮದೊಳ್ ಚಿತ್ತಮನ್ ನಿರಿಸಿದನ್... ಚಾಪಾಗಮಾಚಾರ್ಯರೊಳ್ ದ್ರೋಣಂಗೆ ದೊರೆ ಆರ್ ಎಂಬಿನಮ್ ಅಣ್ಮಿ ಸತ್ತ ಅಳವು... ಇದೇನ್ ಮೆಯ್ವೆತ್ತುದೋ..

(ಎಂದು ಕುಂಭಸಂಭವನನ್ ತ್ರಿಃಪ್ರದಕ್ಷಿಣಮ್ ಗೆಯ್ದು ಬರುತ್ತಮ್)

❖

## ನೋಟ–10

# ಅಭಿಮನ್ಯುವಿನ ವೀರಮರಣಕ್ಕೆ ಮೆಚ್ಚುಗೆ...
# ಲಕ್ಷಣ ಕುಮಾರನ ಸಾವಿಗೆ ಕಂಬನಿ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನ ವಿಲಾಪಮ್' ಎಂಬ ಹೆಸರಿನ 5 ನೆಯ ಅಧ್ಯಾಯದ 14 ನೆಯ ಪದ್ಯದಿಂದ 19 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

**ಅಭಿಮನ್ಯು** : ಸುಭದ್ರೆ ಮತ್ತು ಅರ್ಜುನ ದಂಪತಿಯ ಮಗ.

**ಲಕ್ಷಣ ಕುಮಾರ** : ಭಾನುಮತಿ ಮತ್ತು ದುರ್ಯೋಧನ ದಂಪತಿಯ ಮಗ.

## ಅಭಿಮನ್ಯುವಿನ ವೀರಮರಣಕ್ಕೆ ಮೆಚ್ಚುಗೆ...
## ಲಕ್ಷಣ ಕುಮಾರನ ಸಾವಿಗೆ ಕಂಬನಿ

ಆ ದಿಶಾ ಭಾಗದೊಳ್ ಅರೆಮುಗಿದಿರ್ದ ಕಣ್ಮಲರ್ ಅಲರ್ದ ಮೊಗಮ್... ಕಡಿವೋದ ಕಯ್ಯುಮ್... ಆಸುರತರಮಾಗೆ ಕರ್ಚಿದ ಅವುಡುಮ್ ಬೆರಸು ಅನ್ಯಶರ ಪ್ರಹಾರ ಜರ್ಜರಿತ ಶರೀರನಾಗಿ... ನವಲೋಹಿತ ವಾರ್ಧಿಯೊಳ್ ಅಳ್ದು ಬಿಳ್ದನನ್... ಆಜಿವೀರನನ್ ಅಭಿಮನ್ಯು ಕುಮಾರನನ್ ಕುರುಪತಿ ನೋಡಿ ಕಂಡನ್... ಅಂತು ಆತನನ್ ಅಹಿಕೇತನನ್ ನೋಡಿ

**ದುರ್ಯೋಧನ** : ನರಸುತ, ಗುರು ಪಣ್ಣಿದ ಚಕ್ರವ್ಯೂಹ ರಚನೆ ಪೆರರ್ಗೆ ಪುಗಲ್ ಅರಿದು... ಇದಮ್ ಪೊಕ್ಕು... ರಣಾಜಿರದೊಳ್ ಅರಿನೃಪರನ್ ಇಕ್ಕಿದ ನಿನ್ನೊರೆಗೆ ದೊರೆಗೆ ಗಂಡರುಮ್ ಒಳರೇ... ಮೆಯ್ಗಲಿಗಳ್ ಪಲರ್ ಇರ್ದು ಕಾದಿದರ್... ನಿನ್ನ ಒಂದೆ ಮೆಯ್ಯೊಳಮ್ ಪಲರಮ್ ತವೆ ಕೊಂದಯ್... ನಿನ್ನನ್ ಪೆತ್ತಳ್ ಮೊಲೆವೆತ್ತಳ್... ವೀರಜನನಿ ಪೆಸರಮ್ ಪೆತ್ತಳ್... ಅಸಮಬಲ, ಭವತ್ ವಿಕ್ರಮಮ್ ಅಸಂಭವಮ್ ಪೆರರ್ಗೆ... ಅಭಿಮನ್ಯು, ನಿನ್ನನ್ ಆನ್ ಇನಿತಮ್ ಪ್ರಾರ್ಥಿಸುವೆನ್... ನಿಜಸಾಹಸೈಕದೇಶಾನುಮರಣಮ್ ಎಮಗಕ್ಕೆ ಗಡಾ...

(ಎಂದು ಆತ್ಮಗತದೊಳೆ ಬಗೆದು... ಅಭಿಮನ್ಯುಗೆ ಕಯ್ಗಳಮ್ ಮುಗಿದು ಬರುತ್ತುಮ್... ತನ್ನ ಮಗನಪ್ಪ ಲಕ್ಷಣ ಕುಮಾರನನ್ ನೆನೆದು ಮನ್ಯೂದ್ಗತಕಂಠನಾಗಿ... ತತ್

ಆಸನ್ನಪ್ರದೇಶದೊಳ್ ಕಂಡು. ಕೌರವ ಕುಲತಿಲಕಂಗೆ ಆ ಕುಮಾರನನ್ ಕಾಣಲೊಡಮ್... ಹಸ್ತಮ್ ಗಳಿತಶರಮಾಯ್ತು... ಹೃದಯಮ್ ಗಳಿತ ರಣೋತ್ಸಾಹಮಾಯ್ತು... ನಯನಮ್ ಗಳಿತಾಶ್ರುವಾಯ್ತು... ಅಂತು ಪುತ್ರಸ್ನೇಹಕಾತರ ಹೃದಯನಾಗಿ ಗಾಂಧಾರೀನಂದನನ್ ಭಾನುಮತೀನಂದನನ ವದನಾರವಿಂದಮಮ್ ನೋಡಿ)

**ದುರ್ಯೋಧನ** : ಜನಕಂಗೆ ತನೂಭವನ್ ಜಲಾಂಜಲಿಯಮ್ ಕುಡುವುದು ಉಚಿತಮ್... ಅದು ಕೆಟ್ಟು... ಈಗಳ್ ನಿನಗೆ ಆನ್ ಕುಡುವಂತಾದುದೆ... ತನೂಜ, ನೀನ್ ಕ್ರಮ ವಿಪರ್ಯಯಮ್ ಮಾಡುವುದೇ

(ಎಂದು ಅಲ್ಲಿ ನಿಲಲಾರದೆ ಆ ಪ್ರದೇಶದಿಮ್ ತಳರ್ದು ಬರೆವರೆ)

❖

## ನೋಟ–11

# ದುಶ್ಶ್ಯಾಸನನಿಗೆ ಕಣ್ಣೀರಿನ ತರ್ಪಣ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನ ವಿಲಾಪಮ್' ಎಂಬ ಹೆಸರಿನ 5 ನೆಯ ಅಧ್ಯಾಯದ 20 ನೆಯ ಪದ್ಯದಿಂದ 26 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

**ದುಶ್ಶ್ಯಾಸನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಎರಡನೆಯ ಮಗ. ಹಸ್ತಿನಾವತಿಯ ಯುವರಾಜ.

# ದುಶ್ಶಾಸನನಿಗೆ ಕಣ್ಣೀರಿನ ತರ್ಪಣ

ರಣದೊಳ್ ಮಡಿದ ಶಲ್ಯನುಮ್... ಸಿಂಧುರಾಜನುಮನ್... ಶಕುನಿಯುಮನ್ ಮತ್ತೆ ಪಲಂಬರ್ ನೃಪತಿಗಳುಮಮ್ ಕಂಡು... ಶೋಕಾಕುಲೀಕೃತಚಿತ್ತನಾಗಿ)

**ದುರ್ಯೋಧನ** : ಗುಣಿಗಳ್ ತ್ರಿಲೋಕಚೂಡಾಮಣಿಗಳ್ ಕೈಲಾಸಕಲ್ಪ ಸುಭಟಾಗ್ರಣಿಗಳ್ ಎನ್ನಯ ಕಾರಣದಿಂದೆ ಪೊಣರಲ್ ನೆರೆದು... ಈ ನೃಪಸುತರ್ಕಳ್ ಅಳ್ಕಾಡಿದರೇ.

(ಎಂದು ಪಶ್ಚಾತ್ತಾಪಮ್ ಗೆಯ್ಯೆ... ಸಂಜಯನ್ ಸಂತೈಸಿ ಮುಂದೊಯ್ಯೆ... ಭೀಮಸೇನನ ಗದಾಪರಿಘ ಪ್ರಹರಣದಿಮ್ ರುಧಿರ ಪ್ರವಾಹವಶಗತನಾಗಿರ್ದ ಯುವರಾಜನ್ ಇರ್ದ ಎಡೆಯಮ್... ಕುರುರಾಜನ್ ಎಯ್ದೆ ವಂದಾಗಳ್)

**ಸಂಜಯ** : ದುಶ್ಶಾಸನನನ್ ಪುಡಿಯೊಳ್ ಪೊರಳ್ಚಿಯುಮ್... ಮೆಯ್ಯ ಅಡಗಮ್ ಕಿರಿಕಿರಿದು ಕೊರೆದು ತಿಂದುಮ್... ನೆತ್ತರನ್ ಗೊಟ್ಟಮ್ ಕುಡಿದುಮ್... ಹಿಡಿಂಬ ರಿಪು ಎಂತುಮ್ ತಣಿದನಿಲ್ಲ.

(ಎಂದು ಸಂಜಯನ್ ಪೇಳೆ... ಕೆಳಗಿವಿಗೇಳ್ದು... ಕಿರಿದೆಡೆಯಮ್ ಪೋಗಿ... ತನ್ನ ತಮ್ಮನ್ ಇರ್ದ ಇರವಮ್ ಕಂಡು ಸೈರಿಸಲಾರದೆ..)

**ದುರ್ಯೋಧನ** : ನಡು ಉಡಿವನ್ನಮ್ ಏರಿ... ಬರಿಯೆಲ್ವು ಉಡಿವನ್ನೆಗಮ್ ಒತ್ತಿ... ಮಯ್ಯ ಅಡಗು ಅಡಗಾಗೆ ಮೆಟ್ಟಿ... ಮುನ್

ಉರಮನ್ ಇರ್ಬಗಿಯಾಗಿರೆ ಪೋೞ್ದು... ನೆತ್ತರಮ್ ಕುಡಿ ಕುಡಿದು ಆರ್ದ ವೈರಿ ಉೞಿದನ್ನೆಗಮ್... ಎನ್ನ ಅೞಲ್ ಎಂತು ಪೋಕುಮ್.

(ಎಂದು ಅಡಿಗಡಿಗೆ ಅೞ್ತು... ತನ್ನ ಅಣುಗು ತಮ್ಮನನ್ ಸುಯೋಧನನ್ ಈಕ್ಷಿಸಿದನ್. ಅಂತು ನಿಂದು ನೋಡಿ ಪಲುಂಬಿ ಪಲವಾಡಿ..)

**ದುರ್ಯೋಧನ** : ಗಾಂಧಾರೀಜ, ನಿಜ ಜೀವಮ್ ಪರಲೋಕದೊಳ್... ನಿಜ ಮಹಾಮಾಂಸಮ್ ಪಿಶಾಚಾಸ್ಯದೊಳ್... ನಿಜ ರಕ್ತಮ್ ರಿಪು ಕುಕ್ಷಿಯೊಳ್... ನಿಜಶಿರಮ್ ನಕ್ತಂಚರೀ ಹಸ್ತದೊಳ್... ನಿಜ ಕಾಯಮ್ ಕುರುಭೂಮಿಯೊಳ್ ನೆಲಸೆ ದುರ್ಯೋಧನಾನುಜ, ಭೀಮ ಭೀಮಗದೆಯಿಮ್ ಪಂಚತ್ವಮಮ್ ಪೊರ್ದಿದಯ್... ದುಶ್ಶಾಸನ, ನಿನ್ನನ್ ಕೊಂದನ್ ಗಡಮ್ ಇನ್ನುಮ್ ಒಳನ್... ಕೊಂದವನನ್ ಇಕ್ಕಿ ಕೊಲ್ಲದೆ ಮಾಣ್ದ ಆನ್ ಗಡ ಇನ್ನುಮ್ ಒಳೆನ್... ನಿನ್ನಯ ಕೂರ್ಮೆಗಮ್... ಅದು ಎನ್ನ ಸೌಧರ್ಮಿಕೆಗಮ್ ಸಾಲದೆ... ಹಾ ವತ್ಸ ದುಶ್ಶಾಸನಾ... ಆನ್ ಜನನೀ ಸ್ತನ್ಯಮನ್ ಉಂಡೆನ್... ಬೞಿಕೆ ನೀನ್; ಆನ್ ಸೋಮಾಮೃತಮ್ ದಿವ್ಯಭೋಜನಮ್ ಎಂಬ ಇಂತಿವನ್ ಉಂಡೆನ್... ಬೞಿಕೆ ನೀನ್... ಬಾಲತ್ವದಿಂದೆ ಎಲ್ಲಿಯುಮ್ ವಿನಯ ಉಲ್ಲಂಘನಮ್ ಆದುದಿಲ್ಲ... ಮೊನೆಯೊಳ್ ಮರಣಕ್ಕೆ ಎನ್ನಿಂದೆ ನೀನ್; ಮುಂಚಿದಯ್... ಇದೊಂದು ಎಡೆಯೊಳಮ್ ಸೂೞ್ ತಡಮಾಯ್ತು.

(ಎಂದು ವಿಪ್ರಲಾಪಮ್ ಗೆಯ್ದು)

**ದುರ್ಯೋಧನ** : ಅನುಜನ ನೆತ್ತರನ್ ಈಂಟಿದವನನ್... ಇಂದು ಆ ಪ್ರಾಣಸಹಿತಮ್ ಈಂಟದೆ... ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂಪೆನೆ... ದುಶ್ಶಾಸನನ ಬನ್ನಮನ್ ನೀಗುವೆನೆ..

(ಎಂದು ಪಿಂಗಾಕ್ಷನ್ ಕೋಪಾರುಣೀಕೃತನೇತ್ರನಾಗಿ ತನ್ನ ತಮ್ಮನ ಕಳೇಬರಮಮ್ ನೋಡಲಾರದೆ... ಅಲ್ಲಿಮ್ ತಳರ್ದು)

❖

## ನೋಟ–12

# ಕರ್ಣನ ಅಗಲಿಕೆಯ ಸಂಕಟ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನ ವಿಲಾಪಮ್' ಎಂಬ ಹೆಸರಿನ 5 ನೆಯ ಅಧ್ಯಾಯದ 27 ನೆಯ ಪದ್ಯದಿಂದ 49 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

**ಕರ್ಣ** : ಸೂರ್ಯನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ದುರ್ಯೋಧನನ ಒಲುಮೆಯ ಗೆಳೆಯ. ಅಂಗ ರಾಜ್ಯದ ಒಡೆಯ.

## ಕರ್ಣನ ಅಗಲಿಕೆಯ ಸಂಕಟ

ಕರಿ ತುರಗ ನರ ಕಳೇಬರ ಕರಾಳ ರಣರಂಗದಲ್ಲಿ ಬರೆವರೆ... ನರ ಕರ ವಿಮುಕ್ತ ಶರ ಜರ್ಜರಿತಾಂಗನನ್ ಅಂಗರಾಜನನ್ ಕುರುರಾಜನ್ ಕಂಡನ್... ಆಗಳ್ ಅದನ್ ಸಂಜಯನ್ ಕಂಡು

**ಸಂಜಯ** : (ತನ್ನ ಮನದಲ್ಲಿ)

ನಿಜಪ್ರಿಯತನೂಜಾನುಜರ ಶೋಕದಿಮ್ ವಿಹ್ವಳೀಕೃತನಪ್ಪ ಭೂತಳೇಶ್ವರಂಗೆ **'ಗಂಡಸ್ಯೋಪರಿ ಸ್ಫೋಟಕಮ್'** ಎಂಬಂತೆ ನಿಜಪ್ರಿಯಸಖನಪ್ಪ ಕರ್ಣನ ದರ್ಶನದಿಮ್ ದುಃಖಮ್ ಮರುಕೊಳಿಸುಗುಮ್.

(ಎಂದು ಮನದೊಳೆ ಬಗೆದಿರೆ .. ವಸುಧೆ ನುಂಗಿದುದಮ್ ವರೂಥಮಮ್ ನೆಗಪಿ ಸಮಪಾದಶೋಭೆಯುಮ್ ಬಗೆಗೊಳೆ... ತನ್ನ ಮುನ್ ತೆಗೆದ ದಕ್ಷಿಣಮುಷ್ಟಿಯೆ ಕರ್ಣಮೂಲದೊಳ್ ಸೊಗಯಿಸೆ... ಪಾಳಿಯಮ್ ನೆರಪದೆ... ಆಳ್ದನ ಕಜ್ಜಮನ್ ಒಕ್ಕು ಸತ್ತರಮ್ ನಗುವವೊಲ್... ಅಂಗಪತಿ ನಿಜೋನ್ನತ ಕೇತುದಂಡಮಮ್ ನೆಮ್ಮಿ ಇರ್ದನ್... ಅಂತಿರ್ದ ದಿನಕರತನೂಜನನ್ ರಾಜರಾಜನ್ ನೋಡಿ... ಬಾಷ್ಪವಾರಿ ಧಾರಾಪೂರಿತ ಲೋಚನನುಮ್... ಮನ್ಯೂದ್ಗತ ಕಂಠನುಮ್... ಅಸಹ್ಯ ಶೋಕಾನಲ ದಹ್ಯಮಾನ ಅಂತಃಕರಣನುಮಾಗಿ.)

**ದುರ್ಯೋಧನ** : ಆನುಮ್ ದುಶ್ಶಾಸನನುಮ್ ನೀನುಮ್ ಮೂವರೆ ದಲ್...

ಆತನುಮ್ ಕಳಿದ ಬಳಿಕ್ಕೆ ಆನುಮ್ ನೀನೆ ದಲ್... ಈಗಳ್ ನೀನುಮ್ ಅಗಲ್ದು ಎತ್ತವೋದೆ ಅಂಗಾಧಿಪತಿ... ನಿನ್ನ ಮಗನ್ ವೃಷಸೇನನ್... ತನ್ನ ಮಗನ್ ಲಕ್ಷಣನುಮ್ ಅಣ್ಮಿ ಸತ್ತನ್... ನೀನ್ ಎನ್ನನ್ ಸಂತೈಸುವುದು... ಆನ್ ನಿನ್ನನ್ ಸಂತೈಸೆ ಬಂದೆನ್... ಅಂಗಾಧಿಪತಿ, ನಿನ್ನ ಇಂದಿನ ತೆರನಮ್ ಇದನ್ ಅರಿಯೆನ್... ರವಿಸುತ, ನೀನ್ ಎನಗೆ ಅದೇಕೆ ಮುಳಿದಿರ್ಪೆಯೊ... ಮೇಣ್... ಮರುವಾತು ಕುಡದೆ ಮರಸುಂದು ಇರ್ದಪೆಯೊ... ಮೇಣ್... ಬಳಲ್ದು ಇರ್ದಪೆಯೋ...

ನಿನ್ನ ಈ ಕೆಳೆಯ ಸುಯೋಧನನ್ ನೋಡದೆ... ನುಡಿಯದೆ... ಅಪ್ಪಿಕೊಳ್ಳದೆ... ಬೆಸನ್ ಏನ್ ಎನ್ನದೆ... ಜೀಯ ಎನ್ನದೆ... ದೇವ ಎನ್ನದೆ... ಏಕೆ ಉಸಿರದಿರ್ಪೆ ಅಂಗಾಧಿಪತಿ, ಅನೃತಮ್ ಲೋಭಮ್ ಭಯಮ್ ಎಂಬ ಇನಿತುಮ್ ನೀನ್ ಇರ್ದ ನಾಡೊಳ್ ಇರ್ಕುಮೆ... ರವಿನಂದನ, ನನ್ನಿ ಚಾಗಮ್ ಅಣ್ಮು ಎಂಬ ಇನಿತರ್ಕಮ್ ನೀನೆ ಮೊತ್ತ ಮೊದಲಿಗನಾದಯ್... ನೀನ್ ಆರ್ಗೆ ಎಂದು ಆನ್ ಅರಿವೆನ್... ಪೃಥೆ ಅರಿವಳ್... ದಾನವ ರಿಪು ಅರಿವನ್... ಅರ್ಕನ್ ಅರಿವನ್... ದಿವ್ಯಜ್ಞಾನಿ ಸಹದೇವನ್ ಅರಿವನ್... ಆರುಮ್ ಅರಿಯರ್ ಅಂಗಾಧಿಪತಿ... ಒಡವುಟ್ಟಿದನ್ ಎಂದು ಅರಿದೊಡೆ ಧರ್ಮತನಯನ್ ರಾಜ್ಯಮನೆ ನಿನಗೆ ಕುಡುಗುಮ್... ರಾಜ್ಯಕ್ಕೆ ಒಡೆಯನನ್ ಅರಿಯುತ್ತುಮ್ ಇರ್ದೆನ್... ಆನ್ ಕುಡಲಾರ್ತೆನಿಲ್ಲ...

ಅಂಗಾಧಿಪತಿ... ನೀನ್ ಉಳ್ಳೊಡೆ ಉಂಟು ರಾಜ್ಯಮ್... ನೀನ್ ಉಳ್ಳೊಡೆ ಪಟ್ಟಮುಂಟು ಬೆಳ್ಗೊಡೆ ಉಂಟಯ್... ನೀನ್ ಉಳ್ಳೊಡೆ ಉಂಟು ಪೀಳಿಗೆ... ನೀನಿಲ್ಲದೆ ಇವೆಲ್ಲಮ್ ಒಳವೆ ... ಅಂಗಾಧಿಪತೀ, ಹರಿ ಬೇಡೆ ಕವಚಮನ್ ನೀನ್ ಅರಿದಿತ್ತಯ್... ಕೊಂತಿ ಬೇಡೆ ಬೆಚ್ಚದೆ ಪುರಿಗಣೆಯನ್ ಕೊಟ್ಟಯ್... ನಿನಗೆ ಎಣೆ ಕಸವರಗಲಿ ಮೆಯ್ಗಲಿಯುಮ್ ಆವನ್ ಅಂಗಾಧಿಪತಿ... ನಯನದೊಳಮ್ ಎರ್ದೆಯೊಳಮ್ ನಿನ್ನಯ ರೂಪು ಇರ್ದಪುದು... ನಿನ್ನ ಮಾತು ಎನ್ನಯ

ಕಿವಿಯೊಳಗೆ ಇರ್ದಪುದು... ಇನನಂದನ, ವಿಯೋಗಮ್ ಎಂತು ಆದುದು ಅರಿಯೆನ್ ಅಂಗಾಧಿಪತಿ,

ನಿನ್ನನ್ ಕೊಂದ ಕಿರೀಟಿಯುಮ್... ಎನ್ನ ಅನುಜನನ್ ಇಕ್ಕಿ ಕೊಂದ ಭೀಮನುಮ್ ಒಳನ್... ಆನ್ ಇನ್ನುಮ್ ಒಳೆನ್... ನಿನ್ನಯ ಕೂರ್ಮೆಗಮ್ ಅದೆನ್ನ ಸೌಧರ್ಮಿಕೆಗಮ್ ಗಡ ಸಾಲದೆ... ಇಂದು ಆನ್ ಆದೆನ್ ಮೇಣ್ ಪಾಂಡುತನಯರಾದರ್... ಇನನಂದನ ಕೇಳ್, ನಿನ್ನನ್ ಕೊಂದುಮ್... ದುಶ್ಶಾಸನನನ್ ಕೊಂದುಮ್... ಬರ್ದುಕುವರೆ... ಬರ್ದುಕರ್ ಅಂಗಾಧಿಪತೀ

(ಎಂದು ವಿಪ್ರಲಾಪಮ್ ಗೆಯ್ದು)

**ದುರ್ಯೋಧನ** : ಇನಸುತನ ಇರವಮ್... ದುಶ್ಶಾಸನನ ಇರವಮ್ ಕಂಡುಮ್... ಇನ್ನುಮ್ ಎನ್ನ ಅಸುವಿದು ನೆಟ್ಟನೆ ಪೋದುದಿಲ್ಲ... ಕಲ್ಲೆರ್ದೆತನದಿಂದೆ ಎನ್ನಂತು ಬರ್ದನ್ ಆವನುಮ್ ಒಳನೇ

(ಎಂದು ತನ್ನನ್ ತಾನೆ ನಿಂದಿಸಿಕೊಂಡು)

**ದುರ್ಯೋಧನ** : ವಿಧಾತ್ರ, ಸೂನುಗಳ ಅಳಿವಮ್... ಪ್ರಿಯಮಿತ್ರ ಅನುಜರ ಅಳಿವಮ್... ನೀನ್ ಕಾಣಿಸಿ... ಮುಂದೆ ಏನನ್ ಕಾಣಿಸಲಿರ್ದಪೆ... ನೀನ್ ಎನ್ನನ್ ಪಾಪಕರ್ಮನನ್ ನಿರ್ಗುಣನನ್.

(ಎಂದು ವಿಧಾತ್ರಂಗೆ ಪಲುಂಬಿ... ರಾಧಾನಂದನನ ಮೊಗಮಮ್ ನೋಡಿ... ಸಂಜಯನನ್ ಇಂತು ಎಂದನ್)

**ದುರ್ಯೋಧನ** : ಆರೊಡನೆ ನುಡಿವೆನ್... ಅಳ್ತಿಯೊಳ್ ಆರೊಡನೆ ಓಲಗದೊಳ್ ಇರ್ಪೆನ್... ಆರೊಡನೆ ಸಮಂತು ಆರೋಗಿಪೆನ್... ಎನ್ನ ಅಣುಗರಿಲ್ಲದೆ ಇಭ ವಾಜಿಗಳಮ್ ಆನ್ ಆರೊಡನೆ ಏರುವೆನ್... ಕೆಳೆಯಂಗೆ ಅಸುಮೋಕ್ಷಮ್ ಆಯ್ತು... ಎನಗಮ್ ಬಾಷ್ಪಾಂಬುಮೋಕ್ಷಮ್ ಆಗದು... ಧರಾತಳಮನ್ ಇವನ್ ಕೊಟ್ಟನ್... ನಾನ್ ಜಳಾಂಜಳಿಯುಮಮ್ ಕೊಟ್ಟೆನಿಲ್ಲ... ಇವನ್ ಪ್ರತಾಪಶಿಖಿಯಿಂದೆ ಅನ್ಯಮಂಡಳಮಮ್ ಸುಟ್ಟನ್... ಆನ್ ಈತನನ್

ಸತ್ಕ್ರಿಯಾನಳನಿಮ್ ಸುಟ್ಟೆನುಮಿಲ್ಲ... ಮತ್ ಪ್ರಿಯತಮನ್ ಕರ್ಣಂಗೆ ಇದೇನ್ ಕೂರ್ತೆನೋ..

(ಎಂಬುದುಮ್ ಸಂಜಯನ್ ಇಂತು ಎಂದನ್.)

**ಸಂಜಯ** : ದೇವಾ, ನೀಮ್ ಇಂತೇಕೆ ಪಳಯಿಸುವಿರ್... ಕುರುಕುಲ ದರ್ಪಣ, ಜಲದಾನಕ್ರಿಯೆಯಮ್ ದೃಗ್ ಜಲದಿಮ್... ದಹನಕ್ರಿಯೆಯಮ್ ಕೋಪಾಗ್ನಿಯಿಂದೆ ಕೆಳೆಯಂಗೆ ಮಾಡಿದಯ್... ಇನ್ ಅಹರ್ಪತಿ ಸುತನನ್ ಮರೆವುದು. ಪೆಂಡಿರ್ ಪಳಿಯಿಸುವ ಅಂದದೆ ಗಂಡರ್ ಪಳಯಿಸಿದೊಡೆ... ಆಯಮಮ್ ಛಲಮಮ್ ಕಯ್ ಕೊಂಡು ಎಸಪರಾರೊ... ಕುರುಕುಲಮಂಡನ, ನೀನ್ ಎತ್ತಿಕೊಂಡ ಛಲಮನೆ ಮೆರೆಯಾ

(ಎಂದು ಸಂಜಯ ನುಡಿದ ನುಡಿಯನ್ ಅವಧಾರಿಸಿ)

**ದುರ್ಯೋಧನ** : ದರಹಾಸಪೇಶಲಮ್... ದಿಕ್ಕರಿಗಮನಮ್... ಕನಕಪರ್ವತ ಪ್ರಾಂಶು... ದಿನೇಶ್ವರಸುತನ ರೂಪು ಎನ್ನಾ ಚಿತ್ತಭಿತ್ತಿಯೊಳ್ ಚಿತ್ರಮ್ ಬರೆದಂತೆ ಇರ್ದಪುದು... ದೀಕ್ಷಾವಿಧಿಗಳ್ಗೆ ಗುರು... ಹಿತಕಾರ್ಯ ಆಳೋಚನಕ್ಕೆ ಮಂತ್ರಿ... ಉರ್ವರೆಯಮ್ ಕಾವ ಗುಣಕ್ಕೆ ಆಳ್ದನ್... ಕ್ರೀಡಾರಸಕ್ಕೆ ನರ್ಮ ಸಚಿವನ್... ಗುರುಭಾರಕ್ಕೆ ಆನೆಯಾಳ್... ರಣಕ್ಕೆ ಇರಿವಾಳ್... ಕಟ್ಟಾಯದೊಳ್ ತುಳಿಲಾಳ್... ಪರಿಹಾಸಕ್ಕೆ ಮೇಳದಾಳ್ ಎನಿಸಿರ್ದನ್... ದುರ್ಯೋಧನನ್ ಕರ್ಣನನ್ ಎಂತು ಮರೆವನ್.

(ಎಂದು ಶೋಕಾಂಧನ್ ಕರ್ಣವಿರಹಿತನ್ ಅಪ್ಪುದರಿಮ್ ಸಂಕ್ರಂದನ ನಂದನಂಗೆ ಮುಳಿದು)

**ದುರ್ಯೋಧನ** : ತರಣಿತನಯ ಆನನೇಂದು ಸ್ಮರಣದೆ ಕಯ್ಗಣ್ಮುವ ಎನ್ನ ಶೋಕಮಹಾಸಾಗರಮಮ್... ಭೀಕರ ಮತ್ ಕೋಪಾಗ್ನಿ ಬಾಡಬಾಗ್ನಿಯ ತೆರದಿಮ್... ತವೆ ಪೀರ್ದುದು

(ಎಂದು ಶೋಕರಸಮಮ್ ಕೋಪರಸದ ಮೇಲಿಕ್ಕಿ ಮಾರ್ಪಡೆ ಎಯ್ತರ್ಪುದಮ್ ನೋಡಿ ನಡೆವ ದಂದಶೂಕಪತಾಕನ ಮುಳಿಸಿನಂದಮನ್ ಅರಿದು ಸಂಜಯನ್ ಎಂದನ್)

**ಸಂಜಯ** : ಎಲೆ ದೇವಾ, ಭೀಷ್ಮರ್ ಇತ್ತಲ್ ಇರ್ದಪರ್... ಇತ್ತ ಬಿಜಯಂಗೆಯ್ಯಿಮ್... ಎಂತುಮ್ ನಿಜ ಗುರುಜನ ಪ್ರಾರ್ಥನಾ ಭಂಗಮ್ ಮಾಡಲಾಗದು... ಇನ್ ನೀನ್ ನೆಗಳ್ವ ಕಜ್ಜಮ್ ಆವುದುಮಮ್ ನಿಮ್ಮಜ್ಜನೊಳ್ ಆಳೋಚಿಸಿ ನೆಗಳ್ವುದು.

(ಎಂದು ಪೇಳ್ವುದುಮ್... ಸಂಜಯನ ಮಾತನ್ ಮೀರದೆ ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಮ್ ಗೆಯ್ಯಲೆಂದು... ಗಾಂಧಾರಿಯ ನಂದನನ್ ಎಯ್ದೆವಂದನ್.)

❖

## ನೋಟ–13

# ಭೀಷ್ಮರ ಹಿತನುಡಿ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'**ಭೀಷ್ಮ ವಚನಮ್**'** ಎಂಬ ಹೆಸರಿನ 6 ನೆಯ ಅಧ್ಯಾಯದ 1 ನೆಯ ಪದ್ಯದಿಂದ 19 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಸಂಜಯ** : ಧೃತರಾಷ್ಟ್ರನ ಆಪ್ತ ಸೇವಕ. ಕುರುಕ್ಷೇತ್ರ ರಣರಂಗದ ಸುದ್ದಿಯನ್ನು ಧೃತರಾಷ್ಟ್ರನಿಗೆ ವರದಿ ಮಾಡುವ ಕೆಲಸದಲ್ಲಿ ತೊಡಗಿದ್ದವನು.

**ಭೀಷ್ಮ** : ಗಂಗಾದೇವಿ ಮತ್ತು ಶಂತನು ರಾಜ ದಂಪತಿಯ ಮಗ. ಕುರುಕುಲದ ಹಿರಿಯ. ಕುರುಕುಲದ ಮಕ್ಕಳಾದ ಧೃತರಾಷ್ಟ್ರ ಮತ್ತು ಪಾಂಡುರಾಜನನ್ನು, ಮೊಮ್ಮಕ್ಕಳಾದ ಕೌರವರು ಮತ್ತು ಪಾಂಡವರನ್ನು ಸಾಕಿ ಸಲಹಿದವನು.

## ಭೀಷ್ಮರ ಹಿತನುಡಿ

ಸಂಜಯನ ಮಾತನ್ ಮೀರದೆ... ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಮ್ ಗೆಯ್ಯಲೆಂದು... ಗಾಂಧಾರಿಯ ನಂದನನ್ ಎಯ್ದೆ ವಂದನ್... ಅಂತು ಎಯ್ದೆ ವಂದಾಗಲ್... ನರ ಶರಕೋಟಿ ತನ್ನ ಶರೀರಮನ್ ಜರ್ಜರಿಸೆ ಅಸ್ತ್ರವೇದನಾ ಪರವಶನಾಗಿಯುಮ್... ಮುಕುಂದನನ್ ಮರೆದನಿಲ್ಲ... ಏಕಚಿತ್ತದಿಮ್ ಸ್ಮರಿಯಿಸುತಿರ್ದುಮ್...

**ಭೀಷ್ಮ** : ಅತ್ತಲ್ ಅರಿಭೂಪರಿನ್ ಕುರುಪತಿಗೆ ಎಂತುಟು ಅವಸ್ಥೆಯಾದುದೋ

(ಎಂದನ್. ಆ ಪರಮಯೋಗಿಗಮ್ ಇಂತುಟು ಮೋಹಮಾಗದೇ... ಅಂತಿರ್ದ ನದೀನಂದನನನ್ ರಾಜರಾಜನ್ ನೋಡಿ ಮನ್ಯೂದ್ಗತಕಂಠನಾಗಿ)

**ದುರ್ಯೋಧನ** : ವಿನಯಮನ್ ಒಕ್ಕು... ನಿಮ್ಮ ಗುರುವೃದ್ಧರ ಪೇಳ್ದ ಹಿತೋಪದೇಶಮಮ್ ಮನದೊಳ್ ಇಳಿಂಕೆಗೊಂಡು... ಅನಿಲನಂದನ ವೈರದೆ... ನಿಮ್ಮನ್ ಇಂದ್ರನಂದನನೊಡನೆ ಆನೆ ಕಾದಿಸಿದೆನ್... ಆನೆ ಕಡಂಗಿದೆನ್... ಎನ್ನ ಪಾಪಕರ್ಮನ ಕತದಿಂದಮ್ ಈ ನಿಮಗಮ್ ಈ ಇರವು ಆದುದೆ ಸಿಂಧುನಂದನಾ

(ಎಂದು ಪಶ್ಚಾತ್ತಾಪಮ್ ಗೆಯ್ಯುತುಮ್ ಮುಂಬರ್ಪ ತನ್ನ ಮೊಮ್ಮನ ಕಾಲ ಸೊಪ್ಪುಳಮ್ ಕೇಳ್ದು... ವಿಕಚ ಧವಳ ಕುವಲಯ ವಿಲಾಸಿತೋಪಹಾಸಿಗಳುಮ್ ಕರ್ಣಾಂತ

ವಿಶ್ರಾಂತಂಗಳುಮಪ್ಪ ತನ್ನ ಕಣ್ಗಳನ್ ಅರೆ ತೆರೆದು... ದರ ನಿಮೀಲಿತ ಲೋಚನ ಕಮಲಾಕರಮಿರ್ಪಂತೆ ಇರ್ದ ಶಂತನು ತನೂಜನ ಕರ್ಣಾಭ್ಯರ್ಣಮಮ್ ಪೊರ್ದಿ ಸಂಜಯನ್ ಎಂದನ್.)

**ಸಂಜಯ** : ಅಜ್ಜಾ, ನಿಮ್ಮ ಮೊಮ್ಮನಪ್ಪ ಕುರುಕುಲ ಗಗನಗಭಸ್ತಿಮಾಲಿ ಬಾಹುಶಾಲಿ ದುರ್ಯೋಧನನ್ ಬಂದನ್.

(ಎಂದು ಬಿನ್ನಪಮ್ ಗೆಯ್ಯೆ, ಯೋಗಿ ಯೋಗಾಭಿ ಯೋಗಮನ್ ಉಪಸಂಹರಿಸಿ... ತನ್ನ ಚರಣೋಪಾಂತ ಉತ್ತಮಾಂಗನಾಗಿರ್ದ ಪನ್ನಗಪತಾಕನನ್ ಕುರುಕುಲೋತ್ತಂಸನನ್ ಆಶೀರ್ವಚನ ಸಹಸ್ರಂಗಳಿಮ್ ಪರಸಿ... ದಿಕ್ಕರಿ ಕರಾನುಕಾರಿಗಳಪ್ಪ ನಿಜ ಭುಜಾದಂಡಂ ಗಳಿಂದೆ ತೆಗೆದಪ್ಪಿ... ಬಾಷ್ಪಾಂಬುಪೂರಿತ ಲೋಚನನಾಗಿ...)

**ಭೀಷ್ಮ** : ಧವಳ ಗಜೇಂದ್ರಮುಮ್... ಧವಳ ಚಾಮರಮುಮ್ ಧವಳಾತಪತ್ರಮುಮ್... ಧವಳ ವಿಲೋಚನ ಉತ್ಪಲ ವಧೂಜನಮುಮ್ ಬೆರಸು... ಕೀರ್ತಿಯಿಮ್ ಅಷ್ಟದಿಕ್ತಟಮ್ ಧವಳಿಸೆ... ಧವಳ ಮಂಗಳಗೇಯದಿನ್ ಒಪ್ಪಿ ಬರ್ಪ ಕೌರವ ಧವಳಂಗೆ... ದೇಸಿಗನೆ ಬರ್ಪವೊಲ್ ಒರ್ವನೆ ಬರ್ಪುದಾದುದೇ

(ಎಂದು ಏಕಾಕಿಯಾಗಿ ಬಂದ ಧೃತರಾಷ್ಟ್ರನಂದನನ ಬರವಿನೊಳ್ ಸರಿತ್ಸುತನ್ ಸಮರ ವೃತ್ತಾಂತಮನ್ ಅರಿದು... ವಿಸ್ಮಯಾಕ್ರಾಂತಸ್ವಾಂತನುಮಾಗಿ ಶೋಕಂಗೆಯ್ಯೆ... ರಾಜರಾಜನ್ ನದೀತನೂಜನನ್ ಮಾಣಿಸಿ)

**ದುರ್ಯೋಧನ** : ನೀವಪ್ಪೊಡೆ ವಿದಿತ ವೇದಿತವ್ಯರುಮ್ ಭಾವಿತಾತ್ಮರುಮ್ ಆಗಿರ್ದು, ಅಜ್ಞಾನಿಗಳಂತೆ ನೆಗಳಾಗದು.

(ಎಂದು ನಿಜಾಗಮನ ವೃತ್ತಾಂತಮಮ್ ಸಮರ ಪರಿಚ್ಛೇದ ಮುಮನ್ ಅರಿಪಿದೊಡೆ... ಕಿರಿದಾನುಮ್ ಬೇಗಮ್ ಚಿಂತಾಕ್ರಾಂತನಾಗಿರ್ದು)

**ಭೀಷ್ಮ** : ಮಗನೆ, ಸೋಮವಂಶದಿಂದೆ ಅವಿಚ್ಛಿನ್ನಮಾಗಿ ಬಂದ ಭರತಾನ್ವಯದೊಳ್ ಇನ್ನೆವರೆಗಮ್ ಗೋತ್ರಕಲಹ

ಮೆಂಬುದು ಆದುದಿಲ್ಲ... ನಿಮ್ಮೊಳಾದುದು... ಇನ್ನುಮ್ ಆನ್ ಎಂಬುದನ್ ಇಂಬುಕೆಯ್ವೆಯಪ್ಪೊಡೆ... ಪಾಂಡವರನ್ ಒಡಂಬಡಿಸಿ ಸಂಧಿಯಮ್ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪೆನ್... ಇನ್ನುಮ್ ಅವರ್ ಎಮ್ಮ ಎಂದುದಮ್ ಮೀರುವರಲ್ಲ... ನೀನುಮ್ ಎಮ್ಮ ಪೇಳ್ದುದಮ್ ಮೀರದೆ ನೆಗಳಲ್ವೇಳ್ಕುಮ್.

(ಎನೆ, ಸುಯೋಧನನ್ ಮುಗುಳ್ನಗೆ ನಕ್ಕು)

**ದುರ್ಯೋಧನ** : ನಿಮಗೆ ಪೊಡೆಮಟ್ಟು ಪೋಪುದೆ ಸಮಕಟ್ಟೆನೆ ಬಂದೆನ್... ಅಹಿತರೊಳ್ ಸಂಧಿಯನ್ ಏನ್ ಸಮಕೊಳಿಸಲೆಂದು ಬಂದೆನೆ... ಅಜ್ಜ, ಸಮರದೊಳ್ ಎನಗೆ ಆವುದು ಕಜ್ಜಮ್ ಪೇಳಿಮ್... ಪಾಂಡುಸುತರೊಳ್ ನೆಲಕೆ ಇರಿವೆನ್ ಎಂದು ಬಗೆದಿರೆ... ಚಲಕೆ ಇರಿವೆನ್... ಈ ನೆಲನ್ ಇದು ಪಾಳ್ನೆಲನ್ ಎನಗೆ... ದಿನಪಸುತನನ್ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ...

ಅನುಜಸಮೇತನೊಳ್ ಅಂತಕತನಯನೊಳ್ ಅನುಜವ್ಯಪೇತನ್ ದುರ್ಯೋಧನನ್ ಈಗಳ್ ಅಳಿಪಿ ಸಂಧಿ ಗೆಯ್ದೊಡೆ... ಮುನಿವರ ಮೆಚ್ಚುವರ ನುಡಿಗೆ ಪಕ್ಕಾಗಿರೆನೇ... ಕೂಡೆ ವಿರೋಧಿಯನ್ ತರಿದು ತದ್ವಶಮಾಂಸದೆ ಭೂತಭೋಜನಮ್ ಮಾಡದೆ... ವೈರಿವಾರ ವನಿತಾ ವದನಾಂಬುರುಹಂಗಳಮ್ ಬೆಳರ್ಮಾಡದೆ... ಬಂಧು ಶೋಕದೊಳೆ ಪೊರ್ದಿದ ಬಂಧುಜನಕ್ಕೆ ಸಂತಸಮ್ ಮಾಡದೆ... ಫಣಿರಾಜಕೇತನನ್ ಪಾಂಡವರೊಳ್ ಸಂಧಿ ಮಾಡುವನೆ...

ಅವರ್ ಮುನ್ ಬಾಡಮನ್ ಅಯ್ದನ್ ಬೇಡಿದೊಡೆ... ಆನ್ ಇತ್ತೆನಿಲ್ಲ... ರಾಜ್ಯ ಅರ್ಧಮನ್ ಆನ್ ಬೇಡಿ ಅವರಲ್ಲಿಗೆ ಅಟ್ಟಿದೊಡೆ... ಪವನನಂದನನ್ ಎನ್ನನ್ ಏಡಿಸಿ ರೋಡಿಸನೆ... ಅಜ್ಜ, ಎನ್ನ ಅಣುಗಾಳನ್... ಎನ್ನ ಅಣುಗು ತಮ್ಮನನ್ ಇಕ್ಕಿದ ಪಾರ್ಥ ಭೀಮರ್ ಉಳ್ಳನ್ನೆಗಮ್... ಎನ್ನ ಒಡಲೊಳ್ ಎನ್ನ ಅಸು ಉಳ್ಳಿನಮ್... ಸಂಧಿಯಮ್ ಒಲ್ಲೆನ್... ಮುನ್ನಮ್ ಅವಂದಿರ್ ಇರ್ಬರುಮನ್ ಇಕ್ಕುವೆನ್... ಇಕ್ಕಿ ಬಳಿಕ್ಕೆ ನೆಗಳ್ದ

ಅಂತಕಾತ್ಮಜನೊಳ್ ಸಂಧಿಗೆಯ್ವೆನ್... ಎನ್ನ ಅಳಲ್ ಆರಿದೊಡೆ ಆಗದು ಎಂಬೆನೇ...

ಪುದುವಾಳಲ್ಕೆ ಅಣಮ್ ಆಗದು... ಎಂತುಮ್ ಅವರೊಳ್ ಸಂಧಾನಮನ್ ಮಾಡಲಾಗದು... ಅಜ್ಜ, ನೀಮ್ ಇಲ್ಲದೆ... ಬಿಲ್ಲಗುರುಗಳ್ ತಾಮಿಲ್ಲದೆ... ಆ ಕರ್ಣನಿಲ್ಲದೆ... ದುಶ್ಶಾಸನ ನಿಲ್ಲದೆ... ಆರೊಡನೆ ರಾಜ್ಯಮ್ ಗೆಯ್ವೆನ್... ಆರ್ಗೆ ಎನ್ನ ಸಂಪದಮಮ್ ತೋರುವೆನ್... ಆರ್ಗೆ ತೋರಿ ಮೆರೆವೆನ್ ನಾನಾ ವಿನೋದಂಗಳಮ್...

ಖಂಡಿತಮ್ ಎನಿಪ್ಪ ಪರಮಹಿಮಂಡಲ ಧವಳಾತಪತ್ರ ಸಂಪದಮ್ ಎನಗೆ ಏಭಂಡಮ್... ಅದನ್ ಒಲ್ಲೆನ್... ಒಲ್ಲೆನ್ ಅಖಂಡಿತಮ್ ಅಭಿಮಾನಮ್ ಅದನೆ ಬಲ್ವಿಡಿವಿಡಿವೆನ್... ಪುಟ್ಟಿದ ನೂರ್ವರುಮ್... ಎನ್ನ ಒಡವುಟ್ಟಿದ ನೂರ್ವರುಮ್... ಇದಿರ್ಚಿ ಸತ್ತೊಡೆ ಕೋಪಮ್ ಪುಟ್ಟಿ ಪೊದಳ್ದುದು... ಸತ್ತರ್ ಪುಟ್ಟರೆ... ಪಾಂಡವರೊಳ್ ಇರಿದು ಛಲಮನೆ ಮೆರೆವೆನ್... ಕಾದದೆ ಇರೆನ್... ಅಜ್ಜ, ಇಂದಿನ ಒಂದೆ ಸಮರದೊಳ್ ಆನ್ ಆದೆನ್ ಮೇಣ್ ಪಾಂಡವರಾದರ್... ಅದರಿಂದೆ ಅವನಿತಳಮ್ ಕೌರವಂಗೆ ಆಯ್ತು ಮೇಣ್ ಪಾಂಡವರ್ಗೆ ಆದುದು.

(ಎಂದು ರಾಜಾಧಿರಾಜನ್ ನಿರ್ವ್ಯಾಜ ಶೌರ್ಯಾವಳಂಬಿಯಾಗಿ ನುಡಿಯೆ... ಗಾಂಗೇಯನ್ ಅರಿದು ಅತಿವಿಸ್ಮಯಾಕುಲೀಕೃತಚಿತ್ತನಾಗಿ ಮುಹರ್ಮುಹುರ್ ಆಂದೋಳಿತ ಉತ್ತಮಾಂಗನುಮಾಗಿ)

**ಭೀಷ್ಮ** : (ತಮ್ಮ ಮನದಲ್ಲಿ)

ಜತುಗೇಹಾನಲ ಬೀಜಮ್... ಉಗ್ರವಿಷಸಂಜಾತ ಅಂಕುರಮ್... ಕ್ರೀಡನೋದ್ಧತಿಕೃತ್ ದ್ಯೂತವಿನೋದ ಪಲ್ಲವಚಯಮ್... ಪಾಂಚಾಲರಾಜ ಆತ್ಮಜಾಯತಕೇಶಗ್ರಹ ಪುಷ್ಪಮಾಗೆ ಬೆಳೆದಾ ವೈರದ್ರುಮಮ್... ಕೌರವಕ್ಷಿತಿಪಾಲ ಊರು ಕಿರೀಟಭಂಗ ಫಲಮಮ್... ಪೇಳ್ ಮಾಡದೆ ಏನ್ ಪೋಕುಮೇ

(ಎಂದು ನಿಶ್ಚಯಿಸಿ. ಸಿಂಧುಸುತನ್ ನಿಜೋದರದಿಮ್ ಶರಮ್ ಒಂದನ್ ತೆಗೆದು ಲೆಕ್ಕಣಿಕೆ ಮಾಡಿ, ಗಜಮದಮಸಿಯಮ್ ತರಿಸಿ... ಪತಾಕಾಪಟದೊಳ್ ಬರೆದು ಅಂಧನೃಪತಿಗಮ್ ಅಟ್ಟಿದನ್... ಅಂತು ನಿಜನಾಮಾಂಕಿತ ಲೇಖನಮನ್ ಬರೆದು **"ಮೊಮ್ಮನ್ ನುಡಿದ ನುಡಿಯನ್ ಎಂತುಮ್ ಒಡಂಬಡುವನಲ್ಲನ್. ನೀನುಮ್ ಗಾಂಧಾರಿಯುಮ್ ಇರ್ದು, ಕುರುಕುಲ ಪ್ರದೀಪ ದುರ್ಯೋಧನನನ್ ಕೌಂತೇಯರೊಳ್ ಎಂತಾನುಮ್ ಸಂಧಿಯಮ್ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪುದು"** ಎಂದು ಸಂಜಯನ ಕಯ್ಯೊಳ್ ಕೊಟ್ಟು ಧೃತರಾಷ್ಟ್ರನಲ್ಲಿಗೆ ಅಟ್ಟುವುದುಮ್... ಕುರುರಾಜನ್ ಸಿಂಧುಸುತನ ಮೊಗಮನ್ ನೋಡಿ)

**ದುರ್ಯೋಧನ** : ಅದು ಎನ್ನ ದೂಸರಿನ್... ತುಂಗ ಕುರುವಂಶಮ್ ಅಯಶೋಭಂಗಮ್ ಛಿದ್ರಿತಮ್ ಆಯ್ತು... ಆನುಮ್ ಗಡ ಕುರುರಾಜನೆ... ನೀಮುಮ್ ಗಡ ಸಂಧಾನವೇಳ್ದಿರ್... ಎನಗೆ ಅರಸು ಗಡಾ... ವೀರವೃತ್ತಿ ಈ ಎನ್ನ ಎರಡುಮ್ ನಿಡುದೋಳ್ ಆಯತ್ತಮ್... ಜಯಮ್ ಎಂಬುದು ದೈವಾಯತ್ತಮ್... ಅಜ್ಜ, ಭರತಾನ್ವಾಯಕ್ಕೆ ಕಲಂಕಮಾಗದಂತಿರೆ ನೆಗಳ್ವೆನ್... ಅಜ್ಜ, ಮಂಗಳ ಮಹಾಶ್ರೀ ಸಂಧಿಕಾರ್ಯಕ್ಕೆ ಬೆಸಕೆಯ್ಯೆನ್... ಬಿಡಿಮ್ ನಿಮ್ಮಯ ಮಾತನ್ ಒರ್ಮೆಗೆ ಲಂಘಿಸಿದೆನ್... ಮದಾಜ್ಞಾಲಂಘನಮ್ ದೋಷಮ್ ಒಂದಿಸದು... ಇನ್ನು ಆಗ್ರಹಮಮ್ ಬಿಸುಳ್ಪುದು.

(ಎನೆ, ಸತ್ತ್ವಕ್ಕಮ್ ತದೇಕಾಂಗಸಾಹಸಕಮ್ ವಿಸ್ಮಯಮುತ್ತು ಮೆಚ್ಚಿ ಪೊಗಳ್ದನ್ ಮಂದಾಕಿನೀನಂದನನ್... ಅಂತು ಗಾಂಗೇಯನ್ ಮನದೊಳ್ ಪೊಗಳ್ದನ್. 'ಅಶುಭಸ್ಯ ಕಾಲಹರಣಮ್' ಎಂಬ ವಾಕ್ಯಾರ್ಥಮನ್ ಅವಧಾರಿಸಿ)

**ಭೀಷ್ಮ** : ಮಗನೆ, ನೀನ್ ಎಂತುಮ್ ಎಮ್ಮ ಪೇಳ್ದುದಮ್ ಕಯ್ ಕೊಳ್ಳದೆ... ಛಲಮನೆ ಕಯ್‌ಕೊಂಡು ಪಾಂಡುನಂದನರೊಳ್ ಕಾದಿದಲ್ಲದೆ ಇರೆನ್ ಎಂಬೆಯಪ್ಪೊಡೆ... ತೀರ್ಥಯಾತ್ರೆಗೆ ಪೋದ ಬಲದೇವನ್ ಬರ್ಪನ್ನೆಗಮ್... ನೀನ್ ಇರ್ದ

ಎಡೆಯನ್ ಅರಿಯದಂತು ಮೆಯ್ಗರೆದು... ಅಶ್ವತ್ಥಾಮ ಕೃಪ ಕೃತವರ್ಮರ್ ಬರ್ಪನ್ನೆಗಮ್... ಕಾಲವಂಚನಮ್ ಗೆಯ್ವುದು... ಮೇಣ್... ಜಲಮಂತ್ರ ವಿದ್ಯಾಭ್ಯಾಸಮಮ್ ಕಯ್ಕೊಂಡು ಕುರುಕ್ಷೇತ್ರದ ಉತ್ತರ ದಿಶಾ ಭಾಗದೊಳ್ ಇರ್ಪ ವೈಶಂಪಾಯನ ಸರೋವರಮಮ್ ಪೊಕ್ಕಿರ್ದು... ಇಂದಿನ ಒಂದು ಇರುಳಮ್ ಕಳಿಪಿ, ನಾಳೆ ನೀನ್ ನೆಗಳ್ದುದಮ್ ನೆಗಳ್ದುದು...

(ಎನೆ)

**ದುರ್ಯೋಧನ** : ಮಹಾಪ್ರಸಾದಮ್. ಇದನ್ ಒಡಂಬಟ್ಟೆನ್. ಅಂತೆ ಗೆಯ್ವೆನ್ .

(ಎಂದು ಹಿತೋಪದೇಶಮ್ ಬೆರಸು ಜಲಮಂತ್ರ ಉಪದೇಶಮಮ್ ಕಯ್ಕೊಂಡು... ಕುರುಕುಲ ಪಿತಾಮಹನನ್ ಬೀಳ್ಕೊಂಡು... ನಿಜಭುಜ ಗದಾಸಹಾಯನುಮ್ ಆಗಿ ಸಂಗ್ರಾಮ ಭೂಮಿಯೊಳಗನೆ ಬರುತ್ತುಮ್... ತನ್ನ ಅಂತರ್ಗತದೊಳ್...)

❖

## ನೋಟ–14

# ದುರ್ಯೋಧನನು ವೈಶಂಪಾಯನ ಸರೋವರವನ್ನು ಹೊಕ್ಕಿದ್ದು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಭೀಷ್ಮ ವಚನಮ್'** ಎಂಬ ಹೆಸರಿನ 6 ನೆಯ ಅಧ್ಯಾಯದ 19 ನೆಯ ಪದ್ಯದಿಂದ 24 ನೆಯ ಗದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ರಾಜ್ಯಲಕ್ಷ್ಮಿ** : ರಾಜ್ಯಾಧಿಕಾರ ಮತ್ತು ಸಂಪತ್ತಿನ ದೇವತೆ. ರಾಜನಾದವನ ಬಳಿಯಲ್ಲಿ ಲಕ್ಷ್ಮಿ ಎಂಬ ಹೆಸರಿನ ದೇವತೆಯು ನೆಲೆಸಿರುತ್ತಾಳೆ ಎಂಬ ನಂಬಿಕೆಯು ಜನಮನದಲ್ಲಿದೆ.

**ಹಕ್ಕಿಗಳು** : ವೈಶಂಪಾಯನ ಸರೋವರದ ದಡದ ಮರಗಿಡಬಳ್ಳಿಗಳಲ್ಲಿ ನೆಲೆಸಿದ್ದ ಹಕ್ಕಿಗಳು.

# ದುರ್ಯೋಧನನು ವೈಶಂಪಾಯನ ಸರೋವರವನ್ನು ಹೊಕ್ಕಿದ್ದು

ಕುರುಕುಲ ಪಿತಾಮಹನನ್ ಬೀಳ್ಕೊಂಡು... ನಿಜಭುಜ ಗದಾ ಸಹಾಯನುಮ್ ಆಗಿ, ಸಂಗ್ರಾಮ ಭೂಮಿಯೊಳಗನೆ ಬರುತ್ತುಮ್... ತನ್ನ ಅಂತರ್ಗತದೊಳ್..

**ದುರ್ಯೋಧನ** : ದಿನಕರತನಯನ ದುಶ್ಶಾಸನನ ವಿಯೋಗದೊಳಮ್ ಇಂದುವರೆಗಮ್ ಎನಗೆ ನೋವಿಲ್ಲ... ಅಹಿತರೊಡನೆ ಸಂಧಿಗುಡು ಎನೆ... ಸ್ವಜನ ಗುರುಜನ ಅಭ್ಯರ್ಥನೆಯಿಮ್ ನೊಂದೆನ್... ಅರಿಯರ್ ಪಾಂಡವರ್... ಅವರೊಳ್ ವಿರೋಧಮಮ್ ಬಿಸುಟು ಸಂಧಿಯಮ್ ಮಾಡುವುದು ಎಂಬರ ನುಡಿಯಮ್ ಕೇಳಲ್ಕೆ ಎಂದು ಎರಡುಮ್ ಕಿವಿಗಳುಮನ್ ಎನಗೆ ಬಿದಿ ಮಾಡಿದನೇ.

(ಎನುತುಮ್... ತತ್ ಸರೋವರದ ಸಮೀಪಮಮ್ ಕುರುಕುಲಪ್ರದೀಪನ್ ಎಯ್ದೆ ವಂದಾಗಳ್... ಒಂದೆರಡು ಮತ್ತರಂತರದಿಂದಮ್ ಪೊರಮಟ್ಟ ಪಜ್ಜೆಯಿಮ್ ಸಲೆ ಕೊಳನಮ್ ಪಿಂದುಪೆರಗಾಗಿ ಪುಗೆ)

**ರಾಜ್ಯಲಕ್ಷ್ಮಿ** : ಚಿಃ...

(ಎಂದು ಪೇಸಿ... ರಾಜ್ಯಲಕ್ಷ್ಮಿ ಅವನನ್ ಬಿಸುಟ್ಟಳ್. ತುರುವಮ್ ಕಳಿಸುವ... ಕೃಷ್ಣೆಯ ನಿರಿಯಮ್ ಪಿಡಿದು ಉರ್ಚವೇಳ್ವ... ಕೊಳನಮ್ ಪಿಂದುಮ್ ಪೆರಗಾಗಿ ಪುಗುವ ದುರ್ನಯಮ್ ಅರಿಪವೆ... ಕೌರವನ ರಾಜ್ಯದ ಆಯದ

ಕುಂದನ್... ಅಂತು ಸರೋವರಮನ್ ಎಯ್ದೆವಂದಾಗಳ್... ಗಗನಮ್ ಬಿಳ್ದುದೊ... ಮೇಣ್... ನೆಲಕ್ಕೆ ನೆಲನೇನ್ ಪತ್ತಿತ್ತೊ... ಮೇಣ್... ಇಲ್ಲಿ ಪನ್ನಗ ವೃಂದಾರಕರ್ ಎಂದುಮ್ ಇರ್ಪ ಬಿಲನೋ... ಮೇಣ್ ಅಷ್ಟ ದಿಗ್ನಾಗರಾಜಿಗೆ ಮೆಯ್ಗರ್ಚಿಕೊಳಲ್ಕೆ ಅಜನ್ ಸಮೆದ ತೋಯೋದ್ದೇಶಮೋ... ಸಂದೆಯಮ್ ಬಗೆಗೆ ಆದತ್ತು ಎನಿಸಿರ್ದುದು... ಏನ್ ಪಿರಿದೊ ವೈಶಂಪಾಯನ ಅಬ್ಜಾಕರಮ್... ಅಂತು ಗಂಭೀರ ನೀರಾಕರಮ್ ಇರ್ಪಂತಿರ್ದ ಕಮಲಾಕರಮ್ ನೋಳ್ಪಿನಮ್... ಅಲ್ಲಿ)

**ಹಕ್ಕಿಗಳು** : ಕುರುಪತಿ, ನಿನ್ನ ಪೊಕ್ಕ ತೊರೆಗಳ್ ಮೊದಲಾಗಿರೆ ಬತ್ತಿದಪ್ಪುವು... ಈ ದೊರೆಯ ದುರಾತ್ಮನನ್ ಖಳನನ್ ಆನ್ ಒಳಕೊಂಡೊಡೆ... ಭೀಮನ್ ಈ ಸರೋವರಮುಮನ್ ಎಮ್ಮುಮಮ್ ಕದಡುಗುಮ್... ಪುಗದಿರ್ ತೊಲಗು.

(ಎಂದು ಬಗ್ಗಿಪಂತಿರೆ ಅನೇಕ ಬಕ ಕೋಕ ಮರಾಳ ವಿಹಂಗಮಸ್ವನಮ್ ನೆಗೆದತ್ತು... ಆಗಳ್ ಕುರುಕುಳ ಸರೋರಾಜ ಹಂಸನ್... ಮುನ್ನಮ್ ತನ್ನ ಮೆಯ್ಯೊಳ್ ಕೆನ್ನೈಸಿದ ಕೆನ್ನೆತ್ತರಮ್ ಕರ್ಚಿ ಕಳೆದು... ಕರಚರಣ ವದನ ಪ್ರಕ್ಷಾಳನಮ್ ಗೆಯ್ದು... ಮುಕ್ಕುಳಿಸಿ ಉಗುಳ್ದು... ಆಚಮನ ಕ್ರಿಯೆಗಳಮ್ ಮಾಡಿ... ಜಲದೇವತಾ ನಮಸ್ಕಾರಮ್ ಗೆಯ್ದು ಜಲಮಂತ್ರೋಪದೇಶದಿಮ್ ಜಲಜಾಕರಮನ್ ಅಭಿಮಂತ್ರಿಸಿ... ಜಲನಿಲಯನಾಗಿ ಪರಮಯೋಗಿಯವೋಲ್ ಮಂತ್ರಪದಾಕ್ಷರಂಗಳಮ್ ಮಿನುಗುತುಮ್ ಇರ್ದನ್.)

❖

## ನೋಟ–15

# ದುರ್ಯೋಧನನನ್ನು ಕಾಣದೆ ಭೀಮಸೇನನ ಆತಂಕ, ಆಕ್ರೋಶ ಮತ್ತು ಅಬ್ಬರ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನಾಡಂಬರಮ್' ಎಂಬ ಹೆಸರಿನ 7 ನೆಯ ಅಧ್ಯಾಯದ 1 ನೆಯ ಪದ್ಯದಿಂದ 7 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಕೃಷ್ಣ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

# ದುರ್ಯೋಧನನನ್ನು ಕಾಣದೆ ಭೀಮಸೇನನ ಆತಂಕ, ಆಕ್ರೋಶ ಮತ್ತು ಅಬ್ಬರ

ಅನ್ನೆಗಮ್ ಇತ್ತಲ್ ಶಲ್ಯನ ವಧೆಯಿಮ್ ಬಳಿಯಮ್ ಎಲ್ಲಿಯುಮ್ ಅರಸಿಯುಮ್... ದುರ್ಯೋಧನನ ರೂಪು ಕಾಣದೆ...

**ಧರ್ಮರಾಯ** : ಇದು ಏನಾನುಮ್ ಒಂದು ಕಾರಣಮ್ ಆಗಲ್ವೇಳ್ಕುಮ್.

(ಎಂದು ಸೂಕ್ಷ್ಮ ಕ್ರಿಯೆಯಿಮ್ ಅಂತಕತನಯನ್ ಗರುಡಧ್ವಜ ನೊಳ್ ಆಳೋಚಿಸುವುದಮ್... ಕುರುಕುಳಾಂತಕನ್ ಕೇಳ್ದು)

**ಭೀಮ** : ಸಭೆಯೊಳ್ ಎನ್ನಯ ಪೂಣ್ದ ಪೂಣ್ಕೆ ತೊದಳಾಯ್ತು... ಪಾಂಚಾಲರಾಜಾತ್ಮಜಾ ವದನಮ್ಲಾನತೆ ಮಾಣ್ದುದಿಲ್ಲ ಗಡ ಮತ್ ದೋರ್ದಂಡ ಕಂಡೂತಿ ತೀರ್ದುದುಮಿಲ್ಲ... ಸುಯೋಧನನ್ ಇನ್ನುಮ್ ಒಳನ್... ಅದರ್ಕೆ ಏಗೆಯ್ವೆನ್ ಎಂತಕ್ಕುಮ್.

(ಎಂಬುದನ್ ಎಂದು, ಉತ್ಸುಕಚಿತ್ತನ್ ಕೌರವ್ಯ ಕೋಳಾಹಳನ್ ಉಮ್ಮಳಿಸಿದನ್... ಅಂತು ಉಮ್ಮಳಿಸಿ ಕುರುಕುಲಮಹೀಪಾಲ ಬೃಹತ್ ಊರು ದ್ವಂದ್ವಗಳಮ್ ತನ್ನ ಗದಾದಂಡದಿಮ್ ನುರ್ಗುನುರಿ ಮಾಡಲುಮ್... ತತ್ ಕೌರವೇಶ್ವರನ ಬಾಹುಶಾಖೆಗಳಮ್ ತನ್ನ ಗದಾಕುಠಾರದಿಮ್ ತತ್ತರದರಿಯಲುಮ್... ತತ್ ಪಿಂಗಾಕ್ಷನ ವಕ್ಷಸ್ಥಳಮಮ್ ತನ್ನ ಗದಾಲಾಂಗಲದಿಂದ ಇರ್ಬಗಿಯಾಗಿ ಪೋಳ್ದು

ಪರಪಲುಮ್... ತತ್ ಫಣಿರಾಜಕೇತನನ ಲಲಾಟಶಿಲಾಪಟ್ಟಮಮ್ ತನ್ನ ಗದಾಘಾತದಿಮ್ ಚಿಪ್ಪುಚಿಪ್ಪಾರ್ದಿಡಲುಮ್... ತತ್ ದ್ರೌಪದೀದ್ರೋಹನ ಮಣಿಮಯ ಮಕುಟಮಮ್ ತನ್ನ ಗದಾಪ್ರಹರಣದಿಂದ ಉರುಳ್ಚಿ ಪುಡಿಯೊಳ್ ಪೊರಳ್ಚಲುಮ್... ಆ ಸುಯೋಧನನ ರುಧಿರ ಧಾರಾಪೂರದಿಮ್ ತನ್ನ ಧಗಧಗಾಯಮಾನ ವಿಪುಳ ಕೋಪಪಾವಕ ಶಿಖಾಕಲಾಪಮನ್ ಆರಿಸಲುಮ್ ಪಡೆಯದೆ ಅಡಹಡಿಸಿ... ಭೀಮಸೇನನ್ ಕಿಡಿಕಿಡಿವೋಗಿ ಮೀಸೆಯಮ್ ಕಡಿದು)

**ಭೀಮ** : ಮೀರಿದ ಪಗೆವನ ಪಟ್ಟಮ್ ಪಾರಿಸುವೆನೊ... ಮುನ್ನಮ್ ಅಮರರ್ ಉಂಡ ಅಮೃತಮನ್ ಏನ್ ಕಾರಿಸುವೆನೊ... ಖಚರರನ್ ಅಡರ್ದು ಮೇರುಗಿರಿಯ ತೂರಲ ತುದಿಯಮ್ ಏರಿಸುವೆನೊ... ಮಂದರಾದ್ರಿಯನ್ ಎತ್ತುವೆನೊ... ನೆಲನಮ್ ರಸಾತಳಕ್ಕೆ ಒತ್ತುವೆನೊ... ದೆಸೆಯಮ್ ಪತ್ತುವೆನೊ... ಪಗೆಯ ಬೆನ್ನಮ್ ಪತ್ತುವೆನೊ... ದಿಶಾಗಜಂಗಳಮ್ ತುತ್ತುವೆನೋ... ಕುಲ ನಗಂಗಳನ್ ದಾಂಟುವೆನೊ... ಚತುಸ್ಸಮುದ್ರಮಮ್ ಈಂಟುವೆನೊ... ಗಗನ ತಳದಿಮ್ ರವಿಶಶಿಯಮ್ ಮೀಂಟುವೆನೊ... ಸಕಲ ದಿಕ್ಪಾಲಕರಮ್ ಗಂಟಲನ್ ಒತ್ತುವೆನೊ

(ಎಂದು ಕುರುಕುಲಕೃತಾಂತಕನ್ ಅಂತಕನಂತೆ ಮಾಮಸಕಮ್ ಮಸಗಿ... ಪ್ರಳಯಕಲ್ಪಮ್ ಗೆಯ್ದು)

**ಭೀಮ** : ಖಳನ್ ರಸೆಗಿಳಿದನೊ... ಮೇಣ್... ನಾಲ್ಕುಮ್ ದೆಸೆಗಳ ಕೋಣೆಗಳೊಳ್ ಉಳಿದನೋ... ಇಲ್ಲಿ ಈ ವಸುಮತಿಯೊಳ್ ಗಾಂಧಾರಿಯ ಬಸಿರಮ್ ಮೇಣ್ ಮಗುಳೆ ಪೋಗಿ ಪೊಕ್ಕಿರ್ದಪನೋ... ಚರಮ್ ಅಚರಮ್ ಎಂಬ ಜಗದಂತರದೊಳ್ ಖಳನ್ ಎಲ್ಲಿ ಪೊಕ್ಕೊಡಮ್... ತತ್ ಭುಜಪಂಜರದೊಳ್ ಇರ್ದೊಡೆ... ಹರಿಹರ ಹಿರಣ್ಯಗರ್ಭರ್ಕಳ್ ಆಂತೊಡಮ್ ಕೊಲ್ಲದಿರೆನ್.

ಚತುರಂತ ಕ್ಷಿತಿಕಾಂತೆ ಕೇಳ್... ಜಲಧಿ ಕೇಳ್... ಸಪ್ತಾರ್ಚಿ ಕೇಳ್... ತಾತ ಮಾರುತ ಕೇಳ್... ಮಾರುತ ಮಾರ್ಗ ಕೇಳ್...

ಪಗೆವನಮ್ ಕೊಂದು... ಎನ್ನ ಕೋಪಾಗ್ನಿಗೆ ಆಹುತಿ ಮಾಳ್ಪೆನ್... ಕೊಲಲಾರದಂದು ತರಿಸಂದು... ಆನ್ ಎನ್ನ ಸಂದು ಅಗ್ನಿಗೆ ಆಹುತಿ ಮಾಳ್ಪೆನ್ ಗಡಮ್.

(ಎಂದು ಪೂಣ್ದು ಒದರಿದನ್ ಕೌರವ್ಯಕೋಳಾಹಳನ್.)

❖

## ನೋಟ–16

# ಅಣ್ಣ ಧರ್ಮರಾಯನಿಗೆ ಭೀಮಸೇನನ ಸವಾಲು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಭೀಮಸೇನಾಡಂಬರಮ್'** ಎಂಬ ಹೆಸರಿನ 7 ನೆಯ ಅಧ್ಯಾಯದ 8 ನೆಯ ಪದ್ಯದಿಂದ 11 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

## ಅಣ್ಣ ಧರ್ಮರಾಯನಿಗೆ ಭೀಮಸೇನನ ಸವಾಲು

ಅಂತು ಪಂಚಭೂತ ಸಾಕ್ಷಿಯೊಳೆ ಪೂಣ್ದು ನುಡಿದು, ಕುರುಕುಲಪ್ರಧಾನ ಶತ್ರುವೆನಿಸಿದ ಸಾಹಸಭೀಮನ್ ಅಜಾತಶತ್ರುಗೆ ಸಾಷ್ಟಾಂಗ ನಮಸ್ಕಾರಮ್ ಗೆಯ್ದು, ಇಂತೆಂದನ್...

**ಭೀಮ :** ಮುಕ್ತಕೇಶಿ ದ್ರೌಪದಿ ಎನಿತುಮ್ ನಮೆವಳ್... ತತ್ ದುಃಖಮಮ್ ಕಂಡು ಕಂಡು... ಆನುಮ್ ಎನ್ನ ಅನುಜರುಮ್ ಎನಿತುಮ್ ಸೈರಿಪೆವು... ಪಾಂಚಾಳಿಯನ್ ನೋಡಿ ನೀನ್ ಮನದೊಳ್ ನೋವುದುಮಿಲ್ಲ... ನಿಷ್ಕರುಣಿಯಯ್... ನರೇಂದ್ರ, ನೀನ್ ಇಂತಿರು... ಅನ್ನೆಗಮ್ ಆನ್ ಮುನಿಸಮ್ ತೀರ್ಚೆ... ವೈರಿ ತರುವಮ್ ನಿರ್ಮೂಲನಮ್ ಮಾಡುವೆನ್...

ಧಾತ್ರೀನಾಥ, ಇಂದಿನ ಒಂದೆವಸಮ್ ಆನುಮ್ ವಿಧೇಯನಲ್ಲನ್... ನೀನುಮ್ ಗುರುವಲ್ಲಮ್... ಪರಿಯ ಬಿಡ... ಕುರುಸೂನುವನ್ ಇಕ್ಕಿ ಮೆಟ್ಟಿ ಡೊಕ್ಕರಿಸಿದಪೆನ್... ಅಂದು ಅನಲಜೆಯನ್ ಎನ್ನಯ ಮುಂದೆ ಮುಂದಲೆಯಮ್ ಪಿಡಿದು ಎಳೆದು ಪರಿಭವಿಸಿಯೆ ಸೊರ್ಕಿದವನನ್... ದಳ್ಳ್ ಎಂದು ಉರಿದು ಕೊಂದೆನ್... ಇನ್ ಕುರುಪತಿಯನ್ ಕೊಲಲ್ ತಡೆದಪೆನೇ.

(ಎಂದು ಕುರುಕುಲಾಂತಕನ್ ಮಾಮಸಕಮ್ ಮಸಗಿ ಕುರುಕುಲ ಪ್ರಳಯ ಕಾಲದಂಡಮ್ ಎನಿಪ ನಿಜ ವಿಜಯ ಗದಾದಂಡಮನ್ ಎತ್ತಿಕೊಂಡು... ಕುರುಕುಲ ಕದಳೀ ಕಾನನ ಕರಿಕಳಭನ್... ಶತ್ರುಶಲಭ ಸಂಪಾತನ ವಿಸ್ಫುರಿತ ಪ್ರದೀಪನ್... ಪವನಸುತನ್ ಆ ಕುರುಧರೆಯೊಳ್ ಕುರುಪತಿಯನ್ ಅರಸಿದನ್)

❖

## ನೋಟ–17

# ಭೀಮಸೇನನ ಅಬ್ಬರ... ಗಾಂಧಾರಿಯ ಮೊರೆ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನಾಡಂಬರಮ್' ಎಂಬ ಹೆಸರಿನ 7 ನೆಯ ಅಧ್ಯಾಯದ 12 ನೆಯ ಪದ್ಯದಿಂದ 18 ನೆಯ ಗದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಗಾಂಧಾರಿ** : ಧೃತರಾಷ್ಟ್ರ ಮಹಾರಾಜನ ಹೆಂಡತಿ. ಈ ದಂಪತಿಗೆ ದುರ್ಯೋಧನನನ್ನು ಮೊದಲುಗೊಂಡು ನೂರು ಮಂದಿ ಗಂಡು ಮಕ್ಕಳು ಮತ್ತು ದುಶ್ಯಲೆ ಎಂಬ ಮಗಳು ಇದ್ದರು.

## ಪ್ರಸಂಗ–17

# ಭೀಮಸೇನನ ಅಬ್ಬರ... ಗಾಂಧಾರಿಯ ಮೊರೆ

ಗುರು ಲಕ್ಷ್ಯಸಿದ್ಧಿಯಿಲ್ಲ ಎನೆ ಮಾಣ್ದಿರದೆ... ಮರುಜ್ಜವದಿಂದಮ್ ಪರಿವ ಅಂಬಮ್ ಪರಿದು ಪಿಡಿದು ತರ್ಪಂತಿರೆ... ಆಗಳ್ ಮರುತ್ಸುತನ್ ಇದಿರುಮ್ ಬಳಿಯುಮ್ ಪರಿದನ್. ಅಂತು ಇದಿರುಮ್ ಬಳಿಯಮ್ ಪಾಸುಮ್ ಪೊಕ್ಕುಮ್ ದುಗುಣಮುಮ್ ತಿಗುಣಮುಮ್ ಅಡ್ಡಮುಮ್ ತಿಗಟಮುಮ್ ಪರಿದು ವೈಯಾಕರಣನಂತೆ ಶಬ್ದಮನ್ ಆಲಿಸಿಯುಮ್; ಬೇಂಟೆಕಾರನಂತೆ ಅಡಿವಜ್ಜೆಯನ್ ಅರಸಿಯುಮ್; ಗರುಡನಂತೆ ಪಾವಿನ ಪಳವಿಗೆಯನ್ ಆರಯ್ದು ನೋಡಿಯುಮ್; ವೈದ್ಯನಂತೆ ಅಹಿತಗದಾನ್ವೇಷಣಮ್ ಗೆಯ್ದು ನೋಡಿಯುಮ್;

ಮುನ್ನಮ್ ಪರಶುರಾಮನ್ ಇರ್ಪತ್ತೊಂದು ಸೂಳ್ ವರೆಗಮ್ ಈ ನೆಲದೊಳ್ ಉಳ್ಳ ಅರಸು ಮಕ್ಕಳ್ ಎಲ್ಲರುಮನ್ ಪಿಳ್ಳೆ ಪೆಸರಿಲ್ಲದಂತು ಕೊಂದು... ತನ್ನ ತಾಯ್ಗೆ ನೀರ್ ಇಳಿಯಲುಮ್... ತಂದೆಗೆ ನೀರ್ ಕುಡಲುಮ್ ಎಂದು ಅವಂದಿರ ನೊರೆ ನೆತ್ತರೊಳ್ ತೀವಿ ಮಾಡಿದ ಸ್ಯಮಂತ ಪಂಚಕಗಳೆಂಬ ಪೆಸರ ಪೆರ್ಮಡುಗಳೊಳಗೆ ಮೂಡಿ ಮುಳ್ಕಾಡಿ ನೋಡಿಯುಮ್;

ನಾಲ್ವತ್ತೆಣ್ಗಾವುದ ಪರಿಪ್ರಮಾಣ ಕುರುಕ್ಷೇತ್ರದೊಳ್ ಎಲ್ಲಿಯುಮ್ ದುರ್ಯೋಧನನ್ ಅರಸಿ ಕಾಣದೆ ವಿಸ್ಮಯಮ್ ಪಟ್ಟು, ಅವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು...

**ಭೀಮ** : ಜತುಗೃಹದೊಳ್ ಸುಡಲ್ ಬಗೆದನ್ ಎಲ್ಲಿದನ್... ವಿಷಾನ್ನಮಮ್ ಇಕ್ಕಿ ಮರುತ್ ಸುತನನ್ ಉಪಾಯದಿಮ್ ಕೊಲಲ್ ಒಡರ್ಚಿದನ್ ಎಲ್ಲಿದನ್... ಆ ದುರೋದರ ವ್ಯತಿಕರದೊಳ್ ಪರಾಭವಿಸಿ ಕೃಷ್ಣೆಯನ್ ಉಯ್ದ ಅಪರಾಧಿ ಎಲ್ಲಿದನ್... ಕೃತಕ ಸಭಾ ಪ್ರವೇಶಕರನ್ ಎಲ್ಲಿದನ್... ಎಲ್ಲಿದನೋ ಸುಯೋಧನನ್... ಭರತ ಕುಲೇಂದು ಕಲಂಕನ್ ಭರತಾನ್ವಯ ರಾಜಭವನ ರಾಜಕಪೋತಮ್ ಕುರುಕೇತು ಎಲ್ಲಿದನ್... ತತ್ ಕುರುಕುಲ ಲಯಕೇತು ಭೀಮಸೇನನ್ ಬಂದನ್.

(ಎಂದು ಸಿಂಹಗರ್ಜನೆಯಿಮ್ ಗರ್ಜಿಸಿ, ಕುರುರಾಜದ್ವಾರ ಉಪಾಂತಮನ್ ಎಯ್ದೆ ವಂದಾಗಳ್ )

**ಗಾಂಧಾರಿ** : ದೆಸೆಯಮ್ ತೆಕ್ಕನೆ ತೀವಿ... ಗಗನಮ್ ಪರ್ಬಿ ಕೂಡಿಟ್ಟವೊಲ್ ನೀಳ್ದು ಅಗುರ್ವಿಸೆ... ಬಾಹುಭ್ರಮಿತ ಅಭ್ರ ವಿಭ್ರಮ ಗದನ್ ಕೌರವ್ಯರಮ್ ತಿಂದ ರಕ್ಕಸನೋ... ಭೀಮನೊ... ಈತನ್ ಆವನ್

(ಎನುತುಮ್, ಪಾಂಡವಬಲ ಪ್ರಾಕಾರನ ಆಕಾರಮಮ್ ಬರೆ ಕಂಡು, ಗಾಂಧಾರಿ ಬಳ್ಕುತ್ತೆ ಬೆಕ್ಕಸಮುತ್ತಳ್. ಅಂತು ಕಂಡು ಬಿಲ್ಲುಮ್ ಬೆರಗುಮಾಗಿ.)

**ಗಾಂಧಾರಿ** : ಎನ್ನ ಆತ್ಮಜರನ್ ನೂರ್ವರುಮನ್ ನುಂಗಿದ ತೆರದೆ ಪನ್ನಗಕೇತನನುಮನ್ ನುಂಗೆ... ಇಂತು ಭರದಿಮ್ ಬಂದನ್ ಅನ್ನೆಯಮಾಯ್ತು.

(ಎಂದು ಪಿರಿದುಮ್ ಉಮ್ಮಳಿಸುತ್ತುಮ್ ಎಂಬನ್ನೆಗಮ್ ಭೀಮನ್ ವಿಜೃಂಭಿಸಿ ಕಯ್ಪೆಸರದಿಮ್ ಗುರುಜನಕ್ಕೆ ಸಮುಚಿತ ಆಚಾರಮಮ್ ಮರೆದು ಭೀಮನಾದಮಮ್ ನೆಗಳ್ಚಿ)

**ಭೀಮ** : ಧೃತರಾಷ್ಟ್ರ ಕ್ಷಿತಿಪಾಲ ಕೇಳ್... ಜನನಿ ಗಾಂಧಾರಿ ಕೇಳ್... ಭವತ್ ಸುತರಮ್ ನೂರ್ವರುಮಮ್ ಗದಾಪ್ರಹತಿಯಿಮ್ ಕೊಂದೆನ್... ದುಶ್ಶಾಸನ ಉರಸ್ಥಳ ಕ್ಷತಜ ಅಸೃಗ್ಜಲಸೇಕದಿಮ್ ಕೋಪಾಗ್ನಿಯಮ್ ತಣಿಪಿದೆನ್...

ಉದ್ಧತನನ್ ಕೋಪಕೃತ ಅಪರಾಧಶತನನ್ ಪಿಂಗಾಕ್ಷನನ್ ನುಂಗಲ್ಕೆ ಬಂದೆನ್.

(ಎಂಬುದುಮ್ ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ)

**ಗಾಂಧಾರಿ** : ಅನಿಬರ್ ತನಯರ ದುಃಖಮನ್ ಅನುಭವಿಸಿಯುಮ್ ಅಣಮೆ ಎಮ್ಮ ಅಸುಗಳ್ ಪೋಗವು... ಭೀಮ, ನೀನ್ ಇನಿತನ್ ಎಮಗೆ ಒಳ್ಳಿಕೆಯ್. ಮುನ್ನ ಎಮ್ಮಮ್ ನುಂಗು. ಎಮ್ಮ ಸುತನನ್ ಬಳಿಯಮ್.

(ಎಂಬುದುಮ್. ಅನ್ನೆಗಮ್ ಇತ್ತ ವಿಂದ್ಯಕನೆಂಬ ಕಿರಾತ ದೂತನ್ ತ್ವರಿತಗತಿಯಿಮ್ ಬಂದು ದೂರಪ್ರಣತನಾಗಿ )

**ವಿಂದ್ಯಕ** : ದೇವಾ, ದುರ್ಯೋಧನನನ್ ಕುರುಕ್ಷೇತ್ರದೊಳ್ ಎಲ್ಲಿಯುಮ್ ಅರಸಿಯುಮ್ ಕಾಣದೆ, ಮಧ್ಯಂದಿನ ಸಮಯದೊಳ್ ತಪನ ತಾಪದಿಮ್ ತೃಷ್ಣಾಭಿಭೂತನಾಗಿ ಸಕಲಜನ ಆಪ್ಯಾಯಕಾರಿಯಪ್ಪ ವೈಶಂಪಾಯನ ಸರೋವರಕ್ಕೆ ನೀರ್ಗುಡಿಯೆ ಪೋಗಿ... ಹಲ ಕುಲಿಶ ಕಮಲ ಶಂಖ ಚಕ್ರ ಲಾಂಛನಮಪ್ಪ ಅಡಿವಜ್ಜೆಯಮ್ ಕೊಳದ ತಡಿಯೊಳ್ ಕಂಡೆನ್... ಅಲ್ಲಿ ಪೊರಮಟ್ಟ ಪಜ್ಜೆಯಲ್ಲದೆ... ಪೊಕ್ಕ ಪಜ್ಜೆಯಮ್ ಕಾಣೆನ್.

(ಎನೆ, ಪವನತನಯನ್ ಅವನನ್ ಒಡಗೊಂಡು ಬಂದು)

## ನೋಟ–18

# ಕೃಷ್ಣನ ಒಡಗೂಡಿ ವೈಶಂಪಾಯನ ಸರೋವರದ ಬಳಿಗೆ ಬಂದ ಪಾಂಡವರು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನಾಡಂಬರಮ್' ಎಂಬ ಹೆಸರಿನ 7 ನೆಯ ಅಧ್ಯಾಯದ 18 ನೆಯ ಗದ್ಯದಿಂದ 23 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಕೃಷ್ಣ** : ಯದುವಂಶದ ವಸುದೇವ ಮತ್ತು ದೇವಕಿ ದಂಪತಿಯ ಮಗ. ಪಾಂಡವರ ಹಿತಚಿಂತಕ.

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

## ಕೃಷ್ಣನ ಒಡಗೂಡಿ ವೈಶಂಪಾಯನ ಸರೋವರದ ಬಳಿಗೆ ಬಂದ ಪಾಂಡವರು

ಪವನತನಯನ್ ಅವನನ್ ಒಡಗೊಂಡು ಬಂದು, ಧರ್ಮತನಯಾದಿಗಳ್ಗೆ ತತ್ ವೃತ್ತಾಂತಮನ್ ಎಲ್ಲಮನ್ ಅರಿಪೆ, ಯುಕ್ತಿಯುಕ್ತಮಪ್ಪ ದೂತನ ಮಾತನ್ ಸಕಲ ಜಗತ್ ಉತ್ಪತ್ತಿ ಸ್ಥಿತಿ ಪ್ರಳಯಭಾವನನ್ ಎನಿಸಿದ ವಿಷ್ಣು ಕೇಳ್ದು, ಮನದೊಳ್ ನಿಶ್ಚಯಿಸಿ

**ಕೃಷ್ಣ** : ದ್ಯುನದೀಜನ್ ಕುಡೆ… ತೋಯಮಂತ್ರಬಲದಿಮ್ ಕಾಲವಂಚನೆಗೆಯ್ಯಲ್ ಕೊಳನಮ್ ಪೊಕ್ಕಿರ್ದಪನ್. ಹಲಾಯುಧ ಕೃಪ ಅಶ್ವತ್ಥಾಮರುಮ್ ನಾಳೆಯೆ ನಾಗಕೇತನನೊಳ್ ಕೂಡಿ ಬರ್ಪರ್… ಅವರ್ ಇನ್ನುಮ್ ಬಾರದನ್ನಮ್ ಸುಯೋಧನನನ್ ಮುನ್ನಮೆ ಕಯ್ಗೆ ಮಾಳ್ಪುದು… ಬಳಿಕ್ಕೆ ಆರ್ಗಮ್ ಗೆಲಲ್ ಬರ್ಕುಮೇ… ಅದರಿಂದೆ ಈಗಳೇ ಪೋಗಿ ಪೂಗೊಳನನಮ್ ಮುತ್ತಿ… ದುರ್ಯೋಧನನನ್ ಪೊರಮಡಿಸಿ… ಪಗೆಯಮ್ ಪರಿವಡಿಪುದು.

(ಎಂದು ಅರವಿಂದನಾಭನ್ ಧರ್ಮನಂದನಾದಿಗಳನ್ ಒಡಗೊಂಡು ಬಂದು… ಕಿರಾತದೂತ ಸಂಸೂಚಿತಮಪ್ಪ ಅಡಿ ವಜ್ಜೆಯಮ್ ಕಂಡು… ಸುಯೋಧನನ ಅಡಿವಜ್ಜೆಯಪ್ಪುದಮ್ ತಪ್ಪಿಲ್ಲದೆ ಅರಿದು… ನಿಸ್ಸಂದೇಹಚಿತ್ತರಾಗಿ)

**ಧರ್ಮರಾಯ** : ಭರತಜರೊಳ್ ಮುನ್ನ ಇಲ್ಲದ ಪರಿಭಾಷೆಯನುಂಟುಮಾಡಿ ಕುರುರಾಜನ್ ಪೆರಗೆ ಅಡಿಯಿಟ್ಟನ್.

(ಎಂದು ಧರ್ಮಸುತನ್ ಲಜ್ಜಾಭರದಿಂದಮ್ ತಲೆಯನ್ ಎರಗಿದನ್... ದುರ್ಯೋಧನನ ಮನದ ಧೈರ್ಯಕ್ಷತಿಗೆ ಮನಃಕ್ಷತನಾಗಿ ಸಿಗ್ಗಾಗಿ... ತಲೆಯಮ್ ಬಾಗಿ ಧರ್ಮನಂದನನಿರೆ... ಪಂಕಜಾಕರಮ್ ವಿರುವತ್ ಸಾರಸ ರಾಜಹಂಸ ರವದಿಂದೆ **'ಏನ್ ಬಂದಿರೀ... ಬನ್ನಿಮ್ ಇಂತು ಇರಿಮ್'** ಎಂದು ಆದರಿಪಂತುಂಟಾಯ್ತು;... ಪವನ ಉದ್ಧೂತ ಉತ್ತರಂಗ ಅಂಬುವಿಮ್ ತರದಿಮ್ ಕಾಲ್ಗೆ ಎರಪಂತುಂಟಾಯ್ತು... ವಿಕಸತ್ ಪಂಕೇಜದಿಮ್ ಅನಿಲಜಂಗೆ ಅಭ್ಯಾಗತ ಪ್ರೀತಿಯಿಮ್ ಅರ್ಘ್ಯಮ್ ಕುಡುವಂತುಟಾಯ್ತು... ಮೀಂಗುಲಿಗವಕ್ಕಿ ಕೊಳನೊಳ್ ಮೀಂಗೆ ಎರಗುವ ತೆರದಿಮ್ ಎರಗಿ **'ಪಿಂಗಾಕ್ಷನ್ ಇಲ್ಲಿರ್ದನ್ ನೋಡು'** ಎಂದು ಪವನಸುತಂಗೆ ಅರಿಪುವ ತೆರದಿನ್... ಅದೇನ್ ಸೊಗಯಿಸಿತೋ)

**ಭೀಮ** : ಪಗೆವನ್ ಒಳಗಾದನ್... ಸರೋವರದೊಳಿರ್ದು ಇನ್ನೆತ್ತ ಪೋಪನ್... ಮುನ್ ಸರೋಜಳಮಮ್ ತವೆ ಪೀರ್ದು... ಅಸುಹೃತ್ ರಕ್ತಾಂಬುವಮ್ ಪೀರ್ವೆನ್... ಎನ್ನ ಅಳವಮ್ ಮತ್ ಪತಿಗೆ ತೋರ್ಪೆನ್.

(ಎಂದು ಚಾಳುಕ್ಯ ಕಂಠೀರವನ್ ಸಂತಸದೆ ಬಾಹಾಸ್ಫಾಲನಮ್ ಗೆಯ್ದು... ದಿಗ್ವಳಯಮ್ ಮಾರ್ದನಿಯಿಟ್ಟವೊಲ್ ಗಜರಿದನ್.)

❖

## ನೋಟ–19

# ಅಣಕಕ್ಕೆ ಗುರಿಯಾದ ದುರ್ಯೋಧನ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನಾಡಂಬರಮ್' ಎಂಬ ಹೆಸರಿನ 7 ನೆಯ ಅಧ್ಯಾಯದ 23 ನೆಯ ಗದ್ಯದಿಂದ 29 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ನಕುಲ** : ಅಶ್ವಿನಿ ದೇವತೆಗಳ ಅನುಗ್ರಹದಿಂದ ಮಾದ್ರಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ಸಹದೇವ** : ಅಶ್ವಿನಿ ದೇವತೆಗಳ ಅನುಗ್ರಹದಿಂದ ಮಾದ್ರಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ಅರ್ಜುನ** : ದೇವೇಂದ್ರನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ಧರ್ಮರಾಯ** : ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

# ಅಣಕಕ್ಕೆ ಗುರಿಯಾದ ದುರ್ಯೋಧನ

ಆಗಳ್ ಆ ಕೊಳನಮ್ ಬಳಸಿ ಬಂದು... ನಿರ್ಭರಮಾಗಿ... ಬೊಬ್ಬಿರಿದು ಅಬ್ಬರಮ್ ಗೆಯ್ದು... ಪಲತೆರದ ಪರೆಗಳಮ್ ಪೊಯ್ಸಿಯುಮ್... ಶಂಖಂಗಳಮ್ ಪೂರೈಸಿಯುಮ್... ಭೇರಿಗಳಮ್ ತಾಟಿಸಿಯುಮ್... ಕಹಳೆಗಳನ್ ಒತ್ತಿಸಿಯುಮ್... ಪಂಚ ಮಹಾಶಬ್ದಗಳಮ್ ಬಾಜಿಸಿಯುಮ್... ಎಂತುಮ್ ಪೊರಮಡಿಸಲಾರದೆ... ಸುಯೋಧನನನ್ ಪೆಸಗೊಂಡು ನಕುಲನ್ ಆಸ್ಫೋಟಿಸಿ...

**ನಕುಲ** : ಅಂಕದ ಕಲಿ ಕುರುವಂಶ ಶಶಾಂಕನೆ... ದುರ್ಯೋಧನಾಂಕನ್ ಎನೆ ನೆಗಳ್ದು... ಅಯಶಃ ಪಂಕದೊಳಮ್ ಈ ಸರೋವರ ಪಂಕದೊಳಮ್ ನೀನೆ ನಿನ್ನನ್ ಇಂತು ಅರ್ದುವುದೇ... ಇರಿವ ಬೆಡಂಗನೊಳ್ ಇರಿಯಲ್ ನೆರೆಯಯ್... ನಿನಗೆ ಆನೆ ಸಾಲ್ವೆನ್... ಎಕ್ಕತುಳಕ್ಕಮ್ ನೆರೆದಿರ್ದೆನ್... ಇರದೆ ಕೊಳನಮ್ ಪೊರಮಡು... ಎನ್ನ ಕೊಂತದ ಸವಿಯಮ್ ತೋರಿದಪೆನ್.

(ಎನೆ, ಸಹದೇವನ್ ಉತ್ಕಟಿಸಿ)

**ಸಹದೇವ** : ಜವನ ಮಗನ್ ಇರ್ಕೆ... ಸುಭಟರ ಜವನ್ ಇರ್ಕೆ... ಸಿತಾಶ್ವನ್ ಇರ್ಕೆ... ನಕುಲನುಮ್ ಇರ್ಕೆ... ಅಣ್ಮುವೊಡೆ ಎನ್ನ ಬಾಳ ಸವಿಯಮ್ ಸವಿನೋಡಿ, ಬಳಿಕ್ಕೆ ನೀರ ಸವಿಯಮ್ ನೋಡಾ.

(ಎಂಬುದುಮ್ ಅರ್ಜುನನ್ ವಿಜೃಂಭಿಸಿ)

**ಅರ್ಜುನ** : ಸುಯೋಧನ, ನೀನ್ ಮಾನಧನನ್ ಎನಿಸಿ, ನಿನ್ನ ಅಭಿಮಾನ ಕ್ಷತಿ ಮಾಡಿದಯ್... ಮತ್ತೆ ಈ ನೀರೊಳಗೆ ಎಸಡಿ ಇರ್ಕುಮ್... ಮೀನ್ ಇರ್ಕುಮ್... ಕಪ್ಪೆ ಇರ್ಕುಮ್... ಗಂಡರ್ ಇರ್ಪರೆ... ಕುಮರಂಕರಾಮ ನೃಪನೊಳ್ ಸಮರಮ್ ನಿನಗೆ ಅರಿದು... ಎನಗಮ್ ನಿನಗಮ್ ಸಮರಮ್ ತಕ್ಕುದು... ನಿನ್ನನ್ ನುಂಗಲ್ಕೆ ಅಮೋಘಶರಮ್ ಇರ್ದುವು... ಇವರ ಸವಿಯಮ್ ನೋಡಾ..

(ಎಂಬುದುಮ್, ಧರ್ಮನಂದನನ್ ಧೃತರಾಷ್ಟ್ರನಂದನನ್ ಮುನ್ನ ಗೆಯ್ದ ಅಧರ್ಮಮನ್ ನೆನೆಯದೆ... ಕುಲಕ್ರಮ ಯುಕ್ತಮಪ್ಪ ನಿರ್ಮಲ ಕ್ಷತ್ರಧರ್ಮಮನೆ ಬಗೆದು... ಇಂತು ಎಂದನ್.)

**ಧರ್ಮರಾಯ** : ಭರತಾನ್ವಾಯದೊಳ್ ಅಂದಿನಿಂದುವರೆಗಮ್ ಸಾಪತ್ನ್ಯದೊಳ್ ಬದ್ಧಮತ್ಸರವಿಲ್ಲ... ಎಮ್ಮನ್ ಅಕಾರಣಮ್ ಕದಡಿದಯ್... ಸಾವ್ ಎಯ್ದಿದಯ್... ನಷ್ಟಸೋದರಮ್ ಆದತ್ತು... ಎನಗಮ್ ಸ್ವಗೋತ್ರವಧೆಯಪ್ಪ ಆ ಪಾತಕಮ್... ಕೌರವೇಶ್ವರ, ನೀನ್ ಸಂಧಿಗೆ ಒಡಂಬಡು... ಇಂತು ಕೊಳನಮ್ ಪೊಕ್ಕಿರ್ಪುದೇನ್ ತಕ್ಕುದೇ..

(ಎಂಬುದುಮ್)

❖

## ನೋಟ–20

# ನೀರೊಳಗಿರ್ದುಮ್ ಬೆಮರ್ತನ್ ಉರಗಪತಾಕನ್

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಭೀಮಸೇನಾಡಂಬರಮ್'** ಎಂಬ ಹೆಸರಿನ 7 ನೆಯ ಅಧ್ಯಾಯದ 29 ನೆಯ ಗದ್ಯದಿಂದ 41 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ಅಯ್ದು ಮಂದಿ ಪಾಂಡವರಲ್ಲಿ ಒಬ್ಬ.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

## ನೀರೊಳಗಿರ್ದುಮ್ ಬೆಮರ್ತನ್ ಉರಗಪತಾಕನ್

ಆ ನುಡಿಗೆ ಸೈರಿಸದೆ...

**ಭೀಮ** : ಈ ಬೂತು ಎನ್ನ ಸರಮ್ ಕೇಳ್ದೊಡಲ್ಲದೆ ಪೊರಮಡುವನಲ್ಲನ್... ಇವಂಗೆ ಆನೆ ಬಲ್ಲೆನ್.

(ಎಂದು ಭೀಮಸೇನನ್ ಉದ್ದಾಮ ಕೋಪಾಟೋಪ ವಿರಚಿತ ಬದ್ಧಭ್ರುಕುಟಿಯಾಗಿ..)

**ಭೀಮ** : ಭವತ್ ಅನುಜನ ಅರುಣಜಲಮನ್ ಸವಿನೋಡಿದೆನ್... ಆನೆ ನಿನ್ನ ಬಲಜಲನಿಧಿಯಮ್ ಸವಿನೋಡಿದೆನ್... ಈ ಕೊಳನಮ್ ತವೆ ಪೀರ್ದು... ಬಳಿಕ್ಕೆ, ನಿನ್ನ ಸವಿಯಮ್ ನೋಳ್ಪೆನ್... ಎಲವೊ ಮರುಳೆ, ಎನ್ನ ಸ್ವರಮಮ್ ಕೇಳಲ್ಕೆ... ಉಗ್ರರೂಪಮನ್ ನಿಂದು ನೋಡಲ್ ಅಣ್ಮದೆ... ಸಮರಾಕರಮಮ್ ಬಿಸುಟ್ಟು... ಕಮಲಾಕರಮಮ್ ಪೊಕ್ಕು ಬರ್ದುಕಲ್ ಬಗೆವಾ... ಜಲದೊಳ್ ಮೀನ್ ಇರ್ಪವೊಲ್ ನೀನ್ ಕೊಳದೊಳೆ ಮುಳಿಗಿರ್ದು... ಅಕ್ಕಟಾ ಕೋಡ ಸೇಡಿಂಗೆ ಒಳಗಾದಯ್... ಇದು ನಿನ್ನ ದುರ್ಯೋಧನ ಪೆಸರ್ಗೆ ಲಜ್ಜಾಕರಮ್... ನಿನ್ನ ಅಳವಮ್ ತೋರಿದಯ್...

ಛೀಃ ಸತ್ತರ್ ಏನ್ ಪುಟ್ಟರೆ... ಈಗಳ್ ಕೌರವೇಂದ್ರಾಚಳವಜ್ರನ್ ಕುರುಕುಲಮಥನ ಉದ್ಭೀಕರನ್ ಭೀಮಸೇನನ್ ಬಂದನ್... ನೀನ್ ಪೊರಮಡು ಕಯ್ದುಗೊಳ್...

ಹರಿ ಸಂಧಾನಕ್ಕೆ ವಂದಂದು ಅವಗಡಿಸಿದ ಅಹಂಕಾರಮ್ ಎಲ್ಲಿತ್ತೊ... ಕೃಷ್ಣಾಂಬರ ಕೇಶಾಕೃಷ್ಟಿಯಮ್ ಮಾಡಿಸಿದ ಮದಮ್ ಅದೆಲ್ಲಿತ್ತೊ... ಕೌಂತೇಯರಮ್ ಮಚ್ಚರದಿಮ್ ಕಾಂತಾರದೊಳ್ ತಿರ್ರನೆ ತಿರಿಪಿದ ಸೊರ್ಕು ಈಗಳ್ ಏನಾದುದು...

(ಎಂದು ಆ ಕುರುವಂಶಾಧೀಶನನ್ ಅದಟನ್ ಉದ್ದಾಮಭೀಮನ್ ಭೀಮನ್ ಮೂದಲಿಸಿದನ್... ಮತ್ತಮ್ ಇರದೆ... ಅಜಾಂಡಮ್ ಒಡೆಯಲ್... ಕುಲಗಿರಿ ಕೆಡೆಯಲ್... ಧಾತ್ರಿ ಪಿಳಿಯಲ್ಕೆ... ದಿವಿಜರ್ ನಡುಗಲ್ಕೆ ಒಡರಿಸುವಿನಮ್ ಜಟಾಸುರ ಹಿಡಿಂಬ ಬಕವೈರಿ ಸಿಂಹನಾದಮ್ ಗೆಯ್ದನ್... ಅನಿಲತನೂಜನ ಸಿಂಹಧ್ವನಿಯಮ್ ಕೇಳ್ದು... ಅಳ್ಕಿ... ತತ್

ಸರೋವರದ ಎರ್ದೆ ಪವ್ವನೆ ಪಾರುವಂತೆ... ಕೊಳದೊಳಿರ್ದ ತತ್ ವಿಹಗಕುಳಮ್ ಅನಾಕುಲಮ್ ಪಾರಿದುವು... ಭೀಮಕೋಪಾನಳನ್ ಅಳುರ್ದು ಕೊಳೆ... ಎಯ್ದೆ ಎಸರ್ಗಾಯ್ದಿಟ್ಟ ತೆರದೆ ಆಗಳ್ ಕೊಳನ ಜಲಮ್ ಮರುಗಿದುದು... ಕಾಯ್ದ ಎಸರೊಳೆ ಕೂಳ್ ಕುದಿವಂತೆ ಅನಿಮಿಷ ತತಿಗಳ್ ಕುದಿದುವು... ಅಂತು ಜಲಚರ ಜೀವರಾಶಿಗಳೆಲ್ಲಮ್ ಅಸುಂಗೊಳೆ... ಗೋಳುಂಡೆಗೊಳೆ ಕೂಳ್ಗುದಿಗೊಳೆ... ಮಹೋತ್ತುಂಗ ಸಿಂಹಕೇತನನ್ ಸಿಂಹನಾದಮ್ ಗೆಯ್ಯೆ...

ಕೋಪಾರುಣ ನೇತ್ರನ್... ಉರಗಪತಾಕನ್... ಆ ರವಮನ್ ನಿರ್ಜಿತ ಕಂಠೀರವ ರವಮನ್... ನಿರಸ್ತ ಘನರವಮನ್ ಕೇಳ್ದು... ಆ ನೀರೊಳಗಿರ್ದುಮ್ ಬೆಮರ್ತನ್... ಅಂತು ಬೆಮರ್ತು ಉಮ್ಮಳಿಸಿ ಸೈರಿಸಲಾರದೆ... ಜಲಮಂತ್ರಮನ್ ಏನುಮನ್ ಬಗೆಯದೆ... ಕೋಪೋದ್ರೇಕಮನೆ ಬಗೆದು)

**ದುರ್ಯೋಧನ** : (ತನ್ನ ಮನದಲ್ಲಿ)

**"ಕೂರದರ್ ಎನ್ನನ್ ಸಲಿಲಸ್ತಂಭನ ವಿದ್ಯಾಬಲಮನ್ ಅಪೇಕ್ಷಿಸಿದನ್ ಎನ್ನದೆ... ಉರಗಪತಾಕನ್ ಬಲಹಾನಿಯಾಗೆ ಕೊಳದೊಳಗೆ ಉಳಿದಿರ್ದಪನ್"** ಎಂದು ನಗರೆ... ಕುಲದ

ಛಲದ ಚಾಗಮನ್ ಆಂತುಮ್... ಪುರುಷರ ಗಣನೆಗೆ ವಂದ ಎನ್ನನ್... ತೃಣವತ್ ಲಘುಜೀವಿತ ರಕ್ಷಣಾರ್ಥದಿಮ್ ಗುಣಹಾನಿಯಾಗಿ ಆನೆ ಲಘು ಮಾಡುವೆನೇ... ಮುನಿವನ್... ಮೂದಲಿಸಿಯುಮ್... ಇನ್ ಎನಿತುಮ್ ಪೊಕ್ಕಿರ್ಪೆನ್ .

(ಎಂದು ಚಿತ್ತಕ್ಷೋಭಮ್ ತನಗಾಗೆ... ಜಲಚರಕ್ಷೋಭ ನಿನಾದಮ್ ಪೊಕ್ಕು ಪೊಣ್ಮೆ... ವಿಭುವಿಕ್ಷೋಭನ್ ಆಗಳ್ ಆ ಜಲಸ್ತಂಭಮಂತ್ರಮೆಲ್ಲಮ್ ಪರಿಣಾಮ ರಮಣೀಯ ಮಾಗದೆ ಕಿಡೆಯುಮ್... ಅಹಂಕಾರಮ್ ಕಿಡದೆ... ನಿಜ ಮಕುಟ ಸ್ಫುರತ್ ಮಣಿಗಣಚ್ಛವಿಯಿಮ್ ಪಂಕಜವನದೊಳ್ ಸುರಚಾಪಲೀಲೆ ಮನಂಗೊಳಿಸೆ... ತನ್ನಯ ಮೇಗೆ ಒಗೆದಿರ್ದ ನೀಲನೀರಜ ವನದಿಮ್ ಕರಂಗಿ... ಆ ಭುಜಯುಗ ತೋರಣಾಯಿತ ಗದಾಪರಿಘನ್ ಫಣಿರಾಜಕೇತನನ್ ಕಮಲಾಕರದಿಮ್ ಆಗಳ್ ಪೊರಮಟ್ಟನ್.)

❖

## ನೋಟ–21

# ಭೀಮ ದುರ್ಯೋಧನರ ಮಾತಿನ ಯುದ್ಧ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನಾಡಂಬರಮ್' ಎಂಬ ಹೆಸರಿನ
7 ನೆಯ ಅಧ್ಯಾಯದ 42 ನೆಯ ಪದ್ಯದಿಂದ 59 ನೆಯ ಪದ್ಯದ ವರೆಗಿನ
ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಆಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಕೃಷ್ಣ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

# ಭೀಮ ದುರ್ಯೋಧನರ ಮಾತಿನ ಯುದ್ಧ

ರಸೆಯಿಮ್ ಕಾಲಾಗ್ನಿರುದ್ರನ್ ಪೊರಮಡುವವೊಲ್... ಅಂತು ಆ ಸರೋಮಧ್ಯದಿಮ್ ಸಾಹಸ ಗರ್ವಾಲಂಕೃತನ್ ತೊಟ್ಟನೆ ಕೊಳೆ ಪೊರಮಟ್ಟು

**ದುರ್ಯೋಧನ** : ಎಲ್ಲಿದನ್ ಭೀಮನ್.

(ಎಂದು ಎಣ್ದೆಸೆಯಮ್ ನೋಡುತ್ತೆ... ಮತ್ತೆ ಅದ್ಭುತ ನಟ ನಿಟಿಲಾಲೋಲ ಕೀಲಾಕ್ಷಿವೊಲ್ ಕೋಪಾರಕ್ತ ನೇತ್ರನ್ ದಳ್ಳಿಸೆ... ಧಾರ್ತರಾಷ್ಟ್ರನ್ ನಿಜ ಭುಜಗದೆಯಮ್ ತೂಗಿದನ್... ಅಂತು ನಿಜಭುಜಗದೆಯಮ್ ತೂಗುತ್ತುಮಿರ್ದ ದಂದಶೂಕ ಪತಾಕನ ಸೆರಗಿಲ್ಲದ ಮೆಯ್ಗಲಿತನಕ್ಕೆ ಮೆಚ್ಚಿ ತಲೆಯಮ್ ತೂಗಿ... ನಿಜ ಭುಜಪ್ರತಾಪ ನಿರ್ಜಿತ ನಿಖಿಲ ಭೀಮಸೇನನ್ ಕೌರವನ ಇದಿರ್ಗೆ ವಂದು)

**ಭೀಮ** : ನಿನ್ನ ಅನುಜನ ಅರುಣಜಲಮಮ್ ಮುನ್ನಮ್ ತವೆ ಪೀರ್ದೊಡೆ... ಅಂಜಿ ನೀನ್ ಕೊಳನಮ್ ಪುಗೆ... ಬೆನ್ನನೆ ಬಂದಾತನ್... ಶೌರ್ಯೋನ್ನತನ್ ಈ ಕೌರವಮಲ್ಲನ್ ಇರ್ದನಲ್ತೆ.

(ಎಂದು ನೆರನನ್ ಉಂಟುಮಾಡಿ ಮೂದಲಿಸಿ ನುಡಿಯೆ, ದುರ್ಯೋಧನನ್ ಅತಿ ಕ್ರೋಧಾನಲನಾಗಿ)

**ದುರ್ಯೋಧನ** : ಬಾಹುವಿಕ್ರಮಿ ದುಶ್ಶಾಸನನ್ ಯಮರಾಜಪ್ರಿಯ ಸೂನುಗಮ್... ನಿನಗಮ್... ಆ ಗಾಂಡೀವಧನ್ವಂಗಮ್... ಆ ಯಮಳರ್ಗಮ್ ಪ್ರಿಯೆಯಪ್ಪ ಕೃಷ್ಣೆಯ ಕಚಪ್ರಾರಂಭಮಮ್

ಎನ್ನ ಮುಂದೆ ತೆಗವಂದು ಎಲ್ಲಿರ್ದೆ... ಈ ಗಂಡಗರ್ವಮುಮ್ ಅಂದು ಎಲ್ಲಿಗೆ ಪೋಯ್ತು... ಷಂಡ, ನಿನಗೆ ಇಂದು ಈ ಗಂಡನ್ ಆರ್ ಮಾಡಿದರ್...

ಅಸುರನ್ ವಸುಧಾತಳಮನ್ ರಸಾತಳಕ್ಕೆ ಉಯ್ಯೆ ಹರಿ ತರಲ್ ಪೊಕ್ಕವೊಲ್... ಈ ವಸುಮತಿಯನ್ ಎತ್ತಿ ತರೆ ಕೊಳನಮ್ ಪೊಕ್ಕೆನ್... ನಿನ್ನಯ ದೆಸೆಯಿಮ್ ಅಂಜಿ ಪೊಕ್ಕೆನೆ... ನಾಳ್ಕಡೆಗಳೆದು... ಉರೆ ಬೇರಮ್ ಬಿಳ್ಕೆಯುಮನ್ ತಿಂದು... ನೀಮುಮ್ ವನದೊಳ್ ಅಡಗಿರೆ... ಈಗಳ್ ನೀಳ್ಕರಿಸಿ ನಿಂದುಮ್... ಬಿರುದುಮಮ್ ಬೀರಮುಮಮ್ ಪೇಳ್ ಕಮ್ಮೈಸುವರೆ... ಪುಟ್ಟಮ್ ಸಟ್ಟುಗಮನ್ ಕೊಂಡು ಅಟ್ಟಾರಿಸಿ ಬೋನಮಿಟ್ಟು ಬಂದೆಯೊ... ಗದೆಗೊಂಡು ಒಟ್ಟೈಸಿ ಕಾದುವಂತುಟು ತೊಟ್ಟನೆ ಕೊಳೆ ನಿನಗೆ ಗಂಡ ಗರ್ವಮುಮ್ ಆಯ್ತೇ... ಎಸರನಿಡುವ... ಅಕ್ಕಿ ಕರ್ಚುವ... ಬೆಸನಮ್ ಕಯ್ಗೆರೆವ... ಕಂಚು ಕರ್ಚುವ ಬೆಸನಮ್ ಬೆಸನಲ್ಲದೆ... ಮತ್ಸ್ಯನ ಬಾಣಸಿಗಂಗೆ ಆರ್ ಇತ್ತರ್... ಎಲವೊ ನಿನಗೆ... ಈ ಬೆಸನಮ್

(ಎಂದು ಮುಟ್ಟಿ ಮೂದಲಿಸಿ ನುಡಿಯೆ... ಭೀಮಸೇನಮ್ ಮುಗುಳ್ನಗೆ ನಕ್ಕು)

**ಭೀಮ** : ಪಿರಿಯಣ್ಣನ ನನ್ನಿಯನ್ ಆದರದಿಮ್ ಕಾಯಲ್ಕೆ ಪೆರರ್ಗೆ ಬಾಣಸುಗೆಯ್ದೆನ್... ಕುರುವಂಶ ಕೇಳ್, ನಿನ್ನ ಈ ಶರೀರ ಮಾಂಸದೊಳೆ ಮರುಳ್ಗೆ ಬಾಣಸುಗೆಯ್ವೆನ್... ಪಾಂಡುರಾಜ ಸುತರಮ್ ಜತುಗೇಹ ಅನಲದಾಹದಿಮ್... ವಿಶೇಷಾ ವಿಷ ಲಿಪ್ತ ಗುಪ್ತಾನ್ನದಿಮ್... ಕೃತಕ ದ್ಯೂತ ವಿನೋದದಿಮ್... ದ್ರುಪದಜಾ ಕೇಶ ಅಂಬರ ಆಕೃಷ್ಟಿಯಿಮ್... ಧೃತರಾಷ್ಟ್ರಾತ್ಮಜ, ಮುನ್ನಮ್ ಕೊಲಲ್ಕೆ ಒಡ್ಡಿದಯ್... ಗತಕಾಲಮ್ ಲಯಕಾಲಮಾಯ್ತು... ನಿನಗೆ ಇನ್ನು ಅಂತ್ಯಕಾಲಮ್ ಆಯ್ತು ಗಡಾ..

(ಎಂದು ಉರಗಧ್ವಜನನ್ ಮರ್ಮೋದ್ಘಾಟನಮ್ ಗೆಯ್ದು ಮೂದಲಿಸಿದ ಅನಿತರೊಳೆ... ಉರಗಧ್ವಜನ್ ನಿಂದು ಮುನಿದು ಅನಿಬರ ಮೊಗಮಮ್ ನೋಡಿ)

**ದುರ್ಯೋಧನ** : ಮಾದ್ರಿಪುತ್ರರ್ ಇರಲ್ ಇಂತು... ಈ ಬಡವುಗಳ್ ಅವರ್ಗಳ್ ಏಗೆಯ್ದಪರ್... ಧರ್ಮಪುತ್ರನ್ ಭೀಮನ್ ಹರಿಸುತನೊಡನೆ ಬೆರಸಿ ಈಗಳ್ ಈ ಮೂವರುಮ್ ಬರ್ಕೆ... ಮೇಣ್... ಅಯ್ವರೆ ಬರ್ಕೆ... ಕೃತಾಂತಾತ್ಮಜ ಪವನಜ ಗಾಂಡೀವಧನ್ವರ್ಕಳ್ ಈ ಮೂವರೊಳ್... ಒರ್ಬನ್ ಬರ್ಕೆ... ಎಂತುಮ್ ಕೃಷ್ಣನ್ ತೊಡರ್ದು ಅನಿಬರೊಳ್ ಬರ್ಕೆ... ಮೇಣ್... ಬನ್ನಮನ್ ಈವೆನ್

(ಎನೆ ಧರ್ಮನಂದನನ್ ಧೃತರಾಷ್ಟನಂದನನ್ ಮುನ್ನ ಗೆಯ್ದ ಅಧರ್ಮಮನ್ ನೆನೆಯದೆ... ನಿರ್ಮಲಕ್ಷತ್ರ ಧರ್ಮಮನ್ ನೆನೆದು..)

**ಧರ್ಮರಾಯ** : ಸಮರಮ್ ಆಗದು... ಶಮಯುತನಾಗು... ಮಹಾಭೋಗಿಯಾಗು... ನಿನ್ನಾಳ್ವ ಮಹೀಭಾಗಮುಮನ್ ಸಕಲ ಮಹೀಭಾಗಮುಮನ್ ನೀನೆ ಕೊಂಡು ಸುಖಮಿರಲಾಗಾ... ಕುರುಕುಲ ಕ್ಷ್ಮಾಪಾಲ ಚೂಡಾಮಣೀ, ಧರಣೀ ಚಕ್ರಮನ್ ಒಪ್ಪುಗೊಳ್... ವಿದ್ವೇಷಮನ್ ಬಗೆಯದಿರ್... ನಮ್ಮನ್ ಅಯ್ವರನ್ ಇನ್ನು ಆಳ್ವೆಸಕೆಯ್ಸಿಕೊಳ್... ಕೀಳ್ವೊಕ್ಕಿನೊಳ್ ನೆನೆಯದಿರ್... ತೊಟ್ಟುಕೊಂಡಿರದೆ ಎಮ್ಮ ಎಂಬುದನ್ ಇಂಬುಕೆಯ್... ಮನದೊಳ್ ಒಳ್ಪಿಮ್ ಶಾಂತಿ ವಿಶ್ರಾಂತಿ ಸೋದರನ್ ಎಂಬಂತು ಉಪಶಾಂತಿಯಮ್.

(ಎನೆ ಹರಿಯೆಂದನ್)

**ಕೃಷ್ಣ** : ದುರ್ಯೋಧನ, ಧರ್ಮತನೂಜನ್ ಒಳ್ಪಿತಮ್ ಪೇಳ್ದಪನ್. ಆತನ ಪೇಳ್ದುದ ಎಸಗಿ... ನೀನ್ ಅರಸನಾಗಿ ವಸುಮತಿಯನ್ ಆಳ್ದು ಸುಖಮಿರಲಾಗ.

(ಎಂಬುದುಮ್ ಭೀಮಸೇನನ್ ಇಂತು ಎಂದನ್.)

**ಭೀಮ** : ನೀನ್ ಅಯ್ದು ಬಾಡದೊಳ್ ಸಂಧಾನಮ್ ಮಾಡಲ್ಕೆ ಪೋದೊಡೆ ಒಲ್ಲದನ್... ಇನ್ನು ಈ ಮಾನಧನನ್... ಎಯ್ದೆ ನಿಜತನುಜ ಅನುಜರ್ ಅಳ್ಕಾಡೆ... ಸಂಧಿಯಮ್ ಮಾಡುವನೇ.

(ಎನೆ, ದುರ್ಯೋಧನನ್ ಭೀಮಸೇನನ ನುಡಿಯನೆ ಸಮರ್ಥಿಸಿ..)

**ದುರ್ಯೋಧನ :** ಕಮಲನಾಭ, ಇನತನಯನ ನೇಪಿರ್ಗೆ ಮುನ್ ಅರ್ಜುನನನ್ ಕೊಲ್ವೆನ್... ಎನ್ನ ತಮ್ಮನ ನೇಪಿರ್ಗೆ ಅನಿಲಜನನ್ ಕೊಲ್ವೆನ್... ನೇಪಿರ್ಗೆ ನೇರ್ಪುಗೊಳ್ಳದೆ ಮಾಣೆನ್ ತಾನ್ ಗಡ... ಮಧ್ಯಸ್ಥನ್ ನುಡಿವನ್ ಗಡ... ಪುದುವಾಳ್ಕೆ ಎನಗಮ್ ಅವರ್ಗಮ್ ಸಂಧಾನಮ್ ಗಡ... ಮುನ್ನಮ್ ಸಂಧಿಯ ಮಾತಮ್ ಲಂಘಿಸಿದನ್... ಇನ್ನು ಒಡಂಬಟ್ಟಪೆನೇ...

ವನವಾಸಮಲಿನನನ್ ಯಮತನಯನನ್ ಉಜ್ವಳಿಸಿ... ಗೋತ್ರ ಧವಳನನ್ ಎನ್ನನ್ ಘನಮಲಿನಮ್ ಮಾಡಿದೆ... ಕೃಷ್ಣ, ನಿನ್ನ ವೋಲ್ ಶ್ವೇತಕೃಷ್ಣಕಾರಕರ್ ಒಳರೇ... ಯದುಕುಲ ಜಲನಿಧಿಯೊಳ್ ಅಮರ್ದುಮ್ ನಂಜುಮ್ ಒಡನೆ ಪುಟ್ಟುವ ವೋಲ್... ಅಂಕದ ಹಲಿಯುಮ್ ನೀನುಮ್ ಪುಟ್ಟಿದಿರ್... ಅದರ್ಕೆ ಅತ್ತ ಬಲನ್ ಗುಣಿಯಾದನ್... ನೀನ್ ನಿರ್ಗುಣಿಯಯ್ .

(ಎಂಬ ಅನ್ನೆಗಮ್, ಆ ಪ್ರಸ್ತಾವದೊಳ್)

❖

## ನೋಟ–22

# ಬಲರಾಮನ ಬರುವಿಕೆ... ಗದಾಯುದ್ಧ ಸಿದ್ಧತೆ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'ಭೀಮಸೇನಾಡಂಬರಮ್'** ಎಂಬ ಹೆಸರಿನ 7 ನೆಯ ಅಧ್ಯಾಯದ 60 ನೆಯ ಪದ್ಯದಿಂದ 68 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಬಲರಾಮ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಕೃಷ್ಣನ ಅಣ್ಣ. ದುರ್ಯೋಧನನ ಹಿತಚಿಂತಕ.

**ಕೃಷ್ಣ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ರಾಜ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

# ಬಲರಾಮನ ಬರುವಿಕೆ... ಗದಾಯುದ್ಧ ಸಿದ್ಧತೆ

ಆ ಪ್ರಸ್ತಾವದೊಳ್ ಹಲ ಮುಸಲಪಾಣಿ... ಮಧುಪಾಟಲ ನೇತ್ರನ್ ನೀಲವಸನನ್... ಆ ಧವಳಾಂಗನ್... ಏಕಕುಂಡಲನ್... ತಾಳಲಕ್ಷನ್ ಬಲನ್ ಕುರುಕುಲನನ್ ಕೂಡಲ್ಕೆ ಬಂದನ್. ಅಂತು ಸುಯೋಧನಂಗೆ ಸೈಪು ಬರ್ಪಂತೆಯುಮ್... ಜಂಗಮ ಹಿಮಾಚಲಮೆ ಬರ್ಪಂತೆಯುಮ್... ಸಂಕರ್ಷಣನ್ ಬಂದು... ತಮ್ಮನಿಬರ್ ಒಂದಾಗಿ ಗೊಂದಣಿಸಿ ನಿಂದ ಪಾಂಡುನಂದನರುಮನ್... ಏಕಾಕಿಗನಾಗಿ ಸಾವಿಯ ದೇಸಿಗನಾಗಿ ನಿಂದ ಕುರುಕುಲಸ್ವಾಮಿಯುಮನ್ ಕಂಡು... ದೇವಕೀನಂದನನ ವದನಾರವಿಂದಮನ್ ನೋಡಿ ವಿಸ್ಮಯಾಕ್ರಾಂತಚಿತ್ತನಾಗಿ... ಮನದೊಳ್ ಕಟ್ಟುಕಡೆದು... ತನಗೆ ಎರಗಿದ ಫಣಿರಾಜಕೇತನನನ್ ಮನದೆ ಎರಕದಿಮ್ ಪರಸಿ... ಗರುಡಕೇತನನುಮನ್ ಪಾಂಡವರುಮನ್ ಪರಸಲೊಲ್ಲದೆ ಮುಳಿದು... ತಮ್ಮನನ್ ಅಯ್ವರುಮನ್ ನೋಡಿ... ಕೌರವಕುಲ ಚೂಡಾಮಣಿಯೊಳ್

**ಬಲರಾಮ** : ಏನನ್ ಆಳೋಚಿಸಿದಯ್.

(ಎಂದು ನುಡಿದ ಹಲಾಯುಧನ ನುಡಿಗೆ ಚಕ್ರಾಯುಧನ್ ಇಂತು ಎಂದನ್. ದುರ್ಯೋಧನನು ಬಲರಾಮನ ಮಾತಿಗೆ ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಕೃಷ್ಣನು ಅಣ್ಣ ಬಲರಾಮನೊಡನೆ ಯುದ್ಧದ ಸಂಗತಿಯನ್ನು ಕುರಿತು ಮಾತನಾಡತೊಡಗುತ್ತಾನೆ.)

**ಕೃಷ್ಣ** : ಅಗ್ರಜಾತ, ನೀಮ್ ಎನಗೆ ಅಭಿವಂದಿತಾರ್ಥರ್... ಚಿತ್ತದೊಳ್ ಮುನಿಯದೆ ಅವಧಾರಿಸು... ಪಾಂಡುನಂದನರ್ಗೆ ಬಾಡಮನ್ ಅಯ್ದನೆ ಬೇಡೆ ಪೋಗೆ... ದ್ರೋಣನ ಧೃತರಾಷ್ಟ್ರ ಸಿಂಧುಸುತರ್ ಎಂದುದನ್ ಎನ್ನದೆ... ನೀವ್ ಇದಮ್ ಸುಯೋಧನನೊಳೆ ಕೇಳ್ದು ನಂಬುವುದು... ಫಣಿರಾಜಕೇತನನ್ ಎರಳ್ನುಡಿಯನ್.

(ಎನೆ ದುರ್ಯೋಧನನ್ ಎಂದನ್.)

**ದುರ್ಯೋಧನ** : ಏಕೆ ಮುನಿವಿರ್... ಪಾಂಡುನಂದನರ್ ನಿರ್ದೋಷಿಗಳ್. ಎಂತುಮ್ ಇವರೊಳ್ ಸಂಧಾನಮನ್ ಮುನ್ನಮ್ ಆನ್ ಒಲ್ಲೆನೆ... ಒಂದನೆ ಪೇಳ್ವೆನ್... ತನುಜಾತರ್ ಪಲಬರುಮ್ ಸತ್ತರ್... ಎನಸುಮ್ ತತ್ ದುಃಖಮನ್ ಸೈರಿಸಲ್ಕೆ ಬಂದಪುದಿಲ್ಲ. ಪಗೆವರ್ ಬರ್ಕೆ... ಸನ್ನದ್ಧನಾಗಿ ಇರ್ದಪೆನ್. ಅವಧಾರಿಪುದು... ಇವರ್ ಎನ್ನ ಅನುವರಮನ್ ನೋಡುವುದಲ್ಲದೆ... ಬೇರೆ ಪೆರವು ಮಾತಿಂಗೆ ಎಡೆಯಿಲ್ಲ.

(ಎಂದೊಡೆ.. ಮುಸಲಪಾಣಿ ಕೌರವೇಂದ್ರನನ್ ಮನದೊಳ್ ಪೊಗಳ್ದನ್... ಅಂತು ಪೊಗಳ್ದು ರಾಜರಾಜನ ನಿರ್ವ್ಯಾಜ ಶೌರ್ಯಕ್ಕೆ ಸಂಕರ್ಷಣನ್ ಆಶ್ಚರ್ಯಮ್ ಪಟ್ಟು... ಪೆರತೇನುಮನ್ ಎನಲ್ ಅರಿಯದೆ, ಧರ್ಮನಂದನಾದಿಗಳ ಮೊಗಮನ್ ನೋಡಿ)

**ಬಲರಾಮ** : ನಿಮ್ಮ ಅಯ್ವರೊಳ್ ಆರಾಗಿಯುಮ್ ಈತನೊಳ್ ಒರ್ವನೆ ಕಾದುವುದು... ಕಾದಿ ಗೆಲ್ದಿಮ್ ಬಳಿಕ್ಕೆ... ದುರ್ಯೋಧನನ್ ನೆಲನನ್ ಆಳ್ವನ್... ಆತಂಗೆ ಉಳಿದ ನಾಲ್ವರ್ ಬೆಸಕೆಯ್ದು ಬಾಳ್ವಿರ್.

(ಎಂದು ನುಡಿಯೆ... ಭೀಮಸೇನನ್ ಇದಿರ್ಗೆ ವಂದು)

**ಭೀಮ** : ಹಲಾಯುಧ, ಅರಮಗನ್ ಇರ್ಕೆ... ಅರ್ಜುನನ್ ಇರ್ಕೆ... ಅರಿಕೆಯ ಮಾದ್ರೀಸುತರ್ಕಳ್ ಇರ್ಕೆ... ಅಳಿವಗೆಯನ್ ಪರಿಪಡಿಸಲ್ಕೆ ನೆರೆದಿರ್ದಪೆನ್... ಕೌರವನನ್ ಎನಗೆ ತೋರಿ ಬಿಡು.

(ಅಂತು ಮರುತ್ ನಂದನನ್ ರೋಹಿಣೀ ನಂದನಂಗೆ

ನುಡಿದು, ದ್ವಂದ್ವಯುದ್ಧಕ್ಕೆ ಧರ್ಮನಂದನಾದಿಗಳ ಮೊಗಮನ್ ನೋಡಿ)

**ಭೀಮ** : ಆನ್ ಪಗೆಗೆ ಮೊದಲಿಗನೆನ್... ಅಂತು ಕೌರವನ್ ಇಡುವಗೆ... ಅದರ್ಕೆ ನೀಮ್ ಎಲ್ಲಮ್ ಇಲ್ಲಿ ದಾಯಿಗತನಮನ್ ತೋರಲ್ ತಗದು... ಈತನ್ ಮುನ್ನಮ್ ಎನಗೆ ದೊರೆಯಾಗಿರ್ದನ್.

(ಎಂಬುದುಮ್, ಧರ್ಮನಂದನಾದಿಗಳ್ ಇರ್ದು... ಮಾರುತಿಗಮ್ ಫಣಿರಾಜಕೇತನಂಗಮ್ ಧರ್ಮಯುದ್ಧಮನೆ ಸಮಕಟ್ಟಿದಾಗಳ್... ವನರುಹನಾಭನ ಬಲದೇವನ ಸಾಕ್ಷಿಯೊಳಿರ್ದು... ಕೌರವೇಶ್ವರನ್ ಆ ಭೀಮನ ಕಯ್ವೊಯ್ದೊಡೆ... ತತ್ ದೇವನಿಕಾಯಮ್ ಕುರುಪತಿಯಾ ಅದಟುಮನ್ ಪೊಗಳ್ದರ್... ಅಂತು ಧರ್ಮಯುದ್ಧಮಮ್ ಕೈವೊಯ್ದಾಗಳ್... ಕುರುಕ್ಷೇತ್ರದೊಳ್ ಎಡೆ ಎನಿತು ಅನಿತುಮ್ ಬರಿದಿಲ್ಲದಂತು ಶವಶತದಿಮ್ ತೆಕ್ಕನೆ ತೀವೆ... ರಣೋತ್ಸವದಿಂದೆ ಅನಿಲಸುತನ್ ಕೊಳ್ಗುಳಮನ್ ತಾನೆ ಸಮರಿದನ್.)

**ಭೀಮ** : ಪುದುವೆತ್ತ ಎಕ್ಕಟಿಗಾಳೆಗಮ್ ಸಮನಿಸಿತ್ತು... ಎಮ್ಮ ಈ ಗದಾಯುದ್ಧಮನ್ ತ್ರಿದಶರ್ ನೋಡಲೆ ಕೌತುಕಮ್ ಬೆರಸಿ ನಭೋಭಾಗದೊಳ್ ಬಂದಿರ್ದರ್... ಮದವತ್ ವೈರಿಯನ್ ಇಕ್ಕಿ ಭೂವಳಯಮಮ್ ನಿಷ್ಕಂಟಕಮ್ ಮಾಳ್ಪೆನ್.

(ಎಂಬುದನ್ ಎಂದು, ಆಹವಲಂಪಟನ್ ಚಾಳುಕ್ಯ ಕಂಠೀರವನ್ ಮಸಗಿದನ್.)

❖

## ನೋಟ–23

# ಸಮಬಲರ ಗದಾಯುದ್ಧ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಗದಾಯುದ್ಧಂ' ಎಂಬ ಹೆಸರಿನ 8 ನೆಯ ಅಧ್ಯಾಯದ ಒಂದನೆಯ ಗದ್ಯದಿಂದ 15 ನೆಯ ಪದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

## ಸಮಬಲರ ಗದಾಯುದ್ಧ

ಅಂತು ಸಮರ ಉತ್ಸುಕಚಿತ್ತನಾಗಿ ಸಾಹಸಭೀಮನ್ ದ್ರೋಣಾಚಾರ್ಯರ್ಗೆ ಮನದೊಳ್ ನಮಸ್ಕಾರಮ್ ಮಾಡಿ... ದುರ್ಯೋಧನನ್ ಬಲದೇವಂಗೆ ನಮಸ್ಕಾರಮ್ ಮಾಡಿ... ಕನಕ ರಜತ ವಿಚಿತ್ರ ಅಲಂಕೃತ ಸ್ವರೂಪ ಸಮನ್ವಿತಂಗಳಪ್ಪ ಗದೆಗಳನ್ ಇರ್ವರುಮ್ ಆಯ್ದುಕೊಂಡು ವೈಶಾಖಸ್ಥಾನದೊಳ್ ನಿಂದು... ಸ್ಥಿರಬದ್ಧ ಮತ್ಸರರ್... ಭೀಕರಬದ್ಧ ಭ್ರುಕುಟಿಘಟಿತರ್... ಅದ್ಭುತರ್ ಅಟ್ಟಾಸುರರ್... ಅಧಿಕ ಕೋಪ ಪಾಟಲ ಪರುಷೇಕ್ಷಣರ್ ಎನಿಸಿ ದೃಷ್ಟಿಯುದ್ಧಮ್ ಗೆಯ್ದರ್.

ಭೀಮದುರ್ಯೋಧನರಾ ಕಡೆಗಣ್ಣೊಳ್ ಪಸರಿಸೆ ಕಡುಗೆಂಪು... ದೆಸೆದೇವತೆಗಳ್ಗೆ ಜಪಾಪ್ರಸೂನಮಮ್ ರಕ್ತಬಲಿಯುಮಮ್ ತಾಮ್ ಕುಡುವಂತೆ ಎಸೆದಿರ್ದರ್... ಉರಿಯನ್ ಉಗುಳ್ವಂತೆ... ಬಿಸುನೆತ್ತರನ್ ಎತ್ತಮ್ ಸೂಸುವಂತೆ... ಬಿಚ್ಚನೆ ಬಿಟ್ಟಿರ್ದ ಎರಡುಮ್ ಕಣ್ಗಳೊಳ್ ಅವರ್ ಒರ್ಬರನ್ ಒರ್ಬರ್ ನುಂಗುವಂತೆ... ಎನಸುಮ್ ನೋಡಿದರ್...

ಉದಯಾದ್ರಿಯುಮ್ ಅಸ್ತಾದ್ರಿಯುಮ್ ಉದಗ್ರ ಕೋಪ ಉತ್ಕರಂಗಳ್ ಇರ್ಪರ್ಂತಿರೆ... ಉನ್ನತಮೂರ್ತಿಗಳ್ ಭೀಮ ಭುಜಗಧ್ವಜರುಮ್ ಗದಾಯುಧದೆ ಒದವಿ ನೀಳ್ದು

ಒದವಿದರ್... ಮುಂದಮ್ ಕಿರಿಕಿರಿದೆ ಮೆಟ್ಟಿ... ಕಿರಿಕಿರಿದನೆ ಸಾರ್ಚಿ... ತಮ್ಮ ಗದೆಗಳನ್ ಆಗಳ್ ಕಿರಿಕಿರಿದೆ ತಿರಿಪಿ... ಮಾಣದೆ ಕಿರಿಕಿರಿದನೆ ತೂಂಕಿ ತೂಂಕಿ... ಎನಸುಮ್ ನೂಂಕಿದರ್... ಎಡದ ಅಡಿಯಮ್ ಪುಗಿಸುವ... ಬಲದ ಅಡಿಯಮ್ ಪೊರಗಿಡುವ... ದಂಡೆಯಮ್ ನಿಳ್ಕುವ... ಕಯ್ ನಡುಗದೆ ಗದೆಯನ್ ಬೀಸುವ... ಭೀಮ ದುರ್ಯೋಧನರಾ ಬೆಡಂಗು ರಂಜಿಸಿತು.

ಧಪ್ಪರಿ ಧಟ್ಟುಮ್ ಪೊಟ್ಟೆನೆ... ಧೊಪ್ಪ ಧೊಗಪ್ಪೆನೆ... ದಿಧಿಲ್ ಬುಧಿಲ್ಲೆನೆ... ಮೆಯ್ಗಳ್ ಸೊಪ್ಪುಸೊವಡಪ್ಪಿನಮ್ ಸೂಳ್ ತಪ್ಪದೆ ಕಡುಕೆಯ್ದು ಒರ್ವರನ್ ಒರ್ವರ್ ಪೊಯ್ದರ್... ಪಗಲ್ ಉಳ್ಕಮ್ ಉಳ್ಕುವಂದದಿನ್ ಒಗೆವ ಗದಾಶಲ್ಕಮ್ ಉಳ್ಕೆ... ದಿವಿಜರ್ ಕಣ್ಣಮ್ ಮುಚ್ಚಲ್ ಬಗೆಯೆ... ಕುರುಪಾಂಡವರ ಆ ಗದಾ ಆಹವಮ್ ಅಗುರ್ವುಮ್ ಅದ್ಭುತಮುಮ್ ಆಯ್ತು...

ಗದೆ ಗದೆಯನ್ ಘಟ್ಟಿಸೆ... ಪುಟ್ಟಿದ ಕೆಂಡದ ಕಿಡಿಯ ತಂಡ ಎಣ್ಟುಮ್ ದೆಸೆಯಮ್ ಪುದಿಯೆ... ಪದಧೂಳಿ ಗಗನದೊಳ್ ಒದವೆ... ಸುರರ್ ಬೆದರೆ... ಕಡುಗಲಿಗಳ್ ಕಾದಿದರ್... ವಾರಣ ರಕ್ತಸಿಕ್ತ ಮೃಗರಾಜಯುಗಕ್ಕೆ... ನವಪ್ರಸೂನ ರಾಗ ಅರುಣ ಕಿಂಶುಕ ದ್ರುಮಯುಗಕ್ಕೆ... ಸಧಾತು ಕುಭೃತ್ ಯುಗಕ್ಕೆ... ಸಿಂದೂರಿತ ಗಂಧ ಸಿಂಧುರಯುಗಕ್ಕೆ ಎಣೆ ಎಂಬಿನಮ್... ರುಧಿರಾಕ್ತಮೂರ್ತಿಗಳ್ ಕೌರವರಾಜನುಮ್ ಕುರುಕುಲಾಂತಕನುಮ್ ಅಣ್ಮಿ ಕಾದಿದರ್

**ದುರ್ಯೋಧನ** : ಕರಿಯಮ್ ನುಂಗಿ ಕಳಿಂಗನನ್ ನೊಣೆದ ದರ್ಪಕ್ಕೆ ಒಂದುಗೊಳ್... ಮತ್ ಸಹೋದರರಮ್ ಕೋಪದೆ ತಿಂದುದರ್ಕೆ ಎರಡುಗೊಳ್... ದುಶ್ಶಾಸನ ಉರಸ್ಥಳ ಕ್ಷರತ್ ಅಸ್ರಾಂಬುವನ್ ಆರ್ದು ಪೀರ್ದ ಮುಳಿಸಿಂಗಮ್ ಮೂರುಗೊಳ್ಳ್

(ಎಂದು ಮಚ್ಚರದಿಂದೆ ಓವದೆ... ದುರ್ಯೋಧನನ್ ಗದೆಯಮ್ ಎತ್ತಿ ಭೀಮನನ್ ಪೊಯ್ದನ್ ಎಂದು ಮುಟ್ಟಿ ಮೂದಲಿಸೆ)

**ಭೀಮ** : ಇದು ಲಾಕ್ಷಾಗೇಹ ದಾಹಕ್ಕೆ... ಇದು ವಿಷಮ ವಿಷಾನ್ನಕ್ಕೆ... ಇದು ಆ ನಾಡ ಜೂದಿಂಗೆ... ಇದು ಪಾಂಚಾಲೀ ಪ್ರಪಂಚಕ್ಕೆ... ಇದು ಕೃತಕ ಸಭಾಲೋಕನ ಭ್ರಾಂತಿಗೆ

(ಎಂದು ಕಾಲ್ಗಳಮ್... ತೋಳ್ಗಳಮ್... ಅಗಲುರಮಮ್ ಕೆನ್ನೆಯಮ್... ನೆತ್ತಿಯಮ್... ಅಯ್ದುಮ್ ದುರ್ನಯಕ್ಕೆ ಅಯ್ದು ಎಡೆಯನ್ ಭೀಮಸೇನನ್ ಕೋಪದಿನ್ ಉರು ಗದಾದಂಡದಿಮ್ ಓವದೆ ಪೊಯ್ದನ್...

ಚರಣಾಕ್ರಾಂತಮ್ ಮಹೀಮಂಡಲಮ್ ಅದಿರೆ... ಭುಜಾಕ್ರಾಂತಮ್ ಆಶಾಗಜೇಂದ್ರ ಉತ್ಕರಮ್ ಆಶಾಭಿತ್ತಿಯಿಂದಮ್ ಪೆರದೆಗೆಯೆ... ಗದಾಕ್ರಾಂತಮ್ ಉದ್ಭ್ರಾಂತ ವಿದ್ಯಾಧರಚಕ್ರಮ್ ನಿಜವಿಮಾನಂಗಳಮ್ ಗೆಂಟುಗೆಂಟಾಗಿರಿಸೆ... ಆ ಕಲ್ಪಾಂತಕಾಲಮ್ ಭೈರವ ಆಡಂಬರಮ್... ಭೀಮ ದುರ್ಯೋಧನೀಯಮ್ ಸಮರಮ್ ನೆಗಳ್ದುದು.

ನೆಲಸಿದ ಬಿನ್ನಣಮ್ ಸೆಣಸಿ ಬಿನ್ನಣಮಮ್ ಗೆಲೆ... ಕಾಣ್ಕೆ ಕಾಣ್ಕೆಯಮ್ ಗೆಲೆ... ಜವಮಮ್ ಜವಮ್ ಗೆಲೆ... ಬಲಮ್ ಬಲಮಮ್ ಗೆಲೆ... ದಂಡೆ ದಂಡೆಯಮ್ ಗೆಲೆ... ಮುಳಿಸು ಉಣ್ಮಿ ಪೊಣ್ಮಿ ಮುಳಿಸಮ್ ಗೆಲೆ... ಸತ್ತ್ವದ ಅಳುರ್ಕೆ ಸತ್ತ್ವಮಮ್ ಗೆಲೆ... ಕುರು ಪಾಂಡುತನೂಭವರ್ ಒರ್ವರ್ ಒರ್ವರಮ್ ಗೆಲಲ್ ಆರ್ತರಿಲ್ಲ.)

❖

## ನೋಟ–24

# ದುರ್ಯೋಧನನ ಧರ್ಮಯುದ್ಧ... ಭೀಮಸೇನನ ಗೆಲುವು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಗದಾಯುದ್ಧಂ' ಎಂಬ ಹೆಸರಿನ 8 ನೆಯ ಅಧ್ಯಾಯದ 16 ನೆಯ ಪದ್ಯದಿಂದ 29 ನೆಯ ಗದ್ಯದವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಅರ್ಜುನ** : ದೇವೇಂದ್ರನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ನಕುಲ** : ಅಶ್ವಿನಿ ದೇವತೆಗಳ ಅನುಗ್ರಹದಿಂದ ಮಾದ್ರಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ಸಹದೇವ** : ಅಶ್ವಿನಿ ದೇವತೆಗಳ ಅನುಗ್ರಹದಿಂದ ಮಾದ್ರಿಯ ಹೊಟ್ಟೆಯಲ್ಲಿ ಹುಟ್ಟಿದವನು. ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ.

**ಬಲರಾಮ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಕೃಷ್ಣನ ಅಣ್ಣ. ದುರ್ಯೋಧನನ ಹಿತಚಿಂತಕ.

# ದುರ್ಯೋಧನನ ಧರ್ಮಯುದ್ಧ... ಭೀಮಸೇನನ ಗೆಲುವು

ಅಂತು ನೆಳಲೊಳ್ ಪೋರ್ಕುಳಿಯಾಡುವಂತೆ... ಒರ್ವರ್ ಒರ್ವರಮ್ ಗೆಲಲ್ ನೆರೆಯದಿರೆ... ದುರ್ಯೋಧನನ್ ಕರಮ್ ಮುಳಿದು... ಕುರುರಾಜನ್ ವಿದ್ಯಾಧರಕರಣದೆ ಅಂಬರಕ್ಕೆ ನೆಗೆದು... ಗದೆಯಮ್ ಕ್ರಮದಿಮ್ ತಿರಿಪೆ ಧರಾಚಕ್ರಮ್ ಕೋವರ ಚಕ್ರಮ್ ತಿರಿವ ತೆರದೆ ಎನಸುಮ್ ತಿರಿದತ್ತು...

ಅಂತು ಮೂದಲಿಸದೆ ಇರಿವುದು ತುಳಿಲಾಯ್ತುಮಲ್ಲೆಂದು ಮುಟ್ಟಿ ಮೂದಲಿಸಿ... ತೆರಪಮ್ ನಿಟ್ಟಿಸಿ... ಕುರುಪತಿ ಬರಸಿಡಿಲ್ ಎರಗುವವೊಲ್ ಎರಗಿ ಪೊಯ್ಯಲೊಡಮ್... ಪವನಜನುಮ್ ಏನೆಂದು ಅರಿಯದೆ ಮತಿವಿಕಳನಾಗಿ ಮೆಯ್ ಮರೆದು ಮೂರ್ಛೆಗೆ ಸಂದನ್...

ಅಂತು ಕುಲಿಶಾಭಿಘಾತದೊಳ್ ನೀಲಾಚಲಮೆ ಕೆಡೆವಂತೆ ಕೆಡೆದು... ಮೂರ್ಛಾಗತನಾಗಿರ್ದ ಭೀಮಸೇನನ ಇರವಮ್ ಕಂಡು... ಗಾಂಡೀವಿ ಕೋಪಾತುರ ಆಟೋಪಮನ್ ತಾಳ್ದಿ...

**ಅರ್ಜುನ** : ಎಲ್ಲಿಯ ಬಲದೇವನ್... ಮತ್ತೆಲ್ಲಿಯ ಸತ್ಯ ವ್ಯವಸ್ಥೆ... ದುರ್ಯೋಧನನನ್ ಕೊಲ್ಲದಿರೆನ್.

(ಎಂದು ಭಾರತ ಮಲ್ಲನ್ ಗಾಂಡಿವಕೆ ಕರತಳಮಮ್ ನೇರಿದನ್)

**ನಕುಲ** : ಹಲಿ ಮುಳಿದು ಏವನ್ ?

**ಸಹದೇವ** : ಕೃಷ್ಣನ್ ಮುಳಿದು ಏವನ್ ?

**ನಕುಲ** : ಧರ್ಮನಂದನನ್ ಮುಳಿದು ಏವನ್ ?

**ನಕುಲ/ಸಹದೇವ:** ಮುಳಿದರನ್ ಇಕ್ಕುವೆವು.

(ಎಂದು ನಕುಲ ಸಹದೇವರ್ಕಳ್ ಇರಿಯಲ್ಕೆ ಉಮ್ಮಳಿಸಿದರ್.)

**ಧರ್ಮರಾಯ** : ಅರಿಗೆ ಇಂಬಾಯ್ತು... ಮರುತ್ ಸುತಂಗೆ ಅಳಿವಾದುದು... ಅರ್ಜುನಾದಿಗಳ್ ಮೂವರುಮ್ ಮುಳಿದರ್... ಎನ್ನ ನನ್ನಿಗೆ ಈಗಳೆ ಪರಿಭವಮ್ ಆಯ್ತು.

(ಎಂದು ಧರ್ಮಜನ್ ಚಿಂತಿಸಿದನ್... ಹಲಧರನ ಅಲರ್ದ ಮೊಗಮುಮ್... ಧರ್ಮತನಯನ ತಲೆಯಮ್ ಬಾಗಿರ್ದ ಮೊಗಮುಮ್... ಜಲರುಹನಾಭನ್ ಕಂಡು... ಎರ್ದೆ ಕಲಂಕಿ ಗಾಂಡಿವಿಯನ್ ಕಣ್ಣುರ್ಬು ಜರ್ಬಿದನ್... ಆ ಪ್ರಸ್ತಾವದೊಳ್ ಧಾತು ನಿರ್ಜರಗಿರಿ ಕೆಡೆವಂತು ಕೆಡೆದಿರ್ದ ಪಗೆಯಮ್ ನೋಡಿ... ಧರ್ಮಯುದ್ಧಮುಮ್ ನೆನೆದು)

**ದುರ್ಯೋಧನ** : ಬಿಳ್ದನನ್ ಇರಿಯೆನ್ .

(ಎಂಬ ಈ ಬಿರುಬಿಂದಮ್ ಬೀಸೆ... ಗದೆಯ ಗಾಳಿಯ ಕೋಳ್... ಮೆಯ್ ಮರೆದವನನ್ ಭೀಮನನ್ ಎಳ್ಚರಿಸಿದುದು... ಸುತರ್ಗೆ ಕೂರದರ್ ತಂದೆ ಒಳರೇ... ಅಂತು ಮೂರ್ಛೆಯಿಮ್ ಮಾರುತಿ ಎಳ್ಚತ್ತಾಗಳ್... ಪೊಡೆಯಲರಾತನ್ ರಾಗದೆ ತೊಡೆಯಮ್ ಪೊಯ್ದು ಆರ್ವ ನೆವದೆ ನೆರನ್ ಈತಂಗೆ ಈ ಎಡೆಯೆಂದು ತೋರಿ ಕುಡೆ... ಪೊಲಗಿಡದೆ ಪರಮಪಂಡಿತನ್ ಪವನಸುತನ್ ಅರಿದನ್...

ನೆರನ್ ಇಂತುಟೆಂದು ತಿಳಿದಾಗಳ್... ಕಯ್ಯಿಮ್ ನೆಲನಮ್ ಮಾರುದ್ದಿ... ಧರಾತಳದೊಳ್ ಸೂಸಿದ ತನ್ನ ತೀವ್ರ ಗದೆಯನ್ ಕಂಡು ಎತ್ತಿಕೊಂಡು... ಅಂಬರ ಸ್ಥಳದಿಂದಮ್ ಸಿಡಿಲ್ ಏಳ್ಗೆಯಿಂದೆ ಎರಗಿ ಪೊಯ್ವಾಗಳ್... ಗದಾದಂಡದಿಮ್ ಕುರುಕುಭೃತ್ ಚಂಡ ಊರುದಂಡಂಗಳಮ್ ಕಲಿ ಸತ್ತಿಗನ್ ಮುಳಿದು ಇಟ್ಟನ್... ತೊಡೆಯಮ್ ಇಡೆ... ಉಡಿದು ನೆಟ್ಟನೆ ಕೆಡೆಯುತ್ತುಮ್... ನೆಲನನ್ ಆನ್ ಇದನ್ ಎಂತುಮ್ ಬಿಡೆನ್ ಎಂಬ ತೆರದೆ... ಕರ್ಚಿ ಕುಲಗಿರಿ ಕೆಡೆವ ಅಂದದೆ...

ಆಗಳ್ ಕೌರವೇಂದ್ರನ್ ಕೆಡೆದನ್.

ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಮ್ ಕುರುಕುಲ ಮಹೀಶನ ಕದಳೀಸ್ತಂಭಂಗಳನ್ ಅನುಕರಿಸುವ ತೊಡೆಗಳನ್ ಅಶ್ರಮದೊಳ್ ಉಡಿದು... ಪುಡಿಯೊಳ್ ಪೊರಳ್ಚಿ... ತನ್ನ ಮುನ್ನ ನುಡಿದ ಊರುಭಂಗ ಪ್ರತಿಜ್ಞೆಯಮ್ ತೀರ್ಚಿ... ಮಕುಟಭಂಗಪ್ರತಿಜ್ಞೆಯಮ್ ತೀರ್ಚಲೆಂದು ಕುರುಕುಲಾಂತಕನ್ ಮಾಮಸಕಮ್ ಮಸಗಿ..)

**ಭೀಮ** : ಇದು ಭುವನಾಧಿಪತ್ಯಸವನೋದಕದಿಮ್ ಗಡ ಪೂತಮಾದುದು ಇಂತು... ಇದು ಧವಳಾತಪತ್ರದ ನೆಳಲ್ಗೆ ಗಡಮ್ ಗುರಿಯಾದುದು... ಆರ್ಗಮ್ ಇಂತು ಇದು ಗಡ ಬಾಗದು... ತಲೆಗೆ ತಕ್ಕುದನ್ ಈಗಳೆ ಮಾಳ್ಪೆನ್.

(ಎಂದು ಕೋಪದಿನ್ ಸಪತ್ನ ಹತೋರು ಕಿರೀಟ ಶೃಂಗಮಮ್ ಒದೆಯಲ್ಕೆ ಸಾರ್ತರೆ... ಬಲದೇವಾದಿಗಳ್)

**ಬಲರಾಮ** : ಆಗದು... ಆಗದು... ಒದೆಯಲ್ಕೆ... ಏಕಾದಶಾಕ್ಷೋಹಿಣೀ ಬಲ ಲಕ್ಷ್ಮೀಪತಿಯನ್ ಪರಾಭವಿಸದಿರ್... ಚಿಃ... ತಕ್ಕುದಲ್ತು.

(ಎಂದು ಬಲದೇವಾದಿಗಳ್ ಮಾರ್ಕೊಳೆಯುಮ್... ಮಾಣದೆ ಭೀಮಸೇನನ್ ಕೌರವ್ಯ ರಾಜೇಂದ್ರನಾ ರತ್ನಮಂಡಲ ರಶ್ಮಿ ಪ್ರಕಟ ಜ್ವಲನ್ಮಕುಟಮನ್ ವಾಮಾಂಘ್ರಿಯಿಮ್ ಒದೆದನ್...

ಅಂತು ಗುಣರತ್ನಾರ್ಣವನ್ ಪ್ರತಿಜ್ಞಾಪೂರ್ಣನುಮ್ ಆಗೆ... ಸುರಾಂಗನೆಯರ್ ಸುರತರು ಕುಸುಮೋತ್ಕರಮಮ್ ಸುರಿಯೆ... ಸುರದುಂದುಭಿಗಳ್ ಉಲಿಯೆ... ಸತ್ತಿಗನನ್ ಮೆಚ್ಚಿ ಪರಮ ಆಶೀರ್ವಚನ ಪರಂಪರೆಯಿಂದಮ್ ಪರಸಿದರ್...

ಬಳದೇವನ್ ಭೀಮನ ಭುಜ ಬಳದ ಏವಮ್ ಮನಮನ್ ಅಲೆಯೆ... ಮಾರ್ಕೊಳೆಯುಮ್... ಕುರುಪತಿಯನ್ ಪರಿಭವಿಸಿದನ್ ಎಂದು ಅಳವಲ್ಲದೆ... ಮುಳಿದು ಕೆಳರ್ದು ನೋಡುತ್ತಿರ್ದನ್... ಅಂತು ಮುಳಿದಿರ್ದು... ತನ್ನ ತಮ್ಮನನ್ ನೋಯಿಸಲಾರದೆಯುಮ್... ದುರ್ಯೋಧನಂಗೆ ಆದ ಅವಸ್ಥೆಯಮ್ ನೋಡಲಾರದೆಯುಮ್... ಬಲದೇವನ್ ದ್ವಾರಾವತಿಗೆ ಪೋದನ್.) ❖

## ನೋಟ–25

# ದ್ರೌಪದಿಯ ಮುಡಿಕಟ್ಟಿದ ಭೀಮಸೇನ

ತೀ.ನಂ.ಶ್ರೀಕಂಠಯ್ಯ

(ಸಂಪಾದಕರು)

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಗದಾಯುದ್ಧಂ' ಎಂಬ ಹೆಸರಿನ 8 ನೆಯ ಅಧ್ಯಾಯದ 30 ನೆಯ ಪದ್ಯದಿಂದ 40 ನೆಯ ಪದ್ಯದ ವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ದ್ರೌಪದಿ** : ಪಾಂಚಾಲ ದೇಶದ ದ್ರುಪದ ರಾಜನ ಮಗಳು. ಅಯ್ದು ಮಂದಿ ಪಾಂಡವರ ಹೆಂಡತಿ.

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

## ದ್ರೌಪದಿಯ ಮುಡಿಕಟ್ಟಿದ ಭೀಮಸೇನ

ಅನ್ನೆಗಮ್ ಇತ್ತಲ್... ಮರುತ್ ಪುತ್ರನ್ ಧಾತ್ರೀಪತಿಗೆ ಅರಿಪಿ... ಏಕಚ್ಛತ್ರೀಕೃತ ಜಗದಹಿತ ಕ್ಷತ್ರಿಯಕುಳಕಾಳರಾತ್ರಿಯಮ್... ದ್ರೌಪದಿಯನ್ ಬಳಿಯಟ್ಟಿ ಕರೆಸಿ ತೋರಲ್ಕೆ...

**ಭೀಮ** : ಪಂಕೇಜವಕ್ತ್ರೇ... ಇದಮ್ ನೋಡು... ಮುಳಿಸಿಮ್ ನಂಜಿಕ್ಕಿ ಕೊಲ್ವಂದಿನ ಆ ನೀಚನ... ಜತುಗೃಹದೊಳ್ ಸುಟ್ಟು ಕೊಲ್ವಂದಿನ ಆ ದ್ರೋಹನ... ಉರ್ವೀತಳಮಮ್ ಜೂದಾಡಿ ಗೆಲ್ವಂದಿನ ಆ ಸಂಚಳನ... ತನ್ನ ಸತ್ತ್ರೋಜ್ಜ್ವಳದಿಂದಮ್ ತಮ್ಮನಿಂದಮ್ ನಿಜಕಬರೀಬಂಧಮನ್ ತೆಗೆಯಿಸಿ ನಡೆದ ಆ ಚಂಡಾಲನ... ಪಾತಕನ ಇರವನ್... ಅಗ್ನಿಜೇ, ಸಂಗರಾಧ್ವರದೊಳ್ ಅರಸನ್ ದೀಕ್ಷಿತನ್; ಇಲ್ಲಿ ಎಮ್ಮ ಈ ನಾಲ್ವರುಮ್ ಋತ್ವಿಜರುಮ್; ಮುರಹರನ್ ತಾನ್ ಉಪದೇಶಕನ್; ನೀನುಮ್ ಗೃಹೀತವ್ರತಾಚರಣ ವ್ಯಾಪಿಕೆಯುಮ್; ಭವತ್ ಪರಿಭವಮ್ ಸಂಚಾರಕಮ್; ಕೌರವೇಶ್ವರನ್ ಈತನ್ ಪಶುವಾಗೆ; ಇವನನ್ ಕೋಪಾಗ್ನಿಯಿಂದೆ ಬೇಳ್ದೆನ್... ಕೌರವ್ಯ ಕ್ರವ್ಯ ಹವ್ಯದಿಂದೆ ಎನ್ನ ಕೋಪ ಹವ್ಯವಹಮ್ ಸುಹುತಮ್... ದುರ್ವಹ ದುರ್ಯೋಧನ ದೇಹ ಪ್ರಹರಣ ಲೋಹಿತದಿನ್ ಅವಭೃಥ ಸವನಮ್ ಆದುದು.

(ಎಂದು ಭೀಮಸೇನನ್ ಯಾಜ್ಞಸೇನಿಗೆ ಆದಿತ್ಯನ ಸಾರಥಿ ಇರ್ಪಂತೆ... ನಿಜೋರುಯುಗಳ ವಿಕಳನಾಗಿರ್ದ ದುರ್ಯೋಧನನನ್ ತೋರಿ.)

ಭೀಮ : ಪಗೆ ಮಡಿದುದು ಮುಡಿ.

(ಎನೆ... ನಗೆಮೊಗದಿಮ್ ಪಾಂಚಾಲೆ)

ದ್ರೌಪದಿ : ಸತ್ತಿಗ, ಪಲಕಾಲಮ್ ವಿಗತ ಅಭ್ಯಾಸದೆ ಆನ್ ಮರೆದೆನ್... ಪಗೆಯಮ್ ಮಡಿಯಿಸಿದ ನೀನೆ ಮುಡಿಯಲ್ವೇಳ್ಕುಮ್.

(ಎಂದು ತನ್ನ ಕಯ್ಯಮ್ ಪಿಡಿದು ತೆಗೆವುದುಮ್..)

ಭೀಮ : ಅಂತೆ ಗೆಯ್ವೆನ್.

(ಎಂದುಮ್... ಆಕೆಯ ವೇಣೀಸಂಹಾರಮಮ್ ತಾನೆ ಮಾಡಿ)

ಭೀಮ : ಕೃಷ್ಣೆ, ಇದರೊಳ್ ಮುನ್ನಮ್ ಮೂರ್ಧಾಭಿಷಕ್ತರ್ ಮಣಿಮಕುಟಧರರ್... ಬಾಹಾಬಳಾಗ್ರ್ಯರ್... ಕದನ ಪ್ರೋಚ್ಚಂಡ ದಂಡಕ್ರಮ ವಿಜಿತರಿಪು ಕ್ಷತ್ರಿಯರ್... ವೀರಲಕ್ಷ್ಮೀ ಸದನರ್... ಸೋಮಾಮೃತಾಸ್ವಾದನ ರುಚಿವದನರ್ ಅಳ್ಕಾಡಿದರ್... ನೋಡ, ಇದು ನಿನ್ನ ಈ ಕೇಶಪಾಶಮ್ ಕುರುಕುಲಪತಿಗೆ ಕೀನಾಶಪಾಶಮ್ ಆಯ್ತಲ್ತೆ.

(ಎಂದು ಪೊಗಳ್ದು... ಮಾಂಗಲ್ಯ ಮಾಲಾಲಂಕೃತಮ್ ಮಾಡೆ... ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳ್... ನೆಗಳ್ದ ಆ ಶೃಂಗಾರಮ್... ಆ ಭಾವಮ್... ಆ ಪರಿಜ... ಆ ವಿಭ್ರಮಮ್... ಆ ಬೆಡಂಗು... ಆ ಸೌಂದರ್ಯಮ್... ಆ ಬಿಂಕಮ್... ಆ ತರಳಾಪಾಂಗವಿಲಾಸಮ್... ಆ ಲಟಹಮ್... ಆ ಲಾವಣ್ಯಮ್... ಆ ಪುಣ್ಯಮ್... ಆ ದರಹಾಸ ಅಮೃತಮ್ ಚಾಳುಕ್ಯಕಂದರ್ಪನನ್ ಏನ್ ಮನಂಗೊಳಿಸಿತೋ...

ಪನ್ನೆರಡು ಬರಿಸಮ್ ಅಲಸದೆ ಬನ್ನದ ಕೂಳುಂಡು ಬರ್ದ ಅಳಲ್ ಪಿಂಗಲೊಡಮ್... ತನ್ನಿಮ್ ಕಾಳಿಕೆ ಪಿಂಗಿದ ಪೊನ್ನಂತೆ... ಆ ಕಾಂತೆ ಕಣ್ಗೆ ಕರಮ್ ಎಸೆದಿರ್ದಳ್... ಅಂತಿರ್ದ ಜಾತವೇದೋಜಾತೆಯ ಕೋಮಲ ಕರತಳ ಸ್ಪರ್ಶನದೊಳಮ್... ಕಟಾಕ್ಷಚ್ಛಟಾ ಆಚ್ಛೋಟನದೊಳಮ್... ಅಪಗತ ಸಮರ ಪರಿಶ್ರಮನಾಗಿ ಇರಿವ ಬೆಡಂಗನ್ ಗುರುಪಾದಾಂಬುರುಹಕ್ಕೆ ಪೊಡೆವಟ್ಟು.).

ಭೀಮ : ಹರಿ ಕೇಳ್... ಧರ್ಮಜ ಕೇಳ್... ಸುರೇಂದ್ರಸುತ ಕೇಳ್... ಮಾದ್ರೀಸುತರ್ ಇರ್ಬರುಮ್ ಕೇಳಿಮ್... ಕೌರವಹತಿ ವ್ಯಾಪಾರದೊಳ್... ದ್ರೋಹದುರ್ಧರ ದುಶ್ಶಾಸನ ರಕ್ತಪಾನ ವಿಧಿ...

ಪಾಂಚಾಲೀ ಕಚೋತ್ತಂಸನಮ್... ಕುರುರಾಜ ಊರು ಕಿರೀಟಭಂಗಮ್... ಇನಿತುಮ್ ಭೀಮಪ್ರತಿಜ್ಞಾಕ್ಷರಮ್ ಇಂತು ಎಯ್ದುದುದಲ್ತೆ.

(ಎಂದು ಭೇರಿಯಮ್ ತಾಟಿಸಿದಂತೆ ಗಂಭೀರ ಧ್ವನಿಯಿಮ್ ಗರ್ಜಿಸೆ... ಹರಿಯುಮ್... ಧರ್ಮಜನುಮ್... ಸುರೇಂದ್ರಸುತನುಮ್... ಮಾದ್ರೀಜರುಮ್... ಕೃಷ್ಣೆಯುಮ್ ಪರಮಾನಂದದೆ ಭೀಮನಾ ಆ ದೋರ್ದಂಡಮಮ್ ತೀರ್ಥಜಲದಿಮ್ ಕರ್ಚಿ... ಕಸ್ತೂರಿಕಾ ಚಂದನಾ ಅಗರು ಕಾಶ್ಮೀರಜ ಪಂಕದಿಮ್ ತೊಡೆದು... ಕೇಯೂರಾದಿಯಮ್ ಭೂಷಣೋತ್ಕರಮಮ್ ನೇರ್ಪಡೆ ಕಟ್ಟಿ ಪೂಜಿಸಿದರ್...

ಆ ಪ್ರಸ್ತಾವದೊಳ್ ಸಾಹಸಭೀಮನ್ ಗದಾದಂಡಮಮ್ ಉತ್ಸಾಹದಿಮ್ ತಾನೆ ಪೂಜಿಸಿದನ್... ಅಂತು ಭುಜಾದಂಡಮುಮನ್ ಗದಾದಂಡಮುಮನ್ ಪೂಜಿಸಿ... ವಿವಿಧ ಆತೋದ್ಯರವಮ್ ಪೊದಳ್ದು... ಅಖಿಳ ದಿಕ್ ಚಕ್ರಂಬರಮ್ ಕೂಡೆ ಪೊಣ್ಮುವಿನಮ್ ಕರ್ಣಾಮೃತಸ್ಯಂದಿ ಮಂಗಳಗೀತ ಮಂಗಳರವಮ್... ಉಣ್ಮುವಿನಮ್... ದೇವ ನಿನಾದಮ್ ಉಣ್ಮುವಿನಮ್... ಉತ್ಸವಬದ್ಧ ಸ್ವನರಮ್ಯ ತತ್ ಶಿಬಿರಮಮ್ ಚಾಳುಕ್ಯಕಂಠೀರವನ್ ಅತ್ಯುತ್ಸಾಹದಿಮ್ ಪೊಕ್ಕನ್.)

❖

## ನೋಟ–26

# ಲಕ್ಷ್ಮಿಯನ್ನು ಅಡ್ಡಗಟ್ಟಿ ಎಳೆತಂದ ಅಶ್ವತ್ಥಾಮ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನಾವಸಾನಂ' ಎಂಬ ಹೆಸರಿನ 9 ನೆಯ ಅಧ್ಯಾಯದ 1 ನೆಯ ಗದ್ಯದಿಂದ 9 ನೆಯ ಗದ್ಯವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಅಶ್ವತ್ಥಾಮ** : ದ್ರೋಣಾಚಾರ್ಯರ ಮಗ. ದುರ್ಯೋಧನನ ಸೇನಾಬಲದಲ್ಲಿ ಪ್ರಮುಖನಾದ ವೀರ.

**ಲಕ್ಷ್ಮಿ** : ರಾಜ್ಯದ ಗದ್ದುಗೆ ಮತ್ತು ಸಂಪತ್ತಿನ ದೇವತೆ.

## ಲಕ್ಷ್ಮಿಯನ್ನು ಅಡ್ಡಗಟ್ಟಿ ಎಳೆತಂದ ಅಶ್ವತ್ಥಾಮ

ಅನ್ನೆಗಮ್ ಚಕ್ರಿ ಅಸಮ ಸಾಹಸ ಉದ್ದಾಮನಪ್ಪ ಅಶ್ವತ್ಥಾಮನ ಬರವನ್ ಅರಿದು... ಅನಾಗತಬಾಧಾ ಪರಿಚ್ಛೇದಮಮ್ ಮಾಡಲೆಂದು... ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸರುವಮ್... ಶ್ರುತ ಸೋಮಕ ಪ್ರಮುಖರಪ್ಪ ಪಾಂಡವಸೂನುಗಳಪ್ಪ ಪಂಚ ಪಾಂಡವರುಮಮ್ ಬೀಡಿಂಗೆ ಕಾಪುವೇಳ್ದು... ಹಸ್ತ್ಯಶ್ವರಥ ಪದಾತಿಬಲಮ್ ಬೆರಸು ಹಸ್ತಿನಾಪುರಕ್ಕೆ ಕಳಿಪಿ... ಪಾಂಡವರ್ ಅಯ್ವರುಮನ್ ಒಡಗೊಂಡು ನೀಳಾಚಲಕ್ಕೆ ನೀಲಾಂಗನ್ ಪೋದನ್.

ಅನ್ನೆಗಮ್ ಇತ್ತ ಗಾಂಗೇಯನ್ ಅರಿಪೆ... ಕೌರವೇಶ್ವರನ್ ಇರ್ದ ಎಡೆಯಮ್ ಅಶ್ವತ್ಥಾಮನ್ ಅರಿದು ಬರ್ಪಾಗಳ್... ಕನತ್ಕನಕ ತಾಮರಮ್... ಧವಳ ಚಾಮರಮ್ ಕಯ್ಗಳೊಳ್... ಮಾಸಿ ತಾರಿದ ಕುರುಳ್ಗಳುಮ್ ಮನಮ್ ಚಲಿಸೆ... ತನ್ನ ಬಿನ್ನನಿರ್ದ ಮೊಗದಿಮ್... ವಿಲಾಸಮುಮ್ ತವಿಲ್ದಿರೆ... ಕಮಳಾಕ್ಷಿಯನ್ ಲಕ್ಷ್ಮಿಯನ್ ವೃಷಭ ಲಕ್ಷಣನ್ ಅಲ್ಲಿ ಮುಂದೆ ಕಂಡನ್... ಅಂತು ಕುಂಭಸಂಭವ ಸಂಭವನ್ ಅಮೃತಾಬ್ಧಿ ಸಂಭವೆಯನ್ ಕಂಡು...

**ಅಶ್ವತ್ಥಾಮ** : ನೀನಾರ್ಗೆ... ಎತ್ತಣಿಂದಮ್ ಬಂದೆ... ಎಲ್ಲಿಗೆ ಪೋದಪೆ.

(ಎಂದು ಬೆಸಗೊಳೆ)

**ಲಕ್ಷ್ಮಿ** : ಅಮೃತಪಯೋಧಿ ಮಂಥನದೆ ಪುಟ್ಟಿದ... ಪದ್ಮ ವನಾಂತರಾಳದೊಳ್ ರಮಿಯಿಪ... ಪದ್ಮನಾಭನ ಉರದೊಳ್ ನೆಲಸಿರ್ಪ ಮಹಾನುಭಾವೆಯೆನ್ ಕಮಳೆಯೆನ್... ಇನ್ನೆಗಮ್ ಕುರುಮಹೀಪತಿಯೊಳ್

ನೆಲೆಸಿರ್ದೆನ್... ಈಗಳ್ ಉತ್ತಮ ಪುರುಷೋತ್ತಮನ್ ಬೆಸಸೆ, ಪಾಂಡವರೊಳ್ ನೆಲಸಲ್ಕೆ ಪೋದಪೆನ್.

(ಎಂಬುದುಮ್ **"ನಾರಾಯಣನ್ ಬೆಸಸೆ ಪೋದಪೆನ್"** ಎಂದ ಲಕ್ಷ್ಮಿಯ ಮಾತನ್ ದ್ರೋಣನಂದನನ್ ಅವಧಾರಿಸಿ ಮುಗುಳ್ನಗೆ ನಕ್ಕು)

**ಅಶ್ವತ್ಥಾಮ** : ಜಡಧಿಸಂಭವೆಯಪ್ಪುದರಿಮ್ ನೀನ್ ಚಳಮತಿಯಾದೆ... ಸರೋಜಸಂಕುಲರಜದಿಂದೆ ನೀನ್ ಪೊರೆದು ರಾಜಸದೊಳ್ ನೆಲೆಸಿರ್ಪೆ... ಗೋವುಗಾದು ಅಳವು ಅಳಿದಿರ್ದ ಕೃಷ್ಣನೊಡನೆ ಇರ್ದುದರಿಂದಮೆ ಗೋವಿಯಾದೆ... ನಿನಗೆ ಅಗ್ಗಳದ ವಿವೇಕಮಿಲ್ಲ... ಆ ಪುರುಷಾಂತರಂಗಳಾ ಎತ್ತ ಅರಿವೆ...

ಕಲಿ ಪಂದೆಯೆಂದು ಬಗೆಯದೆ... ಕುಲಜನ್ ಕುಲಹೀನನೆಂದು ಬಗೆಯದೆ... ತರುಣನ್ ಸಲೆ ವೃದ್ಧನೆಂದು ಬಗೆಯದೆ ನೆಲಸುವೆ... ನಿನ್ನಿಮ್ ನಿಕೃಷ್ಟರ್ ಎಂಬರುಮ್ ಒಳರೇ... ತಂದೆ ಮಕ್ಕಳನ್ ಇರಿಯಿಸುವೆ... ಸೋದರರ್ಕಳಮ್ ಇರಿಯಿಸುವಯ್... ಗುರುಶಿಷ್ಯರನ್ ತಮ್ಮೊಳ್ ತಳ್ತು ಇರಿಯಿಸುವಯ್... ಅರಗುಲಿ, ನಿನ್ನಿಮ್ ನಿಕೃಷ್ಟರಾದರುಮ್ ಒಳರೇ...

(ಎಂದು ಲಕ್ಷ್ಮಿಯನ್ ವಿಡಂಬನಮ್ ಗೆಯ್ದು)

**ಅಶ್ವತ್ಥಾಮ** : ಪೋ... ಮಾಣ ಧರ್ಮಜನ್ ಗಡ... ಭೀಮನ್ ಗಡ... ಫಲ್ಗುಣನ್ ಗಡ... ಅಮಳ್ಗಳ್ ಗಡ... ಅವಂದಿರ್ ಅಶ್ವತ್ಥಾಮಂಗೆ ಸಂಗ್ರಾಮದೊಳ್ ಆಪೋಶನಗೊಳಲ್ ನೆರೆದಪರೇ... ಎಲಗೆ, ನಿನ್ನ ಮುರವೈರಿಯ ಅಳವುಮನ್... ಎನ್ನ ಅಳವುಮನ್ ಕಾಣ್ಬೆ... ಮುನ್ನಮ್ ತ್ವತ್ ಪತಿಯಿಂದಮ್ ಕುರುಪತಿಯಿಂರ್ದಂತೆ ನಿನ್ನನ್ ಅಗಲ್ಚಲ್ಕೆ... ಕಪಟಗೋಪನ್ ಪ್ರಭುವೇ...

ಕುರುರಾಜನ್ ರಾಜರಾಜನ್ ಸಕಲ ವಸುಮತಿಕಾಂತನ್ ಇರ್ದಂತೆ... ಯುದ್ಧಾತುರನ್ ಇನ್ನು ಈ ಸಾಹಸಾಂಕನ್ ಕುರುಕುಳಪತಿಯಿರ್ದಂತೆ... ಮೆಳ್ಪಟ್ಟು ದಾಮೋದರನ್

ಎಂದ ಈ ಕಜ್ಜದೊಳ್ ನೀನ್ ತೊಡರ್ದು... ಮರುಳೆ, ಬೆಂಡಾಗದಿರ್... ನೀನ್ ಚೆಚ್ಚರಮ್ ಅತ್ತ ಪೋಗು... ಇನ್ನೆತ್ತ ಪೋಪೌ... ಪರಿಭವಿಸಿದಪೆನ್... ನಿನ್ನನ್ ಇನ್ ಕಾವನ್ ಆವೊನ್...

(ಎಂದು ಅಶ್ವತ್ಥಾಮನ್ ಉದ್ದಾಮ ಕೋಪಾಟೋಪಬದ್ಧ ಭ್ರುಕುಟಿಯುಮ್... ತರಳತಾಮ್ರ ಲೋಚನನುಮ್ ಆಗೆ..)

**ಲಕ್ಷ್ಮಿ** : ಅತ್ತಲ್ ಅಸುರಾರಿ ಬೆಸಸಿದನ್... ಇತ್ತಲ್ ರುದ್ರಾವತಾರನ್ ಎಳೆದು ಒಯ್ದಪನ್... ಇಂತು... ಅತ್ತ ಪುಲಿ... ಇತ್ತ ದರಿ.

(ಎಂದು ಅತ್ತಿತ್ತ ಅಡಿಯಿಡದೆ ಲಕ್ಷ್ಮಿ ತಳವೆಳಗಾದಳ್... ಅಂತು ತಳವೆಳಗಾದ ಲಕ್ಷ್ಮಿಯ ಚಳತ್ ಅಳಿ ವಿನೀಳ ಕುಟಿಲ ಕುಂತಳಂಗಳಮ್ ತಳಮಾರೆ ತೆಗೆದು... ಕುರುಕುಲ ಕುಟುಂಬನ ಘಟಚೇಟಿಯನ್ ಕೊಂಡು ಪೋಪಂತೆ... ಮಗುಳೆ ಕೊಂಡು ಪೋಗಿ)

❖

## ನೋಟ–27

# ದುರ್ಯೋಧನನ ಕಟ್ಟಕಡೆಯ ಆಸೆ

**ತೀ.ನಂ.ಶ್ರೀಕಂಠಯ್ಯ**
**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ದುರ್ಯೋಧನಾವಸಾನಂ' ಎಂಬ ಹೆಸರಿನ
9 ನೆಯ ಅಧ್ಯಾಯದ 9 ನೆಯ ಗದ್ಯದಿಂದ 19 ನೆಯ ಪದ್ಯದವರೆಗಿನ
ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ರಾಜ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಅಶ್ವತ್ಥಾಮ** : ದ್ರೋಣಾಚಾರ್ಯರ ಮಗ. ದುರ್ಯೋಧನನ ಸೇನಾಬಲದಲ್ಲಿ ಪ್ರಮುಖನಾದ ವೀರ.

**ಲಕ್ಷ್ಮೀ** : ರಾಜ್ಯದ ಗದ್ದುಗೆ ಮತ್ತು ಸಂಪತ್ತಿನ ದೇವತೆ.

**ಭೂದೇವಿ** : ರಾಜನ ಆಳ್ವಿಕೆಗೆ ಒಳಪಟ್ಟ ಭೂಭಾಗದ ದೇವತೆ.

## ದುರ್ಯೋಧನನ ಕಟ್ಟಕಡೆಯ ಆಸೆ

ಭೀಮಸೇನನ ಗದಾಘಾತದೊಳ್ ಊರುಭಂಗಮುಮ್... ಪದಾಘಾತದೊಳ್ ಮಕುಟಭಂಗಮುಮ್ ಆಗಿ... ಸುರುಳ್ದು ತೆರಳ್ದು ಸುಯೋಧನನಿರೆ... ಕುರುರಾಜನ್ ತೊಡೆವೇನೆಗೆ ನರಳನೆ... ಕುರುವಾದ ತೊಡೆಯ ಬೇನೆಗೆ ಕಂಡರ್ ನರಳ್ವಂತೆ ಅರಸನ್ ನರಳದೆ... ವಿರೋಧಿಯಿಂದಾದ ಮಾನಹಾನಿಗೆ ನೊಂದನ್... ಅಂತಿರ್ದ ಕುರುನಂದನನನ್ ಗುರುನಂದನನ್ ನೋಡಿ...

**ಅಶ್ವತ್ಥಾಮ** : ಕುಳಿಕನ ಪಲ್ಗಳಮ್ ಮುರಿಯೆ ಮೋದಿದರ್ ಆರ್... ಸಿಂಹಮಮ್ ಪಿಡಿದೊತ್ತಿ ಮುಳಿಯಿಸಿ ದಾಡೆಯಮ್ ಪಿಡಿದು ಕಿಳ್ತವರ್ ಆರ್... ಮದಹಸ್ತಿಯಮ್ ನೆರಂಗೊಳೆ ನೆಲಕಿಕ್ಕಿ ಕೋಡೆರಡುಮನ್ ಕುಸಿಯೊತ್ತಿದರ್ ಆರ್... ಸುರಾದ್ರಿ ನಿಶ್ಚಲ ನಿಬಿಡ ಊರು ಮಂಡಲಮನ್ ಆರ್ ಉಡಿದರ್... ಫಣಿರಾಜಕೇತನ... ಹಾ ಕುರುವಂಶ ಮಹಾ ಕಮಲಾಕರ ಕಲಹಂಸ... ಹಾ ಸಮುದ್ರಾಂತ ಧರಿತ್ರೀಕಾಂತ... ಹಾ ಫಣೀಂದ್ರ ಪತಾಕಾ... ವಿಧಿವಶದೆ ನಿನಗಮ್ ಈ ಪರಿಯಾಯ್ತೇ.

(ಎಂದು ಗುರುನಂದನನ್ ವಿಪ್ರಳಾಪಮ್ ಗೆಯ್ದು... ತನ್ನ ಮೇಲುದರ ಸೆರಂಗಿಂದೆ ಆತನ ತಲೆಯ ಮೇಲೆ ಕೆದರಿರ್ದ ಭೀಮಸೇನನ ಚರಣರಜಮಮ್ ತೊಡೆದು ಕಳೆದು, ಮನದೊಳ್ ಕಟ್ಟುಕಡೆದು.)

**ಅಶ್ವತ್ಥಾಮ** : ಕುರುರಾಜಾ, ಎನ್ನನ್ ವಂಚಿಸಿ ಬಂದುದರಿನ್ ನಿನಗೆ ಇನಿತಾಯ್ತು ಅವಸ್ಥೆ... ನೀನ್ ಇನ್ನುಮ್ ಪ್ರತಿಕಾರಮನ್ ಅರಿಪೆ... ಎನ್ನನ್ ನೋಡು... ಎನ್ನ ಶಕ್ತಿಯನ್ ಭಕ್ತಿಯುಮನ್.

(ಎಂದು ನುಡಿದ ಭಾರದ್ವಾಜ ತನೂಜನ ನುಡಿಗೆ ರಾಜರಾಜನ್ ಅವಧಾರಿಸಿ.)

**ದುರ್ಯೋಧನ** : ಹತದೇಹ... ಹತಭುಜದ್ವಯ... ಹತೋರು... ಹತಜೀವ... ಹತಕಿರೀಟಮ್... ಹತಹೃತ್... ಪ್ರತೀಕಾರಮ್ ಎಂಬುದುಂಟೇ... ತಾನ್ ಗತಿಯಮ್ ಸಾಧಿಸುವುದಲ್ತೆ ಪ್ರತೀಕಾರಮ್... ಅರಿ ಚರಣ ಪಾಂಸು ಶರೀರಮಮ್ ಪತ್ತಿರೆ... ವಸ್ತ್ರಾಂಚಲದಿಮ್ ತೊಡೆದು ಕಳೆದೆ... ಗುರುನಂದನ, ನೀನ್ ಎನ್ನ ಪರಿಭವ ಪಾಂಸುವನ್ ಅದೆಂತು ಕಳೆದಪೆಯೋ ಪೇಳ್.

(ಎಂದು ಪರಮನಿರ್ವೇಗ ಪರಾಯಣನಾಗಿ ನುಡಿದು..)

**ದುರ್ಯೋಧನ** : (ತನ್ನ ಮನದಲ್ಲಿ)

ಹರಿಯ ಅನುಬಲದಿಮ್ ಪಾಂಡವರ್ ಗೆಲಲ್ ಅರಿಯರ್...
ಅಶ್ವತ್ಥಾಮನ್ ಈಶ್ವರಾಂಗನ್ ಪರಬಲಕೆ ಅಜೇಯನ್...

(ಎಂದು ನೃಪನ್ ಅಂತರಂಗದೊಳ್ ಅಂತರಮನ್ ಚಿಂತಿಸಿದನ್.)

**ದುರ್ಯೋಧನ** : ಇದುವಮ್ ನೋಡುವೆನ್... ಇನ್ನುಮ್ ಎನ್ನ ಒಡಲೊಳ್ ಎನ್ನ ಈ ಪ್ರಾಣಮ್ ಉಳ್ಳನ್ನಮ್ ಓವದೆ... ಕೌಂತೇಯರನ್ ಇಕ್ಕಿ ಪಂದಲೆಗಳಮ್ ತಂದು ಎನ್ನ ಮುಂದಿಕ್ಕು... ಕೂರದ ದಾಯಾದರ ಮಿಕ್ಕ ಪಂದಲೆಗಳಮ್ ಕಣ್ಣಾರೆ ಕಂಡು... ಎನ್ನ ಚಿತ್ತದೊಳ್ ಒಂದುಮ್ ತೊದಳಿಲ್ಲದೆ... ಎನ್ನ ಅಸುಗಣಕ್ಕೆ ಉತ್ಕ್ರಾಂತಿಯಮ್ ಮಾಡುವೆನ್.

(ಎಂಬುದುಮ್)

**ಅಶ್ವತ್ಥಾಮ** : ಅದಾವ ಗಹನಮ್ ಅಂತೆ ಗೆಯ್ವೆನ್.

(ಎಂದು ಪೂಣ್ದು... ಮಹೀಕಾಂತೆಯುಮನ್... ಶ್ರೀಕಾಂತೆ

ಯುಮನ್ ಕಣ್ಗಿಡೆ ಜಡಿಯೆ... ಉರಗೇಂದ್ರ ಫಣಾಮಣಿ ನೂಪುರಮಣಿ... ಜಲರಾಶಿ ರತ್ನಮೇಖಲೆ ಎನಿಪ ಆ ಕುರುಧರೆ... ಆ ಗುರುಸೂನುಗೆ ಅಳ್ಕಿ ನಿಜರೂಪದೆ ಬಂದು ಇರದೆ...)

**ಭೂದೇವಿ** : ಬೆಸನ್ ಏನ್.

(ಎಂದಳ್.)

**ಅಶ್ವತ್ಥಾಮ** : ಆನ್ ಬರ್ಪಿನಮ್... ಕುರುವಂಶ ಉರ್ವೀಪತಿಗೆ ಒರ್ವಳ್ ಕೊಡೆವಿಡಿವುದು... ಮತ್ತೊರ್ವಳ್ ಚಾಮರಮನ್ ಇಕ್ಕುತಿರ್ಪುದು... ಇರ್ವರುಮ್ ಇಂತು ಇರ್ಪುದು.

(ಎಂದನ್ ಅಶ್ವತ್ಥಾಮನ್. ಅಂತು ಅವರಮ್ ನಿಯೋಜಿಸಿ... ನೇಸರ್ ಪಡುವಿನಮ್ ಇರ್ದು ನಿಜಪತಿಯನ್ ಬೀಳ್ಕೊಂಡು)

❖

## ನೋಟ–28

# ದುರ್ಯೋಧನನ ಸಾವು

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ **'**ದುರ್ಯೋಧನಾವಸಾನಂ**'** ಎಂಬ ಹೆಸರಿನ 9 ನೆಯ ಅಧ್ಯಾಯದ 20 ನೆಯ ಪದ್ಯದಿಂದ 23 ನೆಯ ಪದ್ಯವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ದುರ್ಯೋಧನ** : ಗಾಂಧಾರಿ ಮತ್ತು ಧೃತರಾಷ್ಟ್ರ ದಂಪತಿಯ ಹಿರಿಯ ಮಗ. ಹಸ್ತಿನಾವತಿಯ ರಾಜ.

**ಅಶ್ವತ್ಥಾಮ** : ದ್ರೋಣಾಚಾರ್ಯರ ಮಗ. ದುರ್ಯೋಧನನ ಸೇನಾಬಲದಲ್ಲಿ ಪ್ರಮುಖನಾದ ವೀರ.

## ದುರ್ಯೋಧನನ ಸಾವು

ಅಶ್ವತ್ಥಾಮನ್ ಅಂತು ಅವರಮ್ ನಿಯೋಜಿಸಿ... ನೇಸರ್ ಪಡುವಿನಮ್ ಇರ್ದು... ನಿಜಪತಿಯನ್ ಬೀಳ್ಕೊಂಡು ಪಯಣಮ್ ಪೋಗಿ... ಹಸ್ತಿನಪುರಮನ್ ಪೊಕ್ಕು... ಅಲ್ಲಿ ಕಂಜವನದಂತೆ ಲಕ್ಷ್ಮೀರಂಜಿತಮುಮ್ ಚಿತ್ರಪತ್ರಮುಮ್ ಚಕ್ರಾಂಕ ವ್ಯಂಜಿತಮುಮಪ್ಪ ಬೀಡಮ್... ಇರುಳೊಳ್ ಮಂಜಿರಿವಂತೆ ಇರಿದನ್... ಅಂತು ಅಶ್ವತ್ಥಾಮನ್ ಇರಿವಾಗಳ್ ಪಲವು ದಿವಸಮ್ ಕಾದಿ... ಪಿರಿದುಮ್ ಪಯಣಮ್ ಬಂದು ಬಳಲ್ದು... ಕೋರೈಸಿ ಮುಟ್ಟಿವಂದಾಗಳ್... ನಿದ್ರೆ ಗೆಯ್ದವರ್... ತೊಟ್ಟನೆ ನಿದ್ರೆಯಿಂದೆ ಎಳ್ಚತ್ತು ಆ ಕಳಕಳಮನ್ ಕೇಳ್ದು... ಕರತಳದಿಮ್ ಕಣ್ಣಮ್ ಪೊಸೆಯುತ್ತುಮ್ ಎಳ್ದು... ತಂತಮ್ಮ ತಲೆದೆಸೆಯೊಳ್ ಇರ್ದ ಕರವಾಳಮ್ ಕೊಂಡು ನಿಂದ ನೆಲೆಯೊಳ್...

ತಳರದಿರ್ದ ತಲೆಗಾಪಿನಾಳ ಉಕ್ಕಡದ ಆಳ ಮೇಲಿಕ್ಕಿ... ಉಕ್ಕಡದಾಳ ಘರವಟ್ಟಿಗೆಯಾಳ ಮೇಲಿಕ್ಕಿ... ಘರವಟ್ಟಿಗೆಯಾಗೆ ಮಾಮಸಕಮ್ ಮಸಗಿ ಜವಮ್ ನೇರಿ ಬರ್ಚಿದಂತೆ... ಪೆಂಡಿರ್ ಮಕ್ಕಳ್ ಎನ್ನದೆ ನಿವಳಿವಟ್ಟಮಪ್ಪಿನಮ್ ಒಂದು ಅಕ್ಷೋಹಿಣೀ ಬಲಮ್ ಎಲ್ಲಮಮ್... ಪೇಳ ಪೆಸರಿಲ್ಲವೆಂಬಂತೆ ಕೊಂದು...

ತನಗೆ ಕಟ್ಟಿದಿರೊಳ್ ಇರ್ದ ಧೃಷ್ಟದ್ಯುಮ್ನನುಮನ್ ಮುಟ್ಟಿ ಮೂದಲಿಸಿ... ತಮ್ಮಯ್ಯನನ್ ಪರಿಭವಿಸಿದ ಪಗೆಯನ್

ಕೊಂದು ದೆಸೆವಲಿಗೆಯ್ದು... ಶಿಖಂಡಿ ಚೇಕಿತಾನಕ ಯುಧಾಮನ್ಯು ಉತ್ತಮೌಜಸ ಪ್ರಭೃತಿಗಳನ್ ಇಕ್ಕಿ... ಪಾಂಡವರ ಶಂಕೆಯಿಮ್ ಶ್ರುತ ಸೋಮಕ ಪ್ರಭೃತಿಗಳಪ್ಪ ಪಂಚಪಾಂಡವರ ತಲೆಗಳಮ್ ಕೊಂಡು... ಥಳಥಳನೆ ನೇಸರ್ ಮೂಡುವಾಗಳ್ ಬಂದು..)

**ಅಶ್ವತ್ಥಾಮ** : ಕೊಳ್... ನಿನ್ನ ನಚ್ಚಿನ ಪಾಂಡವರ ತಲೆಗಳಿವೆ.

(ಎಂದು ದುರ್ಯೋಧನನ ಮುಂದಿಕ್ಕಿದೊಡೆ... ಆ ಮಹಾನುಭಾವನ್ ಆ ತಲೆಗಳಮ್ ನೀಡುಮ್ ಭಾವಿಸಿ ನೋಡಿ..)

**ದುರ್ಯೋಧನ** : ಪವನಜನ ಆಸ್ಯಮಲ್ತಿದು... ಅವನ ಆನನಮಪ್ಪೊಡೆ ಮಟ್ಟಮಿರ್ದು ನೋಡುವುದೆ ಮದೀಯ ವಕ್ತ್ರಮನೆ... ಕೆಮ್ಮನೆ ಪೋಯ್ತು... ಅರಿವಿಲ್ಲದಾಯ್ತು... ಪಾಂಡವರ ಶಿರಂಗಳಲ್ಲವು... ಇವು ಪಾಂಡವ ಸೂನುಗಳಪ್ಪ ಪಂಚಪಾಂಡವರ ಶಿರಂಗಳಮ್...ಅಕ್ಕಟ, ನೆರೆ ವಿಚಾರಿಸದೆ ಕೊಂಡು ಬರ್ಪುದೇ... ಪರಮೇಶ್ವರ ಅವತಾರನೆ... ಪರಮಜ್ಞಾನಿಯೆ... ವಿವೇಕವಿಕಳರವೋಲ್ ಬಾಲರ ತಲೆಯಮ್ ಅರಿದು ತಂದೆಯೊ... ನಿನಗೆ ಬಾಲವಧಮ್ ಪಾತಕಮ್ ದೊರೆಕೊಂಡುದು... ಅದು ಕಾರಣಮ್... ರೌದ್ರಪ್ರಾಯಶ್ಚಿತ್ತ ಪ್ರವರ್ತನಾರ್ಥಮ್... ಹಿಮವತ್ ಪರ್ವತಕ್ಕೆ ಪೋಪುದು.

(ಎಂದು ಚಿತ್ತ ಸಮಾಧಾನಮ್ ಗೆಯ್ದು)

**ದುರ್ಯೋಧನ** : ಅಜಿತನಮ್ ಸ್ಮರಿಯಿಸಿ... ಸುರಲೋಕಮಮ್ ಸಾಧಿಸುವೆನ್.

(ಎಂದು ಅಶ್ವತ್ಥಾಮಾದಿಗಳಮ್ ವಿಸರ್ಜಿಸಿ... ತತ್ ದಿನ ಅವಸಾನದೊಳ್ ದುರ್ಯೋಧನನ್ ಪ್ರಾಣವಿಸರ್ಜನ ಉನ್ಮುಖನಾದನ್... ಪಂಕಜಮುಮ್... ಸುಹೃತ್ ವದನ ಪಂಕಜಮುಮ್ ಮುಗಿವನ್ನಮ್... ಉಗ್ರತೇಜಮ್ ಕಿಡುತಿರ್ಪಿನಮ್... ನಿಜಕರಂಗಳನ್ ಅಂದು ಉಡುಗುತ್ತುಮ್ ಇರ್ದು... ಚಕ್ರಾಂಕಮ್ ಅಗಲ್ವಿನಮ್... ಕ್ರಮದಿನ್ ಅಂಬರಮಮ್ ಬಿಸುಟು ಉರ್ವಿಗೆ ಅಂಧಕಾರಮ್ ಕವಿತರ್ಪಿನಮ್... ಕುರುಕುಲ ಅರ್ಕನುಮ್... ಅರ್ಕನುಮ್ ಅಸ್ತಮ್ ಎಯ್ದಿದರ್.) ❖

## ನೋಟ–29

# ಭೀಮಸೇನನ ಪಟ್ಟಾಭಿಷೇಕ

**ತೀ.ನಂ.ಶ್ರೀಕಂಠಯ್ಯ**

**(ಸಂಪಾದಕರು)**

**ಕವಿ ರನ್ನನ ಗದಾಯುದ್ಧ ಸಂಗ್ರಹಂ**

ಈ ಹೊತ್ತಗೆಯ 'ಭೀಮಸೇನ ಪಟ್ಟಬಂಧಂ' ಎಂಬ ಹೆಸರಿನ 10 ನೆಯ ಅಧ್ಯಾಯದ 1 ನೆಯ ಪದ್ಯದಿಂದ 15 ನೆಯ ಪದ್ಯವರೆಗಿನ ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸಿದೆ.

## ಪಾತ್ರಗಳು

**ಕೃಷ್ಣ** : ದೇವಕಿ ಮತ್ತು ವಸುದೇವ ದಂಪತಿಯ ಮಗ. ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

**ಭಾನುಮತಿ** : ದುರ್ಯೋಧನನ ಹೆಂಡತಿ.

**ಚಂದ್ರಮತಿ** : ದುರ್ಯೋಧನನ ಹೆಂಡತಿ.

**ಗಾಂಧಾರಿ** : ಧೃತರಾಷ್ಟ್ರನ ಹೆಂಡತಿ. ದುರ್ಯೋಧನನ ತಾಯಿ.

**ಧೃತರಾಷ್ಟ್ರ** : ಕುರುವಂಶದ ಮಹಾರಾಜ. ದುರ್ಯೋಧನನ ತಂದೆ.

**ಭೀಮಸೇನ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ

ಒಬ್ಬ. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಧರ್ಮರಾಯ** : ಕುಂತಿ ಮತ್ತು ಪಾಂಡುರಾಜನ ಅಯ್ದು ಮಂದಿ ಮಕ್ಕಳಲ್ಲಿ ಒಬ್ಬ. ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

**ಕುಂತಿ** : ಪಾಂಡುರಾಜನ ಹೆಂಡತಿ. ಕರ್ಣ–ಧರ್ಮರಾಯ–ಭೀಮ–ಅರ್ಜುನರ ತಾಯಿ.

**ಕರ್ಣ** : ಸೂರ್ಯದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು. ರಾಧೆಯು ಕರ್ಣನ ಸಾಕು ತಾಯಿ.

## ಭೀಮಸೇನನ ಪಟ್ಟಾಭಿಷೇಕ

ಜಯಲಕ್ಷ್ಮೀಪ್ರಿಯನೊಳ್... ಪರಾಕ್ರಮಕೃತಾಲಂಕಾರನೊಳ್... ಸತ್ಯವಾದಿಯೊಳ್... ಅರ್ಥಿಪ್ರಿಯನೊಳ್ ಧರಾಪ್ರಣಯಿಯೊಳ್... ನಿರ್ದ್ವೇಷಿಯೊಳ್... ಪಂಡಿತಾಶ್ರಯನೊಳ್... ರಾಜಿತರಾಜಚಿಹ್ನ ಸಹಿತಮ್ ಶ್ರೀಕಾಂತೆಯುಮ್ ಭೂಮಿದೇವಿಯುಮ್ ಅತ್ಯುತ್ಸವದಿಂದೆ ಚಾಳುಕ್ಯಕಂದರ್ಪನೊಳ್ ಬಂದು ನೆರೆದರ್... ಶ್ರೀಗೆ ಜಯಶ್ರೀಗೆ ವಚಃಶ್ರೀಗೆ ಮನೋರಮಣನ್ ಎನಿಸಿ... ಸಕಲ ಧರಿತ್ರೀ ಭಾಗದೆ ದಿಗ್ಭಾಗದೊಳ್ ಕೀರ್ತಿ ಎಸೆಯಲ್ಕೆ... ಸಾಹಸಭೀಮನ್ ನೆಗಳ್ದಿರ್ದನ್... ಆಗಳ್ ಮುರಾಂತಕನ್ ಸಾಹಸಭೀಮನ ಸಾಹಸಕ್ಕೆ ಮೆಚ್ಚಿ, ಧರ್ಮನಂದನಾದಿಗಳ ಮೊಗಮಮ್ ನೋಡಿ..

**ಕೃಷ್ಣ** : ಪರಸೈನ್ಯಭೈರವನ್ ಕುರುಧರೆಯಮ್ ನಿಜೋಗ್ರಗದೆಯ ಏರ್ಗಳಿನ್ ಉಳ್ತು... ಸಮಸ್ತ ವೈರಿಭೂಪರ ರುಧಿರಾಂಬುವಿಂದೆ ಬೆದೆಮಾಡಿಯೆ... ಘಟ್ಟಿತ ಕುಂಭಿ ಮುಕ್ತ ಭಾಸುರ ನವಮೌಕ್ತಿಕ ಪ್ರಸರ ಬೀಜಮನ್ ಓಳಿಯೆ ಸೂಸಿ... ತಾರ ಭೂಧರ ಸಿತಕೀರ್ತಿಯೆಂಬ ಬೆಳಸಮ್ ಬೆಳೆದನ್.

(ಎಂದು ಪೊಗಳ್ದು... ಮುರಾಂತಕನ್ ಕುರುಕುಲಾಂತಕನ ಮೊಗಮಮ್ ನೋಡಿ)

**ಕೃಷ್ಣ** : ಮುನಿಯಿಸಿದ ಅರಾತಿಯನ್ ಕೊಲ್ವೆನೆಂದು ಪೂಣ್ದಂತೆ...

ಪೂಣ್ಕೆ ತಪ್ಪದೆ ಕೊಲಲುಮ್... ಗೆಲ್ವೆನ್ ಎಂದು ನುಡಿದಂತೆ ಗೆಲಲುಮ್... ಇರಿವಬೆಡಂಗಾ, ನಿನಗಲ್ಲದೆ ತೀರ್ಗುಮೆ... ಪೆರರ ಆಳ... ಪೆರರ ಕುದುರೆಯ... ಪೆರರ ಆನೆಯ... ಪೆರರ ರಥದ... ಪೆರ್ವಲದಿಂದಮ್ ಪೆರರ್ ಇರಿವರ್... ಇರಿವಬೆಡಂಗಾ, ನಿನ್ನ ತೆರದಿನ್ ಏಕಾಂಗದಿನ್ ಇರಿವವರ್ ಆರ್.

(ಎಂದು ನಾರಾಯಣನ್ ಚಾಳುಕ್ಯನಾರಾಯಣನನ್ ವರ್ಣಿಸುತಿರ್ಪಿನಮ್... ಆ ಪ್ರಸ್ತಾವದೊಳ್ ದುರ್ಯೋಧನನ ಜನನೀ ಜನಕರಪ್ಪ ಗಾಂಧಾರಿಯುಮ್ ಧೃತರಾಷ್ಟ್ರನುಮ್ ಬರೆ... ಆತನ ಮಹಾದೇವಿಯರಪ್ಪ ಭಾನುಮತಿಯುಮ್ ಚಂದ್ರಮತಿಯುಮ್ ಮೊದಲಾದ ಶುದ್ಧಾಂತ ನಿತಂಬಿನೀ ಜನಂಗಳುಮ್ ತಂತಮ್ಮ ಜೀವಿತೇಶ್ವರರಮ್ ಸಂಗ್ರಾಮಭೂಮಿಯೊಳ್ ಅರಸುತ್ತುಮ್ ಬಂದು ಕಾಣದೆ... ಗಾಂಧಾರೀ ಧೃತರಾಷ್ಟ್ರರ ಕಾಲ ಮೇಲೆ ಕವಿದು ಬಿಳ್ದು...)

**ದುರ್ಯೋಧನನ ಪತ್ನಿಯರು :** ಕುರುಮಹೀಪತಿ ಎಲ್ಲಿದನ್... ಎಲ್ಲಿದನ್ ಮಹೀವಲ್ಲಭನ್, ಎಲ್ಲಿದನ್... ಎಲ್ಲಿದನ್... ಇಂದುವಂಶ ತಿಲಕಾಹ್ವಯನ್ ಎಲ್ಲಿದನ್... ಎಲ್ಲಿದನ್... ಲಸತ್ ಪಲ್ಲವ ಕೀರ್ತಿ ಚಾರುತರ ಮೂರ್ತಿ ಫಣೀಂದ್ರ ಪತಾಕನ್ ಎಲ್ಲಿ ತಾನ್ ಎಲ್ಲಿದನ್... ಎಲ್ಲಿದನ್ ಗಡ... ಮನಃಪ್ರಿಯನ್ ಸುಯೋಧನನ್ ಎಲ್ಲಿದನೋ...

(ಎಂದು ಕರುಣಾಕ್ರಂದನಮ್ ಗೆಯ್ವುದುಮ್, ಆಗಳ್ ಅದಮ್ ಕಂಡು ಧರ್ಮನಂದನನ್ ಧೃತರಾಷ್ಟ್ರಂಗಮ್ ಗಾಂಧಾರಿಗಮ್ ಎರಗಿ ಪೊಡೆವಟ್ಟು..)

**ಧರ್ಮರಾಯ :** ಅಯ್ಯ, ಎಮಗೆ ಬಾಡಮ್ ಅಯ್ದನ್ ಈಯದೆ... ಸಂಧಿಯನ್ ಒಲ್ಲದೆ... ನಿಮ್ಮ ಗಾಂಗೇಯರ ಮಾತು ಕೇಳದೆ... ಕುರುರಾಜನ್ ಅಳಿದನ್. ಅದರ್ಕೆ ದುಃಖದಿಮ್ ಬಾಯಳಿಯಲ್ಕೆವೇಡ... ನಿಮಗೆ ಆನ್ ಮಗನಲ್ಲನೆ... ಇನ್ ಎಮಗೆ ಅಮೋಘಮ್ ಪಾಂಡುಮಹೀಪತಿಯಿಂದಮ್ ಅಗ್ಗಳಮ್ ನೀಮೆ ತಂದೆಯುಮ್ ತಾಯುಮ್... ನಿಮಗೆ

ಅಯ್ವರ್ ಬೆಸಕಯ್ವೆಮ್... ಕ್ರಮದೆ ಎಮ್ಮಿನ್ ಕೂಡಿಕೊಂಡು ಪೂರ್ವಕ್ರಮದಿಂದೆ ನೆಲನಮ್ ಆಳ್ವುದು... ಅಂಧನೃಪಾಲಾ... ಎಮ್ಮನ್ ನೋಡಿ... ನಿಮ್ಮ ಸುತರನ್ ಇನ್ ಮರೆವುದು.

(ಎಂದು ಧರ್ಮನಂದನನ್ ನುಡಿಯೆ... ಧೃತರಾಷ್ಟ್ರನ್ ಅವಧಾರಿಸಿ..)

**ಧೃತರಾಷ್ಟ್ರ** : ಯಮನಂದನ, ಎಮಗೆ ಇನ್ನುಮ್ ಮಾನಸವಾಳ ಮೋಹಮಿಲ್ಲ. ಇಂದು ನಿನ್ನನ್ ಇನಿತಮ್ ಬೇಳ್ವೆನ್. ಅಸುವೊಸರ್ದ ಅರಸು ಮಕ್ಕಳಮ್... ಈಗಳ್ ಅವರ ವನಿತೆಯರ್ಗೆ ಕುಡುವುದು...

(ಎನೆ)

**ಧರ್ಮರಾಯ** : ಇದಾವ ಗಹನಮ್. ಅವರ್ಗಳ್ಗಮ್ ಸಂಸ್ಕಾರ ವಿಧಿಯಮ್ ಮಾಳ್ಪೆನ್.

(ಎಂದಾಗಳ್ ಕುಂತಿ ತನ್ನ ಚೊಚ್ಚಿಲ ಮಗನನ್... ದಿನೇಶಸುತನ್... ಅಂಗಮಹಿತಳಾಧಿಪ ರಾಧಾತನಯನ ಕಳೇಬರಮನ್ ಭೋಂಕನೆ ಕಂಡಳ್... ತನುಶೋಕಾನಳನ್ ಅಳುರಲ್... ಅಂತು ಕರ್ಣನ ಕಳೇಬರಮನ್ ತಳ್ಕೈಸಿ ಪಳಯಿಸುವ ನಿಜ ಜನನಿಯಮ್ ಧರ್ಮನಂದನನ್)...

**ಧರ್ಮರಾಯ** : ಇವನಾರ್ಗೆ

(ಎಂದು ಬೆಸಗೊಳ್ವುದುಮ್)

**ಕುಂತಿ** : ವನಜಾತಪ್ರಿಯಬಂಧುಗೆ ಅಂಗಪತಿಯನ್... ಧರ್ಮಂಗೆ ನಿನ್ನನ್... ಹುತಾಶನಮಿತ್ರಂಗೆ ಬಕಾರಿಯನ್... ಕುಲಿಶಿಗಮ್ ಗಾಂಡೀವಿಯನ್ ಪೆತ್ತೆನ್... ಈ ದಿನಕೃತ್ ನಂದನನ್ ಎನ್ನ ಚೊಚ್ಚಿಲ ಮಗನ್ ಕರ್ಣನ್... ನಿಮ್ಮ ಅಗ್ರಜನ್... ಆನ್ ಇನಿತಮ್... ನಿಮ್ಮಯ ಮೋಹದಿಂದೆ ಉಸಿರದಿರ್ದೆನ್... ಕೊಂದೆನಯ್ ಧರ್ಮಜಾ.

(ಎಂಬುದುಮ್... ಮಕ್ಕಳ್ ಅತ್ಯಂತ ದುಃಖಿತರಾಗಿ..)

**ಪಾಂಡವರು** : ಕರಮ್ ಇಂತು ಒಂದು ಅವಿವೇಕಮಮ್ ನೆಗಳ್ದಿರ್... ಅಂದೇಕೆ ಇಂತುಟಮ್ ಪೇಳದಿರ್ದಿರೊ... ಮುನ್

ಪೇಳ್ದೊಡೆ... ಇದೇಕೆ ಕೂಡಿದಪುದು... ಎಮ್ಮ ಅಣ್ಣಂಗೆ ಉರ್ವರೆಯಮ್ ಕೊಟ್ಟು... ಅವನ್ ಆಳ್ದನ್ ಆಗೆ... ಬಳಿಕ ಆವು ಆಳಾಗಿ... ಸೌದರ್ಯದಿಂದೆ ಇರೆವೇ... ಪೊಲ್ಲದು ಗೆಯ್ದಿರಿ.

(ಎಂದು ಕುಂತೀಸುತರ್ ಕುಂತಿಯನ್ ಜಡಿದರ್)

**ಕೃಷ್ಣ** : ಕ್ಷತ್ರಿಯ ಧರ್ಮಮ್ ಇಂತುಟೆ ವಲಮ್... ಮನಃಕ್ಷತಮ್ ಪಡಲ್ವೇಡಿಮ್... ಸಂಸಾರ ಸ್ವರೂಪಮನ್ ಅರಿದು ಸೈರಿಸುವುದು.

(ಎಂದು ಅವರಮ್ ವಿಗತ ಶೋಕರ್ ಮಾಡೆ... ದುರ್ಯೋಧನ ಪ್ರಭೃತಿಗಳ ಪೆಣಂಗಳನ್ ಒಂದೆಡೆಯೊಳ್ ಇಟ್ಟು, ದ್ವಿಜರಿಮ್ ಸಂಸ್ಕಾರ ಕರ್ಮಮನ್ ನಿರ್ವರ್ತಿಸಿ... ಕರ್ಣನ ಕಳೇಬರಮನ್ ಬ್ರಾಹ್ಮಣರಿಮ್ ತಾವೆ ಸಂಸ್ಕಾರಮಮ್ ಮಾಡಿ... ಸಮಸ್ತರ್ಗಮ್ ಜಲದಾನ ಕ್ರಿಯೆಗಳಮ್ ನಿರ್ವರ್ತಿಸಿ... ತದನಂತರ ಕೊಂತಿಯುಮ್ ಗಾಂಧಾರಿಯುಮ್ ಧೃತರಾಷ್ಟ್ರನುಮ್ ಕುರು ನರೇಂದ್ರನ ಅರಸಿಯರ್ ಮೊದಲಾಗೆ ಎಲ್ಲರುಮ್ ಅನಶನ ದೀಕ್ಷೆಯಮ್ ಕೈಕೊಂಡು... ಉತ್ತಮ ಮೋಕ್ಷಮಮ್ ತಾಳ್ದಿದರ್... ಇತ್ತಲ್ ಧರ್ಮನಂದನನ್ ಮುಕುಂದಂಗೆ ಕಯ್ಯಮ್ ಮುಗಿದು)

**ಧರ್ಮರಾಯ** : ಇನಿತೊಂದು ಉಗ್ರ ಸಮಸ್ತ ಭಾರತ ಮಹಾಭಾರಾತಿ ಯುದ್ಧಮ್... ಮುಕುಂದ, ನಿಜಾನುಗ್ರಹದಿಂದಮಾಯ್ತು... ಪಾರ್ಥನ್ ಕಿರಿಯನ್... ಎನಗೆ ಮಹೀ ಮೋಹಮಿಲ್ಲ... ಈ ಭೀಮಂಗೆ ನೀನ್ ಪಟ್ಟಬಂಧಮನ್ ಮಾಳ್ಪುದು... ಈತನ್ ಕುರುಯುದ್ಧ ಲಬ್ಧಜಯನ್... ಅದರ್ಕೆ ಹಸ್ತಿನಪುರ ಪ್ರಸ್ಥಾನಮಮ್ ಮಾಡುವಮ್.

(ಎಂಬುದುಮ್, ಭೀಮಂಗೆ ಪಟ್ಟಬಂಧಮನ್ ಮಾಳ್ಪುದೆಂದು ವಾಸುದೇವನ್ ಮುಂತಾಗಿ... ಸಹದೇವನ್ ನಿರೂಪಿಸಿದ ಶುಭ ಮುಹೂರ್ತದೊಳ್ ಹಸ್ತಿನಪುರಮನ್ ಪೊಕ್ಕು...

ತಾಟಿತ ಮಹಾಭೇರೀರವಮ್ ದೆಸೆಯಮ್ ತೆಕ್ಕನೆ ತೀವೆ... ವಿಪ್ರರ್ ಎಣ್ದೆಸೆಯೊಳ್ ವೇದನಿನಾದದಿಮ್ ಪರಸೆ... ಪಂಕೇಜಾಕ್ಷಿಯರ್ ಕೂಡಿ ಸಂತಸದಿಮ್ ಸೇಸೆಯನಿಕ್ಕೆ... ಪಾಂಡವಬಲ ಪ್ರಾಕಾರ ವೀರಂಗೆ... ಸಾಹಸ ಭೀಮಂಗೆ ಮನೋಮುದಮ್ ಬೆರಸು ಕೃಷ್ಣನ್ ಪಟ್ಟಮಮ್ ಕಟ್ಟಿದನ್... ಶ್ರೀಯಮ್ ಕುರುಭೂಭೃದ್ಬಲ ತೋಯಧಿಯೊಳ್ ಭುಜಮಂದರದಿಮ್ ಕಡೆದು ಪಡೆದು... ದಾಯಾದಮಲ್ಲನ್ ಎನಿಸಿದ ಅಜೇಯನ್ ಭುಜಬಲ ವಿಭಾಸಿ ಸಾಹಸ ಭೀಮನ್.)

❖

# ರನ್ನ
# ಗದಾಯುದ್ಧ ಕಾವ್ಯ ಪ್ರಸಂಗ ಓದು
## ಪದ ವಿಂಗಡಣೆ ಮತ್ತು ತಿರುಳು

### ನೋಟ–ಒಂದು

## ಭೀಮಸೇನನ ಪ್ರತಿಜ್ಞೆ

ಪ್ರಸ್ತಾವ=ಸಮಯ/ಸನ್ನಿವೇಶ/ಸಂದರ್ಭ; **ಆ ಪ್ರಸ್ತಾವದೊಳ್**= ಹಸ್ತಿನಾವತಿಯ ಬಳಿಯ ಕುರುಕ್ಷೇತ್ರ ರಣರಂಗದಲ್ಲಿ ಪಾಂಡವರು ಮತ್ತು ಕೌರವರ ನಡುವೆ ನಡೆಯುತ್ತಿದ್ದ ಯುದ್ಧದ ಹದಿನೆಂಟನೆಯ ದಿನದಂದು ಕೌರವ ಪಡೆಯ ಸೇನಾಧಿಪತಿಯಾಗಿದ್ದ ಶಲ್ಯನು ಸಾವನಪ್ಪಿದ್ದಾನೆ. ಇದಕ್ಕೂ ಮೊದಲು ಕೌರವರ ಪಡೆಯ ಸೇನಾಧಿಪತಿಗಳಾಗಿ ಭೀಷ್ಮ, ದ್ರೋಣಾಚಾರ್ಯ, ಕರ್ಣ ಹೋರಾಡಿ ಸಾವನ್ನಪ್ಪಿದ್ದಾರೆ. ತನ್ನ ತಮ್ಮಂದಿರನ್ನು ಮತ್ತು ಮಕ್ಕಳೆಲ್ಲರನ್ನೂ ಕಳೆದುಕೊಂಡಿರುವ ದುರ್ಯೋಧನ ಮಾತ್ರ ಜೀವಂತವಾಗಿ ಉಳಿದಿರುವ ಸಂದರ್ಭದಲ್ಲಿ; ಯಜ್ಞವೇದೀಸಂಭವೆ+ಉಮ್; **ಯಜ್ಞವೇದೀಸಂಭವೆ**=ಯಾಗದ ಬೆಂಕಿಯ ಕುಂಡದಲ್ಲಿ ಹುಟ್ಟಿದವಳಾದ ದ್ರೌಪದಿ; ದ್ರೋಣನಿಂದ ಅಪಮಾನಗೊಂಡಿದ್ದ ದ್ರುಪದನು ಯಾಗವನ್ನು ಮಾಡಿ, ದ್ರೋಣನನ್ನು ಕೊಲ್ಲುವ ಶಕ್ತಿಯುಳ್ಳ ಮಗನನ್ನು ಮತ್ತು ಮಹಾ ವೀರನಾದ ಅರ್ಜುನನ್ನು ಅಳಿಯನನ್ನಾಗಿ ಪಡೆಯಲು ಒಬ್ಬ ಮಗಳನ್ನು ಯಾಗದ ಕುಂಡದಲ್ಲಿ ಪಡೆದಿದ್ದನು. ಕಾವ್ಯಲೋಕದಲ್ಲಿ ಈ ರೀತಿ ಕವಿಕಲ್ಪಿತ ಸಂಗತಿಗಳು ರೂಪಕದ ತಿರುಳಿನಲ್ಲಿ ಚಿತ್ರಣಗೊಂಡಿರುತ್ತವೆ; ಯಾಜ್ಞಸೇನಿ+ಉಮ್;

**ಯಾಜ್ಞಸೇನಿ**=ಯಜ್ಞಸೇನನೆಂದು ಹೆಸರನ್ನು ಪಡೆದಿದ್ದ ದ್ರುಪದರಾಜನ ಮಗಳಾದ ದ್ರೌಪದಿ; **ದ್ರುಪದ ರಾಜೋಪವನ ಜಯ ವೈಜಯಂತಿಯುಮ್ ಎನಿಸಿದ**=ದ್ರುಪದ ರಾಜನ ಉದ್ಯಾನವನದ ವಿಜಯದ ಪತಾಕೆಯೆಂದು ಹೆಸರಾಂತ ದ್ರೌಪದಿ; **ಪಾಂಚಾಲರಾಜ ತನೂಜೆ**=ಪಾಂಚಾಲ ದೇಶದ ರಾಜನಾದ ದ್ರುಪದನ ಮಗಳಾದ ದ್ರೌಪದಿ: **ಅನವರತ ಧಾರಾಪೂರ ಪರಿವಾರಿತ ಬಾಷ್ಪವಾರಿ**

**ಪಲ್ಲವನೇತ್ರೆಯುಮ್**=ಅತ್ತು ಅತ್ತು ಒಂದೇ ಸಮನೆ ಸುರಿಯುತ್ತಿರುವ ಕಣ್ಣೀರಿನಿಂದಾಗಿ ಕೆಂಪಗಾಗಿರುವ ಕಣ್ಣುಳ್ಳವಳು; **ಅಸಹ್ಯಪರಿಭವಾನಲ ದಂದಹ್ಯಮಾನಗಾತ್ರೆಯುಮಾಗಿ**=ಮಯ್ ಮನದಲ್ಲಿ ತಡೆಯಲಾಗದಂತಹ ಅಪಮಾನದ ಬೆಂಕಿಯಲ್ಲಿ ಬೇಯುತ್ತಿರುವವಳಾಗಿ; ಕಂಚುಕಿ=ರಾಣಿವಾಸದ ಪಾರುಪತ್ಯಗಾರ/ಮೇಲ್ವಿಚಾರಕ; ಮೇಳದ ಕೆಳದಿ=ನಾಟ್ಯ ಸಂಗೀತಗಳಲ್ಲಿ ಗೆಳತಿ/ಸಖಿ; **ದೃಷ್ಟಾದೃಷ್ಟಪರಂಪರೆಯೆಂಬ ವೃದ್ಧ ಕಂಚುಕಿಯುಮ್ ಬುದ್ಧಿಮತಿಯೆಂಬ ಮೇಳದ ಕೆಳದಿಯುಮ್ ಬೆರಸು**=ದೃಷ್ಟಾದೃಷ್ಟಪರಂಪರೆಯೆಂಬ ಹೆಸರಿನ ಹಿರಿಯನಾದ ಕಂಚುಕಿ ಮತ್ತು ಬುದ್ಧಿಮತಿಯೆಂಬ ಹೆಸರಿನ ಕಲಾವಿದೆಯಾದ ಸಖಿಯ ಜತೆಗೂಡಿ; ಕರಗ=ನೀರು ತುಂಬಿದ ಕಳಶ/ಕೊಡ;

**ದೇವಾಸುರ ಯುದ್ಧಕ್ಕೆ ಕರಗಮ್ ಪೊತ್ತಳ್ ಎಂಬಂತೆ ಪವಮಾನ ತನುಜನಲ್ಲಿಗೆ ಬಂದು**=ದೇವತೆಗಳ ಮತ್ತು ರಕ್ಕಸರ ಕಾಳೆಗಕ್ಕೆ ಕರಗವನ್ನು ಹೊತ್ತು ಬಂದಳು ಎಂಬಂತೆ ವಾಯುದೇವನ ಮಗನಾದ ಭೀಮನ ಬಳಿಗೆ ಬಂದು; ದನುಜವಿರೋಧಿ=ರಕ್ಕಸರ ಶತ್ರುವಾದ ಕೃಷ್ಣ; **ದನುಜವಿರೋಧಿ ಮಾಡಿದೊಡಮ್ ಆಗದ ಸಂಧಿಯೊಳೇನೊ**=ಕೃಷ್ಣನು ಕುರುಕ್ಷೇತ್ರ ಯುದ್ಧವನ್ನು ನಿಲ್ಲಿಸಲು ಮಾಡಿದ ಸಂಧಾನವು ಕಯ್ಗೂಡದೆ ಒಳ್ಳೆಯದೇ ಆಯಿತು; **ನಿನ್ನ ಸೈಪಿನೊಳ್ ಅರಿಸೇನೆ ಅವಶಿಷ್ಟ ನಿರ್ಧನ ಸುಯೋಧನಮಾಯ್ತು**=ನೀನು ಮಾಡಿದ ಪುಣ್ಯದಿಂದ ಅಂದರೆ ನಿನ್ನ ಕೆಚ್ಚೆದೆಯ ಹೋರಾಟದಿಂದಾಗಿ ಶತ್ರುವಿನ ಸೇನೆಯಲ್ಲಿ ದುರ್ಯೋಧನನ್ನು ಬಿಟ್ಟು ಉಳಿದವರೆಲ್ಲರೂ ಹತರಾದರು; **ಇಂದು ಸಿಂಧುನಂದನ ಧೃತರಾಷ್ಟ್ರರಿರ್ದು ಒರೆಯೆ ನಮ್ಮ ಅರಸನ್ ಮರಳ್ದು ಇಂಬುಕೆಯ್ಗುಮ್ ಎಂದು ಎನಗೆ ಅನುಶಯಮಾದುದು**=ಈಗ ನನಗೆ ಆ ಗಂಗಾಪುತ್ರನಾದ ಭೀಷ್ಮ ಮತ್ತು ಧೃತರಾಷ್ಟ್ರರು ದುರ್ಯೋಧನನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಮತ್ತೆ ಸಂಧಾನದ ಮಾತನ್ನಾಡಿದರೆ, ನಮ್ಮ ಒಡೆಯನಾದ ಧರ್ಮರಾಯನು ಸಂಧಿಯನ್ನು ಮಾಡಿಕೊಳ್ಳಲು ಒಪ್ಪಿಕೊಳ್ಳುವನು ಎಂಬ ಆತಂಕ ನನ್ನನ್ನು ಕಾಡುತ್ತಿದೆ; ಅಂತಕ=ಯಮ; ಕೌರವಾಂತಕ=ದುರ್ಯೋಧನನ ಪಾಲಿಗೆ ಯಮನಂತಿರುವ ಭೀಮ;

**ಕೌರವಾಂತಕಾ, ಸಂಶಯಮಮ್ ಕಳೆ**=ಭೀಮನೇ, ನನ್ನ ಮನದ ಸಂಶಯವನ್ನು ಹೋಗಲಾಡಿಸು; **ಖಳ ದುಶ್ಶಾಸನ ವಕ್ಷಸ್ಥಳೋಚ್ಚಲತ್ ಕೃಷ್ಣ ರಕ್ತ ಜಲದಿಮ್ ಕೋಪಾನಳನಮ್ ಮಳ್ಗಿಸಿ**=ದುರುಳ ದುಶ್ಶಾಸನನ ಎದೆಯಿಂದ ಚಿಮ್ಮಿದ ಕಪ್ಪನೆಯ ರಕ್ತಪಾನದಿಂದ ನಿನ್ನ ಕೋಪವೆಲ್ಲವನ್ನೂ ನೀಗಿಕೊಂಡು; ಹೆಪ್ಪುಗಟ್ಟಿದ ರಕ್ತದ ಬಣ್ಣವು ಕಪ್ಪಗಿರುತ್ತದೆ; **ನೀನುಮ್ ಗಳಾ**=ನೀನು ಕೂಡಾ; **ಗಳಿತ**

**ಕೋಪನ್ ಇರ್ಪ ತೆರದಿಂದೆ ಇರ್ದಯ್**=ಕೋಪವೆಲ್ಲಾ ತಣ್ಣಗಾದವನಂತೆ ಇದ್ದೀಯೆ; **ಅಹಿತರೊಳ್ ಸಮವಾಯಮ್ ಸಂಧಿ ಮಾಡಿ ಯಮಸೂನು ಪೇಳೆ**= ಶತ್ರುಗಳಾದ ಕೌರವರೊಡನೆ ಹೊಂದಿಕೊಂಡು ಸಂಧಿಯನ್ನು ಮಾಡಿಕೊಳ್ಳುವಂತೆ ಧರ್ಮರಾಯನು ಹೇಳಿದರೆ; **ನಿಮಗೆ ದಲ್ ವನವಾಸವೆ ಶರಣ್**=ಪಾಂಡವರಾದ ನಿಮಗೆ ನಿಶ್ಚಿತವಾಗಿಯೂ ವನವಾಸವೇ ಗತಿ; **ಅಂದು ಅಗ್ನಿಮುಖದೆ ಪುಟ್ಟಿದುದರಿಂದೆ ಎನಗಮ್ ಅಗ್ನಿಮುಖಮ್ ಶರಣ್ ಎಂದು ನೊಂದು ನುಡಿಯೆ**= ಅಂದು ನಾನು ಯಾಗದ ಬೆಂಕಿಯ ಕುಂಡದಲ್ಲಿ ಹುಟ್ಟಿದುದರಿಂದ ನನಗೆ ಬೆಂಕಿಕುಂಡವೇ ಗತಿ ಎಂದು ನೊಂದು ನುಡಿಯಲು; ಅಂದರೆ ನಿಮಗೆ ವನವಾಸ; ನನಗೆ ಸಾವು ಕಟ್ಟಿಟ್ಟ ಬುತ್ತಿ;

**ಮರುನ್ನಂದನನ್ ದರಹಸಿತ ವದನಾರವಿಂದನಾಗಿ ತನ್ನ ಅಂತರ್ಗತದೊಳ್**= ವಾಯುಪುತ್ರನಾದ ಭೀಮನು ಮುಗುಳುನಗೆಯ ಮೊಗದಿಂದ ತನ್ನ ಮನದಲ್ಲಿ ಈ ರೀತಿ ಆಲೋಚಿಸತೊಡಗುತ್ತಾನೆ. ಇಲ್ಲಿ ಭೀಮನ ಮೊಗದಲ್ಲಿ ಮುಗುಳುನಗೆಯು ಹೊರಹೊಮ್ಮುತ್ತಿರುವುದು ಆನಂದದಿಂದಲ್ಲ, ದ್ರೌಪದಿಯು ಪಡುತ್ತಿರುವ ಸಂಕಟ ಮತ್ತು ಆತಂಕವನ್ನು ಕಂಡು ಮನನೊಂದ ವಿಷಾದದ ನಗೆಯಾಗಿ ಮೂಡಿಬಂದಿದೆ; ಕುರುರಾಜ+ಅನುಜ; ಅನುಜ=ತಮ್ಮ; ಕುರುರಾಜಾನುಜ= ದುರ್ಯೋಧನನ ತಮ್ಮನಾದ ದುಶ್ಶಾಸನ; **ಕುರುರಾಜಾನುಜ ಭೀಕರ ಕರ ವಿಲುಳಿತ ನೀಲಕಬರಿಭರಮಮ್ ಪಿಡಿದುಮ್ ಪರಿಭವಿಸಲ್**=ದುಶ್ಶಾಸನನು ತನ್ನ ಭಯಂಕರವಾದ ಕಯ್ಗಳಿಂದ ದ್ರೌಪದಿಯ ಕಡುಕಪ್ಪು ಬಣ್ಣದ ತಲೆಗೂದಲಿನ ಮುಡಿಯನ್ನು ಹಿಡಿದು ತಿರುಚಿ ಎಳೆದಾಡಿ ಅಪಮಾನವನ್ನುಂಟುಮಾಡಲು; **ಕೃಷ್ಣೆಗೆ ಮಿಗೆ ಕೋಪಮಮ್ ಮನಸ್ತಾಪಮುಮನ್ ದೊರೆಕೊಳಿಸದೆ ಎಂದು ಉಪಲಕ್ಷಿಸಿ**=ದ್ರೌಪದಿಗೆ ಅತಿಹೆಚ್ಚಿನ ಕೋಪ ಮತ್ತು ಮನದ ಬೇಗುದಿಯು ಉಂಟಾಗುವುದು ಸಹಜವಲ್ಲವೇ ಎಂಬುದನ್ನು ಗಮನಿಸಿ; ಈಗ ಭೀಮನು ತನ್ನ ಮನದಲ್ಲಿ ಅಂದು ದುರ್ಯೋಧನನ ಅರಮನೆಯಲ್ಲಿ ಧರ್ಮರಾಯನು ಜೂಜಾಟದಲ್ಲಿ ಸೋತಾಗ ನಡೆದ ಪ್ರಸಂಗವನ್ನು ನೆನೆದುಕೊಂಡು ಸಂಕಟ, ಆಕ್ರೋಶ ಮತ್ತು ಸೇಡಿನ ಒಳಮಿಡಿತಗಳಿಂದ ಕುದಿಯತೊಡಗುತ್ತಾನೆ;

**ಯಮಪುತ್ರನ್ ಜೂದಿಮ್ ಧಾತ್ರಿಯುಮನ್ ಈ ಹುತಾಶನ ಪುತ್ರಿಯುಮಮ್ ಬರಿದೆ ಸೋಲ್ತನಲ್ಲನ್**=ಧರ್ಮರಾಯನು ಜೂಜಿನಲ್ಲಿ ರಾಜ್ಯವನ್ನು ಮತ್ತು ಈ ಅಗ್ನಿಪುತ್ರಿಯಾದ ದ್ರೌಪದಿಯನ್ನು ಮಾತ್ರ ಸೋಲಲಿಲ್ಲ. **ರಿಪುಗೆ ಕ್ಷತ್ರಿಯ ತೇಜಮುಮಮ್ ಅಂದೆ ಸೋಲ್ತನಾಗಲೆವೇಡಾ ಎಂದು ಅನಿಲಸುತನ್ ನಿಜಾಗ್ರಜಂಗೆ ಮುಳಿದು**=ಹಗೆಗೆ ಜೂಜಿನಲ್ಲಿ ವೀರತನಕ್ಕೆ ಸಂಕೇತವಾದ ಕ್ಷತ್ರಿಯ

ತೇಜಸ್ಸನ್ನೂ ಅಂದು ಸೋತನಲ್ಲವೇ ಎಂದು ಭೀಮನು ತನ್ನ ಅಣ್ಣನ ಬಗ್ಗೆ ಕೋಪಿಸಿಕೊಂಡು; **ದ್ರೌಪದಿಯನ್ ಪರಿಭವಿಸುವಲ್ಲಿ ಪವನಸೂನುಗಮ್ ಪಾರ್ಥಂಗಮ್ ನೋಡುತ್ತಿರಲಕ್ಕುಮೆ**=ರಾಜಸಭೆಯಲ್ಲಿ ಎಲ್ಲರ ಮುಂದೆ ದ್ರೌಪದಿಯನ್ನು ದುಶ್ಯಾಸನನು ಅಪಮಾನಪಡಿಸುತ್ತಿರುವಾಗ ಭೀಮನಾದ ನಾನೂ... ಅರ್ಜುನನೂ ಸುಮ್ಮನೆ ನೋಡುತ್ತಿರಲು ಆಗುತ್ತಿತ್ತೆ. ಈ ರೀತಿ ನಾವಿಬ್ಬರೂ ಸುಮ್ಮನೆ ಕುಳಿತಿರಲು ಏನೋ ದೊಡ್ಡದೊಂದು ಕಾರಣವಿರಬೇಕು; **ಪರವಶದೊಳಿರ್ದರೋ ಮೇಣ್ ಪರಾರ್ಜಿತ ಪ್ರಾಣರಾದರೋ ಎಂದು ತನಗಮ್ ಅರ್ಜುನಂಗಮ್ ಒಡನೆ ಮುಳಿದು**=ಅಂದು ನಾವಿಬ್ಬರೂ ಮಯ್ ಮರೆತಿದ್ದೆವೋ ಇಲ್ಲವೇ ನಮ್ಮಿಬ್ಬರ ಪ್ರಾಣವು ಬೇರೆಯವರ ವಶದಲ್ಲಿತ್ತೋ ಎಂದು ದ್ರೌಪದಿಯ ಮಾನವನ್ನು ಕಾಪಾಡುವುದಕ್ಕೆ ಮುಂದಾಗದ ತನ್ನ ಮತ್ತು ಅರ್ಜುನನ ಬಗ್ಗೆ ಮರುಗಳಿಗೆಯಲ್ಲಿಯೇ ಕೋಪಿಸಿಕೊಂಡು;

**ಅಂದು ಅಣ್ಣನ ಸೂನೃತವಚನಮ್ ಎಂಬ ಮಂತ್ರಾಕ್ಷರದಿಮ್**=ಅಂದು ಜೂಜಿನಲ್ಲಿ ಅಣ್ಣನು ಆಡಿದ ಮಾತಿಗೆ ತಪ್ಪಿ ನಡೆಯಬಾರದೆಂಬ ಮಂತ್ರಾಕ್ಷರದ ಮೋಡಿಗೆ ಒಳಗಾಗಿ; **ನರನುಮ್ ಆನುಮ್ ವಿನಯಮನೆ ಬಗೆದು ವಿಕ್ರಮಮನೆ ಬಗೆಯೆವೆ**=ಅರ್ಜುನನು ಮತ್ತು ನಾನು ಅಣ್ಣನ ಮಾತಿಗೆ ತಲೆಬಾಗಿ ಬಾಳುವ ವಿನಯವನ್ನೇ ದೊಡ್ಡದೆಂದು ತಿಳಿದುಕೊಂಡೆವೇ ಹೊರತು ಪರಾಕ್ರಮದಿಂದ ಹೋರಾಡಿ ಹೆಂಡತಿಯಾದ ದ್ರೌಪದಿಯ ಮಾನವನ್ನು ಕಾಪಾಡುವುದು ದೊಡ್ಡದೆಂದು ತಿಳಿಯಲಿಲ್ಲ; **ಎನಗಮ್ ಸಮ್ಮೋಹನಮ್ ಆದುದಕ್ಕುಮ್ ಎಂದು ಪಶ್ಚಾತ್ತಾಪಮ್ ಗೆಯ್ದು**= ನನ್ನ ತಾಯಿ, ಅಣ್ಣತಮ್ಮಂದಿರು ಮತ್ತು ಹೆಂಡತಿಯಾದ ದ್ರೌಪದಿಗೆ ಏನಾದರೂ ಆಪತ್ತು ಬಂದಾಗ ಮುನ್ನುಗ್ಗಿ ತಡೆದು ಹೋರಾಡುತ್ತಿದ್ದ ನನಗೂ ಅಂದು ಮಂಕು ಕವಿದಂತಾಯಿತು ಎಂದು ದ್ರೌಪದಿಯನ್ನು ಕಾಪಾಡದೆ ಇದ್ದುದಕ್ಕಾಗಿ ಪಶ್ಚಾತ್ತಾಪಪಟ್ಟು; **ಕುರುಕುಲ ವಿಳಯಜ್ವಾಲೆ ಸುಯೋಧನ ಪ್ರಳಯಕಾಲೆ ಪಾಂಚಾಲಿಯ ವದನಮಮ್ ನೋಡಿ**=ಕುರುವಂಶಕ್ಕೆ ಪ್ರಳಯದ ಬೆಂಕಿಯಾಗಿರುವ ಸುಯೋಧನನ ಪಾಲಿಗೆ ಯಮರೂಪಿಯಾಗಿರುವ ದ್ರೌಪದಿಯ ಮೊಗವನ್ನು ನೋಡಿ;

**ನಳಿನಾನನೆ, ನಿನ್ನ ಆನನದಿಮ್ ನಯನ ವಾರಿ ಗಳಿಯಿಸುತಿರೆ ಕಬರಿಭರಮ್ ಗಳಿಯಿಸುತಿರೆ**=ಎಲೈ ದ್ರೌಪದಿಯೇ, ನಿನ್ನ ಮೊಗದಿಂದ ಕಣ್ಣೀರು ಸುರಿಯುತ್ತಿರಲು ನಿನ್ನ ಮುಡಿ ನೇತಾಡುತ್ತಿರಲು; **ನೀನಿರೆ**=ಸಂಕಟ ಮತ್ತು ಅಪಮಾನದ ಬೇಗೆಯಲ್ಲಿ ನೀನು ಬೇಯುತ್ತಿರುವಾಗ; **ಕುರುಕುಳಾಂತಕನ್ ಈ ಭೀಮನ್ ಗಳಿತಕೋಪನೇ**= ಕುರುಕುಲಕ್ಕೆ ಯಮನಾದ ಈ ಭೀಮನು ಕೋಪವಿಲ್ಲದ ಶಾಂತಮೂರ್ತಿಯೇ;

**ಸತ್ಯಪ್ರತಿಜ್ಞನ್ ಎನೆ ಕುರುಪತ್ಯೂರು ಕಿರೀಟ ಭಂಗಮಮ್ ಪಡೆದು ಜಗತ್ ಸ್ತುತ್ಯ ಕೃತಕೃತ್ಯನ್ ಎನಿಸದೆ ಸತ್ಯಾಶ್ರಯ ಪೆಸರ್ಗೆ ಮುಯ್ಯನಾಂಪನೆ ಭೀಮನ್**= ನುಡಿದಂತೆ ನಡೆಯುವವನು ಎಂದು ಹೆಸರಾಂತ ಈ ಭೀಮನು ಕುರುಪತಿಯಾದ ದುರ್ಯೋಧನನ ಕಿರೀಟವನ್ನು ಪುಡಿಗಟ್ಟಿ, ಜಗತ್ತು ಮೆಚ್ಚುವಂತಹ ಕಾರ್ಯವನ್ನು ಮಾಡಿದವನು ಎಂದು ಹೊಗಳಿಸಿಕೊಳ್ಳದೆ ಸತ್ಯಾಶ್ರಯವೆಂಬ ಹೆಸರಿಗೆ ಪಾತ್ರನಾಗುತ್ತಾನೆಯೇ; **ನೀನ್ ಅಗ್ನಿಪುತ್ರಿಯಯ್ ಪವಮಾನ ತನೂಭವನೆನ್**= ನೀನು ಅಗ್ನಿದೇವನ ಮಗಳಾಗಿರುವೆ... ನಾನು ವಾಯುದೇವನ ಮಗನಾಗಿರುವೆ;

**ಆನ್ ಅಣಮ್ ಕೂಡೆ ಅರಿನೃಪರೊಳ್ ಸಂಧಾನಮ್ ಎಂತು**=ನಾನು ಅತಿಶಯವಾಗಿ ನಿನ್ನೊಡನೆ ಕೂಡಿರಲು ಶತ್ರುರಾಜರೊಡನೆ ಸಂಧಿಯು ಹೇಗೆ ತಾನೆ ಆಗುತ್ತದೆ; **ಅನಲ ಅನಿಲ ಸಂಯೋಗಮ್ ಪಗೆಯಮ್ ಉರಿಪದಿರ್ಕುಮೆ**= ಬೆಂಕಿ ಮತ್ತು ಗಾಳಿಯ ಕೂಡುವಿಕೆಯು ಹಗೆಯನ್ನು ಸುಡದಿರುವುದೇ; **ಪರಾಭವಜ್ವಲನ ಧೂಮಕೃಷ್ಣಮ್ ಕೃಷ್ಣೇ**=ಅವಮಾನವೆಂಬ ಉರಿಯ ಹೊಗೆಯಿಂದ ಕಪ್ಪಾದ ಮುಡಿಯುಳ್ಳ ದ್ರೌಪದಿಯೇ; ಪರಮೇಶ್ವರಿ, **ಕುರುಕುಲಜೀವಾಕರ್ಷಣ ಪರಿಣತಮ್**= ಪರಮೇಶ್ವರಿ, ಈ ನಿನ್ನ ಮುಡಿಯು ಕುರುಕುಲದವರ ಜೀವಗಳನ್ನು ಸೆಳೆಯುವುದರಲ್ಲಿ ಪರಿಣತಿಯನ್ನು ಹೊಂದಿದೆ; **ಇದು ಕಾಳಹಸ್ತಮಲ್ಲದೆ ಕೇಶಹಸ್ತಮಕ್ಕುಮೆ**=ಇದು ದುರ್ಯೋಧನಾದಿಗಳಿಗೆ ಯಮಪಾಶವಲ್ಲದೆ ಕೇಶಪಾಶವಲ್ಲ; **ಕುರುನಂದನರಮ್ ಕೊಂದೆನ್**= ಕುರುವಂಶದ ಮಕ್ಕಳನ್ನು ಕೊಂದೆನು; **ಕುರುಶಾಬಾನುಜನ ನೆತ್ತರಮ್ ಕುಡಿದೆನ್**= ದುರ್ಯೋಧನನ ತಮ್ಮನಾದ ದುಶ್ಶಾಸನನ ನೆತ್ತರನ್ನು ಕುಡಿದೆನು; **ಪೂಣ್ದ ಎರಡಮ್ ತೀರ್ಚಿದೆನ್**=ನಾನು ಮಾಡಿದ್ದ ಪ್ರತಿಜ್ಞೆಗಳಲ್ಲಿ ಎರಡನ್ನು ಈಡೇರಿಸಿದ್ದೇನೆ;

**ಇರ್ದಪುವು ಎರಡುಮಮ್**=ಇನ್ನೆರಡು ಪ್ರತಿಜ್ಞೆಗಳು ಉಳಿದುಕೊಂಡಿವೆ; **ಅವಮ್ ತೀರ್ಚಿ ಪಗೆಯಮ್ ತೀರ್ಚದಿರ್ಪೆನೆ**=ಅವನ್ನು ಕಯ್ಗೊಂಡು ಹಗೆಯನ್ನು ನಾಶಮಾಡದೆ ಇರುತ್ತೇನೆಯೇ; **ಊರುಗಳನ್ ಉಡಿವೆನ್**=ದುರ್ಯೋಧನನ ತೊಡೆಗಳನ್ನು ಮುರಿಯುತ್ತೇನೆ; **ಕೌರವ ಪರಿವೃಢನ ಮಕುಟಮಮ್ ಒದೆವೆನ್**= ಕೌರವ ಚಕ್ರವರ್ತಿಯ ಕಿರೀಟವನ್ನು ಒದ್ದು ಪುಡಿಮಾಡುವೆನು; ವೇಣೀಸಂಹಾರ= ಜಡೆಯನ್ನು ಒಟ್ಟುಗೂಡಿಸಿ ಕಟ್ಟುವುದು/ಜಡೆಯನ್ನು ಹೆಣೆಯುವುದು; **ವೇಣೀಸಂಹಾರಮ್ ಮಾಡುವೆನ್**=ಬಿಚ್ಚಿರುವ ನಿನ್ನ ಮುಡಿಯನ್ನು ಹೆಣೆದು ಕಟ್ಟುವೆನು; **ಅದರಿಮ್ ಭಾರಮದು ಇನಿತಲ್ಲದು ಎನ್ನ ಪರಿಭವಭಾವಮ್**= ಆದ್ದರಿಂದ ಹಗೆಯನ್ನು ಸದೆಬಡಿದು ಸೋಲಿಸುವ ಜವಾಬ್ದಾರಿಯು ದೊಡ್ಡದೇನಲ್ಲ; ತಳೋದರಿ=ತೆಳ್ಳನೆಯ ಸೊಂಟವನ್ನುಳ್ಳ ಹೆಣ್ಣು/ಸುಂದರಿ/

ದ್ರೌಪದಿ; **ಕುರುಕುಲಶೋಣಿತ ಪಾದಪದ್ಮತಳಮ್ ವೃಕೋದರನ್ ತಳೋದರಿಗೆ ಕಚಬಂಧ ಬಂಧುರತೆಯನ್ ಆಗಿಪನ್**=ಕುರುಕುಲದ ರಕ್ತದಿಂದ ತೊಯ್ದು ಕೆಂಪಾಗಿರುವ ಪಾದಗಳನ್ನುಳ್ಳ ಈ ಭೀಮನು ದ್ರೌಪದಿಗೆ ಮುಡಿಕಟ್ಟುವ ಮನೋಹರವಾದ ಕಾರ್ಯವನ್ನು ನೆರವೇರಿಸುತ್ತಾನೆ;

**ಆತನ ಪೂಣ್ದ ಪೂಣ್ಕೆ ಶಿಲಾತಳಾಕ್ಷರಮ್ ಎನಿಸಿರ್ಪ ಜನೋಕ್ತಿಯಮ್ ಪುಸಿ ಮಾಳ್ಪೆನೇ**=ಆ ಭೀಮನು ಮಾಡಿದ ಪ್ರತಿಜ್ಞೆ ಎಂದರೆ "ಅದು ಶಿಲೆಯ ಮೇಲೆ ಕೆತ್ತಿದ ಅಕ್ಕರ / ಶಾಸನ ಬರಹ" ಎಂದೆನ್ನುವ ಜನರ ಮಾತನ್ನು ಸುಳ್ಳನ್ನಾಗಿಸುತ್ತೇನೆಯೇ; ಅರ=ಯಮ ಎಂಬ ದೇವತೆ; ಅರನ ಮಗ=ಯಮನೆಂಬ ದೇವತೆಯ ಅನುಗ್ರಹದಿಂದ ಹುಟ್ಟಿದ ಧರ್ಮರಾಯ; ಬಾನ್+ತೊರೆ; ಬಾನ್=ಆಕಾಶ; ತೊರೆ=ನದಿ; ಬಾಂದೊರೆ=ಗಂಗಾ ನದಿ; ಬಾಂದೊರೆಯ ಮಗ=ಗಂಗಾದೇವಿಯ ಮಗ ಭೀಷ್ಮ; **ಅರನ ಮಗನ್ ಪ್ರಾರ್ಥಿಸೆ ಬಾಂದೊರೆಯ ಮಗನ್ ಮಾಡೆ ಸಂಧಿಯಾದಪುದು ಎನುತುಮ್ ಮರುಗದಿರ್**=ಧರ್ಮರಾಯನು ಕೋರಿಕೊಂಡರೆ ಇಲ್ಲವೇ ಭೀಷ್ಮನು ಸೂಚಿಸಿದರೆ ದುರ್ಯೋಧನನೊಡನೆ ಸಂಧಿಯಾಗಿ, ಕುರುಕ್ಷೇತ್ರ ಯುದ್ಧ ನಿಲ್ಲುವುದೆಂದು ಕೊರಗಬೇಡ; **ಅಣ್ಣನ ಮಾತನ್ ಪೆರಗಿಕ್ಕುವೆನ್**=ಅಣ್ಣನ ಮಾತನ್ನು ನಾನು ಲೆಕ್ಕಿಸದೆ ತಳ್ಳಿಹಾಕುತ್ತೇನೆ; **ಅಜ್ಜನಿರ್ದು ಮಾಣ್ಬೊಡಮ್ ಈಯೆನ್ ಎಂದು**=ಅಜ್ಜನಾದ ಭೀಷ್ಮನೇ ಆಸಕ್ತಿಯನ್ನು ವಹಿಸಿ ಯುದ್ಧವನ್ನು ನಿಲ್ಲಿಸಿ ಸಂಧಾನದ ಪ್ರಸ್ತಾಪವನ್ನು ಮಾಡಿದರೂ, ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎಂದು; ಕಾಲ+ಅನಲನ್+ಉಮ್; ಕಾಲಾನಲ=ಪ್ರಳಯಕಾಲದ ಬೆಂಕಿ;

**ಕೌರವ್ಯ ಕುಲಕಾಲಾನಲನುಮ್**=ಕುರುಕುಲಕ್ಕೆ ಪ್ರಳಯಕಾಲದ ಬೆಂಕಿಯಾದವನು; ನಿರ್ವ್ಯಾಜ=ಸಹಜವಾದ; ನಿಬಿಡ=ದಟ್ಟವಾದ/ಒತ್ತಾದ; **ಕುರುರಾಜ ನಿರ್ವ್ಯಾಜ ನಿಬಿಡ ಊರುದ್ವಯಭಂಗ ಪ್ರತಿಜ್ಞಾಭಾರನುಮ್**= ಕುರುರಾಜನ ಗಟ್ಟಿಮುಟ್ಟಾಗಿರುವ ಎರಡು ತೊಡೆಗಳನ್ನು ಮುರಿಯುತ್ತೇನೆ ಎಂಬ ಪ್ರತಿಜ್ಞೆಯನ್ನು ಹೊತ್ತಿರುವವನು; **ಫಣಿಪತಿಕೇತನ ಧೂಮಕೇತುವುಮ್**= ಹಾವುಗಳ ಒಡೆಯನಾದ ಆದಿಶೇಷನ ಲಾಂಛನವುಳ್ಳ ದುರ್ಯೋಧನನ ಪಾಲಿಗೆ ಕೇಡನ್ನು ತರುವ ಧೂಮಕೇತುವಾದವನು; **ಪಾಂಡವಬಲ ಪ್ರಾಕಾರನುಮ್**= ಪಾಂಡವರ ಪಡೆಯನ್ನು ಕಾಪಾಡುವ ಕೋಟೆಯಾದವನು; **ಏಕಾಂಗವೀರನುಮ್**=ಒಬ್ಬನೇ ಹೋರಾಡಿ ಗೆಲ್ಲಬಲ್ಲ ಶೂರನಾದವನು; **ಜರಾಸಂಧಸಂಧಿಬಂಧ ವಿಘಟನನುಮ್**=ಜರಾಸಂಧನೆಂಬ ರಾಜನ ದೇಹವನ್ನು ಇಬ್ಭಾಗವಾಗಿ ಹೋಳು ಮಾಡಿದವನು; ರನ್ನ ಕವಿಗೆ ಆಶ್ರಯದಾತನಾಗಿದ್ದ

ಚಾಳುಕ್ಯ ವಂಶದ ಸತ್ಯಾಶ್ರಯ ಚಕ್ರವರ್ತಿಗೆ ಇದ್ದ **“**ಇರಿವ ಬೆಡಂಗ–ಅಕಳಂಕ ಚರಿತ–ಅಮ್ಮನ ಗಂಧವಾರಣ–ಸಾಹಸಾಂಕ**”** ಎಂಬ ಬಿರುದುಗಳನ್ನು ಭೀಮಸೇನನ ವ್ಯಕ್ತಿತ್ವವನ್ನು ಬಣ್ಣಿಸುವಾಗ ಜತೆಗೂಡಿಸಿದ್ದಾನೆ. ಏಕೆಂದರೆ ಸತ್ಯಾಶ್ರಯ ಚಕ್ರವರ್ತಿಯನ್ನು ಭೀಮನ ಪಾತ್ರದೊಡನೆ ಕವಿ ರನ್ನನು ಸಮೀಕರಿಸಿದ್ದಾನೆ;

**ಇರಿವ ಬೆಡಂಗನುಮ್**=ಯುದ್ಧ ಮಾಡುವುದರಲ್ಲಿ ನಿಪುಣ; **ಅಕಲಂಕಚರಿತನುಮ್**=ಕಳಂಕರಹಿತವಾದ ನಡೆನುಡಿಯುಳ್ಳವನು/ಸದ್ಗುಣವಂತ; ಅಮ್ಮ=ತಂದೆ; ಗಂಧವಾರಣ=ಮದವೇರಿದ ಆನೆ; **ಅಮ್ಮನ ಗಂಧವಾರಣನುಮ್**= ತಂದೆಯ ಮದವೇರಿದ ಆನೆ; ಇದು ಸತ್ಯಾಶ್ರಯನ ಬಿರುದುಗಳಲ್ಲಿ ಒಂದು. ತನ್ನ ತಂದೆಯ ಕಾರ್ಯಗಳಲ್ಲಿ ಮದ್ದಾನೆಯಂತೆ ಮುನ್ನುಗ್ಗುವವನು ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ; ಸಾಹಸ+ಅಂಕ; ಅಂಕ=ವೀರ/ಜಟ್ಟಿ; **ಸಾಹಸಾಂಕನುಮ್ ಎನಿಸಿದ ಭೀಮಸೇನನ್**=ಸಾಹಸವೀರನೆಂದು ಹೆಸರಾಂತ ಭೀಮಸೇನನು; **ಅಂತು ಆರೂಢಕೋಪನುಮ್ ಪ್ರತಿಜ್ಞಾರೂಢನುಮ್ ಆಗೆ**=ಆ ರೀತಿ ಮಹಾಕೋಪಾವೇಶದಿಂದ ತನ್ನ ಪ್ರತಿಜ್ಞೆಯನ್ನು ಈಡೇರಿಸಲು ಸಿದ್ಧನಾಗಲು; ಸಮದ+ಇಭ+ಕುಂಭ+ಭೇದನ; ಸಮದ=ಮದಿಸಿದ; ಇಭ=ಆನೆ; ಕುಂಭ=ಆನೆಯ ತಲೆಯ ಮೇಲೆ ಗುಂಡಾಗಿ ಉಬ್ಬಿರುವ ಭಾಗ/ನೆತ್ತಿ; ಭೇದನ=ಸೀಳುವುದು; ಸಮಯ+ಉಗ್ರ+ನಖ; ಉಗ್ರ=ಭಯಂಕರವಾದ; ನಖ=ಪಂಜ/ಉಗುರು; ಹರಿ=ಸಿಂಹ; ಮೃಗ=ಜಿಂಕೆ; ರಿಪು=ಶತ್ರು;

**ಸಮದೇಭಕುಂಭಭೇದನ ಸಮಯೋಗ್ರನಖಂಗೆ ಹರಿಗೆ ಮೃಗರಿಪು ಪೆಸರ್ ಉತ್ತಮಿಕೆಯೆ**=ಮದವೇರಿದ ಆನೆಯ ಕುಂಭವನ್ನೇ ಸೀಳುವ ಅಂಕುಶದಂತಹ ಹರಿತವಾದ ಪಂಜಗಳುಳ್ಳ ಸಿಂಹಕ್ಕೆ ‘ಜಿಂಕೆಯ ಶತ್ರು’ ಎಂಬ ಹೆಸರು ಸರಿಹೊಂದುವುದೇ; **ಜರಾಸಂಧಮಥನ ನಿನಗೆ ಕುರುವೈರಿ ಪೆಸರ್ ಅದೇನ್ ಉನ್ನತಿಯೇ**=ಜರಾಸಂಧನನ್ನೇ ಸೀಳಿ ಕೊಂದಿರುವ ನಿನಗೆ **‘ಕುರುವಂಶದ ಶತ್ರು’** ಎಂಬ ಹೆಸರು ಅದೇನು ಬಹುದೊಡ್ಡದೇ; **ಇರಿವಬೆಡಂಗ ದೇವ ಪರಮೇಶ್ವರ ಸಾಹಸಭೀಮ ನಿನ್ನೊಳ್ ಆರ್ ಇರಿದು ಬರ್ದುಂಕುವರ್**=ಇರಿವಬೆಡಂಗ ದೇವ ಪರಮೇಶ್ವರ, ಸಾಹಸ ಭೀಮ ನಿನ್ನೊಡನೆ ಹೋರಾಡಿ ಯಾರು ತಾನೆ ಬದುಕಬಲ್ಲರು; **ಯುದ್ಧದೊಳ್ ನಿಜಭುಜ ಉಗ್ರಗದಾಪರಿಘ ಪ್ರಹಾರದಿಮ್**= ಯುದ್ಧದಲ್ಲಿ ನಿನ್ನ ಭುಜದ ಮೇಲಣ ಭಯಂಕರವಾದ ಗದಾಪರಿಘದ ಹೊಡೆತದಿಂದ; **ಪರಿವರಿಯಾಗಿ**=ಕತ್ತರಿಸಿ ತುಂಡುತುಂಡಾಗಿ; ಪುಣ್ಣುವೆಣನಾಗಿ= ಗಾಯಗಳಿಂದ ಗಾಸಿಗೊಂಡ ಹೆಣವಾಗಿ; ಮರುಳ್ಗೆ ಉಣಿಸಾಗಿ=ಪಿಶಾಚಿಗಳಿಗೆ ಉಣಿಸಾಗಿ;

**ಕುರಿದರಿಯಾಗಿ ಬಿಳ್ದ ಅರಿಬಲಂಗಳೆ ಪೇಳವೆ ನಿನ್ನ ಬೀರಮಮ್ ಎಂದು ಅನಲನಂದನೆ ಅನಿಲನಂದನನನ್ ಪೊಗಳ್ದು**=ಬಲಿಗಂಬದ ಬಳಿ ಕತ್ತರಿಸಿ ಬಿದ್ದ ಕುರಿಗಳ ರಾಶಿಯಂತೆ ಯುದ್ಧರಂಗದಲ್ಲಿ ತುಂಡುತುಂಡಾಗಿ ಬಿದ್ದಿರುವ ಹಗೆಯ ಪಡೆಗಳೇ ಹೇಳುತ್ತಿಲ್ಲವೇ ನಿನ್ನ ಪರಾಕ್ರಮದ ಮಹಿಮೆಯನ್ನು ಎಂದು ಅಗ್ನಿಪುತ್ರಿಯಾದ ದ್ರೌಪದಿಯು ವಾಯುಪುತ್ರನಾದ ಭೀಮನನ್ನು ಹೊಗಳಿ; **ಒಡಲ್ ಒಡಮೆ ಎಂಬ ಇವೆರಡುಮ್ ಕೆಡಲಿರ್ಪುವು**=ಮಾನವರ ದೇಹ ಮತ್ತು ಮಾನವರ ಬಳಿ ಇರುವ ಸಂಪತ್ತು ಎಂಬ ಇವೆರಡು ಒಂದಲ್ಲ ಒಂದು ದಿನ ಇಲ್ಲವಾಗುತ್ತವೆ; **ಕೆಡದ ಕಸವರಮ್ ಜಸಮ್**=ಎಂದೆಂದಿಗೂ ನಾಶವಾಗದ ಸಂಪತ್ತೆಂದರೆ ಒಳ್ಳೆಯ ನಡೆನುಡಿಯಿಂದ ಬರುವ ಕೀರ್ತಿ; **ಅದರಿಮ್ ಇರಿವ ಬೆಡಂಗಾ ಕೆಡುವ ಒಡಲ್ ಒಡಮೆಯನ್ ಎಂದುಮ್ ಕೆಡದ ಒಡಮೆಗೆ ಮಾರುಗುಡುವುದು**=ಆದ್ದರಿಂದ ಮಹಾಶೂರನಾದ ಭೀಮನೇ ಕೆಡುವ ದೇಹ ಮತ್ತು ಸಂಪತ್ತನ್ನು ಎಂದೆಂದಿಗೂ ಕೆಡದ ಸಂಪತ್ತಿಗಾಗಿ ಅರ್ಪಿಸುವುದು. ಅಂದರೆ ಈ ದೇಹ ಮತ್ತು ಸಂಪತ್ತನ್ನು ಒಳ್ಳೆಯ ಕೆಲಸಕ್ಕಾಗಿಯೇ ಮುಡಿಪಾಗಿಡಬೇಕು; **ಮಣಿ ಕನಕಮ್ ವಸ್ತು ವಿಭೂಷಣಂಗಳಮ್ ಕೊಟ್ಟು ಪೆಂಡಿರ್ ಒಲ್ವರೆ**=ರತ್ನ ವಜ್ರ ವೈಡೂರ್ಯ ಮುತ್ತು ಚಿನ್ನದಿಂದ ಮಾಡಿದ ಒಡವೆಗಳನ್ನು ಕೊಟ್ಟರೆ ಹೆಣ್ಣುಗಳು ಒಲಿಯುತ್ತಾರೆಯೇ;

**ಗಂಡರ್ ಗುಣಮನೆ ಮೆರೆವುದು**=ಶೂರರಾದ ಗಂಡಸರು ತಮ್ಮ ಸಾಹಸ ಪರಾಕ್ರಮ ಸಜ್ಜನಿಕೆಯ ಗುಣದಿಂದ ಮೆರೆದು ಹೆಣ್ಣನ್ನು ಒಲಿಸಿಕೊಳ್ಳಬೇಕು; **ಇರಿವಬೆಡಂಗಾ, ನಿನ್ನಂತೆ ಶಸ್ತ್ರವ್ರಣಮಮ್ ಮೆರೆವುದು ಎಂದು ಮೂದಲಿಸಿ ನುಡಿಯೆ**= ಇರಿವ ಬೆಡಂಗಾ, ನಿನ್ನಂತೆ ಕಾಳೆಗದ ಕಣದಲ್ಲಿ ಹೋರಾಡಿ ಶಸ್ತ್ರಗಳಿಂದ ಆದ ಗಾಯಗಳನ್ನು ಮೆರೆಯಬೇಕು ಎಂದು ಭೀಮನ ಮಯ್ ಮನದಲ್ಲಿ ಆಕ್ರೋಶದ, ಸೇಡಿನ ಮತ್ತು ಮೆಚ್ಚುಗೆಯ ಒಳಮಿಡಿತಗಳು ಕೆರಳುವಂತೆ ದ್ರೌಪದಿಯು ಮಾತನಾಡಲು; **ಭೀಮಸೇನನ ಅನುಮತದೊಳ್ ನರ್ಮ ಸಚಿವನುಮ್ ಪರಿಹಾಸಕ ಶೀಲನುಮ್ ಎನಿಸಿದ ವಿದೂಷಕನ್ ಎಂದನ್**=ಭೀಮಸೇನನಿಗೆ ಪ್ರಿಯನಾದ, ಆಪ್ತ ಸಚಿವನಾದ ಮತ್ತು ವಿನೋದದ ಮಾತುಕತೆಯಲ್ಲಿ ನಿಪುಣನೆಂದು ಹೆಸರಾಂತ ವಿದೂಷಕನು ಭೀಮಸೇನನ ಪರಾಕ್ರಮವನ್ನು ಬಣ್ಣಿಸತೊಡಗಿದನು; **ಇನ್ನೆಲ್ಲಿಯ ಧೃತರಾಷ್ಟ್ರನ್ ಎತ್ತಣ ಗಾಂಗೇಯನ್ ಎಲ್ಲಿಯ ಸಂಧಿ ಕಾರ್ಯಮ್**=ಇನ್ನೆಲ್ಲಿಯ ಧೃತರಾಷ್ಟ್ರ ಎತ್ತಣ ಗಾಂಗೇಯ ಎಲ್ಲಿಯ ಸಂಧಿ ಕಾರ್ಯ; ಭೀಮನು ಸಂಧಾನವನ್ನು ನಿರಾಕರಿಸಿ, ದ್ರೌಪದಿಯ ಅಪಮಾನಕ್ಕೆ ತಕ್ಕ ಪ್ರತೀಕಾರವನ್ನು ಮಾಡುವ ತನ್ನ ಪ್ರತಿಜ್ಞೆಯನ್ನು ಕಯ್ಗೊಂಡಿರುವುದರಿಂದ ಧೃತರಾಷ್ಟ್ರನ ಮೊರೆಗಾಗಲಿ, ಗಾಂಗೇಯನ ಹಿತನುಡಿಗಾಗಲಿ ಸಂಧಾನಕ್ಕಾಗಲಿ ಅವಕಾಶವಿಲ್ಲ;

**ದುಶ್ಶಾಸನಾದಿಗಳಪ್ಪ ನೂರ್ವರ್ ಕೌರವರುಮನ್ ಅಗುರ್ವಾಗೆ ಕೊಂದಿಕ್ಕಿದನ್**=ದುಶ್ಶಾಸನನನ್ನು ಮೊದಲುಗೊಂಡು ನೂರು ಮಂದಿ ಕೌರವರನ್ನು ಭಯಂಕರವಾದ ರೀತಿಯಲ್ಲಿ ಭೀಮಸೇನನು ಕೊಂದಿದ್ದಾನೆ; **ಇನ್ನೊರ್ಬನ್ ಉಳಿದನ್**=ಇನ್ನೊಬ್ಬ ಮಾತ್ರ ಜೀವಂತವಾಗಿ ಉಳಿದಿದ್ದಾನೆ; **ದುರ್ಯೋಧನನನ್ ಕೊಲ್ವುದುಮ್ ಗೆಲ್ವುದುಮ್ ನಮ್ಮ ಅರಸಂಗೆ ಆವುದು ಗಹನಮ್. ಅದರ್ಕೆ ಚಿಂತಿಸದಿರಿಮ್ ಎಂದು**=ದುರ್ಯೋಧನನನ್ನು ಕೊಲ್ಲುವುದಾಗಲಿ ಇಲ್ಲವೇ ಗೆಲ್ಲುವುದಾಗಲಿ ನಮ್ಮ ಅರಸನಾದ ಭೀಮಸೇನನಿಗೆ ಯಾವ ದೊಡ್ಡ ಸಂಗತಿ. ಅದಕ್ಕಾಗಿ ಚಿಂತಿಸಬೇಡಿ ಎಂದು ದ್ರೌಪದಿಯು ಸಮಾಧಾನಗೊಳ್ಳುವಂತೆ ನುಡಿದು; **ಪಾಂಚಾಲರಾಜ ತನೂಜೆಯ ಮೊಗಮಮ್ ನೋಡಿ**=ಪಾಂಚಾಲರಾಜನ ಮಗಳಾದ ದ್ರೌಪದಿಯ ಮೊಗವನ್ನು ನೋಡುತ್ತ; **ಕುರುಕುಲಮಮ್ ನುಂಗಿದಯ್**=ಕುರುಕುಲದ ಸಂತಾನವೆಲ್ಲವನ್ನೂ ಬಲಿತೆಗೆದುಕೊಂಡೆ;

**ಕುರುಪತಿಯುಮನ್ ಇನ್ನರೆಬರುಮಮ್ ನುಂಗಲಿರ್ಪೆ**=ದುರ್ಯೋಧನನನ್ನು ಮತ್ತು ಕುರುಕುಲದಲ್ಲಿ ಇನ್ನೂ ಅಳಿಯದೆ ಉಳಿದವರನ್ನು ನುಂಗಲಿರುವೆ; **ಇನ್ನೆರಡನೆಯ ಹಿಡಿಂಬಿಯನ್ ರಕ್ಕಸಿಯನ್ ನಿನ್ನನ್ನು ಎಮ್ಮರಸನ್ ಎಲ್ಲಿ ತಂದನೊ ಎಂದು ವಿದೂಷಕನ್**=ಎರಡನೆಯ ಹಿಡಿಂಬಿಯೂ ರಕ್ಕಸಿಯೂ ಆದ ನಿನ್ನನ್ನು ನಮ್ಮ ಅರಸನು ಎಲ್ಲಿ ಹಿಡಿದು ಕರೆತಂದನೋ ಎಂದು ವಿದೂಷಕನು ಆಡಿದ ವಿನೋದಪೂರ್ಣವಾದ ನುಡಿಗಳನ್ನು ಕೇಳಿ; **ಅಳುತ್ತುಮ್ ಬಂದ ತನ್ನನ್ ನಗುತ್ತುಮ್ ಪೋಪಂತೆ ಸಂತೋಷಮ್ ಮಾಡಿಸಿದುದರ್ಕೆ ಒಡಂಬಟ್ಟು ಚಾರುಹಾಸಿನಿ ನಿಜನಿವಾಸಕ್ಕೆ ಪೋದಳ್**=ಅಳುತ್ತ ಬಂದ ತನ್ನನ್ನು ನಗುತ್ತ ಹೋಗುವಂತೆ ಆನಂದಪಡಿಸುವಂತಹ ನುಡಿಗಳನ್ನಾಡಿದ್ದಕ್ಕೆ ಮೆಚ್ಚುಗೆಯನ್ನು ಸೂಸುತ್ತ ನಗುಮೊಗದಿಂದ ದ್ರೌಪದಿಯು ತನ್ನ ರಾಣಿವಾಸಕ್ಕೆ ಹೋದಳು;

❖

### ನೋಟ–೨

# ದುರ್ಯೋಧನನು ಅಶ್ವತ್ಥಾಮ ಮತ್ತು ದ್ರೋಣರನ್ನು ತೆಗಳುವುದು

ಅನ್ನೆಗಮ್=ಅದೇ ಸಮಯದಲ್ಲಿ; **ಅನ್ನೆಗಮ್**=ಕುರುಕ್ಷೇತ್ರ ರಣರಂಗದ ಪಾಂಡವರ ಕಡೆಯ ಶಿಬಿರದಲ್ಲಿ ಭೀಮನು ಪ್ರತಿಜ್ಞಾಬದ್ಧನಾಗಿ ಆಡಿದ ಮಾತುಗಳನ್ನು ಕೇಳಿ, ದ್ರೌಪದಿಯು ಸಮಾಧಾನಗೊಂಡು ರಾಣಿವಾಸಕ್ಕೆ ಹಿಂತಿರುಗಿರುತ್ತಿರುವ ಸಮಯದಲ್ಲಿ; **ಇತ್ತ**=ಈ ಕಡೆ; ಕುರುಕ್ಷೇತ್ರ ರಣರಂಗದಲ್ಲಿ ಕೌರವರ ಕಡೆಯ ಸೇನಾನಿಗಳ ಸಾವುನೋವಿನ ದುರಂತವನ್ನು ಮತ್ತು ಶಿಬಿರದಲ್ಲಿ ದುರ್ಯೋಧನನ ಮಾನಸಿಕ ತುಮುಲ ಹೇಗಿತ್ತು ಎಂಬುದನ್ನು ಕವಿಯು ನಿರೂಪಿಸುತ್ತಿದ್ದಾನೆ;

**ಕುರುಕುಲಪಿತಾಮಹನುಮ್ ಆಹವಭೀಷ್ಮನುಮ್ ಎನಿಸಿದ ಭೀಷ್ಮನ ಶರಶಯನದೊಳಮ್**=ಕುರುವಂಶದ ಪಿತಾಮಹನೂ ರಣಭಯಂಕರನೂ ಎಂದು ಹೆಸರಾಂತ ಭೀಷ್ಮನು ಕುರುಕ್ಷೇತ್ರ ರಣರಂಗದಲ್ಲಿ ಬಾಣಗಳ ಮಂಚದ ಮೇಲೆ ಜೀವಂತವಾಗಿಯೇ ಮಲಗಿರಲು; ಭೀಷ್ಮನು ಇಚ್ಛಾಮರಣಿಯಾದುದರಿಂದ ಅರ್ಜುನನ ಬಾಣಗಳ ಪೆಟ್ಟಿನಿಂದ ಗಾಸಿಗೊಂಡಿದ್ದರೂ, ಉತ್ತರಾಯಣ ಪುಣ್ಯಕಾಲದವರೆಗೆ ಬದುಕಿರಲು ನಿಶ್ಚಯಿಸಿದ್ದಾನೆ ಎಂಬ ನಂಬಿಕೆಯು ಜನಮನದಲ್ಲಿದೆ; **ಬಿಲ್ಲ ಜಾಣಮ್ ದ್ರೋಣನ ಅಳಿವಿನೊಳಮ್**=ಬಿಲ್ ವಿದ್ಯೆಯಲ್ಲಿ ಪರಿಣತನಾದ ದ್ರೋಣನು ಸಾವನ್ನಪ್ಪಿರಲು; **ತನ್ನ ಮಯ್ದುನಮ್ ಜಯದ್ರಥನ ವಿಪತ್ತಿನೊಳಮ್**=ತನ್ನ ತಂಗಿ ದುಶ್ಶಲೆಯ ಗಂಡನಾಗಿದ್ದ ಜಯದ್ರಥನು ಅಭಿಮನ್ಯುವಿನ ಸಾವಿಗೆ ಕಾರಣನಾಗಿದ್ದನು; ಆದ್ದರಿಂದ ಜಯದ್ರಥನನ್ನು ಅರ್ಜುನನು ಕೊಂದಿದ್ದಾನೆ; ಪಂಚತ್ವ=ಸಾವು/ಮರಣ;

**ತನ್ನ ಅಣುಗದಮ್ಮನ್ ದುಶ್ಶಾಸನನ ಪಂಚತ್ವ ಪ್ರಪಂಚದೊಳಮ್**=ತಮ್ಮ ಪ್ರೀತಿಯ ತಮ್ಮನಾದ ದುಶ್ಶಾಸನನು ಸಾವಿನ ಲೋಕವನ್ನು ಸೇರಿದ್ದರಿಂದ; **ತನ್ನ ಅಣುಗಾಳಪ್ಪ ಕರ್ಣನ ಸಾವಿನೊಳಮ್**=ತನ್ನ ಅಚ್ಚುಮೆಚ್ಚಿನ ವ್ಯಕ್ತಿಯಾದ ಕರ್ಣನು ಸಾವನ್ನಪ್ಪಿರಲು; **ತನ್ನ ಮಾವನಪ್ಪ ಶಲ್ಯನ ಸಂಹರಣದೊಳಮ್**=ತನ್ನ ಮಾವನಾದ ಶಲ್ಯನ ಕೊಲೆಯಾಗಿರಲು; ಚೂಡಾಮಣಿ=ತಲೆಯಲ್ಲಿ ತೊಡುವ ರತ್ನದ ಒಡವೆ/ ಉತ್ತಮ ವ್ಯಕ್ತಿ; **ಕುರುಕುಲ ಚೂಡಾಮಣಿಯುಮ್**=ಕುರುವಂಶದ ಚೂಡಾಮಣಿಯಾದ ದುರ್ಯೋಧನನು; **ಪನ್ನಗಪತಾಕನುಮ್**=ಬಾವುಟದಲ್ಲಿ ಹಾವಿನ ಚಿತ್ರವನ್ನು ರಾಜಲಾಂಛನವಾಗುಳ್ಳ **ದುರ್ಯೋಧನನು; ಕನಕಲತಾಲಾಂಛಿತ ಉತ್ತುಂಗ ಘನ ಗದಾಯುಧನುಮ್**=ಚಿನ್ನದ ಬಳ್ಳಿಯ ಕೆತ್ತನೆಯ ಚಿತ್ರದ ಲಾಂಛನವುಳ್ಳ ಉತ್ತಮವಾದ ಮತ್ತು ದೊಡ್ಡದಾದ ಗದೆಯನ್ನು ಆಯುಧವಾಗುಳ್ಳವನು;

**ದಿವ್ಯಮುನಿವರ ಅಪರಾಧನುಮ್**=ಉತ್ತಮರಾದ ಮುನಿಯ ಜತೆಯಲ್ಲಿ ಕೆಟ್ಟದ್ದಾಗಿ ನಡೆದುಕೊಂಡು ಅಪರಾಧಿಯಾಗಿರುವ ದುರ್ಯೋಧನನು; ಅರಣ್ಯವಾಸದಲ್ಲಿದ್ದ ಪಾಂಡವರ ಸಂಕಟವನ್ನು ಕಂಡಿದ್ದ ಮೈತ್ರೇಯನೆಂಬ ಮುನಿಯು ಹಸ್ತಿನಾವತಿಗೆ ಬಂದು, ಪಾಂಡವರೊಡನೆ ಹಗೆತನವನ್ನು ತೊರೆದು ಶಾಂತಿಯಿಂದ ಇರಬೇಕೆಂದು ದುರ್ಯೋಧನನಿಗೆ ತಿಳುವಳಿಕೆಯನ್ನು ಹೇಳಿದಾಗ, ದುರ್ಯೋಧನನು ಏನೂ ಮಾತನಾಡದೆ ಹುಸಿನಗೆ ನಕ್ಕು, ತನ್ನ ತೊಡೆಯನ್ನು ತಟ್ಟಿಕೊಂಡು, ಅಹಂಕಾರದಿಂದ ಮುನಿಯ ಮಾತನ್ನು ಕಡೆಗಣಿಸುತ್ತಾನೆ. ಆಗ ಮೈತ್ರೇಯ ಮುನಿಯು ಕೋಪದಿಂದ ಕೆರಳಿ "ಕಾಳೆಗದಲ್ಲಿ ಭೀಮನ ಗದೆಯ ಪೆಟ್ಟಿನಿಂದ ನಿನ್ನ ತೊಡೆಯು ಮುರಿಯಲಿ" ಎಂದು ಶಾಪವನ್ನು ನೀಡುತ್ತಾನೆ; **ಸಕಲ ಲಕ್ಷ್ಮೀನಿವಾಸನುಮ್**=ಎಲ್ಲಾ ಬಗೆಯ ಸಂಪತ್ತಿಗೆ ನೆಲೆಯಾಗುಳ್ಳವನು; **ಸಮರಧೈರ್ಯನುಮ್**=ಕಾಳೆಗದಲ್ಲಿ ಕೆಚ್ಚೆದೆಯಿಂದ ಹೋರಾಡುವವನು; **ಮಹಾಶೌರ್ಯನುಮ್**=ಮಹಾಶೂರನು; ರಾಧೇಯ ನಿಜ **ಸಹಾಯನುಮ್**= ಕರ್ಣನಿಗೆ ಬಹಳ ಆತ್ಮೀಯನಾದವನು; **ಛಲದಂಕಮಲ್ಲನುಮ್**=ಹಿಡಿದ ಪಟ್ಟನ್ನು ಬಿಡದ ಹಟಗಾರನೂ;

**ಸಕಲಭೋಗಲಕ್ಷ್ಮೀಪತಿಯುಮ್**=ಎಲ್ಲಾ ಬಗೆಯ ಭೋಗಗಳಿಗೆ ಒಡೆಯನಾದವನು; **ಅಭಿಮಾನಧನನುಮ್ ಎನಿಸಿದ ಸುಯೋಧನನ್ ಚಿಂತಾಕ್ರಾಂತನಾಗಿ**=ತನ್ನ ವ್ಯಕ್ತಿತ್ವದ ಬಗ್ಗೆ ಹೆಮ್ಮೆಯಿಂದ ತಲೆಯೆತ್ತಿ ಬಾಳುವವನು ಎಂದು ಹೆಸರಾಂತ ದುರ್ಯೋಧನನು ಈಗ ಚಿಂತೆಯಿಂದ ಕೂಡಿದವನಾಗಿ, ತನ್ನ ಜತೆಯಲ್ಲಿದ್ದ ಸಂಜಯನೊಡನೆ ಅಶ್ವತ್ಥಾಮ ಮತ್ತು ದ್ರೋಣರನ್ನು ಕುರಿತು ಈ

ರೀತಿ ಪ್ರಸ್ತಾಪಿಸತೊಡಗುತ್ತಾನೆ; ಅಸುಹೃತ್+ಸೇನೆಗೆ; ಅಸುಹೃತ್=ಶತ್ರು/ಹಗೆ; ಗಡಮ್/ಗಡ=ಆನಂದ/ಮೆಚ್ಚುಗೆ/ಅಚ್ಚರಿ/ಮೂದಲಿಕೆ/ಹಾಸ್ಯ/ನಿಶ್ಚಯ/ಸಂಕಟ ಮುಂತಾದ ಒಳಮಿಡಿತಗಳನ್ನು ಸೂಚಿಸುವಾಗ ಬಳಸುವ ಪದ; **ಅಸುಹೃತ್ಸೇನೆಗೆ ಒರ್ವನೆ ಸಾಲ್ವನ್ ಗಡಮ್**=ಹಗೆಯ ಸೇನೆಯನ್ನು ಸದೆಬಡೆದು ಗೆಲ್ಲುವುದಕ್ಕೆ ಒಬ್ಬನೇ ಸಾಕಾಗುತ್ತಾನಲ್ಲವೇ ಎಂಬ ನಿಶ್ಚಯದಿಂದ; **ರುದ್ರಾವತಾರನ್ ಗಡಮ್**= ಶಿವನ ಅಂಶದಿಂದ ಹುಟ್ಟಿದವನಲ್ಲವೇ ಎಂಬ ನಂಬಿಕೆಯಿಂದ; ನೊಸಲ್+ಒಳ್; ನೊಸಲ್=ಹಣೆ; **ನೊಸಲೊಳ್ ಕಣ್ ಗಡಮ್ ಎಂದು ನಚ್ಚಿ ಪೊರೆದೆನ್**= ಹಣೆಯಲ್ಲಿ ಕಣ್ಣುಳ್ಳವನಲ್ಲವೇ ಎಂದುಕೊಂಡು ನಂಬಿ ಸಾಕಿಸಲಹಿದೆನು; ಅಶ್ವತ್ಥಾಮನು ಶಿವನ ಅವತಾರ ಇಲ್ಲವೇ ಶಿವನ ಅಂಶದಿಂದ ಹುಟ್ಟಿದವನು ಎಂಬ ಪುರಾಣ ಕಲ್ಪಿತ ಭಾವನೆಯು ಜನಮನದಲ್ಲಿ ನೆಲೆಸಿದೆ; ತಮ್ಮ+ಅಮ್ಮನ್+ಅಕ್ಕೆ; ಅಮ್ಮ=ತಂದೆ/ಅಪ್ಪ; ಅಕ್ಕೆ=ಆಗಲಿ; ತಿರುವಾಯ್=ಬಾಣವನ್ನು ಹೂಡಲು ನೆರವಾಗಲೆಂದು ಬಿಲ್ಲಿಗೆ ಬಿಗಿದು ಕಟ್ಟಿರುವ ಹಗ್ಗ; ಇಸು=ಬಾಣವನ್ನು ಪ್ರಯೋಗಮಾಡು;

**ತಾನಕ್ಕೆ...ತಮ್ಮಮ್ಮನಕ್ಕೆ ಅಂಬಮ್ ತಿರುವಾಯ್ಗೆ ತಂದು ಇಸಲ್ ಅರಿವರೇ**= ಅಶ್ವತ್ಥಾಮನಾಗಲಿ ಇಲ್ಲವೇ ಅವನ ಅಪ್ಪ ದ್ರೋಣನಾಗಲಿ ಕುರುಕ್ಷೇತ್ರ ರಣರಂಗದಲ್ಲಿ ಬಿಲ್ಲಿನ ಹೆದೆಗೆ ಬಾಣವನ್ನು ಹೂಡಿ, ಹಗೆಯ ಮೇಲೆ ಬಿಡಲು ಅರಿತಿದ್ದಾರೆಯೇ; **ತಾಮ್ ಇರ್ವರುಮ್ ಕಯ್ದುವಮ್ ಬಿಸುಟರ್**=ಅಪ್ಪ ಮಗ ಇಬ್ಬರೂ ಕಾಳೆಗದ ಕಣದಲ್ಲಿಯೇ ಆಯುಧಗಳನ್ನು ತೊರೆದರು; ೧. ಯುದ್ದ ನಡೆಯುತ್ತಿರುವಾಗ ಕೌರವರ ಪಡೆಯಲ್ಲಿದ್ದ ಅಶ್ವತ್ಥಾಮ ಎಂಬ ಹೆಸರಿನ ಆನೆಯು ಸಾವನ್ನಪ್ಪಿದ್ದನ್ನು ಧರ್ಮರಾಯನು ದ್ರೋಣಾಚಾರ್ಯರಿಗೆ ಕೇಳಿಸುವಂತೆ 'ಅಶ್ವತ್ಥಾಮ ಹತಃ' ಎಂದು ಕಿರುಚುತ್ತಾನೆ. ಇದನ್ನು ಕೇಳಿದ ಕೂಡಲೇ ದ್ರೋಣಾಚಾರ್ಯರು ತಮ್ಮ ಮಗ ಅಶ್ವತ್ಥಾಮನೇ ಸತ್ತನೆಂದು ತಿಳಿದು, ಪುತ್ರಶೋಕದಿಂದ ಪರಿತಪಿಸುತ್ತ, ಬಿಲ್ಲುಬಾಣಗಳನ್ನು ಕೆಳಕ್ಕಿಡುತ್ತಾರೆ. ಅನಂತರ ದ್ರುಪದನ ಮಗನಾದ ದೃಷ್ಟದ್ಯುಮ್ನನಿಂದ ಹತರಾಗುತ್ತಾರೆ. ೨. ದುರ್ಯೋಧನನಿಗೆ ಆಪ್ತನಾಗಿದ್ದ ಕರ್ಣನ ಮೇಲೆ ಆಗಾಗ್ಗೆ ತನ್ನ ಅಸೂಯೆಯನ್ನು ಪ್ರಕಟಿಸುತ್ತಿದ್ದ ಅಶ್ವತ್ಥಾಮನು ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಕೆಲವೊಮ್ಮೆ ಹೋರಾಡದೆ ಆಯುಧವನ್ನು ತ್ಯಜಿಸಿ ಸುಮ್ಮನಿರುತ್ತಿದ್ದ; ಹೀಗೆ ಅಪ್ಪ ಮಕ್ಕಳಿಬ್ಬರೂ ಯುದ್ಧದ ಸಂದರ್ಭದಲ್ಲಿ ಅಯುಧವನ್ನು ತ್ಯಜಿಸಿದ್ದರು; ಅದನ್ನು ಕುರಿತು ದುರ್ಯೋಧನನು ಈ ರೀತಿ ತೆಗಳುತ್ತಿದ್ದಾನೆ; ದ್ರೌಣಿ=ದ್ರೋಣನ ಮಗ ಅಶ್ವತ್ಥಾಮ; ಜೋಳದ ಪಾಳಿ=ಅನ್ನದ ರುಣ/ಅನ್ನವಿಟ್ಟು ಸಾಕಿಸಲಹಿದವರ ರುಣ ತೀರಿಸುವುದಕ್ಕಾಗಿ ತನುಮನವನ್ನು ಅರ್ಪಿಸಿಕೊಂಡು ಸೇವೆಯನ್ನು ಮಾಡುವುದು;

**ದ್ರೌಣಿಯುಮ್ ದ್ರೋಣನುಮ್ ಜೋಳದ ಪಾಳಿಯುಮ್ ಬಗೆದರಿಲ್ಲಾ**=ಅಶ್ವತ್ಥಾಮ ಮತ್ತು ದ್ರೋಣರಿಬ್ಬರೂ ಒಡೆಯನ ಅನ್ನದ ರುಣವನ್ನು ತೀರಿಸಬೇಕು ಎಂಬ ಉದ್ದೇಶವನ್ನೇ ಹೊಂದಿರಲಿಲ್ಲ; ಬಿಲ್+ಓಜ; ಓಜ=ಗುರು; **ಬಿಲ್ಲೋಜನ್ ಪದುಳಮ್ ಕುಳ್ಳಿರ್ದು**=ಬಿಲ್ ವಿದ್ಯೆಯ ಗುರುವಾದ ದ್ರೋಣನು ಕುರುಕ್ಷೇತ್ರ ಕಾಳೆಗ ಆರಂಭಗೊಂಡ ದಿನದಿಂದಲೂ ಯಾವ ಆತಂಕವೂ ಇಲ್ಲದೆ ನೆಮ್ಮದಿಯಾಗಿದ್ದು; ಆಯ=ಪರಾಕ್ರಮ/ಕಲಿತನ/ಶೂರತನ; ತಗುಳ್=ಮೆಚ್ಚು; **ಎಮಗೆ ಆಯದ ಮಾತಮ್ ತಗುಳೆ ಗಳಪಿ ಪೋದನ್**=ನಮಗೆ ಪರಾಕ್ರಮದ ಮಾತುಗಳನ್ನು ಮೆಚ್ಚುಗೆಯಾಗುವಂತೆ ಹರಟುತ್ತಿದ್ದು, ಕಾಳೆಗದ ಕಣದಲ್ಲಿ ಮಾತ್ರ ಯಾವ ಹೋರಾಟವನ್ನು ಮಾಡದೆ ಸಾವನ್ನಪ್ಪಿದನು; **ಸಂದಿರ್ದ ಅದಟರೊಳ್ ಇರಿದು ಅರಿಯನ್**=ಕಾಳೆಗದ ಕಣದಲ್ಲಿ ಎದುರಾದ ಹೆಸರಾಂತ ಪರಾಕ್ರಮಿಗಳೊಡನೆ ವೀರಾವೇಶದಿಂದ ಹೋರಾಡಿ ಕೊಲ್ಲುವುದನ್ನು ತಿಳಿಯನು; ಕಮ್ಮರಿ+ಓಜ; ಕಮ್ಮರ=ಕಮ್ಮಾರ/ಕಬ್ಬಿಣದ ಕೆಲಸವನ್ನು ಮಾಡುವವನು; ಕಮ್ಮರಿಯೋಜ=ಕಬ್ಬಿಣದ ಹತಾರಗಳನ್ನು ತಯಾರುಮಾಡುವುದನ್ನು ಹೇಳಿಕೊಡುವ ಗುರು;

**ತಪ್ಪದೆ ಬಿಲ್ಲೋಜನ್ ಕಮ್ಮರಿಯೋಜನ್ ಎನಿಸಿದನ್**=ಎಲ್ಲ ರೀತಿಯಿಂದಲೂ ಬಿಲ್ಲೋಜನಾದ ದ್ರೋಣನು ಕುರುಕ್ಷೇತ್ರ ರಣರಂಗದಲ್ಲಿ ಆಯುಧವನ್ನು ಹಿಡಿದು ಹೋರಾಡುವ ಪರಾಕ್ರಮಿಯಾಗದೆ, ಆಯುಧವನ್ನು ತಯಾರುಮಾಡುವುದನ್ನು ಹೇಳಿಕೊಡುವ ಕಮ್ಮಾರನಾದನು; 'ಬಿಲ್ಲೋಜ' ಮತ್ತು 'ಕಮ್ಮರಿಯೋಜ' ಎಂಬ ಪದಗಳು ಮೇಲು ಕೀಳನ್ನು ಸೂಚಿಸುವ ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ; ರಾಜಕುಮಾರರಿಗೆ ಬಿಲ್ಲಿನ ವಿದ್ಯೆಯನ್ನು ಕಲಿಸುವ **'ಬಿಲ್ಲೋಜ'** ಕಸುಬಿಗೆ ಸಮಾಜದಲ್ಲಿ ಇದ್ದ ಹೆಚ್ಚಿನ ಅಂತಸ್ತು, ಕುಲುಮೆಯಲ್ಲಿ ಕಬ್ಬಿಣದ ಹತಾರಗಳನ್ನು ಮಾಡುವುದನ್ನು ಹೇಳಿಕೊಡುವ **'ಕಮ್ಮರಿಯೋಜ'** ಕಸುಬಿಗೆ ಇರಲಿಲ್ಲ. ಏಕೆಂದರೆ ಇಂಡಿಯಾ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣಗಳಲ್ಲಿ ಮತ್ತು ಜಾತಿಗಳಲ್ಲಿ ಮೇಲು ಕೀಳಿನ ಹಂತಗಳು ಇರುವಂತೆಯೇ, ಕಸುಬಿನಲ್ಲಿಯೂ ಮೇಲು ಕೀಳಿನ ಹಂತಗಳಿವೆ; **ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರ್**=ದಾನವನ್ನು ಮಾಡಲು ಕೊಲ್ಲಲು ಶರಣು ಬಂದವರನ್ನು ಕಾಪಾಡಲು ಕ್ಷತ್ರಿಯರು ಶಕ್ತರಾಗಿದ್ದಾರೆ;

**ಅಬ್ರಣ್ಯಮ್**=ಕಾಳೆಗವೆಂಬುದು ಬ್ರಾಹ್ಮಣರಿಗೆ ಸರಿಹೊಂದುವುದಿಲ್ಲ; **ಭೋ ಎನಲುಮ್**=ಸ್ವಾಮಿ ಎಂದು ಅರಚಿಕೊಳ್ಳಲು; **ಅವಿಧಾ ಎನಲುಮ್ ಬ್ರಾಹ್ಮಣರ್ ಬಲ್ಲರ್**=ನಮ್ಮನ್ನು ಕಾಪಾಡಿ ಕಾಪಾಡಿ ಎಂದು ಮೊರೆಯಿಡುವುದನ್ನು ಬ್ರಾಹ್ಮಣರು ಚೆನ್ನಾಗಿ ಬಲ್ಲರು; **ಅವರ್ ಇರಿಯಲ್ ಎತ್ತ ಅರಿವರ್**=ಬ್ರಾಹ್ಮಣರು ರಣರಂಗದಲ್ಲಿ

ಹೋರಾಡುವುದನ್ನು ಹೇಗೆ ತಾನೆ ತಿಳಿಯುವರು; ಅಂದರೆ ಬ್ರಾಹ್ಮಣರ ವ್ಯಕ್ತಿತ್ವದಲ್ಲಿ ಹೋರಾಟದ ಕೆಚ್ಚು ಸಹಜವಾಗಿಯೇ ನೆಲೆಗೊಂಡಿಲ್ಲ; **ಓಜಮ್ ಗಡ**=ಈ ದ್ರೋಣನು ಗುರುವಂತೆ ಕಂಡೆಯಾ; ಭರದ್ವಾಜ=ದ್ರೋಣರ ತಂದೆ. ಹೆಸರಾಂತ ಮುನಿ. ವ್ಯಾಕರಣ, ಅರ್ಥಶಾಸ್ತ್ರ ಮತ್ತು ಆರೋಗ್ಯಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದವನು; **ಚಿಃ... ಭಾರದ್ವಾಜಮ್ ಗಡ**=**ಚಿಃ...** ಈ ದ್ರೋಣನು ಭರದ್ವಾಜನ ಮಗನಂತೆ; **ಪಾಂಡುತನೂಜರ ಪಕ್ಕದೊಳೆ ಪಾಳಿಗಿಡೆ ನೆಗಳ್ದುದರಿಮ್**= ಮಾನಸಿಕವಾಗಿ ಪಾಂಡವರ ಪಕ್ಷಪಾತಿಯಾಗಿ ನಡೆದುಕೊಂಡುದರಿಂದ; ಬಹಿರಂಗದಲ್ಲಿ ದ್ರೋಣನು ನನ್ನ ಆಶ್ರಯದಲ್ಲಿದ್ದರೂ, ಅವನ ಅಂತರಂಗದಲ್ಲಿ ಪಾಂಡವರ ಬಗ್ಗೆ ಹೆಚ್ಚಿನ ಒಲವಿದೆ ಎಂಬುದನ್ನು ದುರ್ಯೋಧನನು ಗಮನಿಸಿದ್ದನು;

**ಬಿಲ್ಲ ಬಲ್ಮೆಯುಮ್ ಕುಲಮುಮ್ ನಿರ್ವ್ಯಾಜಮ್ ಮಸುಳ್ದುವು**=ದ್ರೋಣನ ಬಿಲ್ಲಿನ ಶಕ್ತಿಯೂ ಬ್ರಾಹ್ಮಣಿಕೆಯೂ ವಿನಾಕಾರಣವಾಗಿ ಮಂಕಾದವು; ಅಂದರೆ ಒಡೆಯನಾದ ನನ್ನ ಹಿತಕ್ಕಾಗಿ ಅವರು ಬಾಳದೇ ಹೋದುದರಿಂದ ಅವರ ಬಿಲ್ವಿದ್ಯೆಯ ಶಕ್ತಿಗೂ, ಅವರ ಮೇಲು ಜಾತಿಯ ವ್ಯಕ್ತಿತ್ವಕ್ಕೂ ಕಳಂಕ ತಟ್ಟಿತು; ಈಗ ದುರ್ಯೋಧನನು ಅಶ್ವತ್ಥಾಮನನ್ನು ತೆಗಳಲು ತೊಡಗುತ್ತಾನೆ; **ತಪನಸುತಮ್ ಬೇರೆ ಆನ್ ಬೇರೆ**=ಸೂರ್ಯಪುತ್ರನಾದ ಕರ್ಣ ಬೇರೆ, ನಾನು ಬೇರೆಯಲ್ಲ; ಅಂದರೆ ನಾವಿಬ್ಬರೂ ಸರಿಸಮಾನವಾದ ಅಂತಸ್ತನ್ನುಳ್ಳವರು; ಕರ್ಣ ಮತ್ತು ನಾನು "ಎರಡು ದೇಹ ಒಂದೇ ಜೀವ" ಎಂಬಂತೆ ಗೆಳೆಯರಾಗಿದ್ದೆವು. ನಮ್ಮಿಬ್ಬರ ನಡುವೆ ಯಾವುದೇ ಮೇಲುಕೀಳೆಂಬುದು ಇರಲಿಲ್ಲ; **ಪೊಲ್ಲದಮ್ ನುಡಿದನ್**= ಅಶ್ವತ್ಥಾಮನು ಅಂದು ಕರ್ಣನ ಬಗ್ಗೆ ಕೆಟ್ಟ ಮಾತುಗಳನ್ನಾಡಿದನು; ಸೇನಾಧಿಪತಿ ಯಾಗಿದ್ದ ದ್ರೋಣರ ಸಾವಿನ ನಂತರ ಅಶ್ವತ್ಥಾಮನಿಗೆ ಸೇನಾಧಿಪಟ್ಟವನ್ನು ಕಟ್ಟುವಂತೆ ಕೃಪಾಚಾರ್ಯನು ಸೂಚಿಸಿದಾಗ, ದುರ್ಯೋಧನನು ಗುರುಗಳ ಸಲಹೆಯನ್ನು ನಿರಾಕರಿಸಿ, **"ದ್ರೋಣರ ಬಳಿಕ ಕರ್ಣನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟುತ್ತೇನೆ"** ಎಂದು ಹೇಳಿದಾಗ, ಅಶ್ವತ್ಥಾಮನು ಆಕ್ರೋಶ ಮತ್ತು ಹತಾಶೆಯಿಂದ ಕರ್ಣನ ಕುಲದ ಬಗ್ಗೆ ಕೀಳುನುಡಿಯನ್ನಾಡಿ, ಕರ್ಣನು ಜೀವಂತವಾಗಿರುವ ತನಕ ತಾನು ಯುದ್ಧ ಮಾಡುವುದಿಲ್ಲವೆಂದು ಆಯುಧವನ್ನು ತ್ಯಜಿಸುವ ಮಾತನಾಡಿದ್ದನು;

**ಆವಗಮ್ ರಕ್ಷಿಪ ಕಯ್ದುವನ್ ಬಿಸುಟನ್**=ಯಾವಾಗಲೂ ಒಂದಲ್ಲ ಒಂದು ನೆಪವನ್ನೊಡ್ಡಿ ಆಯುಧವನ್ನು ಬಿಸಾಡಿ, ಕುರುಕ್ಷೇತ್ರ ರಣರಂಗದಲ್ಲಿ ಹೋರಾಡದೆ ಸುಮ್ಮನಿದ್ದನು; **ಬಗೆದು ನೋಳ್ಪೊಡೆ ಎಮಗೆ ಆ ಅಶ್ವತ್ಥಾಮನ್ ಮರೆಯ ಪಾಂಡವಮ್**=ಸರಿಯಾಗಿ ಗಮನಿಸಿ ನೋಡಿದರೆ ನಮ್ಮ ಪಾಲಿಗೆ ಆ ಅಶ್ವತ್ಥಾಮನು

ಮಾರುವೇಷದ ಪಾಂಡವನೇ ಆಗಿದ್ದಾನೆ; **ಗೆಲಲಾರ್ಪೊಡೆ ಇರಿದು ಗೆಲ್ವುದು**=ಗೆಲ್ಲುವ ಶಕ್ತಿಯಿದ್ದರೆ ಹಗೆಯ ಎದುರು ಹೋರಾಡಿ ಗೆಲ್ಲುವುದು; **ಗೆಲಲಾರದೊಡೆ ಅಣ್ಮಿ ಸಾವುದು**=ಗೆಲ್ಲುವುದಕ್ಕೆ ಆಗದಿದ್ದರೆ ಜೀವವಿರುವ ತನಕ ಕೆಚ್ಚಿನಿಂದ ಹೋರಾಡಿ ವೀರಮರಣವನ್ನಪ್ಪುವುದು; **ಆಳ್ಗೆ ಇನಿತೆ ಗುಣಮ್**=ಕಾಳೆಗದ ಕಾದಾಳುವಿನ ವ್ಯಕ್ತಿತ್ವವೇ ಇದಾಗಿರುತ್ತದೆ; **ಗೆಲಲುಮ್ ಸಾಯಲುಮ್ ಆರದೆ ತೊಲಗಿದಡೆ ಮೆಯ್ಯಮ್ ನೆಗಳ್ತೆ ತೊಲಗದಿರ್ಕುಮೆ**=ಇತ್ತ ಗೆಲ್ಲಲಾರದೆ ಅತ್ತ ಸಾಯಲಾರದೆ ಹಿಮ್ಮೆಟ್ಟಿದರೆ ಯೋಧನೆಂಬ ಹೆಸರಿಗೆ ಕಳಂಕ ತಟ್ಟುವುದಿಲ್ಲವೇ; **ಕರವಾಳಮ್ ಮಸೆವ ಅಂದದೆ ಮರವಾಳಮ್ ಮಸೆಯೆ ಕೂರಿತಕ್ಕುಮೆ**=ಲೋಹದಿಂದ ಮಾಡಿರುವ ಕತ್ತಿಯನ್ನು ಹರಿತಗೊಳಿಸಲೆಂದು ಒರೆಗಲ್ಲಿನ ಮೇಲೆ ಉಜ್ಜುವ ಹಾಗೆ ಮರದಿಂದ ಮಾಡಿರುವ ಕತ್ತಿಯನ್ನು ಉಜ್ಜಿದರೆ ಹರಿತಗೊಳ್ಳುವುದೇ. ಲೋಹದ ಕತ್ತಿ ಉಜ್ಜಿದಂತೆಲ್ಲಾ ಹರಿತಗೊಳ್ಳುತ್ತದೆ, ಮರದ ಕತ್ತಿ ಉಜ್ಜಿದಂತೆಲ್ಲಾ ಸಮೆಯುತ್ತದೆ ಇಲ್ಲವೇ ಮೊಂಡಾಗುತ್ತದೆ;

**ಕಲಿಯಮ್ ಪೊರೆದೊಡೆ ಸಂಗರದೆಡೆಯೊಳ್ ಕೂರ್ಪಮ್ ತೋರ್ಪಂತಿರೆ ಪಂದೆ ಪತಿಗೆ ತೋರ್ಕುಮೆ**=ಕೆಚ್ಚೆದೆಯುಳ್ಳ ಶೂರನನ್ನು ಸಾಕಿ ಸಲಹಿ ಕಾಪಾಡಿದರೆ, ಆತನು ರಣರಂಗದ ಮುಂಚೂಣಿಯಲ್ಲಿ ಪರಾಕ್ರಮವನ್ನು ತೋರಿಸುವಂತೆ, ಹೇಡಿಯಾದವನು ತನ್ನ ಒಡೆಯನನ್ನು ಕಾಪಾಡಲು ಪರಾಕ್ರಮದಿಂದ ಹೋರಾಡುತ್ತಾನೆಯೇ; **ತುರುಗೋಳೊಳ್**=ಹಗೆಗಳು ದನಗಳನ್ನು ಕದ್ದು ಒಯ್ಯುವಾಗ; **ಪೆಣ್ಬುಯ್ಯಲೊಳ್**=ಕಾಮುಕರಿಂದ ಅಪಹರಣಕ್ಕೊಳಗಾದ ಹೆಣ್ಣಿನ ಆಕ್ರಂದನ ದನಿಯನ್ನು ಕೇಳಿದಾಗ; **ಎರೆವೆಸದೊಳ್**=ರಾಜನ ಸೇವೆಯಲ್ಲಿ ತೊಡಗಿದಾಗ; **ನಂಟನ ಎಡರೊಳ್**=ನಂಟನಿಗೆ ಆಪತ್ತು ಬಂದಾಗ; **ಊರ ಅಳಿವಿನೊಳಮ್**=ಶತ್ರುಗಳಿಂದ ಊರಿನ ಸಂಪತ್ತು ಸೂರೆಯಾಗುವಾಗ; ಗಂಡ=ಶೂರ; ಷಂಡ=ಹೇಡಿ; **ತರಿಸಂದು ಗಂಡುತನಮನೆ ನೆರಪದವನ್ ಗಂಡನಲ್ಲನ್**=ಕೆಚ್ಚೆದೆಯಿಂದ ಹೋರಾಡಲು ನಿಶ್ಚಯಿಸಿ ಪರಾಕ್ರಮವನ್ನು ತೋರದವನು ಅಂದರೆ ಸಾವು ನೋವನ್ನು ಲೆಕ್ಕಿಸದೆ ಹೋರಾಡದವನು ಶೂರನಲ್ಲ; **ಎಂತುಮ್ ಷಂಡಮ್ ಎಂದು ಅರಸನ್ ಅವರ್ಗೆ ವಿರಸಮಾಗಿ ಪರುಷಮ್ ನುಡಿಯೆ**=ಎಲ್ಲ ರೀತಿಯಿಂದಲೂ ಹೇಡಿ ಎಂದು ದುರ್ಯೋಧನನು ದ್ರೋಣ ಮತ್ತು ಅಶ್ವತ್ಥಾಮರ ವಿರುದ್ಧವಾಗಿ ಗಡುಸಾಗಿ ಮಾತನಾಡಲು; ಸಂಜಯನ್ ತನ್ನ ಅಂತರ್ಗತದೊಳ್=ಸಂಜಯನು ತನ್ನ ಮನದೊಳಗೆ;

❖

## ನೋಟ–೩

# ಸಂಜಯನು ಭೀಮಾರ್ಜುನರ ಪರಾಕ್ರಮವನ್ನು ಹೊಗಳುವುದು

**ಅರಸನ್ ಅವರ್ಗೆ ವಿರಸಮಾಗಿ ಪರುಷಮ್ ನುಡಿಯೆ**=ದುರ್ಯೋಧನನು ಅಶ್ವತ್ಥಾಮ ಮತ್ತು ದ್ರೋಣರ ಬಗ್ಗೆ ತುಂಬಾ ಕಟುವಾಗಿ ಗಡುಸಾದ ನುಡಿಗಳ ಮೂಲಕ ತೆಗಳುವದನ್ನು ಕೇಳಿ; **ಸಂಜಯನ್ ತನ್ನ ಅಂತರ್ಗತದೊಳ್**= ಸಂಜಯನು ತನ್ನ ಮನದಲ್ಲಿಯೇ ಈ ರೀತಿ ಅಂದುಕೊಂಡನು; ಅಕಾರ್ಯರ್ಂಗೆ=ಯಾರು ಏನೇ ಹೇಳಿದರೂ ಕೇಳದೆ ತನ್ನ ಇಚ್ಚೆಗೆ ಬಂದುದನ್ನೇ ಮಾಡುವಂತಹ ವ್ಯಕ್ತಿಗೆ / ಹಿಡಿದ ಹಟವನ್ನು ಕೊನೆತನಕ ಬಿಡದವನಿಗೆ; ಅಹಿಕೇತನ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳ ದುರ್ಯೋಧನ; **ಅಕಾರ್ಯರ್ಂಗೆ ಅಹಿಕೇತನಂಗೆ**=ಕೆಟ್ಟ ಹಟಸಾಧನೆಯಲ್ಲಿಯೇ ತೊಡಗಿರುವ ದುರ್ಯೋಧನನಿಗೆ; ಗಡ=ಆನಂದ/ಮೆಚ್ಚುಗೆ/ಅಚ್ಚರಿ/ಹಾಸ್ಯ/ ಸಂಕಟ ಮುಂತಾದ ಒಳಮಿಡಿತಗಳನ್ನು ಹೊರಹಾಕುವಾಗ ಉಚ್ಚರಿಸುವ ಪದ; **ಕಾರ್ಯಸಖನ್ ಶಕುನಿ ಗಡಮ್**=ದುರ್ಯೋಧನನು ಮಾಡುವ ಎಲ್ಲ ಕೆಟ್ಟ ಕೆಲಸಗಳಿಗೂ ಶಕುನಿ ಸಂಗಡಿಗನಲ್ಲವೇ; **ಶೌರ್ಯಸಖನ್ ಸೂತಜನ್ ಗಡಮ್**= ಸಾಹಸದ ಹೋರಾಟದ ಕೆಲಸಗಳಿಗೆ ಸೂತಪುತ್ರನಾದ ಕರ್ಣ ಸಂಗಡಿಗನಲ್ಲವೇ;

ವಿಧಿವಿಳಸನದಿಮ್=ವಿಧಿ ವಿಲಾಸದಿಂದ ಅಂದರೆ ದುರ್ಯೋಧನನ ಹಣೆಯಲ್ಲಿ ಬರೆದಿರುವುದೇ ಒಳಿತನ್ನು ದೂರತಳ್ಳಿ, ಕೆಟ್ಟದ್ದನ್ನು ಬರಸೆಳೆದು ಅಪ್ಪಿಕೊಳ್ಳುವಂತಹ ನಡೆನುಡಿ; ಕೈಪೆ=ಕಹಿರುಚಿ/ಅಪ್ರಿಯ; **ಭೀಷ್ಮ ಶರಾಚಾರ್ಯರ ನುಡಿ ಕೈಪೆ ಗಡಮ್**=ಭೀಷ್ಮ ಮತ್ತು ದ್ರೋಣರ ಮಾತುಗಳು ಕಹಿಯಲ್ಲವೇ;

ಅಂದರೆ ಈ ಗುರು ಹಿರಿಯರ ಹಿತನುಡಿಗೆ ದುರ್ಯೋಧನನು ಯಾವುದೇ ಮನ್ನಣೆಯನ್ನು ನೀಡುವುದಿಲ್ಲ/ಕಿವಿಗೊಡುವುದಿಲ್ಲ; ಸದಾಕಾಲ ಪಾಂಡವರಿಗೆ ಕೇಡನ್ನು ಬಗೆಯುವ ಒಳಸಂಚುಗಳನ್ನು ರೂಪಿಸುವ ಶಕುನಿ ಮತ್ತು ಅರ್ಜುನನ ಬಗ್ಗೆ ಹಗೆತನದ ನುಡಿಗಳನ್ನಾಡುವ ಕರ್ಣನ ಮಾತುಗಳು ದುರ್ಯೋಧನನಿಗೆ ಪ್ರಿಯವಾಗುವಂತೆ ಭೀಷ್ಮರ ಮತ್ತು ದ್ರೋಣರ ಹಿತನುಡಿಗಳು ಪ್ರಿಯವಾಗುವುದಿಲ್ಲ; ದುರ್ಯೋಧನನ ದೇಹವನ್ನು ಕಾಪಾಡುವ ಸಾಧನಗಳನ್ನು ರೂಪಕದ ನುಡಿಯಲ್ಲಿ ಸಂಜಯನು ತನ್ನಲ್ಲಿಯೇ ಹೇಳಿಕೊಳ್ಳತೊಡಗುತ್ತಾನೆ; ಗುರು ಕವಚಮ್=ಗುರು ದ್ರೋಣನು ಉಕ್ಕಿನ ಅಂಗಿ; **ಕರ್ಣನ್ ಬಾಹು ರಕ್ಕೆ**=ಕರ್ಣನು ತೋಳಿಗೆ ತೊಡುವ ಕವಚ;

**ಸುರಸಿಂಧುನಂದನನ್ ಸೀಸಕಮಾಗಿರೆ**=ಭೀಷ್ಮನು ತಲೆಗೆ ತೊಡುವ ಲೋಹದ ಟೊಪ್ಪಿಗೆ; ಮೆಯ್ಗೆ ಮುಳಿಯಲ್ ಅರಿಯದೆ=ದುರ್ಯೋಧನನ ತಲೆಯನ್ನು, ಎದೆಯನ್ನು ಮತ್ತು ತೋಳುಗಳನ್ನು ಕಾಪಾಡುವ ಸಾಧನಗಳಂತೆ ದ್ರೋಣ–ಕರ್ಣ–ಭೀಷ್ಮ ಇರುವಾಗ, ದುರ್ಯೋಧನನ್ನು ಕೊಲ್ಲಲು ಅವನ ಮಯ್ ಮೇಲಣ ಭಾಗಕ್ಕೆ ಹೊಡೆಯಲಾಗದೆ; **ಭೀಮನ್ ಕುರುರಾಜನ ತೊಡೆಯನ್ ಉಡಿವೆನ್ ಎಂದನ್ ಎಂದು ಸಂಜಯನ್**=ಭೀಮನು ಕುರುರಾಜನಾದ ದುರ್ಯೋಧನನ ತೊಡೆಯನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದಾನೆ ಎಂದು ಸಂಜಯನು ತನ್ನ ಮನದಲ್ಲಿಯೇ ಅಂದುಕೊಳ್ಳುತ್ತ; **ಕುರುರಾಜನನ್ ನೋಡಿ**=ಈಗ ಸಂಜಯನು ದುರ್ಯೋಧನನ್ನು ನೋಡುತ್ತ ಗುರು ದ್ರೋಣ ಮತ್ತು ಕುರುಕುಲ ಪಿತಾಮಹ ಭೀಷ್ಮರ ಪರಾಕ್ರಮ ಮತ್ತು ಹಿರಿಮೆಯನ್ನು ಕೊಂಡಾಡತೊಡುಗುತ್ತಾನೆ; **ಭುವನಕ್ಕೆ ಆರಾಧ್ಯನೆಂಬ ಈ ನೆಗಳ್ದ ಬಿರುದಿನ ಅಂಕಕ್ಕೆ ತಕ್ಕ ಅಂದದಿಮ್**= 'ಲೋಕಕ್ಕೆ ಗುರು' ಎಂಬ ಬಿರುದನ್ನು ಪಡೆದು ಹೆಸರಿಗೆ ತಕ್ಕ ರೀತಿಯಲ್ಲಿ; **ಮುನ್ ಭಾರ್ಗವನೊಳ್ ದಿವ್ಯಾಸ್ತ್ರಮಮ್ ಪಡೆದು ನೆಗಳ್ದ ಶೌರ್ಯಕ್ಕೆ ತಕ್ಕ ಅಂದದಿಮ್**=ಈ ಮೊದಲು ಪರಶುರಾಮನಿಂದ ದಿವ್ಯವಾದ ಆಯುಧವನ್ನು ಪಡೆದು, ಹೆಸರಾಂತ ಪರಾಕ್ರಮಕ್ಕೆ ತಕ್ಕ ರೀತಿಯಲ್ಲಿ;

**ಪಾಂಡವರುಮ್ ಕೌರವ್ಯರುಮ್ ಕೈಮುಗಿಯೆ**=ಪಾಂಡವರು ಮತ್ತು ಕೌರವರು ಕಯ್ ಮುಗಿದು ಅಂದರೆ ವಿನಯಶೀಲರಾಗಿ ದ್ರೋಣರಿಂದ ಅಸ್ತ್ರವಿದ್ಯೆಯನ್ನು ಕಲಿಯಲು; ಬಿಲ್+ಒವಜನ್; ಒವಜ=ಗುರು; ಬಿಲ್ಲೊವಜನ್=ಬಿಲ್ ವಿದ್ಯೆಯನ್ನು ಹೇಳಿಕೊಡುವ ಗುರು/ದ್ರೋಣ; **ನೆಗಳ್ದ ಪೆಂಪಿಂಗೆ ತಕ್ಕ ಅಂದದಿಮ್ ಬಿಲ್ಲೊವಜನ್ ಗಾಂಡೀವಿಯೊಳ್ ಕಾದಿದನ್**=ತಾನು ಪಡೆದ ಕೀರ್ತಿಯ ಮಹಿಮೆಗೆ ತಕ್ಕ ರೀತಿಯಲ್ಲಿ ದ್ರೋಣನು ಅರ್ಜುನನೊಡನೆ ಹೋರಾಡಿದನು; ಶರಾಸರ=ಬಾಣಗಳ

ಸುರಿಮಳೆ/ಒಂದೇ ಸಮನೆ ಬಾಣಗಳನ್ನು ಪ್ರಯೋಗಿಸುವುದು; **ಅವರ ಶರಾಸಾರಮಮ್ ನೀನೇ ಕಂಡೈ**=ದ್ರೋಣರ ಬಾಣಗಳ ಸುರಿಮಳೆಯನ್ನು ನೀನೇ ರಣರಂಗದಲ್ಲಿ ಕಣ್ಣಾರ ಕಂಡಿರುವೆ; ಇ**ದು ದಲ್ ಗಂಗಾತ್ಮಜನ್ಮಕ್ಕೆ ಅನುಗುಣಮ್**= ಭೀಷ್ಮನು ಗಂಗೆಯ ಮಗನಾದುದಕ್ಕೆ ಇದು ಯೋಗ್ಯವಾದುದು; ಅಂದರೆ ಭೀಷ್ಮನು ಕುರುಕ್ಷೇತ್ರ ರಣರಂಗದಲ್ಲಿ ವೀರೋಚಿತವಾಗಿ ಹೋರಾಡಿ, ಈಗ ತನ್ನಿಚ್ಛೆಯಂತೆ ಶರಮಂಚದ ಮೇಲೆ ಮಲಗಿದ್ದಾನೆ; **ಪೋ ಇದು ರಾಜಪ್ರಸಾದಕ್ಕೆ ತಕ್ಕುದು**= ಏನೆಂದು ತಿಳಿದಿರುವೆ ಇದು ರಾಜನ ಮೆಚ್ಚುಗೆಗೆ ಪಾತ್ರವಾದುದು; ದೋರ್ದಂಡ=ಶಕ್ತಿಯುತವಾದ ತೋಳುಗಳು; ಕಂಡೂಯನ=ನವೆ/ತುರಿಕೆ; ದೋರ್ದಂಡ ಕಂಡೂಯನ=ಇದೊಂದು ನುಡಿಗಟ್ಟು. **'ತೋಳಿನ ತೀಟೆಯನ್ನು ತೀರಿಸಿಕೊಳ್ಳುವುದು'** ಎಂದರೆ ಎದುರಾಳಿಯ ಜತೆ ಹೋರಾಡುವಾಗ ತೋಳ್ಬಲವನ್ನು ಪ್ರಯೋಗಿಸಿ, ಹಗೆಯನ್ನು ಸದೆಬಡಿದು ತೋಳ್ಬಲವನ್ನು ಮೆರೆಸುವುದು;

**ಇದು ಈ ದೋರ್ದಂಡ ಕಂಡೂಯನಕೆ ಸದೃಶಮ್**=ರಣರಂಗದಲ್ಲಿ ಹಗೆಗಳಾದ ಪಾಂಡವರ ಬಲವನ್ನು ಸದೆಬಡಿದ ಭೀಷ್ಮನ ತೋಳ್ಬಲದ ಶಕ್ತಿಗೆ ಇದು ಸಂಕೇತವಾಗಿದೆ; ಭೀಷ್ಮನಾಮ=ಶಂತನು ಮತ್ತು ಗಂಗಾದೇವಿಯ ಮಗನಾದ ಭೀಷ್ಮನ ಮೊದಲ ಹೆಸರು ಗಾಂಗೇಯ. ತಂದೆಯಾದ ಶಂತನು ರಾಜನು ಸತ್ಯವತಿಯೆಂಬ ಹೆಣ್ಣನ್ನು ಮದುವೆಯಾಗಲು ಬಯಸಿದಾಗ, ಆಕೆಯ ತಂದೆಯು "ತನ್ನ ಮಗಳ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ಪಟ್ಟಕಟ್ಟುವುದಾದರೆ, ಮಗಳನ್ನು ಕೊಡುತ್ತೇನೆ" ಎಂಬ ಕರಾರರನ್ನು ಹಾಕಿದ್ದರಿಂದ, ತಂದೆಯ ಬಯಕೆಯನ್ನು ಈಡೇರಿಸುವುದಕ್ಕಾಗಿ ಗಾಂಗೇಯನು 'ತನಗೆ ರಾಜ್ಯದ ಪಟ್ಟವೂ ಬೇಡ. ತಾನೂ ಮದುವೆಯನ್ನೇ ಆಗುವುದಿಲ್ಲ' ಎಂದು ಪ್ರತಿಜ್ಞೆಯನ್ನು ಮಾಡಿ, ಸತ್ಯವತಿ ಮತ್ತು ಶಂತನು ಅವರ ಮದುವೆಯನ್ನು ಮಾಡಿಸುತ್ತಾನೆ. ಮಹತ್ತರವಾದ ಪ್ರತಿಜ್ಞೆಯನ್ನು ಮಾಡಿದ ಗಾಂಗೇಯನಿಗೆ ಅಂದಿನಿಂದ ಭೀಷ್ಮನೆಂಬ ಹೆಸರು ಬರುತ್ತದೆ. **ಭೀಷ್ಮ= ಭಯಂಕರವಾದ; ಭೀಷ್ಮನಾಮಕ್ಕೆ ಇದು ಸಮುಚಿತಮ್ ಎಂಬಂತೆ**=ಅಚಲವಾದ ಪ್ರತಿಜ್ಞೆಯನ್ನು ಮಾಡಿದವನು ಎಂಬ ಹೆಸರಿಗೆ ಇದು ಯೋಗ್ಯವಾದುದು ಎನ್ನುವಂತೆ; ಸಂಗ್ರಾಮರಂಗ ಉನ್ಮದರೆಲ್ಲರ್ ನೋಡೆ=ರಣರಂಗದಲ್ಲಿ ನೆರೆದಿದ್ದ ಕೌರವ ಮತ್ತು ಪಾಂಡವ ಪಡೆಗಳಲ್ಲಿ ಭುಜಬಲದ ಸೊಕ್ಕಿನಿಂದ ಮೆರೆಯುತ್ತಿರುವ ವೀರರೆಲ್ಲರೂ ನೋಡುತ್ತಿರಲು;

**ಅದಟನ್ ಸಿಂಧುಪುತ್ರನ್ ಕದನದೊಳ್ ಪೆಂಪಮ್ ತೋರಿದನ್**=ಶೂರನಾದ ಭೀಷ್ಮನು ರಣರಂಗದಲ್ಲಿ ತನ್ನ ಕೀರ್ತಿಯನ್ನು ತೋರಿದನು; **ಕಳಶ ನದೀಜರ್ ಇದು**

**ಭಕ್ತಿಗೆ ಕಳಶಾರೋಹಣಮ್ ಎನಿಸಿ ನೆರಪಿದರ್**=ದ್ರೋಣ ಮತ್ತು ಭೀಷ್ಮರು ಸ್ವಾಮಿ ಭಕ್ತಿಗೆ ಕಳಶವಿಟ್ಟರು ಎನ್ನುವಂತೆ ಕುರುಕ್ಷೇತ್ರ ರಣರಂಗದಲ್ಲಿ ಹೋರಾಡಿದರು; ಅಳವು=ಶಕ್ತಿ; **ಕಾದಿ ಗೆಲಲ್ ಅವರ ಒಂದು ಅಳವಲ್ತು**=ಪಾಂಡವರ ಎದುರಾಗಿ ಹೋರಾಡಿ ಗೆಲ್ಲುವುದು ಅವರ ಕಯ್ಯಲ್ಲಿಲ್ಲ. ಅಂದರೆ ಅವರ ಶಕ್ತಿಗೆ ಅದು ಮಿಗಿಲಾದುದ್ದು; **ಆರ ಅಳವಲ್ತು**=ಯಾರಿಗೂ ಪಾಂಡವರನ್ನು ಸೋಲಿಸುವ ಶಕ್ತಿಯಿಲ್ಲ; **ಅರ್ಜುನನ ಶೌರ್ಯಮಮ್ ನೀನ್ ಅರಿಯಾ**=ಅರ್ಜುನನ ಪರಾಕ್ರಮ ಎಂತಹುದು ಎಂಬುದು ನಿನಗೆ ಗೊತ್ತಲ್ಲವೇ; **ನೃಪ, ನಿನ್ನನ್ ಪಿಡಿದು ಉಯ್ಯೆ**= ದುರ್ಯೋಧನನೇ, ನಿನ್ನನ್ನು ಚಿತ್ರಾಂಗದನೆಂಬ ಗಂಧರ್ವನು ಹಿಡಿದುಕೊಂಡು, ಗಗನದಲ್ಲಿರುವ ತನ್ನ ಲೋಕಕ್ಕೆ ಎಳೆದೊಯ್ಯುತ್ತಿದ್ದಾಗ; ಪಾಂಡವರು ಹನ್ನೆರಡು ವರುಶ ವನವಾಸದಲ್ಲಿದ್ದಾಗ, ಅವರಿಗೆ ತನ್ನ ರಾಜತನದ ಸಿರಿವಂತಿಕೆಯನ್ನು ತೋರಿಸಿ, ಅವರನ್ನು ಅಪಮಾನಪಡಿಸಬೇಕೆಂದು ದುರ್ಯೋಧನನು ತನ್ನ ಮಡದಿ ಮಕ್ಕಳು, ತಮ್ಮಂದಿರು ಮತ್ತು ಬಂಧುಬಾಂಧವರೊಡನೆ ಪಾಂಡವರಿದ್ದ ಕಾಡಿಗೆ ಹೋದಾಗ, ಚಿತ್ರಾಂಗದನೆಂಬ ಗಂಧರ್ವನ ಉದ್ಯಾನವನ್ನು ಹೊಕ್ಕು ಹಾಳುಮಾಡುತ್ತಿದ್ದುದರಿಂದ ಸೆರೆಯಾಗುತ್ತಾನೆ;

**ಭಾನುಮತಿಯನ್ ಸಂತೈಸಿ**=ಸಂಕಟದಿಂದ ಪರಿತಪಿಸುತ್ತಿದ್ದ ನಿನ್ನ ಹೆಂಡತಿ ಭಾನುಮತಿಯನ್ನು ಸಮಾಧಾನ ಮಾಡಿ; **ಗಾಂಡೀವಿ ಚಿತ್ರಾಂಗದಂಗೆ ಉಪಯೋಗಾಸ್ತ್ರಮನ್ ಎಚ್ಚು**=ಅರ್ಜುನನು ಚಿತ್ರಾಂಗದನ ಮೇಲೆ ಉಪಯೋಗಾಸ್ತ್ರವನ್ನು ಪ್ರಯೋಗಿಸಿ, ಅವನನ್ನು ಸೋಲಿಸಿ, ಅವನಿಂದ ನಿನ್ನನ್ನು ಬಿಡುಗಡೆಗೊಳಿಸಿ; **ಕೂಡೆ ನಭದಿಮ್ ತರ್ಪಾಗಳ್**=ಕೂಡಲೇ ಗಗನದಿಂದ ನಿನ್ನನ್ನು ಕರೆತರುವಾಗ; ಕುರುಪ್ರಭವರ್=ಕುರುವಂಶದಲ್ಲಿ ಹುಟ್ಟಿದವರು/ ದುರ್ಯೋಧನನ ನೂರು ಮಂದಿ ತಮ್ಮಂದಿರು; ಹಮ್ಮದ=ಮೂರ್ಚೆ/ಪ್ರಜ್ಞೆ ತಪ್ಪುವಿಕೆ; **ಈ ಕೃಪನ್ ಈ ಸೈಂಧವನ್ ಈ ಸರಿತ್ ತನಯನ್ ಈ ರಾಧೇಯನ್ ಈ ಮದ್ರಭೂಮಪನ್ ಈ ಕುಂಭಜನ್ ಈ ಕುರುಪ್ರಭವರ್ ಅಂದು ಏನ್ ಹಮ್ಮದಮ್ ಪೋದರೇ**=ನಿನ್ನ ಗುರುವಾದ ಕೃಪ, ನಿನ್ನ ಭಾವಮಯ್ದುನನಾದ ಸೈಂಧವ, ನಿನ್ನ ತಾತನಾದ ಭೀಷ್ಮ ನಿನ್ನ ಗೆಳೆಯನಾದ ಕರ್ಣ ಮದ್ರದೇಶದ ಒಡೆಯನಾದ ಶಲ್ಯ.. ನಿನ್ನ ಗುರುವಾದ ದ್ರೋಣ ನಿನ್ನ ಒಡಹುಟ್ಟಿದ ತಮ್ಮಂದಿರು ಚಿತ್ರಾಂಗದನು ನಿನ್ನನ್ನು ಸೆರೆಹಿಡಿದು ಒಯ್ಯುತ್ತಿದ್ದಾಗ, ಅರ್ಜುನನು ವೀರಾವೇಶದಿಂದ ಹೋರಾಡಿ ನಿನ್ನನ್ನು ಸೆರೆಯಿಂದ ಬಿಡಿಸಿ ಕರೆತರುತ್ತಿದ್ದಾಗ, ಏನು ಪ್ರಜ್ಞೆ ತಪ್ಪಿ ಬಿದ್ದಿದ್ದರೆ; ಅಂದರೆ ಗಂಧರ್ವನಿಂದ ಸೆರೆಯಾಗಿದ್ದ ನಿನ್ನನ್ನು ಬಿಡಿಸಿಕೊಂಡು ಬರುವ ಶಕ್ತಿಯಾಗಲಿ ಇಲ್ಲವೇ ಪರಾಕ್ರಮವಾಗಲಿ ನಿನ್ನ ಕಡೆಯಲ್ಲಿ ಯಾರೊಬ್ಬರಿಗೂ ಇರಲಿಲ್ಲ; ಅಕ್ಷೋಹಿಣಿ=೨೧,೮೭೦ ಆನೆ... ೨೧,೮೭೦ ರಥ... ೬೫,೬೧೦ ಕುದುರೆ...

೧,೦೯,೩೫೦ ಕಾಲಾಳು ಇರುವ ಸೇನಾಬಲವನ್ನು ಒಂದು ಅಕ್ಷೋಹಿಣಿ ಎಂದು ಕರೆಯುತ್ತಾರೆ;

**ಕಲಿ ಪನ್ನೊಂದಕ್ಷೋಹಿಣಿ ಬಲವೆಲ್ಲಮನೊಂದೆ ರಥದೊಳೊರ್ವನೆ ಗೆಲ್ದನ್**=ಶೂರನಾದ ಅರ್ಜುನನು ನಿನ್ನ ಕಡೆಯ ಹನ್ನೊಂದು ಅಕ್ಷೋಹಿಣಿ ಸೇನೆಯೆಲ್ಲವನ್ನು ತೇರಿನಲ್ಲಿ ಬಂದು ಒಬ್ಬನೇ ಗೆದ್ದನು; ವಿಜಯ=ಅರ್ಜುನ; **ಗೋಗ್ರಹಣದ ಕಲಹದೊಳ್ ಅರಿಯನ್ ಗೆಲಲ್ ವಿಜಯನ್ ಏಕಾಂಗ ವಿಜಯನಾದನ್**=ಅಂದು ವಿರಾಟನಗರಿಯ ಹೊರವಲಯದಲ್ಲಿ ನಡೆದ ಗೋಗ್ರಹಣದ ಕಾಳೆಗದಲ್ಲಿ ಶತ್ರುವಾದ ನಿನ್ನ ಪಡೆಯ ಎದುರಾಗಿ ಅರ್ಜುನನು ಏಕಾಂಗಿಯಾಗಿಯೇ ಹೋರಾಡಿ ವಿಜಯಶಾಲಿಯಾದನು; **ಉರಿ ಕೊಳೆ=ಅರಗಿನ ಮನೆಯಲ್ಲಿ ಬೆಂಕಿಬಿದ್ದಾಗ; ಕೋಳ್ಮಿಗಮ್ ಕೊಳೆ**=ಹನ್ನೆರಡು ವರುಶದ ಅರಣ್ಯವಾಸದಲ್ಲಿ ಕಾಡು ಪ್ರಾಣಿಗಳು ದಾಳಿಯಿಟ್ಟಾಗ; **ವಿಷಾಹಿಕುಲಮ್ ಕೊಳೆ**=ವಿಷದ ಹಾವುಗಳು ಕಚ್ಚಲು ಬಂದಾಗ; **ಶತ್ರುಭೂಮಿಯೊಳ್**=ಹಗೆಗಳಿಂದ ಆಕ್ರಮಣಕ್ಕೆ ಗುರಿಯಾದಾಗ; ಗಿರಿಗಹನಂಗಳೊಳ್=ಬೆಟ್ಟ ಗುಡ್ಡ ಕಾಡುಗಳಲ್ಲಿ ಸಂಚರಿಸುವಾಗ; **ವಿಷಮ ರಾಕ್ಷಸ ಸಂಕುಲದೊಳ್**=ಭಯಂಕರರಾದ ರಕ್ಕಸರ ಗುಂಪಿನಲ್ಲಿ ಸಿಕ್ಕಿಬಿದ್ದಾಗ; ವರಾಹ ಸಿಂಧುರ ಖರ ಶಯ್ಯೆಯೊಳ್=ಹಂದಿ ಆನೆಗಳು ಹೆಚ್ಚಾಗಿರುವ ಭಯಂಕರವಾದ ನೆಲೆಗಳಲ್ಲಿ; **ವಿಪುಳ ಭೀಕರದೊಳ್**=ಈ ರೀತಿ ಆಪತ್ತಿನ ಅನೇಕ ಸನ್ನಿವೇಶಗಳಲ್ಲಿ; ವೃಕೋದರ=ಭೀಮ;

**ವೃಕೋದರನ್ ನಿಜ ಬಾಹು ವಜ್ರಪಂಜರದೊಳಗಿಟ್ಟು ಸಹೋದರರಮ್ ರಕ್ಷಿಸಿದನಲ್ತೆ**=ಭೀಮನು ತನ್ನ ಬಾಹುಗಳೆಂಬ ವಜ್ರಪಂಜರದೊಳಗಿಟ್ಟುಕೊಂಡು ಸೋದರರನ್ನು ಕಾಪಾಡಿದನಲ್ಲವೇ; **ಬಕನನ್ ಹಿಡಿಂಬನನ್ ಕೀಚಕನನ್ ಕಿಮ್ಮೀರನನ್ ಜಟಾಸುರನನ್ ಕೊಂದ ಕಲಿ**=ಬಲಶಾಲಿಗಳಾಗಿದ್ದ ಬಕಾಸುರನನ್ನು ಹಿಡಿಂಬನನ್ನು ಕೀಚಕನನ್ನು ಕಿಮ್ಮೀರನನ್ನು ಜಟಾಸುರನ್ನು ಕೊಂದ ಮಹಾಶೂರ ಭೀಮ; **ಜರಾಸಂಧನನ್ ಇಕ್ಕಿ ಕೊಂದ ಬಲ್ಲಾಳ್ ಮರುತ್ ಸುತನ್ ಕೇವಳನೇ ಎಂದು ಸಂಜಯನ್ ಸಾಹಸಭೀಮನ ಸಾಹಸಂಗಳನ್ ಅಭಿವರ್ಣಿ**ಸಿ=ಜರಾಸಂಧನನ್ನು ಇಬ್ಭಾಗವಾಗಿ ಸೀಳಿ ಕೊಂದ ಮಹಾಶಕ್ತಿವಂತನಾದ ವಾಯುಪುತ್ರನಾದ ಭೀಮನು ಸಾಮಾನ್ಯನೇ ಎಂದು ಸಂಜಯನು ಸಾಹಸ ಭೀಮನ ಪರಾಕ್ರಮದ ಪ್ರಸಂಗಗಳನ್ನು ಚೆನ್ನಾಗಿ ಬಣ್ಣಿಸಿ ಹೇಳಿ; ಶಕ್ರಸುತ=ದೇವೇಂದ್ರನ ಅಂಶದಿಂದ ಹುಟ್ಟಿರುವ ಅರ್ಜುನ; **ನೆಗಳ್ದ ಆ ಭಾರತಮಲ್ಲ ಶಕ್ರಸುತ ಬಾಣಾಘಾತದಿಮ್**=ಕೀರ್ತಿವಂತನಾದ ಆ ಭಾರತಮಲ್ಲ ಅರ್ಜುನನ ಬಾಣಗಳ ಪೆಟ್ಟಿನಿಂದ; **ಭೀಮ ಭೀಮಗದಾದಂಡ ವಿಘಾತದಿಮ್**=ಭೀಮನ ಭಯಂಕರವಾದ ಗದಾದಂಡದ

ದೊಡ್ಡ ಹೊಡೆತದಿಂದ; **ಕುರುನೃಪ ಆನೀಕಮ್ ಪಡಲ್ವಟ್ಟು**=ಕುರುರಾಜನ ಸೇನೆಯು ಚೆಲ್ಲಾಪಿಲ್ಲಿಗೊಂಡು;

**ಜೀರಗೆಯೊಕ್ಕಲ್ಗೆ ಎಣೆಯಾಗಿ**=ಜೀರಗೆಯ ಪಯಿರುಗಳನ್ನು ಒಕ್ಕಣೆ ಮಾಡುವಾಗ ಜೀರಗೆಯ ಸಣ್ಣಸಣ್ಣ ಕಾಳುಗಳು ಎಲ್ಲೆಡೆಯಲ್ಲಿಯೂ ಚದುರಿಕೊಂಡು ಬೀಳುವಂತೆ; **ಕುರುಕ್ಷೇತ್ರದೊಳ್ ಎತ್ತಮ್**=ಕುರುಕ್ಷೇತ್ರ ರಣರಂಗದ ಎಲ್ಲೆಡೆಗಳಲ್ಲಿಯೂ; **ಬಿಳ್ದ ಭಟರಿಮ್**=ಸಾವು ನೋವಿಗೆ ಗುರಿಯಾಗಿ ಬಿದ್ದಿರುವ ಭಟರಿಂದ; **ಬಿಳ್ದ ಅಶ್ವದಿಮ್**=ಉರುಳಿ ಬಿದ್ದಿರುವ ಕುದುರೆಗಳಿಂದ; **ಬಿಳ್ದ ದಂತಿಗಳಿಂದಮ್**=ಕೆಡೆದು ಬಿದ್ದಿರುವ ಆನೆಗಳಿಂದ; **ಜವನ್ ಉಂಡು ಕಾರಿದವೊಲ್ ಆಯ್ತು**=ಯಮನು ಉಂಡು ಅರಗಿಸಿಕೊಳ್ಳಲಾಗದೆ ಕಕ್ಕಿಕೊಂಡಂತಾಗಿದೆ; ಸಾವಿನ ದೇವತೆಯಾದ ಯಮನು ಅಗಣಿತ ಸಂಕೆಯ ಜೀವರಾಶಿಗಳನ್ನು ಬಲಿತೆಗೆದು ಕೊಂಡಿದ್ದಾನೆ ಎಂಬ ರೂಪಕದ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ; **ಪವನಸುತನ್ ಗದೆಗೊಳೆ**=ವಾಯುಪುತ್ರನಾದ ಭೀಮನು ಗದೆಯನ್ನು ಕಯ್ಗೆ ಎತ್ತಿಕೊಂಡರೆ; ಗದೆಯನ್ನು ಹಿಡಿದು ಯುದ್ಧಕ್ಕೆ ಸಿದ್ಧನಾದರೆ; **ಗಾಂಡಿವಿ ಬಿಲ್ಗೊಳೆ**=ಅರ್ಜುನನು ಬಿಲ್ಲನ್ನು ಹಿಡಿದು ಯುದ್ಧಕ್ಕೆ ಸಿದ್ಧನಾದರೆ; **ಕಯ್ದುಗೊಳ್ವ ಮಾರ್ಕೊಳ್ವ ಅದಟರ್ ಭುವನದೊಳಿಲ್ಲ**= ಭೀಮಾರ್ಜುನರೊಡನೆ ಯುದ್ಧ ಮಾಡಲೆಂದು ಆಯುಧವನ್ನು ಹಿಡಿದು ಸಿದ್ಧರಾಗುವ ಇಲ್ಲವೇ ಅವರನ್ನು ಎದುರಿಸುವ ಶೂರರು ಈ ಜಗತ್ತಿನಲ್ಲಿಲ್ಲ;

**ಕೌರವರಾಜಾ, ಅವರ್ಗಳ ಬಾಹು ವಿಕ್ರಮಮ್ ನಿನಗೆ ಪೊಸತೆ**= ದುರ್ಯೋಧನನೇ, ಭೀಮಾರ್ಜುನರ ಬಾಹುಬಲದ ಪರಾಕ್ರಮವು ನಿನಗೆ ಹೊಸತೇನು; **ಜವನ ಮುಳಿಸೇ ಅವನ ಮುಳಿಸೆನೆ**=ಯಮನ ಕೋಪೋದ್ರೇಕವೇ ಭೀಮನ ಕೋಪೋದ್ರೇಕ ಎನ್ನುವಂತೆ; ಬರ್ಚು=ನಾಶಮಾಡು/ಶಕ್ತಿಗುಂದಿಸು; ಕುರಿ+ತರಿ=ಕುರಿದರಿ; ಕುರಿದರಿ=ಕುರಿಯನ್ನು ಕತ್ತರಿಸು; **ಜವನೇ ಬರ್ಚಿದವೊಲ್ ಇಂತು ಕುರಿದರಿ ತರಿದನ್**=ಯಮನೇ ಜೀವಿಗಳನ್ನು ನಾಶಮಾಡುವಂತೆ ನಿನ್ನ ಸೇನೆಗೆ ಯಮರೂಪಿಯಾದ ಭೀಮನು ಮಾರಿಗುಡಿಯ ಮುಂದೆ ಕುರಿಗಳನ್ನು ಕತ್ತರಿಸಿ ಬಲಿಕೊಡುವಂತೆ ಕುರುಕ್ಷೇತ್ರ ರಣರಂಗದಲ್ಲಿ ನಿನ್ನ ಪಡೆಯನ್ನು ಬಲಿಗೊಟ್ಟನು; **ಜವನನ್ ಮುಳಿಯಿಸಿ ಸುಭಟರ ಜವನನ್ ಮುಳಿಯಿಸಿ ಬದುರ್ಕುವನ್ನರುಮ್ ಒಳರೇ**=ಸಾವಿನ ದೇವತೆಯಾದ ಯಮನನ್ನು ಕೆಣಕಿ ಕೋಪೋದ್ರೇಕಗೊಳಿಸಿದ ಹಾಗೆ ಶತ್ರುಸೇನೆಯ ವೀರರಿಗೆ ಯಮನಾಗಿರುವ ಭೀಮನನ್ನು ಕೆಣಕಿ ಕೋಪೋದ್ರೇಕಗೊಳಿಸಿ ಬದುಕುವಂತಹವರು ಇದ್ದಾರೆಯೇ; ಇದುವರೆಗೆ ಭೀಮಾರ್ಜುನರ ಸಾಹಸವನ್ನು ಹೊಗಳುತ್ತಿದ್ದ ಸಂಜಯನು ಇದೀಗ

ಧರ್ಮರಾಯನ ಸದ್ಗುಣವನ್ನು ಕೊಂಡಾಡತೊಡಗುತ್ತಾನೆ. **ಪ್ರಿಯವಾಕ್ಸಹಿತಮ್ ದಾನಮ್**=ಒಳ್ಳೆಯ ಮಾತುಗಳನ್ನಾಡುತ್ತ ಮಾಡುವ ದಾನ;

**ಅಗರ್ವಮ್ ಜ್ಞಾನಮ್**=ಅಹಂಕಾರವಿಲ್ಲದ ವಿನಯದ ನಡೆನುಡಿಯಿಂದ ಕೂಡಿದ ಅರಿವು; **ಕ್ಷಮಾನ್ವಿತಮ್ ಶೌರ್ಯಮ್ ಎನಿಪ್ಪ**=ಹಗೆಯ ತಪ್ಪನ್ನು ಮನ್ನಿಸಿ, ಹಗೆಗೆ ಅರಿವನ್ನು ಮೂಡಿಸಿ, ಹಗೆಯು ಒಳ್ಳೆಯ ರೀತಿಯಲ್ಲಿ ಬದುಕಲು ಅವಕಾಶವನ್ನು ಕೊಡುವ ಕರುಣೆಯ ನಡೆನುಡಿಯೇ ಶೂರತನವೆನ್ನುವ; **ಈ ನುಡಿಯನೆ=ಇಂತಹ ಮಾತುಗಳನ್ನೇ; ಧರ್ಮಜನಾ ದಾನಮ್ ಜ್ಞಾನಮ್ ಕ್ಷಮಾಗುಣಮ್ ನುಡಿಯಿಸಿದುದು**=ಧರ್ಮರಾಯನ ದಾನ, ಜ್ಞಾನ ಮತ್ತು ಕ್ಷಮೆಯ ನಡೆನುಡಿಯು ನನ್ನಿಂದ ಆಡಿಸಿತು; ಸಂಜಯನು ಈಗ ನಕುಲ ಸಹದೇವರನ್ನು ಗುಣಗಾನ ಮಾಡತೊಡಗುತ್ತಾನೆ; ಅಮಳ್=ಅವಳಿ/ಜೋಡಿ; ಅಮಳ್ಗಳ್=ಅವಳಿ ಮಕ್ಕಳಾದ ನಕುಲ ಸಹದೇವ; **ಅಮಳ್ಗಳ್ ವಿನಯದೆ ವಿಕ್ರಮದ ಅಮಳ್ಗಳ್**=ಪಾಂಡುರಾಜ ಮತ್ತು ಮಾದ್ರಿಯ ಅವಳಿ ಮಕ್ಕಳಾದ ನಕುಲ ಸಹದೇವರು ವಿನಯವಂತಿಕೆಯ ಮತ್ತು ಪರಾಕ್ರಮವೆಂಬ ಎರಡು ಗುಣವನ್ನು ಹೊಂದಿದ್ದಾರೆ;

**ಅವರ್ ಮುಳಿಯೆ ಗಂಡರಿಲ್ಲ**=ನಕುಲ ಸಹದೇವರು ಕೋಪೋದ್ರೇಕಗೊಂಡು ಎದುರಾದರೆ ಅವರನ್ನು ಸೋಲಿಸುವ ಶೂರರೇ ಜಗತ್ತಿನಲ್ಲಿಲ್ಲ; ಕುರುಕುಲಾಂಬರ ಭಾನು=ಕುರುಕುಲವೆಂಬ ಆಕಾಶದಲ್ಲಿ ಸೂರ್ಯನಂತೆ ಕಂಗೊಳಿಸುತ್ತಿರುವ ದುರ್ಯೋಧನ; ಇಳಿಸು=ಹೀಯಾಳಿಸು/ತೆಗಳು/ಕಡೆಗಣಿಸು; **ಕುರುಕುಲಾಂಬರ ಭಾನು, ಅವರ ಪರಾಕ್ರಮಮನ್ ನೀನ್ ಅರಿದು ಇರ್ದುಮ್**= ದುರ್ಯೋಧನನೇ, ಹಿರಿಯರಾದ ಭೀಷ್ಮರು, ಗುರುಗಳಾದ ದ್ರೋಣರು ಮತ್ತು ಪಾಂಡವರು ಅಯ್ದು ಮಂದಿಯೂ ಮಹಾಶೂರರೆಂಬುದನ್ನು ನೀನು ತಿಳಿದಿದ್ದರೂ; **ಸಮರದೊಳ್ ಇಳಿಸುವುದೆ ಎಂದು ನುಡಿದ ಸಂಜಯನ ನುಡಿಗೆ** = ಕುರುಕ್ಷೇತ್ರ ರಣರಂಗದಲ್ಲಿ ಅವರೆಲ್ಲರ ಶಕ್ತಿ ಮತ್ತು ಪರಾಕ್ರಮವನ್ನು ಕಡೆಗಣಿಸಿ ತೆಗಳುತ್ತಿರುವುದು ಸರಿಯೇ ಎಂದು ಪ್ರಶ್ನಿಸಿದ ಸಂಜಯನ ಮಾತಿಗೆ; **ಫಣಿರಾಜ ಕೇತನನ್ ಸಿಡಿಲ್ದು**=ದುರ್ಯೋಧನನು ಆಕ್ರೋಶದಿಂದ ಕೆರಳಿ;

❖

## ನೋಟ–೪

# ದುರ್ಯೋಧನನ ಆಕ್ರೋಶ

ಫಣಿರಾಜಕೇತನ=ಹಾವಿನ ಚಿತ್ರವನ್ನು ಬಾವುಟದಲ್ಲಿ ರಾಜ ಲಾಂಛನವಾಗುಳ್ಳ ದುರ್ಯೋಧನ; **ಸಂಜಯನ ನುಡಿಗೆ ಫಣಿರಾಜಕೇತನನ್ ಸಿಡಿಲ್ದು**=ಸಂಜಯನು ಅಯ್ದು ಮಂದಿ ಪಾಂಡವರ ಪರಾಕ್ರಮವನ್ನು ಹೊಗಳಿದ್ದನ್ನು ಕೇಳಿ ದುರ್ಯೋಧನನು ಕೆರಳಿ ಕೋಪೋದ್ರೇಕದಿಂದ; **ಆ ಧರ್ಮಪುತ್ರನ್ ಸ್ಥಿರಸತ್ಯವ್ರತಿಯೆಂದು**=ಆ ಧರ್ಮರಾಯನು ಸದಾಕಾಲ ಸತ್ಯದ ನಡೆನುಡಿಯುಳ್ಳವನೆಂದು; **ಧರ್ಮರುಚಿಯೆಂದು**=ಒಳ್ಳೆಯ ನಡೆನುಡಿಯಲ್ಲಿಯೇ ಆಸಕ್ತಿಯುಳ್ಳವನೆಂದು; **ದಯಾಪರನೆಂದು**=ಕರುಣಾಶೀಲನೆಂದು; **ಎಲ್ಲರ ಪೇಳ್ದ ಮಾತು**=ಧರ್ಮರಾಯನ ಸಜ್ಜನಿಕೆಯ ಬಗ್ಗೆ ಜನರೆಲ್ಲರೂ ಹೇಳುತ್ತಿದ್ದ ಮಾತು; ಕಾರ್ಮುಕ+ಆಚಾರ್ಯನನ್; ಕಾರ್ಮುಕ=ಬಿಲ್ಲು; ತೊದಳ್ ನುಡಿದು=ಸುಳ್ಳನ್ನು ಹೇಳಿ; ಪುಸಿ+ಆಯ್ತು; ಪುಸಿ=ಸುಳ್ಳು;

**ಆ ಕಾರ್ಮುಕಾಚಾರ್ಯನನ್ ಗುರುವಮ್ ಬ್ರಾಹ್ಮಣನನ್ ತೊದಳ್ ನುಡಿದು ಕೊಂದಂದು ಪುಸಿಯಾಯ್ತು**=ಧರ್ಮರಾಯನು ಬಿಲ್ ವಿದ್ಯೆಯನ್ನು ಕಲಿಸುವ ಗುರುವಾದ ಆ ಬ್ರಾಹ್ಮಣ ದ್ರೋಣನನ್ನು ಸುಳ್ಳು ನುಡಿಯನ್ನಾಡಿ ಕೊಂದ ಗಳಿಗೆಯಿಂದಲೇ 'ಧರ್ಮರಾಯನು ಸತ್ಯವಂತ' ಎಂದು ಜನರಾಡುವ ಮಾತು ಸುಳ್ಳಾಯಿತು; ಮೃಷಾ=ಸುಳ್ಳು; ಪಾತಕ=ಪಾಪ/ಕೆಟ್ಟ ಕೆಲಸ; **"ಮೃಷಾಪಾತಕಮ್ ಪರಮ್" ಎಂಬ ಈ ನುಡಿಯಿಮ್**="ಸುಳ್ಳನ್ನಾಡುವುದು ಅತ್ಯಂತ ಪಾಪದ ಕೆಲಸ" ಎಂಬ ನುಡಿಯಂತೆ; ಪೃಥಾಸುತರು=ಕುಂತಿಯ ಮಕ್ಕಳು/ಪಂಚ ಪಾಂಡವರು; ಪೃಥಾಪ್ರಿಯಸುತ=ಈ ಸನ್ನಿವೇಶದಲ್ಲಿ ಈ ಪದಕ್ಕೆ ಧರ್ಮರಾಯ ಎಂಬ ತಿರುಳಿದೆ;

**ಪೃಥಾಪ್ರಿಯಸುತನ್ ಪಾಪಕ್ಕೆ ಪಕ್ಕಾಗನೇ**=ಕುಂತಿಯ ಮೆಚ್ಚಿನ ಮಗನಾದ ಧರ್ಮರಾಯನು ಪಾಪಕ್ಕೆ ಗುರಿಯಾಗುವುದಿಲ್ಲವೇ; ದೊರೆ=ಸಮಾನ/ರೀತಿ/ಬಗೆ; ಅರ=ಯಮ; ಅರಮಗ=ಯಮನೆಂಬ ದೇವತೆಯ ಅಂಶದಿಂದ ಹುಟ್ಟಿರುವ ಧರ್ಮರಾಯ; ಮೃಷವಾದನು=ಸುಳ್ಳುಗಾರನಾದನು; ಮುಕ್ತಬಾಣ=ಯುದ್ದ ಮಾಡದೆ ಬಾಣವನ್ನು ಕೆಳಗಿಟ್ಟ ದ್ರೋಣ; **"ಈ ದೊರೆಯ ಅರಮಗನುಮ್ ಮೃಷವಾದನ್ ನೋಡು" ಎಂದು ಧರ್ಮನನ್ ಮೂದಲಿಸಲ್ ಯಮಪುರಕೆ ಮುಕ್ತ ಬಾಣನ್ ದ್ರೋಣನ್ ಪೋದನ್**=ಎಲೆ ಯಮದೇವತೆಯೇ, ಸತ್ಯವಂತನೆಂದು ಹೆಸರಾಂತ ನಿನ್ನ ಮಗ ಧರ್ಮರಾಯನು ಸುಳ್ಳುಗಾರನಾಗಿದ್ದಾನೆ ನೋಡು" ಎಂದು ಯಮನನ್ನು ಹಂಗಿಸಲು ಯಮಪುರಕ್ಕೆ ದ್ರೋಣನು ಹೋಗಿದ್ದಾನೆ;

**ಪುತ್ರನನ್ ಅರಸಲ್ ಪೋದನೆ**=ದ್ರೋಣನೇನು ಮಗನಾದ ಅಶ್ವತ್ಥಾಮನನ್ನು ಹುಡುಕಿಕೊಂಡು ಯಮಲೋಕಕ್ಕೆ ಹೋಗಿದ್ದಾನೆಯೇ; ಬಿಲ್ಲುಬಾಣಗಳನ್ನು ತೊರೆದು ದ್ರೋಣರ ಸಾವನ್ನಪ್ಪಿದ ರೀತಿಯನ್ನು ದುರ್ಯೋಧನನು ಕಟುವಾದ ನುಡಿಗಳಿಂದ ಹಂಗಿಸುತ್ತ, ಜತೆಜತೆಗೆ ಧರ್ಮರಾಯನ ವಂಚನೆಯನ್ನು ತೆಗಳುತ್ತಿದ್ದಾನೆ; ಯುದ್ಧ ನಡೆಯುತ್ತಿರುವಾಗ ಕೌರವರ ಪಡೆಯಲ್ಲಿದ್ದ ಅಶ್ವತ್ಥಾಮ ಎಂಬ ಹೆಸರಿನ ಆನೆಯು ಸಾವನ್ನಪ್ಪಿದ್ದನ್ನು ಧರ್ಮರಾಯನು ಕೃಷ್ಣನ ಕಪಟತನದ ಸೂಚನೆಯಂತೆ ದ್ರೋಣಾಚಾರ್ಯರಿಗೆ ಕೇಳಿಸುವಂತೆ " ಅಶ್ವತ್ಥಾಮ ಹತಃ " ಎಂದು ಕಿರುಚುತ್ತಾನೆ. ಇದನ್ನು ಕೇಳಿದ ಕೂಡಲೇ ದ್ರೋಣಾಚಾರ್ಯರು ತಮ್ಮ ಮಗ ಅಶ್ವತ್ಥಾಮನೇ ಸತ್ತನೆಂದು ತಿಳಿದು, ಪುತ್ರಶೋಕದಿಂದ ಪರಿತಪಿಸುತ್ತ, ಬಿಲ್ಲು ಬಾಣಗಳನ್ನು ಕೆಳಕ್ಕಿಡುತ್ತಾರೆ. ಅನಂತರ ದ್ರುಪದನ ಮಗನಾದ ಧೃಷ್ಟದ್ಯುಮ್ನನಿಂದ ಸಾವನ್ನಪ್ಪುತ್ತಾರೆ; ಈಗ ದುರ್ಯೋಧನನ ಆಕ್ರೋಶ ಮತ್ತು ವ್ಯಂಗದ ನುಡಿಗಳು ಭೀಮನತ್ತ ತಿರುಗುತ್ತವೆ; ಗಂಡ=ಶೂರ/ವೀರ; ಗಂಡನಾಗನೆ=ಏಕೆ ಶೂರನಾಗಲಿಲ್ಲ/ಅವನ ಗಂಡುತನಕ್ಕೆ ಏನಾಗಿತ್ತು;

**ಸಭೆಯೊಳ್ ವನಿತೆಯ ಕೇಶಮಮ್ ಎನ್ನ ಅನುಜನ್ ತೆಗೆವಲ್ಲಿ ಗಂಡನಾಗನೆ**=ಧರ್ಮರಾಯನು ಜೂಜಿನಲ್ಲಿ ಸೋತ ದಿನದಂದು ರಾಜಸಭೆಯಲ್ಲಿ ದ್ರೌಪದಿಯ ಮುಡಿಯನ್ನು ನನ್ನ ತಮ್ಮನಾದ ದುಶ್ಯಾಸನನು ಹಿಡಿದೆಳೆಯುವಾಗ ಈ ನಿನ್ನ ಭೀಮನು ಏಕೆ ಶೂರನಾಗಿ ಅವನನ್ನು ತಡೆಯಲಿಲ್ಲ. ಅಂದು ಭೀಮನ ಗಂಡುತನಕ್ಕೆ ಏನಾಗಿತ್ತು; ಉಡಿ+ಅನ್ನೆಗಮ್; ಉಡಿ=ಮುರಿ/ತುಂಡಾಗು; ಅನ್ನೆಗಮ್=ವರೆಗೂ/ತನಕ; ಒತ್ತು=ಅದುಮು; **ಭಗದತ್ತನ ಆನೆ ಬರಿಯೆಲ್ವು ಉಡಿವನ್ನೆಗಮ್ ಒತ್ತೆ ಗಂಡನಾಗನೆ**=ಕೌರವ ಪಡೆಯ ವೀರನಾದ ಭಗದತ್ತನ ಸುಪ್ರತೀಕವೆಂಬ ಹೆಸರಿನ ಆನೆಯು ಕುರುಕ್ಷೇತ್ರದ ರಣರಂಗದಲ್ಲಿ ಭೀಮನ

ಎದೆಯ ಪಕ್ಕೆಲೆಬು ಮುರಿಯುವಂತೆ ತುಳಿಯತೊಡಗಿದಾಗ ಭೀಮನ ಪರಾಕ್ರಮಕ್ಕೆ ಏನಾಗಿತ್ತು; ಆನೆಯ ತುಳಿತಕ್ಕೆ ಸಿಲುಕಿದ್ದ ನಲುಗುತ್ತಿದ್ದ ಭೀಮನನ್ನು ಅರ್ಜುನನು ಬಂದು ಕಾಪಾಡುತ್ತಾನೆ; ಅಂಗಪತಿ=ಅಂಗರಾಜ್ಯದ ಒಡೆಯನಾದ ಕರ್ಣ; ಕೋದು=ಚುಚ್ಚಿ;

**ಅಂಗಪತಿ ಕೊಲಲ್ ಒಲ್ಲದೆ ಬಿಲ್ಲೊಳೆ ಕೋದು ಎಳೆವಲ್ಲಿ ಗಂಡನಾಗನೆ**= ಕರ್ಣನು ಭೀಮನನ್ನು ಕೊಲ್ಲಲು ಇಚ್ಚಿಸದೆ, ತನ್ನ ಬಿಲ್ಲಿನ ಬಾಗಿದ ತುದಿಯಿಂದ ಭೀಮನನ್ನು ಚುಚ್ಚಿ ಗಾಸಿಗೊಳಿಸಿ, ತನ್ನತ್ತ ಎಳೆದಾಡುವಾಗ ಭೀಮನೇಕೆ ಪರಾಕ್ರಮಿಯಾಗಿ ಹೋರಾಡಲಿಲ್ಲ; ಕುರುಕ್ಷೇತ್ರ ರಣರಂಗದಲ್ಲಿ ಒಂದು ದಿನ ಕರ್ಣ ಮತ್ತು ಭೀಮನು ಎದುರೆದುರಾಗಿ ಹೋರಾಡುವಾಗ, ಭೀಮನು ಸೋಲುತ್ತಾನೆ. ಆಗ ಕರ್ಣನು ಹೆತ್ತ ತಾಯಿಯಾದ ಕುಂತಿಗೆ ಕೊಟ್ಟ ಮಾತಿನಂತೆ ಭೀಮನನ್ನು ಕೊಲ್ಲದೆ, ಬಿಲ್ಲಿನ ತುದಿಯಿಂದ ಭೀಮನನ್ನು ಚುಚ್ಚಿ ಗಾಸಿಗೊಳಿಸಿ ಎಳೆದಾಡಿ ಅಪಮಾನಗೊಳಿಸಿ ಬಿಟ್ಟುಬಿಡುತ್ತಾನೆ. ಇದನ್ನು ನೋಡಿದ್ದ ದುರ್ಯೋಧನನು ಅಂದಿನ ಪ್ರಸಂಗವನ್ನು ನೆನಪಿಸಿಕೊಂಡು ಭೀಮನ ಶೂರತನದ ಬಗ್ಗೆ ವ್ಯಂಗ್ಯವಾಡುತ್ತಿದ್ದಾನೆ; ಮಾರುತಿ=ವಾಯುಪುತ್ರನಾದ ಭೀಮ;

**ಕುರುಬಾಲಸಂಹರಣ ಮಾತ್ರದೆ ಮಾರುತಿ ಗಂಡನಾದನೇ**=ಕುರುವಂಶದ ಮಕ್ಕಳಾದ ನನ್ನ ತಮ್ಮಂದಿರೆಲ್ಲರನ್ನೂ ಕೊಂದ ಮಾತ್ರದಿಂದಲೇ ಭೀಮನು ಶೂರನಾದನೇ; **ಒಡವುಟ್ಟಿದರಮ್ ಕೊಂದು**=ಒಡಹುಟ್ಟಿದ ತಮ್ಮಂದಿರನ್ನೇ ಕೊಂದು; ಅಂದರೆ ನನ್ನ ತಮ್ಮಂದಿರು ಭೀಮನಿಗೂ ತಮ್ಮಂದಿರಾಗಬೇಕು; **ಅವರ ಅಡಗಮ್ ತಿಂದು**=ಅವರ ಮಾಂಸವನ್ನು ತಿಂದು; ನೆತ್ತರು=ರಕ್ತ; ಬೆಲಗಸೆ= ಬೊಗಸೆ; ನಿಸ್ತ್ರಿಂಶತೆ=ಕರುಣೆಯಿಲ್ಲದಿರುವುದು/ಕ್ರೂರತನ; ಪೊರ್ದು=ಕೂಡಿ; **ಅವರ ನೆತ್ತರಮ್ ಬೆಲಗಸೆಯೊಳ್ ಕುಡಿವ ಈ ನಿಸ್ತ್ರಿಂಶತೆಯಮ್** =ನನ್ನ ತಮ್ಮಂದಿರ ರಕ್ತವನ್ನು ಬೊಗಸೆಯಲ್ಲಿ ಕುಡಿದ ಕ್ರೂರತನವನ್ನು;

**ಭೀಮನ್ ಹಿಡಿಂಬಿಯನ್ ಪೊರ್ದಿ ಕಲ್ತನಾಗನೆ**=ಭೀಮನು ಹಿಡಿಂಬಿಯ ಜತೆಗೂಡಿ ಕಲಿತಿದ್ದಾನಲ್ಲವೇ; ಕಾಡಿನ ಬುಡಕಟ್ಟು ಜನಸಮುದಾಯಕ್ಕೆ ಸೇರಿದ ಹಿಡಿಂಬಿಯು ಭೀಮನ ಹೆಂಡತಿ; ಜೂಜಿನ ಸನ್ನಿವೇಶದಲ್ಲಿ ಧರ್ಮರಾಯನು ದ್ರೌಪದಿಯನ್ನು ಪಣವಾಗಿ ಒಡ್ಡಿ ಸೋತ ನಂತರ, ದುರ್ಯೋಧನನ ಆಜ್ಞೆಯಂತೆ ದುಶ್ಯಾಸನನು ರಾಣಿವಾಸದ ಕೊಟಡಿಯಲ್ಲಿದ್ದ ದ್ರೌಪದಿಯ ಮುಡಿ ಹಿಡಿದು ರಾಜಸಭೆಗೆ ಎಳೆ ತಂದು, ದ್ರೌಪದಿಯ ಸೀರೆಯನ್ನು ಸುಲಿದು ಅಪಮಾನ ಮಾಡಿದ್ದಕ್ಕಾಗಿ, ಕುರುಕ್ಷೇತ್ರ ರಣರಂಗದಲ್ಲಿ ದುಶ್ಯಾಸನನ್ನು ಕೊಂದು, ಅವನ ಹೊಟ್ಟೆಯನ್ನು ಬಗೆದು, ಕರುಳನ್ನು ಹೊರತೆಗೆದು, ಅದನ್ನೇ ದ್ರೌಪದಿಗೆ

ಮಾಲೆಯಾಗಿ ಮುಡಿಸಿ, ದುಶ್ಯಾಸನನ ನೆತ್ತರನ್ನು ಭೀಮನು ಕುಡಿದು, ಅವನ ಮಾಂಸವನ್ನು ತಿಂದು, ದ್ರೌಪದಿಗೆ ಆಗಿದ್ದ ಅಪಮಾನಕ್ಕೆ ತಕ್ಕ ಪ್ರತೀಕಾರವನ್ನು ಎಸಗಿದ್ದನು; ಈಗ ದುರ್ಯೋರ್ಧನನು ಅರ್ಜುನನ್ನು ಹಂಗಿಸತೊಡಗುತ್ತಾನೆ; ಜೂದು=ಜೂಜು/ದ್ಯೂತ/ಪಣವನ್ನು ಕಟ್ಟಿ ಆಡುವ ಪಗಡೆಯಾಟ; ಪೃಥಾನಂದನ=ಅರ್ಜುನ; ತೊಳ್ತು=ದಾಸ/ಸೇವಕ;

**ಆ ಜೂದಿನೊಳ್ ಎನಗೆ ಪೃಥಾನಂದನನ್ ಅಗ್ರಜಾನುಜ ಸಮೇತಮ್ ಗಂಡು ತೊಳ್ತಾಗಿ**=ಅಂದು ನಡೆದ ಜೂಜಾಟದ ಸನ್ನಿವೇಶದಲ್ಲಿ ನನಗೆ ಅರ್ಜುನನು ತಮ್ಮ ಅಣ್ಣನಾದ ಧರ್ಮರಾಯನ ಸಮೇತ ದಾಸನಾಗಿ; **ಕಾನನದೊಳ್ ವಲ್ಕಲಧಾರಿಯಾಗಿ**=ಹನ್ನೆರಡು ವರುಶದ ವನವಾಸದಲ್ಲಿ ನಾರುಬಟ್ಟೆಯನ್ನುಟ್ಟು; ಬೆಳ್ತನ=ಬೆಪ್ಪುತನ/ದಡ್ಡತನ; **ಹರನೊಳ್ ದಿವ್ಯಾಸ್ತ್ರಮಮ್ ಬೇಡೆ ಬೆಳ್ತನದಿಮ್ ತಾಪಸನಾಗಿ**=ಶಿವನಿಂದ ಪಾಶುಪತಾಸ್ತ್ರವನ್ನು ಬೇಡಿ ಪಡೆಯಲೆಂದು ಬೆಪ್ಪುತನದಿಂದ ಅಂದರೆ ದೀನನಂತೆ ಬೇಡುವ ತಪಸ್ವಿಯಾಗಿ; **ಮತ್ಸ್ಯಾವಾಸದೊಳ್ ಪೇಡಿಯೆನೆ**= ಮತ್ಸ್ಯದೇಶದ ವಿರಾಟರಾಜನ ರಾಣಿವಾಸದಲ್ಲಿ ನಪುಂಸಕನಾಗಿ; ಅಜ್ಞಾತವಾಸ ಅವಧಿಯಲ್ಲಿ ಅರ್ಜುನನು ವಿರಾಟರಾಜನ ರಾಣಿವಾಸದ ಹೆಂಗಸರಿಗೆ ನಾಟ್ಯವಿದ್ಯೆಯನ್ನು ಹೇಳಿಕೊಡುವ ಬೃಹನ್ನಳೆಯಾಗಿ ವೇಷವನ್ನು ತೊಟ್ಟು;

**ವಾಸುದೇವನ ನಂಟಮ್ ನಟನಾಗಿ ಬಾರದ ಭವಮ್ ಬಂದನ್**=ಕೃಷ್ಣನ ತಂಗಿ ಸುಭದ್ರೆಯ ಗಂಡನಾದ ಅರ್ಜುನನು ನಾಟ್ಯಗುರುವಾಗಿ, ಪಡಬಾರದ ಪಾಡೆಲ್ಲವನ್ನು ಪಟ್ಟನು; ನಪುಂಸಕನಾಗಿ ತಲೆಮರೆಸಿಕೊಂಡು ಬಾಳುವಂತಹ ಹೀನಸ್ಥಿತಿಗೆ ಅರ್ಜುನನು ಒಳಗಾಗಿದ್ದನು; ಪ್ರೋಜ್ಝಿತಚಾಪನ್=ಬಿಲ್ಲನ್ನು ಬಿಸುಟವನು/ದ್ರೋಣ; **ಗುರುವನ್ ಪ್ರೋಜ್ಝಿತಚಾಪನನ್ ಪುಸಿದು ಕೊಂದ ಆ ಬೀರಮಮ್**=ಬಿಲ್ಲನ್ನು ಬಿಸುಟು ಪುತ್ರಶೋಕದಲ್ಲಿದ್ದ ಗುರುವನ್ನು ಸುಳ್ಳನ್ನಾಡಿ ಕೊಂದ ಆ ವೀರತನವನ್ನು; ಇಲ್ಲಿ 'ವೀರತನ' ಎಂಬ ಪದ **"ಕಪಟತನದಿಂದ ಕೂಡಿದ ಕ್ರೂರತನ"** ಎಂಬ ವ್ಯಂಗ್ಯದ ತಿರುಳಿನಲ್ಲಿ ಬಳಕೆಗೊಂಡಿದೆ; ಕರುತ್ತು= ಕೆರಳಿ; ಪೊಚ್ಚರ=ಪರಾಕ್ರಮ; **ಶರಶಯ್ಯಾಗತರಮ್ ಭೀಷ್ಮರನ್ ಕರುತ್ತು ಗುರಿಯೆಚ್ಚ ಆ ಪೊಚ್ಚರಮ್**=ಈಗ ಬಾಣಗಳ ಮಂಚದ ಮೇಲೆ ಮಲಗಿರುವ ಭೀಷ್ಮರನ್ನು ಅಂದು ಕುರುಕ್ಷೇತ್ರ ರಣರಂಗದಲ್ಲಿ ಅವರತ್ತ ಕೆರಳಿ ಗುರಿಯಿಟ್ಟು ಬಾಣವನ್ನು ಪ್ರಯೋಗಿಸಿದ ಪರಾಕ್ರಮ; ವಿರಥಜ್ಯಾಯುಧನ್=ರಥವಿಲ್ಲದೆ ಬಿಲ್ಲುಬಾಣಗಳಿಲ್ಲದೆ ಇರುವವನು;

**ವಿರಥಜ್ಯಾಯುಧನ್ ಎನ್ನದೆ ಕರ್ಣನನ್ ಎಚ್ಚು ತಲೆಗೊಂಡ ಆ ಶೌರ್ಯಮಮ್ ಮೆರೆಯಲ್ಕೆ ಪಾಂಡುಪುತ್ರರೆ ಬಲ್ಲರ್**=ರಥವಿಲ್ಲದ, ಬಿಲ್ಲುಬಾಣಗಳಿಲ್ಲದ ಕರ್ಣನ

ಮೇಲೆ ಬಾಣವನ್ನು ಪ್ರಯೋಗಿಸಿ, ಕರ್ಣನ ತಲೆಯನ್ನು ಕತ್ತರಿಸಲು ಮುಂದಾಗುವ ಪರಾಕ್ರಮವನ್ನು ತೋರಿಸಲು ಪಾಂಡುಪುತ್ರರು ಮಾತ್ರ ಬಲ್ಲರು; ಕರ್ಣನ ರಥಕ್ಕೆ ಸಾರಥಿಯಾಗಿದ್ದ ಶಲ್ಯನು **"ಅರ್ಜುನನ ಕೊರಳಿಗೆ ಬಾಣವನ್ನು ಹೂಡಿರುವುದನ್ನು ಬದಲಿಸಿ, ಅರ್ಜುನನ ಎದೆಗೆ ಬಾಣವನ್ನು ಹೂಡು"** ಎಂದು ತಾನು ಹೇಳಿದ ಮಾತಿಗೆ ಕರ್ಣನು ಮನ್ನಣೆಯನ್ನು ಕೊಡಲಿಲ್ಲವೆಂದು ಮುನಿಸಿಕೊಂಡು ಹೊರಟುಹೋದಾಗ, ಕರ್ಣನು ರಥವನ್ನು ತಾನೆ ಮುನ್ನಡೆಸುತ್ತ ಅರ್ಜುನನೊಡನೆ ಹೋರಾಡುತ್ತಿದ್ದಾಗ, ಕರ್ಣನ ರಥದ ಚಕ್ರವೊಂದು ರಣರಂಗದ ನೆತ್ತರಿನ ಕೆಸರಿನಲ್ಲಿ ಹೂತುಹೋಗುತ್ತದೆ. ಅದನ್ನು ಮೇಲೆತ್ತಲು ಕರ್ಣನು ಬಿಲ್ಲುಬಾಣಗಳನ್ನು ರಥದಲ್ಲಿಟ್ಟು ಕೆಳಕ್ಕಿಳಿದು ಬಂದು, ರಥದ ಚಕ್ರವನ್ನು ಮೇಲೆ ಎತ್ತುತ್ತಿರುವಾಗಲೇ ಕೃಷ್ಣನು ಕರ್ಣನನ್ನು ಕೊಲ್ಲಲು ಅರ್ಜುನನಿಗೆ ಆದೇಶ ನೀಡುತ್ತಾನೆ; ಆದರೆ ಅರ್ಜುನನು ಕೃಷ್ಣನ ಮಾತನ್ನು ಕೇಳದೆ, ಚಕ್ರವನ್ನು ಮೇಲಕ್ಕೆತ್ತಿ ರಥಕ್ಕೆ ಮರಳಿದ ನಂತರ ಕರ್ಣನನ್ನು ಕೊಲ್ಲುತ್ತಾನೆ. ಆದರೆ ಅರ್ಜುನನ ಮೇಲೆ ಆಪಾದನೆ ಮಾಡುವಾಗ ಈ ರೀತಿ ದುರ್ಯೋಧನನು ಹಂಗಿಸಿದ್ದಾನೆ;

**ಸಾಹಸಧನಮ್ ದುರ್ಯೋಧನನ್ ಬಲ್ಲನೇ**=ಈ ರೀತಿ ಮರೆಮೋಸದಿಂದ ಗುರುಹಿರಿಯರನ್ನು ಮತ್ತು ಒಡಹುಟ್ಟಿದವರನ್ನು ಕೊಲ್ಲುವ ತಂತ್ರವನ್ನು ಪಾಂಡವರು ಬಲ್ಲರೇ ಹೊರತು ಪರಾಕ್ರಮಿಯಾದ ಈ ದುರ್ಯೋಧನ ಹೇಗೆ ತಾನೆ ತಿಳಿದಿದ್ದಾನೆ; ನಾನು ಪಾಂಡವರಂತೆ ಸುಳ್ಳುಗಾರನಲ್ಲ/ ವಂಚಕನಲ್ಲ/ ಕ್ರೂರಿಯಲ್ಲ; ಅಕ್ಕಟ=ಅಯ್ಯೋ ಈ ಮಾತಿನ ಸನ್ನಿವೇಶದಲ್ಲಿ ಇದು ಸಂಕಟದ ಪದವಲ್ಲ. ಪಾಂಡವರ ಬಗ್ಗೆ ಆಡುತ್ತಿರುವ ಅಣಕದ ಪದ; ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ಇದ್ದ ಹೀನಸ್ಥಿತಿಗತಿಯನ್ನು ಕುರಿತು ಈಗ ದುರ್ಯೋಧನನು ಅಣಕವಾಡತೊಡಗಿದ್ದಾನೆ; **ಯಮಜನ್ ದರ್ಭಪಾಣಿ**= ಧರ್ಮರಾಯನು ದರ್ಭೆಯನ್ನು ಕಯ್ಯಲ್ಲಿ ಹಿಡಿದುಕೊಂಡು ಪುರೋಹಿತ ನಾಗಿದ್ದ; **ವಾಯುಪುತ್ರಕನುಮ್ ದರ್ವೀಕರಮ್**= ವಾಯುಪುತ್ರನಾದ ಭೀಮನು ಸವುಟನ್ನು ಹಿಡಿದು ಅಡುಗೆಭಟ್ಟನಾಗಿದ್ದ; **ಇಂದ್ರತನಯನ್ ಜರ್ಜರ ಹಸ್ತನ್**= ಅರ್ಜುನನು ಜರ್ಜರವೆಂಬ ವಾದ್ಯವನ್ನು ಹಿಡಿದುಕೊಂಡು ನಾಟ್ಯಶಾಸ್ತ್ರದ ಗುರು ವಾಗಿದ್ದ; ನಾಟ್ಯವನ್ನು ಮಾಡುತ್ತಿರುವಾಗ ತಾಳವನ್ನು ಹಾಕಲು ಬಳಸುವ ವಾದ್ಯ;

**ದಸ್ರಾತ್ಮಜರ್ ದಂಡಮುಷ್ಟಿಕರರ್**=ಅಶ್ವಿನಿ ದೇವತೆಯ ಮಕ್ಕಳಾದ ನಕುಲ ಸಹದೇವರು ತಮ್ಮ ಕಯ್ಗಳಲ್ಲಿ ಕೋಲುಗಳನ್ನು ಹಿಡಿದುಕೊಂಡು ದನಗಳನ್ನು ಕಾಯುತ್ತಿದ್ದರು ಮತ್ತು ಕುದುರೆಗಳನ್ನು ಮೇಯಿಸುತ್ತಿದ್ದರು; **ಸೊಕಮ್ ಇರ್ಕೆ**=ಈ ಕಸುಬುಗಳಲ್ಲಿಯೇ ಪಾಂಡವರು ಸುಖದಿಂದ ಇರಬಹುದಾಗಿತ್ತು; ವಿಡಂಬ=

ಆಡಂಬರ; **ಅವರ್ಗಮ್ ಶಸ್ತ್ರವಿಡಂಬಮ್ ಏವುದು**=ಇಂತಹ ಕಸುಬನ್ನು ಮಾಡುತ್ತಿರುವ ಪಾಂಡವರಿಗೆ ಆಯುಧಗಳ ಆಡಂಬರವೇಕೆ; ಆಯುಧಗಳನ್ನು ಹಿಡಿದು ಅವರು ಮಾಡುವುದೇನು; ಗಂಧದಾಯಕಿ+ಆಗಿ+ಇರ್ಪಿನಮ್; ಗಂಧದಾಯಕಿ=ಸಿರಿಗಂದದ ಕೊರಡನ್ನು ಅರೆದು ಗಂಧದ ಲೇಪನವನ್ನು ಸಿದ್ಧಪಡಿಸುವ ಸೇವಕಿ; **ಪಾಂಚಾಲಿಯುಮ್ ಗಂಧದಾಯಕಿಯಾಗಿರ್ಪಿನಮ್**= ಪಾಂಚಾಲ ರಾಜನ ಮಗಳಾದ ದ್ರೌಪದಿಯು ವಿರಾಟರಾಜನ ರಾಣಿವಾಸದಲ್ಲಿ ಗಂಧವನ್ನು ತೇಯುವ ದಾಸಿಯಾಗಿರಲಿಲ್ಲವೇ; ನಿಗ್ರಹ=ನಿಂದೆ/ಬಯ್ಗುಳು;

**ಅಂದು ಮತ್ಸ್ಯಗೃಹದಿಂದೆ ಈ ನಿಗ್ರಹಮ್ ಪೊಲ್ಲದೇ**=ಅಜ್ಞಾತವಾಸದಲ್ಲಿ ಅವರೆಲ್ಲರೂ ಪಟ್ಟಪಾಡು ಮತ್ತು ಅವಮಾನದ ಬದುಕಿಗಿಂತಲೂ ಈಗ ನಾನು ಆಡುತ್ತಿರುವ ನಿಂದನೆಯ ನುಡಿಗಳು ಕೆಟ್ಟದ್ದಾಗಿದೆಯೇ; **ಸಭೆಯೊಳ್ ತಮ್ಮಯ ಪಕ್ಕದೆ ಎನ್ನ ಅನುಜನ್ ಆ ಪಂಚವಲ್ಲಭೆಯನ್ ಪಾಂಚಾಲಿಯನ್ ಮೋದೆಯುಮ್**=ರಾಜಸಭೆಯಲ್ಲಿ ತಮ್ಮ ಕಣ್ಣ ಮುಂದೆಯೇ ನನ್ನ ತಮ್ಮನಾದ ದುಶ್ಯಾಸನನು ಆ ಅಯ್ದುಮಂದಿ ಪಾಂಡವರ ಹೆಂಡತಿಯಾದ ದ್ರೌಪದಿಯ ಮೇಲೆ ಹಲ್ಲೆ ಮಾಡುತ್ತಿದ್ದರೂ; **ಅಲ್ಲಿ ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳ್**=ಹೆಂಡತಿಯ ಮಾನ ಪ್ರಾಣವನ್ನು ಕಾಪಾಡಲಾರದೆ ರಾಜಸಭೆಯಲ್ಲಿ ಸುಮ್ಮನೆ ಕಣ್ಣು ಬಿಟ್ಟುಕೊಂಡು ಕಂಗಾಲಾಗಿ ನೋಡುತ್ತಿದ್ದ ಈ ಶೂರರು; ಭರಂಗೆಯ್=ಅಬ್ಬರಿಸು/ ಜೋರುಮಾಡು/ಮೇಲೆ ಬೀಳು; ಇಲ್ಲಿ **ಭರಂಗೆಯ್ದಪರ್**=ಈ ಕುರುಕ್ಷೇತ್ರ ರಣರಂಗದಲ್ಲಿ ಅಬ್ಬರಿಸುತ್ತಿದ್ದಾರೆ;

**ಈ ಪರಾಕ್ರಮುಮ್ ಈ ಪೆರ್ಮಾತುಮ್ ಈ ಗಂಡುಮ್ ಈ ಸುಭಟ ಆಲಾಪಮುಮೆಲ್ಲಮ್ ಆ ನೃಪತಿಗಳ್ಗೆ ಅಂದು ಎಲ್ಲಿ ಪೊಕ್ಕಿರ್ದುದೊ**=ಈಗ ಕುರುಕ್ಷೇತ್ರ ರಣರಂಗದಲ್ಲಿ ಈ ಪಾಂಡವರು ತೋರಿಸುತ್ತಿರುವ ಈ ಪರಾಕ್ರಮ ಈಗ ಅವರು ಆಡುತ್ತಿರುವ ದೊಡ್ಡ ದೊಡ್ಡ ಮಾತುಗಳು ಈ ಶೂರತನದ ಅಬ್ಬರದಿಂದ ಕೂಡಿದ ಮಾತುಕತೆಗಳೆಲ್ಲವೂ ಅಂದು ದ್ರೌಪದಿಯ ಮೇಲೆ ಹಲ್ಲೆಮಾಡಿ ಅಪಮಾನಗೊಳಿಸುವಾಗ ಪಾಂಡವರ ಪರಾಕ್ರಮ ಎಲ್ಲಿ ಅಡಗಿತ್ತು; ಸಂಕ್ರಂದನ=ದೇವೇಂದ್ರ; ನಿರಾಕರಣಮ್ ಗೆಯ್ದು=ತಿರಸ್ಕರಿಸಿ/ಕಡೆಗಣಿಸಿ; **ಎಂದು ಧೃತರಾಷ್ಟ್ರನಂದನನ್ ಧರ್ಮನಂದನನುಮನ್, ವಾಯುನಂದನನುಮನ್, ಸಂಕ್ರಂದನ ನಂದನನುಮನ್, ಅಶ್ವಿನೀನಂದನರುಮನ್ ನಿರಾಕರಣಮ್ ಗೆಯ್ದು**= ಎಂದು ದುರ್ಯೋಧನನು ಧರ್ಮರಾಯನನ್ನು, ಭೀಮನನ್ನು, ಅರ್ಜುನನ್ನು, ನಕುಲಸಹದೇವರನ್ನು ಅಲ್ಲಗಳೆದು;

**ಅನಿತರೊಳಮ್ ಮಾಣದೆ**=ಅಷ್ಟಕ್ಕೆ ಸುಮ್ಮನಾಗದೆ; ಈಗ ದುರ್ಯೋಧನನು

ಅರ್ಜುನನ ರಥದಲ್ಲಿರುವ ಬಾವುಟದ ದಂಡದ ಮಗ್ಗುಲಲ್ಲಿ ಕುಳಿತಿರುವ ಹನುಮಂತನನ್ನು ಅಣಕ ಮಾಡಿ ಅಲ್ಲಗಳೆಯುತ್ತಾನೆ. ತನ್ನ ಹಗೆಗಳಾದ ಪಾಂಡವರನ್ನು ಮಾತ್ರವಲ್ಲ. ಪಾಂಡವರಿಗೆ ಬೆಂಬಲವಾಗಿರುವ ಹನುಮಂತ ಮತ್ತು ಕೃಷ್ಣನನ್ನು ದುರ್ಯೋಧನನು ತೆಗಳತೊಡಗುತ್ತಾನೆ; **ಪವನಂಗೆ ಪುಟ್ಟಿದನ್**=ವಾಯುದೇವನಿಗೆ ಹುಟ್ಟಿದವನು; **ರಾಘವನ ಅಣುಗಾಳ್**= ಅಯೋಧ್ಯೆಯ ರಾಮಚಂದ್ರನ ಪ್ರೀತಿಯ ಸೇವಕ; ತ್ರಿಣಯನ+ಅಂಶಮ್; ತ್ರಿಣಯನ=ಮೂರು ಕಣ್ಣುಳ್ಳ ಶಿವ; ಅಣುವ=ಹನುಮಂತ; ತ್ರಿಣಯನಾಂಶಮ್ ಎನಿಪ ಅಣುವನ್=ಮೂರು ಕಣ್ಣುಳ್ಳ ಶಿವನ ಅಂಶದಿಂದ ಕೂಡಿದವನು ಎಂದು ಹೆಸರಾಂತ ಹನುಮಂತನು; ಕೇತು=ಬಾವುಟ; ಅಗ್ಗಳಿಕೆ=ಹಿರಿಮೆ/ದೊಡ್ಡಸ್ತಿಕೆ;

**ಪಾಂಡವಕೇತುದಂಡದೊಳ್ ನೆಲಸುವುದು ಆವ ಅಗ್ಗಳಿಕೆ**= ಪಾಂಡುಪುತ್ರನಾದ ಅರ್ಜುನನ ರಥದ ಬಾವುಟದ ದಂಡದ ಬಳಿ ಕುಳಿತುಕೊಳ್ಳುವುದು ಯಾವ ದೊಡ್ಡಸ್ತಿಕೆ; **ಕಪಿಗೆ ಚಪಲತೆ ಸಹಜಮ್**=ಕಪಿಗೆ ಚಂಚಲತೆ ಎಂಬುದು ಹುಟ್ಟುಗುಣ ವಲ್ಲವೇ; **ಕೃಷ್ಣನ್ ನರಂಗೆ ಅನುಜೆಯನ್ ಇತ್ತು**=ಕೃಷ್ಣನು ಅರ್ಜುನನಿಗೆ ತನ್ನ ತಂಗಿಯಾದ ಸುಭದ್ರೆಯನ್ನು ಕೊಟ್ಟು ಮದುವೆ ಮಾಡಿ, ಪಾಂಡವರೊಡನೆ ನೆಂಟಸ್ತಿಕೆಯನ್ನು ಬೆಳೆಸಿಕೊಂಡನು; **ಆತನ ತನಯಂಗೆ ತನ್ನ ಮಗಳನ್ ಇತ್ತು**= ಅರ್ಜುನನ ಮಗನಾದ ಅಭಿಮನ್ಯುವಿಗೆ ತನ್ನ ಅಣ್ಣ ಬಲರಾಮನ ಮಗಳಾದ ವತ್ಸಲೆಯನ್ನು ಕೊಟ್ಟು ಮದುವೆ ಮಾಡಿ ನೆಂಟಸ್ತಿಕೆಯನ್ನು ಪಾಂಡವರ ಮಕ್ಕಳ ಕಾಲಕ್ಕೂ ಮುಂದುವರಿಸಿನು; **ತಾನ್ ಆತನ ರಥಮನ್ ಎಸಗಿ**=ಕುರುಕ್ಷೇತ್ರ ರಣರಂಗದಲ್ಲಿ ತಾನು ಅರ್ಜುನನ ರಥವನ್ನು ಮುನ್ನಡೆಸುತ್ತಾ;

**ಧರ್ಮಜನ ಅನುಜನ ನೆವದಿಂದಮ್ ಅರಸುಗೆಯ್ವನ್**=ಧರ್ಮರಾಯನ ತಮ್ಮನಾದ ಅರ್ಜುನನಿಗೆ ಸಾರಥಿಯಾಗಿ ಜತೆಯಲ್ಲಿರುವುದನ್ನು ನೆಪಮಾಡಿಕೊಂಡು ಹಸ್ತಿನಾಪುರವನ್ನು ಅರಸನಾಗಿ ಆಳುತ್ತಿದ್ದಾನೆ. ಕೃಷ್ಣನಿಗೆ ದ್ವಾರಕಾವತಿಯಲ್ಲಿ ಅರಸನಾಗಿ ಮೆರೆಯುವ ಅವಕಾಶವಿಲ್ಲ. ಕೃಷ್ಣನ ಅಣ್ಣ ಬಲರಾಮನು ಅಲ್ಲಿ ಅರಸನಾಗಿದ್ದಾನೆ; ಆದ್ದರಿಂದ ಕೃಷ್ಣನು ಹಸ್ತಿನಾವತಿಗೆ ಬಂದು ತನ್ನ ಇಚ್ಚೆಗೆ ತಕ್ಕಂತೆ ಪಾಂಡವರನ್ನು ನಿಯಂತ್ರಿಸುತ್ತಿದ್ದಾನೆ. ಮೇಲು ನೋಟಕ್ಕೆ ಪಾಂಡವರು ರಾಜರಂತೆ ಕಂಡು ಬಂದರೆ ನಿಜಕ್ಕೂ ಈತನೇ ರಾಜನಾಗಿದ್ದಾನೆ ಎಂದು ದುರ್ಯೋಧನನು ಆರೋಪಿಸುತ್ತಿದ್ದಾನೆ; **ಪುರುಷರ್ ಮೂವರೊಳ್ ಒರ್ಬನ್ ಎಂಬರ್**=ಲೋಕದಲ್ಲಿ ಕೃಷ್ಣನನ್ನು ತ್ರಿಮೂರ್ತಿಗಳಾದ 'ವಿಷ್ಣು–ಬ್ರಹ್ಮ–ಮಹೇಶ್ವರ ' ರಲ್ಲಿ ಒಬ್ಬನೆಂದು ಕರೆಯುತ್ತಾರೆ;

**ಅಸುರಪ್ರಧ್ವಂಸಿಯೆಂಬರ್**= ರಕ್ಕಸರನ್ನು ಸಂಪೂರ್ಣವಾಗಿ ನಾಶಪಡಿಸಿದವನು

ಎನ್ನುತ್ತಾರೆ; **ಜಗದ್ಗುರುವೆಂಬರ್**=ಜಗತ್ತಿಗೆ ಗುರುವೆನ್ನುತ್ತಾರೆ; **ಪೆರರ್ಗೆ ಏಕೆ ತೇರನ್ ಎಸಪನ್**=ಇಷ್ಟೆಲ್ಲಾ ಮಹಿಮೆ ಮತ್ತು ಕೀರ್ತಿಯಿಂದ ಕೂಡಿರುವ ಈ ಕೃಷ್ಣನು ಏಕೆ ರಣರಂಗದಲ್ಲಿ ಬೇರೆಯವರ ರಥವನ್ನು ನಡೆಸುವ ಸಾರಥಿಯಾಗಿದ್ದಾನೆ; **ಧರ್ಮಾನುಜಂಗೆ ಏಕೆ ಕಿಂಕರನಾದನ್**=ಧರ್ಮರಾಯನ ತಮ್ಮನಿಗೆ ಏಕೆ ದಾಸನಾಗಿದ್ದಾನೆ; **ಕರವೇಳಿಯಾದನ್**=ಬಲು ಹೇಡಿಯಾದನು; ಕೃಷ್ಣನು ನೇರವಾಗಿ ಕಾಳೆಗವನ್ನು ಮಾಡಲಾರದ ಹೇಡಿಯಾಗಿದ್ದಾನೆ; ಅದರಿಮ್ ಕೃಷ್ಣಂಗೆ **ಸೂತನ್ ಭಟನ್ ಪೇಳಿ ಎಂಬರ ಮಾತು ಒಪ್ಪುಗುಮ್**=ಆದ್ದರಿಂದ ಕೃಷ್ಣನಿಗೆ ರಥವನ್ನು ನಡೆಸುವವ **'ಸೂತ, ದಾಸ, ಹೇಡಿ'** ಎಂದು ಹೇಳುವವರ ಮಾತು ಸರಿಯೆನಿಸುತ್ತದೆ; **ಆದಿ ದೇವನ್ ಎನಿಸಲ್ ಅದು ಎಂತು ಒಪ್ಪುಗುಮ್**= ಇಂತಹ ಕೃಷ್ಣನನ್ನು ಆದಿದೇವನೆಂದು ಹೇಳಿದರೆ ಅದು ಹೇಗೆ ತಾನೆ ಕೃಷ್ಣನಿಗೆ ಒಪ್ಪುತ್ತದೆ; ಅನಿಮೇಷ+ಆದಿ+ಅವತಾರಮ್; ಅನಿಮೇಷ=ಮೀನು/ಮತ್ಸ್ಯ;

**ಅನಿಮೇಷಾದ್ಯವತಾರಮ್ ದಶಾವತಾರಮ್ ತನಗಾಯ್ತು**=ಮತ್ಸ್ಯ ಮೊದಲುಗೊಂಡು ಹತ್ತು ಅವತಾರಗಳನ್ನು ಕೃಷ್ಣನು ತಳೆದನು; ಮತ್ಸ್ಯ–ಕೂರ್ಮ–ವರಾಹ–ನರಸಿಂಹ–ವಾಮನ–ಪರಶುರಾಮ–ರಾಮ–ಕೃಷ್ಣ–ಬುದ್ಧ–ಕಲ್ಕಿ ಎಂಬ ಹತ್ತು ಅವತಾರಗಳನ್ನು ವಿಷ್ಣು ಪಡೆದನೆಂದು ಪುರಾಣದ ಕತೆಗಳಲ್ಲಿ ಹೇಳಲಾಗಿದೆ; **ಅನಿತರೊಳ್ ಇರದೆ**= ಇಷ್ಟು ಅವತಾರಗಳು ಸಾಕು ಎನ್ನಿಸದೆ; ಕಂಜೋದರ= ವಿಷ್ಣು/ಕೃಷ್ಣ;

**ಅರ್ಜುನನ ರಥಮ್ ಎಸಪ ಪನ್ನೊಂದನೆಯದು ಸೂತಾವತಾರಮುಮ್ ಹರಿಗಾಯ್ತೇ ಎಂದು ದುರ್ಯೋಧನನ್ ಕಪಿರಾಜನುಮನ್ ಕಂಜೋದರನುಮನ್ ನಿರಾಕರಣಮ್ ಗೆಯ್ದು**=ಈಗ ಅರ್ಜುನನ ರಥವನ್ನು ಮುನ್ನಡೆಸುವ ಹನ್ನೊಂದನೆಯ ಸೂತಾವತಾರವು ಕೃಷ್ಣನಿಗೆ ಬಂದಿತೆ ಎಂದು ದುರ್ಯೋಧನನು ಹನುಮಂತನನ್ನು ಮತ್ತು ಕೃಷ್ಣನನ್ನು ಕಡೆಗಣಿಸಿ ನುಡಿದು; **ಅನಿತರೊಳಮ್ ಮಾಣ್ದು ಸೈರಿಸಲಾರದೆ**=ಅಷ್ಟೆಲ್ಲ ಆಕ್ರೋಶವನ್ನು ಕಾರಿಕೊಂಡರೂ ದುರ್ಯೋಧನನು ಶಾಂತನಾಗದೆ; ಸಮರೋದ್ಯೋಗಮ್ ಗೆಯ್ಯೆ=ಯುದ್ಧವನ್ನು ಮಾಡಲೆಂದು ರಣರಂಗದತ್ತ ಅಡಿಯಿಡುತ್ತಿರಲು; **ಸಂಜಯನ್ ಅಂಜದೆ ಮಾರ್ಕೊಂಡು**=ಸಂಜಯನು ದುರ್ಯೋಧನನ ಕೋಪತಾಪದ ಆಕ್ರೋಶಕ್ಕೆ ಹೆದರಿ ಹಿಂಜರಿಯದೆ, ಅವನಿಗೆ ಎದುರಾಗಿ ಬಂದು ನಿಂತು.

❖

## ನೋಟ – ೫

# ಸಂಜಯನ ಹಿತನುಡಿ

**ದುರ್ಯೋಧನನ್ ಕಪಿರಾಜನುಮನ್ ಕಂಜೋದರನುಮನ್ ನಿರಾಕರಣಮ್ ಗೆಯ್ದು**=ದುರ್ಯೋಧನನು ಹನುಮಂತನನ್ನು ಕೃಷ್ಣನನ್ನು ಕಡೆಗಣಿಸಿ ನುಡಿದು; **ಅನಿತರೊಳಮ್ ಮಾಣ್ದು ಸೈರಿಸಲಾರದೆ**=ಅಷ್ಟೆಲ್ಲ ಆಕ್ರೋಶವನ್ನು ಕಾರಿಕೊಂಡರೂ ದುರ್ಯೋಧನನು ಸುಮ್ಮನಿರಲಾಗದೆ; **ಸಮರೋದ್ಯೋಗಮ್ ಗೆಯ್ಯೆ**=ಯುದ್ಧವನ್ನು ಮಾಡಲೆಂದು ರಣರಂಗದತ್ತ ಅಡಿಯಿಡುತ್ತಿರಲು; ಸಂಜಯನ್ ಅಂಜದೆ ಮಾರ್ಕೊಂಡು=ಸಂಜಯನು ದುರ್ಯೋಧನನ ಕೋಪತಾಪದಿಂದ ಕೂಡಿದ ಆಕ್ರೋಶಕ್ಕೆ ಹೆದರಿ ಹಿಂಜರಿಯದೆ, ಎದುರಾಗಿ ಬಂದು ನಿಂತು; **ನೀನ್ ಪ್ರತಿಕೂಲ ದೈವನ್ನೆ**=ನಿನಗೆ ದೇವರ ಸಹಾಯವಿಲ್ಲ/ಅನುಗ್ರಹವಿಲ್ಲ; ಪ್ರತಿನೃಪರ್ ಅನುಕೂಲದೈವರ್=ನಿನ್ನ ಹಗೆಗಳಾದ ಪಾಂಡವರಿಗೆ ದೇವರ ಸಹಾಯವಿದೆ/ ಅನುಗ್ರಹವಿದೆ;

**ನೀನ್ ಅಸಹಾಯನೆ**=ನಿನಗೆ ಯಾರ ಸಹಾಯವೂ ಇಲ್ಲವಾಗಿದೆ; ಅಂದರೆ ಈಗ ನೀನು ಒಬ್ಬಂಟಿಯಾಗಿರುವೆ; **ಪ್ರತಿನೃಪರ್ ಅಸಹಾಯರ್**=ನಿನ್ನ ಹಗೆಗಳಾದ ಪಾಂಡವರೂ ಯಾರ ಸಹಾಯವನ್ನು ಬಯಸದವರು. ಅಂದರೆ ಮಹಾ ಪರಾಕ್ರಮಿಗಳು; **ನೀನ್ ಪ್ರತಿಬಲನ್**=ನೀನು ಪಾಂಡವರಿಗೆ ಶತ್ರುವಾಗಿರುವೆ; **ಅದರಿಂದೆ ವಾಕ್ಯಾರ್ಥಮ್ ಅನರ್ಥಕಮ್ ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನನ್ ನಿರ್ವೈಸಿ**=ಆದ್ದರಿಂದ ಪಾಂಡವರೊಡನೆ ಹೋರಾಡಿ ಗೆಲ್ಲುವೆನೆಂಬ ನಿನ್ನ ಆಕ್ರೋಶದ ಮಾತುಗಳಲ್ಲಿ ಯಾವುದೇ ಹುರುಳಿಲ್ಲವೆಂದು ನುಡಿದ ಸಂಜಯನ ಮಾತುಗಳಿಗೆ ದುರ್ಯೋಧನನು ಬೇಸರಗೊಂಡು;

**ಸಮರಜಯಮ್ ದೈವಾಯತ್ತಮ್**=ಕಾಳೆಗದಲ್ಲಿ ಜಯವೆಂಬುದು ದೇವರ ಇಚ್ಚೆಯನ್ನು ಅವಲಂಬಿಸಿದೆ; **ಅದರಿನ್ ಆ ಪುರುಷಕಾರಮ್ ಎಮಗಾಯ್ತು**= ಆದ್ದರಿಂದ ಗೆಲುವನ್ನು ಪಡೆಯುವುದಕ್ಕಾಗಿ ನಾನೇ ಪರಾಕ್ರಮಶಾಲಿಯಾಗಿ ಹೋರಾಡಲು ತೀರ್ಮಾನಿಸಿದ್ದೇನೆ;

**ಈಗಳ್ ಯಮನಂದನಾದಿಗಳೊಳ್ ಒಂದೆ ಮೆಯ್ಯೊಳ್ ಆಂತು ಇರಿವೆನ್**= ಈಗ ಆ ಪಾಂಡವರನ್ನು ನಾನೊಬ್ಬನೇ ಎದುರಿಸಿ, ಅವರನ್ನು ಕೊಲ್ಲುತ್ತೇನೆ; **ಎನ್ನ ಛಲಮಮ್ ಮೆರೆವೆನ್**=ನನ್ನ ಚಲವನ್ನು ತೋರಿಸುತ್ತೇನೆ. ಅಂದರೆ ಯಾವುದೇ ಕಾರಣಕ್ಕೂ ರಾಜ್ಯದ ಒಡೆತನವನ್ನು ಪಾಂಡವರಿಗೆ ಬಿಟ್ಟುಕೊಡುವುದಿಲ್ಲವೆಂಬ ನನ್ನ ಹಟವನ್ನು ಸಾಧಿಸಿ ತೋರಿಸುತ್ತೇನೆ; **ಸುರಸಿಂಧೂದ್ಭವ ಕುಂಭಜನ್ಮ ದಿನಕೃತ್ಪುತ್ರಾದಿಗಳ್ ಸಂಗರದೊಳ್ ಸಾಯೆ**=ಭೀಷ್ಮ, ದ್ರೋಣ, ಕರ್ಣ, ನನ್ನ ತಮ್ಮಂದಿರು ಮತ್ತು ಮಕ್ಕಳೆಲ್ಲರೂ ರಣರಂಗದಲ್ಲಿ ಸತ್ತಿರುವುದರಿಂದ; (ಭೀಷ್ಮರು ಸತ್ತಿಲ್ಲ ರಣರಂಗದಲ್ಲಿಯೇ ಶರಮಂಚದ ಮೇಲೆ ಮಲಗಿದ್ದಾರೆ.);

**ಏಕಾಕಿ ದುರ್ಯೋಧನನ್ ಪಾಂಡವರಮ್ ಗೆಲಲ್ ನೆರೆದನಿಲ್ಲ**=ಈಗ ಒಬ್ಬಂಟಿಯಾಗಿರುವ ದುರ್ಯೋಧನನು ಪಾಂಡವರ ಮೇಲೆ ಗೆಲುವನ್ನು ಪಡೆಯಲು ಶಕ್ತನಲ್ಲ; **ಸೆರಗಮ್ ಪಾರ್ದಪನ್ ಈ ಧರೆ ಎಂಗುಮ್**= ಪಾಂಡವರನ್ನು ಸೋಲಿಸಲು ಬೇರೆಯವರಿಂದ ಸಹಾಯವನ್ನು ಬಯಸುತ್ತಾನೆ ಎಂದು ಲೋಕದ ಜನರು ಆಡಿಕೊಳ್ಳುತ್ತಾರೆ; **ಸಂಜಯ, ಭುಜಾದಂಡಮ್ ಗದಾದಂಡಮ್ ಎಂಬ ಎರಡುಮ್ ಮತ್ ಜಯಕ್ಕೆ ಒದವಿರಲ್ ಮತ್ತನ್ಯರಮ್ ಪಾರ್ವೆನೇ**=ಸಂಜಯ, ಈ ನನ್ನ ತೋಳುಗಳು ಮತ್ತು ಗದಾದಂಡವೆಂಬ ಎರಡು ಶಕ್ತಿಗಳು ನನ್ನ ಜಯಕ್ಕೆ ನೆರವಾಗಲು ಸಿದ್ಧವಾಗಿರುವಾಗ ಮತ್ತೆ ಬೇರೆಯವರ ನೆರವನ್ನು ನಾನು ಬಯಸುತ್ತೇನೆಯೇ; ಬಿದು=ಆನೆಯ ನೆತ್ತಿ/ಕುಂಭಸ್ಥಳ; **ಮದವತ್ ಕರಿಗಳ ಬಿದುವಮ್ ವಿದಾರಣಮ್ ಗೆಯ್ದು ಕೊಲ್ವ ಕಂಠೀರವಕಮ್... ಕದನದೊಳ್ ಅರಿನೃಪರಮ್ ಕೋಪದೆ ಕೊಲ್ವ ಎನಗಮ್ ಸಹಾಯರ್ ಎಂಬರುಮ್ ಒಳರೇ**=ಮದಿಸಿದ ಆನೆಗಳ ನೆತ್ತಿಯನ್ನು ಸೀಳಿ ಕೊಲ್ಲುವ ಶಕ್ತಿಯುಳ್ಳ ಸಿಂಹಕ್ಕೂ... ರಣರಂಗದಲ್ಲಿ ಶತ್ರುರಾಜರನ್ನು ಕೋಪದಿಂದ ಕೊಲ್ಲುವ ನನಗೂ ಸಹಾಯಕರು ಎನ್ನುವವರು ಇದ್ದಾರೆಯೇ; ಅಂದರೆ ಪಾಂಡವರ ಮೇಲೆ ಜಯವನ್ನು ಪಡೆಯಲು ಯಾರ ನೆರವೂ ನನಗೆ ಬೇಕಾಗಿಲ್ಲ. ಸಿಂಹದಂತೆ ಏಕಾಂಗಿಯಾಗಿ ಹೋರಾಡಿ ಶತ್ರುವನ್ನು ಕೊಲ್ಲಬಲ್ಲ ಶಕ್ತಿ ನನ್ನಲ್ಲಿದೆ;

**ಎಂದು ನುಡಿದು ಕಾಲದಂಡ ಪ್ರಚಂಡಮಪ್ಪ ತನ್ನ ಗದಾದಂಡಮಮ್ ಭುಜಾದಂಡದೊಳ್ ಅಳವಡಿಸಿಕೊಂಡು ಸಮರಾಭಿಮುಖನಾಗಿ ನಡೆವ ಫಣಿರಾಜ**

**ಕೇತನನನ್**=ಎಂದು ನುಡಿದು, ಯಮದಂಡದಂತೆ ಬಲವಾಗಿದ್ದ ತನ್ನ ಗದೆಯನ್ನು ಭುಜದ ಮೇಲೆ ಹಾಕಿಕೊಂಡು ರಣರಂಗದತ್ತ ನಡೆಯುತ್ತಿರುವ ದುರ್ಯೋಧನನನ್ನು; **ಸಂಜಯನ್ ಅಂಜದೆ ಮಾರ್ಕೊಂಡು**=ಸಂಜಯನು ಯಾವ ಹೆದರಿಕೆಯೂ ಇಲ್ಲದೆ ಎದುರುಗೊಂಡು; ಮಹಾರಥ=ರಥವನ್ನು ತಾನೇ ಮುನ್ನಡೆಸುತ್ತಾ, ಏಕಾಂಗಿಯಾಗಿ ಹತ್ತು ಸಾವಿರ ಯೋಧರೊಡನೆ ಹೋರಾಡಬಲ್ಲ ವೀರ; ರಥದಲ್ಲಿ ಕುಳಿತು ಈ ರೀತಿ ಏಕಾಂಗಿಯಾಗಿ ಯುದ್ಧವನ್ನು ಮಾಡುವ ವೀರರನ್ನು 'ಅತಿರಥ–ಮಹಾರಥ–ಸಮರಥ–ಅರ್ಧರಥ' ಎಂದು ನಾಲ್ಕು ಬಗೆಯಲ್ಲಿ ಗುರುತಿಸಿದ್ದಾರೆ; ಅತಿರಥ ಎಲ್ಲರಿಗಿಂತ ಉತ್ತಮ; ಅವನ ನಂತರ ಮಹಾರಥ; ಅನಂತರ ಸಮರಥ; ಕೊನೆಯವನು ಅರ್ಧರಥ; ಪವನಾತ್ಮಜನ್ ಮಹಾರಥನ್=ವಾಯುಪುತ್ರನಾದ ಭೀಮಸೇನನು ಮಹಾರಥ;

**ಅವನಿಪ, ನೀನ್ ಸಮರಥನೆ ನೀನ್**=ರಾಜನೇ, ನೀನು ಸಮರಥ; **ಅದರ್ಕೆ ಅಧಿಕನೊಳ್ ಆ ಪವನಾತ್ಮಜನೊಳ್ ಬದ್ಧವೈರಮಮ್ ಮರೆ**=ಆದ್ದರಿಂದ ನಿನಗಿಂತ ಹೆಚ್ಚು ಬಲಶಾಲಿಯಾಗಿರುವ ಆ ಭೀಮಸೇನನ ಬಗ್ಗೆ ಹೊಂದಿರುವ ಕಡುಹಗೆತನವನ್ನು ಮರೆತುಬಿಡು; **ಸಂಧಿಮಾಳ್ಪುದು ಉತ್ತಮ ಪಕ್ಷಮ್ ಎಂದು ನುಡಿದ ಸಂಜಯನ ನುಡಿಗೆ**=ಪಾಂಡವರೊಡನೆ ಸಂಧಿ ಮಾಡಿಕೊಳ್ಳುವುದು ಒಳ್ಳೆಯದು ಎಂದು ಹೇಳಿದ ಸಂಜಯನ ಮಾತುಗಳಿಗೆ; **ಪಿಂಗಾಕ್ಷನ್ ಅತಿವಿಷಮ ಪರುಷವೇಷಾವೇಶಧರನಾಗಿ**=ದುರ್ಯೋದನನು ಅತಿ ಭಯಂಕರವಾದ ಕೋಪತಾಪದಿಂದ ಆಕ್ರೋಶಗೊಂಡವನಾಗಿ; **ಬಲಯುತ ಸಮರಥನ್ ಎನ್ನೊಳ್ ಆತನ್ ಅತಿರಥನ್ ಗಡ**=ಓಹೋ… ಬಲವುಳ್ಳ ಸಮರಥನಾಗಿರುವ ನನ್ನ ಮುಂದೆ ಆತ ಅತಿರಥನೋ; **ಅಧಿಕ ಬಲವಂತನ್ ಮಾರುತಿ ಗಡ**=ನನಗಿಂತಲೂ ದೊಡ್ಡ ಬಲಶಾಲಿಯೋ ಆ ಭೀಮ;

**ಮಹಾರಥನ್ ಮಾರುತಿಯುಮ್ ತದ್ರಥದ ಗಾಲಿಗಳ್ ದೊಡ್ಡಿದುವೇ**= ಭೀಮನನ್ನು ಮಹಾರಥನೆಂದು ಹೇಳುತ್ತಿರುವೆಯಲ್ಲ "ಅವನ ರಥದ ಚಕ್ರಗಳು ನನ್ನ ರಥದ ಚಕ್ರಗಳಿಗಿಂತ ದೊಡ್ಡದಾಗಿವೆಯೋ" ಎಂದು ವ್ಯಂಗ್ಯದ ನುಡಿಗಳಿಂದ ಸಂಜಯನು ಭೀಮನ ಬಗ್ಗೆ ಆಡಿದ ಹೊಗಳಿಕೆಯ ಮಾತುಗಳನ್ನು ದುರ್ಯೋಧನನು ಅಲ್ಲಗಳೆಯುತ್ತಾನೆ; **ಪೆರರಮ್ ಪೊಗಳ್ದಪೆ ಎಮ್ಮನ್ ಕಿರಿಯರ್ ಮಾಡಿದಪೆ**=ಬೇರೆಯವನ್ನು ದೊಡ್ಡವರನ್ನಾಗಿ ಮಾಡಿ ಹೊಗಳುತ್ತೀಯೆ ನಮ್ಮನ್ನು ಚಿಕ್ಕವರನ್ನಾಗಿ ಮಾಡಿ ಕಡೆಗಣಿಸುತ್ತಿರುವೆ; **ಎಲವೊ, ಸಂಜಯ ನೀನುಮ್ ಪೆರನೊರ್ವನ್ ಬಿಲ್ಲೋಜನ್… ಪೆರನೊರ್ವನ್ ಸಿಂಧುಪುತ್ರನಾಗಲ್ ಬಗೆವೋ**= ಎಲವೋ ಸಂಜಯ, ನೀನು ಕೂಡ ಮತ್ತೊಬ್ಬ ದ್ರೋಣನಾಗಲು… ಮತ್ತೊಬ್ಬ

ಭೀಷ್ಮನಾಗಲು ಬಯಸುತ್ತಿರುವೆಯಾ; ಆ ದ್ರೋಣ ಮತ್ತು ಭೀಷ್ಮರು ತಮ್ಮ ಜೀವನದ ಉದ್ದಕ್ಕೂ ಆ ಪಾಂಡವರನ್ನು ನನ್ನ ಮುಂದೆ ಯಾವಾಗಲೂ ಹೊಗಳುತ್ತಿದ್ದರು; ಕೌರವರಾದ ನಮ್ಮನ್ನು ಕಡೆಗಣಿಸುತ್ತಿದ್ದರು. ಈಗ ನೀನು ಅವರಂತೆಯೇ ಆಗಿದ್ದೀಯೆ;

**ಎಂದು ಅರಸನ್ ಅವಂಗೆ ವಿರಸಮಾಗಿ ಪರುಷಮಮ್ ನುಡಿಯೆ**=ಎಂದು ದುರ್ಯೋಧನನು ಸಂಜಯನ ಬಗ್ಗೆ ಕುಪಿತನಾಗಿ ಬಿರುಸಾದ ಮಾತನ್ನಾಡಲು; ಸಂಜಯನ್ ಅಂಜಿ=ದುರ್ಯೋಧನನ ಕೋಪೋದ್ರೇಕವನ್ನು ಕಂಡು ಸಂಜಯನು ತುಸು ಹಿಂಜರಿದು; **ಎನಿತೆನಿತಮ್ ಕಲಿಸಿದೊಡೆ ಅನಿತನಿತುಮ್ ನೈಜಭಾವಮ್ ಅಕ್ಕುಮ್**=ಇತರರಿಗೆ ನಾವು ಎಷ್ಟೆಷ್ಟು ಒಳ್ಳೆಯದನ್ನು ಹೇಳಿ ಕೊಟ್ಟರೂ, ಅಷ್ಟಷ್ಟೇ ಪ್ರಮಾಣದಲ್ಲಿ ಅವರಲ್ಲಿರುವ ಹುಟ್ಟುಗುಣವೇ ಕಂಡು ಬರುತ್ತದೆ. ಅಂದರೆ ನಾವು ಹೇಳುವ ಅರಿವಿನ ಮಾತು ಅವರ ಮನಕ್ಕೆ ತಟ್ಟುವುದಿಲ್ಲ; **"ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ"** ಎಂಬ ಗಾದೆಯಂತೆ ಕೆಲವು ವ್ಯಕ್ತಿಗಳು ತಮ್ಮಲ್ಲಿರುವ ನೀಚಗುಣವನ್ನು ಯಾವ ತಿಳುವಳಿಕೆಯ ಮಾತು ಗಳಿಂದಲೂ ಸರಿಪಡಿಸಿಕೊಳ್ಳುವುದಿಲ್ಲ; ಉನ್ನತ=ಎತ್ತರವಾದ; ವಂಶ=ಬಿದಿರು; ಉನ್ನತವಂಶ=ಎತ್ತರವಾದ ಬಿದುರಿನ ಮೆಳೆ; ಕರ್ಕಶ=ಗಟ್ಟಿಯಾದ/ಕಠಿಣವಾದ; ತನು=ದೇಹ; ಕರ್ಕಶತನು=ಗಟ್ಟಿಯಾದ ಹೊರ ಭಾಗ; ಅಂತಃಶೂನ್ಯಮ್+ ಅಕ್ಕುಮ್; ಅಂತಃಶೂನ್ಯ=ಒಳಗೆ ಟೊಳ್ಳು; ಅಕ್ಕುಮ್=ಆಗಿರುವುದು; ಅಂತು=ಹಾಗೆ;

**ಉನ್ನತವಂಶಮ್ ಕರ್ಕಶ ತನು ಅಂತಃಶೂನ್ಯಮಕ್ಕುಮ್**=ಬಿದಿರಿನ ಮೆಳೆಯ ಹೊರಮಯ್ ಗಟ್ಟಿಯಾಗಿದ್ದರೂ ಅದರ ಒಳಮಯ್ ಟೊಳ್ಳಾಗಿರುತ್ತದೆ; **ನೃಪನಂದನನ್ ಎಂತುಮ್ ಅಂತು**=ಅದೇ ರೀತಿಯಲ್ಲಿ ಬಹಿರಂಗವಾಗಿ ಈ ದುರ್ಯೋಧನನಿಗೆ ಎಷ್ಟೇ ತಿಳುವಳಿಕೆಯನ್ನು ಹೇಳಿದರೂ, ಅಂತರಂಗದ ಅವನ ಮನದಲ್ಲಿರುವ ಪಾಂಡವರ ಬಗೆಗಿನ ಹಗೆತನ ಹೋಗುವುದಿಲ್ಲ ಎಂಬುದನ್ನು ಸಂಜಯನು ಮನಗಂಡು; ದುರ್ಯೋಧನನು ಮಯ್ ಕಟ್ಟಿನಲ್ಲಿ ಮಹಾಬಲನಾಗಿದ್ದಾನೆ. ಆದರೆ ಮಾನಸಿಕವಾಗಿ ದುರ್ಬಲನಾಗಿದ್ದಾನೆ. ಪಾಂಡವರ ಬಗೆಗಿನ ಹಗೆತನ ಅವನ ವ್ಯಕ್ತಿತ್ವವನ್ನು ಟೊಳ್ಳಾಗಿಸಿದೆ; **"ಮೌನಮ್ ಸರ್ವಾರ್ಥಸಾಧನಮ್" ಎಂಬುದು="**ಸಮಸ್ಯೆಯು ಉಂಟಾದಾಗ ಮಾತನಾಡದೇ ಸುಮ್ಮನಿದ್ದು ತಾಳ್ಮೆ ಮತ್ತು ಶಾಂತಿಯಿಂದ ಎಲ್ಲವನ್ನೂ ಸಾಧಿಸಬಹುದು**"** ಎಂಬುದು ಲೋಕನೀತಿಯ ನುಡಿ. ಈಗ ನಾನು ಅದನ್ನೇ ಅನುಸರಿಸಬೇಕು ಎಂದು ಸಂಜಯನು ನಿಶ್ಚಯಿಸಿಕೊಂಡು;

**ಈತಂಗೆ ಅನುಕೂಲವೃತ್ತಿಯುಮ್ ಸ್ವಚ್ಛಂದನಾವೃತ್ತಿಯುಮಾಗಿ ನೆಗಳ್ದುದು=**

ಈತನಿಗೆ ಒಪ್ಪಿಗೆಯಾಗುವಂತೆಯೇ ನಾನು ಮೆದುವಾಗಿಯೇ ನಡೆದುಕೊಳ್ಳಬೇಕು; ಆರಾಧ್ಯ=ಪೂಜ್ಯನಾದ/ಸೇವೆಗೆ ಯೋಗ್ಯನಾದ/ಓಲೈಸಬೇಕಾದ; **ಎಂತುಮ್ "ಆರಾಧ್ಯನ್ ನ ಪ್ರಕೋಪಯೇತ್" ಎಂದು ಮೋನಂಗೊಂಡು**=ಹೇಗಾದರೂ ಆಗಲಿ "ಒಲಿಸಿಕೊಳ್ಳಬೇಕಾದ ವ್ಯಕ್ತಿಯನ್ನು ಕೋಪಗೊಳ್ಳುವಂತೆ ಮಾಡಬಾರದು" ಎಂದು ಸಂಜಯನು ಸುಮ್ಮನಾಗಿ; **ಸಂಜಯನ್ ಕಿರಿದುಬೇಗಮಿರ್ದು**= ಸಂಜಯನು ಸ್ವಲ್ಪ ಹೊತ್ತು ಮಾತನಾಡದೆ ಸುಮ್ಮನಿದ್ದು; **ಫಣಿರಾಜಕೇತನನ್ ಯುದ್ಧಸನ್ನದ್ಧನಾಗಿ ನಡೆವುದಮ್ ಕಂಡು**=ದುರ್ಯೋಧನನು ಯುದ್ಧಕ್ಕೆ ಸಿದ್ಧನಾಗಿ ನಡೆಯುತ್ತಿರುವನ್ನು ನೋಡಿ; ನಿಸರ್ಗಮೂರ್ಖ=ಹುಟ್ಟಿನಿಂದಲೇ ದಡ್ಡ/ತನಗೆ ಅನಿಸಿದ್ದನ್ನು ಹಿಂದೆ ಮುಂದೆ ನೋಡದೆ ಮಾಡುವವನು; ಸ್ವಭಾವ ದೃಢ= ಕಯ್ಗೊಂಡ ಕೆಲಸವನ್ನು ಬಿಡದೆ ಮಾಡುವವನು; ಸ್ವಾಮಿಹಿತನ್=ಒಡೆಯನಿಗೆ ಒಳ್ಳೆಯದನ್ನು ಮಾಡುವವನು;

**ಮತ್ತಮ್ ಆ ಸಂಜಯನ್ ನಿಸರ್ಗಮೂರ್ಖನುಮ್ ಸ್ವಭಾವದೃಢನುಮ್ ಸ್ವಾಮಿಹಿತನುಮಪ್ಪದರಿಂದೆ ಇರಲಾರದೆ**=ದುರ್ಯೋಧನನು ರಣರಂಗಕ್ಕೆ ತೆರಳುತ್ತಿರುವುದನ್ನು ಕಂಡು ಮತ್ತೆ ಸಂಜಯನು ಸುಮ್ಮನಿರಲಾಗಲಿಲ್ಲ. ಏಕೆಂದರೆ ಸಂಜಯನು ತನಗೆ ಅನಿಸಿದ್ದನ್ನು ಮಾಡುವ, ಕಯ್ಗೊಂಡ ಕೆಲಸವನ್ನು ಮುಂದುವರಿಸುವ ಮತ್ತು ಒಡೆಯನ ಹಿತವನ್ನೇ ಸದಾಕಾಲ ಚಿಂತಿಸುವ ವ್ಯಕ್ತಿಯಾಗಿದ್ದರಿಂದ ಸುಮ್ಮನಿರಲಾದೆ; **ಬಲದೆ ಅಶ್ವತ್ಥಾಮನ್ ಒಳನ್**=ನಿನ್ನ ಸೇನಾಪಡೆಯಲ್ಲಿ ಅಶ್ವತ್ಥಾಮನು ಇದ್ದಾನೆ; **ಬಲನೊಳನ್**=ನಿನ್ನ ಕಡೆಯಲ್ಲಿರುವ ಬಲರಾಮನಿದ್ದಾನೆ; **ಇರ್ವರುಮನ್ ಆಸೆಗೆಯ್ಯದೆ**=ಯುದ್ಧವನ್ನು ಮಾಡಲು ಇವರಿಬ್ಬರ ನೆರವನ್ನು ಬಯಸದೆ; **ವಿದ್ಯಾಬಲದಿಮ್ ಕಾದದೆ**=ಅಳಿದುಳಿದಿರುವ ಪಡೆಯೆಲ್ಲವನ್ನೂ ಜತೆಗೂಡಿಸಿಕೊಂಡು ಸಮಸ್ತ ಶಕ್ತಿಯೊಡಗೂಡಿ ಕುಶಲತೆಯಿಂದ ಯುದ್ಧವನ್ನು ಮಾಡಲು ಯೋಜಿಸಿಕೊಳ್ಳದೆ;

**ಅರಸ, ನಿಜಭುಜಬಲದಿಮ್ ಪಾಂಡವರೊಳ್ ಕಾದಲ್ ಬಗೆದಯ್**= ದುರ್ಯೋಧನನೇ, ನಿನ್ನೊಬ್ಬನ ಭುಜಬಲವನ್ನು ನಂಬಿಕೊಂಡು ಪಾಂಡವರೊಡನೆ ಯುದ್ಧ ಮಾಡಲು ಹೊರಟಿರುವೆ; **ಆ ಬಲದೇವ ಅಶ್ವತ್ಥಾಮರುಮ್ ಇರ್ದರ್**=ಆ ಬಲದೇವ ಮತ್ತು ಅಶ್ವತ್ಥಾಮರು ಇದ್ದಾರೆ; **ಅವರ್ ಇರ್ವರುಮಲ್ಲದೆ ಕೃಪ ಕೃತವರ್ಮರುಮ್ ಇರ್ದರ್**=ಅವರಿಬ್ಬರೇ ಅಲ್ಲದೆ ಕೃಪ ಮತ್ತು ಕೃತವರ್ಮರು ಇದ್ದಾರೆ. ಇವರೆಲ್ಲರೂ ನಿನ್ನ ಕಡೆಯವರು; **ಅಂತು ನಾಲ್ವರೊಳ್ ಒರ್ಬಂಗೆ ವೀರಪಟ್ಟಮಮ್ ಕಟ್ಟಿ**=ಉಳಿದಿರುವ ಈ ನಾಲ್ವರಲ್ಲಿ ಒಬ್ಬರಿಗೆ ವೀರಪಟ್ಟವನ್ನು ಕಟ್ಟಿ;

**ವೀರಪ್ರಮುಖಂಗೆ ಸೇನಾಧಿಪತ್ಯಾಭಿಷೇಕಮಮ್ ಮಾಡಿ ಪಗೆಯನ್ ಕಯ್ಗೆ ಮಾಳ್ಪುದು ಎಂಬುದುಮ್**=**"**ಪರಾಕ್ರಮಿಯಾದ ವೀರನಿಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟಿ, ಹಗೆಯಾದ ಪಾಂಡವರ ಮೇಲೆ ಜಯಗಳಿಸಿ, ಅವರನ್ನು ವಶಪಡಿಸಿಕೊಳ್ಳುವುದು**"** ಎಂದು ಸಂಜಯನು ರಣರಂಗಕ್ಕೆ ಹೋಗುವ ಮುನ್ನ ಯಾವ ರೀತಿ ದುರ್ಯೋಧನನು ಸಜ್ಜಾಗಬೇಕೆಂಬುದನ್ನು ಹೇಳಲು; **ಸಂಜಯನ ನುಡಿಗೆ ದುರ್ಯೋಧನನ್ ಇಂತು ಎಂದನ್**=ಸಂಜಯನ ಮಾತುಗಳಿಗೆ ದುರ್ಯೋಧನನು ಈ ರೀತಿ ಪ್ರತಿಕ್ರಿಯಿಸಿದನು;

❖

## ನೋಟ–೬

# ದುರ್ಯೋಧನನ ಸಂಕಟ

**ಸಂಜಯನ ನುಡಿಗೆ ದುರ್ಯೋಧನನ್ ಇಂತು ಎಂದನ್**=ಬಲರಾಮ, ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರಲ್ಲಿ ಒಬ್ಬರಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿ ಪಾಂಡವರ ಎದುರು ಯುದ್ಧಕ್ಕೆ ಹೋಗುವುದು ಎಂದು ಸಂಜಯನು ದುರ್ಯೋಧನನಿಗೆ ಸಲಹೆಯನ್ನು ನೀಡಿದಾಗ, ದುರ್ಯೋಧನನು ಈ ರೀತಿ ಪ್ರತಿಕ್ರಿಯಿಸಿದನು; ತ್ರಿದಶ=ದೇವತೆ; ತ್ರಿದಶನದೀಸುತ=ಗಂಗಾದೇವಿಯ ಮಗನಾದ ಗಾಂಗೇಯ/ಭೀಷ್ಮ; ಕಜ್ಜ=ಕೆಲಸ/ರಾಜ್ಯದ ಒಡೆತನದಲ್ಲಿ ಪಾಲನ್ನು ಪಡೆಯಲೆಂದು ಯುದ್ಧಕ್ಕೆ ಬಂದಿರುವ ಪಾಂಡವರನ್ನು ಕೊಲ್ಲುವ ಇಲ್ಲವೇ ಸೋಲಿಸುವ ಕೆಲಸ; ತೀರದ ಕಜ್ಜ=ಈಡೇರದ ಕೆಲಸ / ಪಾಂಡವರನ್ನು ಕೊಲ್ಲಲಾಗದಿರುವುದು ಇಲ್ಲವೇ ಸೋಲಿಸಲಾಗದಿರುವುದು; **ಮುನ್ನೆ ತ್ರಿದಶನದೀಸುತನಿಮ್ ತೀರದ ಕಜ್ಜಮ್**=ಈ ಮೊದಲು ಗಾಂಗೇಯನಿಂದ ಈಡೇರದ ಕೆಲಸ/ಪಾಂಡವರನ್ನು ಕೊಲ್ಲಲಾಗದಿರುವುದು; ಕಳಶಸಂಭವ=ದ್ರೋಣ;

**ಕಳಶಸಂಭವನಿಮ್ ತೀರದ ಕಜ್ಜಮ್**=ದ್ರೋಣನಿಂದ ಈಡೇರದ ಕೆಲಸ; ಇನ=ಸೂರ್ಯ; ಇನಜ=ಕರ್ಣ; **ಇನಜನಿಮ್ ತೀರದ ಕಜ್ಜಮ್**=ಕರ್ಣನಿಂದ ಈಡೇರದ ಕೆಲಸ; **ದ್ರೋಣಪುತ್ರನಿಮ್ ತೀರ್ದಪುದೇ**=ದ್ರೋಣನ ಮಗನಾದ ಅಶ್ವತ್ಥಾಮನಿಂದ ಈಡೇರುವುದೇ/ಪಾಂಡವರನ್ನು ಕೊಲ್ಲುವ ಇಲ್ಲವೇ ಸೋಲಿಸುವ ಕೆಲಸ ಅಶ್ವತ್ಥಾಮನಿಂದ ಆಗುತ್ತದೆಯೇ; ಒಳ್ಳಿತು+ಕೆಯ್ದನ್=ಒಳ್ಳೆಯದನ್ನು ಮಾಡಿದನು; ಈ ಸನ್ನಿವೇಶದಲ್ಲಿ **“ಒಳ್ಳಿತು”** ಎಂಬ ಪದ ಚುಚ್ಚುಮಾತಿನ ನೆಲೆಯಲ್ಲಿ **“ಕೇಡನ್ನು ಬಗೆದರು”** ಎಂಬ ತಿರುಳಿನಲ್ಲಿ

ಬಳಕೆಗೊಂಡಿದೆ. ದ್ರೋಣ ಮತ್ತು ಅಶ್ವತ್ಥಾಮ–ಈ ಇಬ್ಬರೂ ಕಾಳೆಗದ ಕಣದಲ್ಲಿಯೇ ಆಯುಧಗಳನ್ನು ತೊರೆದರು; ಕುರುಕ್ಷೇತ್ರ ಯುದ್ಧ ನಡೆಯುತ್ತಿರುವಾಗ ಕೌರವರ ಪಡೆಯಲ್ಲಿದ್ದ 'ಅಶ್ವತ್ಥಾಮ' ಎಂಬ ಹೆಸರಿನ ಆನೆಯು ಸಾವನ್ನಪ್ಪಿದ್ದನ್ನು ಧರ್ಮರಾಯನು ದ್ರೋಣಾಚಾರ್ಯರಿಗೆ ಕೇಳಿಸುವಂತೆ "ಅಶ್ವತ್ಥಾಮ ಹತಃ" ಎಂದು ಕಿರುಚುತ್ತಾನೆ. ಇದನ್ನು ಕೇಳಿದ ಕೂಡಲೇ ದ್ರೋಣಾಚಾರ್ಯರು ತಮ್ಮ ಮಗ ಅಶ್ವತ್ಥಾಮನೇ ಸತ್ತನೆಂದು ತಿಳಿದು, ಪುತ್ರಶೋಕದಿಂದ ಪರಿತಪಿಸುತ್ತ, ಬಿಲ್ಲುಬಾಣಗಳನ್ನು ಕೆಳಕ್ಕಿಡುತ್ತಾರೆ. ಅನಂತರ ದ್ರುಪದನ ಮಗನಿಂದ ಹತರಾಗುತ್ತಾರೆ. ದುರ್ಯೋಧನನಿಗೆ ಆಪ್ತನಾಗಿದ್ದ ಕರ್ಣನ ಮೇಲೆ ಆಗಾಗ್ಗೆ ತನ್ನ ಅಸೂಯೆಯನ್ನು ಪ್ರಕಟಿಸುತ್ತಿದ್ದ ಅಶ್ವತ್ಥಾಮನು ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಕೆಲವೊಮ್ಮೆ ಹೋರಾಡದೆ ಆಯುಧವನ್ನು ತ್ಯಜಿಸಿ ಸುಮ್ಮನಿರುತ್ತಿದ್ದ; ಹೀಗೆ ಅಪ್ಪ ಮಕ್ಕಳಿಬ್ಬರೂ ಯುದ್ಧದ ಸಂದರ್ಭದಲ್ಲಿ ಆಯುಧವನ್ನು ತ್ಯಜಿಸಿದ್ದರು;

**ದ್ರೋಣನ್ ಎಮಗೆ ಒಳ್ಳಿಕೆಯ್ದನ್**=ದ್ರೋಣನು ನಮಗೆ ಒಳ್ಳೆಯದನ್ನು ಮಾಡಿದನು; **ದ್ರೋಣನ ಸುತನ್ ಒಳ್ಳಿಕೆಯ್ಯದಿರ್ಕುಮೆ**= ದ್ರೋಣನ ಮಗನಾದ ಅಶ್ವತ್ಥಾಮನು ಒಳ್ಳೆಯದನ್ನು ಮಾಡದೆ ಇರುತ್ತಾನೆಯೇ; ಕ್ಷೋಣಿ=ನೆಲ/ಭೂಮಿ; **ಸಮರ ಕ್ಷೋಣಿಯೊಳ್ ಇನ್ನವನ ಆಸೆಯೆ**=ಕುರುಕ್ಷೇತ್ರ ರಣರಂಗದಲ್ಲಿ ಅಶ್ವತ್ಥಾಮನಿಂದ ನನಗೆ ಗೆಲುವು ಬರುತ್ತದೆ ಎಂಬ ಆಸೆಯನ್ನು ಇನ್ನು ನಾನು ಇಟ್ಟುಕೊಳ್ಳಬೇಕೆ; ಅಶ್ವತ್ಥಾಮನ ನೆರವನ್ನು ಪಡೆದು ಯುದ್ಧಕ್ಕೆ ಹೋಗಬೇಕೆಂಬ ಸಂಜಯನ ಸಲಹೆಯನ್ನು ಸಕಾರಣವಾಗಿಯೇ ದುರ್ಯೋಧನನು ನಿರಾಕರಿಸುತ್ತಿದ್ದಾನೆ; **ಮಾಣ್ ಅಣಮ್**=ಅಶ್ವತ್ಥಾಮನಿಂದ ಕಿಂಚಿತ್ತಾದರೂ ನೆರವನ್ನು ನಾನು ಬಯಸುವುದಿಲ್ಲ;

**ಕಯ್ಪೆ ಸೊರೆಯ ಕುಡಿಯೇಮ್ ಮಿಡಿಯೇಮ್**=ಕಹಿಯಾದ ಸೋರೆಯ ಬಳ್ಳಿಯ ಚಿಗುರಾದರೇನು ಹೀಚಾದರೇನು ಎರಡೂ ಕಹಿಯಲ್ಲವೇ. ಅಂತೆಯೇ ಅಪ್ಪ ಮಗ ಇಬ್ಬರೂ ಒಂದೇ. ಅವರಿಂದ ಕುರುಕ್ಷೇತ್ರ ರಣರಂಗದಲ್ಲಿ ನನಗೆ ಯಾವುದೇ ಒಳಿತಾಗಿಲ್ಲ; ಹಗೆಗಳಾದ ಪಾಂಡವರಿಗೆ ಕೇಡಾಗಿಲ್ಲ; ಹಲಿ=ಬಲರಾಮ; ಕೃಷ್ಣನ ಅಣ್ಣನಾದ ಬಲರಾಮನು ಮಹಾಬಲಶಾಲಿಯಾಗಿದ್ದು ಚಿಕ್ಕಂದಿನಿಂದಲೂ ದುರ್ಯೋಧನನ ಬಗ್ಗೆ ಒಲವು ಉಳ್ಳವನಾಗಿದ್ದ. ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಕೃಷ್ಣನು ಪಾಂಡವರ ಪಕ್ಷವನ್ನು ಮತ್ತು ಬಲರಾಮ ಹಾಗೂ ಯಾದವ ಸೇನೆಯು ದುರ್ಯೋಧನನ ಪಕ್ಷವನ್ನು ಬೆಂಬಲಿಸಿದ್ದರು. ಕೃಷ್ಣನು ಅರ್ಜುನನ ಸಾರಥಿಯಾಗಲು ಸಿದ್ಧನಿದ್ದರೆ, ಬಲರಾಮನು ಯುದ್ಧರಂಗದಲ್ಲಿ

ದುರ್ಯೋಧನನ ಕಡೆ ನಿಂತು ಹೋರಾಡಲು ಸಿದ್ಧನಾಗಿದ್ದನು. ಆದರೆ ಯುದ್ಧ ಪ್ರಾರಂಭವಾಗುವುದಕ್ಕೆ ಮುನ್ನಿನ ದಿನಗಳಲ್ಲಿ ಹಸುವೊಂದರ ಸಾವಿಗೆ ತಾನು ಕಾರಣನಾದುದರಿಂದ, ಅದರ ಪಾಪ ಪರಿಹಾರಕ್ಕೆಂದು ಬಲರಾಮನು ಯುದ್ಧದಲ್ಲಿ ಪಾಲ್ಗೊಳ್ಳದೆ ಪುಣ್ಯಕ್ಷೇತ್ರಗಳ ದರ್ಶನಕ್ಕಾಗಿ ಹೊರಟುಹೋಗಿದ್ದಾನೆ. ಬಲರಾಮನ ಇಂತಹ ವರ್ತನೆಯಿಂದ ನಿರಾಶೆಗೊಂಡಿರುವ ದುರ್ಯೋಧನನು ಅದನ್ನು ನೇರವಾಗಿ ವ್ಯಕ್ತಪಡಿಸಲಾಗದೆ **"ಯಾರನ್ನು ಬಹಳವಾಗಿ ನಂಬಿಕೊಂಡಿದ್ದನೋ ಆತನೇ ಯುದ್ಧದಲ್ಲಿ ಪಾಲ್ಗೊಳ್ಳದೆ ದೂರಸರಿದ"** ಎಂದು ಹೇಳುತ್ತಿದ್ದಾನೆ;

**ರಣಕೇಳಿ ಕುತೂಹಲಿಯಮ್ ಹಲಿಯನ್ ನಚ್ಚಿರ್ದೆನ್**=ಕಾಳೆಗದ ಹೋರಾಟದಲ್ಲಿ ಉತ್ಸಾಹಿಯಾಗಿದ್ದ ಬಲರಾಮನ್ನು ನಂಬಿಕೊಂಡಿದ್ದೆನು; **ಅವನುಮ್ ಆಹವಕೋಲಾಹಲದಲ್ಲಿ ತೀರ್ಥಯಾತ್ರಾಚ್ಛಲದಿಂದಮ್ ಅಗಲ್ದು ಪೋದನ್**=ಅವನು ಕೂಡ ದೊಡ್ಡ ಕಾಳೆಗದ ಅಬ್ಬರದ ಹೋರಾಟದ ಸಮಯ ದಲ್ಲಿಯೇ ತೀರ್ಥಯಾತ್ರೆಯ ನೆಪದಲ್ಲಿ ನನ್ನಿಂದ ಅಗಲಿ ದೂರಹೋದನು; **ಇನ್ನುಮ್ ಬಾರನ್**=ಇನ್ನೂ ಬಂದಿಲ್ಲ; **ಪಗೆ ಮಡಿವೊಡೆ ರವಿಸುತನಿಮ್ ಮಡಿಗುಮ್**=ಹಗೆಯು ಸಾಯಬೇಕಾದರೆ ಕರ್ಣನಿಂದ ಸಾಯಬೇಕು; ಮೇಣ್= ಇಲ್ಲವೇ; **ಶೌರ್ಯಶಾಳಿ ದುಶ್ಶಾಸನನಿಮ್ ಮಡಿಗುಮ್ ಮೇಣ್ ಎನ್ನಿಂದಮ್ ಮಡಿಗುಮ್**=ಮಹಾಪರಾಕ್ರಮಿಯಾದ ದುಶ್ಶಾಸನನಿಂದ ಸಾಯಬೇಕು ಇಲ್ಲವೇ ನನ್ನಿಂದ ಸಾಯಬೇಕು; **ಪೆರಪೆರರಿನ್ ಎನ್ನ ಪಗೆ ಮಡಿದಪುದೇ**=ಬೇರೆ ಯಾರು ಯಾರಿಂದಲೋ ನನ್ನ ಹಗೆಯು ನಾಶವಾಗುತ್ತದೆಯೇ;

**ಉಕ್ಕಿನೊಳ್ ಒಡಗೂಡಿದ ಪಚ್ಚೆ ಕಡುಗೂರಿತಕ್ಕುಮ್**=ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿದಾಗ ಮೆದುವಾದ ಕಬ್ಬಿಣವು ಉಕ್ಕಿನೊಂದಿಗೆ ಬೆರೆತಾಗ ಹದಗೊಂಡು ತಾನೂ ಹರಿತಗೊಳ್ಳುತ್ತದೆ; **ಬೇರೆ ಕೂರ್ಪಿಲ್ಲ**=ಕಬ್ಬಿಣ ಮತ್ತು ಉಕ್ಕು ಜತೆಗೂಡಿದ ಆಯುಧ ಹರಿತವಾಗುವ ಹಾಗೆ ಬೇರೆ ಯಾವೊಂದು ಲೋಹದ ಆಯುಧವೂ ಹರಿತವಾಗಲಾರದು; **ಅರ್ಕನಂದನನ್ ಒಡನಿಲ್ಲದೆ ಆರುಮ್ ತೊಡರ್ದು ಇರಿವರ್**=ಕರ್ಣನು ಜತೆಗಿಲ್ಲದೆ ಯಾರು ತಾನೆ ನನ್ನ ಹಗೆಗಳ ಎದುರು ಹೋರಾಡಿ, ಪಾಂಡವರನ್ನು ಕೊಲ್ಲಬಲ್ಲರು. ಕಬ್ಬಿಣ ಮತ್ತು ಉಕ್ಕು ಜತೆಗೂಡಿದ ಆಯುಧವು ಹರಿತವಾಗಿರುವಂತೆ ಕರ್ಣನ ಜತೆಗೂಡಿದವರು ಮಾತ್ರ ಹಗೆಗಳನ್ನು ಕೊಲ್ಲಬಲ್ಲರು; **ತಾಮೆ ಬೇರೆ ಕೂರಿದರ್ ಒಳರೇ**=ಪಾಂಡವರನ್ನು ಕೊಲ್ಲುವಂತಹ ಬೇರೆ ಶೂರರು ಯಾರಿದ್ದಾರೆ;

**ಕಾನೀನನ್ ದ್ರೋಣ ನದೀಸೂನುಗಳ್ ಅಳಿದಿಮ್ ಬಳಿಕ್ಕೆ ಪೆರರ್ ಎನಗಿಲ್ಲ ಎಂದು ಆನೆ ಗಳಿತಾಶ್ರುಜಲದಿಮ್ ಸೇನಾಪತ್ಯಾಭಿಷೇಕಮಮ್ ಮಾಡಿದಪೆನ್**=

ಭೀಷ್ಮರು ಸೋತು ಬಾಣಗಳ ಮಂಚದ ಮೇಲೆ ಮಲಗಿದ ನಂತರ ಸೇನಾಧಿಪತಿಗಳಾದ ಗುರು ದ್ರೋಣ ಮತ್ತು ಗೆಳೆಯ ಕರ್ಣ ಸತ್ತ ನಂತರ, ನನ್ನ ಪಾಲಿಗೆ ಬೇರೆಯವರು ಯಾರು ಇಲ್ಲವೆಂಬುದನ್ನು ಅರಿತುಕೊಂಡು, ಸುರಿಯುತ್ತಿರುವ ನನ್ನ ಕಣ್ಣೀರಿನಿಂದ ಸೇನಾಧಿಪತಿಯನ್ನು ಪಟ್ಟವನ್ನು ನನಗೆ ನಾನೇ ಕಟ್ಟಿಕೊಳ್ಳುವೆನು; **ಯುವರಾಜನುಮ್ ಅಂಗರಾಜನುಮ್ ಇರ್ವರುಮ್ ಎನಗೆ ಎರಡುಮ್ ತೋಳ್ ಎರಡು ಕಣ್ಗಳ್**=ಯುವರಾಜ ದುಶ್ಶಾಸನ ಮತ್ತು ಅಂಗರಾಜ ಕರ್ಣ–ಇಬ್ಬರೂ ನನ್ನ ಎರಡು ತೋಳುಗಳು ಎರಡು ಕಣ್ಣುಗಳು; **ಅನ್ನರೆ ಪೋರೆನೆ**=ಅಂತಹವರೇ ಸಾವನ್ನಪ್ಪಿ ಇಲ್ಲವಾಗಿರುವಾಗ; **ಸಂಜಯ ಮತ್ತಮ್ ಎನಗೆ ಮಾನಸವಾಳೇ**=ಸಂಜಯನೇ, ಮತ್ತೆ ನಾನು ಬದುಕಿ ಬಾಳಬೇಕೆ; **ದಿನಕರತನಯನ್ ಕಳಿದನ್**=ಸೂರ್ಯಪುತ್ರನಾದ ಕರ್ಣನು ಸಾವನ್ನಪ್ಪಿದನು;

**ಯುವರಾಜನಪ್ಪ ದುಶ್ಶಾಸನನುಮ್ ಕಳಿದನ್**=ಯುವರಾಜನಾಗಿದ್ದ ದುಶ್ಶಾಸನನು ಇನ್ನಿಲ್ಲವಾದನು; ತುಳಿಲಾಳ್=ಶೂರ/ವೀರ; **ತುಳಿಲಾಳ್ಗಳನ್ ಇರ್ವರುಮನ್ ಕಳಿಪಿ**=ಶೂರರಾಗಿದ್ದ ಅವರಿಬ್ಬರನ್ನು ಕಳೆದುಕೊಂಡು; **ಸುಯೋಧನನ ಬಾಳ್ವುದಮ್ ನಂಬಿದಿರೇ**=ಸುಯೋಧನನು ಬಾಳುತ್ತಾನೆ ಎಂಬುದನ್ನು ನಂಬುತ್ತೀರಾ/ಅವರಿಬ್ಬರಿಲ್ಲದ ಲೋಕದಲ್ಲಿ ನಾನು ಒಲವು ನಲಿವು ನೆಮ್ಮದಿಯಿಂದ ಬಾಳಲಾರೆ; **ಎನಗೆ ಮನಮಿಂದು ಶೂನ್ಯಮ್**=ನನ್ನ ಮನಸ್ಸು ಇಂದು ಬರಿದಾಗಿದೆ. ನನ್ನ ಮನದಲ್ಲಿ ಯಾವೊಂದು ಆಸೆ, ಒಲವು ನಲಿವು ನೆಮ್ಮದಿ ಇಲ್ಲವಾಗಿದೆ. ಭಾವನೆಗಳೇ ಸತ್ತುಹೋಗಿವೆ; ಮನೆ ಶೂನ್ಯಮ್=ಜತೆಯಲ್ಲಿ ಹುಟ್ಟಿದ ತಮ್ಮಂದಿರನ್ನು ಮತ್ತು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕಳೆದುಕೊಂಡು ಮನೆಯು ಬರಿದಾಗಿದೆ; **ಬೀಡು ಶೂನ್ಯಮಾದುದು**=ಹನ್ನೊಂದು ಅಕ್ಷೋಹಿಣಿ ಸೇನೆಯಿಂದ ಕೂಡಿದ್ದ ರಣರಂಗದ ಶಿಬಿರವೆಲ್ಲವೂ ಬರಿದಾಗಿದೆ; ಸೇನೆಯಲ್ಲಿದ್ದ ಕಾದಾಳುಗಳೆಲ್ಲರೂ ಸಾವನ್ನಪ್ಪಿದ್ದಾರೆ;

**ಸಕಲ ಅವನಿ ಶೂನ್ಯಮಾಯ್ತು**=ನನ್ನ ಬಂಧುಬಾಂಧವರು, ತಮ್ಮಂದಿರು, ಮಕ್ಕಳು ಮತ್ತು ಪರಿಜನರೆಲ್ಲರೂ ಅಳಿದು ನನ್ನ ಪಾಲಿಗೆ ಈ ಭೂಮಂಡಲವೆಲ್ಲವೂ ಬರಿದಾಗಿದೆ; **ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ ಆನ್ ಎಂತು ಇರ್ಪೆನ್**=ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ ಈ ಲೋಕದಲ್ಲಿ ನಾನು ಹೇಗೆ ತಾನೆ ಬಾಳಲಿ; ಸರಸಿಜ=ಕಮಲ; ಸರಸಿಜಬಾಂಧವ=ಸೂರ್ಯ; ಸರಸಿಜಬಾಂಧವತನಯ=ಸೂರ್ಯಪುತ್ರನಾದ ಕರ್ಣ; **ಬಾಂಧವರಮ್ ಸರಸಿಜಬಾಂಧವತನಯನುಮನ್ ಎನ್ನ ತಮ್ಮನುಮನ್** ಇರಿಸಿ=ಬಂಧು ಜನರನ್ನು ಕರ್ಣನನ್ನು ನನ್ನ ತಮ್ಮನಾದ ದುಶ್ಶಾಸನನನ್ನು ರಣರಂಗದಲ್ಲಿ ಬಲಿಕೊಟ್ಟಿರುವ ನಾನು ಈಗ; **ನಮ್ಮ ಅಂಥ**

**ನರೇಂದ್ರನ ಮೊಗಮನ್ ಗಾಂಧಾರಿಯ ಮೊಗಮನ್ ಆವ ಮೊಗದೊಳೆ ನೋಳ್ಪೆನ್ ಎನೆ**=ಕುರುಡನಾಗಿರುವ ನಮ್ಮ ತಂದೆ ರಾಜ ಧೃತರಾಷ್ಟ್ರನ ಮೊಗವನ್ನು ತಾಯಿ ಗಾಂಧಾರಿಯ ಮೊಗವನ್ನು ಅದಾವ ಮೊಗದಲ್ಲಿ ನೋಡಲಿ ಎಂದು ದುರ್ಯೋಧನನು ತನ್ನ ಮನದ ಹಿಂಜರಿಕೆಯನ್ನು ತೋಡಿಕೊಂಡಾಗ;

**ಸಂಜಯನ್ ಆ ಪ್ರಸ್ತಾವದೊಳ್**=ಸಂಜಯನು ಆ ಸಮಯದಲ್ಲಿ; **ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವ ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನೊಳ್**=ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವ ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನಿಂದಾಗಿ; **ಸರ್ವಾಂಗವಿಕಳರಾಗಿರ್ದ ಧೃತರಾಷ್ಟ್ರ ಗಾಂಧಾರಿಯರ ಚರಣಾರವಿಂದ ವಂದನಮ್ ಗೆಯ್ದು**=ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಗಾಸಿಗೊಂಡಿರುವ ಧೃತರಾಷ್ಟ್ರ ಮತ್ತು ಗಾಂಧಾರಿಯರ ಪಾದಕಮಲಗಳಿಗೆ ನಮಿಸಿ; **ದೇವರ ಮನಃ ಕ್ಷತಮನ್ ಆರಿಸಲ್ವೇಳ್ಪುದು**=ದೇವರ ಸ್ವರೂಪರಾಗಿರುವ ನಿನ್ನ ತಾಯಿತಂದೆಯ ಮನಸ್ಸಿನ ಯಾತನೆಯನ್ನು ಹೋಗಲಾಡಿಸಬೇಕು; **ಬೀಡಿಂಗೆ ಬಿಜಯಂಗೆಯ್ವುದು ಎನೆ**= ಅದಕ್ಕಾಗಿ ಈಗ ನೀನು ಹಸ್ತಿನಾವತಿಯತ್ತ ತೆರಳುವುದು ಎಂದು ಸಂಜಯನು ದುರ್ಯೋದನನಿಗೆ ಹೇಳಲು; ಸವಳದೆ=ಬೆಳಗಿನ ಹೊತ್ತು;

**ಸವಳದೆ ಯುವರಾಜನುಮ್ ಅಂಗರಾಜನುಮ್ ಬೆರಸು ಗುರುಜನದಲ್ಲಿಗೆ ರಣೋತ್ಸವದಿಮ್ ಪೋಗಲ್**=ಪ್ರತಿದಿನ ಬೆಳಗ್ಗೆ ಯುವರಾಜ ದುಶ್ಶಾಸನ ಮತ್ತು ಅಂಗರಾಜ ಕರ್ಣನ ಜತೆಗೂಡಿ ತಾಯ್ತಂದೆಯರ ಮತ್ತು ಗುರುಹಿರಿಯರ ಬಳಿಗೆ ಅತ್ಯಂತ ಉತ್ಸಾಹದಿಂದ ಆಶೀರ್ವಾದವನ್ನು ಪಡೆಯಲು ಹೋಗುತ್ತಿದ್ದವನು; **ಅವರ್ ಇರ್ವರುಮ್ ಇಲ್ಲದೆ**=ಅವರಿಬ್ಬರೂ ಇಲ್ಲದೆ; **ಈಗಳ್ ಅಲ್ಲಿಗೆ ಪೋಗಲ್ ನಾಣ್ಚುವೆನ್**=ಈಗ ಒಬ್ಬಂಟಿಯಾಗಿ ಗುರುಹಿರಿಯರ ಬಳಿಗೆ ಹೋಗಲು ನಾಚಿಕೆಯಾಗುತ್ತಿದೆ; **ಸಂಜಯ, ಪತಿಶೋಕವಿಕಳ ಪಾರ್ಥಿವ ನಿತಂಬಿನೀಜನಮನ್**= ಸಂಜಯ, ತಮ್ಮ ಗಂಡಂದಿರನ್ನು ಕಳೆದುಕೊಂಡು ಅತಿಸಂಕಟದಿಂದ ಗೋಳಾಡುತ್ತಿರುವ ರಾಜರ ಹೆಂಡತಿಯರನ್ನು; **ಎನ್ನ ಇರ್ಪ ಇರವಿಂದೆ ಈಕ್ಷಿಸಲ್ ಲಜ್ಜಿತನೆನ್**=ಈಗ ನಾನು ಇರುವ ಸ್ಥಿತಿಯಲ್ಲಿ ಅವರೆಲ್ಲರನ್ನು ನೋಡಲು ನಾಚಿಕೆಯಿಂದ ಕುಗ್ಗಿಹೋಗಿದ್ದೇನೆ; **ಏಕೆ ತೋರ್ಪೆನ್ ಆನ್ ಮೊಗಮಮ್**=ನಾನು ಹೇಗೆ ತಾನೆ ಅವರಿಗೆ ನನ್ನ ಮೊಗವನ್ನು ತೋರಲಿ;

**ಅತಿದುಃಖಿತನೆನ್ ಎಂಬನ್ನೆಗಮ್**=ಬಂಧುಬಾಂಧವರೆಲ್ಲರ ಸಾವುನೋವುಗಳಿಗೆ ಕಾರಣನಾಗಿ ಅತಿಸಂಕಟದಿಂದ ಬಳಲುತ್ತಿದ್ದೇನೆ ಎಂದು ದುರ್ಯೋಧನನು

ಸಂಜಯನೊಡನೆ ಹೇಳಿಕೊಂಡಾಗ; ಚತುರಂಗಬಲ= ಆನೆ/ ಕುದುರೆ/ ತೇರು/ ಕಾಲ್ದಳದಿಂದ ಕೂಡಿದ ಸೇನೆ; **ಸಕಲ ಚತುರಂಗಬಲ ವಿಕಳನಾಗಿ**= ಚತುರಂಗ ಬಲವೆಲ್ಲವನ್ನೂ ಕಳೆದುಕೊಂಡು; ಸಪ್ತಾಂಗ=ಏಳು ಬಗೆಗಳು; ಸಪ್ತಾಂಗರಾಜ್ಯ= ರಾಜ–ಮಂತ್ರಿ–ಮಿತ್ರ–ಬೊಕ್ಕಸ–ನಾಡು–ದುರ್ಗ–ಸೇನೆ ಎಂಬ ಏಳು ಬಗೆಯ ಸಂಪತ್ತಿನಿಂದ ಕೂಡಿದ ರಾಜ್ಯ; ಸಮಾಲಿಂಗಿತ=ಎಲ್ಲವನ್ನು ಒಳಗೊಂಡ; **ಸಪ್ತಾಂಗರಾಜ್ಯ ಸಮಾಲಿಂಗಿತನಾಗಿ**=ರಾಜ್ಯದ ಏಳು ಬಗೆಯ ಸಂಪತ್ತೆಲ್ಲವನ್ನೂ ತಾನೊಬ್ಬನೇ ಒಳಗೊಂಡು; ಏಳು ಬಗೆಯ ಸಂಪತ್ತಿನಲ್ಲಿ ದುರ್ಯೋಧನನೊಬ್ಬನನ್ನು ಬಿಟ್ಟು ಉಳಿದುದೆಲ್ಲವನ್ನೂ ಕಳೆದುಹೋಗಿದೆ;

**ಸಂಗ್ರಾಮರಂಗದೊಳ್ ಇರ್ದನ್ ಎಂಬುದಮ್ ಆಪ್ತಚರರ್ ಅರಿಪೆ ಕೇಳ್ದು ಗಾಂಧಾರಿಯುಮ್ ಧೃತರಾಷ್ಟ್ರನುಮ್ ಶೋಕಾಕುಲೀಕೃತಚಿತ್ತರಾಗಿ**= ರಣರಂಗದಲ್ಲಿ ದುರ್ಯೋಧನನು ಇದ್ದಾನೆ ಎಂಬ ಸುದ್ದಿಯನ್ನು ಆಪ್ತಸೇವಕರು ಹೇಳಲು, ಅದನ್ನು ಕೇಳಿದ ಗಾಂಧಾರಿಯೂ ಮತ್ತು ಧೃತರಾಷ್ಟ್ರನೂ ಮನದಲ್ಲಿ ಸಂಕಟದ ಬೇಗುದಿಯಿಂದ ಬೇಯುತ್ತ; **ತಮ್ಮ ಮಗನನ್ ಆರಯ್ಯಲುಮ್ ಮನಃಕ್ಷತಮನ್ ಆರಿಸಲುಮ್ ಎಂದು ಅರಸುತ್ತುಮ್ ಬಂದು**=ತಮ್ಮ ಮಗನ ಕಷ್ಟನಷ್ಟವನ್ನು ವಿಚಾರಿಸಿ, ಅವನ ಮನಸ್ಸಿನ ಸಂಕಟವನ್ನು ನಿವಾರಿಸಲೆಂದು ರಣರಂಗದಲ್ಲಿ ಹುಡುಕುತ್ತ ಬಂದು; **ಪಡೆ ಪನ್ನೊಂದಕ್ಷೋಹಿಣಿಗೆ ಒಡೆಯನೆ**=ಹನ್ನೊಂದು ಅಕ್ಷೋಹಿಣಿ ಸೇನೆಗೆ ಒಡೆಯನಾಗಿರುವವನೇ;

**ಮೂರ್ಧಾಭಿಷಕ್ತನಯ್**=ಪಟ್ಟಾಭಿಷಕ್ತನಾಗಿರುವ ದೊರೆಯೇ; ಬೆಳ್ಗೊಡೆ=ರಾಜತನದ ಸಂಕೇತವಾಗಿರುವ ರಾಜಲಾಂಛನವಾದ ದೊಡ್ಡ ಆಕಾರದ ಬಿಳಿಯ ಕೊಡೆ; **ಮೂರುಮ್ ಬೆಳ್ಗೊಡೆಯ ನಡುವಿರ್ಪ**=ಮೂರು ಬೆಳ್ಗೊಡೆಗಳ ನಡುವೆ ಇರುವ ಮಹಾರಾಜನೇ; **ನೀನ್ ಇರ್ದ ಎಡೆಯುಮ್ ಅದು ಎಮಗೆ ಅರಿಯದಂತುಟಾದುದೆ ಮಗನೇ ಎಂದು ಪಳಿಯಿಸುತ್ತುಮ್ ಬರ್ಪ**=ನೀನು ಇರುವ ಜಾಗ ಯಾವುದೆಂಬುದು ನಮಗೆ ತಿಳಿಯದಂತಾಯಿತೇ ಮಗನೇ ಎಂದು ಗೋಳಾಡುತ್ತ ಬರುತ್ತಿರುವ; ಕುರುಕ್ಷೇತ್ರ ಯುದ್ಧಕ್ಕೆ ಮೊದಲು ದುರ್ಯೋಧನನ ಮುಂದೆ ಹಿಂದೆ ಅಕ್ಕಪಕ್ಕದಲ್ಲಿ ಬೆಳ್ಗೊಡೆಗಳಿಂದ ಕಂಗೊಳಿಸುತ್ತಿದ್ದ ದೊಡ್ಡ ಸೇನಾಬಲದ ರಾಜಪರಿವಾರವಿರುತ್ತಿತ್ತು. ಆದರೆ ಈಗ ಅವೆಲ್ಲವನ್ನೂ ಕಳೆದುಕೊಂಡು ಒಬ್ಬಂಟಿಯಾಗಿರುವ ರಾಜ ದುರ್ಯೋಧನನನ್ನು ಅವನ ರಾಜ್ಯದಲ್ಲಿಯೇ ಹುಡುಕಬೇಕಾದ ದುರಂತ ಒದಗಿ ಬಂದಿದೆ;

**ಗುರುಜನದ ಸರಮಮ್ ಸಂಜಯನ್ ಅರಿದು**=ಹಿರಿಯರಾದ ಗಾಂಧಾರಿ ಮತ್ತು ಧೃತರಾಷ್ಟ್ರನ ಗೋಳಿನ ದನಿಯನ್ನು ಸಂಜಯನು ಆಲಿಸಿ; **ಕರಕಮಲ**

**ಮುಕುಳಿತ ಅಂಜಲಿಯಾಗಿ**=ತಾವರೆ ಮೊಗ್ಗಿನಂತೆ ಮುಚ್ಚಿಕೊಂಡಿರುವ ತನ್ನ ಬೊಗಸೆ ಕಯ್ಯಿಂದ ಸಂಜಯನು ದುರ್ಯೋಧನನಿಗೆ ನಮಿಸುತ್ತ; **ದೇವಾ, ನಿನ್ನಲ್ಲಿಗೆ ನಿಜ ಜನನೀ ಜನಕರ್ ಅರಸುತ್ತುಮ್ ಬಂದರ್ ಎಂಬುದುಮ್**=ದೇವಾ, ನಿನ್ನ ಬಳಿಗೆ ನಿನ್ನ ತಾಯಿ ತಂದೆ ಹುಡುಕಿಕೊಂಡು ಬಂದರು ಎಂದು ಹೇಳಲು; **ಉದ್ಧೃತ ಗೋತ್ರಾಭಿಮುಖನ್ ವಜ್ರಾಘಾತಮ್ ಆದಂತೆ ಸಿಗ್ಗಾಗಿ ತಲೆಯಮ್ ಬಾಗಿ**= ತಲೆಯೆತ್ತಿ ನಿಂತಿದ್ದ ದುರ್ಯೋಧನನು ಎತ್ತರವಾಗಿದ್ದ ಬೆಟ್ಟಕ್ಕೆ ಸಿಡಿಲು ಬಡಿದಂತಾಗಿ ಗಾಸಿಕೊಂಡು, ಅಪಮಾನದಿಂದ ತಲೆಯನ್ನು ತಗ್ಗಿಸಿ; **ಅರಿಭೂಪಾಲರನ್ ಇಕ್ಕಿ ಗೆಲ್ದ ಒಸಗೆಯಿಮ್ ತೂರ್ಯತ್ರಯಮ್ ಪೊಣ್ಮೆ**=ಹಗೆಗಳಾದ ರಾಜರನ್ನು ಕೊಂದು ಜಯದ ಉತ್ಸವದ ವಾದ್ಯಗಳ ದನಿಯು ಹೊರಹೊಮ್ಮುತ್ತಿರಲು;

**ಸೋದರರುಮ್ ಮಕ್ಕಳುಮ್ ಆಪ್ತರುಮ್ ಬೆರಸು ಬಂದು**=ತಮ್ಮಂದಿರು, ಮಕ್ಕಳು ಮತ್ತು ಆತ್ಮೀಯರ ಜತೆಗೂಡಿ ಬಂದು; **ಆನಂದದಿಮ್ ಮದ್ಗುರುಗಳಮ್ ಕಾಣ್ಬೆನ್ ಎಂದಿರಲ್**=ಆನಂದದಿಂದ ನನ್ನ ಗುರುಹಿರಿಯರನ್ನು ನೋಡುತ್ತೇನೆ ಎಂದುಕೊಂಡಿರಲು; ವಿಧಾತ್ರ=ಬ್ರಹ್ಮನೆಂಬ ದೇವರು; ಉದಶ್ರು=ಉಕ್ಕಿ ಹರಿಯುತ್ತಿರುವ ಕಣ್ಣೀರು; ಉದಶ್ರುಮುಖರ್=ಕಣ್ಣೀರಿನ ಕೋಡಿಯಿಂದ ಕೂಡಿದ ಮೊಗವನ್ನುಳ್ಳವರು; **ವಿಧಾತ್ರ, ದುಃಖಾತ್ಮರಮ್ ಶೋಕತಪ್ತರರಮ್ ಮೆಯ್ಯೊಳೆ ಬೀಳ್ವ ಉದಶ್ರುಮುಖರಮ್ ಕಾಣ್ಬಂತುಟಮ್ ಮಾಡಿದಯ್**=ಎಲೆ ಬ್ರಹ್ಮನೇ, ಸಂಕಟಕ್ಕೆ ಒಳಗಾದವರನ್ನು ಬಂಧುಬಾಂಧವರನ್ನು ಕಳೆದುಕೊಂಡು ಅಗಲಿಕೆಯ ತಾಪದಿಂದ ಗೋಳಾಡುವವರನ್ನು ಸಂಕಟವನ್ನು ತಡೆಯಲಾರದೆ ಕಣ್ಣೀರಿನ ಕೋಡಿಯಿಂದ ಕೂಡಿದ ಗುರುಹಿರಿಯರ ಮೊಗವನ್ನು ಕಾಣುವಂತೆ ಮಾಡಿದೆ;

**ಕಂದ, ನಿಜಾನುಜರ್ ಎಲ್ಲಿದರ್ ಎಂದು ಎನ್ನನ್ ಜನನಿ ಬಂದು ಬೆಸಗೊಂಡೊಡೆ="ಮಗನೇ, ನಿನ್ನ ಒಡಹುಟ್ಟಿದವರು ಎಲ್ಲಿದ್ದಾರೆ"** ಎಂದು ತಾಯಿಯು ಬಂದು ಕೇಳಿದರೆ; **ಅದೇನೆಂದು ಮರುಮಾತು ಕುಡುವೆನ್**= ಅದೇನೆಂದು ಉತ್ತರವನ್ನು ಕೊಡಲಿ; **ಕೌಂತೇಯರ್ ಕೊಂದರ್ ಎಂದು ಬಿನ್ನೈಸುವೆನೋ**=ಪಾಂಡವರು ಕೊಂದರು ಎಂದು ಹೇಳಲೇನು; ಶೋಕಮ್ ಮಿಗೆ=ಎಂದು ಹೇಳುತ್ತಿದ್ದಂತೆಯೇ ಶೋಕವು ಹೆಚ್ಚಾಗಲು; **ವಿಗಳಿತ ವಿವೇಕನ್ ಅವಿರಳ ಬಾಷ್ಪೋದ್ರೇಕನ್ ಫಣಿರಾಜಪತಾಕನ್**=ಸಂಕಟದ ತೀವ್ರತೆಯಲ್ಲಿ ಅರಿವನ್ನು ಕಳೆದುಕೊಂಡವನು ಒಂದೇ ಸಮನೆ ಅಳುತ್ತಿರುವವನು ಆದ ದುರ್ಯೋದನನು; **ಹಾ ದುಶ್ಶಾಸನ... ಹಾ ಕರ್ಣ ಎನುತಮ್ ಅಂತೆ ಮೂರ್ಛೆಗೆ ಸಂದನ್**=ಹಾ ದುಶ್ಶಾಸನ ಹಾ ಕರ್ಣ ಎಂದು ಪ್ರಲಾಪಿಸುತ್ತ ಪ್ರಜ್ಞೆಯನ್ನು ಕಳೆದುಕೊಂಡು ಕೆಳಕ್ಕೆ ಉರುಳಿ ಬಿದ್ದನು;

❖

## ನೋಟ–೭

# ಧೃತರಾಷ್ಟ್ರನ ಕೋರಿಕೆ

ಪನ್ನಗ=ಹಾವು; ಪತಾಕೆ=ಬಾವುಟ; ಪನ್ನಗಪತಾಕ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳ ದುರ್ಯೋಧನ; **ಅಂತು ಮೂರ್ಛಾ ಪ್ರಸಂಗನಾದ ಪನ್ನಗಪತಾಕಂಗೆ**=ಆ ರೀತಿ ಪ್ರಜ್ಞೆ ತಪ್ಪಿ ಬಿದ್ದಿದ್ದ ದುರ್ಯೋಧನನಿಗೆ; ಶಿಶಿರ+ಉಪಚಾರ; ಶಿಶಿರ=ತಂಪಾದ/ತಂಪಾಗಿರುವ; ಇರವು=ಇರುವಿಕೆ; ಪರಿಜನ=ಸೇವಕರು/ಪರಿವಾರದವರು; **ಶಿಶಿರೋಪಚಾರ ಕ್ರಿಯೆಗಳಮ್ ಮಾಳ್ಪ ಸಂಜಯನ ಇರವಮ್ ತತ್ ಪರಿಜನಮ್ ಕಂಡು ಪೇಳೆ**=ತಣ್ಣನೆಯ ನೀರನ್ನು ಚಿಮುಕಿಸಿ, ಪ್ರಜ್ಞೆಯು ಮರುಕಳಿಸುವಂತೆ ಉಪಚಾರವನ್ನು ಮಾಡುತ್ತಿರುವ ಸಂಜಯನ ಇರುವಿಕೆಯನ್ನು ಕಂಡು, ರಾಜ ಪರಿವಾರದವರು ಧೃತರಾಷ್ಟ್ರ ಮತ್ತು ಗಾಂಧಾರಿಗೆ ಹೇಳಲು; ಅಳ್ಕು=ಹೆದರು; ಬಳ್ಕು=ಬಾಗು/ಬಗ್ಗು; ನನೆಕೊನೆವೋಗು=ಮಯ್ ನವಿರೇಳುವುದು;

**ಗಾಂಧಾರಿ ಮನದೊಳ್ ಅಳ್ಕಿ ಬಳ್ಕಿ ನನೆಕೊನೆವೋಗಿ**=ಗಾಂಧಾರಿಯು ಮನದಲ್ಲಿ ಉಂಟಾದ ಹೆದರಿಕೆಯಿಂದ ನಡುಗುತ್ತ ಮಯ್ ನವಿರೆದ್ದು; ಮೃಗಧರ=ಚಂದ್ರ; ವಲ್ಲಿ=ಬಳ್ಳಿ; **ಮಗನೆ ಮೃಗಧರಕುಲ ಲಕ್ಷ್ಮೀವಲ್ಲಿಗೆ ಪೆರರಾರ್**= ಮಗನೇ, ಚಂದ್ರವಂಶದ ರಾಜ್ಯಸಂಪತ್ತೆಂಬ ಬಳ್ಳಿಗೆ ಇನ್ನು ಯಾರಿದ್ದಾರೆ; ಮುನ್+ಅಡರ್ಪು; ಅಡರ್ಪು=ಆಸರೆ/ಆಧಾರ/ಊರೆ; **ನೀನೆ ಮುನ್ನಡರ್ಪು ಎನಲ್ ಇರ್ದಯ್**=ನೀನೇ ಆಸರೆ ಎನ್ನುವಂತೆ ಇದ್ದೆ; ಭೀಮ+ಉರಗ= ಭಯಂಕರವಾದ ಸರ್ಪ; ಉರಗಪತಾಕ=ದುರ್ಯೋಧನ; **ಲಯಕಾಲ ಭೀಮೋರಗನ್ ಉರಗಪತಾಕ ನಿನ್ನುಮನ್ ನುಂಗಿದನೇ**=ಪ್ರಳಯಕಾಲದ

ಭಯಂಕರ ಸರ್ಪದಂತಿರುವ ಭೀಮನು ಉರಗಪತಾಕನಾದ ನಿನ್ನನ್ನೂ ಬಲಿ ತೆಗೆದುಕೊಂಡನೇ; ಯಷ್ಟಿ=ಕೋಲು; ಅಂಧಯಷ್ಟಿ=ಕುರುಡರು ನಡೆಯುವುದಕ್ಕೆ ಆಸರೆಯಾಗಿರುವ ಕೋಲು;

**ಎಮಗೆ ಅಂಧಯಷ್ಟಿಯಾಗಿರ್ದ ಮಗನೆ**=ಕುರುಡರಾದ ನಮ್ಮ ಪಾಲಿಗೆ ನೀನು ಆಸರೆಯ ಕೋಲಾಗಿದ್ದ; **ನೀನ್ ಉಳ್ಳೊಡೆ ಎಲ್ಲಮ್ ಒಳವು ಎಂದಿರೆ**=ನೀನು ಇದ್ದರೆ ನಮ್ಮ ಪಾಲಿಗೆ ಎಲ್ಲವೂ ಇದೆ ಎಂದುಕೊಂಡಿದ್ದರೆ; ನಿನ್ನುಮನ್ ಇರಿಸದೆ=ನಿನ್ನನ್ನು ಜೀವಂತವಾಗಿರಲು ಬಿಡದೆ; ಅನಿಮಿತ್ತ=ವಿನಾಕಾರಣ/ ಕಾರಣವೇ ಇಲ್ಲದೆ; ರಿಪು=ಶತ್ರು; ಪಾಶಪಾಣಿ=ಸಾವಿನ ಕುಣಿಕೆಯನ್ನು ಹಿಡಿದಿರುವವನು/ಯಮ; **ಕುರುವಂಶ ಅನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ**=ಕುರುವಂಶಕ್ಕೆ ವಿನಾಕಾರಣ ಹಗೆಯಾಗಿ ಯಮನಂತಿರುವ ಭೀಮನು ನಿನ್ನನ್ನು ಬಲಿತೆಗೆದುಕೊಂಡನೇ; ತನ್ನ ಮಗ ದುರ್ಯೋಧನನು ಚಿಕ್ಕಂದಿನಿಂದಲೂ ಮಾಡುತ್ತಿರುವ ದಾಯಾದಿ ಹಗೆತನದಿಂದ ಭೀಮನು ಕುರುಕುಲಕ್ಕೆ ಶತ್ರುವಾಗಿದ್ದಾನೆ ಎಂಬ ವಾಸ್ತವದ ಅರಿವು ಗಾಂಧಾರಿಗೆ ಇದ್ದರೂ, ಹೆತ್ತತಾಯಿಯ ಕರುಳು ತನ್ನ ಮಗನ ತಪ್ಪನ್ನು ಮುಚ್ಚಿಕೊಂಡು, ಭೀಮನನ್ನೇ ನಿಂದಿಸುತ್ತಿದೆ; ತಿಲಕ=ಹಣೆಯ ಬೊಟ್ಟು/ಉತ್ತಮ ವ್ಯಕ್ತಿ;

**ಕುರುಕುಲತಿಲಕಾ, ಗುರುಚರಣಂಗಳ್ಗೆ ಎರಗದೆ**= ಕುರುವಂಶಕ್ಕೆ ತಿಲಕಪ್ರಾಯ ನಾಗಿರುವ ದುರ್ಯೋಧನನೇ, ಗುರುಹಿರಿಯರಿಗೆ ನಮಸ್ಕಾರವನ್ನು ಮಾಡದೆ; **ಪರಕೆಯನ್ ಆದರದಿನ್ ಆಂತುಕೊಳ್ಳದೆ**=ಗುರುಹಿರಿಯರ ತಂದೆತಾಯಿಯ ಆಶೀರ್ವಾದವನ್ನು ಪ್ರೀತಿಯಿಂದ ಪಡೆದುಕೊಳ್ಳದೆ; **ಮೋನಮ್ ಬೆರಸಿರ್ಪುದು ನಿನಗೆ ಉಚಿತಮೆ**=ಮಾತನಾಡದೆ ಸುಮ್ಮನಿರುವುದು ನಿನಗೆ ಸರಿಯೇ; **ಗುರು ಕುರುನರೇಂದ್ರ, ವಿನಯಮನ್ ಏಕೆ ಮರೆದೆ**=ಕುರುಕುಲದ ಚಕ್ರವರ್ತಿಯೇ, ಗುರುಹಿರಿಯರನ್ನು ಮತ್ತು ತಂದೆತಾಯಿಯನ್ನು ಕಂಡಕೂಡಲೇ ಅವರಿಗೆ ತೋರಿಸಬೇಕಾದ ಒಲವು ನಲಿವಿನ ನಡೆನುಡಿಯನ್ನೇಕೆ ಮರೆತೆ; ದುಶ್ಶಾಸನ–ದುರ್ಮರ್ಷಣ–ದುಷ್ಕರ್ಣ=ಈ ಮೂರು ಮಂದಿಯು ಗಾಂಧಾರಿ ಮತ್ತು ಧೃತರಾಷ್ಟ್ರನ ಮಕ್ಕಳು; ಮಡಿದ ಈ ದುಶ್ಶಾಸನನ್ ಏನ್ ನುಡಿಯಿಸುವನೊ= ಕುರುಕ್ಷೇತ್ರ ರಣರಂಗದಲ್ಲಿ ಈಗಾಗಲೇ ಸಾವನ್ನಪ್ಪಿರುವ ದುಶ್ಶಾಸನನು ನಮ್ಮನ್ನು ಮಾತನಾಡಿಸುವನೇನು;

**ದುರ್ಮರ್ಷಣನ್ ಏನ್ ನುಡಿಯಿಸುವನೊ**=ದುರ್ಮರ್ಷಣನು ನಮ್ಮನ್ನು ಮಾತನಾಡಿಸುವನೋ; **ದುಷ್ಕರ್ಣನ್ ನುಡಿಯಿಸುವನೊ**=ದುಷ್ಕರ್ಣನು ನಮ್ಮನ್ನು ಮಾತನಾಡಿಸುವನೋ; **ನೀನುಮ್ ಉಸಿರದಿರ್ಪುದೆ ಮಗನೇ ಎಂದು ಗಾಂಧಾರಿ**

**ವಿಪ್ರಲಾಪಮ್ ಗೆಯ್ಯೆ**=ನೀನೂ ಕೂಡ ಮಾತನಾಡದೆ ಸುಮ್ಮನಿರುವುದೇ ಮಗನೇ ಎಂದು ಗಾಂಧಾರಿಯು ಹೆತ್ತಕರುಳಿನ ಸಂಕಟದಿಂದ ಗೋಳಾಡುತ್ತಿರಲು; **ಧೃತರಾಷ್ಟ್ರನ್ ತನ್ನ ನಂದನನ ಕಾಲ ಮೇಲೆ ಕವಿದು ಬಿಳ್ದು**=ತಂದೆಯಾದ ಧೃತರಾಷ್ಟ್ರನು ತನ್ನ ಮಗನಾದ ದುರ್ಯೋಧನನ ಕಾಲ ಬುಡದ ಮೇಲೆ ಬಿದ್ದು; ಚೂಡಾಮಣಿ=ತಲೆಯಲ್ಲಿ ತೊಡುವ ರತ್ನದ ಒಡವೆ. ಉತ್ತಮ ವ್ಯಕ್ತಿ ಎಂಬುದು ರೂಪಕದ ತಿರುಳು; **ಹಾ ಕುರುಕುಲ ಚೂಡಾಮಣಿ. ಹಾ ಕುರುಕುಲ ಚಕ್ರವರ್ತಿ... ಹಾ ಸಕಲ ಧರಿತ್ರೀಕಾಂತ**=ಹಾ ಕುರುಕುಲ ಚೂಡಾಮಣಿ ಹಾ ಕುರುಕುಲ ಚಕ್ರವರ್ತಿ ಹಾ ಇಡೀ ಭೂಮಂಡಳದ ಒಡೆಯನೇ; ಮಾಯ್= ಕೆಟ್ಟತನವನ್ನು ಹೊಂದಿರು; ವಿಧಾತ್ರ=ಬ್ರಹ್ಮ; ಕಾಯ್=ಕೆರಳು/ಮುನಿದು; ಸರ=ದನಿ;

**ಮಾಯ್ದ ವಿಧಾತ್ರನ್ ಕಾಯ್ದು ನಿನ್ನುಮನ್ ಪರಲೋಕಕ್ಕೆ ಅಟ್ಟಿದನೆ ಎಂದು ಕರುಣಾಕ್ರಂದನಮ್ ಗೆಯ್ದ ಗುರುಜನಂಗಳ ಸರಮಮ್ ಸಂಜಯನ್ ಮಾಣಿಸಿ**= ಕ್ರೂರಿಯಾದ ಬ್ರಹ್ಮನು ಕೋಪಗೊಂಡು ನಿನ್ನನ್ನೂ ಪರಲೋಕಕ್ಕೆ ಕಳುಹಿಸಿದನೇ ಎಂದು ಕರುಳನ್ನು ಹಿಂಡುವಂತೆ ಗೋಳಾಡುತ್ತಿರುವ ಗುರುಹಿರಿಯರ ಸಂಕಟದ ದನಿಯನ್ನು ಆಲಿಸಿದ ಸಂಜಯನು ಅವರನ್ನು ಸುಮ್ಮನಿರುವಂತೆ ಸೂಚಿಸಿ, ದುರ್ಯೋಧನನು ಪ್ರಜ್ಞೆ ತಪ್ಪಿರುವುದಕ್ಕೆ ಕಾರಣವೇನೆಂಬುದನ್ನು ಹೇಳುತ್ತಾನೆ; **ಕರ್ಣ ದುಶ್ಶಾಸನಾದಿಗಳ ಸಾವಿನೊಳ್ ಶೋಕೋದ್ರೇಕದಿಮ್ ಮೂರ್ಛಾಗತನಾಗಿರ್ದಪನ್**=ಕರ್ಣ, ದುಶ್ಶಾಸನ ಮತ್ತು ಇತರರ ಸಾವಿನಿಂದ ಉಂಟಾದ ಸಂಕಟವನ್ನು ತಡೆಯಲಾರದೆ ದುರ್ಯೋಧನನು ಪ್ರಜ್ಞೆ ತಪ್ಪಿದ್ದಾನೆ; **ಈಗಳೆ ಚೇತರಿಸುಗುಮ್**=ಇನ್ನೇನು ಕೆಲವೇ ಗಳಿಗೆಯಲ್ಲಿ ಚೇತರಿಸಿಕೊಳ್ಳುತ್ತಾನೆ; ಅನ್ನೆಗಮ್ ವಿಪ್ರಲಾಪಮನ್ ಉಪಸಂಹರಿಪುದು ಎನೆ=ಅಲ್ಲಿಯವರೆಗೂ ಈ ರೀತಿ ಗೋಳಾಡುವುದನ್ನು ನಿಲ್ಲಿಸಿರಿ ಎಂದು ಹೇಳಲು; **ಸಮಾಹಿತ ಅಂತಃಕರಣರುಮಾಗಿ**= ಅಳುತ್ತಿದ್ದವರೆಲ್ಲರೂ ಈಗ ಸಮಾಧಾನ ಚಿತ್ತರಾಗಿ;

**ನಿಜ ಗುರುಗಳ ನಯನಾಂಬು ತಳಿವ ಜಲಮಾಗಿರೆ**=ತಂದೆತಾಯಿಯ ಕಣ್ಣು ಗಳಿಂದ ಹರಿಯುತ್ತಿರುವ ಕಣ್ಣೀರು ದುರ್ಯೋಧನನ ಮಯ್ ಮೇಲೆ ಚಿಮುಕಿಸುತ್ತಿರುವ ನೀರಾಗಿರಲು; **ತದ್ಗುರು ಜನ ದೀರ್ಘ ಉಚ್ಛ್ವಾಸಮೆ ಪರಿವೀಜನಮಾಗೆ**=ತಂದೆತಾಯಿಯ ಸಂಕಟದ ನಿಟ್ಟುಸಿರು ಬೀಸಣಿಗೆಯ ಗಾಳಿಯಾಗಿರಲು; **ಕುರುಕುಲ ಚೂಡಾಮಣಿ ಮೂರ್ಛೆಯಿಂದ ಎಳ್ಚತ್ತನ್**=ಪ್ರಜ್ಞೆ ತಪ್ಪಿದ್ದ ದುರ್ಯೋಧನನು ಎಚ್ಚರಗೊಂಡನು; **ಅಂತು ಮೂರ್ಛೆಯಿಂದ ಎಳ್ಚತ್ತು**= ಆ ರೀತಿ ಪ್ರಜ್ಞೆಯನ್ನು ಕಳೆದುಕೊಂಡಿದ್ದ ದುರ್ಯೋಧನ ಎಚ್ಚರಗೊಂಡು; **ನಿಜ ಜನನೀ ಜನಕರಮ್ ಕಂಡು**=ತನ್ನ ತಾಯಿತಂದೆಯನ್ನು ನೋಡಿ; **ಲಜ್ಜಾಭರದಿಮ್**

**ಶಿರಮನ್ ಆನತಮ್ ಮಾಡೆ**=ತೀವ್ರವಾದ ನಾಚಿಕೆಯಿಂದ ತಲೆಯನ್ನು ತಗ್ಗಿಸಲು; **ಸಂಜಯನ್ ಧೃತರಾಷ್ಟ್ರಂಗಮ್ ಗಾಂಧಾರಿಗಮ್**=ಸಂಜಯನು ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಕುರಿತು; **ಅವಧರಿಸುವುದು, ನಿಜ ತನೂಜನಪ್ಪ ರಾಜರಾಜನ್ ನಿಮಗೆ ವಿನಯ ವಿನಮಿತ ಉತ್ತಮಾಂಗನಾದನ್ ಎನೆ**=ಕೇಳಿರಿ, ನಿಮ್ಮ ಮಗನಾದ ದುರ್ಯೋಧನನು ನಿಮಗೆ ವಿನಯದಿಂದ ತಲೆಬಾಗಿ ನಮಿಸುತ್ತಿದ್ದಾನೆ ಎಂದು ಹೇಳಲು;

**ತದೀಯವಚನಾಮೃತ ಸ್ಪರ್ಶನದಿಂದೆ ಆನಂದಿತಚಿತ್ತರಾಗಿ**=ಸಂಜಯನ ನುಡಿಗಳನ್ನು ಕೇಳಿ ಧೃತರಾಷ್ಟ್ರ–ಗಾಂಧಾರಿಯರ ಪಾಲಿಗೆ ಅಮೃತ ದೊರಕಿದಂತಾಗಿ ಆನಂದಗೊಂಡು; **ತಡವರಿಸಿಯುಮ್ ತೆಬ್ಬರಿಸಿಯುಮ್ ತೆಗೆದಪ್ಪಿಯುಮ್**=ಪಾದಗಳ ಮೇಲೆ ತಲೆಯನ್ನಿಟ್ಟು ನಮಿಸುತ್ತಿರುವ ದುರ್ಯೋಧನನ್ನು ತಮ್ಮ ಕಯ್ಗಳಿಂದ ತಡಕಾಡುತ್ತ ಉತ್ಸಾಹದಿಂದ ಮುಟ್ಟಿಮುಟ್ಟಿ ನೋಡುತ್ತ… ಮೇಲಕ್ಕೆ ಏಳುತ್ತಿರುವ ದುರ್ಯೋಧನನನ್ನು ತಬ್ಬಿಕೊಂಡು; **ಮನಃಕ್ಷತ ಶರೀರನಮ್ ಪರಮಾಶೀರ್ವಚನ ಶತಸಹಸ್ರಂಗಳಿಮ್ ಪರಸಿ**=ಮಾನಸಿಕವಾಗಿ ಬಹುನೊಂದಿರುವ ದುರ್ಯೋಧನನನ್ನು ಒಳ್ಳೆಯ ಆಶೀರ್ವಾದದ ಸಾವಿರಾರು ನುಡಿಗಳಿಂದ ಹರಸಿ; **ಪುನಃ ಪುನರಾಲಿಂಗನಮ್ ಗೆಯ್ದು**=ಮತ್ತೆ ಮತ್ತೆ ತಬ್ಬಿಮುದ್ದಾಡುತ್ತಿದ್ದು; **ಕಿರಿದಾನುಮ್ ಬೇಗದಿಮ್ ವಿಗತಪರಿಜನಮ್ ಮಾಡಿ**=ಕೆಲವೇ ಸಮಯದಲ್ಲಿ ತಮ್ಮ ಉದ್ವೇಗವನ್ನು ಕಡಿಮೆಮಾಡಿಕೊಂಡು, ಮಗನ ಜತೆಯಲ್ಲಿ ಏಕಾಂತವಾಗಿ ಮಾತನಾಡಬೇಕೆಂದು ತಮ್ಮ ಜತೆಯಲ್ಲಿ ಬಂದಿದ್ದ ಪರಿವಾರದವರನ್ನು ದೂರ ಕಳುಹಿಸಿ;

**ಯಮಸುತನ್ ಇನ್ನುಮ್ ಎಮಗೆ ಇಂಬುಕೆಯ್ವನ್**=ಧರ್ಮರಾಯನು ಈಗಲೂ ನಮ್ಮೊಡನೆ ಪ್ರೀತಿಯಿಂದ ನಡೆದುಕೊಳ್ಳುತ್ತಾನೆ; **ಕಂದ, ಸಂಧಿಯಮ್ ಸಮಗೊಳಿಸಲ್ಕೆ ಒಡಂಬಡು**=ಕಂದ, ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ಒಪ್ಪಿಗೆಯನ್ನು ನೀಡು; **ಸಂಜಯನನ್ ಅಟ್ಟುವೆ**=ಸಂಜಯನನ್ನು ಧರ್ಮರಾಯನ ಬಳಿಗೆ ಸಂಧಾನಕ್ಕಾಗಿ ಕಳುಹಿಸುತ್ತೇನೆ; ಭೀಮನೊಳಾದ ಬದ್ಧವೈರಮನ್ ಉಳಿ=ಭೀಮನ ಜತೆಯಲ್ಲಿ ಹುಟ್ಟಿನಿಂದಲೇ ಹೊಂದಿರುವ ಹಗೆತನವನ್ನು ಬಿಡು; **ಸುತಸಹೋದರ ದುಃಖಮಮ್ ನೋಡದಿರ್**=ಕುರುಕ್ಷೇತ್ರ ರಣರಂಗದಲ್ಲಿ ಸತ್ತಿರುವ ನಿನ್ನ ಮಕ್ಕಳ ಮತ್ತು ತಮ್ಮಂದಿರ ಸಂಕಟವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಡ; **ಅವರ್ಗೆ ಅರ್ಧರಾಜ್ಯಮನ್ ಈವುದು ಎಂದು ಅಂಧನೃಪಾಲ ಪುತ್ರನನ್ ಕಾಲ್ವಿಡಿದು ಬೇಡಿದನ್**=ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡುವುದು ಎಂದು ತಂದೆಯಾದ ಧೃತರಾಷ್ಟ್ರನು ಮಗನಾದ ದುರ್ಯೋಧನನ ಕಾಲುಗಳನ್ನು ಹಿಡಿದುಕೊಂಡು ಬೇಡಿದನು;

**ಅಂತು ಕುರು ನರೇಂದ್ರನನ್ ಅಂಥ ನರೇಂದ್ರನ್ ಅಭ್ಯರ್ಥಿಸಿ**=ಆ ರೀತಿ ದುರ್ಯೋಧನನನ್ನು ಧೃತರಾಷ್ಟ್ರನು ಕಳಕಳಿಯಿಂದ ಕೇಳಿಕೊಂಡು; **ಶ್ರೀವನಿತೆಗೆ ನಿಜವಿಜಯ ಶ್ರೀವನಿತೆಯೆ ಸವತಿಯಾಗೆ**=ರಾಜ್ಯಲಕ್ಷ್ಮಿಗೆ ತನ್ನ ಪರಾಕ್ರಮದಿಂದ ವಶಪಡಿಸಿಕೊಂಡ ವಿಜಯಲಕ್ಷ್ಮಿಯೇ ಸವತಿಯಾಗಿರಲು; ಭೀಮನೊಡನೆ ಇಬ್ಬರೂ ಲಕ್ಷ್ಮಿಯರೂ ಇದ್ದಾರೆ ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ; **ರಿಪುನೃಪರಮ್ ಶೌರ್ಯಾವಷ್ಟಂಭದೆ ಗೆಲ್ದ ಸಾಹಸಭೀಮನ್**=ಹಗೆಗಳಾದ ರಾಜರನ್ನು ತನ್ನ ಶೂರತನದ ಉನ್ನತಿಯಿಂದ ಗೆದ್ದಿರುವ ಸಾಹಸ ಭೀಮನು; **ಜಯಾವಸಥನ್ ಅಸಾಧ್ಯನಲ್ತೆ**=ಜಯಕ್ಕೆ ನೆಲೆಯಾದ ಭೀಮನನ್ನು ಸೋಲಿಸಲು ಯಾರಿಂದಲೂ ಆಗದಲ್ಲವೇ; **ಅದರಿನ್ ಆತನೊಳಪ್ಪ ಸಮರಾನುಬಂಧಮಮ್ ಮಾಣ್ಬುದು**=ಆದ್ದರಿಂದ ಆತನೊಡನೆ ಯುದ್ಧದಲ್ಲಿ ತೊಡಗುವ ಉದ್ದೇಶವನ್ನು ಬಿಡುವುದು;

**ಎನ್ನ ಎಂಬುದನ್ ಇಂಬುಕೆಯ್ವುದು ಎಂದ ಧೃತರಾಷ್ಟ್ರನ ನುಡಿಯಮ್**=ನಾನು ಹೇಳಿದ್ದನ್ನು ನೀನು ನಡೆಸಿಕೊಡುವುದು ಎಂದ ಧೃತರಾಷ್ಟ್ರನ ಮಾತುಗಳನ್ನು; **ಗಾಂಧಾರಿ ಸಮಭ್ಯರ್ಥಿಸಿ ತಾನುಮ್ ಪ್ರಾರ್ಥಿಸಿ**=ಗಾಂಧಾರಿಯು ಬೆಂಬಲಿಸುತ್ತ, ತಾನೂ ಈ ರೀತಿ ಮಗನನ್ನು ಕೋರಿಕೊಂಡಳು; **ಮಗನೇ ಪರಿಣತ ವಯಸರೆಮ್ ಇರ್ಕಣ್ ಕುರುಡರೆಮ್ ಎಮಗೆ ಇಂಬುಕೆಯ್ವುದು ಉಚಿತಮ್**=ಮಗನೇ ನಮ್ಮಿಬ್ಬರಿಗೂ ವಯಸ್ಸಾಗಿದೆ ನಾವು ಎರಡು ಕಣ್ಣುಗಳು ಕಾಣದ ಕುರುಡರು ಇಂತಹ ಸ್ಥಿತಿಯಲ್ಲಿರುವ ನಮ್ಮ ಮಾತನ್ನು ನೀನು ನಡೆಸಿಕೊಡುವುದು ಎಲ್ಲ ರೀತಿಯಿಂದಲೂ ಸರಿಯಾದುದು; **ನಿನ್ನ ಈ ಗುರು ನುಡಿದ ನುಡಿಗೆ ಒಡಂಬಡು**= ಹಿರಿಯನಾದ ನಿನ್ನ ತಂದೆಯ ಮಾತಿಗೆ ಒಪ್ಪಿಗೆಯನ್ನು ನೀಡು; **ಗುರುವಚನಮ್ ಅಲಂಘನೀಯಮ್ ಎಂಬುದು**=ಗುರುಹಿರಿಯರ ಹಿತನುಡಿಯನ್ನು ಎಂದಿಗೂ ಮೀರಬಾರದು ಎನ್ನುತ್ತಾರೆ;

**ಮಗನೆ, ಸಮರ ವ್ಯಾಪಾರಮ್ ಮಾಣ್ದು**=ಮಗನೆ, ಯುದ್ಧವನ್ನು ಮಾಡಿ ಹಗೆಗಳನ್ನು ಕೊಲ್ಲುತ್ತೇನೆ ಎಂಬ ನಿನ್ನ ಉದ್ದೇಶವನ್ನು ತೊರೆದು; ಶಿಬಿರ=ಸೇನಾ ಪಡೆಗಳು ಇಳಿದುಕೊಳ್ಳುವುದಕ್ಕೆ ತಾತ್ಕಾಲಿಕವಾಗಿ ಹಾಕಿರುವ ಡೇರೆಗಳು ಇರುವ ನೆಲೆ; **ನಿಜಶಿಬಿರದತ್ತ ಬಿಜಯಂಗೆಯ್**=ರಣರಂಗದ ಕಡೆಗೆ ಹೋಗದೆ, ನಿನ್ನ ಬೀಡಿನತ್ತ ಬರುವುದು; **ಸತ್ತ ಮಗಂದಿರ್ ಸತ್ತರ್... ಅವರನ್ ಇನ್ ತಂದಪೆವೇ**= ರಣರಂಗದಲ್ಲಿ ಸಾವನ್ನಪ್ಪಿರುವ ನಮ್ಮ ನೂರು ಮಕ್ಕಳು ಈಗಾಗಲೇ ನಮ್ಮನ್ನು ಬಿಟ್ಟುಹೋಗಿದ್ದಾರೆ. ಮತ್ತೆ ಅವರನ್ನು ಕರೆತರಲು ನಮಗೆ ಆಗುತ್ತದೆಯೇ; ನೀನ್ **ಎಮಗೆ ಉಳ್ಳೊಡೆ ಸಾಲ್ವುದು ಎಂದು ಗಾಂಧಾರಿ ತನ್ನ ಮತ್ತಿನ ಮಕ್ಕಳಮ್ ನೆನೆದು**

**ದುಃಖಂಗೆಯ್ಯೆ**=ನೀನು ನಮ್ಮ ಪಾಲಿಗೆ ಇದ್ದರೆ ಸಾಕು ಎಂದು ಗಾಂಧಾರಿಯು ತನ್ನ ಉಳಿದ ಮಕ್ಕಳನ್ನು ಅಂದರೆ ಸಾವನ್ನಪ್ಪಿರುವ ಮಕ್ಕಳನ್ನು ನೆನೆದು ಸಂಕಟಪಡುತ್ತಿರಲು;

**ಸಂಜಯನ್ ಜಡಿದು**=ಸಂಜಯನ್ನು ಗೋಳಾಡುತ್ತಿರುವ ಗಾಂಧಾರಿಯರನ್ನು ಗದರಿಸಿ; **ಬಂದುಮ್ ಪ್ರಿಯಸುತನನ್ ಸಂತಯಿಸುವುದು... ಅದುಗೆಟ್ಟು ನೀನೆ ಗಳ ಶೋಕಾಕ್ರಾಂತೆಯುಮಾಗಿ ಶೋಕಿಸಲ್ ಅಂಧನೃಪತಿಯನ್ ನೃಪತಿಯುಮನ್ ಸಂತಯಿಸುವರಾರ್ ಎಂಬುದುಮ್**=ಮಗನನ್ನು ಹುಡುಕಿಕೊಂಡು ಬಂದಿರುವ ನೀನು ನಿನ್ನ ಪ್ರೀತಿಯ ಮಗನನ್ನು ಸಮಾಧಾನಗೊಳಿಸುವುದನ್ನು ಬಿಟ್ಟು ನೀನೇ ಈ ರೀತಿ ಸಂಕಟಕ್ಕೆ ಒಳಗಾಗಿ ಗೋಳಾಡತೊಡಗಿದರೆ ಧೃತರಾಷ್ಟ್ರನನ್ನು ಮತ್ತು ನಿನ್ನ ಮಗನನ್ನು ಸಮಾಧಾನಪಡಿಸುವವರು ಯಾರು ಎಂದು ಸಂಜಯನು ಗಾಂಧಾರಿಗೆ ಹೇಳಲು; **ವೃದ್ಧರಾಜನ್ ಕುರುರಾಜಂಗೆ ಅಭಿಮುಖನಾಗಿ**=ಧೃತರಾಷ್ಟ್ರನು ದುರ್ಯೋಧನನ ಮುಂದೆ ಬಂದು ನಿಂತು; **ವೀರಶತ ಜನನಿಗೆ ಈ ಗಾಂಧಾರಿಗೆ**= ವೀರರಾದ ನೂರು ಮಕ್ಕಳನ್ನು ಹೆತ್ತ ಈ ಗಾಂಧಾರಿಗೆ;

**ಈಗಳ್ ಕೌರವಪತಿ ದುಃಖ ಮಹಾಭಾರಮನ್ ಆಂತ ಆಯಾಸಕ್ಕೆ ಗುರಿಯಾದುದರಿಮ್**=ಈಗ ದುರ್ಯೋಧನನು ಕುರುಕ್ಷೇತ್ರ ರಣರಂಗದಲ್ಲಿ ತನ್ನ ಮಕ್ಕಳನ್ನು ಮತ್ತು ನೂರು ಮಂದಿ ತಮ್ಮಂದಿರನ್ನು ಕಳೆದುಕೊಂಡಿದ್ದರಿಂದ ಉಂಟಾದ ಸಂಕಟದ ದೊಡ್ಡಹೊರೆಯನ್ನು ಹೊತ್ತ ಬಳಲಿಕೆಗೆ ಗುರಿಯಾದುದರಿಂದ; **ಶತದುಃಖ ಜನನಿ ಪೆಸರಾಯ್ತು**=ನೂರು ದುಕ್ಕವನ್ನು ಹೆತ್ತತಾಯಿ ಎಂಬ ಹೆಸರಾಯಿತು; ಈಗ ಗಾಂಧಾರಿಯು **"ವೀರಶತ ಜನನಿಯಲ್ಲ; ಶತದುಃಖ ಜನನಿ"** ಎಂಬ ಹೆಸರನ್ನು ಪಡೆದಳು; **ಧಾತ್ರಿವಲಭ ಧರ್ಮಜನ್ ಭವತ್ ಅನುಜಕ್ಷಯಮನ್ ಕಂಡು**=ಧರ್ಮರಾಯನು ನಿನ್ನ ತಮ್ಮಂದಿರ ಸಾವನ್ನು ಕಂಡು; **ಶೋಕಾನಿವಹಮ್ ಸಂಧಿ ಮಾಡಲ್ ಬಗೆವನ್**=ಯುದ್ಧದಿಂದ ಉಂಟಾಗುತ್ತಿರುವ ಸಾವು ನೋವುಗಳನ್ನು ಗಮನಿಸಿ, ಸಂಧಿಯನ್ನು ಮಾಡಿಕೊಳ್ಳಲು ಆಲೋಚಿಸುತ್ತಿದ್ದಾನೆ;

**ಅವನಾ ಕೃತಕ ಪ್ರತಿಜ್ಞೆಯಮ್ ಕೇಳ್ದರಿಯಾ**=ಕುರುಕ್ಷೇತ್ರ ಯುದ್ಧಕ್ಕೆ ಮುನ್ನವೇ ಧರ್ಮರಾಯನು ಮಾಡಿರುವ ಪ್ರತಿಜ್ಞೆಯನ್ನು ನೀನು ಕೇಳಿ ತಿಳಿದಿಲ್ಲವೇ; **ಸಮರದೊಳ್ ಸಮವಾಯಮ್**=ಯುದ್ಧದಲ್ಲಿ ಸೋದರರಾದ ನಾವು ಅಯ್ವರು ಜೊತೆಯಲ್ಲಿಯೇ ಇರಬೇಕು; **ಅದೃಷ್ಟವಶದಿಮ್ ನಾಲ್ವರ್ ಅನುಜರೊಳ್ ಒರ್ವನ್ ಸಾಯೆ**=ಜೀವನದಲ್ಲಿ ನಮ್ಮ ಹತೋಟಿಯನ್ನು ಮೀರಿ ಒಳಿತು ಕೆಡುಕು ಉಂಟಾಗುವಂತೆ ಯುದ್ಧದಲ್ಲಿ ನನ್ನ ತಮ್ಮಂದಿರಲ್ಲಿ ಒಬ್ಬನು ಸತ್ತರೆ; ಯಮಭರ=ಸಂಯಮಶೀಲ; ಅತೀತ=ಸತ್ತುಹೋದ/ಗತಿಸಿದ; **ಯಮಭರನ್**

**ಯಮನಂದನನ್ ಅತೀತನಪ್ಪನ್**=ಸಂಯಮಶೀಲನಾದ ಧರ್ಮರಾಯನು ಸಾವನ್ನಪ್ಪುತ್ತಾನೆ; **ಅದರಿಮ್ ಆ ನೃಪಂಗಮ್ ಜಯಮೇ**=ಆದ್ದರಿಂದ ಆ ಧರ್ಮರಾಯನಿಗೂ ಕುರುಕ್ಷೇತ್ರ ಯುದ್ಧದಲ್ಲಿ ತನಗೇ ಜಯ ದೊರಕುತ್ತದೆ ಎಂಬ ನಿಶ್ಚಯವಿಲ್ಲ. ಏಕೆಂದರೆ ಯುದ್ಧದಲ್ಲಿ ಎಂತಹ ವೀರನಿಗಾದರೂ ಆಪತ್ತು ಬರಬಹುದು;

**ಎಂದು ನುಡಿದ ನರೇಂದ್ರನ ನುಡಿಗೆ ಸಂಜಯನ್ ಒಡಂಬಟ್ಟು**=ಎಂದು ನುಡಿದ ಧೃತರಾಷ್ಟ್ರನ ಸಂಧಾನದ ಮಾತುಗಳಿಗೆ ಸಂಜಯನು ತನ್ನ ಸಹಮತವನ್ನು ವ್ಯಕ್ತಪಡಿಸುತ್ತ; ಉಪಪತ್ತಿ=ಒಂದು ಸಂಗತಿಯನ್ನು ನಿರೂಪಿಸುವುದಕ್ಕೆ ನೀಡುವ ಕಾರ್ಯಕಾರಣ ಸಂಬಂಧ/ಆಧಾರ; **ನೃಪ, ನಿನ್ನ ತಂದೆ ಎಂದುದನ್. ಉಪಪತ್ತಿಯುಕ್ತಮ್ ಇದಮ್ ಇನ್ ಕಯ್ಕೊಳ್ ಎನೆ**=ರಾಜನೇ, ನಿಮ್ಮ ತಂದೆ ಹೇಳಿರುವುದು ಸಕಾರಣವಾಗಿದೆ ಮತ್ತು ಯೋಗ್ಯವಾಗಿದೆ. ಇದನ್ನು ಇನ್ನು ನೀನು ಒಪ್ಪಿಕೊಂಡು, ಅದರಂತೆ ಸಂಧಾನವನ್ನು ಮಾಡಿಕೊಳ್ಳುವುದು ಎಂದು ಸಂಜಯನು ನುಡಿಯಲು; **ಭೂಮಿಪನ್**=ಆಗ ದುರ್ಯೋಧನನು ಸಂಧಾನದ ಪ್ರಸ್ತಾಪವನ್ನು ಮಾಡಿದ ಧೃತರಾಷ್ಟ್ರನಿಗೂ ಮತ್ತು ಸಂಜಯನಿಗೂ ಉತ್ತರವನ್ನು ನೀಡುವ ರೀತಿಯಲ್ಲಿ ಮಾತನಾಡತೊಡಗುತ್ತಾನೆ; ಪೂರ್ವಪಕ್ಷ=ತರ್ಕದಲ್ಲಿ ತೊಡಗಿ ಯಾವುದೇ ಒಂದು ವಿಚಾರವನ್ನು ಒಪ್ಪುವ ಇಲ್ಲವೇ ನಿರಾಕರಿಸುವ ಮಾತಿನ ಸನ್ನಿವೇಶದಲ್ಲಿ ಮೊದಲು ಮಂಡಿಸುವ ಸಂಗತಿ; ಸಿದ್ಧಾಂತ=ಮೊದಲು ಮಂಡಿಸಿದ ಸಂಗತಿಯನ್ನು ಆಧಾರ ಸಮೇತ ಒಪ್ಪಿ ಇಲ್ಲವೇ ನಿರಾಕರಿಸಿ, ಅಂತಿಮವಾಗಿ ತಳೆಯುವ ನಿಲುವು;

**ನಿಮ್ಮಯ ಪೂರ್ವಪಕ್ಷಮ್ ಎಮಗೆ ವಲಮ್ ಸಿದ್ಧಾಂತಮ್ ಆದುದೇ ಎಂದನ್**=ನೀವು ಹೇಳಿದ ಮೊದಲ ಸಂಗತಿಯೇ ನಮಗೆ ನಿಶ್ಚಯವಾಗಿಯೂ ಸಿದ್ಧಾಂತವಾಯಿತು ಎಂದು ನುಡಿದನು; **ತನ್ನ ಒಡವುಟ್ಟಿದರ್ ಪೆಸರ ನಾಲ್ವರೊಳ್ ಒರ್ವರುಮ್ ಇಲ್ಲದಿರ್ದೊಡಮ್ ಧರ್ಮತನೂಜನ್ ಅಗ್ನಿಗೆ ತನ್ನ ಅಸುವಮ್ ನಿವೇದಿಸುವನ್ ಎಂದೊಡೆ**=ತನ್ನ ಒಡಹುಟ್ಟಿದ ನಾಲ್ವರಲ್ಲಿ ಒಬ್ಬರು ರಣರಂಗದಲ್ಲಿ ಸಾವನ್ನಪ್ಪಿದರೂ ತನ್ನ ದೇಹವನ್ನು ಬೆಂಕಿಗೆ ಒಡ್ಡಿ ಪ್ರಾಣವನ್ನು ಬಿಡುತ್ತೇನೆ ಎಂದು ಧರ್ಮರಾಯನು ಪ್ರತಿಜ್ಞೆಯನ್ನು ಮಾಡಿರುವನು ಎಂದ ಮೇಲೆ; **ಆನ್ ಎನ್ನ ಒಡವುಟ್ಟಿದರ್ ಪೆಸರ ನೂರ್ವರೊಳ್ ಒರ್ವರುಮ್ ಇಲ್ಲ**=ನಾನು ನನ್ನ ಒಡಹುಟ್ಟಿದ ನೂರು ಮಂದಿ ತಮ್ಮಂದಿರಲ್ಲಿ ಒಬ್ಬನೂ ಇಲ್ಲದಿರುವಾಗ; **ಬಾಳ್ವೆನ್ ಎಂಬ ಎನ್ನ ಅಳಿಯಾಸೆಯಮ್ ಬಿಸುಟೆನ್**=ಜೀವಂತವಾಗಿರಬೇಕು ಎಂಬ ಸಣ್ಣ ಆಸೆಯೂ ನನಗಿಲ್ಲ;

**ಇನ್ ಅವರ್ ಆದುದನ್ ಆಗದಿರ್ಪೆನೇ**=ಇನ್ನು ನನ್ನ ತಮ್ಮಂದಿರೆಲ್ಲರೂ ಆದುದನ್ನು ನಾನು ಆಗಿದೆ ಇರುವೆನೆ/ನನ್ನ ತಮ್ಮಂದಿರಂತೆಯೇ ನಾನು ಕೂಡ ರಣರಂಗದಲ್ಲಿ ಹಗೆಗಳ ಎದುರು ಹೋರಾಡುತ್ತ ಸಾಯುತ್ತೇನೆ; **ಹಾ ಕರ್ಣಾ**=**ಹಾ ಕರ್ಣನೇ; ಫಲ್ಗುಣನನ್ ಸಾಧಿಸುವೆನ್**=ಅರ್ಜುನನನ್ನು ಸದೆಬಡಿಯುತ್ತೇನೆ; **ಸಾಧಿಸುವೆನ್ ಪವನಸುತನ ಬಸಿರಿಮ್ ದುಶ್ಶಾಸನ ತೆಗೆವೆನ್**=ಭೀಮನನ್ನು ಕೊಂದು ಅವನ ಹೊಟ್ಟೆಯಿಂದ ದುಶ್ಶಾಸನನನ್ನು ಹೊರತೆಗೆಯುತ್ತೇನೆ; ಭೀಮನು ದುಶ್ಶಾಸನನ ಕರುಳನ್ನು ಬಗೆದು, ರಕ್ತವನ್ನು ಕುಡಿದು, ಮಾಂಸವನ್ನು ತಿಂದಿದ್ದನು. ಈಗ ಅದೆಲ್ಲವನ್ನೂ ಕಕ್ಕಿಸುತ್ತೇನೆ; **ಬಳಿಕೆ ನಿರ್ದೋಷಿ ಯಮಜನೊಳ್ ಪುದುವಾಳ್ವೆನ್**=ಅನಂತರ ಯಾವ ತಪ್ಪನ್ನು ಮಾಡದ ಧರ್ಮರಾಯನೊಡನೆ ಕೂಡಿ ಬಾಳುತ್ತೇನೆ; **ಪಾಂಡುರಾಜನುಮ್ ನೀನುಮ್ ಧರೆಯಮ್ ಪಚ್ಚಾಳ್ದಿರ್**= ಪಾಂಡುರಾಜನು ಮತ್ತು ನೀನು ರಾಜ್ಯವನ್ನು ಪಾಲುಮಾಡಿಕೊಂಡು ಆಳ್ವಿಕೆಯನ್ನು ಮಾಡಿದಿರಿ;

**ಅದನೆ ಕೈತವದಿಂದೆ ಅಯ್ವರ ಕೆಯ್ಯೊಳ್ ಎಳೆದುಕೊಂಡು ಈ ಕುರುರಾಜನ್ ಮತ್ತಮ್ ಅವರ್ಗೆ ಪುದುವಿತ್ತಪನೇ** =ಆ ರಾಜ್ಯವನ್ನೇ ಪಗಡೆಯಾಟದ ಜೂಜಿನ ಪಂದ್ಯದಲ್ಲಿ ಅಯ್ದು ಮಂದಿ ಪಾಂಡವರ ಕಯ್ಯಿಂದ ಕಿತ್ತುಕೊಂಡು ಇಡೀ ಕುರುರಾಜ್ಯಕ್ಕೆ ಒಡೆಯನಾಗಿರುವ ನಾನು, ಮತ್ತೆ ಅವರಿಗೆ ನೀಡಿ, ಅವರೊಂದಿಗೆ ಹೊಂದಿಕೊಂಡು ಬಾಳುತ್ತೇನೆಯೇ; **ಆನ್ ಮಗನೆನ್ ಆಗೆ ಧರ್ಮಜನ್ ಏನ್ ಮಗನಲ್ಲನೆ**=ನಾನು ನಿಮಗೆ ಮಗನಾಗಿರುವಂತೆಯೇ ಧರ್ಮರಾಯನೇನು ನಿಮಗೆ ಮಗನಲ್ಲವೇ; **ಬಳಿಕ್ಕೆ ನೀಮುಮ್ ತಾಮುಮ್ ನಿಮ್ಮೊಳ್ ನೇರ್ಪಡುಗಿಡದೆ ಮುನ್ನಿನ ತೆರದೆ ಸುಖಮ್ ಬಾಳ್ವುದು**=ನನ್ನ ಕೊನೆಯಾದ ನಂತರ ನೀವು ಅವರು ನಿಮ್ಮನಿಮ್ಮಲ್ಲಿ ಸಾಮರಸ್ಯ ಕೆಡದಂತೆ ಮೊದಲು ಹೇಗೆ ಅಣ್ಣತಮ್ಮಂದಿರಾದ ನೀವು ಮತ್ತು ಪಾಂಡುರಾಜನು ಒಲವು ನಲಿವು ನೆಮ್ಮದಿಯಿಂದ ಬಾಳುತ್ತಿದ್ದಿರೋ ಅದೇ ರೀತಿ ಜತೆಗೂಡಿ ಸುಖದಿಂದ ಬಾಳುವುದು;

**ಆನ್ ಬೆಸಕೆಯ್ಯೆನ್**=ನೀವು ಹೇಳಿದಂತೆ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ; **ಬಿಡಿಮ್ ಎನ್ನನ್**=ನನ್ನ ಪಾಡಿಗೆ ನನ್ನನ್ನು ಬಿಡಿರಿ; **ಎಂದು ಮುಂದಿರ್ದು ಅಡಿಗೆರಗಿದ ಮಗನನ್ ಅಪ್ಪಿಕೊಂಡು**=ಎಂದು ಹೇಳಿ ಮುಂದೆ ಬಂದು ಪಾದಗಳಿಗೆ ನಮಿಸಿದ ಮಗನನ್ನು ತಬ್ಬಿಕೊಂಡು; **ಅಶ್ರುಜಲಮ್ ಗುಡುಗುಡನೆ ಸುರಿಯೆ**= ಕಣ್ಣೀರು ಒಂದೇ ಸಮನೆ ಸುರಿಯುತ್ತಿರಲು; **ನಾಲಗೆ ತಡತಡವರೆ**= ಮಾತನಾಡಲಾಗದೆ ನಾಲಗೆಯು ತೊದಲುತ್ತಿರಲು; **ಅಂಧನೃಪನ್ ಆ ನೃಪನನ್ ನುಡಿದನ್**=ಕುರುಡನಾದ ರಾಜ ಧೃತರಾಷ್ಟ್ರನು ದುರ್ಯೋಧನನಿಗೆ ಈ ರೀತಿ

ಹೇಳಿದನು; **ನೀನ್ ಎಂತುಮ್ ಎಮ್ಮ ಪೇಳ್ವುದಮ್ ಕೈಕೊಳ್ಳದೆ ಛಲಮನೆ ಕಯ್ ಕೊಂಡು ಪಾಂಡುನಂದನರೊಳ್ ಕಾದಿದಲ್ಲದೆ ಸಂಧಿಯನ್ ಒಡಂಬಡೆಯಪ್ಪಿನಮ್**=ನೀನು ಹೇಗಿದ್ದರೂ ನಾವು ಹೇಳುವುದನ್ನು ಒಪ್ಪಿಕೊಳ್ಳದೆ ಚಲವನ್ನೇ ಸಾಧಿಸಲು ಹಟತೊಟ್ಟು, ಪಾಂಡುವಿನ ಮಕ್ಕಳ ಜತೆಯಲ್ಲಿ ಕಾದಾಡುವುದಲ್ಲದೆ ಸಂಧಾನಕ್ಕೆ ಒಪ್ಪುತ್ತಿಲ್ಲವಾದ್ದರಿಂದ;

**ನೀನ್ ಎಮಗೆ ಇನಿತನ್ ಒಳ್ಳಿಕಯ್ಯಲ್ವೇಳ್ವುದು**=ನೀನು ನಮಗೆ ಇಷ್ಟನ್ನಾದರೂ ಒಳ್ಳೆಯದನ್ನು ಮಾಡುವುದು; **ನೆಗಳ್ವ ಕಜ್ಜಮ್ ಆವುದುಮಮ್ ನಿಮ್ಮಜ್ಜನೊಳ್ ಆಲೋಚಿಸಿ ನೆಗಳ್ವುದು**=ನೀನು ಮಾಡಬೇಕೆಂದಿರುವ ಕಾರ್ಯ ಯಾವುದೇ ಇರಲಿ, ಅದನ್ನು ನಿಮ್ಮ ಅಜ್ಜನಾದ ಭೀಷ್ಮನೊಡನೆ ಸಮಾಲೋಚಿಸಿ, ಅನಂತರ ಕಯ್ಗೊಳ್ಳುವುದು; **ಅಲ್ಲಿಗೆ ಬಿಜಯಮ್ ಗೆಯ್ವುದು ಎನೆ**=ಈಗ ಶರಮಂಚದ ಮೇಲೆ ಮಲಗಿರುವ ಭೀಷ್ಮರ ಬಳಿಗೆ ಹೋಗುವುದು ಎಂದು ಹೇಳಲು; **ಮಹಾಪ್ರಸಾದಮ್ ಎಂದು ಅದನ್ ಒಡಂಬಟ್ಟು**=ಹಾಗೆಯೇ ಆಗಲಿ ಎಂದು ತಂದೆ ಧೃತರಾಷ್ಟ್ರನ ಮಾತಿನಂತೆ ನಡೆಯಲು ಒಪ್ಪಿಕೊಂಡು; **ಅಂತೆ ಗೆಯ್ವೆನ್ ಎಂದು ಗುರುಜನಮಮ್ ಬೀಳ್ಕೊಂಡು**=ನೀವು ಹೇಳಿದಂತೆಯೇ ಮಾಡುತ್ತೇನೆ ಎಂದು ನುಡಿದು, ತಂದೆತಾಯಿಯರಿಂದ ಬೀಳ್ಕೊಂಡು;

**ಅವರಮ್ ಬೀಡಿಂಗೆ ಪೋಗಲ್ವೇಳ್ದು**=ಅವರನ್ನು ಹಸ್ತಿನಾವತಿಗೆ ಹೋಗಲು ಹೇಳಿ; **ಕಿರಿದು ಪೊಳ್ತು ಶೋಕಾನುಬಂಧದೊಳ್ ಕೋಪಾನುಬಂಧಮುಮ್ ಸಮರಾನುಬಂಧಮುಮ್ ಅಂತರಿಸಿರ್ದು**=ಸ್ವಲ್ಪ ಸಮಯ ತೀವ್ರವಾದ ಸಂಕಟಕ್ಕೆ ಸಿಲುಕಿದಾಗ, ಹಗೆಗಳ ಮೇಲಣ ಕೋಪದ ಉದ್ರೇಕ ಮತ್ತು ಯುದ್ಧದ ಉನ್ಮಾದವು ತಗ್ಗಿ; **ಸಂಜಯ ದ್ವಿತೀಯನುಮ್ ನಿಜಭುಜಗದಾಸಹಾಯನುಮ್ ಆಗಿ ಸಂಗ್ರಾಮ ಭೂಮಿಯೊಳಗನೆ ಬರುತುಮ್ ಇರ್ದನ್**=ಸಂಜಯನ ಜತೆಗೂಡಿ, ತನ್ನ ಭುಜದ ಮೇಲೆ ಗದೆಯನ್ನು ಹೊತ್ತುಕೊಂಡು ತನ್ನ ತೋಳ್ಬಲ ಮತ್ತು ಪರಾಕ್ರಮವನ್ನೇ ನಂಬಿರುವ ದುರ್ಯೋಧನನು ಕುರುಕ್ಷೇತ್ರ ರಣರಂಗದಲ್ಲಿ ಬರುತ್ತಿದ್ದನು;

❖

## ನೋಟ–೮

# ಮರುಳುಗಳು ದುರ್ಯೋಧನನನ್ನು ಕೆಣಕಿ ಕಾಡುವುದು

**ಸಂಗ್ರಾಮ ಭೂಮಿಯೊಳಗನೆ ಬರ್ಪಲ್ಲಿ**=ತಂದೆ ತಾಯಿಯ ಕೋರಿಕೆಯಂತೆ ದುರ್ಯೋಧನನು ಸಂಜಯನ ಒಡಗೂಡಿ ಕುರುಕ್ಷೇತ್ರದ ಸಂಗ್ರಾಮ ಭೂಮಿಯಲ್ಲಿ ಶರಮಂಚದ ಮೇಲೆ ಮಲಗಿರುವ ಭೀಷ್ಮರ ಬಳಿಗೆ ಬರುತ್ತಿರುವಾಗ; ನೆತ್ತರು=ರಕ್ತ; ಉಡಿದು+ಇರ್ದ; ಉಡಿ=ತುಂಡಾಗು; ಕಯ್ದು=ಕತ್ತಿ/ಈಟಿ/ಬಾಣ ಮುಂತಾದ ಲೋಹದ ಆಯುಧಗಳು; **ನೆತ್ತರ ಕಡಲೊಳಗೆ ಉಡಿದಿರ್ದ ಕಯ್ದು**=ರಕ್ತದ ಕಡಲಿನಲ್ಲಿ ತುಂಡುತುಂಡಾಗಿ ಮುರಿದುಬಿದ್ದಿರುವ ಆಯುಧಗಳ ಮೊನಚಾದ ತುದಿಯು; **ಅಡಿಗಡಿಗೆ ತಳಮನ್ ಉರ್ಚುತ್ತಿರೆ**=ಹೆಜ್ಜೆಹೆಜ್ಜೆಗೂ ಅಂಗಾಲುಗಳಿಗೆ ಚುಚ್ಚುತ್ತಿರಲು;

**ಕಾಲಿಡಲ್ ಎಡೆವಡೆಯದೆ ಕುರುಪತಿ ದಡಿಗ ಪೆಣಂಗಳನೆ ಮೆಟ್ಟಿ ನಡೆಯುತ್ತಿರ್ದನ್**=ಕುರುಕ್ಷೇತ್ರದ ರಣರಂಗದ ಎಲ್ಲೆಡೆಯಲ್ಲಿಯೂ ಹರಿದು ಹೆಪ್ಪುಗಟ್ಟಿರುವ ನೆತ್ತರಿನ ಕೆಸರಿನಲ್ಲಿ ತುಂಡುತುಂಡಾಗಿ ಮುರಿದು ಬಿದ್ದಿರುವ ಆಯುಧಗಳ ರಾಶಿಯಲ್ಲಿ ಹೆಜ್ಜೆಯಿಡಲು ಎಡೆಯಿಲ್ಲದೆ ದುರ್ಯೋಧನನು ದೊಡ್ಡಗಾತ್ರದ ಹೆಣಗಳನ್ನೇ ತುಳಿದುಕೊಂಡು ನಡೆಯುತ್ತಿದ್ದನು; ಹಲ=ನೇಗಿಲು/ನೇಗಿಲಿನ ಆಕಾರದಲ್ಲಿರುವ ಒಂದು ಆಯುಧ; ಚಕ್ರ+ಅಂಕುಶಮ್; ಅಂಕುಶ=ಮೊನಚಾದ ತುದಿಯುಳ್ಳ ಸಲಾಕೆ; ರೇಖಾ=ಗೆರೆ/ಗೀಟು; ವಿಲಸಿತ=ಹೆಸರಾಂತ; ಪದತಳ=ಅಂಗಾಲು/ಪಾದದ ಕೆಳ ಭಾಗ; ಪುನರುಕ್ತತೆ=ಮತ್ತೊಮ್ಮೆ ಕಂಡುಬರುವುದು;

**ಹಲ ಚಕ್ರ ಅಂಕುಶಮ್ ಹಲಚಕ್ರಾಂಕುಶರೇಖಾ ವಿಲಸಿತ ಪದತಳಕೆ ಪುನರುಕ್ತತೆಯಮ್ ಮಾಡೆ**=ಕುರುಕ್ಷೇತ್ರದ ರಣರಂಗದಲ್ಲಿ ನೆತ್ತರ ಕೆಸರಿನೊಳಗೆ ಬಿದ್ದಿದ್ದ ಹಲ, ಚಕ್ರ, ಅಂಕುಶಗಳೆಂಬ ಆಯುಧಗಳು ದುರ್ಯೋಧನನ ಅಂಗಾಲಿಗೆ ಮತ್ತೆ ಮತ್ತೆ ಚುಚ್ಚಿಕೊಂಡಿದ್ದರಿಂದ, ಈ ಮೊದಲೇ ದುರ್ಯೋಧನನ ಅಂಗಾಲಿನಲ್ಲಿದ್ದ ಹಲ, ಚಕ್ರ, ಅಂಕುಶದ ಗೆರೆಗಳ ಮೇಲೆ ಮತ್ತೊಮ್ಮೆ ಒತ್ತಿ ಅದೇ ಗುರುತನ್ನು ಮಾಡಿದ ಹಾಗಾಯಿತು; ಚಕ್ರವರ್ತಿಯಾದವನ ಅಂಗಾಲಿನಲ್ಲಿ ಹಲ–ಚಕ್ರ–ಅಂಕುಶವೆಂಬ ಆಯುಧಗಳ ಆಕಾರದ ಗೆರೆಗಳು ಹುಟ್ಟಿನಿಂದಲೇ ಬಂದಿರುತ್ತದೆ ಎಂಬುದು ಜನಮನದಲ್ಲಿರುವ ಒಂದು ಕಲ್ಪನೆ;

**ಆ ಕುರುಕುಲಜನ್ ಕುಸಿಕುಸಿದು ಮೆಲ್ಲಮೆಲ್ಲನೆ ನಡೆದನ್**= ದುರ್ಯೋಧನನು ಆಯುಧಗಳ ಮೊನೆಯ ಚುಚ್ಚುವಿಕೆಯಿಂದ ಗಾಸಿಗೊಂಡು ಮೆಲ್ಲಮೆಲ್ಲನೆ ಎಚ್ಚರಿಕೆಯಿಂದ ಹೆಜ್ಜೆಯಿಡತೊಡಗಿದನು; ಮನ್ಯು+ಉದ್ಗತ+ಕಂಠನುಮ್+ಆಗಿ; ಮನ್ಯು=ಅಳಲು/ಸಂಕಟ; ಉದ್ಗತ=ಹೊರಹೊಮ್ಮಿದ; **ಆಗಳ್ ಅದಮ್ ಸಂಜಯನ್ ಕಂಡು ಮನ್ಯೂದ್ಗತಕಂಠನುಮಾಗಿ**=ಆಗ ರಾಜನಾದ ದುರ್ಯೋಧನನಿಗೆ ಬಂದ ನೋವನ್ನು ನೋಡಿದ ಸಂಜಯನಿಗೆ ಸಂಕಟದ ತೀವ್ರತೆಯಿಂದ ಕೊರಳು ಕಟ್ಟಿದಂತಾಗಿ; ವಿನುತ=ಹೆಸರಾಂತ; ವಿರೋಧಿ ಮಂಡಳಿಕ=ಶತ್ರುಗಳಾದ ಸಾಮಂತ; ಮೌಳಿ=ಕಿರೀಟ; ವಿರಾಜಿತ=ಕಂಗೊಳಿಸುವ/ಕಾಂತಿಯಿಂದ ಕೂಡಿದ; ಪಾದಪೀಠ=ಕಾಲುಗಳನ್ನು ಇಡುವುದಕ್ಕಾಗಿ ಮಾಡಿದ ಮಣೆ/ಕಾಲುಮಣೆ; ಕಾಂಚನ=ಚಿನ್ನ;

**ನಿಮ್ಮಯ ಮೆಲ್ಲಡಿ ವಿನುತ ವಿರೋಧಿ ಮಂಡಳಿಕ ಮೌಳಿ ವಿರಾಜಿತ ಪಾದಪೀಠ ಕಾಂಚನ ಕಮಳಾಯಮಾನಮ್**=ನೀವು ಸಿಂಹಾಸನದಲ್ಲಿ ಕುಳಿತಿರುವಾಗ ಹೆಸರಾಂತ ಹಗೆಗಳಾದ ಸಾಮಂತರು ನಿಮ್ಮಯ ಕೋಮಲವಾದ ಪಾದಗಳಿಗೆ ತಲೆಬಾಗಿ ನಮಿಸುತ್ತಿರುವಾಗ, ನಿಮ್ಮ ಪಾದಕಮಲಗಳಿದ್ದ ಕಾಲುಮಣೆಯು ಚಿನ್ನದ ಕಾಂತಿಯಿಂದ ಬೆಳಗುತ್ತಿತ್ತು; ಭಿಂಡಿವಾಳ=ಭರ್ಜಿ; ಅಂಬು=ಬಾಣ; ಕರವಾಳ=ಕತ್ತಿ; ಕಕ್ಕಡೆ=ಈಟಿ; ಕೊಂತ=ಈಟಿಯಂತಹ ಮೊನಚಾದ ಆಯುಧ; ಧಾರೆ=ಆಯುಧಗಳ ಹರಿತವಾದ ಅಂಚು/ಮೊನೆ; ಉರ್ಚು=ಚುಚ್ಚು/ನಾಟು;

**ಇವು ಭಿಂಡಿವಾಳದ ಅಂಬಿನ ಕರವಾಳ ಕಕ್ಕಡೆಯ ಕೊಂತದ ಧಾರೆಗಳ್ ಉರ್ಚೆ**= ಈಟಿ, ಬಾಣ, ಕತ್ತಿ. ಕಕ್ಕಡೆ, ಕೊಂತ ಮುಂತಾದ ಆಯುಧಗಳ ಹರಿತವಾದ ಮೊನೆಯು ನಿಮ್ಮ ಪಾದಗಳಿಗೆ ಚುಚ್ಚಲು; ಸಂಯುಗ=ಕಾಳೆಗ/ಯುದ್ಧ; ವಿಧಾತ್ರ=ಬ್ರಹ್ಮ; **ವಿಧಾತ್ರವಶ**=ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ನಡೆಯುವ ಒಳಿತು ಕೆಡುಕುಗಳನ್ನು ಹುಟ್ಟುವಾಗಲೇ ಬ್ರಹ್ಮನು ಬರೆದಿಟ್ಟಿರುತ್ತಾನೆ ಎಂಬ

ನಂಬಿಕೆಯು ಜನಮನದಲ್ಲಿದೆ; **ಸಂಯುಗ ಅವನಿತಳದೊಳ್ ವಿಧಾತ್ರವಶದಿಮ್ ನಿಮಗಮ್ ನಡೆವಂತುಟಾದುದೇ ಎಂದು ಗಳಗಳನೆ ಕಣ್ಣೀರಮ್ ನೆರಪುವ ಸಂಜಯನನ್**=ಕಾಳೆಗದ ನೆಲದಲ್ಲಿ ಬ್ರಹ್ಮನ ಬರಹದಂತೆ ನಿಮಗೂ ನಡೆದುಕೊಂಡು ಹೋಗುವಂತಾಯಿತೆ ಅಂದರೆ ರಾಜಪರಿವಾರದಿಂದ ಕೂಡಿ ಬೆಳ್ಗೊಡೆಗಳಿಂದ ಸುತ್ತುವರಿದು ತೇರಿನಲ್ಲಿ ಬರಬೇಕಾಗಿದ್ದ ರಾಜನಾದ ನೀವು ಗತಿಗೇಡಿಯಂತೆ ಬರಿಗಾಲಲ್ಲಿ ನಡೆಯುವಂತಹ ಹೀನಸ್ಥಿತಿಯು ಬಂದೊದಗಿತೆ ಎಂದು ಒಂದೇ ಸಮನೆ ಕಣ್ಣೀರನ್ನು ಸುರಿಸುತ್ತಿರುವ ಸಂಜಯನನ್ನು;

**ಅಭಿಮಾನಧನನ್ ಮಾಣಿಸಿ**= ದುರ್ಯೋಧನನು ಗೋಳಾಡದಂತೆ ತಡೆದು; ವಜ್ರಮನನ್+ಅಪ್ಪ; ವಜ್ರಮನ=ಗಟ್ಟಿಯಾದ ಮನಸ್ಸು/ಎಂತಹ ಕಷ್ಟ ನಷ್ಟಗಳಿಗೂ ಜಗ್ಗದ ಕುಗ್ಗದ ಮನಸ್ಸಿನ ಕಸುವು; ತನುಜ+ಅನುಜ; ತನುಜ=ಮಗ; ಅನುಜ= ತಮ್ಮ; **ಮನಃಕ್ಷತ**=ಮನಸ್ಸಿಗೆ ಬಿದ್ದ ಪೆಟ್ಟು; **ವಜ್ರಮನನಪ್ಪ ಎನ್ನನ್**=ಗಟ್ಟಿಯಾದ ಮನಸ್ಸುಳ್ಳ ನನ್ನನ್ನು; **ತನುಜಾನುಜರ ವಿಯೋಗದ ಮನಃಕ್ಷತಮ್**=ಮಕ್ಕಳ ಮತ್ತು ತಮ್ಮಂದಿರ ಸಾವಿನಿಂದ ಉಂಟಾದ ಮಾನಸಿಕ ಪೆಟ್ಟು; ನೋಯಿಸಲ್ಕೆ ನೆರೆಯದೆ= ನೋಯಿಸಲಿಲ್ಲವೆಂದ ಮೇಲೆ; **ಸಮರಾವನಿಜಾತಮ್ ಚರಣಕ್ಷತಮ್ ಇನಿಸುಮ್ ನೋಯಿಕುಮೆ**=ರಣರಂಗದ ನೆಲದಲ್ಲಿ ಬಿದ್ದಿರುವ ಆಯುಧಗಳ ಮೊನೆಯ ಚುಚ್ಚುವಿಕೆಯು ನನ್ನ ಪಾದಗಳನ್ನು ಸ್ವಲ್ಪವಾದರೂ ನೋಯಿಸುತ್ತವೆಯೇ; ಅಂದರೆ ನನ್ನ ಮಕ್ಕಳು ಮತ್ತು ನನ್ನ ತಮ್ಮಂದಿರ ಸಾವಿನ ಸಂಕಟದ ಮುಂದೆ ಈ ನೋವು ಏನೇನು ಅಲ್ಲ; ಅವಷ್ಟಂಭ=ಆಶ್ರಯ/ಆಲಂಬನ;

**ಎಂದು ಕುರುಕುಲಾವಷ್ಟಂಭನ್ ಕಾರ್ಯಾವಷ್ಟಂಭನಾಗಿ ಬರುತ್ತಮ್**=ಎಂದು ನುಡಿದ ದುರ್ಯೋಧನನು ತಾನು ಕಯ್ಗೊಂಡ ಕಾರ್ಯವನ್ನು ಈಡೇರಿಸುವ ಉದ್ದೇಶದಿಂದ, ಅಂದರೆ ಭೀಷ್ಮರನ್ನು ಕಂಡು, ಅವರ ಸಲಹೆಯಂತೆ ನಡೆದು ಕೊಳ್ಳಲು ಮುಂದೆ ಮುಂದೆ ನಡೆಯುತ್ತ; **ಮೊನೆಯೊಳ್ ಇದಿರ್ಚಿ ಸತ್ತ ಭಟನನ್**= ಕಾಳೆಗದ ಮುಂಚೂಣಿಯಲ್ಲಿ ಹಗೆಯನ್ನು ಎದುರಿಸಿ ಸಾವನ್ನಪ್ಪಿದ ಕಾದಾಳುವನ್ನು; **ಗಜದಂತದೊಳ್ ಅಣ್ಮಿ ಸತ್ತ ಬೀರನನ್**=ಆನೆಯ ದಂತವನ್ನು ಹಿಡಿದೆಳೆದು ನುಲಿದು ಮುರಿಯುವಾಗ ಹೋರಾಡಿ ಸತ್ತ ವೀರನನ್ನು; **ರಣದೊಳ್ ಅದಟಿಮ್ ಸಹಸ್ರಭಟರಮ್ ಪೆಣೆದಿಕ್ಕಿ ಸತ್ತ ಗಂಡನನ್ ಅರಸುತ್ತೆ ಬರ್ಪ ಸುರಸುಂದರಿಯರ್ಕಳನ್**=ಕಾಳೆಗದ ಕಣದಲ್ಲಿ ಪರಾಕ್ರಮದಿಂದ ಸಾವಿರಾರು ಕಾದಾಳುಗಳನ್ನು ಸುತ್ತುವರಿದು ಒಗ್ಗೂಡಿಸಿ ಕೊಲ್ಲುವಾಗ ಹೋರಾಡಿ ಸತ್ತ ಶೂರನನ್ನು ಹುಡುಕುತ್ತ ಬರುತ್ತಿರುವ ದೇವಲೋಕದ ಸುಂದರಿಯರನ್ನು; ಕಾಳೆಗದ ಕಣದಲ್ಲಿ ವೀರತನದಿಂದ ಹೋರಾಡಿ ಸತ್ತ ಕಾದಾಳುಗಳನ್ನು

ದೇವಲೋಕದ ಸುಂದರಿಯರು ರಣರಂಗಕ್ಕೆ ಬಂದು, ಒಲವು ನಲಿವು ನೆಮ್ಮದಿಯ ತಾಣವಾದ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿದೆ;

**ಆ ಪರಾಕ್ರಮನಿಕೇತನನ್ ಫಣಿರಾಜಕೇತನನ್ ಈಕ್ಷಿಸುತ್ತುಮ್ ಒಯ್ಯನೆ ನಡೆದನ್**=ಪರಾಕ್ರಮಕ್ಕೆ ನೆಲೆಯಾಗಿರುವ ದುರ್ಯೋಧನನು ಅದೆಲ್ಲವನ್ನೂ ನೋಡುತ್ತ ಮೆಲ್ಲನೆ ನಡೆದನು; ಅಂತು ಬರೆವರೆ=ಆ ರೀತಿ ದುರ್ಯೋಧನನು ಹೆಣಗಳ ಬಣಬೆ ನಡುವೆ ರಣರಂಗದಲ್ಲಿ ನಡೆದು ಬರುತ್ತಿರಲು; **ಪುಲ್ಮರುಳ್**= ಪುಲ್+ಮರುಳ್; ಪುಲು=ಅತ್ಯಂತ ಕೀಳಾದ; **ಮರುಳ್**=ಪಿಶಾಚಿ/ದೆವ್ವ; ದೆವ್ವ=ತುಂಬು ಜೀವನವನ್ನು ನಡೆಸಲಾಗದೆ, ನಾನಾ ಬಗೆಯ ಅವಗಡಗಳಿಂದ ಹರೆಯದಲ್ಲಿಯೇ ಸಾವನ್ನಪ್ಪುವ ವ್ಯಕ್ತಿಗಳು ದೆವ್ವಗಳಾಗಿ ರೂಪುಗೊಳ್ಳುತ್ತಾರೆ. ದೆವ್ವಗಳು ತಮ್ಮ ಮಾನವ ಜೀವಿತ ಕಾಲದಲ್ಲಿ ಈಡೇರಿಸಿಕೊಳ್ಳಲಾಗದ ಬಯಕೆಗಳೆಲ್ಲವನ್ನೂ ಈಗ ಈಡೇರಿಸಿಕೊಳ್ಳುತ್ತವೆ ಎಂಬ ಕಲ್ಪನೆ ಮತ್ತು ನಂಬಿಕೆಯು ಜನಮನದಲ್ಲಿದೆ; ಅಂತಹ ಮರುಳುಗಳು/ದೆವ್ವಗಳು ಈಗ ಕುರುಕ್ಷೇತ್ರ ರಣರಂಗದಲ್ಲಿ ಸಾವನ್ನಪ್ಪಿರುವ ಆನೆ, ಕುದುರೆ ಮತ್ತು ಕಾದಾಳುಗಳ ರಕ್ತವನ್ನು ಕುಡಿದು, ಮಾಂಸವನ್ನು ತಿನ್ನುತ್ತಿವೆ. ಈ ರೀತಿ ರಕ್ತಮಾಂಸದ ಸೇವನೆಯಲ್ಲಿ ತೊಡಗಿದ್ದ ಮರುಳುಗಳಲ್ಲಿ ಕೆಲವು ಮರುಳುಗಳು ದುರ್ಯೋಧನನನ್ನು ನೋಡಿ, ಅವನನ್ನು ಕೆಣಕಿ ಕಾಡತೊಡಗುತ್ತವೆ; ನೆತ್ತರು=ರಕ್ತ;

**ಗುರುವಿನ ನೆತ್ತರಮ್ ಕುಡಿವೆನಪ್ಪೊಡೆ ಅವನ್ ದ್ವಿಜವಂಶಜನ್**=ಗುರು ದ್ರೋಣರ ನೆತ್ತರನ್ನು ಕುಡಿಯೋಣವೆಂದರೆ, ಅವನು ಬ್ರಾಹ್ಮಣ ಕುಲದವನು; ನಿಜ+ಅವರಜನ; ನಿಜ=ನಿನ್ನ; ಅವರಜ=ತಮ್ಮ; **ನಿಜಾವರಜನ ನೆತ್ತರಮ್ ಕುಡಿವನಪ್ಪೊಡೆ ಭೀಮನೆ ಎಯ್ದೆ ಪೀರ್ದನ್**=ನಿನ್ನ ತಮ್ಮ ದುಶ್ಯಾಸನನ ನೆತ್ತರನ್ನು ಕುಡಿಯೋಣವೆಂದರೆ ಭೀಮನೇ ಒಂದು ಹನಿಯನ್ನು ಬಿಡದಂತೆ ಎಲ್ಲವನ್ನೂ ಕುಡಿದಿದ್ದಾನೆ; **ಭೀಷ್ಮರ ಬಿಸಿನೆತ್ತರಮ್ ಕುಡಿವೊಡೆ ಇನ್ನುಮ್ ಒಳನ್**=ಭೀಷ್ಮರ ಬಿಸಿನೆತ್ತರನ್ನು ಕುಡಿಯೋಣವೆಂದರೆ, ಆತ ಇನ್ನು ಜೀವಂತವಾಗಿದ್ದಾನೆ; ಇಚ್ಚಾಮರಣಿಯಾದ ಭೀಷ್ಮನು ಉತ್ತರಾಯಣ ಪುಣ್ಯ ಕಾಲದಲ್ಲಿ ಪ್ರಾಣವನ್ನು ಬಿಡಲೆಂದು ಕಾಲವನ್ನು ಕಾಯುತ್ತ, ರಣರಂಗದಲ್ಲಿ ಶರಮಂಚದ ಮೇಲೆ ಮಲಗಿದ್ದಾನೆ;

**ಕುರುರಾಜ, ನಿನ್ನ ನೆತ್ತರ ಸವಿನೋಳ್ಪೊಡೆ ಆನ್ ಬಯಸಿ ಬಂದಪೆನ್ ಎಂದುದು ಅದೊಂದು ಪುಲ್ಮರುಳ್**=ಕುರುರಾಜನೇ, ನಿನ್ನ ನೆತ್ತರಿನ ರುಚಿನೋಡೋಣವೆಂದು ನಾನು ಆಸೆಯಿಂದ ಬಂದಿದ್ದೇನೆ ಎಂದು ರಣರಂಗದಲ್ಲಿದ್ದ ಒಂದು ಮರುಳು

ದುರ್ಯೋರ್ಧನನನ್ನು ಕೆಣಕಿ ನುಡಿಯಿತು; **ಅದಮ್ ಕೇಳುತ್ತುಮ್ ಬರೆವರೆ**= ಮರುಳಿನ ಅಣಕದ ನುಡಿಯನ್ನು ಕೇಳುತ್ತ, ದುರ್ಯೋರ್ಧನನು ಮುಂದೆ ಮುಂದೆ ಹೆಜ್ಜೆಗಳನ್ನಿಡುತ್ತ ಸಾಗುತ್ತಿರಲು; ಉಣ್ಮು=ಹೊರಚೆಲ್ಲು; ಉಳ್+ಮಿದುಳ್= ಒಳಮಿದುಳು; ಕರ್ದಮ=ಕೆಸರು; ಜಗುಳ್=ಜಾರಿಕೊಳ್ಳು/ಜಾರಿ/ಬೀಳು; **ಕದನದೊಳ್ ಉಣ್ಮೆದ ಉಳ್ಮಿದುಳ ಕರ್ದಮದೊಳ್ ಜಗುಳ್ದು ಅಂಘ್ರಿ ಜಾರಿ ಪೋಪುದುಮ್**=ರಣರಂಗದಲ್ಲಿ ಹೋರಾಡಿ ಸಾವನ್ನಪ್ಪಿದ್ದ ಕಾದಾಳುಗಳ ತಲೆಯೊಡೆದು ಹೊರಚೆಲ್ಲಿದ್ದ ಒಳಮಿದುಳಿನ ಲೋಳೆಯ ಕೆಸರಿನಲ್ಲಿ ಕಾಲಿಟ್ಟ ದುರ್ಯೋರ್ಧನನ ಪಾದಗಳು ಜಾರಿ ಮುಗ್ಗರಿಸಿ ಬೀಳುವಂತಾಗಲು;

**ಒಡನಿರ್ದ ಸಂಜಯನ್ ಇಳೇಶ್ವರನನ್ ಪಿಡಿದು**=ಜತೆಯಲ್ಲಿದ್ದ ಸಂಜಯನು ದುರ್ಯೋರ್ಧನನನ್ನು ಬೀಳದಂತೆ ಹಿಡಿದುಕೊಂಡು; ಊರು=ತೊಡೆ; ಭಂಗ= ಮುರಿಯುವಿಕೆ; ವಲಮ್=ನಿಶ್ಚಯವಾಗಿ/ಖಂಡಿತವಾಗಿ; **ಊರುಭಂಗಮಾಗದೆ ವಲಮ್ ಎಂದೊಡೆ**=ಕಾಲು ಜಾರಿದಾಗ ನೀನು ನೆಲದ ಮೇಲೆ ಬಿದ್ದಿದ್ದರೆ ಖಂಡಿತವಾಗಿಯೂ ತೊಡೆ ಮುರಿದುಹೋಗುತ್ತಿತ್ತು ಎಂದು ಹೇಳಲು; **ಆಗದು ಎನೆ**=ತೊಡೆ ಮುರಿಯುತ್ತಿರಲಿಲ್ಲ ಎಂದು ದುರ್ಯೋರ್ಧನನು ನುಡಿಯಲು; ಪುಲ್ಮರುಳ್=ಸಾಮಾನ್ಯವಾದ ದೆವ್ವ; **ಪುಲ್ಮರುಳ್ ಒಂದೆಡೆವೋಗಿ**=ಒಂದು ಮರುಳು ಮರುಗಳಿಗೆಯಲ್ಲಿಯೇ ದುರ್ಯೋರ್ಧನನಿದ್ದ ಎಡೆಗೆ ಹೋಗಿ, ಅವನನ್ನು ಹಂಗಿಸುತ್ತ;

**ಕೌರವೇಶ್ವರಾ, ಭೀಮಕೋಪದೆ ನಿನಗೆ ಊರುಭಂಗ ಭಯಮಾಗದೆ ಪೋಕುಮೆ ಎಂದ ಮರುಳ ಮಾತು ತನಗೆ ಕರ್ಣಕಠೋರಮಾಗೆ**=ಕುರುಪತಿಯೇ, **"ರಕ್ತಮಾಂಸದ ಕೆಸರಿನಲ್ಲಿ ಜಾರಿಬಿದ್ದು ಈಗ ತೊಡೆ ಮುರಿಯದಿದ್ದರೂ, ಭೀಮನ ಕೋಪದಿಂದ ಮುಂದಿನ ದಿನಗಳಲ್ಲಿ ತೊಡೆ ಮುರಿಯದೇ ಇರುತ್ತದೆಯೇ"** ಎಂಬ ಹೆದರಿಕೆಯು ನಿನಗೆ ಆಗದಿರುವುದೇ ಎಂದ ಮರುಳಿನ ಮಾತು ದುರ್ಯೋರ್ಧನನಿಗೆ ಕೇಳಲು ಕ್ರೂರವಾಗಿರಲು; ಕಟ್ಟುಕಡೆ=ಅತಿಯಾಗಿ ಸಂಕಟಪಡು/ಬಹಳವಾಗಿ ಮರುಗು;

**ತನಗೆ ಮುನ್ನಮ್ ಮೈತ್ರೇಯರ್ ಕೊಟ್ಟ ಊರುಭಂಗ ಶಾಪಮಮ್ ನೆನೆನೆನೆದು ಮನದೊಳ್ ಕಟ್ಟುಕಡೆದು**=ತನಗೆ ಈ ಮೊದಲು ಮೈತ್ರೇಯ ಮುನಿಯು **'ನಿನ್ನ ತೊಡೆಯು ಭೀಮನ ಗದೆಯಿಂದ ಮುರಿಯಲಿ'** ಎಂದು ಕೊಟ್ಟಿರುವ ಶಾಪವನ್ನು ಮತ್ತೆ ಮತ್ತೆ ನೆನಪಿಸಿಕೊಂಡು, ಮನದಲ್ಲಿ ಅತಿಯಾದ ಸಂಕಟವುಂಟಾಗಿ; ಪಾಂಡವರು ಜೂಜಿನ ಕಾರಣದಿಂದಾಗಿ ಹನ್ನೆರಡು ವರುಶ ವನವಾಸ ಮತ್ತು ಒಂದು ವರುಶ ಅಜ್ಞಾತವಾಸದ ಕಟ್ಟುಪಾಡಿಗೆ ಒಳಗಾಗಿ, ಕಾಡಿನಲ್ಲಿ ಪಡುತ್ತಿದ್ದ ಕಷ್ಟವನ್ನು ನೋಡಿ ಕನಿಕರಗೊಂಡಿದ್ದ ಮೈತ್ರೇಯ ಮುನಿಯು ಒಮ್ಮೆ ಹಸ್ತಿನಾವತಿಗೆ

ಬಂದು, ದುರ್ಯೋಧನನಿಗೆ ಪಾಂಡವರ ಮೇಲಣ ಹಗೆತನವನ್ನು ತೊರೆದು, ಅವರನ್ನು ಕಾಡಿನಿಂದ ಕರೆಸಿಕೊಂಡು, ಅವರ ಜತೆ ಹೊಂದಿಕೊಂಡು ನೆಮ್ಮದಿಯಿಂದ ಬಾಳು ಎಂದಾಗ, ಮುನಿಯ ಮಾತನ್ನು ಕಡೆಗಣಿಸಿ, ಅಹಂಕಾರದಿಂದ ತನ್ನ ಬಲವನ್ನು ಮೆರೆಯುವಂತೆ ತೊಡೆಯನ್ನು ತಟ್ಟಿದನು. ಆಗ ಮೈತ್ರೇಯ ಮುನಿಯು ಕೋಪದಿಂದ "ನಿನ್ನ ತೊಡೆಯು ಭೀಮನ ಗದೆಯಿಂದಲೇ ಮುರಿಯಲಿ" ಎಂಬ ಶಾಪವನ್ನು ದುರ್ಯೋಧನನಿಗೆ ಹಾಕಿದ್ದರು;

**ತಾನ್ ಮಹಾಸತ್ತ್ವನ್ ಅಪ್ಪುದರಿಂದಮ್ ಒಂದುಮನ್ ಬಗೆಯದೆ**=ತಾನು ಮಹಾಬಲಶಾಲಿಯಾದುದರಿಂದ ಯಾವುದೇ ಹೆದರಿಕೆ ಇಲ್ಲವೇ ಹಿಂಜರಿಕೆಗೆ ಒಳಗಾಗದೆ; **ಮರುಳ ಮಾತಿನೊಳ್ ಪುರುಳೇನ್ ಎಂದು ಅರಸನ್ ಪೋಗೆವೋಗೆ**=ಮರುಳಿನ ಮಾತಿನಲ್ಲಿ ಹುರುಳೇನಿದೆ ಎಂದು ದುರ್ಯೋಧನನು ಮುಂದೆ ಮುಂದೆ ನಡೆಯುತ್ತಿರಲು; ಅರಗಿನ ಮಾಡದೊಳ್=ಅರಗಿನ ಉಪ್ಪರಿಗೆಯ ಮನೆಯಲ್ಲಿ ಪಾಂಡವರನ್ನು ಜೀವಂತವಾಗಿ ಸುಡಲೆಂದು; ವಿಷದ **ಲಡ್ಡುಗೆಯೊಳ್ ಕೊಲಲೊಡ್ಡಿ**=ಭೀಮನಿಗೆ ವಿಷದ ಲಡ್ಡುಗೆಗಳನ್ನು ತಿನ್ನಿಸಿ ಕೊಲ್ಲಲು ಸಂಚನ್ನು ಹೂಡಿ; ಪದೆ=ಹೆಚ್ಚಾಗುವಂತೆ ಮಾಡು/ಬೆಳೆಸು;

**ಬದ್ಧಮತ್ಸರದೊಳೆ ವೈರಮಮ್ ಪದೆದು**=ತೀವ್ರವಾದ ಹೊಟ್ಟೆಕಿಚ್ಚಿನಿಂದ ಪಾಂಡವರೊಡನೆ ಹಗೆತನ ಹೆಚ್ಚಾಗುವಂತೆ ಮಾಡಿ; ಮರುಳ್=ದೆವ್ವ/ಹುಚ್ಚು/ತಿಳಿಗೇಡಿ; **ಭೀಮನನ್ ಇನ್ ಇನಿತರ್ಕೆ ತಂದ ನೀನ್ ಮರುಳಯೊ**=ಭೀಮನನ್ನು ಈಗ ಇಂತಹ ತೀವ್ರವಾದ ಹಗೆತನದ ಮತ್ತು ಸೇಡಿನ ಹೋರಾಟಕ್ಕೆ ಎಳೆತಂದ ನೀನು ತಿಳಿಗೇಡಿಯೋ; ಭೂತ=ದೆವ್ವ/ಪಿಶಾಚಿ; **ಫಣಿರಾಜಕೇತನಾ, ಭೂತಕೋಟಿವೆರಸು ಆಹವರಂಗದೊಳ್ ಆಡುತಿರ್ಪ ತಾನ್ ಮರುಳನೊ ಇರ್ವರ ಮರುಳ್ತನಮಮ್ ನೋಳ್ಪಮ್ ಎನೆ**=ದುರ್ಯೋಧನನೇ, ಕೋಟ್ಯಂತರ ಮರುಳುಗಳ ಜತೆಗೂಡಿ ರಣರಂಗದಲ್ಲಿ ಸತ್ತು ಬಿದ್ದಿರುವ ಆನೆ ಕುದುರೆ ಕಾದಾಳುಗಳ ನೆತ್ತರನ್ನು ಕುಡಿದು, ಮಾಂಸವನ್ನು ತಿಂದು ಉಲ್ಲಾಸದಿಂದ ವಿಹರಿಸುತ್ತಿರುವ ನಾನು ತಿಳಿಗೇಡಿಯೋ ಇಲ್ಲವೇ ಇಷ್ಟೊಂದು ಜೀವಿಗಳ ಕೊಲೆಗೆ ಕಾರಣನಾಗಿರುವ ನೀನು ತಿಳಿಗೇಡಿಯೋ ನಮ್ಮಿಬ್ಬರಲ್ಲಿ ಯಾರ ತಿಳಿಗೇಡಿತನದಿಂದ ಇಂತಹ ದುರಂತ ಉಂಟಾಗಿದೆ ಎಂಬುದನ್ನು ನೋಡೋಣ ಎಂದು ದುರ್ಯೋಧನನನ್ನು ಹಂಗಿಸಲು;

**ನುಡಿಯದೆ ಪೋಗಲೀಯೆನ್**=ನಾನು ತಿಳಿಗೇಡಿಯೋ ನೀನು ತಿಳಿಗೇಡಿಯೋ ಎಂಬ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡದಿದ್ದರೆ, ನಿನ್ನನ್ನು ಮುಂದಕ್ಕೆ ಹೋಗಲು ಬಿಡುವುದಿಲ್ಲ; ದೂರ್ಜಟಿ=ಶಿವ; **ಪೋದೊಡೆ ಧೂರ್ಜಟಿಯಾಣೆ**=ಹೋದರೆ

ಶಿವನಾಣೆ; **ಮೀರಿ ಪೋದಡೆ ಕಲಿಭೀಮನಾಣೆ ಎನೆ**=ನನ್ನ ಮಾತನ್ನು ಕಡೆಗಣಿಸಿ ಹೋದರೆ ಕಲಿ ಭೀಮನಾಣೆ ಎನ್ನಲು; **ಧೂರ್ಜಟಿಯಾಣೆಗೆ ನಿಂದು**=ಶಿವನ ಮೇಲೆ ಇಟ್ಟ ಆಣೆಯನ್ನು ಮೀರಲಾರದೆ ಮುಂದಕ್ಕೆ ಹೋಗದೆ ನಿಂತು; **ಭೀಮನೆಂದೊಡೆ ಮುಳಿದಟ್ಟಿ ಕುಟ್ಟಲ್ ಅರಸಮ್ ಗದೆಗೊಂಡಡೆ**=ಭೀಮನ ಹೆಸರನ್ನು ಕೇಳಿಯೇ ಆಕ್ರೋಶದಿಂದ ಕೆರಳಿ ಆ ಮರುಳನ್ನು ಓಡಿಸಿ ಹೊಡೆಯಲೆಂದು ದುರ್ಯೋಧನನು ಗದೆಯನ್ನು ಮೇಲಕ್ಕೆತ್ತಿದಾಗ; **ಭೂತಕೋಟಿಯುಮ್ ಬಡಿಗೋಳೆ**=ಸುತ್ತಲಿದ್ದ ಮರುಳುಗಳೆಲ್ಲವೂ ದೊಣ್ಣೆಯನ್ನು ಹಿಡಿದುಕೊಂಡು ದುರ್ಯೋಧನನೊಡನೆ ಬಡಿದಾಡಲು ಅಣಿಯಾದಾಗ; **ಸಂಜಯನ್ ಫಣಿರಾಜಕೇತುವನ್ ನಯದೆ ಬಗ್ಗಿಸಿದನ್**=ಸಂಜಯನು ದುರ್ಯೋಧನನನ್ನು ಒಳ್ಳೆಯ ಮಾತುಗಳಿಂದ ಒಲಿಸಿಕೊಂಡು, ಅವನ ಆಕ್ರೋಶವನ್ನು ಶಾಂತಗೊಳಿಸಿ, ಮರುಳುಗಳೊಡನೆ ಕಾದಾಡುವುದನ್ನು ತಪ್ಪಿಸಿದನು;

❖

## ನೋಟ–೯

# ದ್ರೋಣಾಚಾರ್ಯರಿಗೆ ನಮನ

**ಅಂತು**=ಕುರುಕ್ಷೇತ್ರ ರಣರಂಗದಲ್ಲಿ ಆ ರೀತಿ ಸಂಜಯನೊಡನೆ ನಡೆದು ಬರುತ್ತಿರುವ ದುರ್ಯೋಧನನು; ಪ್ರತ್ಯವಾಯ=ಅಡ್ಡಿ/ತಡೆ; **ಬಹುಳ ಪ್ರತ್ಯವಾಯ ಪ್ರದೇಶಗಳನ್ ಎಂತಾನುಮ್ ಕಳೆದು ಪೋಗೆವೋಗೆ**=ಆನೆ, ಕುದುರೆ ಮತ್ತು ಮಾನವ ಹೆಣಗಳ ನಡುವೆ ಹೆಜ್ಜೆಗಳನ್ನಿಡಲು ಬಹಳ ಅಡೆತಡೆಯಾಗಿದ್ದ ಪ್ರದೇಶಗಳನ್ನು ಹೇಗೋ ಕಷ್ಟಪಟ್ಟು ದಾಟಿಕೊಂಡು, ಶರಮಂಚದ ಮೇಲೆ ಮಲಗಿರುವ ಭೀಷ್ಮರ ಬಳಿಗೆ ಬರುತ್ತಿರಲು; **ದ್ರೌಪದೀದ್ರೋಹನ್**=ಜೂಜಿನ ಪ್ರಸಂಗದಲ್ಲಿ ದ್ರೌಪದಿಯ ಮುಡಿಯನ್ನೆಳೆದು, ಸೀರೆಯನ್ನು ಸುಲಿದು ಅಪಮಾನ ಪಡಿಸಿದ್ದ ವ್ಯಕ್ತಿಯಾದ ದುಶ್ಶಾಸನ; **ಆ ದ್ರೌಪದೀದ್ರೋಹನನ್ ಭವತ್ ಅನುಜನನ್ ಭೀಮನ್ ಮುನಿದು ಎಯ್ತಂದು ಇಲ್ಲಿ ಕೊಂದನ್ ಎನಲ್ಕೆ**=ದ್ರೌಪದಿಗೆ ಅಪಮಾನ ಮಾಡಿದ ಆ ನಿನ್ನ ತಮ್ಮನಾದ ದುಶ್ಶಾಸನನನ್ನು ಭೀಮನು ಆಕ್ರೋಶಗೊಂಡು ಮುನ್ನುಗ್ಗಿ ಬಂದು, ಈ ಎಡೆಯಲ್ಲಿಯೇ ಕೊಂದನು ಎಂದು ಸಂಜಯನು ಹೇಳಲು;

**ಆನ್ ಪರಿಭವಮನ್ ಅದನ್ ಕೇಳಲಾರೆನ್. ಮುಂದೆ ಮುಂದೆ ಎಂದು**=ನಾನು ಆ ಸೋಲಿನ ಕಹಿ ಪ್ರಸಂಗವನ್ನು ಕೇಳಲಾರೆನು ಮುಂದೆ ಮುಂದೆ ನಡೆ ಎಂದು ನುಡಿದ ದುರ್ಯೋಧನನು; **ಬಾಷ್ಪಾಂಬು ನಿಮಗ್ನನ್ ಭಗ್ನಚಿತ್ತನ್ ತಲೆಯನೆರಗಿ**= ಕಣ್ಣೀರಿನಲ್ಲಿಯೇ ಮುಳುಗಿ ತೀವ್ರವಾದ ಶೋಕದಿಂದ ಕುಗ್ಗಿಹೋಗಿರುವ ದುರ್ಯೋಧನನು ಹತಾಶೆಯಿಂದ ತಲೆಯನ್ನು ತಗ್ಗಿಸಿ; ಬಿಲ್+ಓಜ=ಬಿಲ್ಲಿನ ವಿದ್ಯೆಯನ್ನು ಕಲಿಸುವ ಗುರುವಾದ ದ್ರೋಣ; **ಬಿಲ್ಲೋಜನ್ ಎಲ್ಲಿರ್ದನ್ ಭೀಷ್ಮನ್ ಎಲ್ಲಿರ್ದನೊ ನೋಡುವೆನ್ ತೋರ್ ಎನೆ**=ದ್ರೋಣನು ಎಲ್ಲಿದ್ದಾನೆ ಭೀಷ್ಮನು

ಎಲ್ಲಿದ್ದಾನೆ... ಅವರನ್ನು ನೋಡಬೇಕು. ಅವರು ಇರುವ ಜಾಗವನ್ನು ತೋರು ಎಂದು ನುಡಿಯಲು; **ಕುರುಕುಲನನ್ ಸಂಜಯನ್ ಕೊಂಡುಪೋದನ್**=ಕುರುಕುಲದ ರಾಜನಾದ ದುರ್ಯೋಧನನನ್ನು ಸಂಜಯನು ಕರೆದುಕೊಂಡು ಹೋದನು; **ಅಂತು ಪೋಗೆ**=ಆ ರೀತಿ ಹೋಗುತ್ತಿರಲು; ಶಿರಸ್ಕಂಧ+ಅವಲಂಬನ್; ಶಿರಸ್ಕಂಧ=ಹೆಗಲು;

**ಸಂಜಯ ಶಿರಸ್ಕಂಧಾವಲಂಬನ್ ಕುರುಪ್ರಭು**=ತೀವ್ರವಾದ ಸಂಕಟದಿಂದ ಬಳಲುತ್ತಿರುವ ದುರ್ಯೋಧನನು ಸಂಜಯನ ಹೆಗಲನ್ನು ಆಶ್ರಯಿಸಿ ಹಿಡಿದುಕೊಂಡು; ಇಭ=ಆನೆ; **ಇಭಶೈಲಂಗಳಮ್ ಏರಿಯೇರಿ**=ಬೆಟ್ಟಗಳಂತೆ ಬಿದ್ದಿರುವ ಆನೆಗಳ ಹೆಣಗಳನ್ನು ಹತ್ತಿಳಿದು ಹತ್ತಿ; ರುಧಿರ=ನೆತ್ತರು/ರಕ್ತ; ಸ್ರೋತ=ಪ್ರವಾಹ; **ರುಧಿರಸ್ರೋತಂಗಳಮ್ ದಾಂಟಿ ದಾಂಟಿ**=ನೆತ್ತರಿನ ಹೊಳೆಯನ್ನು ದಾಟಿಕೊಂಡು ಹೋಗುತ್ತ; ಇಭದೋಃ=ಆನೆಯ ಸೊಂಡಿಲುಗಳು; ಪ್ರತಾನ=ಗುಂಪು/ಸಮೂಹ; ವಿಪಿನ=ಕಾಡು; ವ್ರಾತ=ಗುಂಪು; **ಇಭದೋಃ ನೀಲಲತಾಪ್ರತಾನ ವಿಪಿನವ್ರಾತಂಗಳೊಳ್ ಸಿಲ್ಕಿ ಸಿಲ್ಕಿ**=ಆನೆಯ ಸೊಂಡಿಲುಗಳೆಂಬ ಕಡುನೀಲಿಬಣ್ಣದ ಬಳ್ಳಿಗಳ ಕಾಡಿನಲ್ಲಿ ಸಿಕ್ಕಿ ತೊಡರಿಕೊಂಡು; **ಭರಂಗೆಯ್ದು ಉರದೆ ಎಯ್ದಿ**=ತವಕದಿಂದ ಅದನ್ನು ಬಿಡಿಸಿಕೊಂಡು ಅಡೆತಡೆಗಳನ್ನು ಲೆಕ್ಕಿಸದೆ ಮುನ್ನಡೆದು;

**ಶರಜಾಲ ಜರ್ಜರಿತಗಾತ್ರ ತ್ರಾಣನನ್ ದ್ರೋಣನನ್ ಕಂಡನ್**=ಬಾಣಗಳ ಮೊನೆಯ ಬಲೆಯಲ್ಲಿ ಸಿಲುಕಿ ನಜ್ಜುಗುಜ್ಜಾಗಿರುವ ದೇಹದ ದ್ರೋಣನನ್ನು ಕಂಡನು; **ಅಂತು ಎನಿಸಿರ್ದ**=ಹಾಗೆ ಬಿದ್ದಿದ್ದ; ಕಚ=ತಲೆಗೂದಲು; ನಿಗ್ರಹ=ಹತೋಟಿ; ಕರ=ಹಸ್ತ/ಕಯ್; ವಿಲುಳಿತ=ತಿರುಚಿದ/ನುಲಿದ; ಮೌಳಿ+ಆಗಿರ್ದ; ಮೌಳಿ=ತಲೆ; ಭಾರದ್ವಾಜ=ಭರದ್ವಾಜನ ಮಗ ದ್ರೋಣ; **ನಿಸರ್ಗದುಷ್ಟ ಧೃಷ್ಟದ್ಯುಮ್ನ ಕಚನಿಗ್ರಹಕರ ವಿಲುಳಿತ ಮೌಳಿಯಾಗಿರ್ದ ಭಾರದ್ವಾಜನ ಇರವಮ್ ರಾಜರಾಜನ್ ನೋಡಿ**=ಮೊದಲಿನಿಂದಲೂ ಕ್ರೂರಿಯಾಗಿದ್ದ ಧೃಷ್ಟದ್ಯುಮ್ನನು ದ್ರೋಣರನ್ನು ಕೊಲ್ಲುವಾಗ ಅವರ ತಲೆಗೂದಲನ್ನು ಬಿಗಿಹಿಡಿದು ಎಳೆದು ಹಿಡಿದಿದ್ದರಿಂದ ತಿರುಚಿದಂತಾಗಿದ್ದ ತಲೆಯ ದ್ರೋಣರ ಸ್ಥಿತಿಯನ್ನು ದುರ್ಯೋಧನನು ನೋಡಿ; ಕುಂಭಸಂಭವ=ದ್ರೋಣ; ಅರಿಯೆಮೆ=ನಮಗೆ ಗೊತ್ತಿಲ್ಲವೇ; ಗಾಂಡಿವಿ=ಅರ್ಜುನ; ಪಿನಾಕಪಾಣಿ= ಪಿನಾಕವೆಂಬ ಆಯುಧವನ್ನುಳ್ಳವನು/ಈಶ್ವರ;

**ಕುಂಭಸಂಭವಾ, ಅರಿಯೆಮೆ**=ಗುರುಗಳಾದ ದ್ರೋಣರೇ, ನಮಗೆ ನಿಮ್ಮ ಶಕ್ತಿ ಮತ್ತು ಪರಾಕ್ರಮ ಏನೆಂಬುದು ಗೊತ್ತಿಲ್ಲವೇ ನೀವು ಮಹಾ ಬಲಶಾಲಿಗಳು; **ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಮ್ ನಿಮ್ಮೊಡನೆ ಇದಿರ್ಚಿ ಕಾದಿ ಗೆಲಲ್ಕೆ ನೆರೆಯನ್**=ನಿಮ್ಮ ಬಿಲ್ಲುಗಾರಿಕೆಯ ನಿಪುಣತೆಯ ಮುಂದೆ ಅರ್ಜುನನಲ್ಲ

ದೇವರಾದ ಆ ಈಶ್ವರನೂ ಕೂಡ ನಿಮ್ಮನ್ನು ಎದುರಿಸಿ ಹೋರಾಡಿ ಗೆಲ್ಲಲಾರನು; **ಅದು ನಿಮ್ಮ ಉಪೇಕ್ಷೆಯೆಂದು ಅರಿಯೆನ್**=ಕುರುಕ್ಷೇತ್ರ ರಣರಂಗದಲ್ಲಿ ಅಂದು ನೀವು ಹಗೆಗಳಾದ ಪಾಂಡವರೊಡನೆ ಯುದ್ಧ ಮಾಡದೆ ಬಿಲ್ಲುಬಾಣಗಳನ್ನು ಕೆಳಕ್ಕಿಟ್ಟು ಸಾವಿಗೆ ಗುರಿಯಾದುದನ್ನು ನಾನು ನೋಡಿದೆನಾದರೂ, ನೀವು ನನ್ನನ್ನು ಕಡೆಗಣಿಸಿದಿರಿ ಎಂದು ಅದನ್ನು ತಿಳಿಯಲಾರೆನು; **ಇದು ಎನ್ನ ಕರ್ಮವಶಮ್ ಎಂದು ಅರಿಯೆನ್**=ನೀವು ಆಯುಧಗಳನ್ನು ತ್ಯಜಿಸಿದ್ದು ನನ್ನ ಕರ್ಮದ ಫಲವೆಂದೂ ತಿಳಿಯಲಾರೆನು;

**ನಿಮಗಿಂತು ಸಾವುಮ್ ಏತೆರದಿಮ್ ಅಕಾರಣಮ್ ನೆರೆಯೆ ಸಂಭವಿಸಿರ್ದುದೊ ಎಂದು ದುಃಖಮ್ ಗೆಯ್ದು**=ನಿಮಗೆ ಈ ರೀತಿಯಾದ ಸಾವು ಯಾವ ರೀತಿಯಲ್ಲಿ ಉಂಟಾಯಿತೊ ಎಂಬುದಕ್ಕೆ ಸರಿಯಾದ ಕಾರಣ–ನೀವು ಉದ್ದೇಶ ಪೂರ್ವಕವಾಗಿ ಬಿಲ್ಲುಬಾಣಗಳನ್ನು ಕೆಳಕ್ಕಿಟ್ಟಿರೋ ಇಲ್ಲವೇ ನನ್ನ ಹಣೆಬರಹವೇ ನಿಮ್ಮ ಅಂತಹ ನಿರ್ಧಾರಕ್ಕೆ ಕಾರಣವೋ– ಎಂಬುದು ನನಗೆ ತಿಳಿಯುತ್ತಿಲ್ಲವೆಂದು ಸಂಕಟಪಡುತ್ತ; **ಅನ್ಯಸೈನ್ಯದ ಒಡಲೊಳ್ ಶರಸಂಧಾನಮನ್**=ಗುರು ದ್ರೋಣನು ಹಗೆಯ ಸೇನೆಯ ಶತ್ರುಗಳ ದೇಹದಲ್ಲಿ ಬಾಣಗಳನ್ನು ನಾಟಿಸಿದನು; **ತನ್ನ ಶಿಷ್ಯರ ಮೆಯ್ಯೊಳ್ ಬಿಲ್ಬಲ್ಮೆಯಮ್**=ತನ್ನ ಶಿಷ್ಯರ ಮಯ್ ಮನದಲ್ಲಿ ಬಿಲ್ ವಿದ್ಯೆಯನ್ನು ನೆಲೆಗೊಳಿಸಿದನು; **ನಿಖಿಲ ದಿಕ್ಚಕ್ರಂಗಳೊಳ್ ನಿಜಕೀರ್ತಿಯಮ್**=ಇಡೀ ಜಗತ್ತಿನ ಎಲ್ಲೆಡೆಯಲ್ಲಿಯಲ್ಲಿಯೂ ಮಹಾಗುರುವೆಂಬ ತನ್ನ ಹೆಸರನ್ನು ಬೆಳಗಿದನು;

**ಹರಪಾದಾಂಬುಯುಗ್ಮದೊಳ್ ಚಿತ್ತಮನ್ ನಿರಿಸಿದನ್**=ಶಿವನ ಪಾದಕಮಲ ಗಳಲ್ಲಿ ತನ್ನ ಮನಸ್ಸನ್ನು ನೆಲೆಗೊಳಿಸಿದನು; ಚಾಪ+ಆಗಮ+ ಆಚಾರ್ಯರೊಳ್; ಚಾಪ=ಬಿಲ್ಲು; ಆಗಮ=ವಿದ್ಯೆ; **ಚಾಪಾಗಮಾಚಾರ್ಯರೊಳ್ ದ್ರೋಣಂಗೆ ದೊರೆ ಆರ್ ಎಂಬಿನಮ್**=ಬಿಲ್ ವಿದ್ಯೆಯನ್ನು ಕಲಿಸುವ ಗುರುಗಳಲ್ಲಿ ದ್ರೋಣನಿಗೆ ಸಮಾನರಾದವರು ಯಾರಿದ್ದಾರೆ ಎನ್ನುವಂತೆ; **ಅಣ್ಮೆ ಸತ್ತ ಅಳವು ಇದೇನ್ ಮೆಯ್ವೆತ್ತುದೋ ಎಂದು**=ರಣರಂಗದಲ್ಲಿ ಹೋರಾಡಿ ಸಾವನ್ನಪ್ಪಿದ ಪರಾಕ್ರಮವು ಇದಾವ ಬಗೆಯಲ್ಲಿ ರೂಪುಗೊಂಡಿತೊ ಎಂದು ಗುರು ದ್ರೋಣರ ವ್ಯಕ್ತಿತ್ವದ ಬಗ್ಗೆ ಅಚ್ಚರಿಯನ್ನು ಮತ್ತು ಮೆಚ್ಚುಗೆಯನ್ನು ದುರ್ಯೋಧನನು ವ್ಯಕ್ತಪಡಿಸುತ್ತ; **ಕುಂಭಸಂಭವನನ್ ತ್ರಿಃಪ್ರದಕ್ಷಿಣಮ್ ಗೆಯ್ದು ಬರುತ್ತಮ್**=ದ್ರೋಣರ ಹೆಣದ ಸುತ್ತ ಮೂರು ಸುತ್ತು ಹಾಕಿ ಬಂದು, ರಣರಂಗದಲ್ಲಿ ಬಿದ್ದಿದ್ದ ಹೆಣಗಳ ರಾಶಿಯ ನಡುವೆ ಮುಂದೆ ಮುಂದೆ ನಡೆಯತೊಡಗುತ್ತಾನೆ;

❖

## ನೋಟ–೧೦

# ಅಭಿಮನ್ಯುವಿನ ವೀರಮರಣಕ್ಕೆ ಮೆಚ್ಚುಗೆ... ಲಕ್ಷಣ ಕುಮಾರನ ಸಾವಿಗೆ ಕಂಬನಿ

**ಆ ದಿಶಾ ಭಾಗದೊಳ್**=ಆ ದಿಕ್ಕಿನ ಎಡೆಯಲ್ಲಿ; ದ್ರೋಣರ ಹೆಣ ಬಿದ್ದಿದ್ದ ಕಡೆಯಿಂದ ದುರ್ಯೋಧನನು ಮುಂದೆ ಹೆಜ್ಜೆಗಳನ್ನಿಡುತ್ತಿದ್ದಂತೆಯೇ, ಅದೇ ದಿಕ್ಕಿನ ಜಾಗದಲ್ಲಿ; ಅರೆ+ಮುಗಿದು+ಇರ್ದ; ಅರೆ=ಅರ್ಧ; ಕಣ್+ಮಲರ್; ಮಲರ್=ಹೂವು; **ಅರೆಮುಗಿದಿರ್ದ ಕಣ್ಮಲರ್**=ಮೊಗ್ಗಿನಂತೆ ಅರೆ ಮುಚ್ಚಿದ್ದ ಕಣ್ಣುಗಳು; ಅಲರ್=ಅರಳು/ಬಿರಿ; ಅಲರ್ದ ಮೊಗಮ್=ಅರಳಿದ ಮೊಗ. ಕಾದಾಡಿ ಸಾಯುವಾಗ ಇದ್ದ ವೀರತನದ ಉತ್ಸಾಹವನ್ನೇ ಪ್ರತಿಬಿಂಬಿಸುವಂತೆ ಇದ್ದ ಮೊಗ; **ಕಡಿವೋದ ಕಯ್ಯುಮ್**=ತುಂಡಾಗಿದ್ದ ಕಯ್ಗಳು. ಏಕಾಂಗಿಯಾಗಿ ಚಕ್ರವ್ಯೂಹವನ್ನು ಭೇದಿಸಿಕೊಂಡು ಕುರುಸೇನೆಯೊಡನೆ ವೀರಾವೇಶದಿಂದ ಕಾದಾಡುತ್ತಿದ್ದ ಅಭಿಮನ್ಯುವನ್ನು ದುರ್ಯೋಧನನ ಕಡೆಯ ಕಾದಾಳುಗಳು ಎದುರುಬದುರಾಗಿ ನಿಂತು ಹೋರಾಡಲಾಗದಿದ್ದಾಗ, ಕರ್ಣನು ಯುದ್ಧದ ನಿಯಮವನ್ನು ಕಡೆಗಣಿಸಿ, ಅಭಿಮನ್ಯುವಿನ ರಥದ ಹಿಂಬದಿಗೆ ಹೋಗಿ ಅಭಿಮನ್ಯುವಿನ ಬಿಲ್ಲನ್ನು ಕತ್ತರಿಸಿ, ಅನಂತರ ತೋಳುಗಳನ್ನು ತುಂಡರಿಸಿದ್ದನು; ಆಸುರ+ತರಮ್+ಆಗೆ; ಆಸುರ=ಭಯಂಕರ; ತರ=ರೀತಿ/ಬಗೆ; ಅವುಡು= ದವಡೆ/ಕೆಳತುಟಿ;

**ಆಸುರತರಮಾಗೆ ಕರ್ಚಿದ ಅವುಡುಮ್ ಬೆರಸು**=ವೀರಾವೇಶ ಮತ್ತು ಕೋಪೋದ್ರೇಕದಿಂದ ಕಚ್ಚಿದ್ದ ಕೆಳದವಡೆಯಿಂದ ಕೂಡಿ; ಶರ=ಬಾಣ;

ಪ್ರಹಾರ=ಹೊಡೆತ/ಪೆಟ್ಟು; **ಅನ್ಯಶರ ಪ್ರಹಾರ ಜರ್ಜರಿತ ಶರೀರನಾಗಿ**=ಹಗೆಗಳಾದ ದುರ್ಯೋಧನನ ಕಡೆಯ ಕಾದಾಳುಗಳ ಬಾಣಗಳ ಪೆಟ್ಟಿನಿಂದ ನಜ್ಜುಗುಜ್ಜಾಗಿದ್ದ ಮಯ್ಯುಳ್ಳವನಾಗಿ; ನವ=ಹೊಸತಾದ; ಲೋಹಿತ=ನೆತ್ತರು/ರಕ್ತ; ವಾರ್ಧಿ=ಕಡಲು; ಅಳ್ದು=ಮುಳುಗಿ; **ನವಲೋಹಿತ ವಾರ್ಧಿಯೊಳ್ ಅಳ್ದು ಬಿಳ್ದನನ್**=ಹರಿದು ಹೆಪ್ಪುಗಟ್ಟಿದ್ದ ನೆತ್ತರಿನ ಕಡಲಿನಲ್ಲಿ ಮುಳುಗಿ ಬಿದ್ದಿರುವವನನ್ನು; ಆಜಿ=ಕಾಳೆಗ/ರಣರಂಗ; **ಆಜಿವೀರನನ್ ಅಭಿಮನ್ಯು ಕುಮಾರನನ್**=ರಣರಂಗದ ಕಡುಗಲಿಯಾದ ಅಭಿಮನ್ಯು ಕುಮಾರನನ್ನು; **ಕುರುಪತಿ ನೋಡಿ ಕಂಡನ್**=ಕುರುಪತಿಯು ನೋಡಿದನು; ಅಂತು=ಆ ರೀತಿ/ಬಗೆ; ಅಹಿ=ಹಾವು; ಕೇತನ=ಬಾವುಟ; ಅಹಿಕೇತನ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ದುರ್ಯೋಧನ;

**ಅಂತು ಆತನನ್ ಅಹಿಕೇತನನ್ ನೋಡಿ**=ಆ ರೀತಿ ವೀರಮರಣವನ್ನು ಹೊಂದಿ ರಣರಂಗದಲ್ಲಿ ಬಿದ್ದಿದ್ದ ಅಭಿಮನ್ಯುವನ್ನು ದುರ್ಯೋಧನನು ನೋಡಿ; ನರ=ಅರ್ಜುನ; ನರಸುತ=ಅರ್ಜುನ ಮತ್ತು ಸುಭದ್ರೆಯ ಮಗನಾದ ಅಭಿಮನ್ಯು; ಪಣ್=ರಚಿಸಿದ/ಒಡ್ಡಿದ; ಚಕ್ರವ್ಯೂಹ=ಕಾಳೆಗದ ಕಣದಲ್ಲಿ ಹಗೆಯನ್ನು ಸುತ್ತುವರಿದು ಕೊಲ್ಲಲು ಅನುವಾಗುವಂತೆ ಸೇನೆಯನ್ನು ನಿಲ್ಲಿಸುವುದು; **ನರಸುತ, ಗುರು ಪಣ್ಣಿದ ಚಕ್ರವ್ಯೂಹ ರಚನೆ ಪೆರರ್ಗೆ ಪುಗಲ್ ಅರಿದು**=ಅಭಿಮನ್ಯುವೇ ದ್ರೋಣರು ಒಡ್ಡಿದ ಚಕ್ರವ್ಯೂಹವನ್ನು ಭೇದಿಸಿಕೊಂಡು ಒಳನುಗ್ಗಲು ಬೇರೆಯವರಿಗೆ ಆಗದು; ಪೊಕ್ಕು=ಹೊಕ್ಕು/ಪ್ರವೇಶಿಸಿ; ರಣಾಜಿರದ+ಒಳ್; ರಣಾಜಿರ=ಕಾಳೆಗದ ಕಣ/ಯುದ್ಧರಂಗ; ಅರಿ=ಶತ್ರು; ನಿನ್ನ+ಒರೆಗೆ; ಒರೆ=ಸಮಾನ/ಸಾಟಿ; ದೊರೆ=ಹಿರಿಮೆ/ಯೋಗ್ಯತೆ;

**ಇದಮ್ ಪೊಕ್ಕು ರಣಾಜಿರದೊಳ್ ಅರಿನೃಪರನ್ ಇಕ್ಕಿದ ನಿನ್ನೊರೆಗೆ ದೊರೆಗೆ ಗಂಡರುಮ್ ಒಳರೇ**=ಚಕ್ರವ್ಯೂಹದ ಒಳಹೊಕ್ಕು, ರಣರಂಗದಲ್ಲಿ ಶತ್ರುರಾಜರನ್ನು ಸದೆಬಡಿದು ಕೊಂದ ನಿನ್ನ ಸಾಹಸ ಮತ್ತು ಪರಾಕ್ರಮಕ್ಕೆ ಸರಿಸಮಾನವಾದ ಹಿರಿಮೆಯುಳ್ಳ ಶೂರರು ಇದ್ದಾರೆಯೇ; ಜಗತ್ತಿನಲ್ಲಿ ನಿನ್ನಂತಹ ಶೂರ ಮತ್ತೊಬ್ಬನಿಲ್ಲ; **ಮೆಯ್ಗಲಿಗಳ್ ಪಲರ್ ಇರ್ದು ಕಾದಿದರ್**=ಶೂರರಾದ ಅನೇಕ ಮಂದಿ ಜತೆಗೂಡಿ ನಿನ್ನೊಡನೆ ಯುದ್ಧ ಮಾಡಿದರು; ತವೆ=ಅತಿಶಯವಾಗಿ/ಹೆಚ್ಚಾಗಿ; ನಿನ್ನ ಒಂದೆ ಮೆಯ್ಯೊಳಮ್ ಪಲರಮ್ ತವೆ ಕೊಂದಯ್=ಆದರೆ ನೀನಾದರೋ ಒಬ್ಬಂಟಿಯಾಗಿಯೇ ಹೋರಾಡಿ ಹಲವರನ್ನು ಸದೆಬಡಿದು ಅತಿಶಯವಾಗಿ ಕೊಂದೆ; ಮೊಲೆ+ಪೆತ್ತಳೆ; ಪೆತ್ತ=ಹೊಂದು; ಮೊಲೆವೆತ್ತಳ್=ಹೆಂಗಸು; **ನಿನ್ನನ್ ಪೆತ್ತಳ್ ಮೊಲೆವೆತ್ತಳೆ**=ನಿನ್ನನ್ನು ಹಡೆದವಳು ಸಾಮಾನ್ಯಳಾದ ಹೆಂಗಸಲ್ಲ;

**ವೀರಜನನಿ ಪೆಸರಮ್ ಪೆತ್ತಳ್= "ವೀರನನ್ನು ಹೆತ್ತವಳು"** ಎಂಬ ಹೆಸರನ್ನು ಪಡೆದಳು; ಅಸಮಬಲ=ಮಹಾ ಬಲವುಳ್ಳವನು; ಭವತ್=ನಿನ್ನ; ವಿಕ್ರಮ= ಶೂರತನ/ಪರಾಕ್ರಮ; **ಅಸಮಬಲ ಭವತ್ ವಿಕ್ರಮಮ್ ಪೆರರ್ಗೆ ಅಸಂಭವಮ್**= ಮಹಾಶೂರನಾದ ಅಭಿಮನ್ಯು ನಿನ್ನ ಸಾಹಸ... ನಿನ್ನ ಕೆಚ್ಚು; ನಿನ್ನ ಕಸುವು ಬೇರೆಯವರಲ್ಲಿ ಇರಲು ಸಾಧ್ಯವೇ ಇಲ್ಲ; **ಅಭಿಮನ್ಯು, ನಿನ್ನನ್ ಆನ್ ಇನಿತಮ್ ಪ್ರಾರ್ಥಿಸುವೆನ್**=ಅಭಿಮನ್ಯು ನಿನ್ನಲ್ಲಿ ನಾನು ಇಷ್ಟು ಮಾತ್ರ ಕೇಳಿಕೊಳ್ಳುತ್ತೇನೆ; ನಿಜ+ಸಾಹಸ+ಏಕದೇಶ+ಅನುಮರಣಮ್; ನಿಜ=ನಿನ್ನ; ಏಕದೇಶ=ಒಂದು ಭಾಗ; ಅನುಮರಣ=ಸಹಗಮನ/ಜತೆಯಲ್ಲಿಯೇ ಸಾಯುವುದು; ಎಮಗೆ+ಅಕ್ಕೆ; ಎಮಗಕ್ಕೆ=ನನಗೆ ದೊರೆಯಲಿ; ಗಡಾ=ಕಂಡೆಯಾ; ಆತ್ಮಗತ=ಮನಸ್ಸಿನಲ್ಲಿ; ಬಗೆ=ಆಲೋಚಿಸು/ಭಾವಿಸು; **ನಿಜಸಾಹಸೈಕದೇಶಾ ನುಮರಣಮ್ ಎಮಗಕ್ಕೆ ಗಡಾ ಎಂದು ಆತ್ಮಗತದೊಳೆ ಬಗೆದು**=ನಿನ್ನ ಸಾಹಸ ಮತ್ತು ಕೆಚ್ಚಿನ ವೀರಮರಣದಲ್ಲಿ ಒಂದು ಅಂಶದಷ್ಟಾದರೂ ನನಗೂ ದೊರೆಯುವಂತಾಗಲಿ ಕಂಡೆಯಾ ಎಂದು ದುರ್ಯೋಧನನು ತನ್ನ ಮನದಲ್ಲಿಯೇ ಚಿಂತಿಸುತ್ತ;

**ಅಭಿಮನ್ಯುಗೆ ಕಯ್ಗಳಮ್ ಮುಗಿದು ಬರುತ್ತುಮ್**=ಅಭಿಮನ್ಯುವಿಗೆ ಕಯ್ಗಳನ್ನು ಮುಗಿಯುತ್ತ ರಣರಂಗದಲ್ಲಿ ಮುಂದೆ ಮುಂದೆ ಬರುತ್ತಿರಲು; ಮನ್ಯು+ಉದ್ಗತ+ ಕಂಠನ್+ಆಗಿ; ಮನ್ಯು=ಸಂಕಟ/ಅಳಲು; ಉದ್ಗತ= ಹೊರಹೊಮ್ಮಿದ; **ತನ್ನ ಮಗನಪ್ಪ ಲಕ್ಷಣ ಕುಮಾರನನ್ ನೆನೆದು ಮನ್ಯೂದ್ಗತಕಂಠನಾಗಿ**=ಕದನದಲ್ಲಿ ಸಾವನ್ನಪ್ಪಿರುವ ತನ್ನ ಮಗನಾದ ಲಕ್ಷಣಕುಮಾರನನ್ನು ನೆನೆದು ತೀವ್ರವಾದ ಸಂಕಟ ಒತ್ತರಿಸಿಕೊಂಡು ಬಂದು ಕೊರಳು ಕಟ್ಟಿದಂತಾಗಿ; ಆಸನ್ನ=ಹತ್ತಿರ/ ಸಮೀಪ; **ತತ್ ಆಸನ್ನಪ್ರದೇಶದೊಳ್ ಕಂಡು**=ಅಲ್ಲಿಯೇ ಹತ್ತಿರದ ಎಡೆಯಲ್ಲಿ ತನ್ನ ಮಗನ ಹೆಣವನ್ನು ಕಂಡನು; **ಕೌರವ ಕುಲತಿಲಕಂಗೆ ಆ ಕುಮಾರನನ್ ಕಾಣಲೊಡಮ್**=ದುರ್ಯೋಧನನಿಗೆ ತನ್ನ ಮಗನ ಹೆಣವನ್ನು ನೋಡುತ್ತಿದ್ದಂತೆಯೆ: ಗಳಿತ+ಶರಮ್+ಆಯ್ತು; ಗಳಿತ=ಜಾರಿದ/ಬಿದ್ದುಹೋದ; ಶರ=ಬಾಣ/ಆಯುಧ; **ಹಸ್ತಮ್ ಗಳಿತಶರಮಾಯ್ತು**=ಕಯ್ಯಲ್ಲಿದ್ದ ಆಯುಧ ಕಳಚಿ ಬಿದ್ದಿತು; ರಣ+ಉತ್ಸಾಹಮ್+ಆಯ್ತು;

**ಹೃದಯಮ್ ಗಳಿತ ರಣೋತ್ಸಾಹಮಾಯ್ತು**=ಪಾಂಡವರೊಡನೆ ಹೋರಾಡ ಬೇಕೆಂಬ ಚಲದಿಂದ ಕೂಡಿದ್ದ ಮನದಲ್ಲಿ ಈಗ ಕಾದಾಡುವ ಉತ್ಸಾಹವೇ ಅಳಿದು ಹೋಯಿತು; ನಯನ=ಕಣ್ಣು; ಗಳಿತ+ಅಶ್ರು+ಆಯ್ತು; ಅಶ್ರು=ಕಣ್ಣೀರು; **ನಯನಮ್ ಗಳಿತಾಶ್ರುವಾಯ್ತು**=ಕಣ್ಣುಗಳಲ್ಲಿ ಒಂದೇ ಸಮನೆ ಕಂಬನಿಯು ಹರಿಯತೊಡಗಿತು; ಗಾಂಧಾರೀನಂದನ=ಗಾಂಧಾರಿಯ ಮಗನಾದ ದುರ್ಯೋಧನ; ಭಾನುಮತೀ=

ದುರ್ಯೋರ್ಧನನ ಹೆಂಡತಿ; ಭಾನುಮತೀನಂದನ=ಲಕ್ಷಣ ಕುಮಾರ; ವದನ+ಅರವಿಂದಮ್+ಅಮ್; ವದನ=ಮೊಗ; ಅರವಿಂದ=ಕಮಲ; **ಅಂತು ಪುತ್ರಸ್ನೇಹಕಾತರ ಹೃದಯನಾಗಿ ಗಾಂಧಾರೀನಂದನನ್ ಭಾನುಮತೀನಂದನನ ವದನಾರವಿಂದಮಮ್ ನೋಡಿ**=ಆ ರೀತಿ ಮಗನ ಬಗ್ಗೆ ಪ್ರೀತಿ ಕರುಣೆಯ ಮನದಿಂದ ಕೂಡಿದ ದುರ್ಯೋರ್ಧನನು ಲಕ್ಷಣಕುಮಾರನ ಕಮಲದಂತಹ ಮೊಗವನ್ನು ನೋಡಿ; ತನೂಭವ=ಮಗ; ಜನಕ=ತಂದೆ; ಜಲಾಂಜಲಿ=ವ್ಯಕ್ತಿಯು ಸತ್ತಾಗ ದೇಹದ ಮೇಲೆ ಹಸ್ತದಿಂದ ನೀರನ್ನು ಎರೆಯುವ ಆಚರಣೆ;

**ಜನಕಂಗೆ ತನೂಭವನ್ ಜಲಾಂಜಲಿಯಮ್ ಕುಡುವುದು ಉಚಿತಮ್**=ಸತ್ತ ಅಪ್ಪನಿಗೆ ಮೋಕ್ಷ ಸಿಗಲೆಂದು ಮಗನು ನೀರಿನ ತರ್ಪಣವನ್ನು ನೀಡುವುದು ನಡೆದು ಬಂದ ಆಚರಣೆ; **ಅದು ಕೆಟ್ಟು ಈಗಳ್ ನಿನಗೆ ಆನ್ ಕುಡುವಂತಾದುದೆ**= ಅದು ತಪ್ಪಿಹೋಗಿ, ಮಗನಾದ ನಿನಗೆ ತಂದೆಯಾದ ನಾನು ತರ್ಪಣವನ್ನು ಕೊಡುವಂತಾಯಿತಲ್ಲವೇ; ಕ್ರಮ+ವಿಪರ್ಯಯ+ಅಮ್; ಕ್ರಮ=ಸರದಿ/ಪಾಳಿ/ ನಿಯಮ; ವಿಪರ್ಯಯ=ಬದಲಾವಣೆ/ವ್ಯತ್ಯಾಸ; ತಳರ್=ಹೊರಡು; **ತನೂಜ, ನೀನ್ ಕ್ರಮ ವಿಪರ್ಯಯಮ್ ಮಾಡುವುದೇ ಎಂದು ಅಲ್ಲಿ ನಿಲಲಾರದೆ ಆ ಪ್ರದೇಶದಿಮ್ ತಳರ್ದು ಬರೆವರೆ**=ಮಗನೇ, ಕ್ರಮ ತಪ್ಪಿ ಅಂದರೆ ನನಗೆ ನೀನು ತರ್ಪಣವನ್ನು ನೀಡುವ ಬದಲು, ನಿನಗೆ ನಾನು ತರ್ಪಣವನ್ನು ಕೊಡುವಂತೆ ಮಾಡಿದೆಯಲ್ಲ ಎಂದು ದುರ್ಯೋರ್ಧನನು ತೀವ್ರವಾದ ಸಂಕಟದಿಂದ ಬೇಯುತ್ತ, ಅಲ್ಲಿ ನಿಲ್ಲಲಾರದೆ ಆ ಎಡೆಯಿಂದ ಹೊರಟು ಬರುತ್ತಿರಲು;

❖

## ನೋಟ–೧೧

# ದುಶ್ಶಾಸನನಿಗೆ ಕಣ್ಣೀರಿನ ತರ್ಪಣ

ಸಿಂಧುರಾಜ=ಸಿಂಧು ಪ್ರಾಂತ್ಯದ ರಾಜನಾದ ಜಯದ್ರಥ; ಪಲಂಬರ್= ಹಲವರು; ನೃಪತಿ=ರಾಜ; ಶೋಕ+ಆಕುಲೀಕೃತ+ಚಿತ್ತನ್+ಆಗಿ; ಆಕುಲೀಕೃತ= ತುಂಬಿದ; ಚಿತ್ತ=ಮನಸ್ಸು; **ರಣದೊಳ್ ಮಡಿದ ಶಲ್ಯನುಮ್ ಸಿಂಧುರಾಜನುಮನ್ ಶಕುನಿಯುಮನ್ ಮತ್ತೆ ಪಲಂಬರ್ ನೃಪತಿಗಳುಮನ್ ಕಂಡು ಶೋಕಾಕುಲೀಕೃತಚಿತ್ತನಾಗಿ**=ರಣರಂಗದಲ್ಲಿ ಹೋರಾಡುತ್ತ ಸಾವನ್ನಪ್ಪಿದ ಶಲ್ಯ, ಜಯದ್ರಥ, ಶಕುನಿ ಮತ್ತೆ ಇನ್ನಿತರ ರಾಜರ ಹೆಣಗಳನ್ನು ನೋಡುತ್ತಿದ್ದಂತೆಯೇ ದುರ್ಯೋಧನನ ಮನದಲ್ಲಿ ಸಂಕಟವು ತುಂಬಿಕೊಂಡು; ಚೂಡಾಮಣಿ= ತಲೆಯಲ್ಲಿ ತೊಡುವ ಒಡವೆ/ಉನ್ನತ ವ್ಯಕ್ತಿ; ಕೈಲಾಸ=ಹಿಮಾಲಯ ಪರ್ವತ ಪ್ರಾಂತ್ಯದಲ್ಲಿರುವ ಎತ್ತರವಾದ ಒಂದು ಬೆಟ್ಟ; ಕಲ್ಪ=ಸಮಾನರೂಪ; ಕೈಲಾಸಕಲ್ಪ= ಕೈಲಾಸಕ್ಕೆ ಸಮಾನವಾದ; ಸುಭಟ+ಅಗ್ರಣಿ+ಗಳ್; ಅಗ್ರಣಿ=ಮುಂದಾಳು; **'ತ್ರಿಲೋಕಚೂಡಾಮಣಿ'** ಮತ್ತು **'ಕೈಲಾಸಕಲ್ಪ ಸುಭಟಾಗ್ರಣಿ'** ಎಂಬ ಪದಗಳು ವ್ಯಕ್ತಿಯ ಶಕ್ತಿ ಮತ್ತು ನಡೆನುಡಿಯನ್ನು ಅತಿಶಯವಾಗಿ ಬಣ್ಣಿಸುವ ಪದಗಳು; ಪೊಣರ್=ಹೋರಾಡು; ನೆರೆದು=ಸೇರಿ/ಕೂಡಿ; ನೃಪಸುತರ್+ಕಳ್;

**ಗುಣಿಗಳ್ ತ್ರಿಲೋಕಚೂಡಾಮಣಿಗಳ್ ಕೈಲಾಸಕಲ್ಪ ಸುಭಟಾಗ್ರಣಿಗಳ್ ಎನ್ನಯ ಕಾರಣದಿಂದೆ ಪೊಣರಲ್ ನೆರೆದು**=ಗುಣವಂತರೂ ಮೂರು ಲೋಕಗಳಲ್ಲಿಯೂ ಅಪ್ರತಿಮರಾದವರೂ ಕೈಲಾಸ ಪರ್ವತದಂತೆ ಉನ್ನತವಾದ ಆಕಾರ ಮತ್ತು

ಶಕ್ತಿಯುಳ್ಳ ವೀರರೂ ನನ್ನ ಕಾರಣದಿಂದಾಗಿ ಕುರುಕ್ಷೇತ್ರ ರಣರಂಗದಲ್ಲಿ ಹೋರಾಡಲೆಂದು ಜತೆಗೂಡಿ; ನೃಪಸುತರ್=ರಾಜಕುಮಾರರು; ಅಳ್ಕು=ನಾಶವಾಗು/ ಲಯವಾಗು; **ಈ ನೃಪಸುತರ್ಕಳ್ ಅಳ್ಕಾಡಿದರೇ ಎಂದು ಪಶ್ಚಾತ್ತಾಪಮ್ ಗೆಯ್ಯೆ**=ಈ ರಾಜಕುಮಾರರೆಲ್ಲರೂ ಸಾವನ್ನಪ್ಪಿ ನಾಶವಾದರೇ ಎಂದು ದುರ್ಯೋಧನನು ಪಶ್ಚಾತ್ತಾಪವನ್ನು ಪಡುತ್ತಿರಲು; **ಸಂಜಯನ್ ಸಂತೈಸಿ ಮುಂದೊಯ್ಯೆ**=ಸಂಜಯನು ದುರ್ಯೋಧನನನ್ನು ಸಮಾಧಾನ ಪಡಿಸಿ, ಮುಂದೆ ಕರೆದೊಯ್ಯಲು; **ಭೀಮಸೇನನ ಗದಾಪರಿಘ ಪ್ರಹರಣದಿಮ್**=ಭೀಮಸೇನನ ಲಾಳವಿಂಡಿಗೆಯೆಂಬ ಆಯುಧದಂತೆ ದೊಡ್ಡದಾಗಿದ್ದ ಗದೆಯ ಹೊಡೆತದಿಂದ; ರುಧಿರ=ರಕ್ತ/ನೆತ್ತರು;

**ರುಧಿರ ಪ್ರವಾಹವಶಗತನಾಗಿರ್ದ ಯುವರಾಜನ್ ಇರ್ದ ಎಡೆಯಮ್ ಕುರುರಾಜನ್ ಎಯ್ದೆ ವಂದಾಗಳ್**=ಹೆಪ್ಪುಗಟ್ಟಿದ ರಕ್ತದ ಮಡುವಿನಲ್ಲಿ ಬಿದ್ದಿದ್ದ ಯುವರಾಜನಾದ ದುಶ್ಯಾಸನನ ಹತ್ತಿರಕ್ಕೆ ಬಂದಾಗ; ಪುಡಿ=ಮಣ್ಣು; ಪೊರಳ್ಚು=ಉರುಳಿಸು/ಹೊರಳಾಡಿಸು; **ದುಶ್ಯಾಸನನನ್ ಪುಡಿಯೊಳ್ ಪೊರಳ್ಚಿಯುಮ್**=ದುಶ್ಯಾಸನನನ್ನು ಮಣ್ಣಿನ ಹುಡಿಯಲ್ಲಿ ಉರುಳಾಡಿಸಿಕೊಂಡು ಕೊಂದು; ಅಡಗು=ಮಾಂಸ; ಕಿರಿಕಿರಿದು ಕೊರೆದು=ಸಣ್ಣ ಸಣ್ಣ ತುಂಡುಗಳನ್ನು ಕತ್ತರಿಸಿ; **ಮೆಯ್ಯ ಅಡಗಮ್ ಕಿರಿಕಿರಿದು ಕೊರೆದು ತಿಂದುಮ್**=ಅವನ ಮಯ್ಯಿನ ಮಾಂಸವನ್ನು ತುಂಡು ತುಂಡಾಗಿ ಕತ್ತರಿಸಿಕೊಂಡು ತಿಂದು; ನೆತ್ತರ್=ರಕ್ತ; ಗೊಟ್ಟಮ್+ಕುಡಿ; ಗೊಟ್ಟ=ದನಗಳನ್ನು ದ್ರವರೂಪದ ವಸ್ತುವನ್ನು ಕುಡಿಸಲು ಬಳಸುವ ಬಿದಿರಿನ ಕೊಳವೆ; **ಗೊಟ್ಟಮ್ ಕುಡಿ**=ಇದೊಂದು ನುಡಿಗಟ್ಟು. ಗಟಗಟನೆ ಕುಡಿ/ಒಂದೇ ಸಮನೆ ಕುಡಿ; **ನೆತ್ತರನ್ ಗೊಟ್ಟಮ್ ಕುಡಿದುಮ್**=ದುಶ್ಯಾಸನ ನೆತ್ತರನ್ನು ಗಟಗಟನೆ ಕಂಠಮಟ್ಟ ಕುಡಿದರೂ; ಹಿಡಿಂಬ ರಿಪು=ಹಿಡಿಂಬನೆಂಬ ರಕ್ಕಸನ ಶತ್ರುವಾದ ಭೀಮ; ತಣಿ=ತೃಪ್ತಿಹೊಂದು;

**ಹಿಡಿಂಬ ರಿಪು ಎಂತುಮ್ ತಣಿದನಿಲ್ಲ ಎಂದು ಸಂಜಯನ್ ಪೇಳೆ**=ಭೀಮನು ಯಾವ ರೀತಿಯಿಂದಲೂ ತುಸುವಾದರೂ ತೃಪ್ತಿಯನ್ನು ಹೊಂದಲಿಲ್ಲವೆಂದು ಸಂಜಯನು ನುಡಿಯಲು; ಕೆಳಗಿವಿ+ಕೇಳ್ದು; **ಕೆಳಗಿವಿಗೇಳ್ದು**=ಇದೊಂದು ನುಡಿಗಟ್ಟು. ಕೇಳಿದರೂ ಕೇಳಿಸಿಕೊಳ್ಳದಂತೆ/ಕಿವಿಯ ಮೇಲೆ ಹಾಕಿಕೊಳ್ಳದೆ; **ಕೆಳಗಿವಿಗೇಳ್ದು ಕಿರಿದೆಡೆಯಮ್ ಪೋಗಿ ತನ್ನ ತಮ್ಮನ್ ಇರ್ದ ಇರವಮ್ ಕಂಡು ಸೈರಿಸಲಾರದೆ**=ಸಂಜಯನ ಮಾತುಗಳನ್ನು ಕೇಳಿಯೂ ಕೇಳಿಸಿಕೊಳ್ಳದಂತೆ ತುಸುದೂರ ಹೋಗಿ ಅಲ್ಲಿ ತನ್ನ ತಮ್ಮ ದುಶ್ಯಾಸನನು ಇದ್ದ ಭಯಂಕರವಾದ ಸ್ಥಿತಿಯನ್ನು ಕಂಡು ಸಂಕಟವನ್ನು ತಡೆದುಕೊಳ್ಳಲಾಗದೆ; ಉಡಿವ+ಅನ್ನಮ್;

ಉಡಿ=ಮುರಿ; ಅನ್ನಮ್=ವರೆಗೂ; ಏರು=ಪೆಟ್ಟು/ಹೊಡೆತ; **ನಡು ಉಡಿವನ್ನಮ್ ಏರಿ**=ಸೊಂಟ ಮುರಿಯುವವರೆಗೂ ಹೊಡೆದು; **ಬರಿಯೆಲ್ವು ಉಡಿವನ್ನೆಗಮ್ ಒತ್ತಿ**=ಪಕ್ಕೆಲುಬು ಮುರಿಯುವವರೆಗೂ ಅದುಮಿ ಹಿಡಿದು;ಅಡಗು=ಮಾಂಸ;

**ಮಯ್ಯ ಅಡಗು ಅಡಗಾಗೆ ಮೆಟ್ಟಿ**=ಮಯ್ಯಿನ ಮಾಂಸವು ಮುದ್ದೆಯಾಗುವಂತೆ ತುಳಿದು; ಉರ=ಎದೆ; **ಮುನ್ ಉರಮನ್ ಇರ್ಬಗಿಯಾಗಿರೆ ಪೋಳ್ದು**= ಮುಂದಿನ ಎದೆಯನ್ನು ಎರಡು ಹೋಳುಗಳಾಗಿ ಸೀಳಿ; ಆರ್=ಗಟ್ಟಿಯಾಗಿ ಕೂಗು/ಅಬ್ಬರಿಸು/ಗರ್ಜಿಸು; **ನೆತ್ತರಮ್ ಕುಡಿ ಕುಡಿದು ಆರ್ದ ವೈರಿ ಉಳಿದನ್ನೆಗಮ್**=ರಕ್ತವನ್ನು ಕುಡಿಕುಡಿದು ಅಬ್ಬರಿಸಿದ ಶತ್ರುವಾದ ಭೀಮನು ಜೀವಂತವಾಗಿರುವವರೆಗೂ; **ಎನ್ನ ಅಳಲ್ ಎಂತು ಪೋಕುಮ್ ಎಂದು ಅಡಿಗಡಿಗೆ ಅಳ್ತು**=ನನ್ನ ಸಂಕಟವು ಹೇಗೆ ಹೋಗುತ್ತದೆ ಎಂದು ಒಂದೇ ಸಮನೆ ಕಂಬನಿಗರೆಯುತ್ತ; ಅಣುಗು=ಪ್ರೀತಿ/ಒಲುಮೆ; **ತನ್ನ ಅಣುಗು ತಮ್ಮನನ್ ಸುಯೋಧನನ್ ಈಕ್ಷಿಸಿದನ್**=ತನ್ನ ಪ್ರೀತಿಯ ತಮ್ಮನನ್ನು ಸುಯೋಧನನು ನೋಡಿದನು; ಪಲುಂಬು=ಅಳು/ಗೋಳಾಡು/ರೋದಿಸು; ಪಲವಾಡು=ಬಗೆಬಗೆಯಲ್ಲಿ ಮಾತನಾಡು;

**ಅಂತು ನಿಂದು ನೋಡಿ ಪಲುಂಬಿ ಪಲವಾಡಿ**=ದುರ್ಯೋಧನನು ದುಶ್ಶಾಸನನ ಹೆಣದ ಮುಂದೆ ನಿಂತು ಸಂಕಟದಿಂದ ರೋದಿಸುತ್ತ, ತಮ್ಮನ ಸಾವಿನ ಗಳಿಗೆಯಲ್ಲಿ ನಡೆದುದೆಲ್ಲವನ್ನೂ ನೆನೆನೆನೆದು ಪರಿತಪಿಸುತ್ತ ಹಲವು ನುಡಿಗಳನ್ನಾಡ ತೊಡಗುತ್ತಾನೆ; ಗಾಂಧಾರೀಜ=ಗಾಂಧಾರಿಯ ಮಗ; ನಿಜ=ನಿನ್ನ; **ಗಾಂಧಾರೀಜ, ನಿಜ ಜೀವಮ್ ಪರಲೋಕದೊಳ್**=ದುಶ್ಶಾಸನನೇ, **ನಿನ್ನ ಜೀವ ಪರಲೋಕದಲ್ಲಿ; ಪಿಶಾಚ+ಆಸ್ಯದ+ಒಳ್; ಆಸ್ಯ**=ಮೊಗ/ಬಾಯಿ; **ನಿಜ ಮಹಾಮಾಂಸಮ್ ಪಿಶಾಚಾಸ್ಯದೊಳ್**=ನಿನ್ನ ಮಯ್ಯಿನ ಮಾಂಸವೆಲ್ಲವೂ ದೆವ್ವದ ಬಾಯಲ್ಲಿ; ಕುಕ್ಷಿ=ಹೊಟ್ಟೆ; ನಿಜ ರಕ್ತಮ್ ರಿಪು ಕುಕ್ಷಿಯೊಳ್=ನಿನ್ನ ರಕ್ತವು ಹಗೆಯಾದ ಭೀಮನ ಹೊಟ್ಟೆಯಲ್ಲಿ; ನಕ್ತಂಚರೀ=ರಕ್ಕಸಿ/ರಾತ್ರಿಯಲ್ಲಿ ತಿರುಗುವವಳು; **ನಿಜಶಿರಮ್ ನಕ್ತಂಚರೀ ಹಸ್ತದೊಳ್**=ನಿನ್ನ ತಲೆಯು ಇರುಳಲ್ಲಿ ಅಲೆಯುವ ರಕ್ಕಸಿಯ ಕಯ್ಯಲ್ಲಿ;

**ನಿಜ ಕಾಯಮ್ ಕುರುಭೂಮಿಯೊಳ್ ನೆಲಸೆ**=ನಿನ್ನ ದೇಹವು ಕುರುಕ್ಷೇತ್ರದ ರಣರಂಗದಲ್ಲಿ ಬಿದ್ದಿರಲು; ದುರ್ಯೋಧನ+ಅನುಜ; ಅನುಜ=ತಮ್ಮ; ಭೀಮಗದೆ=ಭಯಂಕರವಾದ ಗದೆ; ಪಂಚತ್ವ=ಸಾವು/ಮರಣ/ಅಯ್ದು ಭಾಗ; **ದುರ್ಯೋಧನಾನುಜ, ಭೀಮ ಭೀಮಗದೆಯಿಮ್ ಪಂಚತ್ವಮಮ್ ಪೊರ್ದಿದಯ್**=ದುಶ್ಶಾಸನನೇ, ನೀನು ಭೀಮನ ಭಯಂಕರವಾದ ಗದೆಯ ಹೊಡೆತದಿಂದ ಮರಣವನ್ನು ಹೊಂದಿದೆ; ನಿನ್ನ ಜೀವ–ಮಾಂಸ–ರಕ್ತ–ತಲೆ–ದೇಹ ಹರಿದು ಹಂಚಿಹೋಗಿ ಅಯ್ದು ಎಡೆಗಳಲ್ಲಿ ಸೇರಿಕೊಂಡಿವೆ;

ಗಡ=ಕಂಡೆಯಾ/ತಿಳಿದಿರುವೆಯಾ; **ದುಶ್ಶಾಸನ, ನಿನ್ನನ್ ಕೊಂದನ್ ಗಡಮ್ ಇನ್ನುಮ್ ಒಳನ್**=ದುಶ್ಶಾಸನನೇ, ಕಂಡೆಯಾ ನಿನ್ನನ್ನು ಕೊಂದ ಆ ಭೀಮನು ಇನ್ನೂ ಜೀವಂತವಾಗಿದ್ದಾನೆ; ಮಾಣ್=ಸುಮ್ಮನಿರುವುದು; ಕೊಂದವನನ್ ಇಕ್ಕಿ ಕೊಲ್ಲದೆ ಮಾಣ್ದ ಆನ್ ಗಡ ಇನ್ನುಮ್ ಒಳೆನ್ =ನಿನ್ನನ್ನು ಕೊಂದವನನ್ನು ಹೊಡೆದು ಕೊಲ್ಲದೆ ಸುಮ್ಮನಿರುವ ನಾನು ಕೂಡ  ಕಂಡೆಯಾ ಜೀವಂತ ವಾಗಿದ್ದೇನೆ; ಕೂರ್ಮೆ=ಪ್ರೀತಿ/ಒಲುಮೆ/ನಲುಮೆ; ಸೌಧರ್ಮಿಕೆ=ಒಳ್ಳೆಯತನ; ಸಾಲದೆ=ಸಾಕಲ್ಲವೇ;

**ನಿನ್ನಯ ಕೂರ್ಮೆಗಮ್ ಅದು ಎನ್ನ ಸೌಧರ್ಮಿಕೆಗಮ್ ಸಾಲದೆ**=ನೀನು ನನ್ನಲ್ಲಿಟ್ಟಿದ್ದ ಪ್ರೀತಿಗೂ. ಅದಕ್ಕೆ ಬದಲಾಗಿ ಅಣ್ಣನಾದ ನಾನು ತೋರಿಸುತ್ತಿರುವ ಸೋದರ ಪ್ರೀತಿಯ ಒಳ್ಳೆಯತನಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದೆಯಾ; ನೀನು ನನಗಾಗಿ ರಣರಂಗದಲ್ಲಿ ಹೋರಾಡಿ ಸಾವನ್ನಪ್ಪಿದೆ. ಆದರೆ ನಾನಾದರೋ ನಿನಗಾಗಿ ಏನನ್ನೂ ಮಾಡದೆ ಸುಮ್ಮನಿದ್ದೇನೆ. ನಿನ್ನ ನನ್ನ ವ್ಯಕ್ತಿತ್ವವನ್ನು ಸೂಚಿಸುವುದಕ್ಕೆ ಇದು ಸಾಕಲ್ಲವೇ. ನೀನು ಸೋದರ ಪ್ರೀತಿಗಾಗಿ ಬಲಿಯಾದೆ. ನಾನು ಸುಮ್ಮನಾಗಿ ಜೀವಗಳ್ಳನಾದೆ; ದುರ್ಯೋಧನನು **“ಎನ್ನ ಸೌಧರ್ಮಿಕೆ–ನನ್ನ ಒಳ್ಳೆಯತನ”** ಎಂಬ ಮಾತನ್ನು ತನ್ನನ್ನೇ ತಾನು ಹಂಗಿಸಿಕೊಳ್ಳುತ್ತ ನುಡಿದಿದ್ದಾನೆ. **ಹಾ ವತ್ಸ ದುಶ್ಶಾಸನಾ**=ಹಾ ಒಡಹುಟ್ಟಿದ ತಮ್ಮನಾದ ದುಶ್ಶಾಸನನೇ; ಆನ್=ನಾನು; ಸ್ತನ್ಯ=ಮೊಲೆಹಾಲು; ಜನನೀ ಸ್ತನ್ಯಮನ್=ತಾಯಿಯ ಎದೆ ಹಾಲನ್ನು;

**ಆನ್ ಜನನೀ ಸ್ತನ್ಯಮನ್ ಉಂಡೆನ್ ಬಳಿಕೆ ನೀನ್**=ಹಿರಿಯ ಮಗನಾದ ನಾನು ತಾಯಿ ಗಾಂಧಾರಿಯ ಮೊಲೆವಾಲನ್ನು ಮೊದಲು ಕುಡಿದೆನು. ಕಿರಿಯವನಾದ ನೀನು ಅನಂತರ ಕುಡಿದೆ; ಸೋಮ+ಅಮೃತಮ್; ಸೋಮಾಮೃತ= ಸೋಮವೆಂಬ ಬಳ್ಳಿಯಿಂದ ಮಾಡಿದ ರಸ; **ಸೋಮಾಮೃತಮ್ ದಿವ್ಯಭೋಜನಮ್ ಎಂಬ ಇಂತಿವನ್ ಉಂಡೆನ್ ಆನ್ ಬಳಿಕೆ ನೀನ್**= ಸೋಮರಸವನ್ನು ಒಳ್ಳೆಯ ಉಣಿಸು ತಿನಸು ಮೊದಲಾದುವೆಲ್ಲವನ್ನೂ ನಾನು ಮೊದಲು ಉಂಡೆನು. ಅನಂತರ ನೀನು ಸೇವಿಸಿದೆ; **ಬಾಲತ್ವದಿಂದೆ ಎಲ್ಲಿಯುಮ್ ವಿನಯ ಉಲ್ಲಂಘನಮ್ ಆದುದಿಲ್ಲ**=ಚಿಕ್ಕಂದಿನಿಂದಲೂ ಜೀವನದ ಎಲ್ಲ ಕಡೆಗಳಲ್ಲಿಯೂ **“ಅಣ್ಣನಾದ ನಾನು ಮೊದಲು; ತಮ್ಮನಾದ ನೀನು ನಂತರ”** ಎಂಬ ಒಲವು ನಲಿವಿನ ನಡೆನುಡಿಯು ನಮ್ಮಿಬ್ಬರ ನಡುವೆ ಎಂದಿಗೂ ತಪ್ಪಿರಲಿಲ್ಲ; ಮೊನೆ= ಕಾಳೆಗ/ಯುದ್ಧ; ಮುಂಚು=ಮುಂಚಿತವಾಗಿ ಹೋಗು/ಮೊದಲು ಹೋಗು;

**ಮೊನೆಯೊಳ್ ಮರಣಕ್ಕೆ ಎನ್ನಿಂದೆ ನೀನ್ ಮುಂಚಿದಯ್**=ರಣರಂಗದಲ್ಲಿ ಸಾವನ್ನು ನನಗಿಂತ ಮುಂಚಿತವಾಗಿ ನೀನು ಅಪ್ಪಿದೆ; ಸೂಳ್=ಸರದಿ; ಇದೊಂದು

**ಎಡೆಯೊಳಮ್ ಸೂಳ್ ತಡಮಾಯ್ತು ಎಂದು ವಿಪ್ರಲಾಪಮ್ ಗೆಯ್ದು**= ಇದೊಂದು ಜಾಗದಲ್ಲಿ ನನ್ನ ನಿನ್ನ ನಡುವೆ ಇದ್ದ ಸರದಿಯು ಹಿಂದುಮುಂದಾಯಿತು ಎಂದು ಅತಿಯಾಗಿ ಗೋಳಾಡುತ್ತ; 'ದುರ್ಯೋಧನ' ಎಂದರೆ **"ಯಾರಿಂದಲೂ ಸೋಲಿಸಲಾಗದಂತಹ ಶಕ್ತಿಯುಳ್ಳ ಕಾದಾಳು"** ಎಂಬ ತಿರುಳಿದೆ; **ಅನುಜನ ನೆತ್ತರನ್ ಈಂಟಿದವನನ್ ಇಂದು ಆ ಪ್ರಾಣಸಹಿತಮ್ ಈಂಟದೆ ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂಪೆನೆ**=ತಮ್ಮನ ರಕ್ತವನ್ನು ಕುಡಿದವನನ್ನು ಇಂದು ಜೀವಸಹಿತವಾಗಿ ನುಂಗಿನೊಣೆಯದೆ ' ದುರ್ಯೋಧನ ' ಎಂಬ ಹೆಸರಿಗೆ ತಕ್ಕಂತೆ ಸೇಡನ್ನು ತೀರಿಸಿಕೊಳ್ಳದೆ ಇರುತ್ತೇನೆಯೇ; ಬನ್ನ=ಅವಮಾನ/ಸೋಲು; ನೀಗು=ನಿವಾರಿಸು/ಪರಿಹರಿಸು;

**ದುಶ್ಶಾಸನನ ಬನ್ನಮನ್ ನೀಗುವೆನೆ ಎಂದು**=ದುಶ್ಶಾಸನನಿಗೆ ಭೀಮನಿಂದಾಗಿರುವ ಅಪಮಾನದ ಸೋಲಿಗೆ ತಕ್ಕ ಪ್ರತೀಕಾರವನ್ನು ಮಾಡದೆ ಇರುತ್ತೇನೆಯೇ ಎಂದು ನುಡಿದು; ಪಿಂಗ+ಅಕ್ಷನ್; ಪಿಂಗ=ಕಂದು ಬಣ್ಣ; ಅಕ್ಷ=ಕಣ್ಣು; ಪಿಂಗಾಕ್ಷನ್=ಕೆಂಗಣ್ಣುಳ್ಳವನು/ ದುರ್ಯೋಧನ; ಕೋಪ+ಅರುಣೀ+ ಕೃತ+ನೇತ್ರನ್+ಆಗಿ; ಅರುಣ=ಕೆಂಪು; ಅರುಣೀಕೃತ= ಕೆಂಪಾದ; ನೇತ್ರ=ಕಣ್ಣು; **ಪಿಂಗಾಕ್ಷನ್ ಕೋಪಾರುಣೀಕೃತನೇತ್ರನಾಗಿ**=ಕೋಪದ ತೀವ್ರತೆಯಿಂದ ಕೆಂಪಾದ ಕಣ್ಣುಗಳ ದುರ್ಯೋಧನನು; ಕಳೇಬರ=ಹೆಣ; ತಳರ್=ಹೊರಡು; **ತನ್ನ ತಮ್ಮನ ಕಳೇಬರಮನ್ ನೋಡಲಾರದೆ ಅಲ್ಲಿಮ್ ತಳರ್ದು**=ತುಂಡುತುಂಡಾಗಿದ್ದ ತನ್ನ ತಮ್ಮನ ಹೆಣವನ್ನು ನೋಡಲಾರದೆ, ಅಲ್ಲಿಂದ ಹೊರಟು ಮುಂದಕ್ಕೆ ಅಡಿಯಿಟ್ಟನು;

❖

## ನೋಟ-೧೨

# ಕರ್ಣನ ಅಗಲಿಕೆಯ ಸಂಕಟ

ಕರಿ=ಆನೆ; ತುರಗ=ಕುದುರೆ; ಕರಾಳ=ಭಯಂಕರವಾದ; **ಕರಿ ತುರಗ ನರ ಕಳೇಬರ ಕರಾಳ ರಣರಂಗದಲ್ಲಿ ಬರೆವರೆ**=ಆನೆ ಕುದುರೆ ಮತ್ತು ಮಾನವರ ಹೆಣಗಳು ಗುಂಪುಗುಂಪಾಗಿ ಕೆಡೆದು ಬಿದ್ದಿದ್ದ ಭಯಂಕರವಾದ ಕುರುಕ್ಷೇತ್ರ ರಣರಂಗದಲ್ಲಿ ದುರ್ಯೋಧನನು ಸಂಜಯನ ಜತೆಗೂಡಿ ರಣ ಭೂಮಿಯಲ್ಲಿ ಶರಮಂಚದ ಮೇಲೆ ಮಲಗಿರುವ ಭೀಷ್ಮರನ್ನು ನೋಡಲೆಂದು ಬರುತ್ತಿರಲು; ನರ=ಅರ್ಜುನ; ಕರ=ಹಸ್ತ/ಕಯ್; ವಿಮುಕ್ತ=ಬಿಟ್ಟ/ಪ್ರಯೋಗಿಸಿದ; ಜರ್ಜರಿತ+ಅಂಗನನ್; ಅಂಗ=ದೇಹ/ಶರೀರ; **ನರ ಕರ ವಿಮುಕ್ತ ಶರ ಜರ್ಜರಿತಾಂಗನನ್ ಅಂಗರಾಜನನ್ ಕುರುರಾಜನ್ ಕಂಡನ್**=ಅರ್ಜುನನು ಬಿಟ್ಟ ಬಾಣಗಳ ಪೆಟ್ಟಿನಿಂದ ತೀವ್ರವಾಗಿ ಗಾಯಗೊಂಡ ದೇಹದ ಕರ್ಣನನ್ನು ದುರ್ಯೋಧನನು ನೋಡಿದನು; **ಆಗಳ್ ಅದನ್ ಸಂಜಯನ್ ಕಂಡು**=ಆಗ ಅದನ್ನು ಸಂಜಯನು ನೋಡಿ; **ಗಂಡಸ್ಯೋಪರಿ ಸ್ಫೋಟಕ**=ಕುರುವಿನ ಮೇಲೆ ಬೊಕ್ಕೆ/ಗಾಯದ ಮೇಲೆ ಹುಣ್ಣು; ನಿಜ=ತನ್ನ; ಪ್ರಿಯ+ತನುಜ+ಅನುಜರ; ತನುಜ=ಮಗ; ಅನುಜ=ತಮ್ಮ; ವಿಹ್ವಳೀಕೃತನ್+ಅಪ್ಪ; ವಿಹ್ವಳ=ಸಂಕಟಕ್ಕೆ ಒಳಗಾದ;

**ನಿಜಪ್ರಿಯ ತನೂಜಾನುಜರ ಶೋಕದಿಮ್ ವಿಹ್ವಳೀಕೃತನಪ್ಪ ಭೂತಳೇಶ್ವರಂಗೆ**=ತನ್ನ ಪ್ರೀತಿಪಾತ್ರರಾದ ಮಕ್ಕಳನ್ನು ಮತ್ತು ತಮ್ಮಂದಿರನ್ನು ಕಳೆದುಕೊಂಡು ಶೋಕದಿಂದ ತತ್ತರಿಸುತ್ತಿರುವ ದುರ್ಯೋಧನನಿಗೆ; **'ಗಂಡಸ್ಯೋಪರಿ ಸ್ಫೋಟಕಮ್' ಎಂಬಂತೆ ನಿಜಪ್ರಿಯಸಖನಪ್ಪ ಕರ್ಣನ ದರ್ಶನದಿಮ್ ದುಃಖ ಮರುಕೊಳಿಸುಗುಮ್ ಎಂದು ಮನದೊಳೆ ಬಗೆದಿರೆ= "ಗಾಯದ ಮೇಲೆ ಹುಣ್ಣು"**

ಆದಂತೆ ತನ್ನ ಒಲುಮೆಯ ಗೆಳೆಯನಾದ ಕರ್ಣನ ಕಳೇಬರನ್ನು ಕಂಡಿದ್ದರಿಂದ ಸಂಕಟವು ಇಮ್ಮಡಿಗೊಳ್ಳುತ್ತದೆ ಎಂದು ಸಂಜಯನು ತನ್ನ ಮನದಲ್ಲಿಯೇ ಅಂದು ಕೊಳ್ಳುತ್ತಿರಲು; ಅಂಗಪತಿ=ಅಂಗರಾಜ್ಯದ ರಾಜನಾದ ಕರ್ಣ; ವಸುಧೆ=ಭೂಮಿ; ವರೂಥ=ತೇರು; ನೆಗಪಿ=ಮೇಲಕ್ಕೆತ್ತಿ; **ಅಂಗಪತಿ ವಸುಧೆ ನುಂಗಿದುದಮ್ ವರೂಥಮಮ್ ನೆಗಪಿ**=ಕರ್ಣನು ರಣರಂಗದ ನೆತ್ತರಿನ ಕೆಸರಿನಲ್ಲಿ ಸಿಲುಕಿದ್ದ ತೇರಿನ ಚಕ್ರವನ್ನು ಮೇಲಕ್ಕೆತ್ತಿ ಸಮತಟ್ಟಾದ ಗಟ್ಟಿನೆಲೆಯಲ್ಲಿ ನಿಲ್ಲಿಸಿ;

**ಸಮಪಾದಶೋಭೆಯುಮ್ ಬಗೆಗೊಳೆ**=ಪಾದಗಳೆರಡನ್ನು ಸಮಾನವಾಗಿ ಊರಿ ಮನೋಹರವಾದ ನಿಲುವಿನಲ್ಲಿ ನಿಂತುಕೊಂಡು; ದಕ್ಷಿಣ=ಬಲಗಡೆ; **ತನ್ನ ಮುನ್ ತೆಗೆದ ದಕ್ಷಿಣಮುಷ್ಟಿಯೆ ಕರ್ಣಮೂಲದೊಳ್ ಸೊಗಯಿಸೆ**=ಹಗೆಯಾದ ಅರ್ಜುನನನ್ನು ಕೊಲ್ಲಲೆಂದು ಬಿಲ್ಲಿನ ಹೆದೆಗೆ ಬಾಣವನ್ನು ಹೂಡಿ ಎಳೆದ ಬಲಗಡೆಯ ಮುಷ್ಟಿಯು ಕಿವಿಯ ತುದಿಯವರೆಗೂ ಬಂದಿರಲು; **ಪಾಳಿಯಮ್ ನೆರಪದೆ ಆಳ್ದನ ಕಜ್ಜಮನ್ ಒಕ್ಕು ಸತ್ತರಮ್ ನಗುವವೊಲ್**= ಸ್ವಾಮಿಕಾರ್ಯವನ್ನು ಮಾಡದೆ, ಒಡೆಯನ ಕೆಲಸವನ್ನು ಕಡೆಗಣಿಸಿ ಸಾವನ್ನಪ್ಪಿದವರನ್ನು ಅಣಕಿಸುವಂತೆ; ಕೇತು=ಬಾವುಟ; **ನಿಜೋನ್ನತ ಕೇತುದಂಡಮಮ್ ನೆಮ್ಮಿ ಇರ್ದನ್**=ಕರ್ಣನು ತನ್ನ ಉನ್ನತವಾದ ಬಾವುಟದ ಕೋಲನ್ನು ಒರಗಿಕೊಂಡಿದ್ದನು; ದಿನಕರತನೂಜ= ಸೂರ್ಯನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು ಕರ್ಣ; ಅಂತಿರ್ದ ದಿನಕರತನೂಜನನ್ ರಾಜರಾಜನ್ ನೋಡಿ=ಆ ರೀತಿ ಹೋರಾಟದ ಭಂಗಿಯಲ್ಲಿಯೇ ನಿಂತಿದ್ದ ಕರ್ಣನ ಕಳೇಬರವನ್ನು ದುರ್ಯೋಧನನು ನೋಡಿ;

**ಬಾಷ್ಪವಾರಿ ಧಾರಾಪೂರಿತ ಲೋಚನನುಮ್**= ಕಣ್ಣುಗಳಲ್ಲಿ ಒಂದೇ ಸಮನೆ ಕಂಬನಿಯು ಹರಿಯುತ್ತಿರಲು; **ಮನ್ಯೂದ್ಗತಕಂಠನುಮ್**=ಉಕ್ಕಿಬಂದ ಸಂಕಟದಿಂದ ಕೊರಳು ಕಟ್ಟಿದಂತಾಗಿರಲು; **ಅಸಹ್ಯಶೋಕಾನಲ ದಹ್ಯಮಾನ ಅಂತಃಕರಣನುಮಾಗಿ**=ತಡೆಯಲಾರದ ಸಂಕಟದ ಬೇಗೆಯಲ್ಲಿ ಬೇಯುತ್ತ, ಮನದಲ್ಲಿ ತೀವ್ರವಾದ ನೋವುಳ್ಳವನಾಗಿ; ದಲ್=ನಿಜವಾಗಿ/ನಿಸ್ಸಂದೇಹವಾಗಿ; **ಆನುಮ್ ದುಶ್ಶಾಸನನುಮ್ ನೀನುಮ್ ಮೂವರೆ ದಲ್**=ನಾನು, ದುಶ್ಶಾಸನ ಮತ್ತು ನೀನು–ಮೂವರೆ ನಿಜವಾಗಿಯೂ ಈ ಜಗತ್ತಿನಲ್ಲಿ ಆತ್ಮೀಯರಾಗಿದ್ದವರು; **ಆತನುಮ್ ಕಳಿದ ಬಳಿಕ್ಕೆ**=ಆತನು ಸಾವನ್ನಪ್ಪಿದ ಬಳಿಕ; **ಆನುಮ್ ನೀನೆ ದಲ್**= ಕಂಡೆಯಾ... ನಾನು ನೀನು ಇಬ್ಬರು ಉಳಿದುಕೊಂಡೆವು; ಅಂಗ+ಅಧಿಪತಿ; ಅಂಗಾಧಿಪತಿ=ಅಂಗ ಎಂಬ ದೇಶದ ಒಡೆಯನಾದ ಕರ್ಣ; **ಈಗಳ್ ನೀನುಮ್ ಅಗಲ್ದು ಎತ್ತವೋದೆ ಅಂಗಾಧಿಪತಿ**=ಈಗ ನೀನು ನನ್ನನ್ನು ತೊರೆದು ಎತ್ತ ಹೋದೆ ಕರ್ಣಾ; ಅಣ್ಮು= ಪರಾಕ್ರಮ/ ಸಾಹಸ;

**ನಿನ್ನ ಮಗನ್ ವೃಷಸೇನನ್ ತನ್ನ ಮಗನ್ ಲಕ್ಷಣನುಮ್ ಅಣ್ಮಿ ಸತ್ತನ್**=ನಿನ್ನ ಮಗ ವೃಷಸೇನ ಮತ್ತು ನನ್ನ ಮಗ ಲಕ್ಷಣನು–ಇಬ್ಬರೂ ಕುರುಕ್ಷೇತ್ರ ರಣರಂಗದಲ್ಲಿ ಪರಾಕ್ರಮದಿಂದ ಹೋರಾಡುತ್ತ ಸಾವನ್ನಪ್ಪಿದರು; **ಅಂಗಾಧಿಪತಿ, ನೀನ್ ಎನ್ನನ್ ಸಂತೈಸುವುದು ಆನ್ ನಿನ್ನನ್ ಸಂತೈಸೆ ಬಂದೆನ್**=ಕರ್ಣನೇ, ನೀನು ನನ್ನನ್ನು ಸಮಾಧಾನಪಡಿಸಬೇಕು... ನಾನು ನಿನ್ನನ್ನು ಸಮಾಧಾನಪಡಿಸಲೆಂದು ನಿನ್ನ ಬಳಿಗೆ ಬಂದೆನು; **ರವಿಸುತ, ನಿನ್ನ ಇಂದಿನ ತೆರನಮ್ ಇದನ್ ಅರಿಯೆನ್**=ಕರ್ಣನೇ, ನನ್ನನ್ನು ಕಂಡರೂ ಕಾಣದಂತಿರುವ ನಿನ್ನ ಇಂದಿನ ರೀತಿಯು ನನಗೆ ತಿಳಿಯುತ್ತಿಲ್ಲ; ಮುಳಿ=ಕೆರಳು/ಕೋಪಗೊಳ್ಳು; ಮೇಣ್=ಇಲ್ಲವೇ; ಮರು+ಮಾತು; ಮರುವಾತು=ಪ್ರತಿಯಾಗಿ ಮಾತನಾಡುವುದು; ಮರಸುಂದು=ಮಯ್ ಮರೆತು ಮಲಗು; **ನೀನ್ ಎನಗೆ ಅದೇಕೆ ಮುಳಿದಿರ್ಪೆಯೊ ಮೇಣ್ ಮರುವಾತು ಕುಡದೆ ಮರಸುಂದು ಇರ್ದಪೆಯೊ ಮೇಣ್ ಬಳಲ್ದು ಇರ್ದಪೆಯೋ**=ನೀನು ನನ್ನ ಬಗ್ಗೆ ಅದೇಕೆ ಕೋಪಿಸಿಕೊಂಡಿರುವೆಯೋ ಇಲ್ಲವೇ ನನ್ನ ಮಾತುಗಳಿಗೆ ಪ್ರತಿಯಾಗಿ ಮರುಮಾತನಾಡದೆ ಮಯ್ ಮರೆತಿರುವೆಯೋ ಇಲ್ಲವೇ ಬಳಲಿಕೆಯಿಂದ ನಿತ್ರಾಣಗೊಂಡಿರುವೆಯೋ; ಬೆಸನ=ಕೆಲಸ;

**ಅಂಗಾಧಿಪತಿ, ನಿನ್ನ ಈ ಕೆಳೆಯ ಸುಯೋಧನನ್ ನೋಡದೆ ನುಡಿಯದೆ ಅಪ್ಪಿಕೊಳ್ಳದೆ ಬೆಸನ್ ಏನ್ ಎನ್ನದೆ ಜೀಯ ಎನ್ನದೆ ದೇವ ಎನ್ನದೆ ಏಕೆ ಉಸಿರದಿರ್ಪೆ**= ಕರ್ಣಾ, ನಿನ್ನ ಜೀವದ ಗೆಳೆಯನಾದ ಈ ದುರ್ಯೋಧನನನ್ನು ನೋಡದೆ ಮಾತನಾಡಿಸದೆ ತಬ್ಬಿಕೊಳ್ಳದೆ ಬಂದ ಕೆಲಸವೇನು ಎಂದು ವಿಚಾರಿಸದೆ ಒಡೆಯ ಎನ್ನದೆ ದೇವ ಎನ್ನದೆ ಏಕೆ ಏನನ್ನೂ ಮಾತನಾಡದಿರುವೆ; ಅನೃತ=ಸುಳ್ಳು; ಲೋಭ=ಜಿಪುಣತನ; **ರವಿನಂದನ, ಅನೃತಮ್ ಲೋಭಮ್ ಭಯಮ್ ಎಂಬ ಇನಿತುಮ್ ನೀನ್ ಇರ್ದ ನಾಡೊಳ್ ಇರ್ಕುಮೆ**=ರವಿನಂದನ ಸುಳ್ಳು–ಜಿಪುಣತನ–ಅಂಜಿಕೆ ಎಂಬ ಸಣ್ಣತನದ ನಡೆನುಡಿಗಳು ನೀನಿರುವ ನಾಡಿನಲ್ಲಿ ಇರುತ್ತವೆಯೇ; ಅಂದರೆ ಸೂರ್ಯನು ಬೆಳಗುವ ಎಡೆಯಲ್ಲಿ ಕತ್ತಲು ಹೇಗೆ ಇರುವುದಿಲ್ಲವೋ ಅಂತೆಯೇ ನೀನಿರುವ ಎಡೆಯಲ್ಲಿ ಇಂತಹ ನೀಚಗುಣಗಳಿಗೆ ಎಡೆಯಿಲ್ಲ; ನನ್ನಿ=ಸತ್ಯ/ನಿಜ; ಚಾಗ=ತ್ಯಾಗ; ಅಣ್ಮು=ಪರಾಕ್ರಮ;

**ನನ್ನಿ ಚಾಗಮ್ ಅಣ್ಮು ಎಂಬ ಇನಿತರ್ಕಮ್ ನೀನೆ ಮೊತ್ತಮೊದಲಿಗನಾದಯ್**= ಸತ್ಯ–ತ್ಯಾಗ–ಪರಾಕ್ರಮ ಎಂಬ ಒಳ್ಳೆಯ ಗುಣಗಳ ಆಚರಣೆಯಲ್ಲಿ ನೀನೆ ಮೊತ್ತ ಮೊದಲಿಗನಾಗಿರುವೆ; **ನೀನ್ ಆರ್ಗೆ ಎಂದು ಆನ್ ಅರಿವೆನ್**=ನಿನ್ನ ತಾಯಿ ತಂದೆ ಯಾರೆಂಬುದನ್ನು ನಾನು ತಿಳಿದಿದ್ದೇನೆ; ಪೃಥೆ ಅರಿವಳ್=ಕುಂತಿಗೆ ಗೊತ್ತಿದೆ; ದಾನವ+ರಿಪು; ದಾನವ=ರಕ್ಕಸ; ರಿಪು=ಶತ್ರು; ದಾನವರಿಪು=ರಕ್ಕಸರ ಶತ್ರುವಾದ

ಕೃಷ್ಣ; **ದಾನವರಿಪು ಅರಿವನ್**=ಕೃಷ್ಣನಿಗೆ ಗೊತ್ತಿದೆ; **ಅರ್ಕನ್ ಅರಿವನ್**=ಸೂರ್ಯದೇವನಿಗೆ ಗೊತ್ತಿದೆ; **ದಿವ್ಯಜ್ಞಾನಿ ಸಹದೇವನ್ ಅರಿವನ್**=ಉತ್ತಮ ತಿಳುವಳಿಕೆಯುಳ್ಳ ಸಹದೇವನಿಗೆ ಗೊತ್ತಿದೆ; ಆರುಮ್ ಅರಿಯರ್=ಈ ಅಯ್ದು ಮಂದಿಯನ್ನು ಬಿಟ್ಟರೆ, ಇನ್ನು ಯಾರಿಗೂ ನಿನ್ನ ನಿಜವಾದ ತಾಯಿತಂದೆ ಯಾರೆಂಬುದು ಗೊತ್ತಿಲ್ಲ; **ಅಂಗಾಧಿಪತಿ ಒಡವುಟ್ಟಿದನ್ ಎಂದು ಅರಿದೊಡೆ ಧರ್ಮತನಯನ್ ರಾಜ್ಯಮನೆ ನಿನಗೆ ಕುಡುಗುಮ್**=ಅಂಗರಾಜ್ಯದ ಒಡೆಯನಾದ ಕರ್ಣನು ಒಡಹುಟ್ಟಿದವನು ಎಂಬ ಸಂಗತಿಯು ಗೊತ್ತಾದರೆ ಧರ್ಮರಾಯನು ತನ್ನ ಪಾಲಿನ ರಾಜ್ಯವನ್ನೇ ನಿನಗೆ ಕೊಡುತ್ತಾನೆ;

**ರಾಜ್ಯಕ್ಕೆ ಒಡೆಯನನ್ ಅರಿಯುತ್ತುಮ್ ಇರ್ದನ್ ಆನ್ ಕುಡಲಾರ್ತೆನಿಲ್ಲ**=ಹಸ್ತಿನಾವತಿಯ ರಾಜಕುಮಾರರಾದ ಕೌರವರು ಮತ್ತು ಪಾಂಡವರಲ್ಲಿ ಎಲ್ಲರಿಗಿಂತಲೂ ಹಿರಿಯವನಾದ ನೀನೇ ಸಿಂಹಾಸನದ ಪಟ್ಟಕ್ಕೆ ಹಕ್ಕುಳ್ಳ ಒಡೆಯನೆಂದು ನನಗೆ ತಿಳಿದಿದ್ದರೂ ನಿನಗೆ ನಾನು ರಾಜ ಪದವಿಯನ್ನು ಬಿಟ್ಟುಕೊಡಲಿಲ್ಲ; **ಅಂಗಾಧಿಪತಿ... ನೀನ್ ಉಳ್ಳೊಡೆ ಉಂಟು ರಾಜ್ಯಮ್... ನೀನ್ ಉಳ್ಳೊಡೆ ಪಟ್ಟಮುಂಟು ಬೆಳ್ಗೊಡೆ ಉಂಟಯ್... ನೀನ್ ಉಳ್ಳೊಡೆ ಉಂಟು ಪೀಳಿಗೆ... ನೀನಿಲ್ಲದೆ ಇವೆಲ್ಲಮ್ ಒಳವೆ**=ಅಂಗರಾಜ್ಯದ ಒಡೆಯನೇ, ನೀನು ಇದ್ದರೆ ನನ್ನ ಪಾಲಿಗೆ ಈ ರಾಜ್ಯ ಈ ಪಟ್ಟ ಈ ಬೆಳ್ಗೊಡೆ ಈ ರಾಜವಂಶವೆಂಬುದೆಲ್ಲವೂ ಇರುತ್ತವೆ.ನೀನೇ ಇಲ್ಲದೆ ಇವೆಲ್ಲವೂ ಇರುವುವೇ. ಅಂದರೆ ನೀನಿಲ್ಲದ ಈ ಜಗತ್ತಿನಲ್ಲಿ ಈಗ ನನ್ನ ಪಾಲಿಗೆ ಇವು ಇದ್ದು ಇಲ್ಲದಂತಾಗಿವೆ; **ಹರಿ ಬೇಡೆ ಕವಚಮನ್ ನೀನ್ ಅರಿದಿತ್ತಯ್**=ಕೃಷ್ಣನು ಬ್ರಾಹ್ಮಣ ವಟುವಿನ ವೇಷದಲ್ಲಿ ಬಂದು ತನ್ನ ಮಗನ ಉಪನಯನಕ್ಕೆಂದು ನೆರವನ್ನು ಕೋರಿದಾಗ, ಹುಟ್ಟಿನಿಂದಲೇ ನಿನ್ನ ದೇಹದ ಜತೆಯಲ್ಲಿದ್ದ ಕವಚವನ್ನು ಹರಿದು ಕೊಟ್ಟೆ; ಪುರಿಗಣೆ=ಕರ್ಣನ ಬಳಿಯಿರುವ ಅತಿಹೆಚ್ಚಿನ ಶಕ್ತಿಯುಳ್ಳ ಒಂದು ಬಾಣದ ಹೆಸರು;

**ಕೊಂತಿ ಬೇಡೆ ಬೆಚ್ಚದೆ ಪುರಿಗಣೆಯನ್ ಕೊಟ್ಟಯ್**=ಹೆತ್ತತಾಯಿ ಕುಂತಿಯು ಕೇಳಿಕೊಳ್ಳಲು ಹಿಂಜರಿಯದೆ ಪುರಿಗಣೆಯನ್ನು ತೊಡುವುದಿಲ್ಲವೆಂಬ ವಾಗ್ದಾನವನ್ನು ನೀಡಿದೆ. "ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಅರ್ಜುನನನ್ನು ಒಳಗೊಂಡಂತೆ ಪಾಂಡು ಕುಮಾರರ ಮೇಲೆ ಪುರಿಗಣೆಯನ್ನು ತೊಡುವುದಿಲ್ಲ" ಎಂಬ ಭಾಷೆಯನ್ನು ಕರ್ಣನು ಕುಂತಿಗೆ ನೀಡುತ್ತಾನೆ; ಕಸವರ+ಕಲಿ; ಕಸವರ=ಚಿನ್ನ/ಹೊನ್ನು; ಕಲಿ=ಶೂರ; ಕಸವರಗಲಿ=ಚಿನ್ನವನ್ನು ಅಂದರೆ ಸಂಪತ್ತನ್ನು ದಾನವಾಗಿ ಕೊಡುವುದರಲ್ಲಿ ದೊಡ್ಡವನು/ದಾನಶೂರ; **ಅಂಗಾಧಿಪತಿ, ನಿನಗೆ ಎಣೆ ಕಸವರಗಲಿ ಮೆಯ್ಗಲಿಯುಮ್ ಆವನ್**=ಕರ್ಣ, ಈ ಜಗತ್ತಿನಲ್ಲಿ ನಿನಗೆ

ಸಮಾನನಾದ ದಾನಶೂರನೂ ಪರಾಕ್ರಮಶಾಲಿಯೂ ಮತ್ತಾವನಿದ್ದಾನೆ; ನಯನ=ಕಣ್ಣು; ಎರ್ದೆ=ಮನಸ್ಸು/ಹೃದಯ; **ನಯನದೊಳಮ್ ಎರ್ದೆಯೊಳಮ್ ನಿನ್ನಯ ರೂಪು ಇರ್ದಪುದು**=ನನ್ನ ಕಣ್ಣುಗಳೊಳಗೆ ನನ್ನ ಎದೆಯೊಳಗೆ ನಿನ್ನ ರೂಪು ಚಿತ್ರಣಗೊಂಡಿದೆ;

**ನಿನ್ನ ಮಾತು ಎನ್ನಯ ಕಿವಿಯೊಳಗೆ ಇರ್ದಪುದು**=ನಿನ್ನ ಮಾತುಗಳು ನನ್ನ ಕಿವಿಯೊಳಗೆ ಮೊರೆಯುತ್ತಿವೆ; ಇನ=ಸೂರ್ಯ; ಇನನಂದನ=ಕರ್ಣ; **ಇನನಂದನ, ವಿಯೋಗಮ್ ಎಂತು ಆದುದು ಅರಿಯೆನ್**=ಕರ್ಣ, ಅಗಲಿಕೆಯು ಹೇಗೆ ಉಂಟಾಯಿತು ಎಂಬುದನ್ನು ತಿಳಿಯೆನು; ಕಿರೀಟಿ=ಅರ್ಜುನ; **ಅಂಗಾಧಿಪತಿ, ನಿನ್ನನ್ ಕೊಂದ ಕಿರೀಟಿಯುಮ್ ಎನ್ನ ಅನುಜನನ್ ಇಕ್ಕಿ ಕೊಂದ ಭೀಮನುಮ್ ಒಳನ್**=ಕರ್ಣ, ನಿನ್ನನ್ನು ಕೊಂದ ಅರ್ಜುನನು ಮತ್ತು ನನ್ನ ತಮ್ಮ ದುಶ್ಶಾಸನನನ್ನು ಹೊಡೆದು ಕೊಂದ ಭೀಮ–ಇಬ್ಬರೂ ಇನ್ನೂ ಜೀವಂತ ವಾಗಿದ್ದಾರೆ; **ಆನ್ ಇನ್ನುಮ್ ಒಳೆನ್**=ನಾನೂ ಇನ್ನೂ ಜೀವಂತವಾಗಿದ್ದೇನೆ; ಕೂರ್ಮೆ= ಒಲುಮೆ/ ನಲುಮೆ/ಪ್ರೀತಿ; ಅದು+ಎನ್ನ; ಸೌಧರ್ಮಿಕೆ=ಒಳ್ಳೆಯತನ; ಗಡ=ನೋಡಿದೆಯಾ/ಕಂಡೆಯಾ; **ನಿನ್ನಯ ಕೂರ್ಮೆಗಮ್ ಅದೆನ್ನ ಸೌಧರ್ಮಿಕೆಗಮ್ ಗಡ ಸಾಲದೆ**=ನೀನು ನನ್ನಲ್ಲಿಟ್ಟಿದ್ದ ಪ್ರೀತಿಗೂ ಅದಕ್ಕೆ ಪ್ರತಿಯಾಗಿ ನಾನು ನಿನ್ನಲ್ಲಿಟ್ಟಿರುವ ಪ್ರೀತಿಗೂ ಇರುವ ಅಂತರ ಎಷ್ಟು ಎಂಬುದನ್ನು ಕಂಡೆಯಾ. ಅಂದರೆ ನೀನು ನನಗಾಗಿ ನಿನ್ನ ಪ್ರಾಣವನ್ನು ಬಲಿಗೊಟ್ಟೆ. ಆದರೆ ನಾನಾದರೋ ನಿನಗಾಗಿ ಏನನ್ನೂ ಮಾಡಲಿಲ್ಲ; **ಇನನಂದನ ಕೇಳ್**=ಕರ್ಣನೇ ಕೇಳು. ಈಗ ನಾನು ನಿನ್ನ ಮುಂದೆ ಒಂದು ಪಣವನ್ನು ತೊಡುತ್ತಿದ್ದೇನೆ;

**ಇಂದು ಆನ್ ಆದೆನ್ ಮೇಣ್ ಪಾಂಡುತನಯರಾದರ್**=ಇಂದಿನಿಂದ ನಾನು ಜೀವಂತವಾಗಿರಬೇಕು ಇಲ್ಲವೇ ಪಾಂಡುತನಯರು ಜೀವಂತವಾಗಿರಬೇಕು; **ನಿನ್ನನ್ ಕೊಂದುಮ್ ದುಶ್ಶಾಸನನನ್ ಕೊಂದುಮ್ ಬರ್ದುಕುವರೆ**=ನಿನ್ನನ್ನು ಕೊಂದು ಮತ್ತು ದುಶ್ಶಾಸನನನ್ನು ಕೊಂದು ಆ ಪಾಂಡವರು ಜೀವಂತವಾಗಿರಲು ಸಾಧ್ಯವೇ ಇಲ್ಲ; **ಅಂಗಾಧಿಪತೀ, ಬರ್ದುಕರ್ ಎಂದು ವಿಪ್ರಲಾಪಮ್ ಗೆಯ್ದು**=ಕರ್ಣ ಅವರನ್ನು ಜೀವಂತವಾಗಿರಲು ನಾನು ಬಿಡುವುದಿಲ್ಲ ಎಂದು ಮತ್ತೆ ಮತ್ತೆ ಹೇಳುತ್ತ ಅತಿಯಾಗಿ ಗೋಳಾಡುತ್ತ; ಇರವು=ಇರುವ ಸ್ಥಿತಿ; ಅಸು=ಪ್ರಾಣ/ಜೀವ; **ಇನಸುತನ ಇರವಮ್ ದುಶ್ಶಾಸನನ ಇರವಮ್ ಕಂಡುಮ್ ಇನ್ನುಮ್ ಎನ್ನ ಅಸುವಿದು ನೆಟ್ಟನೆ ಪೋದುದಿಲ್ಲ**=ರಣರಂಗದ ನೆಲದಲ್ಲಿ ನೆತ್ತರಿನ ಕೆಸರಿನಲ್ಲಿ ಹೆಣಗಳ ಬಣಬೆಯ ನಡುವೆ ಹೆಣವಾಗಿ ಬಿದ್ದಿರುವ ಕರ್ಣ ಮತ್ತು ದುಶ್ಶಾಸನನ್ನು ನೋಡಿಯೂ ಇನ್ನು ನನ್ನ ಜೀವ ಹಾರಿಹೋಗಲಿಲ್ಲ; ಕಲ್+ಎರ್ದೆತನ;

ಕಲ್ಲೆರ್ದೆತನ=ಪ್ರೀತಿ, ಕರುಣೆ ಮತ್ತು ಜವಾಬ್ದಾರಿಯಿಲ್ಲದ ನಡೆನುಡಿ; ಬರ್ದನ್=ಬಾಳುತ್ತಿರುವವನು/ಜೀವಂತವಾಗಿರುವವನು;

**ಕಲ್ಲೆರ್ದೆತನದಿಂದೆ ಎನ್ನಂತು ಬರ್ದನ್ ಆವನುಮ್ ಒಳನೇ ಎಂದು ತನ್ನನ್ ತಾನೆ ನಿಂದಿಸಿಕೊಂಡು**=ಕಲ್ಲುಮನಸ್ಸಿನಿಂದ ಕೂಡಿ ಅಂದರೆ ಒಲಿದವರ ಬಗ್ಗೆ ಪ್ರೀತಿಯಾಗಲಿ ಜವಾಬ್ದಾರಿಯಾಗಲಿ ಇಲ್ಲದೆ ನನ್ನಂತೆ ಬದುಕುತ್ತಿರುವವನು ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೇ ಎಂದು ತನ್ನನ್ನು ತಾನೆ ನಿಂದಿಸಿಕೊಂಡು; ವಿಧಾತ್ರ=ಬ್ರಹ್ಮ; ಸೂನು=ಮಗ; ಅಳಿವು=ಸಾವು/ಮರಣ; **ವಿಧಾತ್ರ ಸೂನುಗಳ ಅಳಿವಮ್ ಪ್ರಿಯಮಿತ್ರ ಅನುಜರ ಅಳಿವಮ್ ನೀನ್ ಕಾಣಿಸಿ ಮುಂದೆ ಏನನ್ ಕಾಣಿಸಲಿರ್ದಪೆ**=ಬ್ರಹ್ಮನೇ, ಮಕ್ಕಳ ಸಾವನ್ನು ಪ್ರೀತಿಯ ಗೆಳೆಯ ಮತ್ತು ತಮ್ಮಂದಿರ ಸಾವನ್ನು ನಾನು ನೋಡುವಂತೆ ಮಾಡಿರುವ ನೀನು ಇನ್ನು ಮುಂದೆಯೂ ಇನ್ನು ಯಾವ ಯಾವ ದುರಂತವನ್ನು ನೋಡುವಂತೆ ಮಾಡುವೆ; **ನೀನ್ ಎನ್ನನ್ ಪಾಪಕರ್ಮನನ್ ನಿರ್ಗುಣನನ್ ಎಂದು ವಿಧಾತ್ರಂಗೆ ಪಲುಂಬಿ**=ಬ್ರಹ್ಮನೇ, ಪಾಪದ ಕೆಲಸದಲ್ಲಿಯೇ ಮಗ್ನನಾಗಿರುವ ಒಳ್ಳೆಯ ಗುಣವಿಲ್ಲದ ನನ್ನನ್ನು ಇನ್ನು ಮುಂದೆ ಯಾವ ಯಾವ ಬಗೆಯಲ್ಲಿ ದುರಂತಕ್ಕೆ ದೂಡುವೆಯೋ ಎಂದು ಪ್ರಲಾಪಿಸುತ್ತಿದ್ದು;

**ರಾಧಾನಂದನನ ಮೊಗಮಮ್ ನೋಡಿ ಸಂಜಯನನ್ ಇಂತು ಎಂದನ್**= ಕರ್ಣನ ಮೊಗವನ್ನು ನೋಡುತ್ತ ಸಂಜಯನನ್ನು ಈ ರೀತಿ ಕೇಳತೊಡಗಿದನು; **ಆರೊಡನೆ ನುಡಿವೆನ್**=ಇನ್ನು ಮುಂದೆ ನಾನು ಯಾರೊಡನೆ ಮಾತನಾಡಲಿ; ಅಳ್ತಿ=ಪ್ರೀತಿ: **ಅಳ್ತಿಯೊಳ್ ಆರೊಡನೆ ಓಲಗದೊಳ್ ಇರ್ಪೆನ್**=ಒಲವು ನಲಿವು ನೆಮ್ಮದಿಯಿಂದ ಯಾರೊಡನೆ ಒಡ್ಡೋಲಗದಲ್ಲಿ ರಾಜತನವನ್ನು ಮೆರೆಯಲಿ; ಸಮಂತು=ಚೆನ್ನಾಗಿ/ಸೊಗಸಾಗಿ/ಹಿಗ್ಗು/ಆನಂದ; ಆರೋಗಿಸು=ಊಟ ಮಾಡು; **ಆರೊಡನೆ ಸಮಂತು ಆರೋಗಿಪೆನ್**=ಯಾರೊಡನೆ ಆನಂದದಿಂದ ಊಟವನ್ನು ಮಾಡಲಿ; ಅಣುಗರ್+ಇಲ್ಲದೆ; ಅಣುಗ=ಪ್ರೀತಿ ಪಾತ್ರನಾದವನು; ಇಭ=ಆನೆ; ವಾಜಿ=ಕುದುರೆ; **ಎನ್ನ ಅಣುಗರಿಲ್ಲದೆ ಇಭ ವಾಜಿಗಳಮ್ ಆನ್ ಆರೊಡನೆ ಏರುವೆನ್**=ನನ್ನ ಪ್ರೀತಿಪಾತ್ರರಾದ ತಮ್ಮಂದಿರು, ಮಕ್ಕಳು ಮತ್ತು ಪರಿವಾರದವರಿಲ್ಲದೆ ಆನೆ ಕುದುರೆಗಳನ್ನು ಏರಿ ರಾಜತನದ ಸಿರಿವಂತಿಕೆಯನ್ನು ಹೇಗೆ ಮೆರೆಯಲಿ;

**ಕೆಳೆಯಂಗೆ ಅಸುಮೋಕ್ಷಮ್ ಆಯ್ತು**=ಗೆಳೆಯನಾದ ಕರ್ಣನಿಗೆ ಜೀವದಿಂದ ಬಿಡುಗಡೆಯಾಯ್ತು; **ಎನಗಮ್ ಬಾಷ್ಪಾಂಬುಮೋಕ್ಷಮ್ ಆಗದು**=ನನಗೆ ಕಣ್ಣೀರಿನಿಂದ ಬಿಡುಗಡೆಯಾಗದು. ಅಂದರೆ ನನ್ನ ಪಾಲಿಗೆ ಸಂಕಟವು ನಿರಂತರವಾಗಿದೆ; **ಧರಾತಳಮನ್ ಇವನ್ ಕೊಟ್ಟನ್**=ಭೂಮಂಡಲವನ್ನು ಆಳಲು

ಕರ್ಣನು ನೆರವಾದನು; ಜಳ+ಅಂಜಳಿಯುಮ್+ಅಮ್; ಅಂಜಲಿ/ಳಿ= ಬೊಗಸೆ; ಜಳಾಂಜಳಿ=ದೇವರ ಹೆಸರು ಇಲ್ಲವೇ ಮಂತ್ರವನ್ನು ಉಚ್ಚರಿಸುತ್ತ ಬೊಗಸೆಗಯ್ಯಿಂದ ನೀರನ್ನು ಎರೆಯುವುದು; **ನಾನ್ ಜಳಾಂಜಳಿಯುಮಮ್ ಕೊಟ್ಟೆನಿಲ್ಲ**=ನಾನು ಅವನಿಗೆ ಸಾವಿನ ನಂತರದ ತರ್ಪಣವನ್ನು ಬಿಡಲಿಲ್ಲ; **ಇವನ್ ಪ್ರತಾಪಶಿಖಿಯಿಂದೆ ಅನ್ಯಮಂಡಳಮಮ್ ಸುಟ್ಟನ್**=ಕರ್ಣನು ತನ್ನ ಪರಾಕ್ರಮವೆಂಬ ಬೆಂಕಿಯಿಂದ ಶತ್ರುರಾಜ್ಯಗಳನ್ನು ಸುಟ್ಟನು; ಸತ್+ಕ್ರಿಯಾ+ ಅನಳನ್+ಇಮ್; ಸತ್=ಒಳ್ಳೆಯ; ಅನಲ/ಳ=ಬೆಂಕಿ; ಸತ್ಕ್ರಿಯಾನಳ=ಹೆಣವನ್ನು ಬೆಂಕಿಯಲ್ಲಿ ಸುಡುವ ಆಚರಣೆ; **ಆನ್ ಈತನನ್ ಸತ್ಕ್ರಿಯಾನಳನಿಮ್ ಸುಟ್ಟೆನುಮಿಲ್ಲ**=ನಾನು ಈತನ ಹೆಣವನ್ನು ಚಿತೆಯ ಮೇಲಿಟ್ಟು ಬೆಂಕಿಯನ್ನೊಡ್ಡಿ ಸಂಸ್ಕಾರವನ್ನು ಮಾಡಲಿಲ್ಲ; ಮತ್=ನನ್ನ; ಕೂರ್=ಪ್ರೀತಿ/ಒಲುಮೆ;

**ಮತ್ ಪ್ರಿಯತಮನ್ ಕರ್ಣಂಗೆ ಇದೇನ್ ಕೂರ್ತೆನೋ ಎಂಬುದುಮ್**=ನನ್ನ ಪ್ರಿಯತಮನಾದ ಕರ್ಣನಿಗೆ ಯಾವ ಪ್ರೀತಿಯನ್ನು ತಾನೇ ನಾನು ತೋರಿಸಿದೆ ಎಂದು ದುರ್ಯೋಧನನು ತನ್ನನ್ನು ತಾನು ನಿಂದಿಸಿಕೊಳ್ಳಲು; **ಸಂಜಯನ್ ಇಂತು ಎಂದನ್**=ಸಂಜಯನು ಈ ರೀತಿ ಹೇಳಿದನು; ಪಳಯಿಸು=ಅಳು/ ರೋದಿಸು/ಗೋಳಾಡು; **ದೇವಾ, ನೀಮ್ ಇಂತೇಕೆ ಪಳಯಿಸುವಿರ್**=ದೇವಾ, ನೀವು ಈ ರೀತಿ ಏಕೆ ಪ್ರಲಾಪಿಸುತ್ತಿರುವಿರಿ; ದರ್ಪಣ=ಕನ್ನಡಿ; ಕುರುಕುಲದರ್ಪಣ= ಕುರುಕುಲಕ್ಕೆ ಕನ್ನಡಿಯಂತೆ ಇರುವವನು/ ದುರ್ಯೋಧನ; ದೃಗ್ ಜಲ=ಕಣ್ಣೀರು; ದಹನಕ್ರಿಯೆ=ಸುಡುವ ಕ್ರಿಯೆ/ಹೆಣವನ್ನು ಬೆಂಕಿಯಿಂದ ಸುಡುವ ಆಚರಣೆ; **ಕುರುಕುಲದರ್ಪಣ, ಕೆಳೆಯಂಗೆ ಜಲದಾನಕ್ರಿಯೆಯಮ್ ದೃಗ್ ಜಲದಿಮ್ ದಹನಕ್ರಿಯೆಯಮ್ ಕೋಪಾಗ್ನಿಯಿಂದೆ ಮಾಡಿದಯ್**= ಕುರುಕುಲ ದರ್ಪಣ, ಗೆಳೆಯನಾದ ಕರ್ಣನಿಗೆ ನೀರಿನ ತರ್ಪಣವನ್ನು ನಿನ್ನ ಕಣ್ಣೀರಿನಿಂದ... ಅಗ್ನಿ ಸಂಸ್ಕಾರವನ್ನು ನಿನ್ನ ಕೋಪವೆಂಬ ಬೆಂಕಿಯಿಂದ ಮಾಡಿದ್ದೀಯೆ; ಅಹರ್ಪತಿ= ಸೂರ್ಯ; **ಇನ್ ಅಹರ್ಪತಿ ಸುತನನ್ ಮರೆವುದು**=ಇನ್ನು ಕರ್ಣನನ್ನು ಮರೆತುಬಿಡು;

**ಪೆಂಡಿರ್ ಪಳಯಿಸುವ ಅಂದದೆ ಗಂಡರ್ ಪಳಯಿಸಿದೊಡೆ**=ಹೆಂಗಸರು ಪ್ರಲಾಪಿಸುವ ರೀತಿಯಲ್ಲಿ ಗಂಡಸರು ಅಳತೊಡಗಿದರೆ; ಆಯ=ಉದ್ದೇಶ/ ಪರಾಕ್ರಮ; **ಆಯುಮಮ್ ಛಲಮಮ್ ಕಯ್ ಕೊಂಡು ಎಸಪರಾರೊ**= ಉದ್ದೇಶಿದ ಕಾರ್ಯವನ್ನು ಚಲದಿಂದ ಕಯ್ಗೊಂಡು ಮಾಡುವವರು ಯಾರೊ; **ಕುರುಕುಲಮಂಡನ ನೀನ್ ಎತ್ತಿಕೊಂಡ ಛಲಮನೆ ಮೆರೆಯಾ ಎಂದು ಸಂಜಯ ನುಡಿದ ನುಡಿಯನ್ ಅವಧಾರಿಸಿ**=ಕುರುಕುಲಮಂಡನ, ನೀನು ಹಿಡಿದಿರುವ

ಚಲವನ್ನೇ ಮೆರೆಯುವಂತಹವನಾಗು ಎಂದ ಸಂಜಯನ ನುಡಿಗಳನ್ನು ಮನನ ಮಾಡಿಕೊಂಡು; ದರಹಾಸ=ಮುಗುಳುನಗೆ; **ಪೇಶಲ**=ಮನೋಹರವಾದ/ ಕೋಮಲವಾದ; **ದರಹಾಸಪೇಶಲಮ್... ದಿಕ್ಕರಿಗಮನಮ್... ಕನಕಪರ್ವತಪ್ರಾಂಶು ದಿನೇಶ್ವರಸುತನ ರೂಪು ಎನ್ನಾ ಚಿತ್ತಭಿತ್ತಿಯೊಳ್ ಚಿತ್ರಮ್ ಬರೆದಂತೆ ಇರ್ದಪುದು**= ಮುಗುಳುನಗೆಯ ಮನೋಹರವಾದ ಮೊಗದ ದಿಗ್ಗಜದಂತಹ ನಡೆಯುಳ್ಳ ಚಿನ್ನದ ಪರ್ವತದಂತೆ ಎತ್ತರವುಳ್ಳ ಕರ್ಣನ ರೂಪವು ನನ್ನ ಮನಸ್ಸಿನ ಗೋಡೆಯ ಮೇಲೆ ಚಿತ್ರ ಬರೆದಂತೆ ಇರುವುದು; ದೀಕ್ಷಾವಿಧಿ=ಯಜ್ಞ ಯಾಗಾದಿಗಳಲ್ಲಿ ಆಚರಿಸಬೇಕಾದ ನಿಯಮ/ಕ್ರಮ;

**ದೀಕ್ಷಾವಿಧಿಗಳ್ಗೆ ಗುರು**=ಯಾಗದ ಆಚರಣೆಗಳನ್ನು ನೆರವೇರಿಸುವಾಗ ಗುರು; **ಹಿತಕಾರ್ಯ ಆಳೋಚನಕ್ಕೆ ಮಂತ್ರಿ**=ಒಳಿತನ್ನುಂಟುಮಾಡುವ ಕಾರ್ಯಗಳ ಆಲೋಚನೆಗೆ ಮಂತ್ರಿ; ಉರ್ವರೆ=ಭೂಮಂಡಲ; **ಉರ್ವರೆಯಮ್ ಕಾವ ಗುಣಕ್ಕೆ ಆಳ್ದನ್**=ಭೂಮಂಡಲವನ್ನು ಕಾಪಾಡುವ ಗುಣಕ್ಕೆ ಸಾಹಸದ ಮತ್ತು ಪರಾಕ್ರಮದ ಒಡೆಯ; ಕ್ರೀಡಾರಸ=ಆಟದಿಂದ ಉಂಟಾಗುವ ಆನಂದ; ನರ್ಮಸಚಿವ=ರಾಜನ ಸರಸ ಸಲ್ಲಾಪದ ಮತ್ತು ವಿನೋದದ ಕ್ರೀಡೆಗಳಲ್ಲಿ ಜತೆಯಲ್ಲಿರುವವನು/ ಅಂತರಂಗದ ಸೇವಕ; **ಕ್ರೀಡಾರಸಕ್ಕೆ ನರ್ಮ ಸಚಿವನ್**=ಬಹುಬಗೆಯ ವಿನೋದದ ಆಟಗಳಲ್ಲಿ ಜತೆಗಾರ; **ಗುರುಭಾರಕ್ಕೆ ಆನೆಯಾಳ್**=ಮಹತ್ತರವಾದ ಕಾರ್ಯಗಳ ಹೊರೆಯನ್ನು ಹೊರುವುದಕ್ಕೆ ಆನೆಯಂತಹ ಆಳು. ಎಂತಹ ಜವಾಬ್ದಾರಿ ಯನ್ನಾಗಲಿ ಹೊರಬಲ್ಲವನು; **ರಣಕ್ಕೆ ಇರಿವಾಳ್**=ಹೋರಾಟದಲ್ಲಿ ಹಗೆಗಳನ್ನು ಕೊಲ್ಲುವ ವೀರ; ಕಟ್ಟಾಯ=ಆಪತ್ತಿನ ಸಮಯ/ಬಿಕ್ಕಟ್ಟಿನ ಸಮಯ; ತುಳಿಳಾಳ್= ವೀರ/ಶೂರ;

**ಕಟ್ಟಾಯದೊಳ್ ತುಳಿಲಾಳ್**=ಆಪತ್ತಿನ ಸಮಯದಲ್ಲಿ ಹೋರಾಡಿ ಗೆಲುವನ್ನು ತಂದುಕೊಡುವ ಶೂರ; ಪರಿಹಾಸ=ವಿನೋದ/ಸರಸ/ಹಾಸ್ಯ; ಮೇಳದಾಳ್= ಸಂಗೀತ/ವಾದ್ಯ/ಕುಣಿತ ಮುಂತಾದ ಕಲೆಗಳಲ್ಲಿ ಪರಿಣತ; **ಪರಿಹಾಸಕ್ಕೆ ಮೇಳದಾಳ್ ಎನಿಸಿರ್ದನ್**= ವಿನೋದದ ಕೇಳಿಗಳಲ್ಲಿ ಪರಿಣತ ಕಲಾವಿದನಾದ ಒಡನಾಡಿ; **ದುರ್ಯೋಧನನ್ ಕರ್ಣನನ್ ಎಂತು ಮರೆವನ್ ಎಂದು ಶೋಕಾಂಧನ್ ಕರ್ಣವಿರಹಿತನ್ ಅಪ್ಪುದರಿಮ್ ಸಂಕ್ರಂದನನಂದನಂಗೆ ಮುಳಿದು**= ಇಂತಹ ಮೇರುಗುಣಗಳಿಂದ ಕೂಡಿದ ಕರ್ಣನನ್ನು ಈ ದುರ್ಯೋಧನನು ಹೇಗೆ ತಾನೆ ಮರೆಯುವನು ಎಂದು ನುಡಿಯುತ್ತ, ಸಂಕಟದಿಂದ ಕುರುಡನಂತಾಗಿರುವ ಮತ್ತು ಕರ್ಣನಿಲ್ಲದೆ ಕಂಗಾಲಾಗಿರುವ ದುರ್ಯೋಧನನು, ತನ್ನ ಜೀವದ ಗೆಳೆಯನಾದ ಕರ್ಣನ ಸಾವಿಗೆ ಕಾರಣನಾಗಿದ್ದ ಅರ್ಜುನನ ಬಗ್ಗೆ ಕೋಪ

ಗೊಂಡು; ತರಣಿ=ಸೂರ್ಯ: ಆನನ+ಇಂದು; ಆನನ=ಮೊಗ; ಇಂದು=ಚಂದ್ರ;

**ತರಣಿತನಯ ಆನನೇಂದು ಸ್ಮರಣದೆ ಕಯ್ಗಣ್ಮುವ ಎನ್ನ ಶೋಕಮಹಾಸಾಗರಮಮ್**=ಕರ್ಣನ ಮುಖಚಂದ್ರದ ನೆನಪಿನಿಂದ ಉಕ್ಕೇರುವ ನನ್ನ ಶೋಕಮಹಾಸಾಗರವನ್ನು; ಬಾಡಬಾಗ್ನಿ=ಕಡಲಿನಲ್ಲಿ ಕಾಣಿಸಿಕೊಳ್ಳುವ ಬೆಂಕಿ; **ಭೀಕರ ಮತ್ ಕೋಪಾಗ್ನಿ ಬಾಡಬಾಗ್ನಿಯ ತೆರದಿಮ್**=ಭಯಂಕರವಾದ ನನ್ನ ಕೋಪವೆಂಬ ಬೆಂಕಿಯು ಬಾಡಬಾಗ್ನಿಯ ರೀತಿಯಲ್ಲಿ; **ತವೆ ಪೀರ್ದುದು ಎಂದು**=ಕಡಲಿನ ನೀರೆಲ್ಲವನ್ನೂ ಸಂಪೂರ್ಣವಾಗಿ ಹೀರಿಕೊಂಡಿತು ಎಂದು; **ಶೋಕರಸಮಮ್ ಕೋಪರಸದ ಮೇಲಿಕ್ಕಿ ಮಾರ್ಪಡೆ ಎಯ್ತರ್ಪುದಮ್ ನೋಡಿ**=ಶೋಕರಸವನ್ನು ಕೋಪರಸದ ಮೇಲಿಟ್ಟು ಬದಲಾಗಿ ಬರುತ್ತಿರುವದನ್ನು ನೋಡಿ; ಈ ನುಡಿಗಳು ಸಂಕಟದ ಒಳಮಿಡಿತವು ಆಕ್ರೋಶವಾಗಿ ಬದಲಾವಣೆ ಗೊಂಡಿರುವುದನ್ನು ರೂಪಕವಾಗಿ ಸೂಚಿಸುತ್ತಿವೆ. ಇದುವರೆವಿಗೂ ಸಂಕಟದಿಂದ ಪರಿತಪಿಸುತ್ತಿದ್ದ ದುರ್ಯೋಧನನು ಈಗ ಕೋಪೋದ್ರೇಕದಿಂದ ಆವೇಶಗೊಂಡು ಬದಲಾಗಿರುವುದನ್ನು ಸಂಜಯನು ನೋಡಿ; ದಂದಶೂಕ=ಹಾವು; ಪತಾಕೆ= ಬಾವುಟ; ದಂದಶೂಕಪತಾಕನ್=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜ ಲಾಂಛನವಾಗುಳ್ಳ ದುರ್ಯೋಧನ; ಮುಳಿಸಿನ+ಅಂದಮನ್; ಅಂದ=ರೀತಿ;

**ನಡೆವ ದಂದಶೂಕ ಪತಾಕನ ಮುಳಿಸಿನಂದಮನ್ ಅರಿದು**=ನಡೆದು ಬರುತ್ತಿರುವ ದುರ್ಯೋಧನನ ಕೋಪದ ರೀತಿಯನ್ನು ಗಮನಿಸಿ; **ಸಂಜಯನ್ ಎಂದನ್**=ಸಂಜಯನು ನುಡಿದನು; ಎಲೆ ದೇವಾ, ಭೀಷ್ಮರ್ ಇತ್ತಲ್ ಇರ್ದಪರ್ ಇತ್ತ ಬಿಜಯಂಗೆಯ್ಯಿಮ್=ಎಲೆ ದೇವಾ, ಭೀಷ್ಮರು ಈ ಕಡೆ ಇದ್ದಾರೆ. ಈ ಕಡೆಗೆ ನೀವು ಬನ್ನಿರಿ; **ಎಂತುಮ್ ನಿಜ ಗುರುಜನ ಪ್ರಾರ್ಥನಾ ಭಂಗಮ್ ಮಾಡಲಾಗದು**=ಯಾವುದೇ ಕಾರಣದಿಂದಲೂ ನಿಮ್ಮ ಗುರುಹಿರಿಯರ ಮತ್ತು ತಾಯಿತಂದೆಯ ಕೋರಿಕೆಗೆ ಹಾನಿಯನ್ನುಂಟುಮಾಡಲಾಗದು. ಯುದ್ಧಕ್ಕೆ ಹೋಗುವ ಮುನ್ನ ಭೀಷ್ಮರ ಬಳಿಗೆ ಹೋಗಿ, ಅವರ ಸಲಹೆಯಂತೆ ನಡೆದುಕೊಳ್ಳಲು ಅವರೆಲ್ಲರೂ ನಿನಗೆ ಹೇಳಿದ್ದಾರೆ; ನೆಗಳ್=ಮಾಡು; ಕಜ್ಜ=ಕೆಲಸ; **ಇನ್ ನೀನ್ ನೆಗಳ್ವ ಕಜ್ಜಮ್ ಆವುದುಮಮ್ ನಿಮ್ಮಜ್ಜನೊಳ್ ಆಳೋಚಿಸಿ ನೆಗಳ್ವುದು ಎಂದು ಪೇಳ್ವುದುಮ್**=ಇನ್ನು ನೀನು ಮಾಡಬೇಕಾದ ಕಾರ್ಯ ಯಾವುದಿದ್ದರೂ ನಿಮ್ಮ ಅಜ್ಜನಾದ ಭೀಷ್ಮನೊಡನೆ ಆಲೋಚಿಸಿ ಮಾಡುವುದು ಎಂದು ಸಂಜಯನು ಹೇಳಲು;

**ಸಂಜಯನ ಮಾತನ್ ಮೀರದೆ**=ಸಂಜಯನ ಮಾತನ್ನು ತೆಗೆದುಹಾಕದೆ; ಶರ+ಶಯನ+ಗತನ್+ಆಗಿ+ಇರ್ಪ; ಶರ=ಬಾಣ; ಶಯನ=ಹಾಸುಗೆ; ಗತ=

ಒಳಗಿರುವ; ನದೀನಂದನ=ಗಂಗಾದೇವಿಯ ಮಗ ಭೀಷ್ಮ; ಚರಣ+ಅರವಿಂದ; ಚರಣ=ಪಾದ; ಅರವಿಂದ=ತಾವರೆ; **ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಮ್ ಗೆಯ್ಯಲೆಂದು**=ಬಾಣಗಳ ಮಂಚದ ಮೇಲೆ ಮಲಗಿದ್ದ ಭೀಷ್ಮನ ಪಾದಕಮಲಗಳಿಗೆ ನಮಸ್ಕಾರವನ್ನು ಮಾಡಲೆಂದು; **ಗಾಂಧಾರಿಯ ನಂದನನ್ ಎಯ್ದೆವಂದು**=ದುರ್ಯೋಧನನು ಮುಂದೆ ನಡೆದು ಹತ್ತಿರಕ್ಕೆ ಬಂದು; ಗಂಗಾನದೀ ನಂದನನನ್ ಕಂಡು=ಭೀಷ್ಮನನ್ನು ಕಂಡು;

❖

### ನೋಟ–೧೩

## ಭೀಷ್ಮರ ಹಿತನುಡಿ

**ಸಂಜಯನ ಮಾತನ್ ಮೀರದೆ**=ಸಂಜಯನ ಮಾತನ್ನು ತೆಗೆದುಹಾಕದೆ; ಶರ+ಶಯನ+ಗತನ್+ಆಗಿ+ಇರ್ಪ; ಶರ=ಬಾಣ; ಶಯನ=ಹಾಸುಗೆ; ಗತ=ಒಳಗಿರುವ; ನದೀನಂದನ=ಗಂಗಾದೇವಿಯ ಮಗ ಭೀಷ್ಮ; ಚರಣ+ ಅರವಿಂದ; ಚರಣ=ಪಾದ; ಅರವಿಂದ=ತಾವರೆ; **ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಮ್ ಗೆಯ್ಯಲೆಂದು**=ಬಾಣಗಳ ಮಂಚದ ಮೇಲೆ ಮಲಗಿದ್ದ ಭೀಷ್ಮನ ಪಾದಕಮಲಗಳಿಗೆ ನಮಸ್ಕಾರವನ್ನು ಮಾಡಲೆಂದು; **ಗಾಂಧಾರಿಯ ನಂದನನ್ ಎಯ್ದೆವಂದನ್**=ದುರ್ಯೋಧನನು ಮುಂದೆ ನಡೆದು ಹತ್ತಿರಕ್ಕೆ ಬಂದನು; ಅಂತು ಎಯ್ದೆ ವಂದಾಗಲ್=ಆ ರೀತಿ ದುರ್ಯೋಧನನು ಬಂದಾಗ ಶರಮಂಚದ ಮೇಲೆ ಮಲಗಿದ್ದ ಭೀಷ್ಮನ ಮಯ್ ಮನದ ಚಿತ್ರಣವನ್ನು ಕವಿಯು ಮುಂದಿನ ನುಡಿಗಳಲ್ಲಿ ಚಿತ್ರಿಸಿದ್ದಾನೆ; ನರ=ಅರ್ಜುನ; ಶರ=ಬಾಣ; ಕೋಟಿ=ನೂರು ಲಕ್ಷ; ತನ್ನ=ಭೀಷ್ಮ; ಜರ್ಜರ=ಗಾಯಗೊಂಡುದು/ಛಿದ್ರವಾದುದು;

**ನರಶರಕೋಟಿ ತನ್ನ ಶರೀರಮನ್ ಜರ್ಜರಿಸೆ**=ಅರ್ಜುನನು ಬಿಟ್ಟ ಲೆಕ್ಕವಿಲ್ಲದಷ್ಟು ಬಾಣಗಳು ಭೀಷ್ಮನ ದೇಹವನ್ನು ಗಾಯಗಳಿಂದ ಘಾಸಿ ಗೊಳಿಸಿರಲು; **ಅಸ್ತ್ರವೇದನಾ ಪರವಶನಾಗಿಯುಮ್**=ಬಾಣಗಳ ಪೆಟ್ಟಿನಿಂದಾದ ನೋವಿನಲ್ಲೇ ಮುಳುಗಿದ್ದರೂ; **ಮುಕುಂದನನ್ ಮರೆದನಿಲ್ಲ**=ಕೃಷ್ಣನನ್ನು ಮರೆಯದೆ; **ಏಕಚಿತ್ತದಿಮ್ ಸ್ಮರಿಯಿಸುತಿರ್ದುಮ್**=ಒಂದೇ ಮನಸ್ಸಿನಿಂದ ಕೃಷ್ಣನ ನಾಮಸ್ಮರಣೆಯನ್ನು ಮಾಡುತ್ತ; ಅರಿ=ಶತ್ರು/ಹಗೆ; **ಅತ್ತಲ್ ಅರಿಭೂಪರಿನ್ ಕುರುಪತಿಗೆ ಎಂತುಟು ಅವಸ್ಥೆಯಾದುದೋ ಎಂದನ್**=ಕುರುಕ್ಷೇತ್ರ ರಣರಂಗ

ಹೋರಾಟದಲ್ಲಿ ಶತ್ರುರಾಜರಿಂದ ದುರ್ಯೋಧನನಿಗೆ ಯಾವ ಅಪಾಯ ಉಂಟಾಯಿತೋ ಎಂದು ಭೀಷ್ಮನು ಆತಂಕಗೊಂಡಿದ್ದನು; ಪರಮ=ಉತ್ತಮ; ಯೋಗಿ=ಕಾಮ/ಕ್ರೋಧ/ಲೋಭ/ಮೋಹ/ಮದ/ಮಾತ್ಸರ್ಯಗಳೆಂಬ ಒಳ ಮಿಡಿತಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ವ್ಯಕ್ತಿ;

**ಆ ಪರಮಯೋಗಿಗಮ್ ಇಂತುಟು ಮೋಹಮಾಗದೇ**=ಅಂತಹ ಪರಮಯೋಗಿಯಾದ ಭೀಷ್ಮನಿಗೂ ಇಂತಹ ಮೋಹ ಉಂಟಾಯಿತಲ್ಲವೇ; ಅಂತು+ಇರ್ದ; ನದೀನಂದನ=ಭೀಷ್ಮ; ಮನ್ಯು=ಸಂಕಟ/ಶೋಕ; ಉದ್ಗತ=ಹೊರಹೊಮ್ಮಿದ; **ಅಂತಿರ್ದ ನದೀನಂದನನನ್ ರಾಜರಾಜನ್ ನೋಡಿ ಮನ್ಯೂದ್ಗತ ಕಂಠನಾಗಿ**=ಆ ರೀತಿ ಮೊನಚಾದ ಬಾಣಗಳ ಹಾಸುಗೆಯ ಮೇಲೆ ಮಲಗಿ, ನೋವಿನಿಂದ ನರಳುತ್ತಿರುವ ಭೀಷ್ಮನನ್ನು ದುರ್ಯೋಧನನು ನೋಡನೋಡುತ್ತಿದ್ದಂತೆಯೇ ಕೊರಳಿನಲ್ಲಿ ಉಕ್ಕಿಬಂದ ಸಂಕಟದಿಂದ ಗದ್ಗದಿತನಾಗಿ; ಒಕ್ಕು=ಬಿಡು/ತೊರೆದು; ಇಳಿಂಕೆ=ತಿರಸ್ಕಾರ/ಕಡೆಗಣಿಸು; ವಿನಯಮನ್ ಒಕ್ಕು=ವಿನಯದಿಂದ ನಡೆದುಕೊಳ್ಳದೆ; **ನಿಮ್ಮ ಗುರುವೃದ್ಧರ ಪೇಳ್ದ ಹಿತೋಪದೇಶಮಮ್ ಮನದೊಳ್ ಇಳಿಂಕೆಗೊಂಡು**=ನಿಮ್ಮಂತಹ ಗುರು ಹಿರಿಯರು ಹೇಳಿದ ಹಿತನುಡಿಗಳನ್ನು ಮನಸ್ಸಿಗೆ ಹಾಕಿಕೊಳ್ಳದೆ ಕಡೆಗಣಿಸಿ; ಅನಿಲ=ವಾಯುದೇವ; ನಂದನ=ಮಗ; ಅನಿಲನಂದನ=ವಾಯುದೇವನ ಅನುಗ್ರಹದಿಂದ ಕುಂತಿಯಲ್ಲಿ ಹುಟ್ಟಿದ ಮಗನಾದ ಭೀಮ; ಇಂದ್ರನಂದನ= ದೇವತೆಯಾದ ಇಂದ್ರನ ಅನುಗ್ರಹದಿಂದ ಕುಂತಿಯಲ್ಲಿ ಹುಟ್ಟಿದ ಮಗನಾದ ಅರ್ಜುನ;

**ಅನಿಲನಂದನ ವೈರದೆ ನಿಮ್ಮನ್ ಇಂದ್ರನಂದನನೊಡನೆ ಆನೆ ಕಾದಿಸಿದೆನ್**= ಭೀಮನೊಡನೆ ಹಗೆತನವನ್ನು ಕಟ್ಟಿಕೊಂಡ ಕಾರಣದಿಂದ ಉಂಟಾದ ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನೊಡನೆ ನಾನೇ ಕಾದಾಡುವಂತೆ ಮಾಡಿದೆನು; ಕಡಂಗು=ಹುರುದುಂಬಿಸು/ಪ್ರೇರೇಪಿಸು; **ಆನೆ ಕಡಂಗಿದೆನ್**=ನಾನೇ ನಿಮ್ಮನ್ನು ಯುದ್ಧ ಮಾಡಲು ಪ್ರೇರೇಪಿಸಿದೆನು; ಕತ=ಕಾರಣ/ನಿಮಿತ್ತ; ಸಿಂಧುನಂದನ= ಗಂಗಾದೇವಿಯ ಮಗ ಭೀಷ್ಮ; **ಸಿಂಧುನಂದನಾ, ಎನ್ನ ಪಾಪಕರ್ಮನ ಕತದಿಂದಮ್ ಈ ನಿಮಗಮ್ ಈ ಇರವು ಆದುದೆ ಎಂದು ಪಶ್ಚಾತ್ತಾಪಮ್ ಗೆಯ್ಯುತುಮ್ ಮುಂಬರ್ಪ ತನ್ನ ಮೊಮ್ಮನ ಕಾಲ ಸೊಪ್ಪುಳಮ್ ಕೇಳ್ದು**=ಅಜ್ಜಾ, ನನ್ನಂತಹ ಪಾಪಿಯ ಕಾರಣದಿಂದಾಗಿ ನಿಮಗೆ ಇಂತಹ ಸ್ಥಿತಿಯು ಬಂದೊದಗಿತು ಎಂದು ಪಶ್ಚಾತ್ತಾಪಪಡುತ್ತ, ತನ್ನ ಮುಂದೆ ಬಂದ ಮೊಮ್ಮಗನಾದ ದುರ್ಯೋಧನನ ಕಾಲ ಸಪ್ಪುಳವನ್ನು ಕೇಳಿ; ವಿಕಚ=ಅರಳಿದ/ಬಿರಿದ; ಧವಳ=ಬಿಳುಪು; ಕುವಲಯ=

ತಾವರೆ; ವಿಲಾಸಿತ+ಉಪಹಾಸಿಗಳ್+ಉಮ್; ವಿಲಾಸಿತ= ಉಲ್ಲಾಸಗೊಳಿಸುವ; ಉಪಹಾಸಿ= ತಿರಸ್ಕರಿಸುವ;

**ವಿಕಚ ಧವಳ ಕುವಲಯ ವಿಲಾಸಿತೋಪಹಾಸಿಗಳುಮ್**=ಅರಳಿದ ಬೆಳ್ದಾವರೆಯ ಹೂವಿನ ದಳಗಳಿಗಿಂತ ಸುಂದರವಾಗಿರುವ; ಕರ್ಣ+ಅಂತ; ಕರ್ಣ=ಕಿವಿ; **ಕರ್ಣಾಂತ ವಿಶ್ರಾಂತಂಗಳುಮಪ್ಪ ತನ್ನ ಕಣ್ಗಳನ್ ಅರೆತೆರೆದು**= ಕಿವಿಯವರೆಗೂ ಹಬ್ಬಿದ್ದ ತನ್ನ ಕಣ್ಣುಗಳನ್ನು ಸ್ವಲ್ಪ ತೆರೆದು; ದರ=ಸ್ವಲ್ಪ/ತುಸು; ನಿಮೀಲಿತ=ಮುಚ್ಚಿದ; ಲೋಚನ=ಕಾಣಿಸುವ; ಕಮಲ+ಆಕರಮ್+ ಇರ್ಪ+ ಅಂತೆ; ಆಕರ=ಹುಟ್ಟುವ ಜಾಗ; ಕಮಲಾಕರ=ಸರೋವರ; ಶಂತನು ತನೂಜ= ಶಂತನು ರಾಜ ಮತ್ತು ಗಂಗಾದೇವಿಯ ಮಗನಾದ ಭೀಷ್ಮ; ಕರ್ಣ+ ಅಭ್ಯರ್ಣಮ್+ಅಮ್; ಅಭ್ಯರ್ಣ=ಸಮೀಪ/ಹತ್ತಿರ/ಪಕ್ಕ; ಪೊರ್ದು=ಬಳಿಸಾರು/ ಹತ್ತಿರಕ್ಕೆ ಬರು;

**ದರನಿಮೀಲಿತ ಲೋಚನ ಕಮಲಾಕರಮಿರ್ಪಂತೆ ಇರ್ದ ಶಂತನು ತನೂಜನ ಕರ್ಣಾಭ್ಯರ್ಣಮಮ್ ಪೊರ್ದಿ ಸಂಜಯನ್ ಎಂದನ್**=ಅರೆಮುಚ್ಚಿದ ತಾವರೆ ಹೂವಿನ ಕೊಳದಂತೆ ಕಾಣಿಸುತ್ತಿದ್ದ ಭೀಷ್ಮನ ಕಿವಿಯ ಹತ್ತಿರಕ್ಕೆ ಬಂದು ಸಂಜಯನು ಈ ರೀತಿ ಹೇಳಿದನು; ಗಗನ=ಆಕಾಶ; ಗಭಸ್ತಿಮಾಲಿ=ಸೂರ್ಯ;

**ಅಜ್ಜಾ, ನಿಮ್ಮ ಮೊಮ್ಮನಪ್ಪ ಕುರುಕುಲ ಗಗನಗಭಸ್ತಿಮಾಲಿ ಬಾಹುಶಾಲಿ ದುರ್ಯೋಧನನ್ ಬಂದನ್ ಎಂದು ಬಿನ್ನಪಮ್ ಗೆಯ್ಯೆ**=ಅಜ್ಜಾ, ನಿಮ್ಮ ಮೊಮ್ಮಗನಾದ ಕುರುಕುಲವನ್ನು ಬೆಳಗುವ ಸೂರ್ಯನೂ ಬಲಶಾಲಿಯೂ ಆದ ದುರ್ಯೋಧನನು ನಿಮ್ಮನ್ನು ನೋಡಲು ಬಂದಿದ್ದಾನೆ ಎಂದು ಅರಿಕೆ ಮಾಡಿ ಕೊಳ್ಳಲು; ಯೋಗಿ=ತಪಸ್ವಿಯಂತಹ ವ್ಯಕ್ತಿತ್ವವುಳ್ಳ ಭೀಷ್ಮ; ಯೋಗ+ ಅಭಿಯೋಗಮ್+ಅನ್; ಅಭಿಯೋಗ=ಆಸಕ್ತಿ; ಉಪಸಂಹರಿಸು=ನಿಲ್ಲಿಸು; ಯೋಗಿ ಯೋಗಾಭಿಯೋಗಮನ್ ಉಪಸಂಹರಿಸಿ=ಭೀಷ್ಮನು ತನ್ನ ಧ್ಯಾನವನ್ನು ನಿಲ್ಲಿಸಿ; ಉತ್ತಂಸ=ತಲೆಯಲ್ಲಿ ತೊಡುವ ಒಡವೆ/ಪ್ರಮುಖ ವ್ಯಕ್ತಿ; ಕುರುಕುಲೋತ್ತಂಸ= ಕುರುಕುಲದ ಪ್ರಮುಖ; **ತನ್ನ ಚರಣೋಪಾಂತ ಉತ್ತಮಾಂಗನಾಗಿರ್ದ ಪನ್ನಗಪತಾಕನನ್ ಕುರುಕುಲೋತ್ತಂಸನನ್ ಆಶೀರ್ವಚನ ಸಹಸ್ರಂಗಳಿಮ್ ಪರಸಿ**= ತನ್ನ ಪಾದಗಳ ಬಳಿ ತಲೆಯೊಡ್ಡಿ ನಮಿಸುತ್ತಿದ್ದ ದುರ್ಯೋಧನನನ್ನು ಕುರುಕುಲದ ಪ್ರಮುಖನನ್ನು ಹತ್ತಾರು ಬಗೆಯ ಒಳ್ಳೆಯ ಮಾತುಗಳಿಂದ ಆಶೀರ್ವದಿಸಿ; ದಿಕ್+ಕರಿ+ಕರ+ಅನುಕಾರಿಗಳ್+ಅಪ್ಪ; ಕರಿ=ಆನೆ; ಕರ=ಸೊಂಡಿಲು; ಅನುಕಾರಿ=ಹೋಲುವಂತಹ; ನಿಜ+ಭುಜಾ+ದಂಡಂಗಳ್+ಇಂದೆ; ನಿಜ=ತನ್ನ;

**ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಾದಂಡಂಗಳಿಂದೆ ತೆಗೆದಪ್ಪಿ**=ಭೀಷ್ಮನು

ದಿಗ್ಗಜದ ಸೊಂಡಿಲುಗಳಂತಿರುವ ತನ್ನ ದೊಡ್ಡ ತೋಳುಗಳಿಂದ ದುರ್ಯೋಧನನನ್ನು ಅಪ್ಪಿಕೊಂಡು; ಬಾಷ್ಪಾಂಬು=ಕಣ್ಣೀರು; ಪೂರಿತ=ತುಂಬಿದ; **ಬಾಷ್ಪಾಂಬುಪೂರಿತ ಲೋಚನನಾಗಿ**=ಕಂಬನಿ ತುಂಬಿದ ಕಣ್ಣುಳ್ಳವನಾಗಿ; ಧವಳ= ಬಿಳಿಪು/ಬಿಳಿಯ; ಗಜೇಂದ್ರ=ಪಟ್ಟದ ಆನೆ; ಚಾಮರ=ಚಮರವೆಂಬ ಪ್ರಾಣಿಯ ಕೂದಲಿನಿಂದ ಮಾಡಿದ ದೊಡ್ಡ ಆಕಾರದ ಬೀಸಣಿಗೆ; ಧವಳ+ಆತಪತ್ರ; ಆತಪತ್ರ=ಕೊಡೆ; ಧವಳಾತಪತ್ರ=ಬೆಳ್ಗೊಡೆ; ಉತ್ಪಲ=ತಾವರೆ; ವಧೂಜನ= ಹೆಂಗಸರು; **ಧವಳ ಗಜೇಂದ್ರಮುಮ್... ಧವಳ ಚಾಮರಮುಮ್ ಧವಳಾತಪತ್ರಮುಮ್... ಧವಳ ವಿಲೋಚನ ಉತ್ಪಲ ವಧೂಜನಮುಮ್ ಬೆರಸು**= ರಾಜಲಾಂಛನಗಳಾದ ಬಿಳಿಯ ಪಟ್ಟದಾನೆ ಬಿಳಿಯ ಚಾಮರ ಬೆಳ್ಗೊಡೆ ಬೆಳ್ದಾವರೆಯನ್ನು ಹೋಲುವಂತಹ ಕಣ್ಣುಗಳ ಕಾಂತಿಯಿಂದ ಕೂಡಿರುವ ರಾಜಪರಿವಾರದ ಹೆಂಗಸರಿಂದ ಕೂಡಿ;

**ಕೀರ್ತಿಯಿಮ್ ಅಷ್ಟದಿಕ್ತಟಮ್ ಧವಳಿಸೆ**=ಕೀರ್ತಿಯಿಂದ ಎಂಟು ದಿಕ್ಕುಗಳು ಬೆಳಗುತ್ತಿರಲು; **ಧವಳ ಮಂಗಳಗೇಯದಿನ್ ಒಪ್ಪಿ ಬರ್ಪ ಕೌರವಧವಳಂಗೆ**= ಒಳಿತನ್ನುಂಟು ಮಾಡುವ ಮಂಗಳಕರವಾದ ಸ್ತುತಿಗೀತೆಯಿಂದ ಒಡಗೂಡಿ ಕಂಗೊಳಿಸುತ್ತ ಬರುವ ಕುರುಕುಲದ ಪ್ರಮುಖನಿಗೆ; ದೇಸಿಗ=ಗತಿಗೆಟ್ಟವನು/ ದಿಕ್ಕಿಲ್ಲದವನು; **ದೇಸಿಗನೆ ಬರ್ಪವೊಲ್ ಒರ್ವನೆ ಬರ್ಪುದಾದುದೇ ಎಂದು**= ಗತಿಗೇಡಿಯು ಬರುವಂತೆ ಒಬ್ಬನೇ ಬರುವಂತಾದುದೇ ಎಂದು ಭೀಷ್ಮನು ಸಂಕಟಪಡುತ್ತ; ಸರಿತ್ಸುತ=ಗಂಗೆಯ ಮಗನಾದ ಭೀಷ್ಮ; **ಏಕಾಕಿಯಾಗಿ ಬಂದ ಧೃತರಾಷ್ಟ್ರನಂದನನ ಬರವಿನೊಳ್ ಸರಿತ್ಸುತನ್ ಸಮರ ವೃತ್ತಾಂತಮನ್ ಅರಿದು**= ಒಬ್ಬಂಟಿಯಾಗಿ ಬಂದ ದುರ್ಯೋಧನನ ಬರುವಿಕೆಯಿಂದಲೇ ಭೀಷ್ಮನು ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನನಿಗೆ ಒದಗಿರುವ ದುರಂತವನ್ನು ಅರಿತು ಕೊಂಡು; ವಿಸ್ಮಯ+ ಆಕ್ರಾಂತ+ಸ್ವಾಂತನುಮ್+ಆಗಿ; ವಿಸ್ಮಯ=ಅಚ್ಚರಿ; ಆಕ್ರಾಂತ=ಕವಿ/ಆವರಿಸು; ಸ್ವಾಂತ=ಮನಸ್ಸು;

**ವಿಸ್ಮಯಾಕ್ರಾಂತಸ್ವಾಂತನುಮಾಗಿ ಶೋಕಂಗೆಯ್ಯೆ**=ರಾಜನಾಗಿರುವ ದುರ್ಯೋಧನನಿಗೆ ಇಂತಹ ದುರ್ಗತಿ ಬಂದಿತಲ್ಲಾ ಎಂಬ ಅಚ್ಚರಿಯಿಂದ ಗಾಸಿಗೊಂಡ ಮನಸ್ಸಿನವನಾಗಿ ಭೀಷ್ಮನು ಶೋಕಿಸುತ್ತಿರಲು; **ರಾಜರಾಜನ್ ನದೀತನೂಜನನ್ ಮಾಣಿಸಿ**=ದುರ್ಯೋಧನನು ಭೀಷ್ಮನನ್ನು ಶೋಕಿಸದಂತೆ ತಡೆದು; ನೀವ್+ಅಪ್ಪೊಡೆ; ಅಪ್ಪೊಡೆ=ಆದರೆ; ವಿದಿತ=ಹೆಸರಾಂತ; ವೇದಿತವ್ಯರು=ತಿಳಿದವರು/ಅರಿತವರು; ಭಾವಿತಾತ್ಮರು=ಒಳಿತು ಕೆಡುಕುಗಳ ಸ್ವರೂಪವನ್ನು ಅರಿತವರು; ನೆಗಳ್=ಮಾಡು/ತೊಡಗು; **ನೀವಪ್ಪೊಡೆ**

**ವಿದಿತವೇದಿತವ್ಯರುಮ್ ಭಾವಿತಾತ್ಮರುಮ್ ಆಗಿರ್ದು ಅಜ್ಞಾನಿಗಳಂತೆ ನೆಗಳಾಗದು ಎಂದು**=ನೀವಾದರೆ ಒಳ್ಳೆಯ ತಿಳುವಳಿಕೆಯನ್ನು ಪಡೆದವರು ಮತ್ತು ಒಳಿತು ಕೆಡುಕುಗಳನ್ನು ಒರೆಹಚ್ಚಿ ನೋಡಬಲ್ಲವರು. ಜ್ಞಾನಿಗಳಾಗಿರುವ ನೀವು ಅಜ್ಞಾನಿಗಳಂತೆ ನಡೆದುಕೊಳ್ಳಬಾರದು ಎಂದು ಭೀಷ್ಮರನ್ನು ಸಮಾಧಾನಪಡಿಸಿ; ನಿಜ=ತನ್ನ;

**ನಿಜಾಗಮನ ವೃತ್ತಾಂತಮಮ್**=ತಾನು ಬಂದ ಸಂಗತಿಯನ್ನು; ಸಮರ=ಯುದ್ಧ; ಪರಿಚ್ಛೇದ=ನಿಶ್ಚಿತವಾದ ತೀರ್ಮಾನ / ನಿರ್ಣಯ; **ಸಮರ ಪರಿಚ್ಛೇದಮುಮನ್ ಅರಿಪಿದೊಡೆ**=ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರೊಡನೆ ಹೋರಾಡಲೇಬೇಕೆಂಬ ತನ್ನ ನಿಶ್ಚಿತವಾದ ನಿರ್ಧಾರವನ್ನು ತಿಳಿಸಿದಾಗ; **ಕಿರಿದಾನುಮ್ ಬೇಗಮ್ ಚಿಂತಾಕ್ರಾಂತನಾಗಿರ್ದು**=ಭೀಷ್ಮನು ತುಸು ಸಮಯ ತನ್ನಲ್ಲಿಯೇ ಚಿಂತೆಗೆ ಒಳಗಾಗಿದ್ದು, ಅನಂತರ ದುರ್ಯೋಧನನಿಗೆ ಈ ರೀತಿ ಹೇಳತೊಡಗುತ್ತಾನೆ; ಅವಿಚ್ಛಿನಮ್+ಆಗಿ; ಅವಿಚ್ಛಿನ್ನ=ಎಡೆಬಿಡದೆ/ ನಿರಂತರವಾಗಿ; ಭರತ+ಅನ್ವಯದೊಳ್; ಅನ್ವಯ=ವಂಶ/ಕುಲ; ಗೋತ್ರಕಲಹ= ಒಂದೇ ಮನೆತನದಲ್ಲಿ ಹುಟ್ಟಿ ಬೆಳೆದ ಮಕ್ಕಳ ನಡುವೆ ನಡೆಯುವ ಜಗಳ/ಕಾದಾಟ/ ಹೊಡೆದಾಟ; **ಮಗನೆ ಸೋಮವಂಶದಿಂದೆ ಅವಿಚ್ಛಿನ್ನಮಾಗಿ ಬಂದ ಭರತಾನ್ವಯದೊಳ್ ಇನ್ನೆವರೆಗಮ್ ಗೋತ್ರಕಲಹಮೆಂಬುದು ಆದುದಿಲ್ಲ**= ಮಗನೆ, ಸೋಮವಂಶದಿಂದ ಯಾವುದೇ ಅಡೆತಡೆಯಿಲ್ಲದೆ ನಿರಂತರವಾಗಿ ಬಾಳಿಬಂದ ಭರತವಂಶದಲ್ಲಿ ಇದುವರೆಗೂ ಅಣ್ಣತಮ್ಮಂದಿರ ನಡುವೆ ದಾಯಾದಿ ಕಲಹ ನಡೆದಿರಲಿಲ್ಲ;

**ನಿಮ್ಮೊಳಾದುದು**=ನಿಮ್ಮ ತಲೆಮಾರಿನಲ್ಲಿ ಆಯಿತು; ಇಂಬುಕೆಯ್=ಒಪ್ಪಿಕೊ/ ಸಮ್ಮತಿಸು; ಒಡಂಬಡಿಸು=ಒಪ್ಪಿಸು; **ಇನ್ನುಮ್ ಆನ್ ಎಂಬುದನ್ ಇಂಬುಕೆಯ್ವೆಯಪ್ಪೊಡೆ ಪಾಂಡವರನ್ ಒಡಂಬಡಿಸಿ ಸಂಧಿಯಮ್ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪೆನ್**=ಈಗಲೂ ನಾನು ಹೇಳುವುದನ್ನು ನೀನು ಒಪ್ಪಿಕೊಳ್ಳುವುದಾದರೆ, ಪಾಂಡವರನ್ನು ಒಪ್ಪಿಸಿ ಸಂಧಿಯನ್ನು ಮಾಡಿ, ಈ ಮೊದಲು ನೀನು ಹಸ್ತಿನಾವತಿಯಲ್ಲಿ, ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿದ್ದಂತೆ ಮಾಡುತ್ತೇನೆ; **ಇನ್ನುಮ್ ಅವರ್ ಎಮ್ಮ ಎಂದುದಮ್ ಮೀರುವರಲ್ಲ**=ಈಗಲೂ ಅವರು ನಾವು ಹೇಳಿದ ಮಾತನ್ನು ಕಡೆಗಣಿಸುವುದಿಲ್ಲ; **ನೀನುಮ್ ಎಮ್ಮ ಪೇಳ್ದುದಮ್ ಮೀರದೆ ನೆಗಳಲ್ವೇಳ್ಕುಮ್ ಎನೆ**=ನೀನು ಕೂಡ ನಾವು ಹೇಳುವುದನ್ನು ಕಡೆಗಣಿಸದೆ ನಡೆದುಕೊಳ್ಳಬೇಕು ಎಂದು ಭೀಷ್ಮನು ಹಿತನುಡಿಯನ್ನಾಡಲು;

**ಸುಯೋಧನನ್ ಮುಗುಳ್ನಗೆ ನಕ್ಕು**=ಭೀಷ್ಮನ ನುಡಿಗಳನ್ನು ಕೇಳಿ ದುರ್ಯೋಧನನು ಮುಗುಳ್ನಗೆ ನಕ್ಕು; ಈ ಮುಗುಳ್ನಗೆಯು ಆನಂದದ ಇಲ್ಲವೇ ಮೆಚ್ಚುಗೆಯಿಂದ ಬಂದ ನಗೆಯಲ್ಲ; ವಿಷಾದದ ನಗೆ; ಸಾವುನೋವಿನ ಸಂಕಟದಲ್ಲಿ ಬೇಯುತ್ತಿರುವ ತನ್ನ ಮುಂದೆ ಸಂಧಿಯ ಮಾತು ಪ್ರಸ್ತಾಪವಾಗುತ್ತಿರುವುದು ದುರ್ಯೋಧನನಿಗೆ ಅಪಾರವಾದ ಯಾತನೆಯನ್ನುಂಟುಮಾಡುತ್ತಿದೆ. ಆ ಯಾತನೆಯನ್ನು ಹತ್ತಿಕ್ಕಲಾಗದೆ "ಅಯ್ಯೋ" ಎಂಬ ಸಂಕಟದ ಬದಲು ಈ ರೀತಿ ನಕ್ಕಿದ್ದಾನೆ; ಪೊಡೆಮಡು=ನಮಸ್ಕರಿಸು; ಸಮಕಟ್ಟು=ಉಚಿತವಾದುದು/ ಸರಿಯಾದುದು/ಯೋಗ್ಯವಾದುದು; ಅಹಿತರು=ಹಗೆಗಳು; ಸಮಕೊಳಿಸು=ಏರ್ಪಡಿಸು/ಸಜ್ಜುಗೊಳಿಸು; **ನಿಮಗೆ ಪೊಡೆಮಟ್ಟು ಪೋಪುದೆ ಸಮಕಟ್ಟೆನೆ ಬಂದೆನ್... ಅಹಿತರೊಳ್ ಸಂಧಿಯನ್ ಏನ್ ಸಮಕೊಳಿಸಲೆಂದು ಬಂದೆನೆ**=ನಿಮಗೆ ನಮಸ್ಕಾರವನ್ನು ಮಾಡಿ ಹೋಗುವುದು ಒಳ್ಳೆಯದೆಂದು ತಿಳಿದು ಬಂದೆನೇ ಹೊರತು, ನಾನೇನು ಹಗೆಗಳಾದ ಪಾಂಡವರೊಡನೆ ಸಂಧಿಯನ್ನು ಮಾಡಿಕೊಳ್ಳಲು ಬಂದಿದ್ದೇನೆಯೇ; ಕಜ್ಜ=ಕಾರ್ಯ/ಕೆಲಸ;

**ಅಜ್ಜ, ಸಮರದೊಳ್ ಎನಗೆ ಆವುದು ಕಜ್ಜಮ್ ಪೇಳಿಮ್**=ಅಜ್ಜ, ಕುರುಕ್ಷೇತ್ರ ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯವೇನೆಂಬುದನ್ನು ಹೇಳಿರಿ; **ಪಾಂಡುಸುತರೊಳ್ ನೆಲಕೆ ಇರಿವೆನ್ ಎಂದು ಬಗೆದಿರೆ... ಚಲಕೆ ಇರಿವೆನ್**= ಪಾಂಡವರೊಡನೆ ನೆಲಕ್ಕಾಗಿ ಯುದ್ಧ ಮಾಡುತ್ತಿರುವೆನೆಂದು ಭಾವಿಸಿದ್ದೀರಾ ಇಲ್ಲ ಚಲಕ್ಕಾಗಿ ಹೋರಾಡುತ್ತಿದ್ದೇನೆ; **ಈ ನೆಲನ್ ಇದು ಪಾಳ್ನೆಲನ್ ಎನಗೆ**=ಈ ನೆಲವಿದು ನನ್ನ ಪಾಲಿಗೆ ಹಾಳುಬಿದ್ದ ನೆಲ; ದಿನಪಸುತನನ್ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ=ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ನಾನು ಹೊಂದಿಕೊಂಡು ಬಾಳುತ್ತೇನೆಯೇ; ಕುರುಕ್ಷೇತ್ರ ರಣರಂಗದಲ್ಲಿ ಹರಡಿದ್ದ ನೆತ್ತರಿನ ಕೆಸರಿನಲ್ಲಿ ಕರ್ಣನ ರಥದ ಚಕ್ರ ಹೂತುಹೋಗಿದ್ದಾಗ, ಸಾರಥಿಯಿಲ್ಲದ ಕಾರಣದಿಂದ ಕರ್ಣನು ತಾನೇ ರಥದಿಂದ ಇಳಿದುಬಂದು, ನೆತ್ತರಿನ ಕೆಸರಿನ ಆಳದಿಂದ ಚಕ್ರವನ್ನು ಮೇಲೆ ಎತ್ತುತ್ತಿದ್ದಾಗ ಕೃಷ್ಣನು ಅರ್ಜುನನಿಗೆ **"ಕರ್ಣನನ್ನು ಕೊಲ್ಲಲು ಇದೇ ಸರಿಯಾದ ಸಮಯ"** ಎಂದು ಹೇಳಿ ಚಿತಾವಣೆ ಮಾಡುತ್ತಾನೆ. ಕರ್ಣನ ಹೋರಾಟದ ಸಮಯದಲ್ಲಿ ಇಂತಹ ಅಡೆತಡೆಗೆ ನೆಲವು ಕಾರಣವಾಯಿತೆಂಬ ಆಕ್ರೋಶ ದುರ್ಯೋಧನನ ಮನದಲ್ಲಿದೆ; ಅನುಜ=ತಮ್ಮ; ಅಂತಕ=ಯಮ; ಅಂತಕತನಯ=ಯಮದೇವನ ಅನುಗ್ರಹದಿಂದ ಹುಟ್ಟಿರುವ ಧರ್ಮರಾಯ; ಅನುಜವ್ಯಪೇತನ್= ತಮ್ಮಂದಿರನ್ನು ಕಳೆದುಕೊಂಡವನು; ಅಳಿಪಿ=ಆಸೆಪಟ್ಟು; ಮುನಿವರು=ಹಗೆಗಳು; ಮೆಚ್ಚುವರು=ಪ್ರೀತಿಸುವವರು; ಪಕ್ಕು=ಗುರಿ; ನುಡಿಗೆ ಪಕ್ಕಾಗು=ಅಣಕದ ಮಾತುಗಳಿಗೆ ಗುರಿಯಾಗು;

**ಅನುಜಸಮೇತನೊಳ್ ಅಂತಕತನಯನೊಳ್ ಅನುಜವ್ಯಪೇತನ್ ದುರ್ಯೋಧನನ್ ಈಗಳ್ ಅಳಿಪಿ ಸಂಧಿ ಗೆಯ್ದೊಡೆ ಮುನಿವರ ಮೆಚ್ಚುವರ ನುಡಿಗೆ ಪಕ್ಕಾಗಿರೆನೇ**=ತಮ್ಮಂದಿರ ಒಡಗೂಡಿರುವ ಧರ್ಮರಾಯನ ಜತೆಯಲ್ಲಿ ತಮ್ಮಂದಿರೆಲ್ಲರನ್ನೂ ಕಳೆದುಕೊಂಡಿರುವ ನಾನು ಈಗ ಅರ್ಧ ರಾಜ್ಯದ ಆಸೆಗಾಗಿ ಸಂಧಿಯನ್ನು ಮಾಡಿಕೊಂಡರೆ, ನನ್ನ ಹಗೆಗಳು ಮಾತ್ರವಲ್ಲ ನನ್ನನ್ನು ಮೆಚ್ಚುವವರು ಕೂಡ ನನ್ನನ್ನು ಹಂಗಿಸಿ ನುಡಿಯುವುದಿಲ್ಲವೇ; ಎಲ್ಲರ ಕಣ್ಣಿಗೆ ನಾನೊಬ್ಬ ಕೀಳು ವ್ಯಕ್ತಿಯಾಗಿ ಕಾಣುವುದಿಲ್ಲವೇ; ಭೂತಭೋಜನ=ಸತ್ತು ಬಿದ್ದಿರುವ ಹೆಣಗಳನ್ನು ನಾಯಿನರಿ ಮುಂತಾದ ಪ್ರಾಣಿಗಳು ತಿನ್ನುವುದಲ್ಲದೆ, ದೆವ್ವಗಳು ತಿನ್ನುತ್ತವೆ ಎನ್ನುವ ಕಲ್ಪನೆಯೊಂದು ಜನಮನದಲ್ಲಿದೆ; **ಕೂಡೆ ವಿರೋಧಿಯನ್ ತರಿದು ತದ್ವಶಮಾಂಸದೆ ಭೂತಭೋಜನಮ್ ಮಾಡದೆ**=ಈಗ ಹಗೆಯನ್ನು ಕತ್ತರಿಸಿ ಕೊಂದು, ಅವನ ಮಾಂಸದಿಂದ ದೆವ್ವಗಳಿಗೆ ಉಣಿಸನ್ನು ಇಕ್ಕದೆ; ವಾರ=ಗುಂಪು/ಸಮೂಹ; ವೈರಿವಾರ=ಹಗೆಗಳ ಗುಂಪು; ವನಿತಾ= ಹೆಂಗಸು; ವದನ+ಅಂಬುರುಹಂಗಳಮ್; ವದನ=ಮೊಗ; ಅಂಬುರುಹ= ತಾವರೆಯ ಹೂವು; ಬೆಳರ್ ಮಾಡು=ಬಿಳಿಚುಕೊಳ್ಳುವಂತೆ ಮಾಡು;

**ವೈರಿವಾರ ವನಿತಾ ವದನಾಂಬುರುಹಂಗಳಮ್ ಬೆಳರ್ಮಾಡದೆ**=ಹಗೆಗಳ ಪರಿವಾರದಲ್ಲಿರುವ ಹೆಂಗಸರ ಮೊಗದಾವರೆಯು ಕಾಂತಿಹೀನವಾಗುವಂತೆ ಮಾಡದೆ, ಅಂದರೆ ಅವರು ತಮ್ಮ ಗಂಡಂದಿರನ್ನು ಮತ್ತು ಮಕ್ಕಳನ್ನು ಕಳೆದು ಕೊಂಡು ಸಂಕಟದಿಂದ ಗೋಳಾಡುವಂತೆ ಮಾಡದೆ; ಪೊರ್ದು= ಹೊಂದು; **ಬಂಧು ಶೋಕದೊಳೆ ಪೊರ್ದಿದ ಬಂಧುಜನಕ್ಕೆ ಸಂತಸಮ್ ಮಾಡದೆ**= ಕುರುಕ್ಷೇತ್ರ ಯುದ್ಧದಲ್ಲಿ ತಮ್ಮ ನೆಂಟರನ್ನು ಕಳೆದುಕೊಂಡು ಸಂಕಟದಲ್ಲಿ ಬೇಯುತ್ತಿರುವ ನನ್ನ ಕಡೆಯ ನೆಂಟರಿಷ್ಟರಿಗೆ ನೆಮ್ಮದಿಯನ್ನುಂಟುಮಾಡದೆ, ಅಂದರೆ ಹಗೆಗಳಾದ ಪಾಂಡವರನ್ನು ನಾನು ಕೊಂದಾಗ ಮಾತ್ರ ನನ್ನ ಕಡೆಯವರೆಲ್ಲರೂ ಸಮಾಧಾನವನ್ನು ಹೊಂದುತ್ತಾರೆ; ಫಣಿರಾಜಕೇತನ= ದುರ್ಯೋಧನ; **ಫಣಿರಾಜಕೇತನನ್ ಪಾಂಡವರೊಳ್ ಸಂಧಿ ಮಾಡುವನೆ**=ಈ ದುರ್ಯೋಧನನು ಪಾಂಡವರಲ್ಲಿ ಸಂಧಿ ಮಾಡಿಕೊಳ್ಳುತ್ತಾನೆಯೇ; ಬಾಡ=ಹಳ್ಳಿ/ಗ್ರಾಮ; **ಅವರ್ ಮುನ್ ಬಾಡಮನ್ ಅಯ್ದನ್ ಬೇಡಿದೊಡೆ ಆನ್ ಇತ್ತೆನಿಲ್ಲ**= ಅವರು ಯುದ್ಧಕ್ಕೆ ಮೊದಲು ಸಂಧಾನಕ್ಕೆಂದು ಹಸ್ತಿನಾವತಿಗೆ ಕೃಷ್ಣನನ್ನು ಕಳುಹಿಸಿ ಅಯ್ದು ಹಳ್ಳಿಗಳನ್ನು ಬೇಡಿದಾಗ, ನಾನು ಕೊಡಲಿಲ್ಲ; ಪವನ=ವಾಯುದೇವ; ಪವನನಂದನ=ಭೀಮ; ಏಡಿಸು=ನಿಂದಿಸು/ಅವಹೇಳನ ಮಾಡು; ರೋಡಿಸು= ಹೀಯಾಳಿಸು/ಅಪಹಾಸ್ಯಮಾಡು;

**ರಾಜ್ಯ ಅರ್ಧಮನ್ ಆನ್ ಬೇಡಿ ಅವರಲ್ಲಿಗೆ ಅಟ್ಟಿದೊಡೆ ಪವನನಂದನನ್ ಎನ್ನನ್ ಏಡಿಸಿ ರೋಡಿಸನೆ**=ಈಗ ನಾನು ಅರ್ಧ ರಾಜ್ಯವನ್ನು ಬೇಡಿ ಅವರಲ್ಲಿಗೆ ಸಂಧಾನಕ್ಕೆಂದು ಕಳುಹಿಸಿದರೆ, ಭೀಮನು ನನ್ನನ್ನು ಬಯ್ದು, ಹೀಯಾಳಿಸಿ, ಅಪಹಾಸ್ಯಮಾಡುವುದಿಲ್ಲವೇ; ಅಣುಗ+ಆಳನ್; ಅಣುಗ=ಪ್ರೀತಿಪಾತ್ರನಾದವನು; ಆಳ್=ವ್ಯಕ್ತಿ; ಅಣುಗಾಳ್=ಪ್ರೀತಿಯ ಗೆಳೆಯನಾದ ಕರ್ಣ; ಅಣುಗು ತಮ್ಮ=ಪ್ರೀತಿಯ ತಮ್ಮನಾದ ದುಶ್ಯಾಸನ; ಇಕ್ಕು=ಕೊಲ್ಲು; **ಅಜ್ಜ, ಎನ್ನ ಅಣುಗಾಳನ್ ಎನ್ನ ಅಣುಗು ತಮ್ಮನನ್ ಇಕ್ಕಿದ ಪಾರ್ಥ ಭೀಮರ್ ಉಳ್ಳನ್ನೆಗಮ್**=ಅಜ್ಜ, ನನ್ನ ಒಲವಿನ ಗೆಳೆಯನಾದ ಕರ್ಣನನ್ನು ಕೊಂದಿರುವ ಅರ್ಜುನ ಮತ್ತು ನನ್ನೊಲವಿನ ತಮ್ಮನಾದ ದುಶ್ಯಾಸನನನ ಕೊಂದಿರುವ ಭೀಮನು ಜೀವಂತವಾಗಿರುವ ತನಕ; ಒಡಲ್+ಒಳ್; ಒಡಲು=ದೇಹ/ಮಯ್; ಅಸು=ಉಸಿರು/ಜೀವ/ಪ್ರಾಣ; **ಎನ್ನ ಒಡಲೊಳ್ ಎನ್ನ ಅಸು ಉಳ್ಳಿನಮ್ ಸಂಧಿಯಮ್ ಒಲ್ಲೆನ್**=ನನ್ನ ದೇಹದಲ್ಲಿ ಜೀವವಿರುವ ತನಕ ಪಾಂಡವರೊಡನೆ ನನಗೆ ಸಂಧಿ ಬೇಕಾಗಿಲ್ಲ;

**ಮುನ್ನಮ್ ಅವಂದಿರ್ ಇರ್ಬರುಮನ್ ಇಕ್ಕುವೆನ್**=ಈಗ ನಾನು ಯುದ್ಧ ರಂಗದಲ್ಲಿ ಮೊದಲು ಆ ಭೀಮಾರ್ಜುನರಿಬ್ಬರನ್ನು ಕೊಲ್ಲುವೆನು; **ಇಕ್ಕಿ ಬಳಿಕ್ಕೆ**= ಅವರಿಬ್ಬರನ್ನು ಕೊಂದ ನಂತರ; ನೆಗಳ್=ಕೀರ್ತಿ/ಪ್ರಸಿದ್ಧಿ; ಅಂತಕ+ಆತ್ಮಜನ್+ ಒಳ್; ಅಂತಕ=ಯಮ; ಆತ್ಮಜ=ಮಗ; ಅಂತಕಾತ್ಮಜ=ಯಮ ದೇವತೆಯ ಅನುಗ್ರಹದಿಂದ ಹುಟ್ಟಿರುವ ಕುಂತಿಯ ಮಗ ಧರ್ಮರಾಯ; **ನೆಗಳ್ದ ಅಂತಕಾತ್ಮಜನೊಳ್ ಸಂಧಿಗೆಯ್ವೆನ್**=ಹೆಸರಾಂತ ಧರ್ಮರಾಯನ ಜತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವೆನು; ಅಳಲ್=ಸಂಕಟ/ಶೋಕ; **ಎನ್ನ ಅಳಲ್ ಆರಿದೊಡೆ ಆಗದು ಎಂಬೆನೇ**=ಗೆಳೆಯನಾದ ಕರ್ಣ ಮತ್ತು ತಮ್ಮನಾದ ದುಶ್ಯಾಸನನ ಸಾವಿನಿಂದ ನನಗೆ ಉಂಟಾಗಿರುವ ಸಂಕಟದ ಉರಿಯು ಆರಿಹೋದರೆ, ಸಂಧಿಯನ್ನು ಬೇಡವೆನ್ನುತ್ತೇನೆಯೇ; ಪುದುವಾಳ್= ಹೊಂದಿಕೊಂಡು ಜತೆಯಲ್ಲಿ ಬಾಳುವುದು/ಸಂಧಿಯನ್ನು ಮಾಡಿಕೊಂಡು ಬಾಳುವುದು; **ಅಣಮ್=ಸ್ವಲ್ಪ/ತುಸು/ಕೊಂಚ; ಪುದುವಾಳಲ್ಕೆ ಅಣಮ್ ಆಗದು**= ಪಾಂಡವರೊಡನೆ ಸಂಧಿಯನ್ನು ಮಾಡಿಕೊಂಡು ಬಾಳುವುದಕ್ಕೆ ಸ್ವಲ್ಪವೂ ನನ್ನಿಂದಾಗದು;

**ಎಂತುಮ್ ಅವರೊಳ್ ಸಂಧಾನಮನ್ ಮಾಡಲಾಗದು**=ಯಾವುದೇ ಕಾರಣದಿಂದಲೂ ಪಾಂಡವರೊಡನೆ ಸಂಧಾನವನ್ನು ಮಾಡಿಕೊಳ್ಳಲಾಗುವುದಿಲ್ಲ; **ಅಜ್ಜ, ನೀಮ್ ಇಲ್ಲದೆ ಬಿಲ್ಲಗುರುಗಳ್ ತಾಮಿಲ್ಲದೆ ಆ ಕರ್ಣನಿಲ್ಲದೆ ದುಶ್ಯಾಸನ ನಿಲ್ಲದೆ... ಆರೊಡನೆ ರಾಜ್ಯಮ್ ಗೆಯ್ವೆನ್**=ಅಜ್ಜ, ಹಿರಿಯರಾದ ನೀವಿಲ್ಲದೆ, ಬಿಲ್ಲ

ಗುರುಗಳಾದ ದ್ರೋಣರಿಲ್ಲದೆ, ಜೀವದ ಗೆಳೆಯನಾದ ಕರ್ಣನಿಲ್ಲದೆ, ಒಲವಿನ ತಮ್ಮನಾದ ದುಶ್ಯಾಸನನಿಲ್ಲದೆ ಯಾರೊಡನೆ ನಾನು ರಾಜ್ಯವನ್ನು ಆಳಲಿ; **ಆರ್ಗೆ ಎನ್ನ ಸಂಪದಮಮ್ ತೋರುವೆನ್**=ಯಾರಿಗೆ ನನ್ನ ರಾಜತನದ ಸಿರಿವಂತಿಕೆಯನ್ನು ತೋರಲಿ; **ಆರ್ಗೆ ನಾನಾ ವಿನೋದಂಗಳಮ್ ತೋರಿ ಮೆರೆವೆನ್**=ಯಾರ ಜತೆಗೂಡಿ ಬಹುಬಗೆಯ ಅಂದಚೆಂದದ ಆನಂದದ ಮನರಂಜನೆಯ ಕ್ರೀಡೆಗಳನ್ನಾಡಿ ನನ್ನ ರಾಜತ್ವವನ್ನು ಮೆರೆಯಲಿ; ಖಂಡಿತ= ಕತ್ತರಿಸಿದ/ತುಂಡುಮಾಡಿದ/ಪಾಲು ಮಾಡಿದ; ಪರ=ಬೇರೆಯ; ಮಹಿಮಂಡಲ= ಭೂಮಂಡಲ/ ರಾಜ್ಯ; ಧವಳಾತಪತ್ರ=ಬೆಳ್ಗೊಡೆ; ಏಭಂಡ=ಏನು ಪ್ರಯೋಜನ/ ಯಾವ ಲೆಕ್ಕ;

**ಖಂಡಿತಮ್ ಎನಿಪ್ಪ ಪರಮಹಿಮಂಡಲ ಧವಳಾತಪತ್ರ ಸಂಪದಮ್ ಎನಗೆ ಏಭಂಡಮ್**=ಇಬ್ಭಾಗ ಮಾಡಿದ ಬೇರೆಯವರ ರಾಜ್ಯದ ಬೆಳ್ಗೊಡೆಯಿಂದ ಸಂಪತ್ತಿನಿಂದ ನನಗೇನು ಪ್ರಯೋಜನ. ಅಂದರೆ ಇಡಿಯಾದ ರಾಜ್ಯಕ್ಕೆ ಒಡೆಯನಾಗಿ ನಾನು ಆಳಬೇಕೆ ಹೊರತು, ಅರೆಪಾಲಾದ ರಾಜ್ಯದ ಅರಸುತನವಾಗಲಿ ಸಂಪತ್ತಾಗಲಿ ನನಗೆ ಬೇಕಾಗಿಲ್ಲ; **ಅದನ್ ಒಲ್ಲೆನ್ ಒಲ್ಲೆನ್**= ಇಬ್ಭಾಗಗೊಂಡ ರಾಜ್ಯದ ಒಡೆತನ ನನಗೆ ಬೇಕಾಗಿಲ್ಲ ಬೇಕಾಗಿಲ್ಲ; ಅಖಂಡಿತ=ಸಂಪೂರ್ಣ/ಇಡಿಯಾದ; ಅಭಿಮಾನ=ವ್ಯಕ್ತಿಯು ತನ್ನ ಬಗ್ಗೆ ತಾನು ಹೊಂದಿರುವ ಹೆಮ್ಮೆ/ತನ್ನ ನಿಲುವು ಸದಾಕಾಲ ಸರಿಯಾಗಿದೆ ಎಂಬ ಒಳಮಿಡಿತ; ಬಲ್+ಪಿಡಿ+ಪಿಡಿವೆನ್; ಬಲ್ವಿಡಿ=ಬಲವಾಗಿ ಹಿಡಿದುಕೊಳ್ಳುವುದು; **ಅಖಂಡಿತಮ್ ಅಭಿಮಾನಮ್ ಅದನೆ ಬಲ್ವಿಡಿವಿಡಿವೆನ್**=ಸಂಪೂರ್ಣವಾದ ಅಭಿಮಾನವನ್ನೇ ನಾನು ಕೊನೆಯವರೆಗೂ ಅವಲಂಬಿಸಿದ್ದೇನೆ. ದುರ್ಯೋಧನನು ರಾಜ್ಯದ ಅಧಿಕಾರದ ಬಗ್ಗೆ ಚಿಕ್ಕಂದಿನಿಂದಲೂ **“ಹಸ್ತಿನಾವತಿಯನ್ನು ರಾಜಧಾನಿಯಾಗುಳ್ಳ ಸಾಮ್ರಾಜ್ಯವನ್ನು ತಾನೊಬ್ಬನೇ ರಾಜನಾಗಿ ಆಳಬೇಕು. ಯಾವುದೇ ಕಾರಣ ದಿಂದಲೂ ರಾಜ್ಯಕ್ಕೆ ಪಾಂಡವರು ಒಡೆಯರಾಗಬಾರದು ಮತ್ತು ರಾಜ್ಯವನ್ನು ಪಾಂಡವರ ಜತೆ ಹಂಚಿಕೊಂಡು ಬಾಳಬಾರದು”** ಎಂಬ ನಿಲುವನ್ನು ಹೊಂದಿದ್ದನು. ಇಂತಹ ನಿಲುವಿಗೆ ಧಕ್ಕೆ ತರುವಂತಹ ಸಂಧಿಯನ್ನು ದುರ್ಯೋಧನನು ಒಪ್ಪುತ್ತಿಲ್ಲ;

**ಪುಟ್ಟಿದ ನೂರ್ವರುಮ್ ಎನ್ನ ಒಡವುಟ್ಟಿದ ನೂರ್ವರುಮ್ ಇದಿರ್ಚಿ ಸತ್ತೊಡೆ ಕೋಪಮ್ ಪುಟ್ಟಿ ಪೊದಳ್ದುದು**=ಹುಟ್ಟಿದ ನೂರು ಮಂದಿ ನನ್ನ ಮಕ್ಕಳು ನನ್ನ ಒಡಹುಟ್ಟಿದ ನೂರು ಮಂದಿ ತಮ್ಮಂದಿರು ಕುರುಕ್ಷೇತ್ರ ರಣರಂಗದಲ್ಲಿ ಹಗೆಗಳಾದ ಪಾಂಡವರ ವಿರುದ್ಧ ಹೋರಾಡುತ್ತ ಸಾವನ್ನಪ್ಪಿದ್ದರಿಂದ, ನನ್ನಲ್ಲಿ ಕೋಪವು ಹುಟ್ಟಿ, ನನ್ನ ಮಯ್ ಮನವೆಲ್ಲವೂ ಆಕ್ರೋಶ ಮತ್ತು ಸೇಡಿನಿಂದ ಕುದಿಯುತ್ತಿದೆ; **ಸತ್ತರ್**

**ಪುಟ್ಟರೆ**=ಒಮ್ಮೆ ಸತ್ತವರು ಮತ್ತೆ ಹುಟ್ಟಿಬರುವುದಿಲ್ಲವೇ. ಸಾವು ಅಂತಹ ಭಯಂಕರವಾದುದಲ್ಲ. ಸಾವಿಗಿಂತ ಜೀವನದಲ್ಲಿ ಅಪಮಾನ ಮತ್ತು ಸೋಲು ಭಯಂಕರವಾದುದು. ಸಾವಿಗಾಗಿ ಹೆದರಿ ಸಂಧಿಯನ್ನು ನಾನು ಮಾಡಿಕೊಳ್ಳುವುದಿಲ್ಲ; **ಪಾಂಡವರೊಳ್ ಇರಿದು ಛಲಮನೆ ಮೆರೆವೆನ್**= ಪಾಂಡವರೊಡನೆ ಹೋರಾಡಿ ನನ್ನ ಚಲವನ್ನೇ ಸಾಧಿಸಿ ತೋರಿಸುತ್ತೇನೆ; ಕಾದದೆ ಇರೆನ್=ಹೋರಾಟ ಮಾಡದೆ ಸುಮ್ಮನಿರಲು ನನ್ನಿಂದಾಗದು; **ಅಜ್ಜ ಇಂದಿನ ಒಂದೆ ಸಮರದೊಳ್ ಆನ್ ಆದೆನ್ ಮೇಣ್ ಪಾಂಡವರಾದರ್**=ಅಜ್ಜ, ಇಂದು ನಡೆಯುವ ಈ ಒಂದು ಹೋರಾಟದಲ್ಲಿ ನಾನು ಉಳಿಯುತ್ತೇನೆ ಇಲ್ಲವೇ ಪಾಂಡವರು ಉಳಿಯುತ್ತಾರೆ. ಇಬ್ಬರಲ್ಲಿ ಒಬ್ಬರ ಅಳಿವು ನಿಶ್ಚಯ; ಅವನಿತಳ=ಭೂಮಂಡಲ;

**ಅದರಿಂದೆ ಅವನಿತಳಮ್ ಕೌರವಂಗೆ ಆಯ್ತು ಮೇಣ್ ಪಾಂಡವರ್ಗೆ ಆದುದು ಎಂದು**=ಆದ್ದರಿಂದ ಭೂಮಂಡಲವು ದುರ್ಯೋಧನನಿಗೆ ಸೇರುತ್ತದೆ ಇಲ್ಲವೇ ಪಾಂಡವರಿಗೆ ಸೇರುತ್ತದೆ ಎಂದು; ನಿರ್ವ್ಯಾಜಶೌರ್ಯ+ ಅವಲಂಬಿಯಾಗಿ; ನಿರ್ವ್ಯಾಜಶೌರ್ಯ=ಸಹಜವಾದ ಪರಾಕ್ರಮ; **ರಾಜಾಧಿರಾಜನ್ ನಿರ್ವ್ಯಾಜ ಶೌರ್ಯಾವಲಂಬಿಯಾಗಿ ನುಡಿಯೆ**=ಚಕ್ರವರ್ತಿಯಾದ ದುರ್ಯೋಧನನು ತನ್ನಲ್ಲಿ ಸಹಜವಾಗಿದ್ದ ಕೆಚ್ಚು ಮತ್ತು ಬಾಹುಬಲವನ್ನು ನಂಬಿಕೊಂಡು ನುಡಿಯಲು; **ಗಾಂಗೇಯನ್ ಅರಿದು**=ಭೀಷ್ಮನು ದುರ್ಯೋಧನನ ಅಂತಿಮ ನಿರ್ಧಾರವನ್ನು ತಿಳಿದು; ಅತಿ+ವಿಸ್ಮಯ+ಆಕುಲೀಕೃತ+ಚಿತ್ತನ್+ಆಗಿ; ಆಕುಲೀಕೃತ=ತುಂಬಿದ; ಚಿತ್ತ=ಮನಸ್ಸು; **ಅತಿವಿಸ್ಮಯಾಕುಲೀಕೃತಚಿತ್ತನಾಗಿ**=ಬಹಳ ಅಚ್ಚರಿ ತುಂಬಿದ ಮನಸ್ಸಿನವನಾಗಿ; ಒಬ್ಬಂಟಿಯಾಗಿದ್ದರೂ ಕೆಚ್ಚು, ಬಲ ಮತ್ತು ಚಲದಿಂದ ಹೋರಾಡಲು ಅಣಿಯಾಗಿರುವ ದುರ್ಯೋಧನನ ಮಾತನ್ನು ಕೇಳಿ ಅಚ್ಚರಿಗೊಂಡು; ಮುಹುರ್=ಮತ್ತೆ/ಪುನಹ; ಮುಹರ್ಮುಹರ್=ಮತ್ತೆ ಮತ್ತೆ; ಆಂದೋಳಿತ=ತೂಗಾಟ; ಉತ್ತಮಾಂಗ=ತಲೆ;

**ಮುಹರ್ಮುಹರ್ ಆಂದೋಳಿತ ಉತ್ತಮಾಂಗನುಮಾಗಿ**=ಭೀಷ್ಮನು ತನ್ನ ತಲೆಯನ್ನು ಅತ್ತಿತ್ತ ಆಡಿಸುತ್ತ; ಜತುಗೇಹ+ಅನಲ; ಜತುಗೇಹ=ಅರಗಿನ ಮನೆ; ಅನಲ=ಬೆಂಕಿ; ಜತುಗೇಹಾನಲ ಬೀಜಮ್=ಅರಗಿನ ಮನೆಯ ಬೆಂಕಿಯಲ್ಲಿ ಪಾಂಡವರನ್ನು ಸುಡಲು ಮಾಡಿದ ಸಂಚು ಬೀಜವಾಗಿ; ಉಗ್ರ=ಭಯಂಕರವಾದ; ಸಂಜಾತ+ಅಂಕುರಮ್; ಸಂಜಾತ=ಹುಟ್ಟಿದ; ಅಂಕುರ=ಮೊಳಕೆ; **ಉಗ್ರವಿಷಸಂಜಾತ ಅಂಕುರಮ್**=ಭೀಮನಿಗೆ ವಿಷದ ಲಡ್ಡುಗೆಯನ್ನು ತಿನ್ನಿಸಿ ಕೊಲ್ಲಲು ಮಾಡಿದ ಸಂಚು ಮೊಳಕೆಯಾಗಿ; ಕ್ರೀಡನ+ಉದ್ಧತಿ+ಕೃತ್; ಕ್ರೀಡನ=ಕ್ರೀಡೆ/ಆಟ; ಉದ್ಧತಿ=ಉತ್ಸಾಹವುಳ್ಳ; ಕೃತ್=ಮಾಡಿದ; ದ್ಯೂತ=ಜೂಜು/

ಪಗಡೆಯಾಟ; ವಿನೋದ=ಮನೋರಂಜನೆಯ ಆಟ; ಪಲ್ಲವ=ಚಿಗುರು; ಚಯ=ಸಮೂಹ/ರಾಶಿ; **ಕ್ರೀಡನೋದ್ಧತಿಕೃತ್ ದ್ಯೂತವಿನೋದ ಪಲ್ಲವಚಯಮ್**= ಆಟವಾಡೋಣವೆಂಬ ಉತ್ಸಾಹದಿಂದ ಏರ್ಪಡಿಸಿ ಆಡಿದ ಪಗಡೆಯಾಟದ ವಂಚನೆಯು ಚಿಗುರಿನ ರಾಶಿಯಾಗಿ; ಪಾಂಚಾಲರಾಜ+ಆತ್ಮಜಾ+ ಆಯತ+ ಕೇಶಗ್ರಹ; ಪಾಂಚಾಲರಾಜ=ದ್ರುಪದ; ಆತ್ಮಜಾ=ಮಗಳು; ಪಾಂಚಾಲರಾಜಾತ್ಮಜಾ=ದ್ರೌಪದಿ; ಆಯತ=ನೀಳವಾದ/ಉದ್ದವಾದ; ಕೇಶ=ತಲೆ ಕೂದಲು; ಗ್ರಹ=ತುಡುಕುವುದು/ಹಿಡಿಯುವುದು; ದ್ರುಮ=ಮರ;

**ಪಾಂಚಾಲರಾಜಾ ಆತ್ಮಜಾಯತಕೇಶಗ್ರಹ ಪುಷ್ಪಮಾಗೆ ಬೆಳೆದಾ ವೈರದ್ರುಮಮ್**= ದ್ರೌಪದಿಯ ತಲೆಗೂದಲನ್ನು ದುಶ್ಶಾಸನನು ರಾಜಸಭೆಯಲ್ಲಿ ಹಿಡಿದೆಳೆದದ್ದು ಹೂವಾಗಿ ಅರಳಿ ಹಗೆತನದ ಮರವಾಗಿ ಬೆಳೆದು; ಕೌರವ+ಕ್ಷಿತಿಪಾಲ+ಊರು; ಕ್ಷಿತಿಪಾಲ= ರಾಜ; ಊರು=ತೊಡೆ; **ಕೌರವ ಕ್ಷಿತಿಪಾಲ ಊರು ಕಿರೀಟಭಂಗ ಫಲಮಮ್ ಮಾಡದೆ ಏನ್ ಪೋಕುಮೇ..ಪೇಳ್ ಎಂದು ನಿಶ್ಚಯಿಸಿ**= ದುರ್ಯೋಧನನ ತೊಡೆಯನ್ನು ಮುರಿಯುವ, ಕಿರೀಟವನ್ನು ತೊಡೆಯುವ ಫಲವನ್ನು ನೀಡದೇ ಹೋಗುವುದೇನು ಹೇಳು ಎಂದು ತನ್ನ ಮನದಲ್ಲಿಯೇ ಮುಂದಾಗುವುದನ್ನು ನಿಶ್ಚಯಿಸಿಕೊಂಡು; ನಿಜ+ಉದರದಿಮ್; ನಿಜ=ತನ್ನ; ಉದರ=ಹೊಟ್ಟೆ; ಲೆಕ್ಕಣಿಕೆ=ಬರೆಯಲು ಬಳಸುವ ಉಪಕರಣ; **ಸಿಂಧುಸುತನ್ ನಿಜೋದರದಿಮ್ ಶರಮ್ ಒಂದನ್ ತೆಗೆದು ಲೆಕ್ಕಣಿಕೆ ಮಾಡಿ**=ಭೀಷ್ಮನು ತನ್ನ ಹೊಟ್ಟೆಯಲ್ಲಿ ನಾಟಿಕೊಂಡಿದ್ದ ಬಾಣವೊಂದನ್ನು ಹೊರತೆಗೆದು, ಬಾಣದ ಮೊನೆಯನ್ನೇ ಬರಹದ ಉಪಕರಣವನ್ನಾಗಿ ಮಾಡಿಕೊಂಡು; ಗಜಮದ ಮಸಿ=ಆನೆಯ ಗಂಡಸ್ಥಲದಿಂದ ಸುರಿದ ರಸ;

**ಗಜಮದ ಮಸಿಯಮ್ ತರಿಸಿ=ಗಜಮದ ಮಸಿಯನ್ನು ತರಿಸಿ; ಪತಾಕೆ**= ಬಾವುಟ; ಪಟ=ಬಟ್ಟೆ; **ಪತಾಕಾಪಟದೊಳ್ ಬರೆದು**=ಬಾವುಟದ ಬಟ್ಟೆಯ ಮೇಲೆ ಬರೆದು; ಅಂಧ=ಕುರುಡ; ನೃಪತಿ=ರಾಜ; **ಅಂಧನೃಪತಿಗಮ್ ಅಟ್ಟಿದನ್**= ಧೃತರಾಷ್ಟ್ರನಿಗೆ ಪತ್ರವನ್ನು ಕಳುಹಿಸಿದನು; **ಅಂತು ನಿಜನಾಮಾಂಕಿತ ಲೇಖನಮನ್ ಬರೆದು**=ಆ ರೀತಿ ತನ್ನ ಹೆಸರಿನಲ್ಲಿ ಬರಹವನ್ನು ರಚಿಸಿ; ಮೊಮ್ಮನ್ ನುಡಿದ ನುಡಿಯನ್ ಎಂತುಮ್ ಒಡಂಬಡುವನಲ್ಲನ್=ನಮ್ಮ ಮೊಮ್ಮಗನಾದ ದುರ್ಯೋಧನನು ನಾವು ಹೇಳಿದ ಹಿತನುಡಿಯನ್ನು ಯಾವ ರೀತಿಯಿಂದಲೂ ಒಪ್ಪುತ್ತಿಲ್ಲ; **ನೀನುಮ್ ಗಾಂಧಾರಿಯುಮ್ ಇರ್ದು**=ನೀನು ಗಾಂಧಾರಿಯು ಅವನ ಬಳಿಗೆ ಬಂದು; ಪ್ರದೀಪ=ದೀವಿಗೆ/ದೀಪ; ಕುರುಕುಲ ಪ್ರದೀಪ=ಕುರುಕುಲವನ್ನು ಬೆಳಗುವವನು; ಕೌಂತೇಯರು=ಪಾಂಡವರು; **ಕುರುಕುಲ ಪ್ರದೀಪ ದುರ್ಯೋಧನನನ್ ಕೌಂತೇಯರೊಳ್ ಎಂತಾನುಮ್ ಸಂಧಿಯಮ್ ಮಾಡಿ**

**ಪೂರ್ವಕ್ರಮದೊಳ್ ನಡೆವಂತು ಮಾಳ್ಪುದು ಎಂದು**= ಕುರುಕುಲ ಪ್ರದೀಪನಾದ ದುರ್ಯೋಧನನನ್ನು ಪಾಂಡವರೊಡನೆ ಯಾವ ರೀತಿಯಿಂದಲಾದರೂ ಸಂಧಿಯನ್ನು ಮಾಡಿಕೊಳ್ಳುವಂತೆ ಒಪ್ಪಿಸಿ, ಪಗಡೆಯಾಟದ ದುರಂತಕ್ಕೆ ಮೊದಲು ಹಸ್ತಿನಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದುರ್ಯೋಧನನು ಮತ್ತು ಇಂದ್ರಪ್ರಸ್ಥವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪಾಂಡವರು ಆಳುತ್ತಿದ್ದರೋ ಅದೇ ರೀತಿ ರಾಜ್ಯವನ್ನಾಳುವಂತೆ ಮಾಡುವುದು ಎಂದು ಬರಹದಲ್ಲಿ ಒಕ್ಕಣೆಯನ್ನು ಮಾಡಿ;

**ಸಂಜಯನ ಕಯ್ಯೊಳ್ ಕೊಟ್ಟು ಧೃತರಾಷ್ಟ್ರನಲ್ಲಿಗೆ ಅಟ್ಟುವುದುಮ್**=ಭೀಷ್ಮನು ಸಂಜಯನ ಕಯ್ಯಲ್ಲಿ ಪತ್ರವನ್ನು ಕೊಟ್ಟು ಧೃತರಾಷ್ಟ್ರನ ಬಳಿಗೆ ಕಳುಹಿಸಲು; **ಕುರುರಾಜನ್ ಸಿಂಧುಸುತನ ಮೊಗಮನ್ ನೋಡಿ**= ದುರ್ಯೋಧನನು ಭೀಷ್ಮನ ಮೊಗವನ್ನು ನೋಡಿ; ತುಂಗ=ಉನ್ನತವಾದ; ಅಯಶೋಭಂಗ= ಅಪಕೀರ್ತಿಯುಂಟಾಗಿ ಹಾನಿಗೊಳ್ಳುವುದು; ದೂಸರು=ಕಾರಣ/ನಿಮಿತ್ತ; **ಅದು ಎನ್ನ ದೂಸರಿನ್ ತುಂಗ ಕುರುವಂಶಮ್ ಅಯಶೋಭಂಗಮ್ ಛಿದ್ರಿತಮ್ ಆಯ್ತು**=ಅದು ನನ್ನ ಕಾರಣದಿಂದ ಉನ್ನತವಾದ ಕುರುವಂಶ ಅಪಕೀರ್ತಿಯಿಂದ ಹಾನಿಗೊಂಡು ಛಿದ್ರಗೊಂಡಿತು; **ಆನುಮ್ ಗಡ ಕುರುರಾಜನೆ**=ನಾನು ಕಂಡಿರಾ ಈಗ ಕುರುರಾಜನೆ; **ನೀಮುಮ್ ಗಡ ಸಂಧಾನವೇಳ್ದಿರ್ ಎನಗೆ**=ನೀವು ನೋಡಿದರೆ ನನಗೆ ಸಂಧಾನ ಮಾಡಿಕೊಂಡು ಬಾಳುವಂತೆ ಹೇಳುತ್ತಿರುವಿರಿ; ಅರಸು ಗಡಾ= ಕಂಡಿರಾ... ನನಗೆ ಅರಸುತನವೇ; ನಿಡು+ತೋಳ್; ನಿಡುತೋಳ್=ಉದ್ದನೆಯ ತೋಳು; ಆಯತ್ತ=ವಶ;

**ವೀರವೃತ್ತಿ ಈ ಎನ್ನ ಎರಡುಮ್ ನಿಡುದೋಳ್ ಆಯತ್ತಮ್**=ವೀರತನದ ಹೋರಾಟವು ಈ ನನ್ನ ಎರಡು ಉದ್ದನೆಯ ತೋಳುಗಳ ಬಲದಲ್ಲಿದೆ; ಜಯಮ್ ಎಂಬುದು ದೈವಾಯತ್ತಮ್=ರಣರಂಗದಲ್ಲಿ ಜಯವೆಂಬುದು ದೇವರ ಇಚ್ಚೆಗೆ ಬಿಟ್ಟಿದ್ದು; ಭರತ+ಅನ್ವಾಯಕ್ಕೆ; ಅನ್ವಯ/ಅನ್ವಾಯ=ವಂಶ; **ಅಜ್ಜ ಭರತಾನ್ವಾಯಕ್ಕೆ ಕಲಂಕಮಾಗದಂತಿರೆ ನೆಗಳ್ವೆನ್**=ಅಜ್ಜ, ಭರತ ವಂಶಕ್ಕೆ ಕೆಟ್ಟಹೆಸರು ಬರದಂತೆ ನಡೆದುಕೊಳ್ಳುತ್ತೇನೆ; ಬೆಸಕೆಯ್=ಹೇಳಿದ ಕೆಲಸವನ್ನು ಮಾಡು; ಬೆಸಕೆಯ್ಯೆನ್= ಹೇಳಿದ ಕೆಲಸವನ್ನು ಮಾಡುವುದಿಲ್ಲ; ಅಜ್ಜ, ಮಂಗಳ ಮಹಾಶ್ರೀ ಸಂಧಿಕಾರ್ಯಕ್ಕೆ ಬೆಸಕೆಯ್ಯೆನ್=ಅಜ್ಜ, ಮಂಗಳಕರವಾದುದೆಂದು ನೀವು ಹೇಳುತ್ತಿರುವ ಮಹಾ ಸಂಧಾನವನ್ನು ಪಾಂಡವರೊಡನೆ ನಾನು ಮಾಡಿಕೊಳ್ಳುವುದಿಲ್ಲ; ಬಿಡಿಮ್= ಸಂಧಿಯ ಮಾತನ್ನೇ ಬಿಡಿ; ಲಂಘಿಸು=ಮೀರು; **ನಿಮ್ಮಯ ಮಾತನ್ ಒರ್ಮೆಗೆ ಲಂಘಿಸಿದೆನ್**=ನಿಮ್ಮ ಮಾತನ್ನು ಇದೊಂದು ಬಾರಿ ಮೀರುತ್ತಿದ್ದೇನೆ; ಮತ್=ನನ್ನ/ ನನಗೆ;

**ಮತ್ ಆಜ್ಞಾಲಂಘನಮ್ ದೋಷಮ್ ಒಂದಿಸದು**=ನಿಮ್ಮ ಆಜ್ಞೆಯನ್ನು ಮೀರಿದ ಕಳಂಕ ನನಗೆ ತಟ್ಟುವುದಿಲ್ಲ. ಏಕೆಂದರೆ ನಾನು ಸಂಧಿಯನ್ನು ಎಂದಿಗೂ ಬಯಸಿಲ್ಲ; ಇನ್ನು ಆಗ್ರಹಮಮ್ ಬಿಸುಳ್ಪುದು=ಇನ್ನು ಸಂಧಿಗಾಗಿ ಒತ್ತಾಯಮಾಡುತ್ತಿರುವುದನ್ನು ಬಿಡುವುದು; ಸಂಧಾನದ ಮಾತನ್ನೇ ಬಿಡುವುದು ಎಂದು ದುರ್ಯೋಧನನು ನುಡಿಯಲು; ಸತ್ತ್ವ=ಶಕ್ತಿ/ಬಲ; ತತ್+ಏಕಾಂಗ ಸಾಹಸಕಮ್; ಏಕಾಂಗಸಾಹಸ=ಒಬ್ಬಂಟಿಯಾಗಿದ್ದರೂ ಹೋರಾಡುವ ಕೆಚ್ಚು; ವಿಸ್ಮಯಮ್+ಉತ್ತು; ಮಂದಾಕಿನೀನಂದನ= ಭೀಷ್ಮ; **ಸತ್ತ್ವಕ್ಕಮ್ ತದೇಕಾಂಗ ಸಾಹಸಕಮ್ ವಿಸ್ಮಯಮುತ್ತು ಮೆಚ್ಚಿ ಪೊಗಳ್ದನ್ ಮಂದಾಕಿನೀನಂದನನ್**= ದುರ್ಯೋಧನನ ಶಕ್ತಿ ಮತ್ತು ಒಬ್ಬಂಟಿಯಾಗಿದ್ದರೂ ಹೋರಾಡಬಲ್ಲ ಕೆಚ್ಚಿನ ನಿರ್ಧಾರವನ್ನು ಕೇಳಿ ಭೀಷ್ಮನು ಮೆಚ್ಚಿ ಹೊಗಳಿದನು; **ಅಂತು ಗಾಂಗೇಯನ್ ಮನದೊಳ್ ಪೊಗಳ್ದನ್**=ಆ ರೀತಿ ಭೀಷ್ಮನು ದುರ್ಯೋಧನನನ್ನು ಮನದಲ್ಲಿಯೇ ಹೊಗಳಿದನು; ಅವಧಾರಿಸು=ಮನಸ್ಸಿಗೆ ತಂದುಕೊಂಡು;

ಅಶುಭಸ್ಯ ಕಾಲಹರಣಮ್ ಎಂಬ ವಾಕ್ಯಾರ್ಥಮನ್ ಅವಧಾರಿಸಿ= **"ಕಾಲಹರಣವನ್ನು ಮಾಡಿದರೆ ಕೆಟ್ಟದ್ದರಿಂದ ಪಾರಾಗಬಹುದು"** ಎಂಬ ವಾಕ್ಯದ ಆಶಯವನ್ನು ಮನಸ್ಸಿಗೆ ತಂದುಕೊಂಡು; **ಮಗನೆ, ನೀನ್ ಎಂತುಮ್ ಎಮ್ಮ ಪೇಳ್ದುದಮ್ ಕಯ್ ಕೊಳ್ಳದೆ, ಛಲಮನೆ ಕಯ್ ಕೊಂಡು ಪಾಂಡುನಂದನರೊಳ್ ಕಾದಿದಲ್ಲದೆ ಇರೆನ್ ಎಂಬೆಯಪ್ಪೊಡೆ**=ಮಗನೆ, ನೀನು ಹೇಗಿದ್ದರೂ ನಾವು ಹೇಳಿದ್ದನ್ನು ಮಾಡದೆ, ಚಲವನ್ನೇ ಹಿಡಿದು ಪಾಂಡುವಿನ ಮಕ್ಕಳೊಡನೆ ಹೋರಾಡದೆ ಇರಲಾರೆನು ಎನ್ನುವೆಯಾದರೆ; ಮೆಯ್ಗರೆ=ಅಡಗು/ ಮರೆಯಾಗು; **ತೀರ್ಥಯಾತ್ರೆಗೆ ಪೋದ ಬಲದೇವನ್ ಬರ್ಪನ್ನೆಗಮ್ ನೀನ್ ಇರ್ದ ಎಡೆಯನ್ ಅರಿಯದಂತು ಮೆಯ್ಗರೆದು**=ತೀರ್ಥಯಾತ್ರೆಗೆ ಹೋಗಿರುವ ಬಲದೇವನು ಬರುವತನಕ ನೀನು ಇರುವ ಜಾಗವು ಯಾರಿಗೂ ತಿಳಿಯದಂತೆ ಅಡಗಿ ಕೊಂಡಿದ್ದು; **ಅಶ್ವತ್ಥಾಮ ಕೃಪ ಕೃತವರ್ಮರ್ ಬರ್ಪನ್ನೆಗಮ್ ಕಾಲವಂಚನಮ್ ಗೆಯ್ವುದು**=ಕುರುಕ್ಷೇತ್ರ ರಣರಂಗದಲ್ಲಿ ಚದುರಿಹೋಗಿರುವ ಅಶ್ವತ್ಥಾಮ, ಕೃಪ, ಕೃತವರ್ಮರು ಬರುವವರೆಗೂ ಯಾರ ಕಣ್ಣಿಗೂ ಬೀಳದಂತೆ ಕಾಲವನ್ನು ಕಳೆಯುವುದು; ಮೇಣ್=ಮತ್ತು; ಜಲಮಂತ್ರ=ನೀರಿನೊಳಗೆ ಜೀವಕ್ಕೆ ಹಾನಿಯಾಗದಂತೆ ಉಚ್ಚರಿಸು ಮಂತ್ರ; **ಜಲಮಂತ್ರ ವಿದ್ಯಾಭ್ಯಾಸಮಮ್ ಕಯ್ ಕೊಂಡು=ಜಲಮಂತ್ರವನ್ನು ಸ್ಮರಿಸುವ ವಿದ್ಯೆಯನ್ನು ಕಲಿತುಕೊಂಡು;**

**ಕುರುಕ್ಷೇತ್ರದ ಉತ್ತರ ದಿಶಾ ಭಾಗದೊಳ್ ಇರ್ಪ ವೈಶಂಪಾಯನ ಸರೋವರಮಮ್ ಪೊಕ್ಕಿರ್ದು**=ಕುರುಕ್ಷೇತ್ರ ರಣರಂಗದ ಉತ್ತರ ದಿಕ್ಕಿನ ಭಾಗದಲ್ಲಿರುವ ವೈಶಂಪಾಯನ ಸರೋವರದಲ್ಲಿ ಮುಳುಗಿಕೊಂಡಿದ್ದು;

ನೆಗಳ್=ಮಾಡು/ಕಯ್ಗೊಳ್ಳು; ಇರುಳು=ರಾತ್ರಿ; ಕಳಿಪಿ=ಕಳೆದು; **ಇಂದಿನ ಒಂದು ಇರುಳಮ್ ಕಳಿಪಿ , ನಾಳೆ ನೀನ್ ನೆಗಳ್ದುದಮ್ ನೆಗಳ್ದುದು ಎನೆ**=ಇಂದಿನ ಒಂದು ರಾತ್ರಿಯನ್ನು ಸರೋವರದಲ್ಲಿಯೇ ಅಡಗಿಕೊಂಡಿದ್ದು ಕಳೆದು, ನಾಳೆ ನೀನು ಏನು ಮಾಡಬೇಕೆಂದಿರುವೆಯೋ ಅದನ್ನು ಮಾಡುವುದು ಎನ್ನಲು;

**ಮಹಾಪ್ರಸಾದಮ್**=ನಿಮ್ಮ ಅನುಗ್ರಹ; **ಇದನ್ ಒಡಂಬಟ್ಟೆನ್**=ಇದನ್ನು ಒಪ್ಪಿಕೊಂಡೆನು; **ಅಂತೆ ಗೆಯ್ವೆನ್ ಎಂದು**=ಅದೇ ರೀತಿ ಮಾಡುತ್ತೇನೆ ಎಂದು ಹೇಳಿ; **ಹಿತೋಪದೇಶಮ್ ಬೆರಸು ಜಲಮಂತ್ರ ಉಪದೇಶಮಮ್ ಕಯ್ಕೊಂಡು**= ಭೀಷ್ಮನ ಹಿತನುಡಿಗಳಿಗೆ ಮನಗೊಟ್ಟು, ಜಲಮಂತ್ರದ ಉಚ್ಚಾರಣೆ ಮತ್ತು ಆಚರಣೆಯ ಬಗೆಯನ್ನು ಭೀಷ್ಮನಿಂದ ಹೇಳಿಸಿಕೊಂಡು; **ಕುರುಕುಲ ಪಿತಾಮಹನನ್ ಬೀಳ್ಕೊಂಡು**=ಕುರುಕುಲ ಪಿತಾಮಹನಾದ ಭೀಷ್ಮನನ್ನು ಬೀಳ್ಕೊಂಡು; **ನಿಜಭುಜ ಗದಾಸಹಾಯನುಮ್ ಆಗಿ ಸಂಗ್ರಾಮ ಭೂಮಿಯೊಳಗನೆ ಬರುತ್ತುಮ್**=ತನ್ನ ಬಾಹುಬಲ ಮತ್ತು ಗದೆಯ ಶಕ್ತಿಯನ್ನೇ ಅವಲಂಬಿಸಿದವನಾಗಿ, **ರಣರಂಗದಲ್ಲಿ ಬರುತ್ತ; ತನ್ನ ಅಂತರ್ಗತದೊಳ್**=ದುರ್ಯೋಧನನು ತನ್ನ ಮನದಲ್ಲಿ ಈ ರೀತಿ ಚಿಂತಿಸತೊಡಗಿದನು;

❖

ನೋಟ–೧೪

# ದುರ್ಯೋಧನನು ವೈಶಂಪಾಯನ ಸರೋವರವನ್ನು ಹೊಕ್ಕಿದ್ದು

**ಕುರುಕುಲ ಪಿತಾಮಹನನ್ ಬೀೞ್ಕೊಂಡು**=ಕುರುಕುಲ ಪಿತಾಮಹನಾದ ಭೀಷ್ಮನನ್ನು ಬೀಳ್ಕೊಂಡು; ನಿಜ=ತನ್ನ; **ನಿಜಭುಜ ಗದಾಸಹಾಯನುಮ್ ಆಗಿ ಸಂಗ್ರಾಮ ಭೂಮಿಯೊಳಗನೆ ಬರುತ್ತುಮ್**=ತನ್ನ ಬಾಹುಬಲ ಮತ್ತು ಗದೆಯ ಶಕ್ತಿಯನ್ನೇ ಅವಲಂಬಿಸಿದವನಾಗಿ ರಣರಂಗದಲ್ಲಿ ಬರುತ್ತ; **ತನ್ನ ಅಂತರ್ಗತದೊಳ್**=ದುರ್ಯೋಧನನು ತನ್ನ ಮನದಲ್ಲಿ ಈ ರೀತಿ ಚಿಂತಿಸತೊಡಗಿದನು; ದಿನಕರ=ಸೂರ್ಯ; ದಿನಕರತನಯ=ಸೂರ್ಯನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗ ಕರ್ಣ; ಅಹಿತರ್= ಹಗೆಗಳು/ಶತ್ರುಗಳು; ಸಂಧಿ+ಕುಡು; ಕುಡು=ಒಪ್ಪಿಸು/ಅನುಮತಿ ಕೊಡು; ಎನೆ=ಎನ್ನಲು; ಸ್ವಜನ=ಹೆತ್ತ ತಂದೆತಾಯಿ; ಅಭ್ಯರ್ಥನೆ=ಕೋರಿಕೆ/ಬೇಡಿಕೆ;

**ದಿನಕರತನಯನ ದುಶ್ಶಾಸನನ ವಿಯೋಗದೊಳಮ್ ಇಂದುವರೆಗಮ್ ಎನಗೆ ನೋವಿಲ್ಲ... ಅಹಿತರೊಡನೆ ಸಂಧಿಗುಡು ಎನೆ ಸ್ವಜನ ಗುರುಜನ ಅಭ್ಯರ್ಥನೆಯಿಮ್ ನೊಂದೆನ್**=ಜೀವದ ಗೆಳೆಯನಾದ ಕರ್ಣ ಮತ್ತು ಒಡಹುಟ್ಟಿದ ದುಶ್ಶಾಸನನ ಅಗಲಿಕೆಯಿಂದಲೂ ಇದುವರೆಗೂ ನನಗೆ ಇಷ್ಟೊಂದು ನೋವಾಗಿರಲಿಲ್ಲ; **“ಹಗೆಗಳಾದ ಪಾಂಡವರೊಡನೆ ಸಂಧಿಗೆ ಒಪ್ಪಿಕೊಳ್ಳುವುದು”** ಎಂದು ನನ್ನ ತಂದೆ ತಾಯಿ ಮತ್ತು ಭೀಷ್ಮ ಮುಂತಾದ ಗುರುಹಿರಿಯರು ಹೇಳುತ್ತಿರುವ ಮಾತುಗಳನ್ನು ಮೇಲಿಂದ ಮೇಲೆ ಕೇಳಿ ಕೇಳಿ ಅಪಾರವಾದ ಸಂಕಟವಾಗುತ್ತಿದೆ; ಅರಿ=ಶತ್ರು/ಹಗೆ; ಅರಿಯರ್ ಪಾಂಡವರ್=ಪಾಂಡವರು ಹುಟ್ಟಿನಿಂದಲೇ ನನಗೆ ಹಗೆಗಳು;

**ಅವರೊಳ್ ವಿರೋಧಮಮ್ ಬಿಸುಟು**=ದಾಯಾದಿಗಳಾದ ಪಾಂಡವರನ್ನು ಎದುರುಹಾಕಿಕೊಳ್ಳದೆ ಇಲ್ಲವೇ ಅವರೊಡನೆ ಯುದ್ಧವನ್ನು ಮಾಡದೆ; **ವಿಧಿ**=ಬ್ರಹ್ಮ. ಪ್ರತಿಯೊಂದು ಜೀವಿಯ ಹುಟ್ಟಿಗೆ ಕಾರಣನಾಗಿರುವ ಬ್ರಹ್ಮ ದೇವನು ಜೀವಿಯ ಬದುಕಿನಲ್ಲಿ ಉಂಟಾಗುವ ಒಳಿತು ಕೆಡುಕುಗಳನ್ನು ಮೊದಲೇ ನಿಶ್ಚಯಿಸಿರುತ್ತಾನೆ. ಅದರಂತೆಯೇ ಎಲ್ಲವೂ ನಡೆಯುವುದು ಎಂಬ ನಂಬಿಕೆಯು ಜನಮನದಲ್ಲಿದೆ; **ಸಂಧಿಯಮ್ ಮಾಡುವುದು ಎಂಬರ ನುಡಿಯಮ್ ಕೇಳಲ್ಕೆ ಎಂದು ಎರಡುಮ್ ಕಿವಿಗಳುಮನ್ ಎನಗೆ ಬಿದಿ ಮಾಡಿದನೇ ಎನುತಮ್**=ಸಂಧಿಯನ್ನು ಮಾಡಿಕೊಳ್ಳುವುದು ಎನ್ನುವವರ ಮಾತುಗಳನ್ನು ಕೇಳುವುದಕ್ಕೆಂದೇ ಆ ಬ್ರಹ್ಮದೇವನು ಈ ನನ್ನ ಎರಡು ಕಿವಿಗಳನ್ನು ಮಾಡಿದನೇ ಎಂದು ಸಂಕಟಪಡುತ್ತ; ಎಯ್ದು=ಬರು/ಸೇರು; ಪ್ರದೀಪ=ದೀವಿಗೆ/ದೀಪ; ಕುರುಕುಲಪ್ರದೀಪ= ಕುರುಕುಲವನ್ನು ಬೆಳಗುವವನು/ ದುರ್ಯೋಧನ;

**ತತ್ ಸರೋವರದ ಸಮೀಪಮಮ್ ಕುರುಕುಲಪ್ರದೀಪನ್ ಎಯ್ದೆ ವಂದಾಗಳ್**=ವೈಶಂಪಾಯನ ಸರೋವರದ ಬಳಿಗೆ ದುರ್ಯೋಧನನು ಬಂದು ಸೇರಲು; ಮತ್ತರ್+ಅಂತರದ+ಇಂದಮ್; ಮತ್ತರ=ಭೂಮಿಯನ್ನು ಅಳೆಯುವ ಒಂದು ಮಾಪನ/ಅಳತೆ. ಉದಾ: ಕೆಲವು ಅಡಿಗಳು ಇಲ್ಲವೇ ಕೆಲವು ಗಜಗಳು; ಪೊರಮಟ್ಟು=ಹೊರಕ್ಕೆ ಬಂದ; ಪಜ್ಜೆ=ಹಜ್ಜೆ; ಸಲೆ=ಸರಿಯಾಗಿ/ತಕ್ಕಂತೆ; ಪಿಂದು=ಹಿಂಬದಿ; ಪೆರಗು=ಹಿಂದುಗಡೆ; ಪಿಂದುಪೆರಗು=ಹಿಮ್ಮುಖ/ಹಿಂದೆ ಸರಿಯುವಿಕೆ; ಪುಗು=ಪ್ರವೇಶಿಸು/ಒಳಹೊಗು;

**ಒಂದೆರಡು ಮತ್ತರಂತರದಿಂದಮ್ ಪೊರಮಟ್ಟ ಪಜ್ಜೆಯಿಮ್ ಸಲೆ ಕೊಳನಮ್ ಪಿಂದುಪೆರಗಾಗಿ ಪುಗೆ**=ದುರ್ಯೋಧನನು ಸರೋವರದಿಂದ ಒಂದೆರಡು ಮತ್ತರಗಳಷ್ಟು ದೂರದಲ್ಲಿಯೇ ನಿಂತು, ಅನಂತರ ಹಿಂದುಹಿಂದಾಗಿ ಹೆಜ್ಜೆಗಳನ್ನಿಡುತ್ತ, ಹಿಮ್ಮುಖನಾಗಿ ಕೊಳವನ್ನು ಪ್ರವೇಶಿಸಿದನು; ಹಿಮ್ಮುಖನಾಗಿ ಕೊಳವನ್ನು ಹೊಕ್ಕ ಉದ್ದೇಶವೇನೆಂದರೆ ಕೊಳದ ದಡದಲ್ಲಿರುವ ಹಸಿ ಮಣ್ಣಿನ ಮೇಲೆ ಇಲ್ಲವೇ ಮರಳಿನ ಮೇಲೆ ಬೀಳುವ ಹೆಜ್ಜೆ ಗುರುತುಗಳಿಂದ ಕೊಳದಿಂದ ಯಾರೋ ಒಬ್ಬ ವ್ಯಕ್ತಿ ಹೊರಗೆ ಹೋಗಿದ್ದಾನೆ ಎಂಬುದು ಮಾತ್ರ ಗೋಚರಿಸುವಂತಿರಬೇಕು; ತಾನು ಕೊಳದೊಳಗೆ ಅಡಗಿ ಕುಳಿತಿರುವುದು ಯಾರಿಗೂ ತಿಳಿಯಬಾರದು ಎಂಬುದಾಗಿತ್ತು; ರಾಜ್ಯಲಕ್ಷ್ಮಿ=ರಾಜ ಗದ್ದುಗೆ ಮತ್ತು ಸಂಪತ್ತಿನ ಪ್ರತಿರೂಪವಾಗಿ ರಾಜ್ಯಲಕ್ಷ್ಮಿ ಎಂಬ ದೇವತೆಯು ರಾಜನ ಬಳಿ ನೆಲೆಸಿರುತ್ತಾಳೆ ಎಂಬ ನಂಬಿಕೆಯು ಜನಮನದಲ್ಲಿದೆ; ಚೀಃ=ವ್ಯಕ್ತಿಯ ಕೆಟ್ಟ ನಡೆನುಡಿಯನ್ನು ಇತರರು ಕಂಡಾಗ, ವ್ಯಕ್ತಿಯ ಬಗ್ಗೆ ನಿಂದನೆ/ತಿರಸ್ಕಾರ/ಅಸಹ್ಯ

ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಪದ; ಪೇಸು=ಅಸಹ್ಯಪಡು/ಜುಗುಪ್ಸೆಪಡು;

**ರಾಜ್ಯಲಕ್ಷ್ಮಿ ಚಿಃ ಎಂದು ಪೇಸಿ ಅವನನ್ ಬಿಸುಟ್ಟಳ್**=ಚಕ್ರವರ್ತಿಯಾದ ದುರ್ಯೋಧನನು ಹಗೆಗಳಾದ ಪಾಂಡವರನ್ನು ವಂಚಿಸಲೆಂದು ಕಪಟತನದಿಂದ ಕೊಳವನ್ನು ಹಿಮ್ಮುಖನಾಗಿ ಹೊಗುತ್ತಿರುವುದನ್ನು ಕಂಡು ರಾಜ್ಯಲಕ್ಷ್ಮಿಯು ಅಸಹ್ಯಪಟ್ಟುಕೊಂಡು, ಅವನಿಂದ ದೂರಸರಿದಳು; ತುರು+ಅಮ್; ತುರು=ದನ/ಹಸು/ಗೋವು; ಕಳ್=ಅಪಹರಿಸು; **ತುರುವಮ್ ಕಳಿಸುವ**=ದನಗಳನ್ನು ಅಪಹರಿಸುವ; ಪಾಂಡವರು ಒಂದು ವರುಶ ಕಾಲ ವಿರಾಟನಗರಿಯಲ್ಲಿ ಅಜ್ಞಾತವಾಸದಲ್ಲಿದ್ದಾಗ, ಅವರನ್ನು ಅವಧಿ ಮುಗಿಯುವ ಮುನ್ನ ಗುರುತಿಸಿ, ಮತ್ತೆ ಅವರನ್ನು ಹನ್ನೆರಡು ವರುಶ ಕಾಡಿಗೆ ಅಟ್ಟಬೇಕೆಂದು ಕೆಟ್ಟ ಉದ್ದೇಶದಿಂದ ದುರ್ಯೋಧನನು ಸೇನೆಯೊಡನೆ ಹೋಗಿ ವಿರಾಟನಗರಿಯ ಹೊರವಲಯದಲ್ಲಿದ್ದ ದನಗಳನ್ನು ಅಪಹರಿಸಿದ್ದನು; ಕೃಷ್ಣೆ=ದ್ರೌಪದಿ; ನಿರಿ=ಸೀರೆಯ ಮಡಿಕೆ; ಉರ್ಚು+ಪೇಳ್ವ; ಉರ್ಚು=ಕೀಳು/ಸೆಳೆ;

**ಕೃಷ್ಣೆಯ ನಿರಿಯಮ್ ಪಿಡಿದು ಉರ್ಚವೇಳ್ವ**=ದ್ರೌಪದಿಯ ಸೀರೆಯ ನಿರಿಗೆಯನ್ನು ಹಿಡಿದು ಕೀಳುವಂತೆ ಹೇಳುವ; ಹಸ್ತಿನಾವತಿಯ ರಾಜಸಭೆಯಲ್ಲಿ ಪಗಡೆಯಾಟದ ಕಪಟ ದ್ಯೂತದಿಂದ ಪಾಂಡವರ ರಾಜ್ಯ ಸಂಪತ್ತಿನ ಜತೆಗೆ ದ್ರೌಪದಿಯನ್ನು ಗೆದ್ದ ದುರ್ಯೋಧನನು ಆಕೆಯನ್ನು ರಾಣಿವಾಸದಿಂದ ತನ್ನ ತಮ್ಮ ದುಶ್ಯಾಸನನ ಮೂಲಕ ರಾಜಸಭೆಗೆ ಎಳೆದು ತರಿಸಿ, ಪಾಂಡವರಿಗೆ ಅಪಮಾನವನ್ನು ಮಾಡಬೇಕೆಂಬ ಕೆಟ್ಟ ಉದ್ದೇಶದಿಂದ ದ್ರೌಪದಿಯ ಸೀರೆಯನ್ನು ಕಿತ್ತೆಳೆಯಲು ದುಶ್ಯಾಸನನಿಗೆ ಹೇಳಿದ್ದನು; ದುರ್ನಯ=ಕೆಟ್ಟ ನಡತೆ/ದುರಾಚಾರ; ಅರಿಪು=ತಿಳಿಸು/ಹೇಳು; **ಕೊಳನಮ್ ಪಿಂದುಮ್ ಪೆರಗಾಗಿ ಪುಗುವ ದುರ್ನಯಮ್ ಅರಿಪವೆ**=ವೈಶಂಪಾಯನ ಸರೋವರವನ್ನು ಹಿಮ್ಮುಖನಾಗಿ ಪ್ರವೇಶಿಸುವ ಕೆಟ್ಟ ನಡತೆಯೇ ಹೇಳುತ್ತವೆಯಲ್ಲವೇ; ಆಯ=ಶಕ್ತಿ/ಪರಾಕ್ರಮ; ಕುಂದು=ಕೊರತೆ/ಕಳಂಕ/ಕೀಳುತನ;

**ಕೌರವನ ರಾಜ್ಯದ ಆಯದ ಕುಂದನ್**=ದುರ್ಯೋಧನನ ರಾಜ್ಯದ ಶಕ್ತಿಯಲ್ಲಿರುವ ಕೊರತೆಯನ್ನು; ಚಕ್ರವರ್ತಿಯಾದ ದುರ್ಯೋಧನನು ತನ್ನ ಪರಾಕ್ರಮ ಮತ್ತು ರಾಜತನದ ಅಂತಸ್ತಿಗೆ ತಕ್ಕಂತೆ ನಡೆದುಕೊಳ್ಳದೆ, ಹೇಡಿತನದಿಂದ ಹಿಮ್ಮುಖನಾಗಿ ಸರೋವರವನ್ನು ಹೊಗುವ ಕೀಳುತನದ ನಡೆನುಡಿಯಿಂದ ತನ್ನ ವ್ಯಕ್ತಿತ್ವಕ್ಕೆ ಮತ್ತು ರಾಜತನಕ್ಕೆ ಕಳಂಕವುಂಟುಮಾಡಿದ್ದಾನೆ; ಅಂತು=ಆ ರೀತಿ; **ಅಂತು ಸರೋವರಮನ್ ಎಯ್ದೆವಂದಾಗಳ್**=ಆ ರೀತಿ

ದುರ್ಯೋಧನನು ಹಿಮ್ಮುಖನಾಗಿ ಸರೋವರದ ಬಳಿಗೆ ಬಂದು, ಸರೋವರದ ನೀರಿನಲ್ಲಿ ಮುಳುಗಲು ಸಿದ್ಧನಾಗುತ್ತಿದ್ದಾಗ; ವೈಶಂಪಾಯನ ಸರೋವರದ ಜಲರಾಶಿಯ ಆಳ ಅಗಲದ ವಿಸ್ತಾರತೆಯನ್ನು ಕವಿಯು ಬಣ್ಣಿಸುವುದರ ಜತೆಗೆ, ಸರೋವರದ ದಂಡೆಯಲ್ಲಿದ್ದ ವಿವಿಧ ಬಗೆಯ ಹಕ್ಕಿಗಳ ಕಲರವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು, ದುರ್ಯೋಧನನಿಗೆ ಬಂದೊದಗಿದ ದುಸ್ಥಿತಿಯನ್ನು ಚಿತ್ರಿಸಿದ್ದಾನೆ;

**ಗಗನಮ್ ಬಿಳ್ದುದೊ**=ಮುಗಿಲು ಕಳಚಿಕೊಂಡು ಬಿದ್ದಿರುವುದೋ; **ಮೇಣ್**= ಇಲ್ಲವೇ; ಪತ್ತು=ಅಂಟಿಕೊಳ್ಳು/ಬೆಸೆದುಕೊಳ್ಳು; ನೆಲಕ್ಕೆ ನೆಲನೇನ್ ಪತ್ತಿತ್ತೊ=ನೆಲಕ್ಕೆ ನೆಲವೇ ಬೆಸೆದುಕೊಂಡಿತೋ; ಪನ್ನಗ=ಹಾವು; ವೃಂದಾರಕ=ದೇವತೆ; **ಇಲ್ಲಿ ಪನ್ನಗ ವೃಂದಾರಕರ್ ಎಂದುಮ್ ಇರ್ಪ ಬಿಲನೋ**=ಈ ಸರೋವರದಲ್ಲಿ ನಾಗದೇವತೆಗಳು ಯಾವಾಗಲೂ ಇರುವ ಬಿಲವೋ; ಅಷ್ಟ=ಎಂಟು; ದಿಕ್+ನಾಗ+ರಾಜಿಗೆ; ನಾಗ= ಆನೆ; ರಾಜಿ=ಗುಂಪು; ಮೆಯ್+ಕರ್ಚಿಕೊಳಲ್ಕೆ; ಕರ್ಚು=ತೊಳೆ/ತೊಳೆಯುವಿಕೆ; ಅಜ=ಬ್ರಹ್ಮ ದೇವ; ಸಮೆ=ಕಟ್ಟು/ಮಾಡು; ತೋಯೋದ್ದೇಶ=ನೀರಿನ ತಾಣ/ ಜಲಾಶಯ;

**ಅಷ್ಟ ದಿಗ್ನಾಗರಾಜಿಗೆ ಮೆಯ್ಗರ್ಚಿಕೊಳಲ್ಕೆ ಅಜನ್ ಸಮೆದ ತೋಯೋದ್ದೇಶಮೋ**=ಎಂಟು ದಿಕ್ಕುಗಳಲ್ಲಿಯೂ ಭೂಮಂಡಲವನ್ನು ಹೊತ್ತುಕೊಂಡಿರುವ ಆನೆಗಳು ಮಯ್ ತೊಳೆದುಕೊಂಡು ಮೀಯಲೆಂದು ಬ್ರಹ್ಮದೇವನು ನಿರ್ಮಿಸಿರುವ ಅನಂತವಾದ ಜಲಾಶಯವೋ; ಸಂದೆಯ=ಸಂದೇಹ/ಸಂಶಯ; ಬಗೆ=ಮನಸ್ಸು;

**ಸಂದೆಯಮ್ ಬಗೆಗೆ ಆದತ್ತು ಎನಿಸಿರ್ದುದು**=ಸಂದೇಹವು ಮನಸ್ಸಿಗೆ ಉಂಟಾಯಿತು ಎನಿಸುತ್ತಿದೆ; ವೈಶಂಪಾಯನ ಸರೋವರದ ಉದ್ದಗಲ ಮತ್ತು ಆಳವು ಅನಂತವಾಗಿತ್ತು ಎಂಬುದನ್ನು ಈ ಮಾತುಗಳು ಸೂಚಿಸುತ್ತಿವೆ; ಅಬ್ಜ+ಆಕರಮ್; ಅಬ್ಜ=ತಾವರೆ; ಆಕರ=ಹುಟ್ಟುವ ಜಾಗ; ಅಬ್ಜಾಕರ=ಸರೋವರ; **ಏನ್ ಪಿರಿದೊ ವೈಶಂಪಾಯನ ಅಬ್ಜಾಕರಮ್**=ಎಷ್ಟು ದೊಡ್ಡದೋ ವೈಶಂಪಾಯನ ಸರೋವರ; ನೀರ್+ಆಕರ; ನೀರಾಕರ=ಕಡಲು/ಸಾಗರ; ಕಮಲ+ಆಕರ; ಕಮಲಾಕರ=ಸರೋವರ; **ಅಂತು ಗಂಭೀರ ನೀರಾಕರಮ್ ಇರ್ಪಂತಿರ್ದ ಕಮಲಾಕರಮ್ ನೋಳ್ಪಿನಮ್**=ಆ ರೀತಿ ಅನಂತವಾದ ಕಡಲಿನಂತಿರುವ ವೈಶಂಪಾಯನ ಸರೋವರವನ್ನು ನೋಡುತ್ತಿರುವಾಗ; ಸರೋವರದಲ್ಲಿರುವ ಜಲಚರಗಳನ್ನು ತಿಂದು ಬದುಕುವ ಬಕ, ಕೋಕ, ಮರಾಳ ಮುಂತಾದ ಹಕ್ಕಿಗಳು ಹಿಮ್ಮುಖನಾಗಿ ಸರೋವರವನ್ನು ಹೊಗಲು ಬರುತ್ತಿರುವ ದುರ್ಯೋಧನನು

ನೋಡಿ, ಆತಂಕದಿಂದ ಕೂಗಿಕೊಳ್ಳತೊಡಗುತ್ತವೆ; ಹಕ್ಕಿಗಳ ಆತಂಕದ ದನಿಯನ್ನು ರೂಪಕದ ನುಡಿಗಳ ಮೂಲಕ ಕವಿಯು ಚಿತ್ರಿಸಿದ್ದಾನೆ; ಬತ್ತು=ಬರಿದಾಗು/ಒಣಗು; ತೊರೆ=ನದಿ/ಹೊಳೆ/ನೀರಿನ ತಾಣ;

**ಕುರುಪತಿ, ನಿನ್ನ ಪೊಕ್ಕ ತೊರೆಗಳ್ ಮೊದಲಾಗಿರೆ ಬತ್ತಿದಪ್ಪುವು**=ಕುರುಪತಿ, ನೀನು ಹೊಕ್ಕ ನದಿ ಹೊಳೆ ಸರೋವರಗಳು ಮೊದಲಗೊಂಡು ನೀರಿನ ತಾಣಗಳೆಲ್ಲವೂ ಬತ್ತಿಹೋಗುತ್ತವೆ; ದೊರೆ=ರೀತಿ/ಬಗೆ; ದುರಾತ್ಮ=ಕೆಟ್ಟ ಮನಸ್ಸಿನವನು/ದುರುಳ; ಖಳ=ನೀಚ/ಕೇಡಿ; ಆನ್=ನಾನು; **ಈ ದೊರೆಯ ದುರಾತ್ಮನನ್ ಖಳನನ್ ಆನ್ ಒಳಕೊಂಡೊಡೆ**=ನಿನ್ನಂತಹ ಕೆಟ್ಟ ನಡೆನುಡಿಯ ದುರುಳತನದ ಕೇಡಿಯನ್ನು ನಾನು ಒಳಕ್ಕೆ ಸೇರಿಸಿಕೊಂಡರೆ; ಕದಡು=ಕಲಕು/ರಾಡಿಗೊಳಿಸು; ಪುಗು=ಪ್ರವೇಶಿಸು/ಒಳಕ್ಕೆ ಬರುವುದು; ಬಗ್ಗು=ಹಕ್ಕಿಗಳ ಕೂಗು/ಹಕ್ಕಿಗಳ ಉಲಿ; **ಭೀಮನ್ ಈ ಸರೋವರಮುಮನ್ ಎಮ್ಮುಮಮ್ ಕದಡುಗುಮ್... ಪುಗದಿರ್ ತೊಲಗು ಎಂದು ಬಗ್ಗಿಪಂತಿರೆ**=ಭೀಮನು ಈ ಸರೋವರವನ್ನು ಮತ್ತು ನಮ್ಮನ್ನು ರಾಡಿಗೊಳಿಸುತ್ತಾನೆ. ಆದ್ದರಿಂದ ನೀನು ಈ ಸರೋವರದ ಒಳಕ್ಕೆ ಬರಬೇಡ ಇಲ್ಲಿಂದ ದೂರ ಹೋಗು ಎಂದು ಕೂಗಿ ಹೇಳುತ್ತಿರುವಂತೆ; ಬಕ=ಕೊಕ್ಕರೆ; ಕೋಕ=ಜಕ್ಕವಕ್ಕಿ; ಮರಾಳ=ಹಂಸ; ವಿಹಂಗಮ=ಹಕ್ಕಿ; ಸ್ವನ=ದನಿ/ಶಬ್ದ; ನೆಗೆ=ಹಬ್ಬು/ವ್ಯಾಪಿಸು/ಕಾಣಿಸಿಕೊಳ್ಳು;

**ಅನೇಕ ಬಕ ಕೋಕ ಮರಾಳ ವಿಹಂಗಮ ಸ್ವನಮ್ ನೆಗೆದತ್ತು**=ಅನೇಕ ಬಗೆಯ ಕೊಕ್ಕರೆ, ಜಕ್ಕವಕ್ಕಿ , ಹಂಸ ಪಕ್ಷಿಗಳ ಕೊರಳೊಳಗಿಂದ ಹೊರಹೊಮ್ಮಿದ ದನಿಯು ಎಲ್ಲೆಡೆಯೂ ಹಬ್ಬಿ ಕೇಳಿಬರತೊಡಗಿತು; **ಕುರುಕುಳ ಸರೋರಾಜಹಂಸ**=ಕುರುವಂಶವೆಂಬ ಸರೋವರದಲ್ಲಿ ವಿಹರಿಸುವ ರಾಜಹಂಸ. ಇದು ದುರ್ಯೋಧನನ ರಾಜತನವನ್ನು ಬಣ್ಣಿಸುವ ಪದಕಂತೆ; ಮುನ್ನಮ್=ಮೊದಲು; ಕೆನ್ನ=ಕೆಂಪಾದುದು/ಕೆಂಬಣ್ಣ; ಕೆನ್ನೈಸು=ಕೆಂಪಗೆ ಹೆಪ್ಪುಗಟ್ಟಿದ; ಕೆನ್+ನೆತ್ತರ್=ಕೆಂಪಾದ ರಕ್ತ; ಕರ್ಚು=ತೊಳೆಯುವಿಕೆ; **ಆಗಳ್ ಕುರುಕುಳ ಸರೋರಾಜಹಂಸನ್ ಮುನ್ನಮ್ ತನ್ನ ಮೆಯ್ಯೊಳ್ ಕೆನ್ನೈಸಿದ ಕೆನ್ನೆತ್ತರಮ್ ಕರ್ಚಿ ಕಳೆದು**=ದುರ್ಯೋಧನನು ವೈಶಂಪಾಯನ ಸರೋವರವನ್ನು ಒಳಹೊಗುವ ಮುನ್ನ ತನ್ನ ಮಯ್ಯಲ್ಲಿ ಮೆತ್ತುಕೊಂಡಿದ್ದ ಹೆಪ್ಪುಗಟ್ಟಿದ ಕೆಂಪನೆಯ ನೆತ್ತರನ್ನು ತೊಳೆದುಕೊಂಡು; ಕುರುಕ್ಷೇತ್ರ ರಣರಂಗದಲ್ಲಿ ಅಂದು ಬೆಳಗ್ಗೆ ನಡೆದ ಕದನದಲ್ಲಿ ದುರ್ಯೋಧನನು ಹೋರಾಡಿದಾಗ ಮತ್ತು ಅನಂತರ ರಣರಂಗದಲ್ಲಿ ಕೆಡೆದು ಬಿದ್ದಿದ್ದ ಆನೆ, ಕುದುರೆ ಮತ್ತು ಕಾದಾಳುಗಳ ಹೆಣಗಳ ನಡುವೆ ನಡೆದುಬರುವಾಗ ಮಯ್ ಕಯ್ಗಳಿಗೆ ಮೆತ್ತಿಕೊಂಡಿದ್ದ ನೆತ್ತರು; ಕರ=ಕಯ್; ಚರಣ=ಪಾದ; ವದನ=ಮೊಗ; ಪ್ರಕ್ಷಾಳನ=ನೀರಿನಿಂದ ತೊಳೆಯುವುದು;

**ಕರಚರಣ ವದನ ಪ್ರಕ್ಷಾಳನಮ್ ಗೆಯ್ದು**=ಕಯ್ ಕಾಲು ಮೊಗವನ್ನು ನೀರಿನಿಂದ ತೊಳೆದುಕೊಂಡು; **ಮುಕ್ಕುಳಿಸಿ ಉಗುಳ್ದು**=ಸ್ವಲ್ಪ ನೀರನ್ನು ತೆಗೆದುಕೊಂಡು ಬಾಯಿ ಮುಕ್ಕುಳಿಸಿ ಉಗಿದು; ಆಚಮನ ಕ್ರಿಯೆ=ಬೊಗಸೆ ಕಯ್ಯಲ್ಲಿ ನೀರನ್ನು ತೆಗೆದುಕೊಂಡು, ದೇವರ ನಾಮಸ್ಮರಣೆ ಮಾಡುತ್ತ ಇನ್ನಿತರ ಮಂತ್ರಗಳನ್ನು ಹೇಳುತ್ತ, ಹಸ್ತದಲ್ಲಿರುವ ನೀರನ್ನು ನಿಸರ್ಗ ದೇವತೆಗಳಿಗೆ ಅರ್ಪಿಸುವುದು ಇಲ್ಲವೇ ಕುಡಿಯುವುದು; **ಆಚಮನ ಕ್ರಿಯೆಗಳಮ್ ಮಾಡಿ**= ದೇವರ ನಾಮವನ್ನು ಉಚ್ಚರಿಸುತ್ತ ಮಂತ್ರಗಳ ಸ್ಮರಣೆ ಮಾಡುತ್ತ ನೀರನ್ನು ಸಲ್ಲಿಸಿ; **ಜಲದೇವತಾ ನಮಸ್ಕಾರಮ್ ಗೆಯ್ದು**=ಜಲದೇವತೆಗೆ ನಮಸ್ಕಾರವನ್ನು ಮಾಡಿ; ಜಲಜ+ಆಕರ; ಜಲಜ=ತಾವರೆ; ಜಲಜಾಕರ=ತಾವರೆಯ ಸರೋವರ; ಅಭಿಮಂತ್ರಿಸು=ಮಂತ್ರವನ್ನು ಜಪಿಸಿ ಒಳಿತಾಗುವಂತೆ ಕೇಳಿಕೊಳ್ಳುವುದು; ಮಿನುಗು=ಮೆಲುದನಿಯಲ್ಲಿ ಮಂತ್ರಗಳನ್ನು ಜಪಿಸುವುದು;

**ಜಲಮಂತ್ರೋಪದೇಶದಿಮ್ ಜಲಜಾಕರಮನ್ ಅಭಿಮಂತ್ರಿಸಿ ಜಲನಿಲಯನಾಗಿ ಪರಮಯೋಗಿಯವೋಲ್ ಮಂತ್ರಪದಾಕ್ಷರಂಗಳಮ್ ಮಿನುಗುತುಮ್ ಇರ್ದನ್**= ದುರ್ಯೋಧನನು ಭೀಷ್ಮರು ಹೇಳಿಕೊಟ್ಟಿದ್ದ ಜಲಮಂತ್ರವನ್ನು ಜಪಿಸುತ್ತ ವೈಶಂಪಾಯನ ಸರೋವರದ ನೀರಿನ ಆಳಕ್ಕೆ ಇಳಿದು ಪರಮಯೋಗಿಯಂತೆ ಮಂತ್ರದ ಪದಗಳನ್ನು ಮತ್ತು ಅಕ್ಕರಗಳನ್ನು ಮೆಲುದನಿಯಲ್ಲಿ ನಿರಂತರವಾಗಿ ಜಪಿಸುತ್ತಿದ್ದನು.

❖

## ನೋಟ–೧೫

# ದುರ್ಯೋಧನನನ್ನು ಕಾಣದೆ ಭೀಮಸೇನನ ಆತಂಕ, ಆಕ್ರೋಶ ಮತ್ತು ಅಬ್ಬರ

ಅನ್ನೆಗಮ್=ಅದೇ ಸಮಯದಲ್ಲಿ; ಇತ್ತಲ್=ಈ ಕಡೆ/ಪಾಂಡವರ ಶಿಬಿರದಲ್ಲಿ; **ಅನ್ನೆಗಮಿತ್ತಲ್**=ಕುರುಕ್ಷೇತ್ರ ರಣರಂಗದ ಒಂದು ಕಡೆಯಲ್ಲಿ ದುರ್ಯೋಧನನು ವೈಶಂಪಾಯನ ಸರೋವರದೊಳಗೆ ಜಲಮಂತ್ರವನ್ನು ಉಚ್ಚರಿಸುತ್ತ ಅಡಗಿಕೊಂಡಿರುವ ಸಮಯದಲ್ಲಿಯೇ, ಕುರುಕ್ಷೇತ್ರ ರಣರಂಗದ ಮತ್ತೊಂದು ಕಡೆಯಲ್ಲಿದ್ದ ಪಾಂಡವರ ಶಿಬಿರದಲ್ಲಿ; ವಧೆ=ಕೊಲೆ; ಅರಸು=ಹುಡುಕು; **ಶಲ್ಯನ ವಧೆಯಿಮ್ ಬಳಿಯಮ್ ಎಲ್ಲಿಯುಮ್ ಅರಸಿಯುಮ್ ದುರ್ಯೋಧನನ ರೂಪು ಕಾಣದೆ**=ಹದಿನೆಂಟನೆಯ ದಿನದಂದು ಬೆಳಗ್ಗೆ ನಡೆದ ಯುದ್ಧದಲ್ಲಿ ಸೇನಾಧಿಪತಿಯಾಗಿದ್ದ ಶಲ್ಯನು ಸಾವನ್ನಪ್ಪಿದ್ದಾನೆ. ಭೀಷ್ಮರ ಹಿತನುಡಿಯಂತೆ ದುರ್ಯೋಧನನು ಆ ಒಂದು ದಿನದ ಮಟ್ಟಿಗೆ ಹಗೆಗಳ ಕಣ್ಣಿಗೆ ಕಾಣದಂತಿರಲು ವೈಶಂಪಾಯನ ಸರೋವರವನ್ನು ಹೊಕ್ಕಿರುವುದರಿಂದ, ಪಾಂಡವರು ರಣರಂಗದ ಎಲ್ಲಾ ಕಡೆ ಹುಡುಕಿದರೂ ಎಲ್ಲಿಯೂ ದುರ್ಯೋಧನನ್ನು ಕಾಣದೆ; ಸೂಕ್ಷ್ಮ=ಚತುರತೆ/ಜಾಣ್ಮೆ; **ಸೂಕ್ಷ್ಮಕ್ರಿಯೆ**=ಜಾಣ್ಮೆಯಿಂದ ಗಮನಿಸುವುದು; ಅಂತಕ=ಯಮ; ಅಂತಕತನಯ=ಧರ್ಮರಾಯ; ಗರುಡಧ್ವಜ=ಕೃಷ್ಣ;

**ಇದು ಏನಾನುಮ್ ಒಂದು ಕಾರಣಮ್ ಆಗಲ್ವೇಳ್ಕುಮ್ ಎಂದು ಸೂಕ್ಷ್ಮ ಕ್ರಿಯೆಯಿಮ್ ಅಂತಕತನಯನ್ ಗರುಡಧ್ವಜನೊಳ್ ಆಲೋಚಿಸುವುದಮ್**= ಕುರುಕ್ಷೇತ್ರ ಯುದ್ಧರಂಗದಲ್ಲಿ ಎಲ್ಲಿಯೂ ದುರ್ಯೋಧನನು ಕಾಣಿಸಿಕೊಳ್ಳ

ದಿರುವುದಕ್ಕೆ ಏನಾದರೂ ಒಂದು ಪ್ರಬಲವಾದ ಕಾರಣವಿರಲೇಬೇಕೆಂಬುದನ್ನು ಜಾಣ್ಮೆಯಿಂದ ಗಮನಿಸಿದ ಧರ್ಮರಾಯನು ಕೃಷ್ಣನೊಡನೆ ರಣರಂಗದಿಂದ ಕಣ್ಮರೆಯಾಗಿರುವ ದುರ್ಯೋಧನನ ಬಗ್ಗೆ ಸಮಾಲೋಚನೆಯನ್ನು ಮಾಡತೊಡಗಲು; ಕುರುಕುಲ+ಅಂತಕ; ಕುರುಕುಲಾಂತಕ=ಕುರುಕುಲಕ್ಕೆ ಯಮನಂತಿರುವ ಭೀಮಸೇನ; **ಕುರುಕುಳಾಂತಕನ್ ಕೇಳ್ದು**=ದುರ್ಯೋಧನನು ಯುದ್ಧರಂಗದಿಂದ ಕಾಣೆಯಾಗಿರುವ ಸಂಗತಿಯನ್ನು ಮತ್ತು ಈ ಬಗ್ಗೆ ಧರ್ಮರಾಯನು ಕೃಷ್ಣನೊಡನೆ ಸಮಾಲೋಚನೆಯಲ್ಲಿ ತೊಡಗಿದ್ದಾನೆ ಎಂಬ ಸುದ್ದಿಯನ್ನು ಕೇಳಿ, ಭೀಮಸೇನನು ತನ್ನಲ್ಲಿಯೇ ಈ ರೀತಿ ಮಾತನಾಡಿ ಕೊಳ್ಳತೊಡಗುತ್ತಾನೆ; ಪೂಣ್=ಆಣೆ ಮಾಡು/ಶಪಥ ತೊಡು/ಪ್ರತಿಜ್ಞೆ ಮಾಡು; ಪೂಣ್ಕೆ=ಆಣೆ/ಶಪಥ/ಪ್ರತಿಜ್ಞೆ; ತೊದಳ್+ಆಯ್ತು; ತೊದಳ್=ಸುಳ್ಳು/ಹುಸಿ;

**ಸಭೆಯೊಳ್ ಎನ್ನಯ ಪೂಣ್ದ ಪೂಣ್ಕೆ ತೊದಳಾಯ್ತು**=ಸಭೆಯಲ್ಲಿ ನಾನು ಮಾಡಿದ ಪ್ರತಿಜ್ಞೆಯು ಸುಳ್ಳಾಯಿತು; ಇಂದಿಗೆ ಹದಿಮೂರು ವರುಶಗಳ ಹಿಂದೆ ಹಸ್ತಿನಾವತಿಯಲ್ಲಿ ನಡೆದ ಪಗಡೆಯಾಟದ ಜೂಜಿನಲ್ಲಿ ಧರ್ಮರಾಯನನ್ನು ಸೋಲಿಸಿ, ತಮ್ಮೆಲ್ಲಾ ಸಂಪತ್ತನ್ನು ದೋಚಿದ್ದ ದುರ್ಯೋಧನನು ರಾಜಸಭೆಗೆ ದ್ರೌಪದಿಯನ್ನು ತನ್ನ ತಮ್ಮ ದುಶ್ಯಾಸನನಿಂದ ಎಳೆದು ತರಿಸಿ, ಅವಳು ಸೀರೆಯನ್ನು ಸುಲಿಸಿ ಅಪಮಾನಮಾಡಿದ್ದಾಗ, ದ್ರೌಪದಿಯ ಮುಡಿಯೆಳೆದು ತಂದ ದುರುಳ ದುಶ್ಯಾಸನನ್ನು ಕೊಂದು, ಅವನ ನೆತ್ತರನ್ನು ಕುಡಿಯುವುದಾಗಿಯೂ ಮತ್ತು ದುರ್ಯೋಧನನ ತೊಡೆಯನ್ನು ಮುರಿದು ಕೊಲ್ಲುವುದಾಗಿಯೂ ಭೀಮಸೇನನು ರಾಜಸಭೆಯಲ್ಲಿ ಪ್ರತಿಜ್ಞೆಯನ್ನು ಮಾಡಿದ್ದನು. ಪಾಂಚಾಲ+ರಾಜ+ಆತ್ಮಜಾ; ಆತ್ಮಜಾ=ಮಗಳು; ಪಾಂಚಾಲರಾಜಾತ್ಮಜಾ=ಪಾಂಚಾಲ ರಾಜ ದ್ರುಪದನ ಮಗಳಾದ ದ್ರೌಪದಿ; ವದನ=ಮೊಗ; ಮ್ಲಾನತೆ=ಕಾಂತಿ ಹೀನತೆ/ಕಳೆಗುಂದಿರುವುದು; ಮಾಣ್=ಇಲ್ಲವಾಗು/ಪರಿಹಾರವಾಗು; ಗಡ=ಕಂಡೆಯಾ/ನೋಡಿದೆಯಾ; ಅಚ್ಚರಿಯನ್ನು ಇಲ್ಲವೇ ಆತಂಕವನ್ನು ಸೂಚಿಸುವಾಗ ಬಳಸುವ ಪದ;

**ಪಾಂಚಾಲರಾಜಾತ್ಮಜಾ ವದನಮ್ಲಾನತೆ ಮಾಣ್ದುದಿಲ್ಲ ಗಡ**=ನೋಡಿದೆಯಾ ಕಳೆಗುಂದಿದ ಮೊಗದ ದ್ರೌಪದಿಯ ಅಪಮಾನದ ಸಂಕಟ ಇನ್ನೂ ಹೋಗಿಲ್ಲ; ಮತ್=ನನ್ನ; ದೋರ್ದಂಡ=ದಂಡದಂತೆ ಉದ್ದವಾದ ತೋಳು/ಶಕ್ತಿಯುತವಾದ ತೋಳುಗಳು; ಕಂಡೂತಿ=ತುರಿಕೆ/ನವೆ/ತೀಟೆ; ತೀರು=ಮುಗಿ/ಕಳೆ; **ಮತ್ ದೋರ್ದಂಡ ಕಂಡೂತಿ ತೀರ್ದುದುಮಿಲ್ಲ**=ನನ್ನ ತೋಳುಗಳು ತೀಟೆಯು ಇನ್ನೂ ತೀರಿಲ್ಲ. ಅಂದರೆ ದುರ್ಯೋಧನನನ್ನು ಕೊಲ್ಲಬೇಕೆಂದು ಹಾತೊರೆಯುತ್ತಿರುವ ಈ ನನ್ನ ತೋಳುಗಳ ಶಕ್ತಿಯು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ;

**ಸುಯೋಧನನ್ ಇನ್ನುಮ್ ಒಳನ್**= ದುರ್ಯೋಧನನು ಇನ್ನೂ ಬದುಕಿದ್ದಾನೆ; **ಅದರ್ಕೆ ಏಗೆಯ್ವೆನ್... ಎಂತಕ್ಕುಮ್ ಎಂಬುದನ್ ಎಂದು**=ಇದೀಗ ದುರ್ಯೋಧನನು ಯಾರ ಕಣ್ಣಿಗೂ ಕಾಣದಂತೆ ತಲೆಮರೆಸಿಕೊಂಡಿದ್ದಾನೆ ಅದಕ್ಕೆ ಈಗ ನಾನೇನು ಮಾಡಲಿ... ಮುಂದೆ ಏನಾಗುವುದೋ ಎಂದು ಭೀಮನು ನುಡಿಯುತ್ತ; ಚಿತ್ತ=ಮನಸ್ಸು; ಉತ್ಸುಕಚಿತ್ತನ್=ಆದಷ್ಟು ಬೇಗ ಕಯ್ಗೊಂಡ ಪ್ರತಿಜ್ಞೆಯನ್ನು ಈಡೇರಿಸಬೇಕೆಂದು ತವಕಿಸುತ್ತಿರುವವನು; ಕೌರವ್ಯ=ಕುರುಕುಲಕ್ಕೆ ಸೇರಿದ ವ್ಯಕ್ತಿಗಳು; ಕೋಳಾಹಳ/ಕೋಲಾಹಲ=ಕಾಳೆಗ/ಯುದ್ಧ; ಕೌರವ್ಯಕೋಳಾಹಳನ್= ಕುರುವಂಶದವರೆಲ್ಲರನ್ನು ಕಾಳೆಗದಲ್ಲಿ ಸದೆಬಡಿಯುವ ಭೀಮಸೇನ; ಉಮ್ಮಳಿಸು=ಚಿಂತಿಸು/ಆತಂಕಪಡು;

**ಉತ್ಸುಕಚಿತ್ತನ್ ಕೌರವ್ಯಕೋಳಾಹಳನ್ ಉಮ್ಮಳಿಸಿದನ್**=ಹಗೆಗಳನ್ನು ಬುಡ ಸಮೇತ ನಾಶಮಾಡಲು ತವಕಿಸುತ್ತಿರುವ ಭೀಮಸೇನನು ದುರ್ಯೋಧನನು ಕಾಣೆಯಾಗಿರುವುದರಿಂದ ಆತಂಕ, ಕೋಪ ಮತ್ತು ಆವೇಶದಿಂದ ಪರಿತಪಿಸ ತೊಡಗಿದನು; **ಅಂತು ಉಮ್ಮಳಿಸಿ**=ಆ ರೀತಿಯಲ್ಲಿ ಭೀಮಸೇನನು ಆತಂಕ, ಕೋಪ ಮತ್ತು ಆವೇಶದಿಂದ ಕೂಡಿದವನಾಗಿ; ಮಹೀಪಾಲ=ಭೂಮಂಡಲವನ್ನು ಪಾಲಿಸುವವನು/ರಾಜ; ಕುರುಕುಲ ಮಹೀಪಾಲ=ದುರ್ಯೋಧನ; ಬೃಹತ್=ದೊಡ್ಡದಾದ/ಬಲಯುತವಾದ; ಊರು=ತೊಡೆ; ದ್ವಂದ್ವ=ಎರಡು; **ಕುರುಕುಲ ಮಹೀಪಾಲ ಬೃಹತ್ ಊರು ದ್ವಂದ್ವಗಳಮ್ ತನ್ನ ಗದಾದಂಡದಿಮ್ ನುರ್ಗುನುರಿ ಮಾಡಲುಮ್**=ದುರ್ಯೋಧನನ ಬಲಯುತವಾದ ಎರಡು ತೊಡೆಗಳನ್ನು ತನ್ನ ಗದಾದಂಡದಿಂದ ಬಡಿದು ಮುರಿದು ನಜ್ಜುಗುಜ್ಜಾಗಿಸಲು; ಬಾಹುಶಾಖೆ=ತೋಳು; ಕುಠಾರ=ಕೊಡಲಿ/ಒಂದು ಬಗೆಯ ಆಯುಧ; ತತ್ತರದರಿ+ಉಮ್; ತತ್ತರದರಿ=ಕೊಚ್ಚಿಹಾಕು/ತುಂಡುತುಂಡಾಗಿ ಕತ್ತರಿಸು;

**ತತ್ ಕೌರವೇಶ್ವರನ ಬಾಹುಶಾಖೆಗಳಮ್ ತನ್ನ ಗದಾಕುಠಾರದಿಮ್ ತತ್ತರದರಿಯಲುಮ್**=ಆ ದುರ್ಯೋಧನನ ತೋಳುಗಳನ್ನು ತನ್ನ ಕೊಡಲಿಯಾಕಾರದ ಗದೆಯಿಂದ ತುಂಡುತುಂಡಾಗಿ ಕತ್ತರಿಸಲು; ತತ್=ಆ; ಪಿಂಗಾಕ್ಷ=ಕೆಂಗಣ್ಣಿನವನು/ ದುರ್ಯೋಧನ; ವಕ್ಷಃಸ್ಥಳ=ಎದೆ; ಲಾಂಗಲ=ನೇಗಿಲು/ಒಂದು ಬಗೆಯ ಆಯುಧ; ಪರಪು=ಚೆಲ್ಲಾಡು/ಚೆಲ್ಲಾಪಿಲ್ಲಿ ಮಾಡು/ಹರಡು; **ತತ್ ಪಿಂಗಾಕ್ಷನ ವಕ್ಷಸ್ಥಳಮಮ್ ತನ್ನ ಗದಾಲಾಂಗಲದಿಂದ ಇರ್ಬಗಿಯಾಗಿ ಪೋಳ್ದು ಪರಪಲುಮ್**=ಆ ದುರ್ಯೋಧನನ ಎದೆಯನ್ನು ತನ್ನ ನೇಗಿಲಿನಾಕಾರದ ಗದೆಯಿಂದ ಎರಡು ಹೋಳುಗಳನ್ನಾಗಿ ಸೀಳಿ, ಕುರುಕ್ಷೇತ್ರ ರಣರಂಗದಲ್ಲಿ ಚೆಲ್ಲಾಪಿಲ್ಲಿಯಾಗಿ ಬೀಳುವಂತೆ ಮಾಡಲು; ಫಣಿ=ಹಾವು; ಫಣಿರಾಜ=ಹಾವುಗಳ ಒಡೆಯ/ಆದಿಶೇಷ; ಕೇತನ=ಬಾವುಟ; ಫಣಿರಾಜಕೇತನ=

ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜ ಲಾಂಛನವಾಗುಳ್ಳವನು/ ದುರ್ಯೋಧನ; ಲಲಾಟ=ಹಣೆ; ಶಿಲಾಪಟ್ಟ=ಒಂದು ಬಗೆಯ ಒಡವೆ; ಲಲಾಟ ಶಿಲಾಪಟ್ಟ=ರಾಜಪಟ್ಟದ ಲಾಂಛನವಾಗಿ ರಾಜನ ಹಣೆಗೆ ಕಟ್ಟುವ ಒಡವೆ; ಗದಾ+ಆಘಾತ; ಆಘಾತ=ಪೆಟ್ಟು/ಹೊಡೆತ; ಚಿಪ್ಪು+ಚಿಪ್ಪು+ಆರ್ದು+ಇಡಲುಮ್; ಚಿಪ್ಪು=ಚೂರು; ಆರ್ದು=ಅಬ್ಬರಿಸಿ/ಗರ್ಜಿಸಿ;

**ತತ್ ಫಣಿರಾಜಕೇತನನ ಲಲಾಟಶಿಲಾಪಟ್ಟಮಮ್ ತನ್ನ ಗದಾಘಾತದಿಮ್ ಚಿಪ್ಪುಚಿಪ್ಪಾರ್ದಿಡಲುಮ್**=ಹಗೆಯಾದ ದುರ್ಯೋಧನನ ಹಣೆಯಲ್ಲಿ ಕಟ್ಟಿರುವ ಶಿಲಾಪಟ್ಟವನ್ನು ಚೂರುಚೂರಾಗುವಂತೆ ಅಬ್ಬರಿಸುತ್ತ ಹೊಡೆಯಲು; ಮಣಿ=ಹರಳು, ರತ್ನ, ಮುತ್ತು, ವಜ್ರ; ಮಕುಟ=ಕಿರೀಟ; ಪ್ರಹರಣ=ಪೆಟ್ಟು/ ಹೊಡೆತ; ಪುಡಿ+ಒಳ್; ಪುಡಿ=ಮಣ್ಣು/ದೂಳು; ಪೊರಳ್ಚು= ಉರುಳಿಸು/ ಉರುಳಾಡುವಂತೆ ಮಾಡು; ದ್ರೌಪದೀದ್ರೋಹನ್=ದ್ರೌಪದಿಗೆ ಅಪಮಾನ ಮಾಡಿರುವ ದುರ್ಯೋಧನ; **ತತ್ ದ್ರೌಪದೀದ್ರೋಹನ ಮಣಿಮಯ ಮಕುಟಮಮ್ ತನ್ನ ಗದಾಪ್ರಹರಣದಿಂದ ಉರುಳ್ಚಿ ಪುಡಿಯೊಳ್ ಪೊರಳ್ಚಲುಮ್**=ದ್ರೌಪದಿಗೆ ಅಪಮಾನವನ್ನು ಮಾಡಿರುವ ಆ ದುರ್ಯೋಧನನ ರತ್ನ ವಜ್ರ ಮುತ್ತು ಮಾಣಿಕ್ಯಗಳಿಂದ ಕೂಡಿರುವ ಕಿರೀಟವನ್ನು ತನ್ನ ಗದೆಯಿಂದ ಹೊಡೆದುರುಳಿಸಿ, ಹಗೆಯನ್ನು ಮಣ್ಣಿನ ದೂಳಿನಲ್ಲಿ ಹೊರಳಾಡುವಂತೆ ಮಾಡಲು; ರುಧಿರ=ನೆತ್ತರು/ರಕ್ತ; ಧಾರಾ=ಜೋರಾಗಿ ಮಳೆ ಸುರಿಯುವಿಕೆ; ಪೂರ=ಪ್ರವಾಹ/ ತುಂಬಿ ಹರಿಯುವುದು; ಧಗಧಗಾಯಮಾನ=ಬೆಂಕಿಯ ಜ್ವಾಲೆಗಳು ದೊಡ್ಡದಾಗಿ ಉರಿಯುವುದು; ವಿಪುಳ=ಹೆಚ್ಚು; ಪಾವಕ=ಬೆಂಕಿ; ಶಿಖಾಕಲಾಪಮ್+ಅನ್; ಶಿಖಾಕಲಾಪ=ಬೆಂಕಿಯ ಜ್ವಾಲೆಗಳು; ಅಡಹಡಿಸು=ಚಡಪಡಿಸು/ತವಕಿಸು;

**ಆ ಸುಯೋಧನನ ರುಧಿರ ಧಾರಾಪೂರದಿಮ್ ತನ್ನ ಧಗಧಗಾಯಮಾನ ವಿಪುಳ ಕೋಪಪಾವಕ ಶಿಖಾಕಲಾಪಮನ್ ಆರಿಸಲುಮ್ ಪಡೆಯದೆ ಅಡಹಡಿಸಿ**= ತನ್ನ ಮಯ್ ಮನದಲ್ಲಿ ಉರಿದೇಳುತ್ತಿರುವ ಕೋಪವೆಂಬ ಬೆಂಕಿಯ ಜ್ವಾಲೆಗಳನ್ನು ಆ ದುರ್ಯೋಧನನ ನೆತ್ತರಿನ ಹೊನಲಿನಲ್ಲಿ ಆರಿಸಲು ಅವಕಾಶವಿಲ್ಲದಿರುವುದಕ್ಕಾಗಿ ಭೀಮಸೇನನು ಚಡಪಡಿಸುತ್ತ; ಕಿಡಿಕಿಡಿ+ಪೋಗಿ; ಕಿಡಿಕಿಡಿವೋಗಿ=ತೀವ್ರವಾದ ಕೋಪೋದ್ರೇಕದಿಂದ ಕೆರಳಿ; **ಮೀಸೆಯಮ್ ಕಡಿದು**=ಇದೊಂದು ನುಡಿಗಟ್ಟು. ಮೀಸೆಯನ್ನು ಹುರಿಗೊಳಿಸುತ್ತ/ಮೀಸೆಯನ್ನು ತಿರುಗಿಸುತ್ತ; ವ್ಯಕ್ತಿಯು ತನ್ನ ಬಲ ಮತ್ತು ಪರಾಕ್ರಮವನ್ನು ಮೆರೆಸುವುದರ ಸಂಕೇತವಾಗಿ ತನ್ನ ಮೀಸೆಯನ್ನು ಹುರಿಗೊಳಿಸುವುದನ್ನು ಈ ನುಡಿಗಟ್ಟು ಸೂಚಿಸುತ್ತದೆ; **ಭೀಮಸೇನನ್ ಕಿಡಿಕಿಡಿವೋಗಿ ಮೀಸೆಯಮ್ ಕಡಿದು**= ಭೀಮಸೇನನು ಕೋಪೋದ್ರೇಕದಿಂದ ಕೆರಳಿ ಕೆಂಡವಾಗಿ ಮೀಸೆಯನ್ನು

ಹುರಿಗೊಳಿಸುತ್ತ; ಮೀರು=ಸೊಕ್ಕಿನಿಂದ ಮೆರೆ/ಅಹಂಕಾರಪಡು; ಪಟ್ಟ= ಸಿಂಹಾಸನ/ಗದ್ದುಗೆ/ಕಿರೀಟ;

**ಮೀರಿದ ಪಗೆವನ ಪಟ್ಟಮ್ ಪಾರಿಸುವೆನೊ**=ಸೊಕ್ಕಿನಿಂದ ಮೆರೆಯುತ್ತಿರುವ ಹಗೆಯಾದ ದುರ್ಯೋಧನನ ಗದ್ದುಗೆಯನ್ನು ದೂಳಿಪಟಮಾಡುತ್ತೇನೆ; ಭೀಮಸೇನನು ದುರ್ಯೋಧನನ ಬಗ್ಗೆ ತನ್ನ ಮಯ್ ಮನದಲ್ಲಿರುವ ತೀವ್ರವಾದ ಆಕ್ರೋಶವನ್ನು ಕಾರುತ್ತ, **“ಆತನು ಎಲ್ಲೆ ಅಡಗಿರಲಿ ಯಾರನ್ನೇ ಮೊರೆಹೊಕ್ಕಿರಲಿ ಆತನನ್ನು ತನ್ನಿಂದ ಕಾಪಾಡಲು ಯಾರೇ ಬರಲಿ ಯಾವುದನ್ನು ಲೆಕ್ಕಿಸದೆ ದುರ್ಯೋಧನನ್ನು ಕೊಂದೇ ಕೊಲ್ಲುತ್ತೇನೆ”** ಎಂದು ದೊಡ್ಡ ದನಿಯಲ್ಲಿ ಅಬ್ಬರಿಸುತ್ತಿದ್ದಾನೆ. ಈ ಮಾತುಗಳೆಲ್ಲವೂ ಭೀಮಸೇನನ ಅಚಲ ನಿರ್ಧಾರವನ್ನು , ತೋಳ್ಬಲವನ್ನು ಮತ್ತು ಪರಾಕ್ರಮವನ್ನು ಸೂಚಿಸುವ ರೂಪಕಗಳಾಗಿವೆ; ಅಮರ= ದೇವತೆ; ಕಾರಿಸು=ಕಕ್ಕಿಸು/ವಾಂತಿಮಾಡಿಸು; **ಮುನ್ನಮ್ ಅಮರರ್ ಉಂಡ ಅಮೃತಮನ್ ಏನ್ ಕಾರಿಸುವೆನೊ**=ಒಂದು ವೇಳೆ ದುರ್ಯೋಧನನು ದೇವತೆಗಳ ಮರೆಹೊಕ್ಕು ದೇವಲೋಕದಲ್ಲಿ ಅಡಗಿಕೊಂಡಿದ್ದರೆ, ನನ್ನ ಹಗೆಗೆ ಆಶ್ರಯವನ್ನು ನೀಡಿರುವ ಆ ದೇವತೆಗಳು ಕುಡಿದಿರುವ ಅಮೃತವನ್ನು ಮೊದಲು ಕಕ್ಕಿಸುತ್ತೇನೆ; ಖಚರ=ಗಂಧರ್ವ; ಅಡರ್=ಮೇಲೆ ಬೀಳು/ಆಕ್ರಮಿಸು; ತೂರಲ=ತುದಿ; ತೂರಲ ತುದಿ=ಕೊನೆಯ ತುಟ್ಟ ತುದಿ; ಏರಿಸು=ಮೇಲಕ್ಕೆ ಹತ್ತಿಸು/ಮೇಲೇರಿಸು;

**ಖಚರರನ್ ಅಡರ್ದು ಮೇರುಗಿರಿಯ ತೂರಲ ತುದಿಯಮ್ ಏರಿಸುವೆನೊ**= ಗಂಧರ್ವರ ಮರೆಹೊಕ್ಕರೆ ಅವರ ಮೇಲೆ ದಾಳಿಯನ್ನು ಮಾಡಿ, ಅವರನ್ನು ಮೇರುಗಿರಿಯ ತುತ್ತತುದಿಗೆ ಅಟ್ಟುತ್ತೇನೆ; **ಮಂದರಾದ್ರಿಯನ್ ಎತ್ತುವೆನೊ**= ಮಂದರ ಗಿರಿಯನ್ನೇ ಮೇಲೆತ್ತುತ್ತೇನೆ; **ನೆಲನಮ್ ರಸಾತಳಕ್ಕೆ ಒತ್ತುವೆನೊ**= ಭೂಮಿಯನ್ನೇ ಪಾತಾಳಕ್ಕೆ ತುಳಿಯುತ್ತೇನೆ; ಪತ್ತು=ಆವರಿಸು/ಆಕ್ರಮಿಸು; **ದೆಸೆಯಮ್ ಪತ್ತುವೆನೊ**=ದಿಕ್ಕುಗಳನ್ನೇ ಆವರಿಸಿಕೊಳ್ಳುತ್ತೇನೆ; **ಪಗೆಯ ಬೆನ್ನಮ್ ಪತ್ತುವೆನೊ**=ಹಗೆಯಾದ ದುರ್ಯೋಧನನ್ನು ಬೆನ್ನಟ್ಟುತ್ತೇನೆ; ತುತ್ತು=ಅಡಗಿಸು/ ನಾಶಗೊಳಿಸು/ನುಂಗು; **ದಿಶಾ ಗಜಂಗಳಮ್ ತುತ್ತುವೆನೋ**=ಭೂಮಂಡಲವನ್ನು ಎಂಟು ದಿಕ್ಕುಗಳಲ್ಲಿಯೂ ಹೊತ್ತಿರುವ ಆನೆಗಳನ್ನು ಅಡಗಿಸುತ್ತೇನೆ; ನಗ=ಪರ್ವತ/ಬೆಟ್ಟ; ಕುಲ=ಗುಂಪು/ಸಮೂಹ; ನಗ=ಬೆಟ್ಟ; **ಕುಲ ನಗಂಗಳನ್ ದಾಂಟುವೆನೊ**=ಬೆಟ್ಟ ಗುಡ್ಡ ಪರ್ವತಗಳನ್ನೇ ದಾಟುತ್ತೇನೆ; ಚತುಸ್ಸಮುದ್ರಮಮ್ ಈಂಟುವೆನೊ=ನಾಲ್ಕು ಕಡಲುಗಳ ನೀರನ್ನು ಕುಡಿಯುತ್ತೇನೆ; ಶಶಿ=ಚಂದ್ರ; ಮೀಂಟು=ಕೀಳು/ಹೊರಗೆ ತೆಗೆ;

**ಗಗನ ತಳದಿಮ್ ರವಿಶಶಿಯಮ್ ಮೀಂಟುವೆನೊ**=ಗಗನ ಪ್ರದೇಶದಲ್ಲಿ

ಉರಿಯುತ್ತಿರುವ ಸೂರ್ಯ ಮತ್ತು ಬೆಳಗುತ್ತಿರುವ ಚಂದ್ರನನ್ನು ಕೀಳುತ್ತೇನೆ; **ಸಕಲ ದಿಕ್ಪಾಲಕರಮ್ ಗಂಟಲನ್ ಒತ್ತುವೆನೊ ಎಂದು**=ದಿಕ್ಕನ್ನು ಕಾಯುವ ದೇವತೆಗಳೆಲ್ಲರ ಗಂಟಲನ್ನು ಮೆಟ್ಟಿ ತುಳಿಯುತ್ತೇನೆ ಎಂದು; ಕುರುಕುಲ+ ಕೃತಾಂತಕನ್; ಕೃತಾಂತಕ=ಯಮ; ಕುರುಕುಲಕೃತಾಂತಕ= ಕುರುಕುಲದ ವ್ಯಕ್ತಿಗಳಿಗೆ ಯಮನಾಗಿರುವವನು/ಭೀಮಸೇನ; ಅಂತಕ=ಯಮ; ಮಾಮಸಕ= ಅತಿಯಾದ ಕೋಪ/ಸಿಟ್ಟು; ಮಸಗು=ಹೊರಹೊಮ್ಮು/ಪ್ರಕಟವಾಗು/ಹೆಚ್ಚಾಗು; ಪ್ರಳಯ=ನಾಶ; ಪ್ರಳಯಕಲ್ಪ=ಪ್ರಪಂಚವೆಲ್ಲವನ್ನು ನಾಶಪಡಿಸುವ ಮಹಾಪ್ರಳಯ; **ಕುರುಕುಲಕೃತಾಂತಕನ್ ಅಂತಕನಂತೆ ಮಾಮಸಕಮ್ ಮಸಗಿ ಪ್ರಳಯಕಲ್ಪಮ್ ಗೆಯ್ದು**=ಕುರುಕುಲಕ್ಕೆ ಸಾವಿನ ದೇವತೆಯಾಗಿರುವ ಭೀಮಸೇನನು ಯಮನಂತೆ ಅತಿಯಾದ ಕೋಪದಿಂದ ಕುದಿಯುತ್ತ ಕುರುಕುಲವನ್ನೇ ಸಂಪೂರ್ಣವಾಗಿ ನಾಶಪಡಿಸುವ ಪ್ರತಿಜ್ಞೆಯನ್ನು ಮಾಡಿ; ಖಳ=ನೀಚ/ಕೇಡಿ; ರಸೆಗೆ+ಇಳಿದನೊ; ರಸೆ=ಪಾತಾಳ;

**ಖಳನ್ ರಸೆಗಿಳಿದನೊ**=ಕೇಡಿಯಾದ ದುರ್ಯೋಧನನು ಪಾತಾಳವನ್ನು ಹೊಕ್ಕಿರಲಿ; ಮೇಣ್=ಇಲ್ಲವೇ; **ನಾಲ್ಕುಮ್ ದೆಸೆಗಳ ಕೋಣೆಗಳೊಳ್ ಉಳಿದನೋ**=ನಾಲ್ಕು ದಿಕ್ಕುಗಳ ಕೋಣೆಗಳಲ್ಲಿ ಅಡಗಿರಲಿ; ವಸುಮತಿ= ಭೂಮಂಡಲ; ಬಸಿರು=ಹೊಟ್ಟೆ;ಮಗುಳೆ=ಮತ್ತೊಮ್ಮೆ; **ಇಲ್ಲಿ ಈ ವಸುಮತಿಯೊಳ್ ಗಾಂಧಾರಿಯ ಬಸಿರಮ್ ಮೇಣ್ ಮಗುಳೆ ಪೋಗಿ ಪೊಕ್ಕಿರ್ದಪನೋ**=ಇಲ್ಲಿ ಈ ಭೂಮಂಡಲದಲ್ಲಿ ಹೆತ್ತತಾಯಿಯಾದ ಗಾಂಧಾರಿಯ ಹೊಟ್ಟೆಯೊಳಗೆ ಮತ್ತೊಮ್ಮೆ ಹೋಗಿ ಬಚ್ಚಿಟ್ಟುಕೊಂಡಿರುವನೋ; ಚರ=ಚಲಿಸುವ ಜೀವಿಗಳು; ಅಚರ=ಜಡ ವಸ್ತುಗಳು; **ಚರಮ್ ಅಚರಮ್ ಎಂಬ ಜಗದಂತರದೊಳ್ ಖಳನ್ ಎಲ್ಲಿ ಪೊಕ್ಕೊಡಮ್**=ಚಲಿಸುವ ಜೀವಿಗಳಿಂದ ಮತ್ತು ಜಡವಸ್ತುಗಳಿಂದ ತುಂಬಿರುವ ಈ ಜಗತ್ತಿನೊಳಗೆ ಕೇಡಿಯಾದ ದುರ್ಯೋಧನನು ಎಲ್ಲಿ ಅಡಗಿಕೊಂಡಿದ್ದರೂ; ತತ್=ಹರಿ ಹರ ಬ್ರಹ್ಮ ದೇವರುಗಳು; ಭುಜಪಂಜರ=ತೋಳುಗಳ ರಕ್ಷಣೆ;

**ತತ್ ಭುಜಪಂಜರದೊಳ್ ಇರ್ದೊಡೆ**=ಜಗತ್ತಿನಲ್ಲಿ ಯಾರ ತೋಳುಗಳ ರಕ್ಷಣೆ ಯಲ್ಲಿದ್ದರೂ; ಹರಿ=ವಿಷ್ಣು; ಹರ=ಶಿವ; ಹಿರಣ್ಯಗರ್ಭರ್+ಕಳ್; ಹಿರಣ್ಯಗರ್ಭ= ಬ್ರಹ್ಮ; ಕಳ್=ಗಳು; ಆಂತೊಡಮ್=ಎದುರಾದರೂ; ಕೊಲ್ಲದೆ+ಇರೆನ್; **ಹರಿಹರ ಹಿರಣ್ಯಗರ್ಭರ್ಕಳ್ ಆಂತೊಡಮ್ ಕೊಲ್ಲದಿರೆನ್**=ಹರಿ ಹರ ಬ್ರಹ್ಮ–ಈ ಮೂರು ಮಂದಿ ದೇವರುಗಳೇ ದುರ್ಯೋಧನನ್ನು ಕಾಪಾಡಲೆಂದು ಆಶ್ರಯವನ್ನು ನೀಡಿ, ನನಗೆ ಎದುರಾದರೂ ದುರ್ಯೋಧನನ್ನು ಕೊಲ್ಲದೆ ಬಿಡುವುದಿಲ್ಲ; ಚತುರಂತ=ನಾಲ್ಕು ದಿಕ್ಕಿನ ಕಡಲುಗಳು ಮೇರೆಯಾಗಿರುವ;

ಕ್ಷಿತಿಕಾಂತೆ=ಭೂದೇವಿ; **ಚತುರಂತ ಕ್ಷಿತಿಕಾಂತೆ ಕೇಳ್**=ನಾಲ್ಕು ದಿಕ್ಕುಗಳಲ್ಲಿಯೂ ಕಡಲುಗಳನ್ನು ಎಲ್ಲೆಯಾಗುಳ್ಳ ಭೂದೇವಿಯೇ ಕೇಳು; ಜಲಧಿ=ಕಡಲು/ಸಮುದ್ರ; **ಜಲಧಿ ಕೇಳ್**=ಸಮುದ್ರರಾಜನೇ ಕೇಳು; ಸಪ್ತಾರ್ಚಿ=ಅಗ್ನಿದೇವ; ಸಪ್ತಾರ್ಚಿ ಕೇಳ್=ಅಗ್ನಿದೇವನೇ ಕೇಳು; ತಾತ=ಅಪ್ಪ/ತಂದೆ; ಮಾರುತ=ವಾಯು ದೇವ;

**ತಾತ ಮಾರುತ ಕೇಳ್**=ತಂದೆಯಾದ ವಾಯುದೇವನೇ ಕೇಳು. ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಭೀಮನು ಹುಟ್ಟಿದ್ದನು; ಮಾರುತ ಮಾರ್ಗ=ಆಕಾಶ ಪ್ರದೇಶ; **ಮಾರುತ ಮಾರ್ಗ ಕೇಳ್**=ಗಾಳಿಯು ಸುಳಿದು ಸೂಸುವ ಪ್ರದೇಶವಾದ ಆಕಾಶವೇ ಕೇಳು; **ಪಗೆವನಮ್ ಕೊಂದು ಎನ್ನ ಕೋಪಾಗ್ನಿಗೆ ಆಹುತಿ ಮಾಳ್ಪೆನ್**=ಹಗೆಯಾದ ದುರ್ಯೋಧನನನ್ನು ಕೊಂದು ನನ್ನ ಕೋಪಾಗ್ನಿಗೆ ಬಲಿ ತೆಗೆದುಕೊಳ್ಳುತ್ತೇನೆ; ತರಿಸಂದು=ನಿಶ್ಚಯಿಸಿ; ಸಂದು= ಒಳಹೊಕ್ಕು/ಪ್ರವೇಶಿಸಿ; ಆಹುತಿ=ಬಲಿ; ಕೌರವ್ಯಕೋಳಾಹಲ=ಭೀಮಸೇನ; ಒದರು=ಅಬ್ಬರಿಸು/ಗರ್ಜಿಸು;

**ಕೊಲಲಾರದಂದು ತರಿಸಂದು... ಆನ್ ಎನ್ನ ಸಂದು ಅಗ್ನಿಗೆ ಆಹುತಿ ಮಾಳ್ಪೆನ್ ಗಡಮ್ ಎಂದು ಕೌರವ್ಯಕೋಳಾಹಳನ್ ಪೂಣ್ದು ಒದರಿದನ್**=ಹಗೆಯಾದ ದುರ್ಯೋಧನನನ್ನು ಕೊಲ್ಲುವುದಕ್ಕೆ ಆಗದಿದ್ದರೆ, ನಿಶ್ಚಯವಾಗಿಯೂ ಬೆಂಕಿಯನ್ನು ಹೊಕ್ಕು ನನ್ನನ್ನು ನಾನೇ ಬಲಿಕೊಡುತ್ತೇನೆ ಕಂಡೆಯಾ ಎಂದು ಭೀಮಸೇನನು ಪ್ರತಿಜ್ಞೆಯನ್ನು ಮಾಡಿ ಅಬ್ಬರಿಸಿದನು;

❖

## ನೋಟ–೧೬

# ಅಣ್ಣ ಧರ್ಮರಾಯನಿಗೆ ಭೀಮಸೇನನ ಸವಾಲು

ಪಂಚಭೂತ=ಭೂಮಿ–ಆಕಾಶ–ಬೆಂಕಿ–ನೀರು–ಗಾಳಿ ಎಂಬ ಅಯ್ದು ಬಗೆಯ ಮೂಲವಸ್ತುಗಳು; **ಅಂತು ಪಂಚಭೂತ ಸಾಕ್ಷಿಯೊಳ್ ಪೂಣ್ದು ನುಡಿದು**= ಆ ರೀತಿ ಭೀಮಸೇನನು ಪಂಚಭೂತಗಳನ್ನೇ ಸಾಕ್ಷಿಯಾಗಿಟ್ಟುಕೊಂಡು ದುರ್ಯೋಧನನ ಕುರುವಂಶವನ್ನೇ ಬುಡಸಮೇತ ನಾಶಮಾಡುವ ಪ್ರತಿಜ್ಞೆಯ ನುಡಿಗಳನ್ನಾಡಿ; ಅಜಾತಶತ್ರು=ಶತ್ರುಗಳೇ ಇಲ್ಲದವನು/ಧರ್ಮರಾಯ; ಕುರುಕುಲಪ್ರಧಾನ ಶತ್ರು+ಎನಿಸಿದ; ಕುರುಕುಲಪ್ರಧಾನ ಶತ್ರು=ಕುರುಕುಲಕ್ಕೆ ಮುಖ್ಯನಾದ ಶತ್ರು/ಭೀಮ; **ಕುರುಕುಲಪ್ರಧಾನ ಶತ್ರುವೆನಿಸಿದ ಸಾಹಸಭೀಮನ್ ಅಜಾತಶತ್ರುಗೆ ಸಾಷ್ಟಾಂಗ ನಮಸ್ಕಾರಮ್ ಗೆಯ್ದು, ಇಂತೆಂದನ್**=ಭೀಮಸೇನನು ಧರ್ಮರಾಯನಿಗೆ ಅಡ್ಡಬಿದ್ದು ನಮಸ್ಕರಿಸಿ ಈ ರೀತಿ ಹೇಳಿದನು; ಮುಕ್ತ=ಬಿಚ್ಚಿದ; ಕೇಶ=ತಲೆಗೂದಲು;

**ಮುಕ್ತಕೇಶಿ ದ್ರೌಪದಿ**=ಬಿಚ್ಚಿದ ಮುಡಿಯ ದ್ರೌಪದಿ; ಹದಿಮೂರು ವರುಶಗಳ ಹಿಂದೆ ಧೃತರಾಷ್ಟ್ರನ ರಾಜಸಭೆಯಲ್ಲಿ ಧರ್ಮರಾಯನು ದುರ್ಯೋಧನನ ಸಂಗಡ ಆಡಿದ ಪಗಡೆಯಾಟದ ಜೂಜಿನಲ್ಲಿ ರಾಜ್ಯ ಸಂಪತ್ತನ್ನು ಕಳೆದುಕೊಂಡ ನಂತರ, ತನ್ನನ್ನು ಒಳಗೊಂಡಂತೆ ನಾಲ್ಕು ಮಂದಿ ತಮ್ಮಂದಿರನ್ನು ಮತ್ತು ದ್ರೌಪದಿಯನ್ನು ಪಣವಾಗಿ ಒಡ್ಡಿ ಸೋತಿದ್ದನು. ಆಗ ದುರ್ಯೋಧನನ ಆಣತಿಯಂತೆ ದುಶ್ಯಾಸನನು ರಾಜಸಭೆಗೆ ರಾಣಿವಾಸದಲ್ಲಿದ್ದ ದ್ರೌಪದಿಯ ಮುಡಿಯನ್ನು ಹಿಡಿದು ಎಳೆತಂದು, ಸೀರೆಯನ್ನು ಸುಲಿದು ಅಪಮಾನ ಮಾಡಿದ್ದನು. ಆಗ ದ್ರೌಪದಿಯು ತುಂಬಿದ ಸಭೆಯಲ್ಲಿ **"ನನ್ನ ಮುಡಿಯನ್ನೆಳೆದು**

**ಅಪಮಾನಗೊಳಿಸಿರುವ ದುಶ್ಯಾಸನನ ಕರುಳನ್ನು ಬಗೆದು ಹೊರಚೆಲ್ಲಿದ ನೆತ್ತರಿನಿಂದ ಬಿಚ್ಚಿಹೋಗಿರುವ ಈ ಮುಡಿಯನ್ನು ಮತ್ತೆ ಕಟ್ಟುತ್ತೇನೆ. ಅಲ್ಲಿಯ ತನಕ ಬಿಚ್ಚಿದ ಮುಡಿಯಲ್ಲಿಯೇ ಇರುತ್ತೇನೆ"** ಎಂದು ಪಣತೊಡುತ್ತಾಳೆ; ಎನಿತುಮ್= ಎಷ್ಟೊಂದು/ಬಹಳವಾಗಿ; ನಮೆ=ನರಳು/ದುಕ್ಕಿಸು/ಸೊರಗು;

**ಮುಕ್ತಕೇಶಿ ದ್ರೌಪದಿ ಎನಿತುಮ್ ನಮೆವಳ್**=ಬಿಚ್ಚಿದ ಮುಡಿಯುಳ್ಳ ದ್ರೌಪದಿಯು ಎಷ್ಟೊಂದು ಬಗೆಗಳಲ್ಲಿ ಕೊರಗುತ್ತಿದ್ದಾಳೆ; ರಾಜಸಭೆಯಲ್ಲಿ ದುರುಳರಾದ ದುರ್ಯೋಧನ ಮತ್ತು ದುಶ್ಯಾಸನನಿಂದ ಮೊದಲು ಅಪಮಾನಕ್ಕೆ ಗುರಿಯಾದಳು. ವನವಾಸದಲ್ಲಿದ್ದಾಗ ದುರ್ಯೋಧನನ ತಂಗಿ ದುಶ್ಯಲೆಯ ಗಂಡನಾದ ಜಯದ್ರಥನಿಂದ ಅಪಹರಣಕ್ಕೊಳಗಾಗಿ ನೋವನ್ನುಂಡಳು. ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿದ್ದಾಗ ಕಾಮಿಯಾದ ಕೀಚಕನ ಹಲ್ಲೆಗೆ ಗುರಿಯಾಗಿ ನರಳಿದಳು; ಆನುಮ್=ನಾನು; ಅನುಜ=ತಮ್ಮ; **ತತ್ ದುಃಖಮುಮ್ ಕಂಡು ಕಂಡು ಆನುಮ್ ಎನ್ನ ಅನುಜರುಮ್ ಎನಿತುಮ್ ಸೈರಿಪೆವು**=ದ್ರೌಪದಿಯು ಪಡುತ್ತಿರುವ ಈ ಗೋಳನ್ನು ನೋಡಿ ನೋಡಿ ದ್ರೌಪದಿಗೆ ಆಗಿರುವ ಅಪಮಾನಕ್ಕೆ ಕಾರಣರಾದವರನ್ನು ಸದೆಬಡಿದು ಕೊಲ್ಲದೆ, ನಾನು ಮತ್ತು ನನ್ನ ತಮ್ಮಂದಿರು ಇನ್ನೆಷ್ಟು ಕಾಲ ಸಹಿಸಿಕೊಂಡು ಸುಮ್ಮನಿರಬೇಕು; ಪಾಂಚಾಳಿ+ಅನ್; ಪಾಂಚಾಳಿ=ಪಾಂಚಾಳ ದೇಶದ ರಾಜನಾದ ದ್ರುಪದನ ಮಗಳು ದ್ರೌಪದಿ;

**ಪಾಂಚಾಳಿಯನ್ ನೋಡಿ ನೀನ್ ಮನದೊಳ್ ನೋವುದುಮಿಲ್ಲ ನಿಷ್ಕರುಣಿಯಯ್**=ಅಪಾರವಾದ ಅಪಮಾನ ಮತ್ತು ಸಂಕಟದಿಂದ ನರಳುತ್ತಿರುವ ಪಾಂಚಾಲಿಯನ್ನು ನೋಡುತ್ತಿದ್ದರೂ ನೀನು ಮನದಲ್ಲಿ ತುಸುವಾದರೂ ಅವಳ ಸ್ಥಿತಿಯ ಬಗ್ಗೆ ಸಂಕಟಪಡುವುದಿಲ್ಲ ಹೆಣ್ಣಿನ ಮಯ್ ಮನದ ನೋವನ್ನು ತಿಳಿಯಲಾರದ ಕರುಣೆಯಿಲ್ಲದ ಕಲ್ಲುಮನದವನು ನೀನು; ನರೇಂದ್ರ=ರಾಜ/ಧರ್ಮರಾಯ; **ನರೇಂದ್ರ, ನೀನ್ ಇಂತಿರು**=ಧರ್ಮರಾಯನೇ, ನೀನು ನಿನ್ನ ಪಾಡಿಗೆ ಇದೇ ರೀತಿ ದ್ರೌಪದಿಯ ಬಗ್ಗೆ ಯಾವುದೇ ಕಳವಳ ಇಲ್ಲವೇ ಆತಂಕವಿಲ್ಲದೇ ತೆಪ್ಪಗೆ ಇರು; **ಅನ್ನೆಗಮ್**=ಅಷ್ಟರಲ್ಲಿ/ಆ ಸಮಯದಲ್ಲಿ; ಮುನಿಸು=ಸೇಡು/ಹಗೆತನ; ಅನ್ನೆಗಮ್ ಆನ್ ಮುನಿಸಮ್ ತೀರ್ಚೆ=ಅಷ್ಟರಲ್ಲಿ ನಾನು ಸೇಡನ್ನು ತೀರಿಸಲೆಂದು; ತರು+ಅಮ್; ತರು=ಮರ;

**ವೈರಿ ತರುವಮ್ ನಿರ್ಮೂಲನಮ್ ಮಾಡುವೆನ್**=ಹಗೆಯ ವಂಶದ ಮರವನ್ನು ಬುಡಸಮೇತ ಕಿತ್ತು ಬಿಸುಡುವೆನು; ಧಾತ್ರೀ=ಭೂಮಿ; ಧಾತ್ರೀನಾಥ=ರಾಜ; ವಿಧೇಯ=ಇತರರ ಆಣತಿಯಂತೆ ನಡೆದುಕೊಳ್ಳುವವನು; ಗುರು=ಹಿರಿಯ/ಪೂಜ್ಯ; **ಧಾತ್ರೀನಾಥ, ಇಂದಿನ ಒಂದೆವಸಮ್ ಆನುಮ್**

**ವಿಧೇಯನಲ್ಲನ್... ನೀನುಮ್ ಗುರುವಲ್ಲಮ್**=ರಾಜನೇ, ಇಂದಿನ ಒಂದು ದಿನ ನಾನು ಅಣ್ಣನಾದ ನಿನ್ನ ಆಣತಿಯಂತೆ ತಲೆಬಾಗಿ ನಡೆಯುವುದಿಲ್ಲ ಅಂತೆಯೇ ಈ ಒಂದು ದಿನ ನೀನು ನನಗೆ ಆಣತಿಯನ್ನು ಮಾಡುವ ಹಿರಿಯಣ್ಣನೂ ಅಲ್ಲ. ನಾನು ವಿನಯದಿಂದ ನಡೆದುಕೊಳ್ಳುವ ತಮ್ಮನೂ ಅಲ್ಲ; **ಪರಿಯ ಬಿಡ**=ನನ್ನ ಇಚ್ಚೆಗೆ ತಕ್ಕಂತೆ ನಡೆಯಲು ನನ್ನನ್ನು ಬಿಟ್ಟುಬಿಡು. ನಿನ್ನ ಯಾವುದೇ ಮಾತುಗಳಿಂದ ನನ್ನನ್ನು ಕಟ್ಟಿಹಾಕಬೇಡ; ಸೂನು=ಮಗ; ಕುರುಸೂನು=ಕುರುಕುಲದ ಮಗ/ದುರ್ಯೋಧನ; ಇಕ್ಕು=ಬಡಿ/ಕೊಲ್ಲು; ಮೆಟ್ಟು=ಕಾಲಿನಿಂದ ತುಳಿ/ಪಾದದಿಂದ ಒದೆ; ಡೊಕ್ಕರಿಸು=ಗುದ್ದು/ಹೊಡೆ/ಹಿಸುಕು/ಉಸಿರನ್ನು ನಿಲ್ಲಿಸು;

**ಕುರುಸೂನುವನ್ ಇಕ್ಕಿ ಮೆಟ್ಟಿ ಡೊಕ್ಕರಿಸಿದಪೆನ್**=ದುರ್ಯೋಧನನನ್ನು ಬಡಿದು, ಕಾಲಿನಿಂದ ತುಳಿದು, ಗುದ್ದಿ ಗುದ್ದಿ ಜೀವಹಿಂಡುತ್ತೇನೆ; **ಅನಲಜೆ**= ಅಗ್ನಿಪುತ್ರಿಯಾದ ದ್ರೌಪದಿ; ಪಾಂಚಾಲ ದೇಶದ ರಾಜನಾದ ದ್ರುಪದನು ಯಾಗವನ್ನು ಮಾಡಿ "ತನಗೆ ಅಪಮಾನ ಮಾಡಿದ್ದ ದ್ರೋಣನನ್ನು ಕೊಲ್ಲುವ ಒಬ್ಬ ಮಗನನ್ನು ಮತ್ತು ತನ್ನನ್ನು ಸೋಲಿಸಿ ಸೆರೆಹಿಡಿದು ಗುರು ಕಾಣಿಕೆಯಾಗಿ ದ್ರೋಣರಿಗೆ ಒಪ್ಪಿಸಿದ್ದ ಪರಾಕ್ರಮಿಯಾದ ಅರ್ಜುನನನ್ನು ಅಳಿಯನನ್ನಾಗಿ ಪಡೆಯುವುದಕ್ಕಾಗಿ ಒಬ್ಬ ಮಗಳನ್ನು ಕರುಣಿಸು" ಎಂದು ದೇವತೆಗಳನ್ನು ಕೋರಿಕೊಂಡಾಗ, ಯಾಗಕುಂಡದ ಬೆಂಕಿಯಿಂದ ಮಗ ಧೃಷ್ಟದ್ಯುಮ್ನ ಮತ್ತು ಮಗಳು ದ್ರೌಪದಿ ಮೂಡಿಬಂದಿದ್ದರು. ಆದ್ದರಿಂದಲೇ ದ್ರೌಪದಿಗೆ ಅಗ್ನಿಪುತ್ರಿ ಎಂಬ ಹೆಸರು ಬಂದಿದೆ. ಪ್ರಾಚೀನ ಪುರಾಣಗಳಲ್ಲಿ ಮತ್ತು ಮಹಾಕಾವ್ಯಗಳಲ್ಲಿ ಇಂತಹ ರೂಪಕಗಳ ಮೂಲಕ ಕೆಲವು ವ್ಯಕ್ತಿಗಳ ಹುಟ್ಟಿನ ಹಿನ್ನೆಲೆಯನ್ನು ನಿರೂಪಿಸಲಾಗಿದೆ; ಪರಿಭವಿಸು=ಅತಿಕ್ರಮಿಸು/ಮೀರು; ಸೊರ್ಕು=ಸೊಕ್ಕು/ಗರ್ವ; ಉರಿ=ಬೆಂಕಿಯ ನಾಲಗೆ/ಕೆರಳು;

**ಅಂದು ಅನಲಜೆಯನ್ ಎನ್ನಯ ಮುಂದೆ ಮುಂದಲೆಯಮ್ ಪಿಡಿದು ಎಳೆದು ಪರಿಭವಿಸಿಯೆ ಸೊರ್ಕಿದವನನ್ ದಳ್ ಎಂದು ಉರಿದು ಕೊಂದೆನ್**=ಅಂದು ದ್ರೌಪದಿಯನ್ನು ನನ್ನ ಮುಂದೆಯೇ ರಾಜಸಭೆಗೆ ಮುಂದಲೆಯನ್ನು ಹಿಡಿದು ಎಳೆತಂದು ಅಪಮಾನಪಡಿಸಿ ಸೊಕ್ಕಿನಿಂದ ಮೆರೆದಿದ್ದ ದುರ್ಯೋಧನನ ತಮ್ಮನಾದ ದುಶ್ಶಾಸನನನ್ನು 'ದಳ್' ಎಂದು ಉರಿದೆದ್ದ ಕೋಪಜ್ವಾಲೆಯಿಂದ ಕೊಂದೆನು; ಕುರುಪತಿ=ದುರ್ಯೋಧನ; ಕುರುಕುಲ+ಅಂತಕನ್; ಅಂತಕ= ಯಮ; ಕುರುಕುಲಾಂತಕ=ಭೀಮ; ಮಾಮಸಕ=ಮಹಾ+ಮಸಕ; ಮಸಕ=ಅಬ್ಬರ; ಮಸಗು=**ಹೊರಹೊಮ್ಮು/ ಕೆರಳು; ಇನ್ ಕುರುಪತಿಯನ್ ಕೊಲಲ್ ತಡೆದಪೆನೇ ಎಂದು ಕುರುಕುಲಾಂತಕನ್ ಮಾಮಸಕಮ್** ಮಸಗಿ=ಇನ್ನು

ಕುರುಕುಲದ ಒಡೆಯನಾದ ದುರ್ಯೋಧನನನ್ನು ಕೊಲ್ಲುವುದಕ್ಕೆ ತಡಮಾಡುತ್ತೇನೆಯೇ ಎಂದು ಕುರುಕುಲಕ್ಕೆ ಯಮನಾಗಿರುವ ಭೀಮನು ಅಬ್ಬರದಿಂದ ಕೆರಳಿದವನಾಗಿ; ಕಾಲದಂಡ=ಯಮನ ಬಳಿಯಿರುವ ಆಯುಧ/ ಜೀವಿಗಳ ಪ್ರಾಣವನ್ನು ಸೆಳೆದೊಯ್ಯುವ ಆಯುಧ; **ಕುರುಕುಲಪ್ರಳಯ ಕಾಲದಂಡಮ್ ಎನಿಪ**=ಕುರುಕುಲವನ್ನು ನಾಶಮಾಡುವ ಯಮದಂಡ ಎನಿಸುವ;

**ನಿಜ ವಿಜಯ ಗದಾದಂಡಮನ್ ಎತ್ತಿಕೊಂಡು**=ತನ್ನ ವಿಜಯದ ಗದಾದಂಡವನ್ನು ಎತ್ತಿಕೊಂಡು; ಕದಳೀ=ಬಾಳೆ ಗಿಡ; ಕರಿ=ಆನೆ; ಕಳಭ=ಮರಿ; **ಕುರುಕುಲ ಕದಳೀ ಕಾನನ ಕರಿಕಳಭನ್**=ಕುರುಕುಲವೆಂಬ ಬಾಳೆಯ ತೋಟವನ್ನು ನುಗ್ಗಿನುರಿಮಾಡುವ ಆನೆಯ ಮರಿಯಂತಹವನು/ಭೀಮ; ಶಲಭ=ಹುಳು/ ದೀಪದ ಹುಳು/ಮಿಡತೆ/ಪತಂಗ; ಸಂಪಾತನ=ಕೆಳಗೆ ಬೀಳುವಿಕೆ/ಪತನ/ಡಿಕ್ಕಿ; ವಿಸ್ಫುರಿತ=ಹೆಚ್ಚಾದ /ಬೆಳಗುತ್ತಿರುವ; ಪ್ರದೀಪ=ದೀವಿಗೆ/ದೀಪ; **ಶತ್ರುಶಲಭಸಂಪಾತನ ವಿಸ್ಫುರಿತ ಪ್ರದೀಪನ್**= ಹಗೆಗಳೆಂಬ ಹುಳುಗಳು ಸುಟ್ಟು ಕೆಳಗೆ ಬೀಳುವಂತೆ ಬೆಳಗುತ್ತಿರುವ ದೀಪವಾಗಿರುವವನು; ಪವನ=ವಾಯುದೇವ; ಪವನಸುತ=ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು/ಭೀಮ;

**ಪವನಸುತನ್ ಆ ಕುರುಧರೆಯೊಳ್ ಕುರುಪತಿಯನ್ ಅರಸಿದನ್**=ಭೀಮನು ಆ ಕುರುಭೂಮಿಯ ಕುರುಕ್ಷೇತ್ರ ರಣರಂಗದಲ್ಲಿ ಕುರುಪತಿಯಾದ ದುರ್ಯೋಧನನನ್ನು ಹುಡುಕಲೆಂದು ಹೊರಟನು; ದುರ್ಯೋಧನನು ತಾನು ಆಳ್ವಿಕೆಯನ್ನು ಮಾಡುತ್ತಿದ್ದ ರಾಜ್ಯದಲ್ಲಿಯೇ ತಲೆಮರೆಸಿಕೊಳ್ಳಬೇಕಾದ ದುರಂತದ ಸನ್ನಿವೇಶಕ್ಕೆ ಗುರಿಯಾಗಿದ್ದಾನೆ;

❖

## ನೋಟ–೧೭

# ಭೀಮಸೇನನ ಅಬ್ಬರ ..ಗಾಂಧಾರಿಯ ಮೊರೆ

ಲಕ್ಷ್ಯ=ಗುರಿ; ಮಾಣ್ದು+ಇರದೆ; ಮಾಣ್=ಸುಮ್ಮನಾಗು; ಮರುತ್+ ಜವದಿಂದಮ್; ಮರುತ್=ಗಾಳಿ/ವಾಯು; ಜವ=ವೇಗ; ಪರಿ=ಚಲಿಸು/ಸಾಗು; ಅಂಬು=ಬಾಣ; ತಪ್ಪರ್ಂತೆ+ಇರೆ; **ಗುರು ಲಕ್ಷ್ಯ ಸಿದ್ಧಿಯಿಲ್ಲ ಎನೆ... ಮಾಣ್ದಿರದೆ ಮರುಜ್ಜವದಿಂದಮ್ ಪರಿವ ಅಂಬಮ್ ಪರಿದು ಪಿಡಿದು ತಪ್ಪರ್ಂತಿರೆ**= ಗುರು ದ್ರೋಣಾಚಾರ್ಯರ ಬಳಿಯಲ್ಲಿ ಭೀಮನು ಬಿಲ್ ವಿದ್ಯೆಯನ್ನು ಕಲಿಯುವಾಗ ನಡೆದಿದ್ದ ಪ್ರಸಂಗವೊಂದನ್ನು ಇಲ್ಲಿ ಉಪಮೆಯನ್ನಾಗಿ ಬಳಸಲಾಗಿದೆ. ಒಂದು ಗುರಿಯತ್ತ ಬಾಣವನ್ನು ಬಿಡಲು ಗುರು ದ್ರೋಣಾಚಾರ್ಯರು ಸೂಚಿಸಿದಾಗ, ಭೀಮನು ಬಾಣವನ್ನು ಪ್ರಯೋಗಿಸುತ್ತಾನೆ. ಅದನ್ನು ಗಮನಿಸಿದ ದ್ರೋಣಾಚಾರ್ಯರು **“ಭೀಮ ನಿನ್ನ ಗುರಿ ತಪ್ಪಾಗಿದೆ. ಬಾಣ ಗುರಿಯತ್ತ ಹೋಗುತ್ತಿಲ್ಲ”** ಎನ್ನಲು, ಸುಮ್ಮನಿರದೆ ಮರುಗಳಿಗೆಯಲ್ಲಿಯೇ ಭೀಮನು ವಾಯುವೇಗದಿಂದ ಮುನ್ನುಗ್ಗಿ, ತಾನು ಬಿಟ್ಟ ಬಾಣವು ತಪ್ಪು ಗುರಿಯನ್ನು ಮುಟ್ಟುವ ಮುನ್ನವೇ ತಡೆ ಹಿಡಿದು ತಂದಿದ್ದನು. ವಾಯುಪುತ್ರನಾದ ಭೀಮನು ವಾಯುವೇಗದಿಂದ ಸಂಚರಿಸುವಂತಹ ಕಸುವು ಮತ್ತು ಕುಶಲತೆಯನ್ನು ಹೊಂದಿದ್ದನು ಎಂಬುದನ್ನು ಈ ಪ್ರಸಂಗವು ಸೂಚಿಸುತ್ತದೆ;

**ಆಗಳ್ ಮರುತ್ಸುತನ್ ಇದಿರುಮ್ ಬಳಿಯುಮ್ ಪರಿದನ್**= ಕಾಣೆಯಾಗಿರುವ ದುರ್ಯೋಧನನನ್ನು ಹುಡುಕುತ್ತಿರುವ ಸನ್ನಿವೇಶದಲ್ಲಿ ವಾಯುಪುತ್ರನಾದ ಭೀಮನು ಕುರುಕ್ಷೇತ್ರ ರಣರಂಗದ ಅತ್ತ ಇತ್ತ ಎಲ್ಲೆಡೆಯಲ್ಲಿಯೂ ವಾಯುವೇಗದಿಂದ ಅಲೆಯತೊಡಗಿದನು; ಅಂತು=ಆ

ರೀತಿ; ಇದಿರುಮ್=ಮುಂದುಗಡೆ; ಬಳಿಯಮ್=ಹತ್ತಿರದಲ್ಲಿ; ಪಾಸಮು ಪೊಕ್ಕುಮ್=ಉದ್ದಗಲದಲ್ಲಿ; ದುಗುಣ=ಎರಡು ಸಲ; ತಿಗುಣ=ಮೂರು ಸಲ; ತಿಗಟ=ಮುಂದೆ ಮತ್ತು ಹಿಂದೆ;; ಪರಿದು=ಅಡ್ಡಾಡಿ; **ಅಂತು ಇದಿರುಮ್ ಬಳಿಯಮ್ ಪಾಸುಮ್ ಪೊಕ್ಕುಮ್ ದುಗುಣಮುಮ್ ತಿಗುಣಮುಮ್ ಅಡ್ಡಮುಮ್ ತಿಗಟಮುಮ್ ಪರಿದು**=ಭೀಮನು ವಾಯುವೇಗದಿಂದ ಕುರುಕ್ಷೇತ್ರ ರಣರಂಗದ ಉದ್ದಗಲದಲ್ಲಿ ಮುಂದೆ–ಹಿಂದೆ; ಹತ್ತಿರದಲ್ಲಿ–ದೂರದಲ್ಲಿ; ತ್ರಿಕೋನಕಾರವಾಗಿ ಒಂದಲ್ಲ ಎರಡಲ್ಲ ಮೂರು ಸಲ ಅಡ್ಡಾಡತೊಡಗಿದನು; ಆಲಿಸು=ಕೇಳು;

**ವೈಯಾಕರಣನಂತೆ ಶಬ್ದಮನ್ ಆಲಿಸಿಯುಮ್=ಪ್ರತಿಯೊಂದು ಶಬ್ದಗಳ ರೂಪ ಮತ್ತು ತಿರುಳನ್ನು ಗಮನಿಸುವ ವ್ಯಾಕರಣಕಾರನಂತೆ ರಣರಂಗದಲ್ಲಿ ಕೇಳಿಬರುತ್ತಿರುವ ಶಬ್ದವನ್ನು ಕಿವಿಗೊಟ್ಟು ಕೇಳುತ್ತ; ಅಡಿ+ಪಜ್ಜೆ; ಅಡಿವಜ್ಜೆ**=ಅಂಗಾಲು; **ಬೇಂಟೆಕಾರನಂತೆ ಅಡಿವಜ್ಜೆಯನ್ ಅರಸಿಯುಮ್**=ಪ್ರಾಣಿಗಳ ಹೆಜ್ಜೆಗುರುತುಗಳ ಮೂಲಕ, ಅವುಗಳ ಅಡಗು ತಾಣವನ್ನು ಹುಡುಕುವ ಬೇಟೆಕಾರನಂತೆ ರಣರಂಗದ ನೆತ್ತರ ಕೆಸರಿನಲ್ಲಿ ಅಚ್ಚೊತ್ತಿದಂತಿರುವ ಕಾದಾಳುಗಳ ಹೆಜ್ಜೆಗುರುತು ಗಳಲ್ಲಿ ದುರ್ಯೋಧನನ ಹೆಜ್ಜೆ ಗುರುತುಗಳನ್ನು ಹುಡುಕುತ್ತ; ಪಾವು=ಹಾವು; ಪಳವಿಗೆ+ಅನ್; ಪಳವಿಗೆ=ಬಾವುಟ; ಆರಯ್=ಹುಡುಕು/ಪತ್ತೆ ಹಚ್ಚು; **ಗರುಡನಂತೆ ಪಾವಿನ ಪಳವಿಗೆಯನ್ ಆರಯ್ದು ನೋಡಿಯುಮ್**=ಗಗನದಲ್ಲಿ ಹಾರಾಡುವ ಗರುಡ ಪಕ್ಷಿಯು ನೆಲದಲ್ಲಿ ಹರಿದಾಡುವ ಹಾವಿನ ಚಹರೆಯನ್ನು ಹುಡುಕಿ ನೋಡುವಂತೆ ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗಿ ಹೊಂದಿದ್ದ ದುರ್ಯೋಧನನನ್ನು ಹುಡುಕುತ್ತ; ಅಹಿತ+ಗದ+ಅನ್ವೇಷಣಮ್; ಅಹಿತ=ಕೇಡು/ಹಾನಿ; ಗದ=ರೋಗ; ಅನ್ವೇಷಣ=ಹುಡುಕುವುದು;

**ವೈದ್ಯನಂತೆ ಅಹಿತಗದಾನ್ವೇಷಣಮ್ ಗೆಯ್ದು ನೋಡಿಯುಮ್**=ದೇಹಕ್ಕೆ ಸಾವು ನೋವನ್ನುಂಟುಮಾಡುವ ರೋಗದ ಚಿಹ್ನೆಗಳನ್ನು ಹುಡುಕಿ ನೋಡುವ ವೈದ್ಯನಂತೆ ರಣರಂಗದಲ್ಲಿ ಆಯುಧಗಳ ಪೆಟ್ಟಿನಿಂದ ಗಾಯಗೊಂಡು ನರಳುತ್ತ ಬಿದ್ದಿರುವ ಕಾದಾಳುಗಳ ನಡುವೆ ದುರ್ಯೋಧನನನ್ನು ಹುಡುಕುತ್ತ; ಸೂಳ್=ಸರದಿ/ಸಮಯ; **ಪಿಳ್ಳೆಪೆಸರಿಲ್ಲದಂತೆ**=ಕುಲದ ಹೆಸರನ್ನು ಹೇಳಲು ಒಂದು ಮಗುವಾದರೂ ಜೀವಂತವಾಗಿ ಉಳಿಯದಂತೆ, ಅಂದರೆ ಕುಲವೆಲ್ಲವೂ ಸಂಪೂರ್ಣವಾಗಿ ನಾಶವಾಗುವಂತೆ; **ಮುನ್ನಮ್ ಪರಶುರಾಮನ್ ಇರ್ಪತ್ತೊಂದು ಸೂಳ್ ವರೆಗಮ್ ಈ ನೆಲದೊಳ್ ಉಳ್ಳ ಅರಸು ಮಕ್ಕಳ್ ಎಲ್ಲರುಮನ್ ಪಿಳ್ಳೆ ಪೆಸರಿಲ್ಲದಂತು ಕೊಂದು**=ಈ ಹಿಂದೆ ಪರಶುರಾಮನೆಂಬ ರಿಸಿಯು ಇಪ್ಪತ್ತೊಂದು

ಸಲ ದಂಡೆತ್ತಿಹೋಗಿ, ಈ ಭೂಮಂಡಲದಲ್ಲಿರುವ ಅರಸು ಮಕ್ಕಳೆಲ್ಲರನ್ನೂ ಕ್ಷತ್ರಿಯ ಕುಲದ ಹೆಸರನ್ನು ಹೇಳಲು ಒಬ್ಬರನ್ನು ಉಳಿಸದಂತೆ ಕೊಂದು; ನೀರಿಳಿಯಲ್+ಉಮ್; ನೀರಿಳಿ=ಸ್ನಾನಮಾಡು;

**ತನ್ನ ತಾಯ್ಗೆ ನೀರಿಳಿಯಲುಮ್**=ಪರಶುರಾಮನು ತನ್ನ ತಾಯಿಯಾದ ರೇಣುಕಾದೇವಿಯು ಸ್ನಾನಮಾಡಲೆಂದು; ನೀರ್ಕುಡಲ್+ಉಮ್; ನೀರ್ಕುಡು=ನೀರ್+ಕುಡು=ಪೂಜೆಯ ಸಮಯದಲ್ಲಿ ಮಂತ್ರಗಳನ್ನು ಉಚ್ಚರಿಸುತ್ತ ಬೊಗಸೆ ಕಯ್ಗಳಿಂದ ನೀರನ್ನು ನೀಡುವುದು; **ತಂದೆಗೆ ನೀರ್ ಕುಡಲುಮ್ ಎಂದು**=ಪರಶುರಾಮನು ತನ್ನ ತಂದೆಯಾದ ಜಮದಗ್ನಿಯು ನೀರಿನ ತರ್ಪಣವನ್ನು ಕೊಡಲೆಂದು; ಅವಂದಿರ=ಅರಸು ಮಕ್ಕಳ; ನೆತ್ತರು=ರಕ್ತ; ತೀವಿ=ತುಂಬಿ; ಪೆರ್ಮಡುಗಳ್+ಒಳಗೆ; ಪೆರ್ಮಡು=ಆಳವಾದ ನೀರಿನ ತಾಣ; ಮೂಡಿ=ಹೊಕ್ಕು/ಪ್ರವೇಶಿಸಿ; ಮುಳ್ಕಾಡಿ=ನೀರಿನಲ್ಲಿ ಮುಳುಗಿ ಈಜಾಡಿ; **ಅವಂದಿರ ನೊರೆ ನೆತ್ತರೊಳ್ ತೀವಿ ಮಾಡಿದ ಸ್ಯಮಂತ ಪಂಚಕಗಳೆಂಬ ಪೆಸರ ಪೆರ್ಮಡುಗಳೊಳಗೆ ಮೂಡಿ ಮುಳ್ಕಾಡಿ ನೋಡಿಯುಮ್**=ಅರಸು ಮಕ್ಕಳನ್ನು ಕೊಂದಾಗ ಹರಿದ ನೊರೆ ತುಂಬಿದ ನೆತ್ತರನ್ನೇ ತುಂಬಿಸಿ ಮಾಡಿದ ಸ್ಯಮಂತಪಂಚಕಗಳೆಂಬ ಹೆಸರಿನ ನೀರಿನ ತಾಣಗಳನ್ನು ಹೊಕ್ಕು, ಆ ಅಯ್ದು ಮಡುಗಳಲ್ಲಿಯೂ ಈಜಾಡಿ ನೋಡಿ; ಗಾವುದ=ಎರಡು ಹರಿದಾರಿ/ಸುಮಾರು ಆರು ಮೈಲಿ; ಹಿಂದಿನ ಕಾಲದಲ್ಲಿ ದಾರಿಯ ದೂರವನ್ನು ತಿಳಿಸುವ ಪದ; ಪರಿಪ್ರಮಾಣ=ಸುತ್ತಳತೆ;

**ನಾಲ್ವತ್ತೆಣ್ಗಾವುದ ಪರಿಪ್ರಮಾಣ ಕುರುಕ್ಷೇತ್ರದೊಳ್ ಎಲ್ಲಿಯುಮ್ ದುರ್ಯೋಧನನ್ ಅರಸಿ ಕಾಣದೆ ವಿಸ್ಮಯಮ್ ಪಟ್ಟು**=ನಲವತ್ತೆಂಟು ಗಾವುದದ ಸುತ್ತಳತೆಯಲ್ಲಿರುವ ಕುರುಕ್ಷೇತ್ರ ರಣರಂಗದ ಎಲ್ಲೆಡೆಯಲ್ಲಿಯೂ ದುರ್ಯೋಧನನನ್ನು ಹುಡುಕಿ ಕಾಣದೆ ಅಚ್ಚರಿಗೊಂಡು; ಬೀಡು=ಬಿಡಾರ ಹೂಡಿರುವ ತಾಣ; ಬಿಟ್ಟ ಬೀಡು=ಸೇನಾ ಶಿಬಿರ; ನಿಟ್ಟು=ದಿಕ್ಕು; ನಿಟ್ಟುರಿಗೊಂಡು=ದಿಕ್ಕಿನತ್ತ ಬಂದು; **ಅವನ ಬಿಟ್ಟ ಬೀಡಿಂಗೆ ನಿಟ್ಟುರಿಗೊಂಡು**=ಈಗ ಭೀಮಸೇನನು ಕುರುಕ್ಷೇತ್ರ ರಣರಂಗದಲ್ಲಿ ದುರ್ಯೋಧನನ ಸೇನಾ ಶಿಬಿರವಿದ್ದ ದಿಕ್ಕಿನ ಕಡೆಗೆ ಬರುತ್ತ; ಜತುಗೃಹದ+ಒಳ್; ಜತುಗೃಹ=ಅರಗಿನ ಮನೆ; **ಜತುಗೃಹದೊಳ್ ಸುಡಲ್ ಬಗೆದನ್ ಎಲ್ಲಿದನ್**=ಅಂದು ಅರಗಿನ ಮನೆಯ ಬೆಂಕಿಯಲ್ಲಿ ಪಾಂಡವರಾದ ನಮ್ಮೆಲ್ಲರನ್ನೂ ಸುಡಲು ಸಂಚು ಹೂಡಿದ್ದ ಆ ದುರ್ಯೋಧನನು ಈಗ ಎಲ್ಲಿದ್ದಾನೆ; ವಿಷ+ಅನ್ನಮ್+ಅಮ್; ಮರುತ್=ವಾಯುದೇವ; ಒಡರ್ಚು=ಪ್ರಯತ್ನಿಸು;

**ವಿಷಾನ್ನಮಮ್ ಇಕ್ಕಿ ಮರುತ್ ಸುತನನ್ ಉಪಾಯದಿಮ್ ಕೊಲಲ್ ಒಡರ್ಚಿದನ್ ಎಲ್ಲಿದನ್**=ಅಂದು ವಿಷದ ಲಡ್ಡುಗೆಯನ್ನು ತಿನ್ನಿಸಿ ವಾಯುದೇವನ ಮಗನಾದ ನನ್ನನ್ನು ಉಪಾಯದಿಂದ ಕೊಲ್ಲಲು ಪ್ರಯತ್ನಿಸಿದ ಆ ದುರ್ಯೋಧನನು ಈಗ ಎಲ್ಲಿದ್ದಾನೆ; ದುರೋದರ=ಜೂಜು/ದ್ಯೂತ; ವ್ಯತಿಕರ=ಪ್ರಸಂಗ; ಪರಾಭವ=ಸೋಲು; ಕೃಷ್ಣೆ+ಅನ್; ಕೃಷ್ಣೆ=ದ್ರೌಪದಿ; ಉಯ್=ಸಾಗಿಸು; **ಆ ದುರೋದರ ವ್ಯತಿಕರದೊಳ್ ಪರಾಭವಿಸಿ ಕೃಷ್ಣೆಯನ್ ಉಯ್ದ ಅಪರಾಧಿ ಎಲ್ಲಿದನ್**=ಅಂದು ರಾಜಸಭೆಯಲ್ಲಿ ನಡೆದ ದ್ಯೂತದ ಪ್ರಸಂಗದಲ್ಲಿ ಧರ್ಮರಾಯನನ್ನು ಸೋಲಿಸಿ, ರಾಜಸಭೆಗೆ ತನ್ನ ತಮ್ಮ ದುಶ್ಶಾಸನನ ಮೂಲಕ ದ್ರೌಪದಿಯನ್ನು ಮುಡಿ ಹಿಡಿದು ಎಳೆದು ತರಿಸಿ, ದ್ರೌಪದಿಯ ಸೀರೆಯನ್ನು ಸುಲಿಸಿ ಅಪಮಾನ ಮಾಡಿದ ಆ ಅಪರಾಧಿ ದುರ್ಯೋಧನನನ್ನು ಈಗ ಎಲ್ಲಿದ್ದಾನೆ; ಕೃತಕ=ಕಪಟತನ/ಮೋಸ; **ಕೃತಕ ಸಭೆ**= ದುರ್ಯೋಧನನು ಹಸ್ತಿನಾವತಿಯ ತನ್ನ ಅರಮನೆಯಲ್ಲಿ ಹೊಸದಾಗಿ ನಿರ್ಮಿಸಿದ್ದ ಸಭಾಭವನ. ಪಾಂಡವರನ್ನು ದ್ಯೂತಕ್ಕೆ ಕರೆದು ಮೋಸದಾಟದಿಂದ ಅವರ ಸಮಸ್ತ ಸಂಪತ್ತನ್ನು ಈ ಸಭಾಭವನದಲ್ಲಿಯೇ ದುರ್ಯೋಧನನು ವಶಪಡಿಸಿಕೊಳ್ಳುತ್ತಾನೆ; ಪ್ರವೇಶಕರನ್=ಪಾಂಡವರನ್ನು ಬರುವಂತೆ ಆಹ್ವಾನಿಸಿದವನು/ ದುರ್ಯೋಧನ;

**ಕೃತಕ ಸಭಾ ಪ್ರವೇಶಕರನ್ ಎಲ್ಲಿದನ್**=ಇಂದ್ರಪ್ರಸ್ಥ ನಗರದಲ್ಲಿ ಪಾಂಡವರಿಗಾಗಿ ಮಯನೆಂಬ ಶಿಲ್ಪಿಯು ನಿರ್ಮಿಸಿಕೊಟ್ಟಿರುವ ರೀತಿಯಲ್ಲಿಯೇ ತಾನೂ ಕೂಡ ಹೊಸಬಗೆಯಲ್ಲಿ ಸಭಾಭವನವನ್ನು ಕಟ್ಟಿಸಿರುವುದಾಗಿ ತಿಳಿಸಿ, ಅದನ್ನು ನೋಡಿ ಹೋಗಬೇಕೆಂದು ಪಾಂಡವರನ್ನು ಹಸ್ತಿನಾವತಿಗೆ ದುರ್ಯೋಧನನು ಆಹ್ವಾನಿಸಿದ ಸಂದರ್ಭದಲ್ಲಿಯೇ ವಿನೋದದ ನೆಪದಲ್ಲಿ ದ್ಯೂತವನ್ನು ಏರ್ಪಡಿಸಿ, ಧರ್ಮರಾಯನನ್ನು ಕಪಟ ದ್ಯೂತದಲ್ಲಿ ಸೋಲಿಸಿ, ಪಾಂಡವರ ರಾಜಸಂಪತ್ತೆಲ್ಲವನ್ನು ದೋಚಿ, ದ್ರೌಪದಿಯನ್ನು ಒಳಗೊಂಡಂತೆ ಪಾಂಡವರನ್ನು ಗೆದ್ದು, ತನ್ನ ದಾಸರನ್ನಾಗಿ ಮಾಡಿಕೊಳ್ಳುತ್ತಾನೆ. ಅಂದು ಇಂತಹ ವಂಚನೆಯನ್ನು ಮಾಡಿದ ದುರ್ಯೋಧನನು ಈಗ ಎಲ್ಲಿದ್ದಾನೆ; **ಎಲ್ಲಿದನೋ ಸುಯೋಧನನ್**= ಒಂದಲ್ಲ ಎರಡಲ್ಲ ಅನೇಕ ಬಗೆಯ ವಂಚನೆಗಳನ್ನು ಮಾಡಿರುವ ಆ ದುರ್ಯೋಧನನು ಈಗ ಎಲ್ಲಿದ್ದಾನೆ; ಕುಲ+ಇಂದು; ಇಂದು=ಚಂದ್ರ; ಭರತಕುಲೇಂದು ಕಲಂಕನ್=ಭರತಕುಲ ಚಂದ್ರನಿಗೆ ಕಳಂಕ ತಂದವನು; ಭರತ+ಅನ್ವಯ; ಅನ್ವಯ=ವಂಶ; ಕಪೋತ=ಪಾರಿವಾಳ;

**ಭರತಾನ್ವಯ ರಾಜಭವನ ರಾಜಕಪೋತಮ್**=ಭರತ ವಂಶದ ರಾಜಮಂದಿರದಲ್ಲಿ ನೆಲೆಸಿರುವ ಪಾರಿವಾಳ/ಭರತವಂಶಕ್ಕೆ ಅನಿಷ್ಟವಾಗಿರುವವನು; ಜಗತ್ತಿನ ಕೆಲವು ದೇಶಗಳಲ್ಲಿ ಆಯಾಯ ಜನಸಮುದಾಯದ ಸಂಸ್ಕೃತಿ ಮತ್ತು

ನಂಬಿಕೆಗಳಿಗೆ ಅನುಸಾರವಾಗಿ ಕೆಲವು ಬಗೆಯ ಪ್ರಾಣಿಪಕ್ಷಿಗಳು ಒಳಿತು ಇಲ್ಲವೇ ಕೆಡುಕಿನ ಸಂಕೇತಗಳಾಗಿರುತ್ತವೆ. ಹಸ್ತಿನಾವತಿಯ ಪ್ರದೇಶದಲ್ಲಿ ಅಂದಿನ ಕಾಲದಲ್ಲಿ 'ಪಾರಿವಾಳ' ಹಕ್ಕಿಯು ಅಶುಭದ ಇಲ್ಲವೇ ಕೆಡುಕಿನ ಸಂಕೇತವಾಗಿತ್ತು; ಕೇತು=ಕೇಡಿನ ಸಂಕೇತವೆಂದು ಭಾವಿಸಿರುವ ಒಂದು ಬಗೆಯ ಆಕಾಶಕಾಯ/ಧೂಮಕೇತು; **ಕುರುಕೇತು ಎಲ್ಲಿದನ್**=ಕುರುಕುಲದ ನಾಶಕ್ಕೆ ಕಾರಣನಾಗಿರುವ ಅನಿಷ್ಟದ ವ್ಯಕ್ತಿ ದುರ್ಯೋಧನನು ಈಗ ಎಲ್ಲಿದ್ದಾನೆ; ಲಯಕೇತು=ಎಲ್ಲವನ್ನು ಸಂಪೂರ್ಣವಾಗಿ ನಾಶಮಾಡುವವನು; ಸಿಂಹಗರ್ಜನೆ=ದೊಡ್ಡದನಿಯಿಂದ ಅಬ್ಬರಿಸುವುದು; **ತತ್ ಕುರುಕುಲ ಲಯಕೇತು ಭೀಮಸೇನನ್ ಬಂದನ್ ಎಂದು ಸಿಂಹಗರ್ಜನೆಯಿಮ್ ಗರ್ಜಿಸಿ**=ಆ ಕುರುವಂಶವನ್ನೇ ಸಂಪೂರ್ಣವಾಗಿ ನಾಶಮಾಡುವ ಈ ಭೀಮಸೇನನು ಬಂದಿದ್ದಾನೆ ಎಂದು ಸಿಂಹಗರ್ಜನೆಯಿಂದ ಅಬ್ಬರಿಸಿ; ದ್ವಾರ=ಬಾಗಿಲು; ಉಪಾಂತ=ಹತ್ತಿರ/ಸಮೀಪ;

**ಕುರುರಾಜದ್ವಾರ ಉಪಾಂತಮನ್ ಎಯ್ದೆ ವಂದಾಗಳ್**=ಕುರುರಾಜನ ಸೇನಾಶಿಬರದ ಬಾಗಿಲಿನ ಬಳಿಗ ಭೀಮಸೇನನು ಬಂದಾಗ; ದೆಸೆ+ಅಮ್; ದೆಸೆ=ದಿಕ್ಕು; ತೆಕ್ಕನೆ=ಅತಿಶಯವಾಗಿ/ವ್ಯಾಪಕವಾಗಿ; ತೀವಿ=ಆವರಿಸಿಕೊಂಡು; **ದೆಸೆಯಮ್ ತೆಕ್ಕನೆ ತೀವಿ**=ದಿಕ್ಕುಗಳನ್ನು ಅತಿಶಯವಾಗಿ ಆವರಿಸಿಕೊಂಡು/ದಿಕ್ಕಿನ ಎಲ್ಲ ಕಡೆಗಳಲ್ಲೂ ಕಾಣಿಸಿಕೊಂಡು; ಪರ್ಬು=ಹರಡು; ನೀಳ್ದು=ಉದ್ದವಾಗಿ ಚಾಚಿಕೊಂಡು; ಅಗುರ್ವು=ಉಗ್ರತೆ/ಭಯಂಕರ; **ಗಗನಮ್ ಪರ್ಬಿ ಕೂಡಿಟ್ಟವೊಲ್ ನೀಳ್ದು ಅಗುರ್ವಿಸೆ**=ಆಕಾಶದ ಉದ್ದಕ್ಕೂ ಚಾಚಿಕೊಂಡು ಒಂದೆಡೆ ಸೇರಿದಂತೆ ಭಯಂಕರವಾಗಿ; ಬಾಹು=ತೋಳು; ಭ್ರಮಿತ=ಉನ್ಮಾದ; ಅಭ್ರ=ಆಕಾಶ; ವಿಭ್ರಮ=ಅಂದ/ಬೆಡಗು; ಗದನ್=ಗದೆಯನ್ನು ಹಿಡಿದವನು; **ಬಾಹುಭ್ರಮಿತ ಅಭ್ರ ವಿಭ್ರಮ ಗದನ್**=ತನ್ನ ತೋಳುಗಳಿಂದ ಆಕಾಶವನ್ನೇ ತಿರುಗಿಸುತ್ತಿರುವನೋ ಎಂಬಂತೆ ಭ್ರಮೆಗೊಳಿಸುವ ಗದೆಯುಳ್ಳವನು. ಭೀಮಸೇನನು ದುರ್ಯೋಧನನನ್ನು ಕಾಣದ ಆತಂಕ ಮತ್ತು ಕಣ್ಣಿಗೆ ಬಿದ್ದ ಕೂಡಲೇ ಕೊಲ್ಲುವ ಆಕ್ರೋಶದಲ್ಲಿ ಗದೆಯನ್ನು ತಿರುಗಿಸುತ್ತಿರಲು, ಆ ಒಂದೇ ಗದೆಯು ಎಲ್ಲ ದಿಕ್ಕುಗಳಲ್ಲಿಯೂ ಮತ್ತು ಆಕಾಶದ ಎಲ್ಲೆಡೆಯಲ್ಲಿಯೂ ಕಾಣಿಸಿಕೊಂಡು,ಇಡೀ ನಿಸರ್ಗವನ್ನೇ ತಿರುಗಿಸುತ್ತಿರುವಂತೆ ಭಯಂಕರವಾಗಿತ್ತು;

**ಕೌರವ್ಯರಮ್ ತಿಂದ ರಕ್ಕಸನೋ ಭೀಮನೊ ಈತನ್ ಆವನ್ ಎನುತುಮ್**=ಉಗ್ರತೆಯಿಂದ ಗದೆಯನ್ನು ಬೀಸುತ್ತ ತಾವಿದ್ದ ಸೇನಾಶಿಬಿರದ ಬಳಿಬಂದ ಭೀಮನನ್ನು ನೋಡಿದ ದುರ್ಯೋಧನನ ತಾಯಿಯಾದ ಗಾಂಧಾರಿಯು **"ಕುರುವಂಶದ ಮಕ್ಕಳನ್ನು ತಿಂದ ರಕ್ಕಸನೋ ಭೀಮನೋ... ಇವನಾರು"** ಎಂದು ಆತಂಕಗೊಂಡು; ಪ್ರಾಕಾರ=ಸುತ್ತು ಗೋಡೆ/ಕೋಟೆ; **ಪಾಂಡವಬಲ ಪ್ರಾಕಾರನ**

**ಆಕಾರಮಮ್ ಬರೆ ಕಂಡು**=ಪಾಂಡವ ಸೇನೆಯನ್ನು ಕಾಪಾಡುವ ಕೋಟೆಯಂತಿರುವ ಭೀಮಸೇನನು ಶಿಬಿರದ ಬಳಿಗೆ ಬರುತ್ತಿರುವುದನ್ನು ಕಂಡು; ಬಳ್ಕು=ಹೆದರಿಕೆಯಿಂದ ನಡುಗು; ಬೆಕ್ಕಸ=ಬೆರಗು/ವಿಸ್ಮಯ; ಬೆಕ್ಕಸಮುತ್ತಳ್= ದೇಹವು ಸೆಟೆದುಕೊಂಡು ಗಾಸಿಗೊಂಡಳು; **ಗಾಂಧಾರಿ ಬಳ್ಕುತ್ತೆ ಬೆಕ್ಕಸಮುತ್ತಳ್**= ಗಾಂಧಾರಿಯು ಹೆದರಿಕೆಯ ನಡುಗುತ್ತ, ದೇಹವು ಸೆಟೆದುಕೊಂಡು ಗಾಸಿಗೊಂಡಳು; ಬಿಲ್ಲುಮ್ ಬೆರಗು=ತೀವ್ರವಾದ ಹೆದರಿಕೆಯಿಂದ ಗಾಸಿಗೊಂಡು;

**ಅಂತು ಕಂಡು ಬಿಲ್ಲುಮ್ ಬೆರಗುಮಾಗಿ**=ಆ ರೀತಿ ಇದ್ದಕ್ಕಿದ್ದಂತೆಯೇ ದುರ್ಯೋಧನನ ಸೇನಾಶಿಬಿರದ ಬಳಿಗೆ ಬಂದ ಭೀಮನನ್ನು ಕಂಡು ಅಚ್ಚರಿಗೊಂಡು, ಹೆದರಿಕೆಯಿಂದ ನಡುಗುತ್ತ, ಮಾನಸಿಕವಾಗಿ ಗಾಸಿಗೊಂಡು ಗಾಂಧಾರಿಯು ಈ ರೀತಿ ನುಡಿಯತೊಡಗುತ್ತಾಳೆ; ಆತ್ಮಜರ್=ಮಕ್ಕಳು; ಪನ್ನಗಕೇತನ= ದುರ್ಯೋಧನ: ಭರ=ಉದ್ರೇಕ/ಆವೇಶ/ವೇಗ; **ಎನ್ನ ಆತ್ಮಜರನ್ ನೂರ್ವರುಮನ್ ನುಂಗಿದ ತೆರದೆ ಪನ್ನಗಕೇತನನುಮನ್ ನುಂಗೆ ಇಂತು ಭರದಿಮ್ ಬಂದನ್**=ನನ್ನ ನೂರು ಮಂದಿ ಮಕ್ಕಳನ್ನು ಕೊಂದ ರೀತಿಯಲ್ಲಿಯೇ ದುರ್ಯೋಧನನನ್ನು ಕೊಲ್ಲಲು ಈ ರೀತಿ ಆವೇಶದಿಂದ ಬಂದಿದ್ದಾನೆ; ಉಮ್ಮಳಿಸು=ಚಿಂತಿಸು/ಸಂಕಟಪಡು/ದುಕ್ಕಿಸು; **ಅನ್ನೆಯಮಾಯ್ತು ಎಂದು ಪಿರಿದುಮ್ ಉಮ್ಮಳಿಸುತ್ತುಮ್ ಎಂಬನ್ನೆಗಮ್**=ಅನ್ಯಾಯವಾಯ್ತು ಎಂದು ನುಡಿಯುತ್ತ ಗಾಂಧಾರಿಯು ಬಹಳವಾಗಿ ಸಂಕಟಪಡುತ್ತಿರುವಷ್ಟರಲ್ಲಿ;

**ಭೀಮನ್ ವಿಜೃಂಭಿಸಿ**=ಭೀಮನು ಅಟ್ಟಹಾಸದಿಂದ ಮೆರೆಯುತ್ತ; ಸಮುಚಿತ= ಯೋಗ್ಯವಾದುದು/ಉತ್ತಮವಾದುದು; **ಗುರುಜನಕ್ಕೆ ಸಮುಚಿತ ಆಚಾರಮಮ್ ಮರೆದು**=ಗುರುಹಿರಿಯರಿಗೆ ತೋರಿಸಬೇಕಾದ ಮರ್ಯಾದೆಯ ನಡೆನುಡಿಯನ್ನು ಮರೆತು; ಕಯ್ಪು=ಕಹಿ; ಸರ=ದನಿ; ಕಯ್ಪುಸರ=ಮನನೋಯಿಸುವಂತಹ ಬಿರುಸಾದ ದನಿಯಲ್ಲಿ; ಕಯ್ಪುಸರದಿಮ್ **ಭೀಮನಾದಮಮ್ ನೆಗಳ್ಚಿ**= ಮನನೋಯಿಸುವಂತಹ ಬಿರುಸಾದ ದನಿಯಲ್ಲಿ ಭಯಂಕರವಾಗಿ ಅಬ್ಬರಿಸಿ; **ಧೃತರಾಷ್ಟ್ರ ಕ್ಷಿತಿಪಾಲ ಕೇಳ್**=ಧೃತರಾಷ್ಟ್ರ ಮಹಾರಾಜನೇ ಕೇಳು; **ಜನನಿ ಗಾಂಧಾರಿ ಕೇಳ್**=ತಾಯಿ ಗಾಂಧಾರಿಯೇ ಕೇಳು; ಭವತ್=ನಿಮ್ಮ; ಪ್ರಹತಿ=ಪೆಟ್ಟು/ಹೊಡೆತ; **ಭವತ್ ಸುತರಮ್ ನೂರ್ವರುಮಮ್ ಗದಾಪ್ರಹತಿಯಿಮ್ ಕೊಂದೆನ್**=ನಿಮ್ಮ ಮಕ್ಕಳಾದ ನೂರು ಮಂದಿಯನ್ನು ಈ ನನ್ನ ಗದೆಯ ಹೊಡೆತದಿಂದ ಕೊಂದೆನು; ಉರಸ್ಥಳ=ಎದೆಯ ಭಾಗ; ಕ್ಷತ=ಗಾಯ; ಕ್ಷತಜ=ಗಾಯದಿಂದ ಚಿಮ್ಮಿದ; ಅಸೃಗ್ಜಲ=ರಕ್ತ/ನೆತ್ತರು; ಸೇಕ=ಚಿಮುಸುವಿಕೆ/ಸಿಂಪಡಿಸುವಿಕೆ; ತಣಿಪು=ನಂದಿಸು/ ಆರಿಸು;

**ದುಶ್ಶಾಸನ ಉರಸ್ಥಳ ಕ್ಷತಜ ಅಸೃಗ್ಜಲಸೇಕದಿಮ್ ಕೋಪಾಗ್ನಿಯಮ್ ತಣಿಪಿದೆನ್**=ದುಶ್ಶಾಸನನ ಎದೆಯನ್ನು ಬಗೆದಾಗ, ಅವನ ಎದೆಯಿಂದ ಚಿಮ್ಮಿದ ನೆತ್ತರಿನ ಓಕುಳಿಯಿಂದ ನನ್ನ ಕೋಪವೆಂಬ ಬೆಂಕಿಯನ್ನು ಆರಿಸಿಕೊಂಡೆನು; ಉದ್ಧತ=ಸೊಕ್ಕಿದ/ಕೊಬ್ಬಿದ; ಕೋಪಕೃತ=ಕೋಪಾವೇಶದಿಂದ; ಶತ=ನೂರು; ಪಿಂಗಾಕ್ಷ=ಕಂದು ಬಣ್ಣದ ಕಣ್ಣುಳ್ಳವನು/ ದುರ್ಯೋಧನ; **ಉದ್ಧತನನ್... ಕೋಪಕೃತ ಅಪರಾಧಶತನನ್... ಪಿಂಗಾಕ್ಷನನ್ ನುಂಗಲ್ಕೆ ಬಂದೆನ್ ಎಂಬುದುಮ್**= ಸೊಕ್ಕಿನವನು ಕೋಪಾವೇಶದಿಂದ ನೂರಾರು ತಪ್ಪುಗಳನ್ನು ಮಾಡಿದವನು ಆದ ದುರ್ಯೋಧನನನ್ನು ಕೊಲ್ಲಲೆಂದೇ ಬಂದೆನು ಎಂದು ನುಡಿಯಲು; ಜರಾಸಂಧ+ಅರಿ; ಅರಿ=ಶತ್ರು; ಬದ್ಧಾಂಜಲಿ=ಕಯ್ಗಳನ್ನು ಜೋಡಿಸಿಕೊಳ್ಳುವುದು; ಜರಾಸಂಧಾರಿ=ಜರಾಸಂಧನನ್ನು ಕೊಂದವನು/ಭೀಮ; **ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ**=ಗಾಂಧಾರಿಯು ಭೀಮನಿಗೆ ಕಯ್ ಮುಗಿಯುತ್ತ; ಅನಿಬರ್=ಅಷ್ಟೊಂದು ಮಂದಿ; ತನಯರ್=ಮಕ್ಕಳು; ಅಣಮ್=ಸ್ವಲ್ಪ/ತುಸು; ಅಸು=ಪ್ರಾಣ/ಜೀವ;

**ಅನಿಬರ್ ತನಯರ ದುಃಖಮನ್ ಅನುಭವಿಸಿಯುಮ್ ಅಣಮೆ ಎಮ್ಮ ಅಸುಗಳ್ ಪೋಗವು**=ಅಷ್ಟೊಂದು ಮಂದಿ ಮಕ್ಕಳನ್ನು ಕಳೆದುಕೊಂಡು ಹೆತ್ತಕರುಳಿನ ಸಂಕಟದಲ್ಲಿ ಬೇಯುತ್ತಿದ್ದರೂ ತುಸುವಾದರೂ ನಮ್ಮ ಜೀವ ಹೋಗಲಿಲ್ಲ. **ಭೀಮ, ನೀನ್ ಇನಿತನ್ ಎಮಗೆ ಒಳ್ಳಿಕೆಯ್**=ಭೀಮ, ನೀನು ಇಷ್ಟನ್ನಾದರೂ ನಮಗೆ ಒಳ್ಳೆಯದನ್ನು ಮಾಡು; **ಮುನ್ನ ಎಮ್ಮಮ್ ನುಂಗು... ಎಮ್ಮ ಸುತನನ್ ಬಳಿಯಮ್ ಎಂಬುದುಮ್**=ಮೊದಲು ನಮ್ಮನ್ನು ಕೊಲ್ಲು. ನಮ್ಮ ಮಗನನ್ನು ಅನಂತರ ಕೊಲ್ಲು ಎಂದು ತಾಯಿಯಾದ ಗಾಂಧಾರಿಯು ಮೊರೆಯಿಡಲು; ಅನ್ನೆಗಮ್=ಅಷ್ಟರಲ್ಲಿ; ಇತ್ತ=ಈ ಕಡೆ; ಕಿರಾತ=ಬೇಡ; ಪ್ರಣತ= ನಮಸ್ಕರಿಸುವುದು; **ಅನ್ನೆಗಮ್ ಇತ್ತ ವಿಂದ್ಯಕನೆಂಬ ಕಿರಾತ ದೂತನ್ ತ್ವರಿತಗತಿಯಿಮ್ ಬಂದು ದೂರಪ್ರಣತನಾಗಿ**=ಅಷ್ಟರಲ್ಲಿ ಈ ಕಡೆಯಿಂದ ಬೇಡಪಡೆಯ ವಿಂದ್ಯಕನೆಂಬ ದೂತನೊಬ್ಬ ವೇಗವಾಗಿ ಬಂದು, ದೂರದಿಂದಲೇ ಭೀಮನಿಗೆ ನಮಸ್ಕರಿಸಿ ನಿಂದು; **ಮಧ್ಯಂದಿನ ಸಮಯ**=ನಡು ಹಗಲಿನ ಸಮಯದಲ್ಲಿ; ತಪನ=ಸೂರ್ಯ; ತಾಪ=ಬಿಸಿ/ಜಳ; ತೃಷ್ಣ+ಅಭಿಭೂತನ್+ಆಗಿ; ತೃಷ್ಣ=ಬಾಯಾರಿಕೆ; ಅಭಿಭೂತ=ಒಳಗಾಗು; ಸಕಲಜನ=ಜನರೆಲ್ಲರ; ಆಪ್ಯಾಯಕಾರಿ+ಅಪ್ಪ; ಆಪ್ಯಾಯಕಾರಿ=ಹಿತವನ್ನುಂಟುಮಾಡುವ;

**ದೇವಾ, ದುರ್ಯೋಧನನನ್ ಕುರುಕ್ಷೇತ್ರದೊಳ್ ಎಲ್ಲಿಯುಮ್ ಅರಸಿಯುಮ್ ಕಾಣದೆ ಮಧ್ಯಂದಿನ ಸಮಯದೊಳ್ ತಪನ ತಾಪದಿಮ್ ತೃಷ್ಣಾಭಿಭೂತನಾಗಿ ಸಕಲ**

**ಜನ ಆಪ್ಯಾಯಕಾರಿಯಪ್ಪ ವೈಶಂಪಾಯನ ಸರೋವರಕ್ಕೆ ನೀರ್ಗುಡಿಯೆ ಪೋಗಿ**=ದೇವಾ, ದುರ್ಯೋಧನನನ್ನು ಕುರುಕ್ಷೇತ್ರ ರಣರಂಗದ ಎಲ್ಲೆಡೆಯಲ್ಲಿಯೂ ಹುಡುಕಿದರೂ ಕಾಣದೆ, ನಡು ಹಗಲಿನ ಸಮಯದಲ್ಲಿ ಸೂರ್ಯನ ಬಿಸಿಲ ತಾಪದಿಂದ ಬಾಯಾರಿಕೆಯುಂಟಾಗಿ, ಜನರೆಲ್ಲರಿಗೂ ಹಿತಕಾರಿಯಾಗಿರುವ ವೈಶಂಪಾಯನ ಸರೋವರಕ್ಕೆ ನೀರನ್ನು ಕುಡಿಯಲೆಂದು ಹೋದಾಗ; ಹಲ=ನೇಗಿಲು; ಕುಲಿಶ=ವಜ್ರಾಯುಧ; ಲಾಂಛನಮ್+ಅಪ್ಪ; ಲಾಂಛನ=ಗುರುತು; ಅಪ್ಪ=ಆಗಿರುವ; ಅಡಿ+ಪಜ್ಜೆ= ಅಡಿವಜ್ಜೆ; ಅಡಿವಜ್ಜೆ=ಅಂಗಾಲು; **ಹಲ ಕುಲಿಶ ಕಮಲ ಶಂಖ ಚಕ್ರ ಲಾಂಚನಮಪ್ಪ ಅಡಿವಜ್ಜೆಯಮ್ ಕೊಳದ ತಡಿಯೊಳ್ ಕಂಡೆನ್**=ನೇಗಿಲು–ವಜ್ರಾಯುಧ–ಕಮಲ–ಶಂಕ–ಚಕ್ರಗಳ ಗುರುತುಳ್ಳ ಪಾದದ ಹೆಜ್ಜೆಗಳನ್ನು ಕೊಳದ ದಡದಲ್ಲಿ ಕಂಡೆನು; ಚಕ್ರವರ್ತಿಯಾದ ವ್ಯಕ್ತಿಯ ಪಾದದಲ್ಲಿ ಈ ಬಗೆಯ ವಸ್ತುಗಳ ಗೆರೆಗಳು ಇರುತ್ತವೆ ಎನ್ನುವುದು ಜನಮನದ ಒಂದು ನಂಬಿಕೆಯಾಗಿದೆ; **ಪೊರಮಟ್ಟ ಪಜ್ಜೆ**=ಕೊಳದಿಂದ ಹೊರಕ್ಕೆ ಬಂದ ಹೆಜ್ಜೆ ಗುರುತುಗಳು; **ಪೊಕ್ಕ ಪಜ್ಜೆ**=ಕೊಳದ ಒಳಕ್ಕೆ ಹೋದ ಹೆಜ್ಜೆ ಗುರುತುಗಳು;

**ಅಲ್ಲಿ ಪೊರಮಟ್ಟ ಪಜ್ಜೆಯಲ್ಲದೆ ಪೊಕ್ಕ ಪಜ್ಜೆಯಮ್ ಕಾಣೆನ್ ಎನೆ**= ಸರೋವರದ ತೀರದಲ್ಲಿ ಒದ್ದೆಯಾಗಿರುವ ಮರಳುಮಿಶ್ರಿತ ಮಣ್ಣಿನ ನೆಲದ ಮೇಲೆ ಕೊಳದಿಂದ ಹೊರಕ್ಕೆ ಬಂದ ಹೆಜ್ಜೆಗಳ ಗುರುತು ಕಾಣಿಸಿತೇ ಹೊರತು ಕೊಳದ ಒಳಕ್ಕೆ ಹೋದ ಹೆಜ್ಜೆಗಳ ಗುರುತು ನನಗೆ ಕಾಣಲಿಲ್ಲ ಎಂದು ಹೇಳಲು; **ಪವನತನಯನ್ ಅವನನ್ ಒಡಗೊಂಡು ಬಂದು**=ವಾಯುಪುತ್ರನಾದ ಭೀಮನು ಅವನನ್ನು ಜತೆಯಲ್ಲಿ ಕರೆದುಕೊಂಡು ಅಲ್ಲಿಂದ ಸರೋವರದತ್ತ ನಡೆದನು;

❖

## ನೋಟ-೧೮

# ಕೃಷ್ಣನ ಒಡಗೂಡಿ ವೈಶಂಪಾಯನ ಸರೋವರದ ಬಳಿಗೆ ಬಂದ ಪಾಂಡವರು

ಪವನ=ವಾಯುದೇವ; ತನಯ=ಮಗ; ಪವನತನಯ=ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವ ಮಗ/ಭೀಮಸೇನ; **ಪವನತನಯನ್ ಅವನನ್ ಒಡಗೊಂಡು ಬಂದು**=ಭೀಮನು ವಿಂದ್ಯಕನೆಂಬ ಆ ಬೇಡವರನ ಜತೆಯಲ್ಲಿಯೇ ಪಾಂಡವರ ಸೇನಾ ಶಿಬಿರಕ್ಕೆ ಬಂದು; ಧರ್ಮತನಯ+ಆದಿಗಳ್ಗೆ; ಧರ್ಮತನಯ=ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗ/ಧರ್ಮರಾಯ; ಆದಗಳ್ಗೆ= ಮೊದಲಾದವರಿಗೆ: **ಧರ್ಮತನಯಾದಿಗಳ್ಗೆ ತತ್ ವೃತ್ತಾಂತಮನ್ ಎಲ್ಲಮನ್ ಅರಿಪೆ**=ಧರ್ಮರಾಯನನ್ನು ಒಳಗೊಂಡಂತೆ ಇತರರೆಲ್ಲರಿಗೂ ಬೇಡರವನು ಹೇಳಿದ ವೈಶಂಪಾಯನ ಸರೋವರದಿಂದ ಹೊರಕ್ಕೆ ಬಂದಿರುವ ವ್ಯಕ್ತಿಯೊಬ್ಬನ ಹೆಜ್ಜೆಗುರುತುಗಳ ಸುದ್ದಿಯನ್ನು ತಿಳಿಸಲು; ಯುಕ್ತಿ=ಕುಶಲತೆ/ನಿಪುಣತೆ; ಯುಕ್ತಮ್+ಅಪ್ಪ; ಯುಕ್ತ=ಯೋಗ್ಯವಾದುದು; ಅಪ್ಪ=ಆಗಿರುವ;

**ಯುಕ್ತಿಯುಕ್ತಮಪ್ಪ ದೂತನ ಮಾತನ್ ಸಕಲ ಜಗತ್ ಉತ್ಪತ್ತಿ ಸ್ಥಿತಿ ಪ್ರಳಯಭಾವನನ್ ಎನಿಸಿದ ವಿಷ್ಣು ಕೇಳ್ದು**=ಕುಶಲ ಬುದ್ಧಿಯಿಂದ ವೈಶಂಪಾಯನ ಸರೋವರದ ತೀರದಲ್ಲಿ ಕಂಡುಬಂದ ಹೆಜ್ಜೆ ಗುರುತುಗಳನ್ನು ಗ್ರಹಿಸಿಕೊಂಡಿರುವ ದೂತನ ಮಾತನ್ನು ಸಕಲ ಜಗತ್ತಿನ ಹುಟ್ಟು ಇರುವಿಕೆ ಮತ್ತು ನಾಶಕ್ಕೆ ಕಾರಣನು ಎನಿಸಿದ ಕೃಷ್ಣನು ಕೇಳಿ; **ಮನದೊಳ್ ನಿಶ್ಚಯಿಸಿ**=ಈಗ ಏನನ್ನು ಮಾಡಬೇಕು ಎಂಬುದನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಪಾಂಡವರಿಗೆ ಈ ರೀತಿ

ಸೂಚನೆಯನ್ನು ನೀಡುತ್ತಾನೆ; ದ್ಯುನದಿ=ದೇವಗಂಗೆ; ದ್ಯುನದೀಜ=ದೇವಗಂಗಾ ನದಿಯ ಮಗ/ಭೀಷ್ಮ; ಶಂತನು ರಾಜ ಮತ್ತು ಗಂಗಾದೇವಿಯ ಮಗನಾದ ಭೀಷ್ಮ; ಕುಡೆ=ಕೊಡಲು/ಉಪದೇಶಿಸಲು; ತೋಯ=ನೀರು; ತೋಯಮಂತ್ರ= ನೀರೊಳಗೆ ಅಡಗಿಕೊಂಡಿರುವಾಗ ಜೀವಕ್ಕೆ ಅಪಾಯ ಒದಗದಂತೆ ಜಪಿಸುವ ಮಂತ್ರ;

**ದ್ಯುನದೀಜನ್ ಕುಡೆ ತೋಯಮಂತ್ರ ಬಲದಿಮ್ ಕಾಲವಂಚನೆ ಗೆಯ್ಯಲ್ ಕೊಳನಮ್ ಪೊಕ್ಕಿರ್ದಪನ್**=ಭೀಷ್ಮನು ಉಪದೇಶಿಸಿದ ಜಲಮಂತ್ರದ ಬಲದಿಂದ ದುರ್ಯೋಧನನು ನಾಳೆಯ ಯುದ್ಧಕ್ಕೆ ಮುನ್ನ, ಇಂದಿನ ದಿನ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳದೆ ಕಾಲವನ್ನು ಕಳೆಯಲೆಂದು ಕೊಳವನ್ನು ಹೊಕ್ಕಿದ್ದಾನೆ; ಹಲಾಯುಧ=ಬಲರಾಮ. ಕೃಷ್ಣನ ಅಣ್ಣ. ಯದುಕುಲದ ಅರಸ; ಕೃಪ=ಕೌರವ ಪಾಂಡವರ ವಿದ್ಯಾಗುರು; ಅಶ್ವತ್ಥಾಮ=ದ್ರೋಣಾಚಾರ್ಯರ ಮಗ; ನಾಗಕೇತನ= ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ ದುರ್ಯೋಧನ; **ಹಲಾಯುಧ ಕೃಪ ಅಶ್ವತ್ಥಾಮರುಮ್ ನಾಳೆಯೆ ನಾಗಕೇತನನೊಳ್ ಕೂಡಿ ಬರ್ಪರ್**=ಬಲರಾಮ, ಕೃಪ, ಅಶ್ವತ್ಥಾಮರು ನಾಳೆಯೇ ದುರ್ಯೋಧನನ ಜತೆಗೂಡಲು ಬರುತ್ತಾರೆ; ಕಯ್ಗೆ ಮಾಳ್ಪುದು=ವಶಪಡಿಸಿಕೊಳ್ಳಬೇಕು/ಸೆರೆಹಿಡಿಯಬೇಕು;

**ಅವರ್ ಇನ್ನುಮ್ ಬಾರದನ್ನಮ್ ಸುಯೋಧನನನ್ ಮುನ್ನಮೆ ಕಯ್ಗೆ ಮಾಳ್ಪುದು**=ಅವರೆಲ್ಲರೂ ಬಂದು ಸೇರಿಕೊಳ್ಳುವುದಕ್ಕೆ ಮೊದಲು ದುರ್ಯೋಧನನನ್ನು ವಶಪಡಿಸಿಕೊಳ್ಳಬೇಕು; **ಬಳಿಕ್ಕೆ ಆರ್ಗಮ್ ಗೆಲಲ್ ಬರ್ಕುಮೇ**=ಈಗ ವಶಕ್ಕೆ ತೆಗೆದುಕೊಳ್ಳದಿದ್ದರೆ, ಅನಂತರ ಅವರೆಲ್ಲರ ಜತೆಗೂಡುವ ದುರ್ಯೋಧನನನ್ನು ಯಾರಿಂದಲೂ ಗೆಲ್ಲುವುದಕ್ಕೆ ಆಗುವುದಿಲ್ಲ; ಪೂ+ಕೊಳನನ್+ಅಮ್; ಪೂಗೊಳ=ಹೂವಿನಿಂದ ಕೂಡಿರುವ ಕೊಳ; ಪರಿವಡಿ=ಕೊನೆಗಾಣು/ಮುಗಿ/ತೀರು; **ಅದರಿಂದೆ ಈಗಳೇ ಪೋಗಿ ಪೂಗೊಳನನಮ್ ಮುತ್ತಿ ದುರ್ಯೋಧನನನ್ ಪೊರಮಡಿಸಿ ಪಗೆಯಮ್ ಪರಿವಡಿಪುದು ಎಂದು**=ಆದ್ದರಿಂದ ಈಗಲೇ ಹೋಗಿ, ವೈಶಂಪಾಯನ ಸರೋವರವನ್ನು ಸುತ್ತುವರಿದು, ದುರ್ಯೋಧನನನ್ನು ಹೊರಕ್ಕೆ ಬರುವಂತೆ ಮಾಡಿ, ಹಗೆಯನ್ನು ಕೊನೆಗಾಣಿಸಬೇಕು ಎಂದು ನುಡಿದು; ಅರವಿಂದನಾಭ= ಕೃಷ್ಣ; **ಅರವಿಂದನಾಭನ್ ಧರ್ಮನಂದನಾದಿಗಳನ್ ಒಡಗೊಂಡು ಬಂದು**= ಕೃಷ್ಣನು ಧರ್ಮರಾಯ ಮತ್ತು ಇತರರ ಜತೆಗೂಡಿ ವೈಶಂಪಾಯನ ಸರೋವರದ ಬಳಿಗೆ ಬಂದು; ಸಂಸೂಚಿತ=ನೋಡಿ ಗುರುತಿಸಿದ; ಅಡಿ+ಪಜ್ಜೆ; ಅಡಿವಜ್ಜೆ=ಪಾದದ ಕೆಳಭಾಗ;

**ಕಿರಾತ ದೂತ ಸಂಸೂಚಿತಮಪ್ಪ ಅಡಿವಜ್ಜೆಯಮ್ ಕಂಡು**=ಬೇಡರವನು ನೋಡಿ ಗುರುತಿಸಿದ್ದ ಅಡಿವಜ್ಜೆಗಳನ್ನು ಕಂಡು; **ಸುಯೋಧನನ ಅಡಿವಜ್ಜೆಯಪ್ಪುದಮ್ ತಪ್ಪಿಲ್ಲದೆ ಅರಿದು**=ಅವು ದುರ್ಯೋಧನನ ಪಾದದ ಹೆಜ್ಜೆಗುರುತುಗಳೇ ಆಗಿರುವುದನ್ನು ಸರಿಯಾಗಿ ತಿಳಿದುಕೊಂಡು; **ನಿಸ್ಸಂದೇಹಚಿತ್ತರಾಗಿ**=ವೈಶಂಪಾಯನ ಸರೋವರದಲ್ಲಿ ದುರ್ಯೋಧನನು ಅಡಗಿದ್ದಾನೆ ಎಂಬುದರ ಬಗ್ಗೆ ಯಾವುದೇ ಅನುಮಾನವಿಲ್ಲದವರಾಗಿ; ಈಗ ಪಾಂಡವರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ತೊಡಗುತ್ತಾರೆ; ಭರತಜರ್+ಒಳ್; ಭರತಜರ್=ಭರತ ವಂಶದಲ್ಲಿ ಹುಟ್ಟಿದ ರಾಜರು; ಪರಿಭಾಷೆಯನ್+ಉಂಟುಮಾಡಿ; ಪರಿಭಾಷೆ=ಅಪವಾದ/ನಿಂದೆ/ತೆಗಳಿಕೆ; ಲಜ್ಜಾಭರ=ತೀವ್ರವಾದ ನಾಚಿಕೆ; ಎರಗು=ತಗ್ಗಿಸು;

**ಭರತಜರೊಳ್ ಮುನ್ನ ಇಲ್ಲದ ಪರಿಭಾಷೆಯನುಂಟುಮಾಡಿ ಕುರುರಾಜನ್ ಪೆರಗೆ ಅಡಿಯಿಟ್ಟನ್ ಎಂದು ಧರ್ಮಸುತನ್ ಲಜ್ಜಾಭರದಿಂದಮ್ ತಲೆಯನ್ ಎರಗಿದನ್**=ಭರತ ವಂಶದ ರಾಜರಲ್ಲಿ ಈ ಮೊದಲು ಯಾರು ಮಾಡಿರದ ತಪ್ಪನ್ನು ಮಾಡಿ ಮನೆತನಕ್ಕೆ ಕೆಟ್ಟ ಹೆಸರನ್ನು ತರುವಂತೆ ಕುರುರಾಜನಾದ ದುರ್ಯೋಧನನನು ಹಿಮ್ಮುಖನಾಗಿ ಅಡಿಯಿಟ್ಟು ಸರೋವರವನ್ನು ಹೊಕ್ಕಿದ್ದಾನೆ ಎಂದು ನುಡಿಯುತ್ತ ಧರ್ಮರಾಯನು ತೀವ್ರವಾದ ನಾಚಿಕೆಯಿಂದ ತಲೆತಗ್ಗಿಸಿದನು; ಕ್ಷತಿ=ನಾಶ/ನೋವು; ಸಿಗ್ಗು=ನಾಚಿಕೆ; **ದುರ್ಯೋಧನನ ಮನದ ಧೈರ್ಯಕ್ಷತಿಗೆ ಮನಃಕ್ಷತನಾಗಿ ಸಿಗ್ಗಾಗಿ ತಲೆಯಮ್ ಬಾಗಿ ಧರ್ಮನಂದನನಿರೆ**= ದುರ್ಯೋಧನನ ಮನದ ಕೆಚ್ಚು ನಾಶಗೊಂಡಿದ್ದಕ್ಕಾಗಿ, ಧರ್ಮರಾಯನು ಮನಸ್ಸಿನಲ್ಲಿ ಗಾಸಿಗೊಂಡು ನಾಚಿಕೆಯಿಂದ ತಲೆಬಗ್ಗಿಸಿ ನಿಂತುಕೊಂಡಿರಲು; ವಿರುವತ್=ಕೂಗುತ್ತಿರುವ; ಸಾರಸ=ನೀರು ಹಕ್ಕಿ; ರವ=ದನಿ/ಕೂಗು; ಪಂಕಜ+ಆಕರಮ್; ಪಂಕಜ=ತಾವರೆ; ಆಕರ=ಹುಟ್ಟುವ ಜಾಗ; ಪಂಕಜಾಕರ= ಸರೋವರ; ಆದರಿಪ+ಅಂತುಟು+ಆಯ್ತು; ಆದರ=ಉಪಚಾರ/ಸತ್ಕಾರ;

**ವಿರುವತ್ ಸಾರಸ ರಾಜಹಂಸ ರವದಿಂದೆ "ಏನ್ ಬಂದಿರೀ ಬನ್ನಿಮ್ ಇಂತು ಇರಿಮ್" ಎಂದು ಪಂಕಜಾಕರಮ್ ಆದರಿಪಂತುಂಟಾಯ್ತು**=ಕೂಗುತ್ತಿರುವ ಸಾರಸ ರಾಜಹಂಸ ಹಕ್ಕಿಗಳ ಕಲಕಲ ದನಿಯಿಂದ **"ಏನು ಬಂದಿರಿ ಬನ್ನಿರಿ ಈ ರೀತಿ ಇರಿ"** ಎಂದು ಸರೋವರವು ಉಪಚರಿಸುತ್ತ ಕರೆಯುತ್ತಿರುವಂತೆ ಕಂಡುಬಂದಿತು; ಪವನ=ಗಾಳಿ/ವಾಯು; ಉದ್ಧೂತ=ಮೇಲಕ್ಕೆ ತೂರಲ್ಪಟ್ಟ; ಉತ್ತರಂಗ= ಎತ್ತರವಾದ ಅಲೆ; ಅಂಬು=ನೀರು; ತರದಿಮ್=ರೀತಿಯಿಂದ; ಎರಪ+ಅಂತುಟು+ಆಯ್ತು; ಎರಪ=ನಮಸ್ಕರಿಸು; **ಪವನ ಉದ್ಧೂತ ಉತ್ತರಂಗ**

**ಅಂಬುವಿಮ್ ತರದಿಮ್ ಕಾಲ್ಗೆ ಎರಪಂತುಂಟಾಯ್ತು**=ಗಾಳಿಯ ಬಡಿತದಿಂದ ಮೇಲೆದ್ದ ಎತ್ತರವಾದ ಅಲೆಗಳ ನೀರು ದಡಕ್ಕೆ ನಿರಂತರವಾಗಿ ಅಪ್ಪಳಿಸುತ್ತಿರುವ ರೀತಿಯು ಸರೋವರದ ಬಳಿಗೆ ಬಂದ ಪಾಂಡವರ ಕಾಲಿಗೆ ನಮಸ್ಕರಿಸಿದಂತಾಯಿತು; ವಿಕಸತ್=ಅರಳುವ; ಅನಿಲಜ=ಭೀಮ; ಅಭ್ಯಾಗತ=ನೆಂಟ; ಅರ್ಘ್ಯ=ಮನೆಗೆ ಬಂದ ನೆಂಟರಿಗೆ ಕಯ್ ಕಾಲುಗಳನ್ನು ತೊಳೆಯಲೆಂದು ಕೊಡುವ ನೀರು;

**ಅನಿಲಜಂಗೆ ಅಭ್ಯಾಗತ ಪ್ರೀತಿಯಿಮ್ ವಿಕಸತ್ ಪಂಕೇಜದಿಮ್ ಅರ್ಘ್ಯಮ್ ಕುಡುವಂತುಟಾಯ್ತು**=ಭೀಮನಿಗೆ ನೆಂಟನನ್ನು ಪ್ರೀತಿಯಿಂದ ಸ್ವಾಗತಿಸುವ ರೀತಿಯಲ್ಲಿ ಅರಳಿದ ತಾವರೆಯ ಹೂಗಳಿಂದ ಕೂಡಿದ ಅರ್ಘ್ಯವನ್ನು ಕೊಡುವಂತಾಯಿತು; ಮೀಂಗುಲಿಗ+ಪಕ್ಕಿ; ಮೀಂಗುಲಿಗ=ಮೀಂಚುಳ್ಳಿ/ಮೀನನ್ನು ಕೊಲ್ಲುವ ನೀರ ಹಕ್ಕಿ; ಮೀಂಗೆ=ಮೀನಿಗೆ; ಎರಗು=ಮೇಲೆ ಬೀಳು; ಪಿಂಗಾಕ್ಷನ್=ದುರ್ಯೋಧನ; ಪವನಸುತ=ಭೀಮ; ಅರಿಪು=ತಿಳಿಸು/ಹೇಳು; **ಮೀಂಗುಲಿಗವಕ್ಕಿ ಕೊಳನೊಳ್ ಮೀಂಗೆ ಎರಗುವ ತೆರದಿನ್ ಎರಗಿ "ಪಿಂಗಾಕ್ಷನ್ ಇಲ್ಲಿರ್ದನ್ ನೋಡು" ಎಂದು ಪವನಸುತಂಗೆ ಅರಿಪುವ ತೆರದಿನ್ ಅದೇನ್ ಸೊಗಯಿಸಿತೋ**=ಮೀಂಚುಳ್ಳಿಯೊಂದು ಕೊಳದಲ್ಲಿ ಮೀನಿಗೆ ಎರಗುವ ರೀತಿಯಲ್ಲಿ ಸರೋವರದ ಒಂದೆಡೆಯ ನೀರಿನಲ್ಲಿ ಮುಳುಗುಹಾಕುತ್ತ **"ದುರ್ಯೋಧನನು ಇಲ್ಲಿದ್ದಾನೆ ನೋಡು"** ಎಂದು ಭೀಮನಿಗೆ ಹೇಳುವ ರೀತಿಯಲ್ಲಿ ಮುಳುಗಿ ಮೇಲೆದ್ದುದು ಸೊಗಸಾಗಿ ಕಂಡುಬಂದಿತು; ಸರೋವರದ ದಡದಲ್ಲಿ ನಿಂತಿರುವ ಭೀಮನು ಈಗ ಆನಂದದಿಂದ ಅಬ್ಬರಿಸತೊಡಗುತ್ತಾನೆ;

**ಪಗೆವನ್ ಒಳಗಾದನ್**= ಹಗೆಯಾದ ದುರ್ಯೋಧನನು ಸರೋವರದಲ್ಲಿ ಅಡಗಿದ್ದಾನೆ; **ಸರೋವರದೊಳಿರ್ದು ಇನ್ನೆತ್ತ ಪೋಪನ್**=ಸರೋವರದಲ್ಲಿ ಅಡಗಿಕೊಂಡಿರುವ ಅವನು ಇನ್ನು ಯಾವ ಕಡೆ ಹೋಗುತ್ತಾನೆ; ಸರೋಜಳ=ಸರೋವರದ ನೀರು; ತವೆ=ಸಂಪೂರ್ಣವಾಗಿ; **ಮುನ್ ಸರೋಜಳಮಮ್ ತವೆ ಪೀರ್ದು**=ಮೊದಲು ಸರೋವರದ ನೀರೆಲ್ಲವನ್ನೂ ಒಂದು ಹನಿಯನ್ನು ಬಿಡದಂತೆ ಸಂಪೂರ್ಣವಾಗಿ ಕುಡಿದು; ಅಸುಹೃತ್=ಹಗೆ/ಶತ್ರು; ರಕ್ತ+ಅಂಬುವಮ್; **ಅಸುಹೃತ್ ರಕ್ತಾಂಬುವಮ್ ಪೀರ್ವೆನ್**=ಹಗೆಯಾದ ದುರ್ಯೋಧನನ ರಕ್ತವೆಲ್ಲವನ್ನೂ ಹೀರುವೆನು; ಅಳವು=ಶಕ್ತಿ; ಮತ್=ನನ್ನ; ಪತಿ=ಒಡೆಯ; ಮತ್ ಪತಿ=ನನ್ನ ಒಡೆಯ/ಧರ್ಮರಾಯ; ಕಂಠೀರವ=ಸಿಂಹ; ಚಾಳುಕ್ಯಕಂಠೀರವನ್=ಚಾಳುಕ್ಯವಂಶದ ರಾಜರಲ್ಲಿ ಸಿಂಹದಂತಿರುವವನು/ಇದು ಚಾಳುಕ್ಯ ವಂಶದ ಸತ್ಯಾಶ್ರಯ ಚಕ್ರವರ್ತಿಗಿದ್ದ ಬಿರುದು. ರನ್ನ ಕವಿಯು ತಾನು

ರಚಿಸಿದ ‘ ಗದಾಯುದ್ಧ ’ ಕಾವ್ಯದಲ್ಲಿ ಭೀಮನ ಪಾತ್ರವನ್ನು ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನ ಹೆಸರಿನೊಂದಿಗೆ ಸಮೀಕರಿಸಿರುವುದರಿಂದ, ಚಕ್ರವರ್ತಿಗಿದ್ದ ಬಿರುದು ಭೀಮನಿಗೂ ಸಲ್ಲುತ್ತಿದೆ; ಸಂತಸ=ಆನಂದ; ಬಾಹು+ಆಸ್ಫಾಲನ; ಬಾಹು=ತೋಳು; ಆಸ್ಫಾಲನ=ತಟ್ಟುವುದು; ದಿಕ್+ವಲಯಮ್; ದಿಗ್ವಲಯಮ್=ಎಲ್ಲ ದಿಕ್ಕಿನ ಪ್ರದೇಶಗಳು; ಗಜರು=ಗರ್ಜಿಸು/ಅಬ್ಬರಿಸು;

**ಎನ್ನ ಅಳವಮ್ ಮತ್ ಪತಿಗೆ ತೋರ್ಪೆನ್ ಎಂದು ಚಾಳುಕ್ಯಕಂಠೀರವನ್ ಸಂತಸದೆ ಬಾಹಾಸ್ಫಾಲನಮ್ ಗೆಯ್ದು ದಿಗ್ವಳಯಮ್ ಮಾರ್ದನಿಯಿಟ್ಟವೊಲ್ ಗಜರಿದನ್**=ನನ್ನ ಶಕ್ತಿಯನ್ನು ಧರ್ಮರಾಯನಿಗೆ ತೋರಿಸುತ್ತೇನೆ ಎಂದು ಭೀಮನು ಆನಂದದಿಂದ ತನ್ನ ತೋಳುಗಳೆರಡನ್ನು ತಟ್ಟಿಕೊಳ್ಳುತ್ತ, ಎಂಟು ದಿಕ್ಕುಗಳಲ್ಲಿಯೂ ಪ್ರತಿಧ್ವನಿಯು ಹೊರಹೊಮ್ಮುವಂತೆ ಅಬ್ಬರಿಸಿದನು;

❖

## ನೋಟ–೧೯

# ಅಣಕಕ್ಕೆ ಗುರಿಯಾದ ದುರ್ಯೋಧನ

**ಆಗಳ್ ಆ ಕೊಳನಮ್ ಬಳಸಿ ಬಂದು**=ಆಗ ಪಾಂಡವರೆಲ್ಲರೂ ತಮ್ಮ ಸೇನಾಬಲದೊಡನೆ ಆ ವೈಶಂಪಾಯನ ಸರೋವರವನ್ನು ಸುತ್ತುವರಿದು ನಿಂತುಕೊಂಡು; ನಿರ್ಭರಮ್+ಆಗಿ; ನಿರ್ಭರ= ಉತ್ಸಾಹ/ಹುರುಪು; ಬೊಬ್ಬಿರಿ=ಆನಂದ/ಕೋಪ/ಆವೇಶದಿಂದ ದೊಡ್ಡ ದನಿಯಲ್ಲಿ ಅರಚುವುದು; **ನಿರ್ಭರಮಾಗಿ ಬೊಬ್ಬಿರಿದು ಅಬ್ಬರಮ್ ಗೆಯ್ದು**=ಅತ್ಯಂತ ಹುರುಪಿನಿಂದ ದೊಡ್ಡ ದನಿಯಲ್ಲಿ ಬೊಬ್ಬಿರಿದು ಅಬ್ಬರಿಸುತ್ತ; ಪರೆ=ದೊಡ್ಡ ಆಕಾರದ ಚರ್ಮವಾದ್ಯ; **ಪಲತೆರದ ಪರೆಗಳಮ್ ಪೊಯ್ಸಿಯುಮ್**=ಹಲವು ಬಗೆಯ ಚರ್ಮವಾದ್ಯಗಳಿಂದ ದೊಡ್ಡ ದನಿಯನ್ನು ಹೊರಹೊಮ್ಮಿಸಿದರೂ; ಪೂರೈಸು=ಬಾಯಿಂದ ಊದಿಸು; **ಶಂಖಂಗಳಮ್ ಪೂರೈಸಿಯುಮ್**=ಶಂಖಗಳನ್ನು ಊದಿ ನಾದವನ್ನು ಮಾಡಿದರೂ; ಭೇರಿ=ನಗಾರಿ; ತಾಟಿಸು=ಬಡಿ;

**ಭೇರಿಗಳಮ್ ತಾಟಿಸಿಯುಮ್**= ನಗಾರಿಗಳನ್ನು ಬಡಿದು ದೊಡ್ಡ ಗದ್ದಲವನ್ನು ಮಾಡಿದರೂ; ಒತ್ತಿಸು=ಬಾಯಿಂದ ಊದಿಸು; **ಕಹಳೆಗಳನ್ ಒತ್ತಿಸಿಯುಮ್**= ಕಹಳೆಗಳನ್ನು ಊದಿ ಮಹಾನಾದವನ್ನು ಹೊರಡಿಸಿದರೂ; ಪಂಚ ಮಹಾಶಬ್ದಗಳು=ಪ್ರಾಣಿಗಳ ಕೊಂಬು/ತಮಟೆ/ಶಂಖ/ನಗಾರಿ/ಜಾಗಟೆ ಎಂಬ ಅಯ್ದು ವಾದ್ಯಗಳನ್ನು ನುಡಿಸಿದಾಗ ಹೊರಹೊಮ್ಮುವ ದನಿ; ಬಾಜಿಸು= ವಾದ್ಯವನ್ನು ನುಡಿಸು; **ಪಂಚ ಮಹಾಶಬ್ದಗಳಮ್ ಬಾಜಿಸಿಯುಮ್**=ಅಯ್ದು ಬಗೆಯ ವಾದ್ಯಗಳನ್ನು ಒಮ್ಮೆಲೆ ನುಡಿಸುತ್ತ ಬಹು ದೊಡ್ಡ ದನಿಯನ್ನು ಹೊರಹೊಮ್ಮಿಸಿದರೂ; **ಎಂತುಮ್ ಪೊರಮಡಿಸಲಾರದೆ**=ಯಾವ

ರೀತಿಯಿಂದಲೂ ದುರ್ಯೋಧನನನ್ನು ಸರೋವರದಿಂದ ಹೊರಕ್ಕೆ ಬರುವಂತೆ ಮಾಡಲಾಗದೆ; ಪಾಂಡವರ ಸೇನಾ ಬಲದ ಅಬ್ಬರಕ್ಕಾಗಲಿ ಇಲ್ಲವೇ ವಾದ್ಯಗಳ ಮೊಳಗುವಿಕೆಗಾಗಲಿ ದುರ್ಯೋಧನನು ಯಾವುದೇ ಬಗೆಯಲ್ಲಿಯೂ ಪ್ರತಿಕ್ರಿಯಿಸದೆ ಸರೋವರದೊಳಗೆ ಅಡಗಿದ್ದನು;

**ನಕುಲನ್ ಆಸ್ಫೋಟಿಸಿ ಸುಯೋಧನನನ್ ಪೆಸರ್ಗೊಂಡು**= ದುರ್ಯೋಧನನು ಸರೋವರದಿಂದ ಹೊರಕ್ಕೆ ಬಾರದಿರುವುದನ್ನು ಕಂಡು ನಕುಲನು ಆಕ್ರೋಶದಿಂದ ಕೆರಳಿದವನಾಗಿ ದುರ್ಯೋಧನನ ಹೆಸರನ್ನು ಹಿಡಿದು ಕರೆಯುತ್ತ; ಅಂಕ=ಬಿರುದು/ಹೆಸರು/ಪ್ರಸಿದ್ಧಿ; ಶಶಾಂಕ=ಚಂದ್ರ; ನೆಗಳ್= ಕೀರ್ತಿ/ ಪ್ರಸಿದ್ಧಿ; ಅಯಶಃ=ಅಪಕೀರ್ತಿ/ಕೆಟ್ಟ ಹೆಸರು; ಪಂಕ=ಕೆಸರು; **ಅಂಕದ ಕಲಿ ಕುರುವಂಶ ಶಶಾಂಕನೆ ದುರ್ಯೋಧನಾಂಕನ್ ಎನೆ ನೆಗಳ್ದು ಅಯಶಃ ಪಂಕದೊಳಮ್ ಈ ಸರೋವರ ಪಂಕದೊಳಮ್ ನೀನೆ ನಿನ್ನನ್ ಇಂತು ಅರ್ದುವುದೇ=ಬಿರುದನ್ನು ಪಡೆದ ಕಲಿಯಾದ ಕುರುವಂಶದ ಚಂದ್ರನೇ "ಯಾರಿಂದಲೂ ಜಯಿಸಲು ಅಸಾಧ್ಯ ನಾದವನೇ ದುರ್ಯೋಧನ"** ಎನ್ನುವ ಹೆಸರನ್ನು ಪಡೆದು ಈಗ ಅಪಕೀರ್ತಿಯ ಕೆಸರಿನಲ್ಲಿಯೂ ಈ ಸರೋವರದ ಕೆಸರಿನಲ್ಲಿಯೂ ನೀನೆ ನಿನ್ನನ್ನು ಈ ರೀತಿ ಅದ್ದುಕೊಳ್ಳುತ್ತಾರೆಯೇ; ಇರಿವಬೆಡಂಗ=ಚಾಳುಕ್ಯ ಚಕ್ರವರ್ತಿಯಾದ ಸತ್ಯಾಶ್ರಯನಿಗೆ ಇದ್ದ ಬಿರುದು. ಈ ಬಿರುದಿನಿಂದ ಭೀಮಸೇನನನ್ನು ಕವಿಯು ಹೆಸರಿಸಿದ್ದಾನೆ; ನೆರೆ=ಶಕ್ತನಾಗು;

**ಇರಿವಬೆಡಂಗನೊಳ್ ಇರಿಯಲ್ ನೆರೆಯಯ್**=ಇರಿವಬೆಡಂಗನೊಡನೆ ಹೋರಾಡಲು ನಿನ್ನಿಂದಾಗದು; **ನಿನಗೆ ಆನೆ ಸಾಲ್ವೆನ್**=ನಿನ್ನನ್ನು ಕೊಲ್ಲಲು ನಾನೇ ಸಾಕು; ಎಕ್ಕತುಳ=ದ್ವಂದ್ವ ಯುದ್ಧ/ಇಬ್ಬರ ನಡುವೆ ನಡೆಯುವ ಹೋರಾಟ; **ಎಕ್ಕತುಳಕ್ಕಮ್ ನೆರೆದಿರ್ದೆನ್ ಇರದೆ ಕೊಳನಮ್ ಪೊರಮಡು**=ನಿನ್ನೊಡನೆ ದ್ವಂದ್ವಯುದ್ದಕ್ಕೆ ನಾನು ಸಿದ್ಧನಾಗಿದ್ದೇನೆ. ಕೊಳದಲ್ಲಿ ಅಡಗಿಕೊಂಡಿರದೆ ಹೊರಕ್ಕೆ ಬಾ; ಕೊಂತ=ಈಟಿ; **ಎನ್ನ ಕೊಂತದ ಸವಿಯಮ್ ತೋರಿದಪೆನ್ ಎನೆ**=ನನ್ನ ಈಟಿಯ ರುಚಿಯನ್ನು ತೋರಿಸುತ್ತೇನೆ ಎಂದು ನಕುಲನು ದುರ್ಯೋಧನನಿಗೆ ಸವಾಲನ್ನು ಹಾಕಿ ಹೋರಾಟಕ್ಕೆ ಕರೆಯಲು; ಉತ್ಕಟ=ಉಗ್ರತೆ/ಭಯಂಕರ; **ಸಹದೇವನ್ ಉತ್ಕಟಿ**ಸಿ=ಈಗ ಸಹದೇವನು ಉಗ್ರವಾದ ಕೋಪದಿಂದ ಉದ್ರೇಕ ಗೊಂಡವನಾಗಿ ದುರ್ಯೋಧನನನ್ನು ಜರೆದು ತನ್ನೊಡನೆ ದ್ವಂದ್ವಯುದ್ದಕ್ಕೆ ಕರೆಯುತ್ತಾನೆ; ಜವನ ಮಗ=ಧರ್ಮರಾಯ; ಇರ್ಕೆ=ಇರಲಿ; ಸುಭಟರ ಜವ=ವೀರರ ಪಾಲಿನ ಯಮ/ಭೀಮ; ಸಿತಾಶ್ವನ್=ಅರ್ಜುನ; ಅಣ್ಮು=ಪರಾಕ್ರಮವನ್ನು ತೋರಿಸು; ಬಾಳ್=ಕತ್ತಿ;

**ಜವನ ಮಗನ್ ಇರ್ಕೆ... ಸುಭಟರ ಜವನ್ ಇರ್ಕೆ... ಸಿತಾಶ್ವನ್ ಇರ್ಕೆ ನಕುಲನುಮ್ ಇರ್ಕೆ ಅಣ್ಮುವೊಡೆ ಎನ್ನ ಬಾಳ ಸವಿಯಮ್ ಸವಿನೋಡಿ, ಬಳಿಕ್ಕೆ ನೀರ ಸವಿಯಮ್ ನೋಡಾ ಎಂಬುದುಮ್**=ಧರ್ಮರಾಯನು ಇರಲಿ, ಭೀಮನು ಇರಲಿ... ಅರ್ಜುನ ಇರಲಿ... ನಕುಲನೂ ಇರಲಿ... ಅವರಾರು ನಿನ್ನೊಡನೆ ಹೋರಾಡಬೇಕಾದ ಅಗತ್ಯವಿಲ್ಲ. ನಿನ್ನ ಪರಾಕ್ರಮವನ್ನು ತೋರಿಸುವುದಾದರೆ ನನ್ನ ಕತ್ತಿಯ ರುಚಿಯನ್ನೊಮ್ಮೆ ಸವಿದು ನೋಡಿ, ಅನಂತರ ಸರೋವರದ ನೀರ ರುಚಿಯನ್ನು ನೋಡುವಂತಹವನಾಗು ಎಂದು ಹಂಗಿಸಲು; **ಅರ್ಜುನನ್ ವಿಜೃಂಭಿಸಿ**=ಅರ್ಜುನನು ಅತಿಶಯವಾಗಿ ಅಬ್ಬರಿಸುತ್ತ; ನಕುಲ ಮತ್ತು ಸಹದೇವನ ಸವಾಲುಗಳಿಗೆ ಯಾವುದೇ ಪ್ರತಿಕ್ರಿಯೆಯನ್ನು ಕೊಡದ ದುರ್ಯೋಧನನನ್ನು ಈಗ ಅರ್ಜುನನು ಕೆಣಕುತ್ತಾನೆ; **ಸುಯೋಧನ, ನೀನ್ ಮಾನಧನನ್ ಎನಿಸಿ ನಿನ್ನ ಅಭಿಮಾನ ಕ್ಷತಿ ಮಾಡಿದಯ್**= ಸುಯೋಧನ, ನೀನು ಯಾರಿಗೂ ತಲೆಬಾಗದೆ ಬಾಳುವವನು ಎಂಬ ಹೆಸರನ್ನು ಪಡೆದಿದ್ದವನು, ಈಗ ನಿನ್ನ ವ್ಯಕ್ತಿತ್ವವನ್ನು ನಾಶಮಾಡಿಕೊಂಡೆ; ಎಸಡಿ=ಏಡಿ;

**ಮತ್ತೆ ಈ ನೀರೊಳಗೆ ಎಸಡಿ ಇರ್ಕುಮ್... ಮೀನ್ ಇರ್ಕುಮ್... ಕಪ್ಪೆ ಇರ್ಕುಮ್ ಗಂಡರ್ ಇರ್ಪರೆ**=ಹಾಗೆ ನೋಡಿದರೆ ಈ ಸರೋವರದ ನೀರಿನಲ್ಲಿ ಏಡಿ ಇರುತ್ತವೆ ಮೀನು ಇರುತ್ತವೆ ಕಪ್ಪೆ ಇರುತ್ತವೆ ಪರಾಕ್ರಮಿಗಳು ಇರುತ್ತಾರೆಯೇ; ಕುಮರಂಕರಾಮ=ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನಿಗೆ ಇದ್ದ ಬಿರುದು/ಭೀಮ; **ಕುಮರಂಕರಾಮ ನೃಪನೊಳ್ ಸಮರಮ್ ನಿನಗೆ ಅರಿದು**=ಕುಮರಂಕರಾಮನೆಂಬ ಬಿರುದನ್ನು ಹೊತ್ತಿರುವ ರಾಜನಾದ ಭೀಮಸೇನನೊಡನೆ ಹೋರಾಡಲು ನಿನ್ನಿಂದಾಗದು; **ಎನಗಮ್ ನಿನಗಮ್ ಸಮರಮ್ ತಕ್ಕುದು**=ನನಗೂ ನಿನಗೂ ಯುದ್ಧ ತಕ್ಕುದಾಗಿದೆ; ಅಮೋಘ=ಗುರಿಯನ್ನು ಸರಿಯಾಗಿ ಮುಟ್ಟುವ; ಶರ=ಬಾಣ; **ನಿನ್ನನ್ ನುಂಗಲ್ಕೆ ಅಮೋಘಶರಮ್ ಇರ್ದುವು**=ನಿನ್ನನ್ನು ಬಲಿತೆಗೆದು ಕೊಳ್ಳುವುದಕ್ಕೆ ನನ್ನ ಬಳಿ ಗುರಿಯನ್ನು ಸರಿಯಾಗಿ ಮುಟ್ಟುವ ಬಾಣಗಳಿವೆ;

**ಇವರ ಸವಿಯಮ್ ನೋಡಾ ಎಂಬುದುಮ್**=ಇಂತಹ ಹರಿತವಾದ ಬಾಣಗಳ ರುಚಿಯನ್ನು ನೋಡುವಂತಹವನಾಗು ಎಂದು ಹೀಯಾಳಿಸಲು; **ಧರ್ಮನಂದನನ್ ಧೃತರಾಷ್ಟ್ರನಂದನನ್ ಮುನ್ನ ಗೆಯ್ದ ಅಧರ್ಮಮನ್ ನೆನೆಯದೆ**= ಧರ್ಮರಾಯನು ದುರ್ಯೋಧನನು ಪಾಂಡವರಾದ ತಮಗೆ ಈ ಮೊದಲು ಮಾಡಿದ್ದ ಕಪಟತನದ ಮತ್ತು ಕ್ರೂರತನದ ಕೆಟ್ಟ ಪ್ರಸಂಗಗಳನ್ನು ನೆನೆದುಕೊಂಡು ಹಂಗಿಸದೆ ಇಲ್ಲವೇ ಆಕ್ರೋಶವನ್ನು ಕಾರದೆ; **ಕುಲಕ್ರಮಯುಕ್ತಮಪ್ಪ ನಿರ್ಮಲ ಕ್ಷತ್ರಧರ್ಮಮನೆ ಬಗೆದು ಇಂತು ಎಂದನ್**=ಕುಲದ ಪರಂಪರೆಗೆ ಉಚಿತವೆನಿಸಿದ

ಪವಿತ್ರವಾದ ಕ್ಷತ್ರಿಯ ಧರ್ಮವನ್ನೇ ಅವಲಂಬಿಸಿ, ದುರ್ಯೋಧನನಿಗೆ ಈ ರೀತಿ ಹೇಳಿದನು; ಭರತ+ಅನ್ವಾಯದ+ಒಳ್; ಅನ್ವಾಯ/ಅನ್ವಯ=ವಂಶ; ಸಾಪತ್ನ್ಯ= ಅಣ್ಣ ತಮ್ಮಂದಿರ ಮಕ್ಕಳು/ದಾಯಾದಿಗಳು; ಬದ್ಧಮತ್ಸರ=ಕಡುಹಗೆತನ/ ಎಂದೆಂದಿಗೂ ಕೊನೆಗೊಳ್ಳದ ಹಗೆತನ;

**ಭರತಾನ್ವಾಯದೊಳ್ ಅಂದಿನಿಂದುವರೆಗಮ್ ಸಾಪತ್ನ್ಯದೊಳ್ ಬದ್ಧಮತ್ಸರವಿಲ್ಲ**=ಭರತವಂಶದ ರಾಜಕುಮಾರರಲ್ಲಿ ಅಂದಿನಿಂದ ಇಂದಿನವರೆಗೂ ಕಡುಹಗೆತನವಿಲ್ಲ; **ಎಮ್ಮನ್ ಅಕಾರಣಮ್ ಕದಡಿದಯ್**=ನಮ್ಮನ್ನು ವಿನಾಕಾರಣವಾಗಿ ಬಗೆಬಗೆಯ ಕಷ್ಟ ಕೋಟಲೆಗಳಿಗೆ ಗುರಿಮಾಡಿ ನೋಯಿಸಿದೆ; **ಸಾವ್ ಎಯ್ದಿದಯ್**=ಸಾವಿಗೆ ಹತ್ತಿರವಾದೆ; **ನಷ್ಟಸೋದರಮ್ ಆದತ್ತು**= ತಮ್ಮಂದಿರೆಲ್ಲರನ್ನೂ ಕಳೆದುಕೊಂಡೆ; ಎನಗಮ್ ಸ್ವಗೋತ್ರವಧೆಯಪ್ಪ ಆ ಪಾತಕಮ್= ನಮಗೂ ಕೂಡ ಒಂದೇ ಮನೆತನಕ್ಕೆ ಸೇರಿದ ಅಣ್ಣ ತಮ್ಮಂದಿರನ್ನು ಮತ್ತು ನೆಂಟರನ್ನು ಕೊಂದ ಪಾಪ ಬಂದಿತು; **ಕೌರವೇಶ್ವರ, ನೀನ್ ಸಂಧಿಗೆ ಒಡಂಬಡು**=ಕುರುಪತಿಯಾದ ದುರ್ಯೋಧನನೇ, ನೀನು ಈಗಲಾದರೂ ಸಂಧಿಗೆ ಒಪ್ಪಿಗೆಯನ್ನು ನೀಡು; **ಇಂತು ಕೊಳನಮ್ ಪೊಕ್ಕಿರ್ಪುದೇನ್ ತಕ್ಕುದೇ ಎಂಬುದುಮ್**=ಈ ರೀತಿ ಹೇಡಿತನದಿಂದ ಜೀವಗಳ್ಳನಾಗಿ ಕೊಳವನ್ನು ಹೊಕ್ಕಿರುವುದೇನು ಯೋಗ್ಯವಾದುದೇ ಎಂದು ಧರ್ಮರಾಯನು ದುರ್ಯೋಧನನನ್ನು ಕುರಿತು ಶಾಂತರೀತಿಯಲ್ಲಿಯೇ ಹೇಳುತ್ತಿರಲು;

❖

## ನೋಟ–೨೦

# ನೀರೊಳಗಿರ್ದುಮ್ ಬೆಮರ್ತನ್ ಉರಗಪತಾಕನ್

**ನೀರೊಳಗೆ+ಇರ್ದುಮ್**=ವೈಶಂಪಾಯನ ಸರೋವರದ ನೀರಿನಲ್ಲಿ ಅಡಗಿಕೊಂಡಿದ್ದರು; ಬೆಮರ್ತನ್=ಬೆವರಿದನು; **ಉರಗಪತಾಕನ್**= ದುರ್ಯೋಧನ/ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗಿ ಹೊಂದಿದ್ದವನು; **ಆ ನುಡಿಗೆ ಸೈರಿಸದೆ**=ಧರ್ಮರಾಯನು ದುರ್ಯೋಧನನಿಗೆ ಸಂಧಿಯನ್ನು ಮಾಡಿಕೊಳ್ಳುವಂತೆ ಹೇಳುತ್ತಿರುವ ನುಡಿಗಳನ್ನು ಕೇಳುತ್ತಿದ್ದಂತೆಯೇ ಭೀಮನು ತಾಳ್ಮೆಯನ್ನು ಕಳೆದುಕೊಂಡು, ದುರ್ಯೋಧನನನ್ನು ಕೊಲ್ಲುವ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳಲೆಂದು; ಬೂತು=ದೆವ್ವ; ಸರ=ದನಿ; **ಈ ಬೂತು ಎನ್ನ ಸರಮ್ ಕೇಳ್ದೊಡಲ್ಲದೆ ಪೊರಮಡುವನಲ್ಲನ್**=ಈ ದೆವ್ವ ನನ್ನ ದನಿಯನ್ನು ಕೇಳದಿದ್ದರೆ ಹೊರಕ್ಕೆ ಬರುವುದಿಲ್ಲ; **ಇವಂಗೆ ಆನೆ ಬಲ್ಲೆನ್ ಎಂದು**=ಇವನು ಸರೋವರದಿಂದ ಹೊರಕ್ಕೆ ಬರುವಂತೆ ಮಾಡಲು ಏನು ಮಾಡಬೇಕು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ ಎಂದು; ಉದ್ದಾಮ=ಹೆಚ್ಚಾದ/ಅತಿಶಯವಾದ; ಕೋಪ+ ಆಟೋಪ; ಆಟೋಪ=ಅಬ್ಬರ; ವಿರಚಿತ=ನಿರ್ಮಿಸು; ಬದ್ಧಭ್ರುಕುಟಿ= ಹುಬ್ಬುಗಂಟು;

**ಭೀಮಸೇನನ್ ಉದ್ದಾಮ ಕೋಪಾಟೋಪ ವಿರಚಿತ ಬದ್ಧಭ್ರುಕುಟಿಯಾಗಿ**= ಭೀಮಸೇನನು ಹೆಚ್ಚಾದ ಕೋಪದಿಂದ ಅಬ್ಬರಿಸುತ್ತ ಆವೇಶ, ಆಕ್ರೋಶ ಮತ್ತು ಅಸಹ್ಯಭಾವದಿಂದ ಹುಬ್ಬುಗಂಟಿಕ್ಕಿಕೊಂಡು, ದೊಡ್ಡ ದನಿಯಲ್ಲಿ ದುರ್ಯೋಧನನನ್ನು ಕುರಿತು ಈ ರೀತಿ ನುಡಿಯತೊಡಗುತ್ತಾನೆ; ಭವತ್=ನಿನ್ನ; ಅನುಜ=ತಮ್ಮ; ಅರುಣಜಲ=ನೆತ್ತರು/ರಕ್ತ; **ಭವತ್ ಅನುಜನ ಅರುಣಜಲಮನ್**

**ಸವಿನೋಡಿದೆನ್**=ನಿನ್ನ ತಮ್ಮನಾದ ದುಶ್ಯಾಸನನ ನೆತ್ತರಿನ ರುಚಿಯನ್ನು ನೋಡಿದೆನು; ಆನೆ=ನಾನೇ; ಬಲ=ಸೇನೆ; ಜಲನಿಧಿ=ಸಮುದ್ರ/ಕಡಲು; ಬಲಜಲನಿಧಿ=ದೊಡ್ಡ ಸೇನೆ/ಹನ್ನೊಂದು ಅಕ್ಷೋಹಿಣಿ ಸೇನಾಬಲ; **ಆನೆ ನಿನ್ನ ಬಲಜಲನಿಧಿಯಮ್ ಸವಿನೋಡಿದೆನ್**=ನಾನೇ ನಿನ್ನ ಕುರುಸೇನಾಬಲವೆಲ್ಲವನ್ನು ಸದೆಬಡಿದೆನು; ತವೆ=ಸಂಪೂರ್ಣವಾಗಿ; ಪೀರ್ದು=ಕುಡಿದು; **ಈ ಕೊಳನಮ್ ತವೆ ಪೀರ್ದು ಬಳಿಕ್ಕೆ, ನಿನ್ನ ಸವಿಯಮ್ ನೋಳ್ಪೆನ್**=ಈ ಕೊಳದ ನೀರೆಲ್ಲವನ್ನೂ ಸಂಪೂರ್ಣವಾಗಿ ಕುಡಿದು ಬಳಿಕ ನಿನ್ನನ್ನು ಸದೆಬಡಿದು ಕೊಂದು, ನಿನ್ನ ನೆತ್ತರಿನ ರುಚಿಯನ್ನು ಸವಿಯುತ್ತೇನೆ; ಮರುಳು=ಹುಚ್ಚ/ತಿಳಿಗೇಡಿ; ಸ್ವರ=ದನಿ; ಅಣ್ಮು= ಶಕ್ತನಾಗು; ಸಮರ+ಆಕರ; ಸಮರ=ಯುದ್ಧ/ಕಾಳೆಗ; ಆಕರ=ನೆಲೆ; ಸಮರಾಕರ= ರಣರಂಗ/ಯುದ್ಧಭೂಮಿ; ಕಮಲ+ಆಕರ; ಕಮಲಾಕರ=ಸರೋವರ;

**ಎಲವೊ ಮರುಳೆ, ಎನ್ನ ಸ್ವರಮಮ್ ಕೇಳಲ್ಕೆ... ಉಗ್ರರೂಪಮನ್ ನಿಂದು ನೋಡಲ್ ಅಣ್ಮದೆ ಸಮರಾಕರಮಮ್ ಬಿಸುಟ್ಟು, ಕಮಲಾಕರಮಮ್ ಪೊಕ್ಕು ಬರ್ದುಕಲ್ ಬಗೆವಾ**= ಎಲವೋ ತಿಳಿಗೇಡಿ, ನನ್ನ ದನಿಯನ್ನು ಕೇಳುವುದಕ್ಕೆ ನನ್ನ ಉಗ್ರರೂಪವನ್ನು ನಿಂತು ನೋಡುವುದಕ್ಕೆ ಶಕ್ತನಾಗದೆ ರಣರಂಗವನ್ನು ತ್ಯಜಿಸಿ ಸರೋವರವನ್ನು ಹೊಕ್ಕು ಜೀವವನ್ನು ಉಳಿಸಿಕೊಳ್ಳಬೇಕೆಂದು ಹೊಂಚು ಹಾಕಿರುವೆಯಾ: **ಅಕ್ಕಟಾ**=ಅಯ್ಯೋ; ಅಚ್ಚರಿ/ಆತಂಕ/ಸಂಕಟ ಉಂಟಾದಾಗ ಉಚ್ಚರಿಸುವ ಉದ್ಗಾರ ಸೂಚಕ ಪದ; ಕೋಡು=ಚಳಿಯಿಂದ ನಡುಗು/ತಣ್ಣಗಾಗು; ಸೇಡು=ಮುದುರಿಕೊಳ್ಳುವುದು/ಮುದುಡುವಿಕೆ; **ಜಲದೊಳ್ ಮೀನ್ ಇರ್ಪವೊಲ್ ನೀನ್ ಕೊಳದೊಳೆ ಮುಳಿಗಿರ್ದು... ಅಕ್ಕಟಾ ಕೋಡ ಸೇಡಿಂಗೆ ಒಳಗಾದಯ್**= ನೀರಿನಲ್ಲಿ ಮೀನು ಇರುವಂತೆ ಕೊಳದಲ್ಲಿ ಅಡಗಿಕೊಂಡಿದ್ದು... ಅಯ್ಯೋ ಚಳಿಯಿಂದ ಗಡಗಡನೆ ನಡುಗುತ್ತ ಮುದುಡಿಕೊಂಡು ಕುಗ್ಗಿಹೋಗಿರುವೆ; ಇದು ನಿನ್ನ ದುರ್ಯೋಧನ ಪೆಸರ್ಗೆ ಲಜ್ಜಾಕರಮ್=ಚಕ್ರವರ್ತಿಯಾಗಿರುವ ನಿನಗೆ ಇಂತಹ ಸ್ಥಿತಿಯು ಬಂದೊದಗಿರುವುದು **"ಯಾರಿಂದಲೂ ಗೆಲ್ಲಲು ಅಸಾಧ್ಯನಾದವನೇ ದುರ್ಯೋಧನ"** ಎಂಬ ಹೆಸರಿಗೆ ನಾಚಿಕೆಗೇಡಲ್ಲವೇ; ಅಳವು=ಶಕ್ತಿ; **ನಿನ್ನ ಅಳವಮ್ ತೋರಿದಯ್**=ನಿನ್ನ ಶಕ್ತಿಯ ಮಿತಿ ಏನೆಂಬುದನ್ನು ತೋರಿಸಿದೆ. ನೀನು ನಿಜಕ್ಕೂ ನಿನ್ನ ಹೆಸರಿಗೆ ತಕ್ಕಂತೆ ದುರ್ಯೋಧನನಲ್ಲ;

**ಚಿಃ... ಸತ್ತರ್ ಏನ್ ಪುಟ್ಟರೆ**=ಚಿಃ... ಸತ್ತವರು ಮತ್ತೆ ಹುಟ್ಟಿಬರುವುದಿಲ್ಲವೇನು; ಜಗತ್ತಿನ ಕೆಲವು ಜನಸಮುದಾಯದಲ್ಲಿ ಮಾನವ ಜೀವಿಯು ಸಾವನ್ನಪ್ಪಿದ ನಂತರ, ಈ ಜನ್ಮದಲ್ಲಿ ಮಾಡಿರುವ ಪಾಪಪುಣ್ಯದ ಕೆಲಸಗಳಿಗೆ ತಕ್ಕಂತೆ ಮರುಹುಟ್ಟು ಪಡೆಯುತ್ತಾರೆ ಎಂಬ ನಂಬಿಕೆಯಿದೆ; ಕೌರವೇಂದ್ರ+ಅಚಳ+ ವಜ್ರನ್; ಅಚಲ=ಪರ್ವತ; ವಜ್ರನ್= ವಜ್ರಾಯುಧವಾಗಿರುವವನು; ಮಥನ=

ಕಡೆಯುವುದು; ಉದ್ಭೀಕರನ್=ಭಯಂಕರನಾದವನು; ಈಗಳ್ **ಕೌರವೇಂದ್ರಾ ಚಳವಜ್ರನ್ ಕುರುಕುಲಮಥನ ಉದ್ಭೀಕರನ್ ಭೀಮಸೇನನ್ ಬಂದನ್**=ಈಗ ಕುರುಪತಿಯೆಂಬ ಪರ್ವತವನ್ನು ಸೀಳುವ ವಜ್ರಾಯುಧನೂ ಕುರುಕುಲವನ್ನು ಕಡೆದು ನಾಶಮಾಡುವ ಭಯಂಕರನೂ ಆದ ಭೀಮಸೇನನು ಬಂದಿದ್ದಾನೆ; ಕಯ್ದು+ಕೊಳ್; ಕಯ್ದು=ಆಯುಧ; **ಪೊರಮಡು ನೀನ್ ಕಯ್ದುಗೊಳ್**= ವೈಶಂಪಾಯನ ಸರೋವರದಿಂದ ಈ ಕೂಡಲೇ ಹೊರಕ್ಕೆ ಬಾ. ನೀನು ಆಯುಧವನ್ನು ಹಿಡಿದುಕೊ; ಹರಿ=ಕೃಷ್ಣ; ಅವಗಡಿಸು=ಕಡೆಗಣಿಸು/ಅಡ್ಡಗಟ್ಟು;

**ಹರಿ ಸಂಧಾನಕ್ಕೆ ವಂದಂದು ಅವಗಡಿಸಿದ ಅಹಂಕಾರಮ್ ಎಲ್ಲಿತ್ತೊ**= ಕುರುಕ್ಷೇತ್ರ ಯುದ್ಧಕ್ಕೆ ಮೊದಲು ಕೃಷ್ಣನು ಸಂಧಿಯನ್ನು ಮಾಡಿಸಲೆಂದು ನಿನ್ನ ರಾಜಸಭೆಗೆ ಬಂದು ಪಾಂಡವರಿಗೆ ಅರ್ಧ ರಾಜ್ಯವನ್ನು ನೀಡಲಾಗದಿದ್ದರೆ, ಅಯ್ದು ಊರುಗಳನ್ನಾದರೂ ಕೊಡು ಎಂದು ಕೇಳಿಕೊಂಡಾಗ, ಅವನ ಮಾತನ್ನು ಕಡೆಗಣಿಸಿದ್ದಲ್ಲದೇ, ಸಂಧಾನಕಾರನಾಗಿ ಬಂದಿದ್ದ ಕೃಷ್ಣನನ್ನು ಸೆರೆಹಿಡಿದು ಕಂಬಕ್ಕೆ ಕಟ್ಟಿಹಾಕಲು ಯೋಜಿಸಿದ್ದೆಯಲ್ಲ... ಆಗ ತೋರಿಸಿದ್ದ ಆ ನಿನ್ನ ಅಹಂಕಾರ ಈಗ ಎಲ್ಲಿ ಹೋಯಿತು; ಕೃಷ್ಣಾ+ಅಂಬರ; ಕೃಷ್ಣಾ=ದ್ರೌಪದಿ; ಅಂಬರ=ಬಟ್ಟೆ/ಸೀರೆ; ಕೇಶ+ಆಕೃಷ್ಟಿ+ಅಮ್; ಕೇಶ=ತಲೆಗೂದಲು; ಆಕೃಷ್ಟಿ=ಹಿಡಿದೆಳೆಯುವುದು; ಮದ=ಸೊಕ್ಕು; **ಕೃಷ್ಣಾಂಬರ ಕೇಶಾಕೃಷ್ಟಿಯಮ್ ಮಾಡಿಸಿದ ಮದಮ್ ಅದೆಲ್ಲಿತ್ತೊ**= ನಮ್ಮ ಅಣ್ಣ ಧರ್ಮರಾಯನೊಡನೆ ಆಡಿದ ಜೂಜಿನಲ್ಲಿ ದ್ರೌಪದಿಯನ್ನು ಗೆದ್ದ ನೀನು, ನಿನ್ನ ತಮ್ಮ ದುಶ್ಯಾಸನನು ರಾಣಿವಾಸಕ್ಕೆ ಕಳುಹಿಸಿ ದ್ರೌಪದಿಯನ್ನು ಮುಡಿ ಎಳೆದು ರಾಜಸಭೆಗೆ ಕರೆತಂದು, ಆಕೆಯ ಸೀರೆಯನ್ನು ಸುಲಿಸಿದಾಗ ತೋರಿಸಿದ ಆ ನಿನ್ನ ಸೊಕ್ಕು ಈಗ ಏನಾಯಿತೊ; ಕೌಂತೇಯರು=ಕುಂತಿಯ ಮಕ್ಕಳು; ಮಚ್ಚರ=ಹೊಟ್ಟೆಕಿಚ್ಚು; ಕಾಂತಾರ=ಕಾಡು/ಅಡವಿ; ತಿರ್ರನೆ ತಿರಿಪು=ಒಂದೇ ಸಮನೆ ಅಲೆಯುವಂತೆ ಮಾಡು/ಒಂದು ಕಡೆ ನೆಲೆಯೂರದಂತೆ ಅಲೆಸುವುದು;

**ಕೌಂತೇಯರಮ್ ಮಚ್ಚರದಿಮ್ ಕಾಂತಾರದೊಳ್ ತಿರ್ರನೆ ತಿರಿಪಿದ ಸೊರ್ಕು ಈಗಳ್ ಏನಾದುದು ಎಂದು**=ಇಂದ್ರಪ್ರಸ್ಥ ನಗರದಲ್ಲಿ ರಾಜ್ಯಭಾರ ಮಾಡುತ್ತಿದ್ದ ಪಾಂಡವರ ಸಿರಿಸಂಪದವನ್ನು ಕಂಡು ಹೊಟ್ಟೆಕಿಚ್ಚಿನಿಂದ ಅವರನ್ನು ಕಪಟತನದ ಜೂಜಿನಿಂದ ಸೋಲಿಸಿ, ಹನ್ನೆರಡು ವರುಶಗಳ ಕಾಲ ಅಡವಿಯಲ್ಲಿ ತಿರ್ರನೆ ತಿರುಗುವಂತೆ ಮಾಡಿದ ಆ ನಿನ್ನ ಸೊಕ್ಕು ಈಗ ಏನಾಯಿತೊ ಎಂದು; ಕುರುವಂಶ+ಅಧೀಶನನ್; ಅಧೀಶ=ಒಡೆಯ; ಕುರುವಂಶಾಧೀಶನ್= ದುರ್ಯೋಧನ; ಅದಟನ್=ಪರಾಕ್ರಮಿ/ವೀರ; ಉದ್ದಾಮ=ಉತ್ತಮವಾದ; **ಆ ಕುರುವಂಶಾಧೀಶನನ್ ಅದಟನ್ ಭೀಮನ್ ಉದ್ದಾಮ ಭೀಮನ್ ಮೂದಲಿಸಿದನ್**=ಆ ಕುರುವಂಶದ ಒಡೆಯನಾದ ದುರ್ಯೋಧನನನ್ನು

ಪರಾಕ್ರಮಿಯಾದ ಭೀಮ... ಉತ್ತಮನಾದ ಭೀಮನು ಮೂದಲಿಸಿದನು; **ಎಂದು ಮತ್ತಮ್ ಇರದೆ**=ಈ ರೀತಿ ಅನೇಕ ಮಾತುಗಳ ಮೂಲಕ ಭೀಮನು ದುರ್ಯೋಧನನನ್ನು ಟೀಕಿಸಿ, ಹಂಗಿಸಿ, ಅಣಕದ ನುಡಿಗಳ ಮೂಲಕ ಚುಚ್ಚಿ ಚುಚ್ಚಿ ಮಾನಸಿಕವಾಗಿ ಗಾಸಿಗೊಳಿಸಿದರೂ ಸುಮ್ಮನಾಗದೆ, ಮತ್ತೆ ಮತ್ತೆ ದೊಡ್ಡ ದನಿಯಲ್ಲಿ ಅಬ್ಬರಿಸಿತೊಡಗಿದನು; ಅಜಾಂಡ=ಬ್ರಹ್ಮಾಂಡ;

**ಅಜಾಂಡಮ್ ಒಡೆಯಲ್**=ಬ್ರಹ್ಮಾಂಡ ಒಡೆಯುವಂತೆ; **ಕುಲಗಿರಿ ಕೆಡೆಯಲ್**= ದೊಡ್ಡ ಬೆಟ್ಟಗಳು ಕೆಡೆದು ನೆಲದ ಮೇಲೆ ಉರುಳಿ ಬೀಳುವಂತೆ; ಧಾತ್ರಿ= ಭೂಮಂಡಲ; ಪಿಳಿ=ಬಿರಿ/ಸೀಳು; **ಧಾತ್ರಿ ಪಿಳಿಯಲ್ಕೆ**=ಭೂಮಿ ಬಿರಿಯುವಂತೆ; ದಿವಿಜ=ದೇವತೆ; ಒಡರಿಸು=ಉಂಟಾಗು/ತೊಡಗು; **ದಿವಿಜರ್ ನಡುಗಲ್ಕೆ ಒಡರಿಸುವಿನಮ್**=ದೇವತೆಗಳಿಗೆ ನಡುಕ ಉಂಟಾಗುವಂತೆ; ವೈರಿ=ಶತ್ರು/ಹಗೆ; **ಜಟಾಸುರ ಹಿಡಿಂಬ ಬಕವೈರಿ ಸಿಂಹನಾದಮ್ ಗೆಯ್ದನ್**=ಜಟಾಸುರ, ಹಿಡಿಂಬ ಮತ್ತು ಬಕನೆಂಬ ಮೂರುಮಂದಿ ರಕ್ಕಸರಿಗೆ ಹಗೆಯಾದ ಭೀಮನು ಸಿಂಹಗರ್ಜನೆಯನ್ನು ಮಾಡಿದನು; ಅನಿಲತನೂಜ=ವಾಯುಪುತ್ರ ಭೀಮ; ಅಳ್ಕಿ=ಹೆದರಿಕೆಯಿಂದ ಬೆಚ್ಚಿಬಿದ್ದು; ಪವ್ವನೆ ಪಾರು=ಇದ್ದಕ್ಕಿದ್ದಂತೆಯೇ ಮೇಲಕ್ಕೆ ಹಾರುವುದು; ತತ್=ಆ; ವಿಹಗ=ಹಕ್ಕಿ;ಕುಳ=ಗುಂಪು/ಸಮೂಹ;

**ಅನಿಲತನೂಜನ ಸಿಂಹಧ್ವನಿಯಮ್ ಕೇಳ್ದು ಅಳ್ಕಿ... ತತ್ ಸರೋವರದ ಎರ್ದೆ ಪವ್ವನೆ ಪಾರುವಂತೆ... ಕೊಳದೊಳಿರ್ದ ತತ್ ವಿಹಗಕುಳಮ್ ಅನಾಕುಲಮ್ ಪಾರಿದುವು**=ಭೀಮನ ಸಿಂಹಗರ್ಜನೆಯನ್ನು ಕೇಳಿ, ಹೆದರಿಕೆಯಿಂದ ಸರೋವರದ ಎದೆಯೊಡೆದು ಇದ್ದಕ್ಕಿದ್ದಂತೆಯೇ ಮೇಲಕ್ಕೆ ಚಿಮ್ಮುವಂತೆ ಕೊಳದೊಳಗೆ ಇದ್ದ ಹಕ್ಕಿಗಳೆಲ್ಲವೂ ಬೆಚ್ಚಿಬಿದ್ದು ಒಮ್ಮೆಲೆಯೇ ಮೇಲಕ್ಕೆ ಹಾರಿದುವು; ಭೀಮ+ಕೋಪ+ ಅನಳನ್; ಅನಳ=ಬೆಂಕಿ; ಅಳುರ್=ಹರಡಿ/ವ್ಯಾಪಿಸಿ; ಕೊಳೆ=ಆವರಿಸು/ತಾಗು; **ಭೀಮಕೋಪಾನಳನ್ ಅಳುರ್ದು ಕೊಳೆ**=ಭೀಮನ ಕೋಪದ ಬೆಂಕಿಯು ಎಲ್ಲೆಡೆಯಲ್ಲಿಯೂ ಆವರಿಸಿಕೊಳ್ಳುತ್ತಿರಲು; ಎಯ್ದೆ=ಚೆನ್ನಾಗಿ; ಎಸರ್+ಕಾಯ್ದಿಟ್ಟ; ಎಸರ್=ಅಡುಗೆಯನ್ನು ಮಾಡುವಾಗ ಕಾಯಿಪಲ್ಲೆ ಇಲ್ಲವೇ ಅಕ್ಕಿಯನ್ನು ಬೇಯಿಸಲು ಇಲ್ಲವೇ ಸಾರನ್ನು ಮಾಡುವಾಗ ಬಳಸುವ ನೀರು; ಮರುಗು= ಚೆನ್ನಾಗಿ ಕುದಿ/ಬಹಳ ಬಿಸಿಯಾಗುವುದು; **ಎಯ್ದೆ ಎಸರ್ಗಾಯ್ದಿಟ್ಟ ತೆರದೆ... ಆಗಳ್ ಕೊಳನ ಜಲಮ್ ಮರುಗಿದುದು**=ಅಡುಗೆಗೆಂದು ಒಲೆಯ ಮೇಲಿಟ್ಟು ಕಾಯಿಸುತ್ತಿರುವ ನೀರು ಕೊತಕೊತ ಕುದಿಯುವಂತೆ ಆಗ ಕೊಳದಲ್ಲಿ ನೀರು ಕುದಿಯತೊಡಗಿತು; ಕೂಳ್=ಅನ್ನ/ಆಹಾರ; ಅನಿಮಿಷ=ಮೀನು; ತತಿ=ಸಮೂಹ/ಗುಂಪು;

**ಕಾಯ್ದು ಎಸರೊಳೆ ಕೂಳ್ ಕುದಿವಂತೆ ಅನಿಮಿಷ ತತಿಗಳ್ ಕುದಿದುವು**= ಕೊತಕೊತನೆ ಕುದಿಯುತ್ತಿರುವ ನೀರಿನೊಳಗೆ ಅನ್ನ ಬೇಯುವಂತೆ ಕೊಳದೊಳಗಿನ ಮೀನುಗಳು ಬೇಯಲುತೊಡಗಿದವು; ಅಸು=ಜೀವ; ಅಸುಂಗೊಳೆ=ಸಾವನ್ನಪ್ಪಲು; ಗೋಳುಂಡೆ=ಅತಿಯಾದ ಸಂಕಟ; ಕೂಳ್+ಕುದಿ=ಅನ್ನವನ್ನು ಮಾಡುವಾಗ ಕುದಿಯುವ ನೀರು; **ಅಂತು ಜಲಚರ ಜೀವರಾಶಿಗಳೆಲ್ಲಮ್ ಅಸುಂಗೊಳೆ ಗೋಳುಂಡೆಗೊಳೆ ಕೂಳ್ಗುದಿಗೊಳೆ**=ಆ ರೀತಿಯಲ್ಲಿ ಸರೋವರದ ನೀರಿನಲ್ಲಿದ್ದ ಜೀವರಾಶಿಗಳೆಲ್ಲವೂ ಸಾವಿಗೀಡಾಗಲು ಅತಿಯಾದ ಸಂಕಟದಿಂದ ನರಳಲು... ಅನ್ನಕ್ಕಿಟ್ಟ ನೀರು ಕುದಿಯುವಂತೆ ತೀವ್ರವಾದ ತಳಮಳಕ್ಕೆ ಬಲಿಯಾಗಲು; ಮಹಾ+ಉತ್ತುಂಗ; ಉತ್ತುಂಗ= ಉನ್ನತವಾದ/ಎತ್ತರವಾದ; ಸಿಂಹಕೇತನ=ಸಿಂಹದ ಚಿತ್ರವನ್ನು ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ಭೀಮ; **ಮಹೋತ್ತುಂಗ ಸಿಂಹಕೇತನನ್ ಸಿಂಹನಾದಮ್ ಗೆಯ್ಯೆ**=ಮಹಾಬಲನಾದ ಭೀಮನು ಸಿಂಹದಂತೆ ಗರ್ಜನೆಯನ್ನು ಮಾಡಲು; ಕೋಪ+ಅರುಣ; ನೇತ್ರ=ಕಣ್ಣು; ಉರಗಪತಾಕನ್=ದುರ್ಯೋಧನ;

**ಕೋಪಾರುಣ ನೇತ್ರನ್ ಉರಗಪತಾಕನ್**=ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ದುರ್ಯೋಧನನು; ರವ=ಶಬ್ದ/ದನಿ; ನಿರ್ಜಿತ=ಯಾರಿಂದಲೂ ಜಯಿಸಲಾಗದ; ಕಂಠೀರವ=ಸಿಂಹ; ನಿರಸ್ತ=ಹೊರಹೊಮ್ಮಿದ; ಘನ=ಮೋಡ; ಘನರವ=ಸಿಡಿಲು; **ಆ ರವಮನ್... ನಿರ್ಜಿತ ಕಂಠೀರವ ರವಮನ್... ನಿರಸ್ತ ಘನರವಮನ್ ಕೇಳ್ದು**=ಭೀಮನಾದವನ್ನು ಯಾರಿಂದಲೂ ಜಯಿಸಲಾಗದ ಸಿಂಹ ಗರ್ಜನೆಯನ್ನು... ಮೋಡಗಳ ಡಿಕ್ಕಿಯಿಂದ ಹೊರಹೊಮ್ಮುವ ಸಿಡಲಿನಬ್ಬರದ ದನಿಯನ್ನು... ದುರ್ಯೋಧನನು ಕೇಳಿ; **ಆ ನೀರೊಳಗಿರ್ದುಮ್ ಬೆಮರ್ತನ್**= ವೈಶಂಪಾಯನ ಸರೋವರದ ನೀರಿನೊಳಗಿದ್ದರೂ ದುರ್ಯೋಧನನು ಬೆವರಿದನು; ತಣ್ಣನೆಯ ನೀರಿನಲ್ಲಿದ್ದರೂ ಭೀಮನ ಅಬ್ಬರದ ದನಿಯನ್ನು ಕೇಳಿ ದುರ್ಯೋಧನನ ಮಯ್ ಮನಸ್ಸು ಆವೇಶ, ಆಕ್ರೋಶ ಮತ್ತು ಕೋಪತಾಪ ಗಳಿಂದ ಕೆರಳಿತು. ತಡೆಯಲಾಗದ ಭಾವೋದ್ರೇಕದಿಂದಾಗಿ ದುರ್ಯೋಧನನ ಮಯ್ ಬೆವರತೊಡಗಿತು; ಉಮ್ಮಳ=ಸೆಕೆ/ಬಿಸಿ/ತಾಪ;

**ಅಂತು ಬೆಮರ್ತು ಉಮ್ಮಳಿಸಿ ಸೈರಿಸಲಾರದೆ**=ಆ ರೀತಿಯಲ್ಲಿ ಬೆವರುತ್ತ, ಮಯ್ ಮನದಲ್ಲಿ ಉಂಟಾದ ತೀವ್ರತರವಾದ ಕೋಪೋದ್ರೇಕವನ್ನು ತಡೆದು ಕೊಳ್ಳಲಾಗದೆ; **ಜಲಮಂತ್ರಮನ್ ಏನುಮನ್ ಬಗೆಯದೆ**=ಜಲಮಂತ್ರವನ್ನು ಬಿಡದೆ ಮಾಡುತ್ತಿರಬೇಕು ಎಂಬ ಎಚ್ಚರದ ಕಡೆಗೆ ಗಮನಕೊಡದೆ; ಭೀಷ್ಮರ ಹಿತನುಡಿಯಂತೆ ಕುರುಕ್ಷೇತ್ರ ರಣರಂಗದಲ್ಲಿ ಚದುರಿಹೋಗಿರುವ ಕೃಪ,

ಕೃತವರ್ಮ, ಅಶ್ವತ್ಥಾಮ ಮತ್ತು ತೀರ್ಥಯಾತ್ರೆಯಿಂದ ನಾಳೆ ಬರಲಿರುವ ಬಲರಾಮನನ್ನು ಜತೆಗೂಡಿ ಪಾಂಡವರೊಡನೆ ನಾಳೆ ಯುದ್ಧವನ್ನು ಮುಂದುವರಿಸಬೇಕೆಂದು, ಕಾಲಹರಣಕ್ಕಾಗಿ ಹದಿನೆಂಟನೆಯ ದಿನದ ಈ ನಡುಹಗಲಿನಲ್ಲಿ ಸರೋವರವನ್ನು ಹೊಕ್ಕು ಜಲಮಂತ್ರವನ್ನು ಉಚ್ಚರಿಸುತ್ತಿದ್ದ ದುರ್ಯೋಧನನು, ಈಗ ಭೀಮನ ನುಡಿಗಳಿಂದ ಕೋಪೋದ್ರೇಕಗೊಂಡು ಜಲಮಂತ್ರವನ್ನು ಉಚ್ಚರಿಸುವುದನ್ನೇ ಕಡೆಗಣಿಸಿದ್ದಾನೆ;

**ಕೋಪೋದ್ರೇಕಮನೆ ಬಗೆದು**=ಕೋಪೋದ್ರೇಕದಿಂದ ಕೆರಳಿ, ಎದುರಾಳಿಯಾದ ಭೀಮನೊಡನೆ ಹೋರಾಡುವುದೇ ಮುಖ್ಯವೆಂದು ಭಾವಿಸಿ, ತನ್ನ ಮನದಲ್ಲಿ ಈ ರೀತಿ ಹೇಳಿಕೊಳ್ಳುತ್ತಾನೆ; ಕೂರದರ್=ಹಗೆಗಳು; ಸಲಿಲ=ನೀರು; ಸ್ತಂಭನ=ನಿಲ್ಲಿಸುವಿಕೆ; ಅಪೇಕ್ಷಿಸು=ಬಯಸು; **ಕೂರದರ್ ಎನ್ನನ್ ಸಲಿಲಸ್ತಂಭನ ವಿದ್ಯಾಬಲಮನ್ ಅಪೇಕ್ಷಿಸಿದನ್ ಎನ್ನದೆ**=ಹಗೆಗಳು ನನ್ನನ್ನು ಜಲಮಂತ್ರವಿದ್ಯೆಯಿಂದ ಕುರುಕ್ಷೇತ್ರ ರಣರಂಗದಲ್ಲಿ ಹೋರಾಡಲು ಮತ್ತಷ್ಟು ಬಲವನ್ನು ಒಗ್ಗೂಡಿಸುತ್ತಿದ್ದಾನೆ ಎಂದು ಭಾವಿಸದೆ; **ಉರಗಪತಾಕನ್ ಬಲಹಾನಿಯಾಗೆ ಕೊಳದೊಳಗೆ ಉಳಿದಿರ್ದಪನ್ ಎಂದು ನಗರೆ**= ದುರ್ಯೋಧನನು ಸೇನಾಬಲವೆಲ್ಲವನ್ನೂ ಕಳೆದುಕೊಂಡಿದ್ದರಿಂದ, ತನ್ನೊಬ್ಬನ ಜೀವವನ್ನು ಉಳಿಸಿಕೊಳ್ಳಲೆಂದು ಕೊಳದೊಳಗೆ ಅಡಗಿಕೊಂಡಿದ್ದಾನೆ ಎಂದು ಹೇಳಿಕೊಂಡು ನಗದೇ ಇರುತ್ತಾರೆಯೇ; **ಕುಲದ ಛಲದ ಚಾಗಮನ್ ಆಂತುಮ್ ಪುರುಷರ ಗಣನೆಗೆ ವಂದ ಎನ್ನನ್**=ಕುಲದ ಚಲದ ತ್ಯಾಗದ ನಡೆನುಡಿಯನ್ನು ಹೊಂದಿ, ಜಗತ್ತಿನಲ್ಲಿ ಶೂರರ ಮನ್ನಣೆಗೆ ಪಾತ್ರನಾಗಿರುವ ನನ್ನನ್ನು; ತೃಣ=ಹುಲ್ಲು; ಲಘು=ಹಗುರವಾದ;

**ತೃಣವತ್ ಲಘುಜೀವಿತ ರಕ್ಷಣಾರ್ಥದಿಮ್ ಗುಣಹಾನಿಯಾಗಿ ಆನೆ ಲಘು ಮಾಡುವೆನೇ**=ಹುಲ್ಲುಕಡ್ಡಿಯಂತೆ ಹಗುರವಾದ ಈ ಜೀವವನ್ನು ಉಳಿಸಿಕೊಳ್ಳು ವುದಕ್ಕಾಗಿ ಗುಣಹೀನನಾಗಿ, ನಾನೇ ನನ್ನನ್ನು ಹಗುರಗೊಳಿಸಿಕೊಳ್ಳುತ್ತೇನೆಯೇ; ನನ್ನ ವ್ಯಕ್ತಿತ್ವಕ್ಕೆ ನಾನೇ ಹಾನಿ ಮಾಡಿಕೊಳ್ಳುತ್ತೇನೆಯೇ; ಕ್ಷೋಭ=ಉದ್ವಿಗ್ನತೆ/ ಕದಡುವಿಕೆ; ಚಿತ್ತಕೋಭ=ಮಾನಸಿಕ ತಳಮಳ; **ಮುನಿವನ್ ಮೂದಲಿಸಿಯುಮ್ ಇನ್ ಎನಿತುಮ್ ಪೊಕ್ಕಿರ್ಪೆನ್ ಎಂದು ಚಿತ್ತಕ್ಷೋಭಮ್ ತನಗಾಗೆ**=ಭೀಮನು ನನ್ನ ಬಗ್ಗೆ ಕೋಪಿಸಿಕೊಂಡಿದ್ದಾನೆ ಕಟುನುಡಿಗಳಿಂದ ಹಂಗಿಸುತ್ತಿದ್ದಾನೆ... ಹೀಗಿದ್ದರೂ ಇನ್ನೆಷ್ಟು ಕಾಲ ಹಗೆಯನ್ನು ಸಹಿಸಿಕೊಂಡು ಸರೋವರದಲ್ಲಿ ಅಡಗಿರಲಿ ಎಂದು ದುರ್ಯೋಧನನು ಮಾನಸಿಕವಾಗಿ ಉದ್ವಿಗ್ನಗೊಂಡು; ನಿನಾದ=ಶಬ್ದ/ದನಿ; **ಜಲಚರಕ್ಷೋಭ ನಿನಾದಮ್ ಪೊಕ್ಕು ಪೊಣ್ಮೆ**=ಸರೋವರದ ಜಲಚರಗಳೆಲ್ಲವೂ

ಉದ್ವಿಗ್ನಗೊಂಡು ಮಾಡುತ್ತಿರುವ ಚೀತ್ಕಾರ ಹೊರಹೊಮ್ಮುತ್ತಿರಲು; ವಿಭು=ರಾಜ; ವಿಕ್ಷೋಭನ್=ಉದ್ವಿಗ್ನಗೊಂಡವನು;

**ವಿಭುವಿಕ್ಷೋಭನ್**=ರಾಜ ದುರ್ಯೋಧನನು ಕೋಪೋದ್ರೇಕದಿಂದ ಕೆರಳಿ ಉದ್ವಿಗ್ನಗೊಂಡನು; **ಆಗಳ್ ಆ ಜಲಸ್ತಂಭಮಂತ್ರಮೆಲ್ಲಮ್ ಪರಿಣಾಮ ರಮಣೀಯಮಾಗದೆ ಕಿಡೆಯುಮ್**=ಆಗ ಜಲದೊಳಗೆ ಅಡಗಿಕೊಳ್ಳಲು ಉಚ್ಚರಿಸುತ್ತಿದ್ದ ಮಂತ್ರವೆಲ್ಲವೂ ಒಳ್ಳೆಯ ಪರಿಣಾಮವನ್ನುಂಟುಮಾಡದೆ ಹಾಳಾಗಲು; **ಅಹಂಕಾರಮ್ ಕಿಡದೆ**=ಚಲದಂಕಮಲ್ಲನಾದ ದುರ್ಯೋಧನನ ಅಹಂಕಾರ ತುಸುವಾದರೂ ಕಡಿಮೆಯಾಗದೆ; ನಿಜ=ತನ್ನ; ಮಕುಟ=ಕಿರೀಟ; ಸ್ಫುರತ್=ಹೊಳೆಯುವ/ಮಿನುಗುವ; ಮಣಿ=ಮುತ್ತು, ರತ್ನ, ವಜ್ರ ಮುಂತಾದುವು/ ಬೆಲೆ ಬಾಳುವ ಹರಳು; ಗಣ=ಸಮೂಹ;ಛವಿ=ಹೊಳಪು/ಕಾಂತಿ; ಪಂಕಜ= ತಾವರೆ; ಪಂಕಜವನ=ಸರೋವರ; ಸುರ=ದೇವತೆ; ಸುರಚಾಪ=ಏಳು ಬಣ್ಣಗಳಿಂದ ಕೂಡಿದ ಕಾಮನ ಬಿಲ್ಲು; ಮನಂಗೊಳಿಸೆ=ಮನಸ್ಸನ್ನು ಸೆಳೆಯುವಂತಿರಲು;

**ನಿಜ ಮಕುಟ ಸ್ಫುರತ್ ಮಣಿಗಣಚ್ಛವಿಯಿಮ್ ಪಂಕಜವನದೊಳ್ ಸುರಚಾಪಲೀಲೆ ಮನಂಗೊಳಿಸೆ**=ದುರ್ಯೋಧನನ ಕಿರೀಟದಲ್ಲಿ ಮಿನುಗುತ್ತಿರುವ ಮಣಿಗಳ ಕಾಂತಿಯಿಂದ ವೈಶಂಪಾಯನ ಸರೋವರದಲ್ಲಿ ಮೂಡಿದ ಕಾಮನ ಬಿಲ್ಲಿನ ಕಾಂತಿಯು ಮನವನ್ನು ಸೆಳೆಯುವಂತಿರಲು; ಒಗೆದು+ಇರ್ದ; ಒಗೆ=ಹುಟ್ಟು/ಆವರಿಸಿಕೊಂಡು/ಹರಡಿಕೊಂಡು; ನೀರಜ=ತಾವರೆ/ಕಮಲ; ಕರಂಗು=ಕಪ್ಪಾಗು; ಭುಜಯುಗ=ಎರಡು ತೋಳುಗಳು; ತೋರಣ+ಆಯಿತ; ಆಯಿತ=ನೀಳವಾದ/ಉದ್ದನೆಯ; ಪರಿಘ=ಉಕ್ಕು/ಕಬ್ಬಿಣದ ಆಯುದ; ಕಮಲ+ ಆಕರ; ಆಕರ=ಮೂಲ ನೆಲೆ; ಕಮಲಾಕರ=ಸರೋವರ; ಫಣಿ=ಹಾವು; ಫಣಿರಾಜ=ಆದಿಶೇಷ; ಫಣಿರಾಜಕೇತನ=ದುರ್ಯೋಧನ; ಕಮಲಾಕರ= ಕಮಲದ ಹೂವುಗಳಿಂದ ತುಂಬಿರುವ ಸರೋವರ;

**ತನ್ನಯ ಮೇಗೆ ಒಗೆದಿರ್ದ ನೀಲನೀರ ಜವನದಿಮ್ ಕರಂಗಿ, ಆ ಭುಜಯುಗ ತೋರಣಾಯಿತ ಗದಾಪರಿಘನ್ ಫಣಿರಾಜಕೇತನನ್ ಕಮಲಾಕರದಿಮ್ ಆಗಳ್ ಪೊರಮಟ್ಟನ್**=ತನ್ನ ಮಯ್ ಮೇಲೆ ಆವರಿಸಿಕೊಂಡಿದ್ದ ನೀಲಿತಾವರೆಯ ಕಾಂಡಗಳಿಂದಾಗಿ ದುರ್ಯೋಧನನ ಎರಡು ತೋಳುಗಳು ಕಪ್ಪನೆಯ ಬಣ್ಣದ ಎರಡು ತೋರಣಗಳಂತೆ ಕಂಗೊಳಿಸುತ್ತಿರಲು, ದುರ್ಯೋಧನನು ಗದಾಯುಧವನ್ನು ಹಿಡಿದುಕೊಂಡು ವೈಶಂಪಾಯನ ಸರೋವರದಿಂದ ಆಗ ಹೊರಕ್ಕೆ ಬಂದನು.

❖

## ನೋಟ–೨೧

# ಭೀಮ ದುರ್ಯೋಧನರ ಮಾತಿನ ಯುದ್ಧ

ರಸೆ+ಇಮ್; ರಸೆ=ಪಾತಾಳ; ಇಮ್=ಇಂದ; ಕಾಲ+ಅಗ್ನಿ+ರುದ್ರನ್; ಕಾಲ=ಪ್ರಳಯ; ರುದ್ರ=ಶಿವ; ಕಾಲಾಗ್ನಿರುದ್ರ=ಇಡೀ ಜಗತ್ತನ್ನೇ ಸರ್ವನಾಶ ಮಾಡುವುದಕ್ಕಾಗಿ ಶಿವನು ತಳೆಯುವ ಕೋಪೋದ್ರೇಕದ ರೂಪ; **ರಸೆಯಿಮ್ ಕಾಲಾಗ್ನಿರುದ್ರನ್ ಪೊರಮಡುವವೊಲ್**=ಪಾತಾಳ ಲೋಕದಿಂದ ಪ್ರಳಯಕಾಲದ ಬೆಂಕಿಯಂತಹ ಕೋಪೋದ್ರೇಕದ ರುದ್ರನು ಹೊರಬರುವಂತೆ; ಗರ್ವ+ಅಲಂಕೃತನ್; ಅಲಂಕೃತನ್=ಸಿಂಗರಿಸಿದವನು; ತೊಟ್ಟನೆ ಕೊಳೆ=ಇದ್ದಕ್ಕಿದ್ದಂತೆಯೇ ಕಂಡುಬರುವಂತೆ/ಮೂಡಿಬರುವಂತೆ; **ಅಂತು ಆ ಸರೋಮಧ್ಯದಿಮ್ ಸಾಹಸ ಗರ್ವಾಲಂಕೃತನ್ ತೊಟ್ಟನೆ ಕೊಳೆ ಪೊರಮಟ್ಟು**=ಆ ರೀತಿಯಲ್ಲಿ ಆ ಸರೋವರದ ನಡುವೆಯಿಂದ ಪರಾಕ್ರಮಿಯೂ ಸೊಕ್ಕಿನಿಂದ ಮೆರೆಯುತ್ತಿರುವವನೂ ಆದ ದುರ್ಯೋಧನನು ಇದ್ದಕ್ಕಿದ್ದಂತೆಯೇ ಹೊರಬಂದು; ಎಣ್+ದೆಸೆ; ಎಣ್ದೆಸೆ=ಎಂಟು ದಿಕ್ಕು;

**ಎಲ್ಲಿದನ್ ಭೀಮನ್ ಎಂದು ಎಣ್ದೆಸೆಯಮ್ ನೋಡುತ್ತೆ**=ಎಲ್ಲಿದ್ದಾನೆ ಭೀಮ ಎಂದು ಎಂಟು ದಿಕ್ಕುಗಳ ಕಡೆಯೂ ನೋಡುತ್ತ; ಮತ್ತೆ=ಪುನಹ; ಅದ್ಭುತ ನಟ=ಮಹಾ ನಟ/ತಾಂಡವ ನಾಟ್ಯವನ್ನು ಮಾಡುವ ಶಿವ; ನಿಟಿಲ+ಆಲೋಲ; ನಿಟಿಲ=ಹಣೆ; ಆಲೋಲ=ಅಲುಗಾಡುವ/ಹೊರಳುವ; ಕೀಲ+ಅಕ್ಷಿ+ವೊಲ್; ಕೀಲ=ಬೆಂಕಿ; ಅಕ್ಷಿ=ಕಣ್ಣು; ವೊಲ್=ಅಂತೆ/ಹಾಗೆ; **ಅದ್ಭುತ ನಟ ನಿಟಿಲಾಲೋಲ**

**ಕೀಲಾಕ್ಷಿವೊಲ್**=ತಾಂಡವ ನಾಟ್ಯವನ್ನು ಮಾಡುವ ಮುಕ್ಕಣ್ಣನಾದ ಶಿವನ ಹಣೆಯಲ್ಲಿ ಹೊರಳುವ ಕೆಂಗಣ್ಣಿನಂತೆ; ಕೋಪ+ಆರಕ್ತ; ಆರಕ್ತ=ಪೂರ್ಣವಾಗಿ ಕೆಂಪಾದ; ದಳ್ಳಿಸೆ=ಉರಿಯಲು/ದಗದಗಿಸಲು; **ಕೋಪಾರಕ್ತ ನೇತ್ರನ್ ದಳ್ಳಿಸೆ**= ಕೋಪದಿಂದ ಕೆಂಗಣ್ಣನಾದ ದುರ್ಯೋಧನನು ಆಕ್ರೋಶದಿಂದ ಕೆರಳಿ; ಧಾರ್ತರಾಷ್ಟ್ರನ್=ಧೃತರಾಷ್ಟ್ರನ ಮಗ ದುರ್ಯೋಧನ; ನಿಜ=ತನ್ನ; **ಧಾರ್ತರಾಷ್ಟ್ರನ್ ನಿಜ ಭುಜಗದೆಯಮ್ ತೂಗಿದನ್**=ದುರ್ಯೋಧನನು ತನ್ನ ಹೆಗಲ ಮೇಲಿದ್ದ ಗದೆಯನ್ನು ತೆಗೆದುಕೊಂಡು ಅತ್ತಿತ್ತ ಬೀಸಿದನು;

**ಅಂತು ನಿಜಭುಜಗದೆಯಮ್ ತೂಗುತ್ತುಮಿರ್ದ**=ಆ ರೀತಿ ದುರ್ಯೋಧನನು ತನ್ನ ಹೆಗಲಿನ ಮೇಲಿದ್ದ ಗದೆಯನ್ನು ತೆಗೆದುಕೊಂಡು ಆವೇಶ ಮತ್ತು ಆಕ್ರೋಶದಿಂದ ಅತ್ತಿತ್ತ ಬೀಸುತ್ತಿರುವುದನ್ನು; ದಂದಶೂಕ+ಪತಾಕನ; ದಂದಶೂಕ=ಹಾವು; **ದಂದಶೂಕಪತಾಕನ್**=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ದುರ್ಯೋಧನ; ಸೆರಗು+ಇಲ್ಲದ; ಸೆರಗು=ನೆರವು/ಸಹಾಯ; ಸೆರಗಿಲ್ಲದ=ನೆರವಿಲ್ಲದ/ಸಹಾಯವಿಲ್ಲದ; ಮೆಯ್+ಕಲಿತನಕ್ಕೆ; ಮೆಯ್ಗಲಿತನ=ಪರಾಕ್ರಮ/ಶೂರತನ; **ದಂದಶೂಕಪತಾಕನ ಸೆರಗಿಲ್ಲದ ಮೆಯ್ಗಲಿತನಕ್ಕೆ ಮೆಚ್ಚಿ ತಲೆಯಮ್ ತೂಗಿ**=ಯಾರ ನೆರವಿಲ್ಲದಿದ್ದರೂ ಏಕಾಂಗಿಯಾಗಿಯೇ ಹೋರಾಡಲು ಸಿದ್ಧನಾಗಿರುವ ದುರ್ಯೋಧನನ ಶೂರತನಕ್ಕೆ ಭೀಮನು ಮೆಚ್ಚುಗೆಯಿಂದ ತಲೆಯನ್ನು ತೂಗುತ್ತ; ನಿರ್ಜಿತ= ಯಾರಿಂದಲೂ ಜಯಿಸಲು ಅಸಾಧ್ಯನಾದವನು;; ನಿಖಿಲ=ಎಲ್ಲ/ಸಮಸ್ತ;

**ನಿಜ ಭುಜಪ್ರತಾಪ ನಿರ್ಜಿತ ನಿಖಿಲ ಭೀಮಸೇನನ್ ಕೌರವನ ಇದಿರ್ಗೆ ವಂದು**= ತನ್ನ ಬಾಹುಬಲದ ಪರಾಕ್ರಮದಿಂದಲೇ ಯಾರಿಂದಲೂ ಜಯಿಸಲು ಅಸಾಧ್ಯನಾದ ಮಹಾ ಬಲಶಾಲಿ ಭೀಮಸೇನನು ದುರ್ಯೋಧನನ ಮುಂದಕ್ಕೆ ಬಂದು; ಅನುಜ=ತಮ್ಮ; ಅರುಣ+ಜಲಮ್+ಅಮ್; ಅರುಣ=ಕೆಂಪು ಬಣ್ಣ; ಅರುಣಜಲ=ರಕ್ತ/ನೆತ್ತರು; ತವೆ=ಹೆಚ್ಚಾಗಿ/ಅತಿಶಯವಾಗಿ; **ನಿನ್ನ ಅನುಜನ ಅರುಣಜಲಮಮ್ ಮುನ್ನಮ್ ತವೆ ಪೀರ್ದೊಡೆ**=ನಿನ್ನ ತಮ್ಮನಾದ ದುಶ್ಶಾಸನನ ನೆತ್ತರನ್ನು ನಾನು ಈ ಮೊದಲು ಸಂಪೂರ್ಣವಾಗಿ ಕುಡಿದರೆ; **ಅಂಜಿ ನೀನ್ ಕೊಳನಮ್ ಪುಗೆ**= ಹೆದರಿಕೊಂಡು ನೀನು ಜೀವವನ್ನು ಉಳಿಸಿಕೊಳ್ಳಲೆಂದು ಕೊಳವನ್ನು ಹೊಕ್ಕರೆ; ಶೌರ್ಯ+ಉನ್ನತನ್; ಉನ್ನತನ್= ಉತ್ತಮನಾದವನು/ ಎತ್ತರವಾಗಿರುವವನು; **ಶೌರ್ಯೋನ್ನತನ್**=ಶೂರತನದಲ್ಲಿ ಎಲ್ಲರಿಗಿಂತ ಮಿಗಿಲಾದವನು; ಮಲ್ಲ=ಜಟ್ಟಿ;

ಕೌರವಮಲ್ಲ=ಕುರುವಂಶದವರೆಲ್ಲರನ್ನು ಸೋಲಿಸುವ ಜಟ್ಟಿ/ಭೀಮ;

ಇರ್ದನ್+ಅಲ್ತೆ; ನೆರ=ಮರ್ಮಸ್ಥಾನ/ಅಂತರಂಗ; **ಬೆನ್ನನೆ ಬಂದಾತನ್ ಶೌರ್ಯೋನ್ನತನ್ ಈ ಕೌರವಮಲ್ಲನ್ ಇರ್ದನಲ್ತೆ ಎಂದು ನೆರನನ್ ಉಂಟುಮಾಡಿ ಮೂದಲಿಸಿ ನುಡಿಯೆ**=ನಿನ್ನನ್ನು ಬೆನ್ನಟ್ಟಿ ಬಂದಿರುವ ಮಹಾಶೂರನಾದ ಈ ಭೀಮಸೇನನು ಇದ್ದಾನಲ್ಲವೇ... ನೀನು ಎಲ್ಲಿಯೇ ಅಡಗಿಕೊಂಡಿದ್ದರೂ ಭೀಮಸೇನನು ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ದುರ್ಯೋಧನನ ಮರ್ಮಸ್ಥಾನಕ್ಕೆ ತಾಕುವಂತೆ ಹೀಯಾಳಿಸಿ ನುಡಿಯಲು; ಕ್ರೋಧ+ಅನಲನ್+ ಆಗಿ; ಅನಲ=ಬೆಂಕಿ; **ದುರ್ಯೋಧನನ್ ಅತಿ ಕ್ರೋಧಾನಲನಾಗಿ**= ದುರ್ಯೋಧನನು ಅತಿಯಾದ ಕೋಪೋದ್ರೇಕದಿಂದ ಕೆರಳಿ ಕೆಂಡವಾಗಿ; ಸೂನು=ಮಗ; ಯಮರಾಜಪ್ರಿಯಸೂನು=ಯಮರಾಜನ ಪ್ರೀತಿಯ ಮಗ/ ಧರ್ಮರಾಯ; ಧನ್ವ=ಬಿಲ್ಲು; ಗಾಂಡೀವಧನ್ವಂಗ=ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವವನು/ಅರ್ಜುನ; ಯಮಳರ್=ಅವಳಿ ಜವಳಿ ಮಕ್ಕಳು/ನಕುಲ ಮತ್ತು ಸಹದೇವ; ಕೃಷ್ಣೆ=ದ್ರೌಪದಿ; ಕಚ=ತಲೆಗೂದಲು; ಕಚಪ್ರಾರಂಭ= ತಲೆಗೂದಲಿನ ಬುಡ/ತಲೆಯ ಹಿಂಬದಿಯ ಮುಡಿ; ಬಾಹುವಿಕ್ರಮಿ= ಅಪಾರವಾದ ತೋಳ್ಬಲವುಳ್ಳ ವೀರ; ತೆಗೆವ+ಅಂದು; ತೆಗೆ=ಎಳೆ/ಜಗ್ಗು; ಅಂದು=ಆಗ/ಆ ದಿನ/ಆ ಸಮಯದಲ್ಲಿ;

**ಯಮರಾಜಪ್ರಿಯಸೂನುಗಮ್... ನಿನಗಮ್... ಆ ಗಾಂಡೀವಧನ್ವಂಗಮ್ ಆ ಯಮಳರ್ಗಮ್ ಪ್ರಿಯೆಯಪ್ಪ ಕೃಷ್ಣೆಯ ಕಚಪ್ರಾರಂಭಮಮ್ ಬಾಹುವಿಕ್ರಮಿ ದುಶ್ಶಾಸನನ್ ಎನ್ನ ಮುಂದೆ ತೆಗವಂದು ಎಲ್ಲಿರ್ದೆ**=ಬಾಹುಬಲದಲ್ಲಿ ಶೂರನಾದ ನನ್ನ ತಮ್ಮ ದುಶ್ಶಾಸನನು ಧರ್ಮರಾಯನಿಗೂ, ನಿನಗೂ, ಆ ಅರ್ಜುನನಿಗೂ, ಆ ನಕುಲ ಸಹದೇವರಿಗೂ ಪ್ರಿಯಪತ್ನಿಯಾಗಿರುವ ದ್ರೌಪದಿಯ ಮುಡಿಯನ್ನು ಹಿಡಿದು ರಾಜಸಭೆಗೆ ಎಳೆತಂದು, ನನ್ನ ಮುಂದೆ ಸೀರೆಯನ್ನು ಸುಲಿಯುವಾಗ ನೀನು ಎಲ್ಲಿದ್ದೆ ಏನು ಮಾಡುತ್ತಿದ್ದೆ; ಗಂಡಗರ್ವ=ಪರಾಕ್ರಮದ ಸೊಕ್ಕು; **ಈ ಗಂಡಗರ್ವಮುಮ್ ಅಂದು ಎಲ್ಲಿಗೆ ಪೋಯ್ತು**=ಈಗ ಮಹಾಪರಾಕ್ರಮಿಯಂತೆ ಸೊಕ್ಕಿನ ನುಡಿಯನ್ನಾಡುತ್ತಿರುವೆಯಲ್ಲಾ ಅಂದು ನಿನ್ನ ಒಲವಿನ ಹೆಂಡತಿಯ ಮಾನಹರಣವಾಗುತ್ತಿದ್ದಾಗ ನಿನ್ನ ಈ ಪರಾಕ್ರಮ ಎಲ್ಲಿಗೆ ಹೋಗಿತ್ತು; ಷಂಡ=ನಪುಂಸಕ/ಹೇಡಿ;

**ಷಂಡ, ನಿನಗೆ ಇಂದು ಈ ಗಂಡನ್ ಆರ್ ಮಾಡಿದರ್**=ಹೇಡಿಯಾದ ಭೀಮನೇ, ನಿನಗೆ ಇಂದು ಈ ಗಂಡಸುತನವನ್ನು ಯಾರು ಕೊಟ್ಟರು; ಅಸುರ=ರಕ್ಕಸ/ಹಿರಣ್ಯಾಕ್ಷ; ವಸುಧಾತಳ=ಭೂಮಂಡಲ; ರಸಾತಳ=ಪಾತಾಳ; ಉಯ್=ತೆಗೆದುಕೊಂಡು ಹೋಗು; ಹರಿ=ವಿಷ್ಣು; **ಅಸುರನ್ ವಸುಧಾತಳಮನ್ ರಸಾತಳಕ್ಕೆ ಉಯ್ಯೆ... ಹರಿ ತರಲ್ ಪೊಕ್ಕವೊಲ್... ಈ ವಸುಮತಿಯನ್ ಎತ್ತಿ ತರೆ**

**ಕೊಳನಮ್ ಪೊಕ್ಕೆನ್**=ಅಂದು ತ್ರೇತಾಯುಗದಲ್ಲಿ ಹಿರಣ್ಯಾಕ್ಷನೆಂಬ ರಕ್ಕಸನು ಭೂಮಂಡಲವನ್ನು ಅಪಹರಿಸಿ, ಪಾತಾಳಲೋಕಕ್ಕೆ ತೆಗೆದುಕೊಂಡು ಹೋದಾಗ, ವಿಷ್ಣು ಪರಮಾತ್ಮನು ಹಂದಿಯ ರೂಪನ್ನು ತಳೆದು, ಪಾತಾಳದ ಆಳದಲ್ಲಿದ್ದ ಭೂಮಂಡಲವನ್ನು ಎತ್ತಿ ತರಲೆಂದು ಕಡಲನ್ನು ಹೊಕ್ಕಂತೆ, ನಿಮ್ಮ ವಶವಾಗುತ್ತಿರುವ ಈ ನನ್ನ ರಾಜ್ಯವನ್ನು ಕಾಪಾಡಿಕೊಳ್ಳಲೆಂದು ಈ ಸರೋವರವನ್ನು ಹೊಕ್ಕಿದ್ದೆನು;

**ನಿನ್ನಯ ದೆಸೆಯಿಮ್ ಅಂಜಿ ಪೊಕ್ಕೆನೆ**=ನಿನ್ನ ಕಡೆಯಿಂದ ಅಪಾಯವಾಗುವುದೆಂದು ಹೆದರಿಕೊಂಡು ಸರೋವರವನ್ನು ಹೊಕ್ಕಿದ್ದೇನೆಯೇ; ಜೀವವನ್ನು ಉಳಿಸಿಕೊಳ್ಳುವುದಕ್ಕಲ್ಲ ರಾಜ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಸರೋವನ್ನು ಹೊಕ್ಕಿದ್ದೆನು; ನಾಳ್ಕಡೆ+ಕಳೆದು; ನಾಡು+ಕಡೆ; ಕಡೆ=ದಿಕ್ಕು; ನಾಳ್ಕಡೆ=ನಾಡಿನ ದಿಕ್ಕುಗಳು; ಕಳೆದು=ದಾಟಿ; ಉರೆ=ಅತಿಶಯವಾಗಿ; ಬಿಳ್ಕೆ= ಒಂದು ಬಗೆಯ ಕಾಡುಮರ ಮತ್ತು ಅದರ ಹಣ್ಣು; ಅಡಗು=ಮರೆಯಾಗು; **ನಾಳ್ಕಡೆಗಳೆದು ಉರೆ ಬೇರಮ್ ಬಿಳ್ಕೆಯುಮನ್ ತಿಂದು ನೀಮುಮ್ ವನದೊಳ್ ಅಡಗಿರೆ**=ನಾಡಿನಿಂದ ಹೊರಹಾಕಿಸಿಕೊಂಡು ಕಾಡಿನಲ್ಲಿ ತಿನ್ನುವುದಕ್ಕೆ ಅನ್ನವಿಲ್ಲದೆ ಗೆಡ್ಡೆಗೆಣಸುಗಳನ್ನು ಮತ್ತು ಕಾಡಿನ ಮರಗಳ ಹಣ್ಣುಗಳನ್ನು ತಿಂದು ಕಾಡಿನಲ್ಲಿ ಅಡಗಿದ್ದ ನಿಮಗೆ; ನೀಳ್ಕರಿಸಿ ನಿಂದು=ತಲೆಯೆತ್ತಿ ನಿಂತುಕೊಂಡು/ಗರ್ವದಿಂದ ನಿಂತುಕೊಂಡು; ಬಿರುದು=ಪ್ರಶಸ್ತಿ; ಬೀರ=ಕಲಿತನ/ ಪರಾಕ್ರಮ; ಕಮ್ಮೈಸು=ಸೊಗಸಾಗಿಸು/ ಚೆಂದಕಾಣಿಸು/ಮೆರೆಯುವುದು; **ಈಗಳ್ ನೀಳ್ಕರಿಸಿ ನಿಂದುಮ್ ಬಿರುದುಮಮ್ ಬೀರಮುಮಮ್ ಪೇಳ್ ಕಮ್ಮೈಸುವರೆ**=ಈಗ ಸೊಕ್ಕಿನಿಂದ ತಲೆಯೆತ್ತಿ ನಿಂತು ಬಿರುದುಗಳನ್ನು ಹೇಳಿಕೊಳ್ಳುತ್ತ ಶೂರತನದ ಮಾತುಗಳನ್ನಾಡುತ್ತ ಮೆರೆಯುತ್ತಾರೆಯೇ... ನೀನೇ ಹೇಳು... ಅಂದು ಅಪಮಾನದಿಂದ ಕುಗ್ಗಿ ಬಾಳುತ್ತಿದ್ದವರು ಇಂದು ಹೀಗೆ ಮೆರೆಯಬಹುದೇ; ಪುಟ್ಟ=ಮರದ ಸವುಟು; ಸಟ್ಟುಗ=ಸವುಟು; ಅಡು=ಅಡುಗೆ ಮಾಡು/ಬೇಯಿಸು/ ಪಾಕಮಾಡು; ಬೋನಮ್+ಇಟ್ಟು; ಬೋನ=ಅನ್ನ/ಆಹಾರ;

**ಪುಟ್ಟಮ್ ಸಟ್ಟುಗಮನ್ ಕೊಂಡು ಅಟ್ಟಾರಿಸಿ ಬೋನಮಿಟ್ಟು ಬಂದೆಯೊ**= ಅಲ್ಲೆ ಸವಟುಗಳನ್ನು ಹಿಡಿದುಕೊಂಡು ಬಿಸಿಬಿಸಿ ಅಡುಗೆಯನ್ನು ಮಾಡಿ ಸಿದ್ಧಪಡಿಸಿ, ಅನ್ನಪಾನಗಳನ್ನು ಇತರರಿಗೆ ಉಣಬಡಿಸಿ ಬಂದಿರುವೆಯೋ; ಒಟ್ಟೈಸು= ಆಕ್ರಮಣ ಮಾಡು/ಮುತ್ತು/ಗುಂಪುಗೂಡು; ತೊಟ್ಟನೆ ಕೊಳೆ=ಇದ್ದಕ್ಕಿದ್ದಂತೆಯೇ; **ಗದೆಗೊಂಡು ಒಟ್ಟೈಸಿ ಕಾದುವಂತುಟು ತೊಟ್ಟನೆ ಕೊಳೆ ನಿನಗೆ ಗಂಡಗರ್ವಮುಮ್ ಆಯ್ತೇ**=ಗದೆಯನ್ನು ಹಿಡಿದುಕೊಂಡು ಆಕ್ರಮಣಮಾಡಿ ಹೋರಾಡಬೇಕೆಂಬ

ಶೂರತನದ ಸೊಕ್ಕು ನಿನಗೆ ಇದ್ದಕ್ಕಿದ್ದಂತೆಯೇ ಬಂದಿತೇ; ಎಸರನ್+ಇಡುವ; ಎಸರು=ಅಡುಗೆಯನ್ನು ಮಾಡುವುದಕ್ಕಾಗಿ ಕುದಿಯಲು ಇಡುವ ನೀರು; ಕರ್ಚು=ತೊಳೆಯುವಿಕೆ; ಬೆಸನ=ಕೆಲಸ; **ಎಸರನಿಡುವ... ಅಕ್ಕಿ ಕರ್ಚುವ ಬೆಸನಮ್**= ಅಡುಗೆಯನ್ನು ಮಾಡುವುದಕ್ಕಾಗಿ ಒಲೆಯ ಮೇಲೆ ನೀರನ್ನು ಇಡುವ, ಅಕ್ಕಿಯನ್ನು ತೊಳೆಯುವ ಕೆಲಸ; ಕಯ್ಗೆ+ಎರೆವ; ಎರೆ=ಹಾಕು/ಹೊಯ್ಯು/ಸುರಿ; ಕಂಚು=ಕಂಚಿನ ಲೋಹದ ತಟ್ಟೆ, ಲೋಟ ಮತ್ತು ಇತರ ವಸ್ತುಗಳು;

**ಕಯ್ಗೆರೆವ... ಕಂಚು ಕರ್ಚುವ ಬೆಸನಮ್**=ಉಣಬಂದವರ ಕಯ್ಯಿಗೆ ನೀರನ್ನು ಹೊಯ್ಯುವ, ಅಡುಗೆ ಮಾಡಿದ ಕಂಚಿನ ಪಾತ್ರೆಗಳನ್ನು ಮತ್ತು ಉಂಡ ತಟ್ಟೆ ಲೋಟಗಳನ್ನು ತೊಳೆಯುವ ಕೆಲಸ; ಮತ್ಸ್ಯ=ಇದು ಒಂದು ದೇಶದ ಹೆಸರು; ಮತ್ಸ್ಯನ=ಮತ್ಸ್ಯ ದೇಶದ ಅರಸನಾದ ವಿರಾಟರಾಯನ; ಬಾಣಸಿಗ= ಅಡುಗೆಯವನು; ಮತ್ಸ್ಯನ ಬಾಣಸಿಗ=ಭೀಮಸೇನ. ಪಾಂಡವರು ಹನ್ನೆರಡು ವರುಶ ವನವಾಸವನ್ನು ಮುಗಿಸಿದ ನಂತರ, ಜೂಜಾಟದ ಕರಾರಿನಂತೆ ಒಂದು ವರುಶ ಅಜ್ಞಾತವಾಸವನ್ನು ಕಳೆಯಲೆಂದು ಮತ್ಸ್ಯದೇಶದ ರಾಜನ ವಿರಾಟರಾಯನ ಅರಮನೆಯಲ್ಲಿ ಧರ್ಮರಾಯನು ಕಂಕ ಭಟ್ಟನಾಗಿಯೂ, ಭೀಮನು ವಲಲ ಎಂಬ ಹೆಸರಿನಲ್ಲಿ ಬಾಣಸಿಗನಾಗಿಯೂ, ಅರ್ಜುನನು ಬೃಹನ್ನಳೆಯ ವೇಷದಲ್ಲಿ ರಾಣಿವಾಸದಲ್ಲಿ ನಾಟ್ಯವನ್ನು ಕಲಿಸುವ ಗುರುವಾಗಿಯೂ, ನಕುಲನು ಗೊಲ್ಲನಾಗಿಯೂ, ಸಹದೇವನು ಕುದುರೆಗಳ ಪಾಲಕನಾಗಿಯೂ, ದ್ರೌಪದಿಯು ರಾಣಿವಾಸದಲ್ಲಿ ದಾಸಿಯಾಗಿಯೂ ಕೆಲಸಕ್ಕೆ ಸೇರುತ್ತಾರೆ; ಮುಟ್ಟಿ ಮೂದಲಿಸಿ=ಮನಸ್ಸಿಗೆ ಗಾಸಿಯಾಗುವಂತೆ ಹೀಯಾಳಿಸಿ/ಹಂಗಿಸಿ;

**ಬೆಸನಲ್ಲದೆ ಮತ್ಸ್ಯನ ಬಾಣಸಿಗಂಗೆ ಆರ್ ಇತ್ತರ್... ಎಲವೊ, ನಿನಗೆ ಈ ಬೆಸನಮ್ ಎಂದು ಮುಟ್ಟಿ ಮೂದಲಿಸಿ ನುಡಿಯೆ**=ಅಡುಗೆಯನ್ನು ಬೇಯಿಸುವ, ಉಣ ಬಡಿಸುವ ಪಾತ್ರೆಗಳನ್ನು ತೊಳೆಯುವ ಬಾಣಸಿಗನ ಕೆಲಸ ಮಾಡುವುದನ್ನು ಬಿಟ್ಟು, ಮತ್ಸ್ಯನ ಬಾಣಸಿಗನಾದ ನಿನಗೆ ರಣರಂಗದಲ್ಲಿ ಹೋರಾಡುವ ಈ ಕೆಲಸವನ್ನು ಯಾರು ಕೊಟ್ಟರೋ ಎಂದು ಭೀಮಸೇನನ ಮನಸ್ಸಿಗೆ ಗಾಸಿಯಾಗುವಂತೆ ದುರ್ಯೋಧನನು ಹಂಗಿಸಿ ನುಡಿಯಲು; **ಭೀಮಸೇನಮ್ ಮುಗುಳ್ನಗೆ ನಕ್ಕು**=ಭೀಮಸೇನನು ದುರ್ಯೋಧನನ ಮೂದಲಿಕೆಯ ಮಾತನ್ನು ಮನಸ್ಸಿಗೆ ಹಾಕಿಕೊಳ್ಳದೇ ಮುಗುಳ್ನಗೆಯನ್ನು ಬೀರುತ್ತ; ನನ್ನಿ=ಸತ್ಯ; ಪಿರಿಯಣ್ಣನ ನನ್ನಿ=ಪಾಂಡವರಲ್ಲಿ ಹಿರಿಯ ಪುತ್ರನಾದ ಧರ್ಮರಾಯನು ಜೂಜಿನ ಆಟದಲ್ಲಿ ಸಕಲ ಸಂಪತ್ತನ್ನು ಸೋತು, ಜೂಜಾಟದ ಪಣದಂತೆ ಹನ್ನೆರಡು ವರುಶ ವನವಾಸ ಮತ್ತು ಒಂದು ವರುಶ ಅಜ್ಞಾತವಾಸದ ಕರಾರಿಗೆ ಬದ್ಧನಾಗಿದ್ದನು. ಅಣ್ಣನಾದ

ಧರ್ಮರಾಯನ ಆ ಮಾತನ್ನು ಉಳಿಸುವುದಕ್ಕಾಗಿಯೇ ದ್ರೌಪದಿಯನ್ನೊಳಗೊಂಡು ಭೀಮ, ಅರ್ಜುನ, ನಕುಲ, ಸಹದೇವರೆಲ್ಲರೂ ಮೂಕರಾಗಿ ನೋವನ್ನು ಉಣ್ಣುತ್ತಿದ್ದರು; ಆದರ=ಪ್ರೀತಿ/ಮರ್ಯಾದೆ/ಗಮನ;

**ಪಿರಿಯಣ್ಣನ ನನ್ನಿಯನ್ ಆದರದಿಮ್ ಕಾಯಲ್ಕೆ ಪೆರರ್ಗೆ ಬಾಣಸುಗೆಯ್ದೆನ್**=ನಮ್ಮ ದೊಡ್ಡ ಅಣ್ಣನಾದ ಧರ್ಮರಾಯನ ಸತ್ಯದ ನಡೆನುಡಿಯನ್ನು ಎಚ್ಚರದಿಂದ ಕಾಯ್ದುಕೊಳ್ಳಬೇಕು ಎಂಬ ಪ್ರೀತಿಯಿಂದ ಬೇರೆಯವರ ಬಳಿಯಲ್ಲಿ ಅಡುಗೆಯ ಕೆಲಸವನ್ನು ಮಾಡಿದೆನು; **ಕುರುವಂಶಜ ಕೇಳ್**=ಕುರುವಂಶದಲ್ಲಿ ಹುಟ್ಟಿರುವ ದುರ್ಯೋಧನನೇ ಕೇಳು; ಮರುಳ್=ದೆವ್ವ/ಪಿಶಾಚಿ; **ನಿನ್ನ ಈ ಶರೀರಮಾಂಸದೊಳೆ ಮರುಳ್ಗೆ ಬಾಣಸುಗೆಯ್ವೆನ್**=ನಿನ್ನನ್ನು ಕೊಂದು, ನಿನ್ನ ಮಯ್ಯಿನ ಮಾಂಸದಿಂದಲೇ ಇಂದು ದೆವ್ವಗಳಿಗೆ ಅಡುಗೆಯನ್ನು ಮಾಡಿ ಉಣಬಡಿಸುತ್ತೇನೆ; **ಪಾಂಡುರಾಜ ಸುತರಮ್**=ಪಾಂಡುರಾಜನ ಮಕ್ಕಳಾದ ನಮ್ಮನ್ನು; ಜತುಗೇಹ=ಅರಗಿನ ಮನೆ; ಅನಲ=ಬೆಂಕಿ; ದಾಹ=ಉರಿ; **ಜತುಗೇಹ ಅನಲದಾಹದಿಮ್**=ಅರಗಿನ ಮನೆಯ ಬೆಂಕಿಯ ಉರಿಯಲ್ಲಿ ಕೊಲ್ಲಲು; ಲಿಪ್ತ=ಬೆರೆಸಿದ; ವಿಶೇಷ=ಹೆಚ್ಚಾದ; ಗುಪ್ತ+ಅನ್ನದಿಮ್;

**ವಿಷ ಲಿಪ್ತ ಆ ವಿಶೇಷ ಗುಪ್ತಾನ್ನದಿಮ್**=ನನ್ನನ್ನು ಕೊಲ್ಲಲೆಂದೇ ರಹಸ್ಯವಾಗಿ ವಿಷವನ್ನು ಬೆರೆಸಿ ಸಿದ್ಧಪಡಿಸಿದ ಅನ್ನದಿಂದ/ವಿಷದ ಲಡ್ಡುಗೆಗಳಿಂದ; ಕೃತಕ=ವಂಚನೆ/ಕಪಟತನ; ದ್ಯೂತ=ಜೂಜು; ವಿನೋದ=ಆಟ; **ಕೃತಕ ದ್ಯೂತ ವಿನೋದದಿಮ್**=ಪಾಂಡವರಾದ ನಮ್ಮನ್ನು ವಂಚಿಸಿ ರಾಜಸಂಪತ್ತೆಲ್ಲವನ್ನೂ ದೋಚಬೇಕೆಂಬ ದುರುದ್ದೇಶದಿಂದ ಏರ್ಪಡಿಸಿದ ಜೂಜಿನ ಪಗಡೆಯಾಟದಿಂದ; ದ್ರುಪದಜಾ=ದ್ರುಪದನ ಮಗಳಾದ ದ್ರೌಪದಿ; ಕೇಶ=ತಲೆಗೂದಲು; ಅಂಬರ=ಬಟ್ಟೆ; ಆಕೃಷ್ಟಿ+ಇಮ್; ಆಕೃಷ್ಟಿ= ಸೆಳೆಯುವಿಕೆ/ ಜಗ್ಗುವಿಕೆ/ಎಳೆಯುವಿಕೆ; **ದ್ರುಪದಜಾ ಕೇಶ ಅಂಬರ ಆಕೃಷ್ಟಿಯಿಮ್**=ನಿನ್ನ ತಮ್ಮನಾದ ದುಶ್ಶಾಸನನಿಂದ ರಾಜಸಭೆಗೆ ದ್ರೌಪದಿಯ ಮುಡಿಯನ್ನು ಹಿಡಿದು ಎಳೆತರಿಸಿ, ಆಕೆಯ ಸೀರೆಯನ್ನು ಸುಲಿದು ಮಾಡಿದ ಅಪಮಾನದಿಂದ; **ಧೃತರಾಷ್ಟ್ರಾತ್ಮಜ ಮುನ್ನಮ್ ಕೊಲಲ್ಕೆ ಒಡ್ಡಿದಯ್**= ದುರ್ಯೋಧನನೇ, ಈ ಮೊದಲು ನಮ್ಮನ್ನು ಅಪಮಾನಪಡಿಸಿ ಕೊಲ್ಲುವುದಕ್ಕೆ ಬಹುಬಗೆಯ ಒಳಸಂಚುಗಳನ್ನು ಹೂಡಿದೆ; ಗತಕಾಲ= ಕಳೆದುಹೋದ ಕಾಲ; ಲಯಕಾಲ=ನಾಶವಾದ ಕಾಲ; ಲಯಕಾಲಮ್+ಆಯ್ತು;

**ಗತಕಾಲಮ್ ಲಯಕಾಲಮಾಯ್ತು**=ನಮ್ಮ ಪಾಲಿನ ಕೆಟ್ಟಕಾಲವು ಈಗ ನಾಶವಾಯಿತು/ಇಲ್ಲವಾಯಿತು; ಗಡಾ=ಕಂಡೆಯಾ/ತಿಳಿದಿರುವೆಯಾ; **ನಿನಗೆ ಇನ್ನು ಅಂತ್ಯಕಾಲಮ್ ಆಯ್ತು ಗಡಾ...ಎಂದು**=ನಿನಗೆ ಇನ್ನು ಕೊನೆಗಾಲ ಬಂದಿತು

ಕಂಡೆಯಾ ಎಂದು; ಉರಗಧ್ವಜ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ ದುರ್ಯೋಧನ; ಮರ್ಮ+ಉದ್ಘಾಟನಮ್; ಮರ್ಮ=ಅಂತರಂಗ/ಮನಸ್ಸು; ಉದ್ಘಾಟನ=ತಪ್ಪನ್ನು ಎತ್ತಿ ಹೇಳು; ಗೆಯ್ದು=ಮಾಡಿ; **ಉರಗಧ್ವಜನನ್ ಮರ್ಮೋದ್ಘಾಟನಮ್ ಗೆಯ್ದು ಮೂದಲಿಸಿದ ಅನಿತರೊಳ್**= ದುರ್ಯೋಧನನ ಮನಸ್ಸನ್ನು ಗಾಸಿಗೊಳಿಸುವಂತೆ ಭೀಮಸೇನನು ಮೂದಲಿಕೆಯ ನುಡಿಗಳನ್ನಾಡುತ್ತಿರುವಾಗಲೇ; **ಉರಗಧ್ವಜನ್ ನಿಂದು ಮುನಿದು ಅನಿಬರ ಮೊಗಮಮ್ ನೋಡಿ**=ದುರ್ಯೋಧನನು ಒಂದೆಡೆ ನಿಂತುಕೊಂಡು ಕೋಪೋದ್ರೇಕದಿಂದ ವೈಶಂಪಾಯನ ಸರೋವರವನ್ನು ಸುತ್ತುವರಿದು ನಿಂತಿದ್ದ ಪಾಂಡವರ ಮತ್ತು ಕೃಷ್ಣನ ಮೊಗವನ್ನು ನೋಡಿ, ಅವರನ್ನು ತನ್ನೊಡನೆ ಯುದ್ಧ ಮಾಡುವುದಕ್ಕೆ ಕರೆಯತೊಡಗಿದನು; ಬಡವು=ಬಲವಿಲ್ಲದವನು/ಕಿರಿದು; ಬಡವುಗಳ್=ಬಲವಿಲ್ಲದವರು/ಕಿರಿಯರು;

**ಮಾದ್ರಿಪುತ್ರರ್ ಇರಲ್ ಇಂತು. ಈ ಬಡವುಗಳ್ ಅವರ್ಗಳ್ ಏಗೆಯ್ದಪರ್**= ಮಾದ್ರಿಪುತ್ರರಾದ ನಕುಲ ಸಹದೇವರು ಸುಮ್ಮನೆ ಇರಲಿ. ಈ ಬಲಹೀನರಾದ ಅವರುಗಳು ಏನನ್ನು ತಾನೆ ಮಾಡಬಲ್ಲರು; ಅವರು ನನ್ನೊಡನೆ ಹೋರಾಡಲು ಸಮಬಲರಲ್ಲ; ಹರಿ=ದೇವೇಂದ್ರ; ಹರಿಸುತ=ದೇವೇಂದ್ರನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವ ಅರ್ಜುನ; ಮೇಣ್=ಇಲ್ಲವೇ; ಬರ್ಕೆ= ಬರಲಿ; **ಧರ್ಮಪುತ್ರನ್ ಭೀಮನ್ ಹರಿಸುತನೊಡನೆ ಬೆರಸಿ ಈಗಳ್ ಈ ಮೂವರುಮ್ ಬರ್ಕೆ ಮೇಣ್ ಅಯ್ವರೆ ಬರ್ಕೆ**=ಧರ್ಮರಾಯನು, ಭೀಮನು, ಅರ್ಜುನನ ಜತೆಗೂಡಿ ಈ ಮೂವರು ಈಗ ನನ್ನೊಡನೆ ಹೋರಾಟಕ್ಕೆ ಬರಲಿ ಇಲ್ಲವೇ ಅಯ್ದು ಮಂದಿಯೂ ಬರಲಿ; ಕೃತಾಂತ+ಆತ್ಮಜ; ಕೃತಾಂತ=ಯಮ; ಆತ್ಮಜ=ಮಗ; ಕೃತಾಂತಾತ್ಮಜ=ಯಮನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವ ಧರ್ಮರಾಯ; ಪವನ=ವಾಯುದೇವ; ಪವನಜ= ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವ ಭೀಮ; ಧನ್ವ=ಬಿಲ್ಲು; ಗಾಂಡೀವಧನ್ವನ್=ಗಾಂಡೀವ ಎಂಬ ಹೆಸರಿನ ಬಿಲ್ಲನ್ನು ಹೊಂದಿರುವವನು/ ಅರ್ಜುನ;

**ಕೃತಾಂತಾತ್ಮಜ ಪವನಜ ಗಾಂಡೀವಧನ್ವರ್ಕಳ್ ಈ ಮೂವರೊಳ್ ಒರ್ಬನ್ ಬರ್ಕೆ**=ಧರ್ಮರಾಯ ಭೀಮ ಅರ್ಜುನ ಈ ಮೂವರಲ್ಲಿ ಒಬ್ಬನು ನನ್ನೊಡನೆ ಕಾದಾಡಲು ಬರಲಿ; ತೊಡರ್=ಸೇರು/ಕೂಡು; **ಮೇಣ್ ಕೃಷ್ಣನ್ ಅನಿಬರೊಳ್ ತೊಡರ್ದು ಬರ್ಕೆ**=ಇಲ್ಲವೇ ಕೃಷ್ಣನು ಅವರೊಡನೆ ಜತೆಗೂಡಿ ನನ್ನೊಡನೆ ಕಾದಾಡಲು ಬರಲಿ; ಎಂತುಮ್=ಹೇಗಾದರೂ ಸರಿಯೇ; ಬನ್ನ=ಸೋಲು;

**ಎಂತುಮ್ ಬನ್ನಮನ್ ಈವೆನ್ ಎನೆ**=ಹೇಗಾದರೂ ಸರಿಯೇ ಪಾಂಡವರಲ್ಲಿ ಮೂರು ಮಂದಿಯೇ ಬರಲಿ ಇಲ್ಲವೇ ಅಯ್ದು ಮಂದಿಯೂ ಜತೆಗೂಡಿ ಬರಲಿ ಇಲ್ಲವೇ ಕೃಷ್ಣನು ಇವರೆಲ್ಲರ ಜತೆಗೂಡಿ ಹೋರಾಟಕ್ಕೆ ಬರಲಿ ಎಲ್ಲರನ್ನೂ ಸದೆಬಡಿದು ಸೋಲುಣಿಸುತ್ತೇನೆ ಎಂದು ದುರ್ಯೋಧನನು ಪರಾಕ್ರಮದಿಂದ ಸವಾಲನ್ನು ಹಾಕಲು; **ಧರ್ಮನಂದನನ್ ಧೃತರಾಷ್ಟನಂದನನ್ ಮುನ್ನ ಗೆಯ್ದ ಅಧರ್ಮಮನ್ ನೆನೆಯದೆ**= ಧರ್ಮರಾಯನು ದುರ್ಯೋಧನನು ಈ ಮೊದಲು ಪಾಂಡವರಾದ ತಮ್ಮೆಲ್ಲರನ್ನೂ ನಾಶಮಾಡಲು ಹೂಡಿದ್ದ ಸಂಚುಗಳು ಮತ್ತು ಕೇಡಿನ ಕೆಲಸಗಳನ್ನು ಈಗ ನೆನೆದುಕೊಳ್ಳದೆ; ನಿರ್ಮಲ=ಪರಿಶುದ್ಧವಾದ/ಒಳ್ಳೆಯ; ಕ್ಷತ್ರ=ಕ್ಷತ್ರಿಯ;

**ನಿರ್ಮಲಕ್ಷತ್ರಧರ್ಮಮನ್ ನೆನೆದು**=ಪರಿಶುದ್ಧವಾದ ಕ್ಷತ್ರಿಯ ಧರ್ಮವನ್ನು ನೆನೆದುಕೊಂಡು; ಸಮರ=ಕಾಳೆಗ/ಯುದ್ಧ; **ಸಮರಮ್ ಆಗದು**=ನಮ್ಮಗಳ ನಡುವೆ ಕಾಳೆಗ ನಡೆಯಬಾರದು; ಶಮ=ನೆಮ್ಮದಿ/ಶಾಂತಿ/ಮನೋನಿಗ್ರಹ; **ಶಮಯುತನಾಗು**=ಮನಸ್ಸಿನಲ್ಲಿರುವ ಕೋಪತಾಪವನ್ನು ತೊರೆದು ಶಾಂತಿಯಿಂದಿರು; ಭೋಗ=ಒಲವು ನಲಿವು ನೆಮ್ಮದಿಯಿಂದ ಬಾಳುವುದು; **ಮಹಾಭೋಗಿಯಾಗು**=ದೊಡ್ಡ ಮಟ್ಟದಲ್ಲಿ ಆನಂದವನ್ನು ಹೊಂದಿ ಬಾಳುವುದು; ನಿನ್ನ+ಆಳ್ವ; ನಿನ್ನಾಳ್ವ=ನಿನ್ನ ಆಳ್ವಿಕೆಗೆ ಈಗ ಒಳಪಟ್ಟಿರುವ; ಮಹೀ=ಭೂಮಂಡಲ; **ನಿನ್ನಾಳ್ವ ಮಹೀಭಾಗಮುಮನ್ ಸಕಲ ಮಹೀಭಾಗಮುಮನ್ ನೀನೆ ಕೊಂಡು ಸುಖಮಿರಲಾಗಾ**=ಈಗ ನೀನು ಆಳುತ್ತಿರುವ ಪ್ರಾಂತ್ಯದ ಜತೆಗೆ ಭೂಮಂಡಲದ ಎಲ್ಲಾ ರಾಜ್ಯಗಳನ್ನು ನೀನೇ ಪಡೆದುಕೊಂಡು ಸುಖವಾಗಿರುವುದಕ್ಕೆ ಆಗುವುದಿಲ್ಲವೇ/ನಮಗೆ ಅರ್ಧ ರಾಜ್ಯವೂ ಬೇಡ... ಅಯ್ದು ಊರುಗಳೂ ಬೇಡ ಎಲ್ಲವನ್ನೂ ನೀನೇ ಆಳುವುದು; ಕ್ಷ್ಮಾ=ಭೂಮಿ; ಕ್ಷ್ಮಾಪಾಲ=ಭೂಮಿಯನ್ನು ಕಾಪಾಡುವವನು/ರಾಜ; ಚೂಡಾಮಣಿ=ತಲೆಯಲ್ಲಿ ತೊಡುವ ರತ್ನದ ಒಡವೆ/ ಉತ್ತಮ ವ್ಯಕ್ತಿ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತದೆ; ಧರಣೀಚಕ್ರ= ಗುಂಡಗಿರುವ ಭೂಮಂಡಲ; ಒಪ್ಪುಗೊಳ್=ಸ್ವೀಕರಿಸು/ ತೆಗೆದುಕೊಳ್ಳು;

**ಕುರುಕುಲಕ್ಷ್ಮಾಪಾಲ ಚೂಡಾಮಣೀ, ಧರಣೀಚಕ್ರಮನ್ ಒಪ್ಪುಗೊಳ್**= ಕುರುಕುಲದ ರಾಜರ ಸಮೂಹದಲ್ಲಿ ಚೂಡಾಮಣಿಯಂತೆ ಕಂಗೊಳಿಸುತ್ತಿರುವ ದುರ್ಯೋಧನನೇ, ಇಡೀ ರಾಜ್ಯವನ್ನು ನಿನ್ನದಾಗಿ ಸ್ವೀಕರಿಸು. ಪಾಂಡವರಾದ ನಮಗೆ ರಾಜ್ಯದಲ್ಲಿ ಪಾಲು ಬೇಕಾಗಿಲ್ಲ; ವಿದ್ವೇಷಮ್+ಅನ್; ವಿದ್ವೇಷ=ಹಗೆತನ; **ವಿದ್ವೇಷಮನ್ ಬಗೆಯದಿರ್**=ಹಗೆತನವನ್ನು ಮುಂದುವರಿಸುವ ಆಲೋಚನೆಯನ್ನು ನಿನ್ನ ಮನಸ್ಸಿನಿಂದ ತೆಗೆದುಹಾಕು; ಆಳ್+ಬೆಸಕೆಯ್ಸಿಕೊಳ್;

ಬೆಸಕೆಯ್=ಹೇಳಿದ ಕೆಲಸವನ್ನು ಮಾಡು; ಬೆಸೆಕೆಯ್ಸಿಕೊಳ್=ಸೇವೆಯನ್ನು ಮಾಡಿಸಿಕೊ; **ನಮ್ಮನ್ ಅಯ್ವರಮ್ ಇನ್ನು ಆಳ್ವೆಸಕೆಯ್ಸಿಕೊಳ್**=ನಮ್ಮ ಅಯ್ದು ಮಂದಿಯಿಂದಲೂ ಇನ್ನು ಮುಂದೆ ಸೇವೆಯನ್ನು ಮಾಡಿಸಿಕೊ; ಕೀಳ್ಪೊಕ್ಕು=ಕೆಟ್ಟ ನಡೆನುಡಿ/ನೀಚತನದ ಕೆಲಸ; **ಕೀಳ್ಪೊಕ್ಕಿನೊಳ್ ನೆನೆಯದಿರ್**=ನೀಚತನದ ಕೆಲಸದಲ್ಲಿ ತೊಡಗುವ ಆಲೋಚನೆಯನ್ನು ಮಾಡಬೇಡ; ಇಂಬುಕೆಯ್= ಒಪ್ಪಿಕೊ/ಸಮ್ಮತಿಸು; ತೊಟ್ಟುಕೊಂಡಿರದೆ ಎಮ್ಮ ಎಂಬುದನ್ ಇಂಬುಕೆಯ್= ಹಗೆತನವನ್ನೇ ಮುಂದುವರಿಸದೆ ನಾವು ಹೇಳುತ್ತಿರುವುದನ್ನು ಒಪ್ಪಿಕೊ; ಒಳ್ಪಿಮ್= ಒಳ್ಳೆಯತನದಿಂದ; ವಿಶ್ರಾಂತಿ=ಬಿಡುವು; ಉಪಶಾಂತಿ= ಸಹನೆ/ತಾಳ್ಮೆ;

**ಮನದೊಳ್ ಒಳ್ಪಿಮ್ ಸೋದರನ್ ಎಂಬಂತು ಶಾಂತಿ ವಿಶ್ರಾಂತಿ ಉಪಶಾಂತಿಯಮ್ ಎನೆ**=ಮನದಲ್ಲಿ ಒಳ್ಳೆಯ ರೀತಿಯಲ್ಲಿ ಆಲೋಚನೆಯನ್ನು ಮಾಡುತ್ತ, ಒಡಹುಟ್ಟಿದ ಸೋದರನೆಂಬಂತೆ ನಮ್ಮೊಡನೆ ಒಲವು ನಲಿವು ನೆಮ್ಮದಿಯಿಂದ ಬಾಳು ಎಂದು ಧರ್ಮರಾಯನು ದುರ್ಯೋಧನನಿಗೆ ಹಿತನುಡಿಗಳನ್ನು ಹೇಳಲು; **ಹರಿಯೆಂದನ್**=ಧರ್ಮರಾಯನ ಹಿತನುಡಿಗಳ ನಂತರ ಕೃಷ್ಣನು ದುರ್ಯೋಧನನನ್ನು ಕುರಿತು ನುಡಿಯುತ್ತಾನೆ; **ದುರ್ಯೋಧನ, ಧರ್ಮತನೂಜನ್ ಒಳ್ಪಿತಮ್ ಪೇಳ್ದಪನ್ ಆತನ ಪೇಳ್ದುದ ಎಸಗಿ ನೀನ್ ಅರಸನಾಗಿ ವಸುಮತಿಯನ್ ಆಳ್ದು ಸುಖಮಿರಲಾಗ ಎಂಬುದುಮ್**= ದುರ್ಯೋಧನನೇ, ಧರ್ಮರಾಯನು ನಿನಗೆ ಒಳ್ಳೆಯದನ್ನು ಹೇಳಿದ್ದಾನೆ. ಅವನು ಹೇಳಿದಂತೆಯೇ ನಡೆದುಕೊಂಡು, ನೀನು ಅರಸನಾಗಿ ಭೂಮಂಡಲವನ್ನು ಆಳುತ್ತ ಸುಖದಿಂದಿರ ಲಾಗದೇ ಎಂದು ಕೃಷ್ಣನು ನುಡಿಯಲು; **ಭೀಮಸೇನನ್ ಇಂತು ಎಂದನ್**= ಭೀಮಸೇನನು ಕೃಷ್ಣನ ಮಾತಿಗೆ ಪ್ರತಿಕ್ರಿಯಿಸುತ್ತ ಈ ರೀತಿ ನುಡಿದನು; ಬಾಡ=ಹಳ್ಳಿ/ ಊರು; ಸಂಧಾನ=ಒಡಂಬಡಿಕೆ/ರಾಜಿ; ಒಲ್ಲದನ್=ಒಪ್ಪದವನು/ ನಿರಾಕರಿಸಿದವನು;

**ನೀನ್ ಅಯ್ದು ಬಾಡದೊಳ್ ಸಂಧಾನಮ್ ಮಾಡಲ್ಕೆ ಪೋದೊಡೆ ಒಲ್ಲದನ್**= ಕೃಷ್ಣನೇ, ನೀನು ಕುರುಕ್ಷೇತ್ರ ಯುದ್ಧಕ್ಕೆ ಮೊದಲು ದುರ್ಯೋಧನನೊಡನೆ ಸಂಧಾನಕ್ಕೆ ಹೋಗಿದ್ದಾಗ, ಪಾಂಡವರಾದ ನಮಗೆ ಅರ್ಧ ರಾಜ್ಯವನ್ನು ಕೊಡಲು ಒಪ್ಪದಿದ್ದರೆ, ಅವರು ನೆಮ್ಮದಿಯಿಂದ ಬಾಳುವುದಕ್ಕೆ ಅಯ್ದು ಊರುಗಳನ್ನಾದರೂ ಕೊಡು ಎಂದು ಕೇಳಿಕೊಂಡಾಗ, ಅದನ್ನೇ ಒಪ್ಪದಿದ್ದವನು; ಮಾನಧನ=ತನ್ನ ನಿಲುವನ್ನೇ ಸರಿಯೆಂದು ನಂಬಿ ಬಾಳುವವನು/ಇತರರಿಗೆ ಯಾವುದೇ ಕಾರಣದಿಂದಲೂ ತಲೆಬಾಗಿ ನಡೆಯದವನು; ಎಯ್ದೆ=ಎಲ್ಲಕ್ಕಿಂತ ಹೆಚ್ಚಾಗಿ; ನಿಜ=ತನ್ನ; ತನುಜ=ಮಗ; ಅನುಜ=ತಮ್ಮ; ಅಳ್ಕು=ಲಯವಾಗು/ಇಲ್ಲವಾಗು;

ಅಳ್ಕಾಡು= ನಾಶವಾಗಲು/ಇಲ್ಲವಾಗಲು; **ಇನ್ನು ಈ ಮಾನಧನನ್ ಎಯ್ದೆ ನಿಜತನುಜ ಅನುಜರ್ ಅಳ್ಕಾಡೆ ಸಂಧಿಯಮ್ ಮಾಡುವನೇ ಎನೆ**=ಇನ್ನು ತನ್ನ ಛಲವನ್ನೇ ಕೊನೆತನಕ ಪಟ್ಟುಹಿಡಿದು ಸಾಧಿಸುವ ಮಾನಧನನಾದ ಈ ದುರ್ಯೋಧನನು ಇದೀಗ ಎಲ್ಲಕ್ಕಿಂತ ಮಿಗಿಲಾಗಿ ಕುರುಕ್ಷೇತ್ರ ಕಾಳೆಗದಲ್ಲಿ ತನ್ನ ಮಕ್ಕಳು ಮತ್ತು ತಮ್ಮಂದಿರೆಲ್ಲರೂ ಸಾವನ್ನಪ್ಪಿರುವಾಗ ಸಂಧಿಯನ್ನು ಮಾಡಿಕೊಳ್ಳುತ್ತಾನೆಯೇ ಎಂದು ಭೀಮನು ನುಡಿಯಲು;

**ದುರ್ಯೋಧನನ್ ಭೀಮಸೇನನ ನುಡಿಯನೆ ಸಮರ್ಥಿಸಿ**= ದುರ್ಯೋಧನನು ಭೀಮಸೇನನು ಆಡಿದ ಮಾತುಗಳನ್ನೇ ಸರಿಯೆಂದು ಹೇಳುತ್ತ, ಕೃಷ್ಣನೊಡನೆ ಈ ರೀತಿ ಹೇಳುತ್ತಾನೆ; ಕಮಲನಾಭ=ಕೃಷ್ಣ; ಇನ=ಸೂರ್ಯ; ಇನತನಯ= ಸೂರ್ಯದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು/ಕರ್ಣ; ನೇರ್ಪು=(ಕೊಲೆಯ) ಸೇಡು/ಮುಯ್ಯಿ; **ಕಮಲನಾಭ, ಇನತನಯನ ನೇರ್ಪಿಂಗೆ ಮುನ್ ಅರ್ಜುನನನ್ ಕೊಲ್ವೆನ್**=ಕೃಷ್ಣನೇ, ಕರ್ಣನ ಕೊಲೆಗೆ ಪ್ರತೀಕಾರವಾಗಿ ಮೊದಲು ಅರ್ಜುನನ್ನು ಕೊಲ್ಲುತ್ತೇನೆ; ಅನಿಲ=ವಾಯು; ಅನಿಲಜ= ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು/ಭೀಮ; **ಎನ್ನ ತಮ್ಮನ ನೇರ್ಪಿಂಗೆ ಅನಿಲಜನನ್ ಕೊಲ್ವೆನ್**=ನನ್ನ ತಮ್ಮ ದುಶ್ಯಾಸನನ ಕೊಲೆಗೆ ಪ್ರತೀಕಾರವಾಗಿ ಭೀಮನನ್ನು ಕೊಲ್ಲುತ್ತೇನೆ; **ನೇರ್ಪಿಂಗೆ ನೇರ್ಪುಗೊಳ್ಳದೆ ಮಾಣೆನ್**=ಕೊಲೆಯ ಸೇಡಿಗೆ ಸೇಡನ್ನು ತೀರಿಸಿಕೊಳ್ಳದೇ ಬಿಡುವುದಿಲ್ಲ; ಈಗ ದುರ್ಯೋಧನನು ಪಾಂಡವರಿಗೆ ಮಾರ್ಗದರ್ಶಕನಾಗಿ ನಿಂತು, ಅವರ ಹಿತವನ್ನು ಕಾಯುತ್ತಿರುವ ಕೃಷ್ಣನ ಬಗ್ಗೆ ತನ್ನ ಆಕ್ರೋಶವನ್ನು ವ್ಯಂಗ್ಯದ ನುಡಿಗಳ ಮೂಲಕ ಹೊರಹೊಮ್ಮಿಸುತ್ತಾನೆ; ಗಡ=ಕಂಡೆಯಾ; ಅಚ್ಚರಿ/ಮೆಚ್ಚುಗೆ/ನಿಂದನೆ/ಹಾಸ್ಯ/ ಸಂಕಟ ಮುಂತಾದ ಭಾವಾವೇಶವನ್ನು ವ್ಯಕ್ತಪಡಿಸುವಾಗ ಬಳಸುವ ಪದ; ಮಧ್ಯಸ್ಥ=ಎದುರಾಳಿಗಳಾದ ಇಬ್ಬರ ನಡುವಣ ಸಮಸ್ಯೆಯನ್ನು ಒಡಂಬಡಿಕೆಯ ಮೂಲಕ ಪರಿಹರಿಸುವವನು/ರಾಜಿ ಮಾಡುವವನು/ಸಂಧಾನಕಾರ;

**ತಾನ್ ಗಡ ಮಧ್ಯಸ್ಥನ್**=ಈ ಕೃಷ್ಣನೊಬ್ಬ ಸಂಧಾನಕಾರ ಕಂಡೆಯಾ; ನುಡಿವನ್ ಗಡ=ಈ ಕೃಷ್ಣನು ಸಂಧಾನದ ಮಾತುಗಳನ್ನಾಡುತ್ತಾನೆ ಕಂಡೆಯಾ; ಪುದುವಾಳ್=ಕೂಡಿಬಾಳು/ಸಹಜೀವನ ನಡೆಸು; **ಎನಗಮ್ ಅವರ್ಗಮ್ ಪುದುವಾಳ್ಕೆ ಸಂಧಾನಮ್ ಗಡ**=ನಾನು ಮತ್ತು ಪಾಂಡವರು ಜತೆಗೂಡಿ ಬಾಳುವುದಕ್ಕಾಗಿ ಸಂಧಾನವನ್ನು ಮಾಡಿಕೊಳ್ಳಬೇಕಂತೆ ಕಂಡೆಯಾ; ಮುನ್ನಮ್ **ಸಂಧಿಯ ಮಾತಮ್ ಲಂಘಿಸಿದನ್ ಇನ್ನು ಒಡಂಬಟ್ಟಪೆನೇ**=ಈ ಮೊದಲು ಸಂಧಿಯ ಮಾತನ್ನು ತಿರಸ್ಕರಿಸಿರುವ ನಾನು, ಈಗ ಇನ್ನು ಅದನ್ನು ಒಪ್ಪುತ್ತೇನೆಯೇ; ಮಲಿನ=ಕಳಂಕಿತವಾದ; ಮಲಿನನ್=ಕಳಂಕಿತನಾದವನು;

ಉಜ್ವಳ=ತೇಜಸ್ಸು/ಪ್ರಕಾಶ/ಉತ್ತಮ; **ವನವಾಸಮಲಿನನನ್ ಯಮತನಯನನ್ ಉಜ್ವಳಿಸಿ**=ಪಾಂಡುರಾಜನು ಕಾಡಿನಲ್ಲಿದ್ದಾಗ ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದ ಧರ್ಮರಾಯನನ್ನು ಉತ್ತಮನನ್ನಾಗಿ ಮಾಡಿದೆ; ದುರ್ಯೋಧನನ ಕಣ್ಣಿನಲ್ಲಿ ಧರ್ಮರಾಯನು ಕುರುವಂಶಕ್ಕೆ ಸೇರಿದವನಲ್ಲ. ಏಕೆಂದರೆ ಧರ್ಮರಾಯನು ಪಾಂಡು ಮತ್ತು ಕುಂತಿಯ ಸಮಾಗಮದಿಂದ ಹುಟ್ಟಿಲ್ಲ; ಆದ್ದರಿಂದ ಧರ್ಮರಾಯನು ಹುಟ್ಟಿನಿಂದ ಕಳಂಕಿತ ವ್ಯಕ್ತಿ; ಗೋತ್ರ=ವಂಶ/ಕುಲ; ಧವಳ=ಬಿಳುಪಾದ/ಸುಂದರವಾದ/ಉತ್ತಮವಾದ; ಘನ=ಹೆಚ್ಚಾದ/ದೊಡ್ಡದಾದ;

**ಗೋತ್ರ ಧವಳನನ್ ಎನ್ನನ್ ಘನಮಲಿನಮ್ ಮಾಡಿದೆ**=ಉತ್ತಮವಂಶದಲ್ಲಿ ಹುಟ್ಟಿ ಕೀರ್ತಿವಂತನಾಗಿದ್ದ ನನ್ನನ್ನು ಅತಿಕಳಂಕಿತ ವ್ಯಕ್ತಿಯನ್ನಾಗಿ ಮಾಡಿದೆ; ದುರ್ಯೋಧನನಾದ ನಾನು ಕುರುವಂಶಕ್ಕೆ ಸೇರಿದ ಧೃತರಾಷ್ಟ್ರ ಮತ್ತು ಗಾಂಧಾರಿಯ ಮಗ. ಕುರುಕುಲದ ಹಿನ್ನೆಲೆಯಲ್ಲಿ ನಾನು ನಿಜವಾದ ವಂಶಸ್ಥ; ಶ್ವೇತ=ಬಿಳುಪು; ಕೃಷ್ಣ=ಕಪ್ಪು; ಕೃಷ್ಣ, **ನಿನ್ನ ವೋಲ್ ಶ್ವೇತಕೃಷ್ಣಕಾರಕರ್ ಒಳರೇ**= ಕೃಷ್ಣನೇ, ನಿನ್ನಂತೆ ಬಿಳುಪನ್ನು ಕಪ್ಪುಮಾಡುವವರು ಇದ್ದಾರೆಯೇ; ಒಳ್ಳೆಯದನ್ನು ಕೆಟ್ಟದನ್ನಾಗಿ ಮಾಡುವ/ನಿಜವನ್ನು ಸುಳ್ಳನ್ನಾಗಿ ಮಾಡುವ... ನಿನ್ನಂತಹ ವಂಚಕರು ಇದ್ದಾರೆಯೇ; ಜಲನಿಧಿ+ಒಳ್; ಜಲನಿಧಿ=ಸಮುದ್ರ/ಕಡಲು; ಅಮರ್ದು= ಅಮೃತ; ನಂಜು=ವಿಷ; ಒಡನೆ=ಜತೆಯಲ್ಲಿ; ಅಂಕ=ಪ್ರಸಿದ್ಧಿ/ಹೆಸರುವಾಸಿ; ಹಲಿ=ಬಲರಾಮ;

**ಯದುಕುಲ ಜಲನಿಧಿಯೊಳ್ ಅಮರ್ದುಮ್ ನಂಜುಮ್ ಒಡನೆ ಪುಟ್ಟುವ ವೋಲ್ ಅಂಕದ ಹಲಿಯುಮ್ ನೀನುಮ್ ಪುಟ್ಟಿದಿರ್**=ಯದುಕುಲವೆಂಬ ಸಮುದ್ರದಲ್ಲಿ ಅಮೃತ ಮತ್ತು ವಿಷ ಜತೆಜತೆಯಲ್ಲಿ ಹುಟ್ಟುವಂತೆ ಹೆಸರುವಾಸಿಯಾದ ಬಲರಾಮನೂ ನೀನೂ ಹುಟ್ಟಿದಿರಿ; ಹಾಲಿನ ಕಡಲನ್ನು ದೇವತೆಗಳು ಮತ್ತು ರಕ್ಕಸರು ಕಡೆದಾಗ ಅಮೃತ ಮತ್ತು ವಿಷ ಜತೆಜತೆಯಲ್ಲಿ ಉತ್ಪತ್ತಿಯಾದವು ಎಂಬ ದಂತಕತೆಯೊಂದು ಜನಮನದಲ್ಲಿದೆ; **ಅದರ್ಕೆ ಅತ್ತ ಬಲನ್ ಗುಣಿಯಾದನ್... ನೀನ್ ನಿರ್ಗುಣಿಯಯ್ ಎಂಬ ಅನ್ನೆಗಮ್**= ಆದ್ದರಿಂದಲೇ ಆ ಕಡೆ ಬಲರಾಮನು ಗುಣವಂತ ವ್ಯಕ್ತಿಯಾದನು ನೀನು ಗುಣವಿಲ್ಲದ ವಂಚಕನಾದೆ ಎಂದು ದುರ್ಯೋಧನನು ಕೃಷ್ಣನನ್ನು ಚುಚ್ಚುಮಾತು ಗಳಿಂದ ಹಂಗಿಸುತ್ತಿರುವಾಗ; **ಆ ಪ್ರಸ್ತಾವದೊಳ್**=ಆ ಸಮಯದಲ್ಲಿ/ಆ ಸನ್ನಿವೇಶದಲ್ಲಿ;

❖

## ನೋಟ–೨೨

# ಬಲರಾಮನ ಬರುವಿಕೆ... ಗದಾಯುದ್ಧ ಸಿದ್ಧತೆ

**ಆ ಪ್ರಸ್ತಾವದೊಳ್**=ವೈಶಂಪಾಯನ ಸರೋವರದ ತೀರದಲ್ಲಿ ಕೃಷ್ಣ ಮತ್ತು ಪಾಂಡವರೊಡನೆ ದುರ್ಯೋಧನನು ಮಾತಿನ ಯುದ್ಧದಲ್ಲಿ ತೊಡಗಿದ್ದಾಗ; ಹಲ=ನೇಗಿಲು; ಮುಸಲ=ಒನಕೆ ಆಕಾರದ ಆಯುಧ; ಪಾಣಿ=ಕಯ್/ಹಸ್ತ; ಮಧು=ಜೇನು ತುಪ್ಪ; ಪಾಟಲ=ನಸುಗೆಂಪು ಬಣ್ಣ; ಮಧುಪಾಟಲ= ಜೇನುತುಪ್ಪದ ಕೆಂಪನೆಯ ಬಣ್ಣ; ನೇತ್ರ=ಕಣ್ಣು; ವಸನ=ಬಟ್ಟೆ; ನೀಲವಸನನ್= ನೀಲಿಯ ಬಣ್ಣದ ಬಟ್ಟೆಯನ್ನುಟ್ಟಿರುವವನು; ಧವಳ+ಅಂಗನ್; ಧವಳ=ಬಿಳುಪು; ಅಂಗ=ದೇಹ/ಮಯ್; ಧವಳಾಂಗನ್=ಬಿಳಿಯ ಬಣ್ಣದ ದೇಹದವನು; ಕುಂಡಲ=ಓಲೆ; ಏಕಕುಂಡಲನ್=ಒಂಟಿ ಓಲೆಯನ್ನು ತೊಟ್ಟವನು; ತಾಳ= ತಾಳೆಯ ಮರ; ಲಕ್ಷನ್=ಗುರುತುಳ್ಳವನು; ತಾಳಲಕ್ಷನ್=ತಾಳೆಯ ಮರದ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಚನವಾಗುಳ್ಳವನು; ಬಲನ್= ಬಲರಾಮನು; ಕುರುಕುಲನ್=ದುರ್ಯೋಧನ;

**ಹಲ ಮುಸಲಪಾಣಿ... ಮಧುಪಾಟಲನೇತ್ರನ್ ನೀಲವಸನನ್... ಆ ಧವಳಾಂಗನ್... ಏಕಕುಂಡಲನ್ ತಾಳಲಕ್ಷನ್ ಬಲನ್ ಕುರುಕುಲನನ್ ಕೂಡಲ್ಕೆ ಬಂದನ್**=ನೇಗಿಲು ಮತ್ತು ಒನಕೆಯ ಆಕಾರದ ಆಯುಧಗಳನ್ನು ಕಯ್ಯಲ್ಲಿ ಹಿಡಿದುಕೊಂಡಿರುವ, ಕೆಂಗಣ್ಣಿನ ನೀಲಿ ಬಣ್ಣದ ಬಟ್ಟೆಯನ್ನು ಉಟ್ಟಿರುವ, ಬಿಳಿಯ ಮಯ್ ಬಣ್ಣದ, ಒಂಟಿ ಓಲೆಯನ್ನು ತೊಟ್ಟಿರುವ, ತಾಳೆಮರದ ಚಿತ್ರವನ್ನುಳ್ಳ ಬಾವುಟವನ್ನು ಹಿಡಿದಿರುವ ಬಲರಾಮನು ದುರ್ಯೋಧನನ ಜತೆಗೂಡಲೆಂದು ಬಂದನು; ಕುರುಕ್ಷೇತ್ರ ಯುದ್ಧಕ್ಕೆ ಪಾಂಡವರು ಮತ್ತು ದುರ್ಯೋಧನನು

ಸೇನಾಬಲವನ್ನು ಕಲೆಹಾಕುತ್ತಿದ್ದಾಗ, ಯಾದವ ಸೇನಾಬಲ ಮತ್ತು ಬಲರಾಮನು ದುರ್ಯೋಧನನ ಕಡೆಯಲ್ಲಿಯೂ, ಕೃಷ್ಣನೊಬ್ಬನು ಮಾತ್ರ ಪಾಂಡವರ ಕಡೆಯಲ್ಲಿಯೂ ಯುದ್ಧದಲ್ಲಿ ಭಾಗವಹಿಸುವುದೆಂದು ಹಂಚಿಕೆಯಾಗಿತ್ತು. ಯುದ್ಧ ಪ್ರಾರಂಭವಾಗುವ ಕೆಲವು ದಿನಗಳ ಮುಂಚೆ ಬಲರಾಮನ ಅಚಾತುರ್ಯದಿಂದ ಹಸುವೊಂದು ಸಾವನ್ನಪ್ಪಿದ್ದಾಗಿಯೂ, ಅದರಿಂದ ಉಂಟಾದ ಪಾಪವನ್ನು ಪರಿಹರಿಸಿಕೊಳ್ಳಲೆಂದು ಬಲರಾಮನು ಕೆಲವು ದಿನಗಳ ತೀರ್ಥಯಾತ್ರೆಗೆ ಹೋದನೆಂದೂ, ಈಗ ಕುರುಕ್ಷೇತ್ರದ ಹದಿನೆಂಟನೆಯ ದಿನ ನಡುಹಗಲಿನಲ್ಲಿ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಬಲರಾಮನು ಹಸ್ತಿನಾವತಿಯತ್ತ ಬಂದನು ಎಂಬ ದಂತಕತೆಯೊಂದು ಜನಮನದಲ್ಲಿ ಚಲಾವಣೆಯಲ್ಲಿದೆ; ಗದಾವಿದ್ಯೆಯಲ್ಲಿ ಹೆಚ್ಚಿನ ಕುಶಲತೆಯನ್ನು ಭೀಮ ದುರ್ಯೋಧನರು ಬಲರಾಮನಿಂದ ಕಲಿತಿದ್ದರು ಎಂಬ ಸುದ್ದಿಯು ಜನಜನಿತವಾಗಿತ್ತು; ಅಂತು=ಆ ರೀತಿ; ಸೈಪು=ಪುಣ್ಯ; ಬರ್ಪ+ಅಂತೆಯುಮ್; ಬರ್ಪಂತೆಯುಮ್= ಬರುವಂತೆಯೂ; ಜಂಗಮ=ಚಲಿಸುವ/ನಡೆದಾಡು; ಸಂಕರ್ಷಣ=ಬಲರಾಮ;

**ಅಂತು ಸುಯೋಧನಂಗೆ ಸೈಪು ಬರ್ಪಂತೆಯುಮ್... ಜಂಗಮ ಹಿಮಾಚಲಮೆ ಬರ್ಪಂತೆಯುಮ್ ಸಂಕರ್ಷಣನ್ ಬಂದು**=ಆ ರೀತಿಯಲ್ಲಿ ದುರ್ಯೋಧನನ ಪಾಲಿಗೆ ಒಳಿತನ್ನು ಮಾಡುವ ಪುಣ್ಯವೇ ಬರುವಂತೆಯೂ ಚಲಿಸುತ್ತಿರುವ ಹಿಮಾಚಲ ಪರ್ವತವೇ ಬರುವಂತೆಯೂ ಬಲರಾಮನು ಬಂದನು. ಬಲರಾಮನ ಬರುವಿಕೆಯಿಂದ ದುರ್ಯೋಧನನಿಗೆ ಹೆಚ್ಚಿನ ಬಲ ದೊರೆಯಿತು ಎಂಬುದನ್ನು **'ಸೈಪು ಬರ್ಪಂತೆಯುಮ್ ಮತ್ತು ಜಂಗಮ ಹಿಮಾಚಲಮೆ ಬರ್ಪಂತೆಯುಮ್'** ಎಂಬ ರೂಪಕಗಳು ಸೂಚಿಸುತ್ತಿವೆ; ತಮ್ಮ+ಅನಿಬರ್; ಅನಿಬರ್=ಅವರೆಲ್ಲರೂ; ಗೊಂದಣ=ಗುಂಪು; **ತಮ್ಮನಿಬರ್ ಒಂದಾಗಿ ಗೊಂದಣಿಸಿನಿಂದ ಪಾಂಡುನಂದನರುಮನ್**= ಅಣ್ಣತಮ್ಮಂದಿರೆಲ್ಲರೂ ಒಂದಾಗಿ ಗುಂಪುಗೂಡಿ ನಿಂತಿರುವ ಪಾಂಡುನಂದರನ್ನು; ಏಕಾಕಿಗ=ಒಬ್ಬಂಟಿ; ದೇಸಿಗ=ದಿಕ್ಕಿಲ್ಲದವನು; ಸಾವಿಯ ದೇಸಿಗ=ಯಾರೊಬ್ಬರ ನೆರವಿಲ್ಲದ ಪರದೇಸಿಯಾಗಿ;

**ಏಕಾಕಿಗನಾಗಿ ಸಾವಿಯ ದೇಸಿಗನಾಗಿ ನಿಂದ ಕುರುಕುಲಸ್ವಾಮಿಯುಮನ್ ಕಂಡು**=ಒಬ್ಬಂಟಿಗನಾಗಿ ಯಾರೊಬ್ಬರ ನೆರವಿಲ್ಲದೆ ಪರದೇಸಿಯಂತೆ ನಿಂತಿರುವ ಕುರುಕುಲದ ಒಡೆಯನಾದ ದುರ್ಯೋಧನನನ್ನು ಕಂಡು; ದೇವಕೀನಂದನ= ವಸುದೇವ ಮತ್ತು ದೇವಕಿ ದಂಪತಿಯ ಮಗ ಕೃಷ್ಣ; ವದನ+ಅರವಿಂದಮ್+ ಅನ್; ವದನ=ಮೊಗ; ಅರವಿಂದ=ತಾವರೆ; **ದೇವಕೀನಂದನನ ವದನಾರವಿಂದಮನ್ ನೋಡಿ**=ಅರಳಿದ ತಾವರೆಯಂತಿರುವ ಕೃಷ್ಣನ ಮೊಗವನ್ನು

ನೋಡಿ; ವಿಸ್ಮಯ+ಆಕ್ರಾಂತ+ಚಿತ್ತನ್+ಆಗಿ; ವಿಸ್ಮಯ=ಅಚ್ಚರಿ; ಆಕ್ರಾಂತ= ಆವರಿಸು/ಕವಿ/ಹರಡು; ಚಿತ್ತ=ಮನಸ್ಸು; ಕಟ್ಟುಕಡೆದು=ಅತಿಶಯವಾಗಿ ಮರುಗು/ ಹೆಚ್ಚಿನ ಕಳವಳಕ್ಕೆ ಒಳಗಾಗಿ; **ವಿಸ್ಮಯಾಕ್ರಾಂತಚಿತ್ತನಾಗಿ ಮನದೊಳ್ ಕಟ್ಟುಕಡೆದು**=ಚಕ್ರವರ್ತಿಯಾದ ದುರ್ಯೋಧನನಿಗೆ ಬಂದೊದಗಿರುವ ಇಂತಹ ಹೀನಸ್ಥಿತಿಯನ್ನು ಕಂಡು ಅಚ್ಚರಿಯಿಂದ ಗಾಸಿಗೊಂಡು, ಮನದಲ್ಲಿ ತುಂಬಾ ಕಳವಳಗೊಂಡು; ಎರಗು=ನಮಸ್ಕರಿಸು; ಫಣಿ=ಹಾವು; ಫಣಿರಾಜ=ಆದಿಶೇಷ; ಕೇತನ=ಬಾವುಟ; ಫಣಿರಾಜಕೇತನ= ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ಲಾಂಛನವಾಗುಳ್ಳವನು/ ದುರ್ಯೋಧನ; ಎರಕ=ಪ್ರೀತಿ;

**ತನಗೆ ಎರಗಿದ ಫಣಿರಾಜಕೇತನನನ್ ಮನದೆ ಎರಕದಿಮ್ ಪರಸಿ**=ತನ್ನ ಪಾದಗಳಿಗೆ ನಮಿಸಿದ ದುರ್ಯೋಧನನನ್ನು ಮನದುಂಬಿ ಪ್ರೀತಿಯಿಂದ ಆಶೀರ್ವದಿಸಿ; ಗರುಡಕೇತನ=ಗರುಡ ಪಕ್ಷಿಯ ಚಿತ್ರವನ್ನು ತನ್ನ ಬಾವುಟದಲ್ಲಿ ಲಾಂಛನವಾಗುಳ್ಳವನು/ಕೃಷ್ಣ; ಪರಸಲ್+ಒಲ್ಲದೆ; ಮುಳಿದು=ಕೋಪಗೊಂಡು; **ಗರುಡಕೇತನನುಮನ್ ಪಾಂಡವರುಮನ್ ಪರಸಲೊಲ್ಲದೆ ಮುಳಿದು**=ತನಗೆ ನಮಿಸಿದ ಕೃಷ್ಣನನ್ನು ಮತ್ತು ಪಾಂಡವರನ್ನು ಆಶೀರ್ವದಿಸಲು ಇಚ್ಚಿಸದೆ, ದುರ್ಯೋಧನನ ಇಂತಹ ಸ್ಥಿತಿಗೆ ಕಾರಣರಾಗಿರುವ ಅವರ ಬಗ್ಗೆ ಕೋಪಗೊಂಡು; **ತಮ್ಮನನ್ ಅಯ್ವರುಮನ್ ನೋಡಿ**=ಬಲರಾಮನು ತನ್ನ ತಮ್ಮನಾದ ಕೃಷ್ಣನನ್ನು ಮತ್ತು ಅಯ್ದು ಮಂದಿ ಪಾಂಡವರನ್ನು ಕೋಪೋದ್ರೇಕದಿಂದ ನೋಡುತ್ತ; ಚೂಡಾಮಣಿ=ತಲೆಯಲ್ಲಿ ತೊಡುವ ರತ್ನದ ಒಡವೆ/ಉತ್ತಮ ವ್ಯಕ್ತಿ; ಹಲಾಯುಧ=ಬಲರಾಮ;

**ಕೌರವಕುಲ ಚೂಡಾಮಣಿಯೊಳ್ ಏನನ್ ಆಲೋಚಿಸಿದಯ್ ಎಂದು ನುಡಿದ ಹಲಾಯುಧನ ನುಡಿಗೆ**=ಕುರುಕುಲಕ್ಕೆ ಚೂಡಾಮಣಿಯಂತಿರುವ ದುರ್ಯೋಧನನನ್ನು ಉದ್ದೇಶಿಸಿ **"ಈಗ ಏನನ್ನು ಮಾಡಬೇಕೆಂದು ಆಲೋಚಿಸುತ್ತಿರುವೆ"** ಎಂದು ಬಲರಾಮನು ಆಡಿದ ನುಡಿಗೆ; ಚಕ್ರಾಯುಧ= ಚಕ್ರವನ್ನು ಆಯುಧವನ್ನಾಗಿ ಉಳ್ಳವನು/ಕೃಷ್ಣ; **ಚಕ್ರಾಯುಧನ್ ಇಂತು ಎಂದನ್**=ಬಲರಾಮನ ಪ್ರಶ್ನೆಗೆ ದುರ್ಯೋಧನನು ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಕೃಷ್ಣನು ಅಣ್ಣ ಬಲರಾಮನೊಡನೆ ಯುದ್ಧದ ಸಂಗತಿಯನ್ನು ಕುರಿತು ಮಾತನಾಡತೊಡಗುತ್ತಾನೆ; ಅಗ್ರಜಾತ=ಮೊದಲು ಹುಟ್ಟಿದವನು/ಅಣ್ಣ; ಅಭಿವಂದತ+ಅರ್ಹರ್; ಅಭಿವಂದಿಸು=ನಮಸ್ಕರಿಸು; ಅಭಿವಂದಿತಾರ್ಹರ್= ಮನ್ನಣೆಗೆ ಯೋಗ್ಯರಾದವರು/ಆದರಣೀಯರು; **ಅಗ್ರಜಾತ, ನೀಮ್ ಎನಗೆ ಅಭಿವಂದಿತಾರ್ಹರ್**=ಅಣ್ಣಾ, ನೀವು ನನಗೆ ಪೂಜನೀಯರು; ಅವಧಾರಿಸು= ಮನಸ್ಸಿಟ್ಟು ಕೇಳು;

**ಚಿತ್ತದೊಳ್ ಮುನಿಯದೆ ಅವಧಾರಿಸು**= ಮನದಲ್ಲಿ ಕೋಪವನ್ನು ತಳೆಯದೆ ತಾಳ್ಮೆಯಿಂದ ನಾನು ಹೇಳುವುದನ್ನು ಕೇಳಿರಿ; ಬಾಡ=ಹಳ್ಳಿ/ಊರು; ಪಾಂಡುನಂದನರ್ಗೆ ಬಾಡಮನ್ ಅಯ್ದನೆ ಬೇಡೆ ಪೋಗೆ=ಕುರುಕ್ಷೇತ್ರ ಯುದ್ಧಕ್ಕೆ ಮೊದಲು ಪಾಂಡವರು ಮತ್ತು ಕೌರವರ ನಡುವೆ ಸಂಧಾನವನ್ನು ಮಾಡಲೆಂದು ನಾನು ಹಸ್ತಿನಾವತಿಗೆ ಹೋಗಿ, ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡಲು ದುರ್ಯೋಧನನನ್ನು ಕೇಳಿಕೊಂಡೆನು. ಅದಕ್ಕೆ ಅವನು ಒಪ್ಪದಿರಲು, ಪಾಂಡುಪುತ್ರರು ನೆಮ್ಮದಿಯಿಂದ ಬಾಳಲು ಅಯ್ದು ಊರುಗಳನ್ನಾದರೂ ಕೊಡು ಎಂದು ಬೇಡಿಕೊಂಡಾಗ; **ದ್ರೋಣನ ಧೃತರಾಷ್ಟ್ರ ಸಿಂಧುಸುತರ್ ಎಂದುದನ್ ಎನ್ನದೆ**=ಆಗ ದ್ರೋಣ, ಧೃತರಾಷ್ಟ್ರ, ಭೀಷ್ಮರು ಸಂಧಾನವನ್ನು ಮಾಡಿಕೊಳ್ಳುವಂತೆ ದುರ್ಯೋಧನನಿಗೆ ಹಿತನುಡಿಗಳನ್ನು ಹೇಳಿದರೂ ಕಿವಿಗೊಡದೆ ದುರ್ಯೋಧನನು ಅವರ ಮಾತಿಗೆ ಒಪ್ಪಲಿಲ್ಲ;

**ನೀವ್ ಇದಮ್ ಸುಯೋಧನನೊಳೆ ಕೇಳ್ದು ನಂಬುವುದು**=ಯುದ್ಧಕ್ಕೆ ಮೊದಲು ನಡೆದ ಸಂಧಾನದ ಸಂಗತಿಯನ್ನು ಮತ್ತು ಸಂಧಾನವು ಮುರಿದುಬಿದ್ದುದಕ್ಕೆ ಯಾರು ಕಾರಣರು ಎಂಬುದನ್ನು ನೀವು ದುರ್ಯೋಧನನನ್ನೇ ಕೇಳಿ ತಿಳಿದುಕೊಂಡು, ನಿಜಸಂಗತಿಯನ್ನು ನಂಬುವುದು; ಎರಡು+ನುಡಿ=ಎರಳ್ನುಡಿ= ಸುಳ್ಳು ಹೇಳು; **ಫಣಿರಾಜಕೇತನನ್ ಎರಳ್ನುಡಿಯನ್ ಎನೆ**=ದುರ್ಯೋಧನನು ಸುಳ್ಳನ್ನು ಹೇಳುವುದಿಲ್ಲ ಎಂದು ಕೃಷ್ಣನು ನುಡಿಯಲು; ದುರ್ಯೋಧನನ್ ಎಂದನ್= ದುರ್ಯೋಧನನು ಬಲರಾಮನಿಗೆ ಈ ರೀತಿ ಹೇಳತೊಡಗಿದನು; **ಏಕೆ ಮುನಿವಿರ್**=ಏಕೆ ಕೋಪಿಸಿಕೊಳ್ಳುವಿರಿ; **ಪಾಂಡುನಂದನರ್ ನಿರ್ದೋಷಿಗಳ್**= ಪಾಂಡವರು ಯಾವ ತಪ್ಪನ್ನು ಮಾಡಿಲ್ಲ; **ಎಂತುಮ್ ಇವರೊಳ್ ಸಂಧಾನಮನ್ ಮುನ್ನಮ್ ಆನ್ ಒಲ್ಲೆನೆ**=ಹೇಗಿದ್ದರೂ ಈ ಪಾಂಡವರೊಡನೆ ಸಂಧಾನವನ್ನು ಮೊದಲಿನಿಂದಲೂ ನಾನು ಒಪ್ಪುತ್ತಿಲ್ಲ; ಕುರುವಂಶಕ್ಕೆ ಸೇರಿದ ಈ ರಾಜ್ಯವನ್ನು ಇಡಿಯಾಗಿ ನಾನು ಆಳಬೇಕು ಇಲ್ಲವೇ ಪಾಂಡವರು ಆಳಬೇಕು. ಇದನ್ನು ಹಂಚಿ ಕೊಂಡು ಬಾಳುವುದಕ್ಕೆ ನನ್ನಿಂದ ಸಾಧ್ಯವೇ ಇಲ್ಲ ಎಂಬುದೇ ನನ್ನ ಅಚಲ ನಿರ್ಧಾರ;

**ಒಂದನೆ ಪೇಳ್ವೆನ್**=ನಾನು ಚಿಕ್ಕಂದಿನಿಂದಲೂ ಅದೊಂದನ್ನೇ ಹೇಳಿಕೊಂಡು ಬಂದಿದ್ದೇನೆ. ಈಗಲೂ ಅದನ್ನೇ ಹೇಳುವೆನು. ನನಗೆ ಸಂಧಾನ ಬೇಕಾಗಿಲ್ಲ; ತನುಜ=ತಮ್ಮ; ತನುಜಾತರ್=ಒಡಹುಟ್ಟಿದವರು; ಎನಸುಮ್=ಬಹಳವಾಗಿ/ ಅತಿಶಯವಾಗಿ; ಸೈರಿಸು=ತಾಳು/ಸಹಿಸು; **ತನುಜಾತರ್ ಪಲಬರುಮ್ ಸತ್ತರ್. ಎನಸುಮ್ ತತ್ ದುಃಖಮನ್ ಸೈರಿಸಲ್ಕೆ ಬಂದಪುದಿಲ್ಲ**=ನನ್ನ ಒಡಹುಟ್ಟಿದ ತಮ್ಮಂದಿರಲ್ಲಿ ಹಲವು ಮಂದಿ ಸಾವನ್ನಪ್ಪಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಯಾವ

ರೀತಿಯಿಂದಲೂ ಆ ಸಂಕಟವನ್ನು ತಾಳಿಕೊಳ್ಳುವುದಕ್ಕೆ ನನ್ನಿಂದಾಗುತ್ತಿಲ್ಲ; ಸನ್ನದ್ಧನ್+ಆಗಿ; ಸನ್ನದ್ಧ=ಸಜ್ಜು/ಸಿದ್ಧತೆ; **ಪಗೆವರ್ ಬರ್ಕೆ ಸನ್ನದ್ಧನಾಗಿ ಇರ್ದಪೆನ್**=ಹಗೆಗಳಾದ ಪಾಂಡವರು ಬರಲಿ ಅವರೊಡನೆ ಹೋರಾಡಲು ಸಿದ್ಧನಾಗಿದ್ದೇನೆ; ಅವಧಾರಿಸು=ಕೇಳು; ಅನುವರಮ್+ಅನ್; ಅನುವರ=ಕಾಳೆಗ/ಯುದ್ಧ;

**ಅವಧಾರಿಪುದು, ಇವರ್ ಎನ್ನ ಅನುವರಮನ್ ನೋಡುವುದಲ್ಲದೆ ಬೇರೆ ಪೆರವು ಮಾತಿಂಗೆ ಎಡೆಯಿಲ್ಲ ಎಂದೊಡೆ**=ಕೇಳಿರಿ ಈ ಪಾಂಡವರು ನನ್ನೊಡನೆ ಕಾಳೆಗ ಮಾಡುವುದನ್ನು ನೋಡುವುದಲ್ಲದೆ, ಬೇರೆ ಯಾವುದೇ ಮಾತಿಗೆ ಅವಕಾಶವಿಲ್ಲ ಎಂದು ದುರ್ಯೋಧನನು ಬಲರಾಮನಿಗೆ ಹೇಳಲು; ಮುಸಲಪಾಣಿ=ಮುಸಲವೆಂಬ ಆಯುಧವನ್ನು ಹಿಡಿದುಕೊಂಡುವವನು/ಬಲರಾಮ; **ಮುಸಲಪಾಣಿ ಕೌರವೇಂದ್ರನನ್ ಮನದೊಳ್ ಪೊಗಳ್ದನ್**=ಬಲರಾಮನು ದುರ್ಯೋಧನನನ್ನು ಮನದಲ್ಲಿಯೇ ಹೊಗಳಿದನು; ಅಂತು ಪೊಗಳ್ದು=ಆ ರೀತಿ ದುರ್ಯೋಧನನನ್ನು ಹೊಗಳಿ; ನಿರ್ವ್ಯಾಜ=ಕಪಟವಿಲ್ಲದ/ನಿಜವಾದ/ಸಹಜವಾದ; ಸಂಕರ್ಷಣ= ಬಲರಾಮ; **ರಾಜರಾಜನ ನಿರ್ವ್ಯಾಜ ಶೌರ್ಯಕ್ಕೆ ಸಂಕರ್ಷಣನ್ ಆಶ್ಚರ್ಯಮ್ ಪಟ್ಟು**=ದುರ್ಯೋಧನನ ಸಹಜವಾದ ಪರಾಕ್ರಮಕ್ಕೆ ಬಲರಾಮನು ಅಚ್ಚರಿಯನ್ನು ಹೊಂದಿ; ಕುರುಕ್ಷೇತ್ರ ಕಾಳೆಗದಲ್ಲಿ ಹನ್ನೊಂದು ಅಕ್ಷೋಹಿಣಿ ಸೇನಾಬಲವನ್ನು ಕಳೆದುಕೊಂಡು ಒಬ್ಬಂಟಿಗನಾಗಿದ್ದರೂ, ತಾನು ಹಿಡಿದ ಚಲವನ್ನೇ ಪಟ್ಟುಹಿಡಿದು ಪಾಂಡವರೊಡನೆ ಹೋರಾಡಲು ಸಿದ್ಧನಾಗಿರುವ ದುರ್ಯೋಧನನ ಸಹಜವಾದ ಶೂರತನವನ್ನು ಕಂಡು ಬಲರಾಮನು ಅಚ್ಚರಿಗೊಂಡಿದ್ದಾನೆ; ಪೆರತು+ಏನುಮನ್;

**ಪೆರತೇನುಮನ್ ಎನಲ್ ಅರಿಯದೆ**=**ತನ್ನ ಚಲಕ್ಕೆ ಬದ್ಧನಾಗಿರುವ ದುರ್ಯೋಧನನಿಗೆ ಮತ್ತೇನನ್ನು ಹೇಳಲು ತಿಳಿಯದೆ; ಧರ್ಮನಂದನಾದಿಗಳ ಮೊಗಮನ್ ನೋಡಿ**=ಬಲರಾಮನು ಧರ್ಮರಾಯನನ್ನು ಒಳಗೊಂಡಂತೆ ಪಾಂಡವರೆಲ್ಲರ ಮೊಗವನ್ನು ನೋಡುತ್ತ; **ನಿಮ್ಮ ಅಯ್ವರೊಳ್ ಆರಾಗಿಯುಮ್ ಈತನೊಳ್ ಒರ್ವನೆ ಕಾದುವುದು**=ನಿಮ್ಮ ಅಯ್ದು ಮಂದಿಯಲ್ಲಿ ಯಾರಾದರೊಬ್ಬರು ಈತನೊಡನೆ ಹೋರಾಡುವುದು; **ಕಾದಿ ಗೆಲ್ದಿಮ್ ಬಳಿಕ್ಕೆ ದುರ್ಯೋಧನನ್ ನೆಲನನ್ ಆಳ್ವನ್**=ಹೋರಾಡಿ ಗೆದ್ದ ನಂತರ, ದುರ್ಯೋಧನನು ರಾಜ್ಯವನ್ನು ಆಳುತ್ತಾನೆ; ಬೆಸಕೆಯ್=ಸೇವೆ ಮಾಡು/ಹೇಳಿದ ಕೆಲಸವನ್ನು ಮಾಡು; **ಆತಂಗೆ ಉಳಿದ ನಾಲ್ವರ್ ಬೆಸಕೆಯ್ದು ಬಾಳ್ವಿರ್ ಎಂದು ನುಡಿಯೆ**=ಗೆದ್ದ ದುರ್ಯೋಧನನಿಗೆ ಉಳಿದ ನಾಲ್ವರು ಪಾಂಡವ ಸೋದರರು

ಅವನು ಹೇಳಿದ ಕೆಲಸವನ್ನು ಮಾಡಿಕೊಂಡಿರಬೇಕು ಎಂದು ಬಲರಾಮನು ನುಡಿಯಲು; ಬಲರಾಮನಿಗೆ ಈಗ ನಡೆಯಲಿರುವ ಕಾಳೆಗದಲ್ಲಿ ದುರ್ಯೋಧನನು ಗೆದ್ದೇ ಗೆಲ್ಲುತ್ತಾನೆ. ಅವನೊಡನೆ ಕಾಳೆಗ ಮಾಡುವ ಒಬ್ಬ ಪಾಂಡುಕುಮಾರನು ಸಾವನ್ನಪ್ಪಿ, ಪಾಂಡವರು ನಾಲ್ಕು ಮಂದಿಯಾಗುತ್ತಾರೆ ಎಂಬ ವಿಶ್ವಾಸವಿದೆ;

**ಭೀಮಸೇನನ್ ಇದಿರ್ಗೆ ವಂದು**=ಬಲರಾಮನ ನುಡಿಗಳನ್ನು ಕೇಳುತ್ತಿದ್ದಂತೆಯೇ ಪಾಂಡುಕುಮಾರರಲ್ಲಿ ಒಬ್ಬನಾದ ಭೀಮಸೇನನು ಬಲರಾಮನ ಮುಂದಕ್ಕೆ ಬಂದು; ಹಲಾಯುಧ=ನೇಗಿಲಿನ ಆಕಾರದ ಆಯುಧವನ್ನು ಹೊಂದಿರುವವನು/ ಬಲರಾಮ; ಅರ=ಯಮ; ಅರಮಗ=ಯಮದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವ ಧರ್ಮರಾಯ; ಇರ್ಕೆ=ಇರಲಿ; ಅರಿಕೆ=ಕೀರ್ತಿ/ ಯಶಸ್ಸು; **ಹಲಾಯುಧ, ಅರಮಗನ್ ಇರ್ಕೆ... ಅರ್ಜುನನ್ ಇರ್ಕೆ... ಅರಿಕೆಯ ಮಾದ್ರೀಸುತರ್ಕಳ್ ಇರ್ಕೆ**=ಬಲರಾಮನೇ, ಧರ್ಮರಾಯನು ಈ ಕಾಳೆಗದಿಂದ ದೂರವಿರಲಿ ಅದೇ ರೀತಿ ಅರ್ಜುನ ಮತ್ತು ಕೀರ್ತಿವಂತರಾದ ನಕುಲ ಸಹದೇವರು ದೂರವಿರಲಿ; ಅಳಿ+ಪಗೆ+ಅನ್; ಅಳಿ=ಹೀನತನ/ಅಲ್ಪತನ/ ನೀಚತನ; ಪಗೆ=ಶತ್ರು/ಹಗೆ; ಅಳಿವಗೆ=ನೀಚನಾದ ಶತ್ರು; ಪರಿಪಡಿಸು= ಕತ್ತರಿಸು/ ನಾಶಪಡಿಸು; ನೆರೆದು+ಇರ್ದಪೆನ್; ನೆರೆ=ಸಿದ್ಧವಾಗು/ಸಜ್ಜಾಗು; **ಅಳಿವಗೆಯನ್ ಪರಿಪಡಿಸಲ್ಕೆ ನೆರೆದಿರ್ದಪೆನ್**=ನೀಚನಾದ ಹಗೆಯನ್ನು ಕತ್ತರಿಸಿ ಕೊಲ್ಲಲು ಸಿದ್ಧನಾಗಿದ್ದೇನೆ;

**ಕೌರವನನ್ ಎನಗೆ ತೋರಿ ಬಿಡು**= ದುರ್ಯೋಧನನನ್ನು ನನ್ನೊಡನೆ ಕಾಳೆಗ ಮಾಡಲು ಕಳುಹಿಸು; ಮರುತ್=ವಾಯುದೇವ; ಮರುತ್ ನಂದನ=ಭೀಮಸೇನ; ರೋಹಿಣೀ ನಂದನ=ಬಲರಾಮ; **ಅಂತು ಮರುತ್ ನಂದನನ್ ರೋಹಿಣೀ ನಂದನಂಗೆ ನುಡಿದು**=ಆ ರೀತಿಯಲ್ಲಿ ಭೀಮಸೇನನು ಬಲರಾಮನಿಗೆ ಹೇಳಿ; ದ್ವಂದ್ವ=ಎರಡು; ದ್ವಂದ್ವಯುದ್ಧ=ಇಬ್ಬರ ನಡುವೆ ನಡೆಯುವ ಕಾಳೆಗ; **ದ್ವಂದ್ವಯುದ್ಧಕ್ಕೆ ಧರ್ಮನಂದನಾದಿಗಳ ಮೊಗಮನ್ ನೋಡಿ**=ಭೀಮಸೇನನು ತನ್ನ ಮತ್ತು ದುರ್ಯೋಧನನ ನಡುವೆ ದ್ವಂದ್ವಯುದ್ಧವನ್ನು ತಾನೇ ನಿಶ್ಚಯಿಸಿರುವುದಕ್ಕೆ ಕಾರಣವೇನೆಂಬುದನ್ನು ಅಣ್ಣತಮ್ಮಂದಿರಿಗೆ ತಿಳಿಸುವುದಕ್ಕಾಗಿ ಅವರ ಮೊಗವನ್ನು ನೋಡುತ್ತ ಈ ರೀತಿ ನುಡಿಯತೊಡಗುತ್ತಾನೆ; **ಆನ್ ಪಗೆಗೆ ಮೊದಲಿಗನೆನ್**= ನಾನು ದುರ್ಯೋಧನನಿಗೆ ಮೊದಲನೆಯ ಶತ್ರು. ಚಿಕ್ಕಂದಿನಿಂದಲೂ ಆತ ನನ್ನನ್ನು ಕೊಲ್ಲಲು ಹಲವಾರು ಬಗೆಯ ಸಂಚನ್ನು ಹೂಡುತ್ತಲೇ ಇದ್ದಾನೆ; ಇಡು+ಪಗೆ; ಇಡು=ಇರಿಸು/ಮಡಗು; ಪಗೆ=ಶತ್ರು/ಹಗೆ; ಇಡುವಗೆ=ಬಲವಾದ ಹಗೆತನ/ಬದ್ಧದ್ವೇಷ;

**ಅಂತು ಕೌರವನ್ ಇಡುವಗೆ**=ಆದ್ದರಿಂದ ದುರ್ಯೋಧನನು ನನ್ನ ಕಡುಹಗೆಯಾಗಿದ್ದಾನೆ. ಅವನ ಮತ್ತು ನನ್ನ ನಡುವೆ ಇರುವ ಹಗೆತನ ಇಬ್ಬರಲ್ಲಿ ಒಬ್ಬ ಸತ್ತಾಗ ಮಾತ್ರ ತೀರುತ್ತದೆ; ದಾಯಿಗತನ=ಒಂದೇ ಮನೆತನದಲ್ಲಿ ಹುಟ್ಟಿ ಬೆಳೆದು ಮನೆತನದ ಸಂಪತ್ತಿಗೆ ಪಾಲುದಾರರಾದ ಅಣ್ಣತಮ್ಮಂದಿರ/ಅಕ್ಕತಂಗಿಯರ ಹಕ್ಕು; ತಗು=ಯೋಗ್ಯವಾಗು/ಉಚಿತವಾಗು; **ಅದರ್ಕೆ ನೀಮ್ ಎಲ್ಲಮ್ ಇಲ್ಲಿ ದಾಯಿಗತನಮನ್ ತೋರಲ್ ತಗದು**=ಅದಕ್ಕಾಗಿ ಅಂದರೆ ನನ್ನ ಮತ್ತು ದುರ್ಯೋಧನನ ನಡುವೆ ಕಡು ಹಗೆತನ ಇರುವುದರಿಂದ ನೀವೆಲ್ಲರೂ ಈ ಕಾಳೆಗದಲ್ಲಿ ಹಕ್ಕುದಾರಿಕೆಯನ್ನು ತೋರಿಸುವುದು ಸರಿಯಲ್ಲ; ದೊರೆ+ಆಗಿ+ ಇರ್ದನ್; ದೊರೆ=ಸಮಾನ; **ಈತನ್ ಮುನ್ನಮ್ ಎನಗೆ ದೊರೆಯಾಗಿರ್ದನ್ ಎಂಬುದುಮ್**=ಈ ದುರ್ಯೋಧನನು ಚಿಕ್ಕಂದಿನಿಂದಲೂ ನನಗೆ ಬಾಹುಬಲದಲ್ಲಿ ಮತ್ತು ಗದಾವಿದ್ಯೆಯ ಕುಶಲತೆಯಲ್ಲಿ ಸರಿಸಮಾನನಾಗಿದ್ದಾನೆ ಎಂದು ಭೀಮಸೇನನು ತನ್ನ ಆಯ್ಕೆಗೆ ಕಾರಣವನ್ನು ವಿವರಿಸಲು; ಇರ್ದು=ಇದ್ದು;

**ಧರ್ಮನಂದನಾದಿಗಳ್ ಇರ್ದು**=ಭೀಮಸೇನನ ಕೋರಿಕೆಗೆ ಅಣ್ಣ ಧರ್ಮರಾಯ ಮತ್ತು ತಮ್ಮಂದಿರಾದ ಅರ್ಜುನ, ನಕುಲ, ಸಹದೇವರು ಒಪ್ಪಿಕೊಂಡು, ಮಾರುತಿ=ಭೀಮಸೇನ; ಫಣಿರಾಜಕೇತನ=ದುರ್ಯೋಧನ; ಸಮಕಟ್ಟು=ನಿಶ್ಚಯಿಸು; **ಮಾರುತಿಗಮ್ ಫಣಿರಾಜಕೇತನಂಗಮ್ ಧರ್ಮ ಯುದ್ಧಮನೆ ಸಮಕಟ್ಟಿದಾಗಳ್**=ಭೀಮಸೇನ ಮತ್ತು ದುರ್ಯೋಧನರ ನಡುವೆ ಧರ್ಮಯುದ್ಧವನ್ನು ನಿಶ್ಚಯಿಸಿದಾಗ; ವನರುಹ=ತಾವರೆ; ನಾಭಿ=ಹೊಕ್ಕಳು; ವನರುಹನಾಭ=ಹೊಕ್ಕಳಲ್ಲಿ ತಾವರೆಯ ಹೂವನ್ನು ಉಳ್ಳವನು/ವಿಷ್ಣು; ಕೃಷ್ಣನು ವಿಷ್ಣುವಿನ ಅವತಾರವೆಂಬ ನಂಬಿಕೆಯು ಜನಮನದಲ್ಲಿದೆ; ಸಾಕ್ಷಿಯೊಳ್+ಇರ್ದು; ಸಾಕ್ಷಿ=ನೋಡುವಿಕೆ/ಕಾಣುವಿಕೆ; ಕಯ್+ಪೊಯ್ದೊಡೆ; ಕಯ್ ಪೊಯ್=ಕಾಳೆಗಕ್ಕೆ ನಿಲ್ಲು; **ವನರುಹನಾಭನ ಬಲದೇವನ ಸಾಕ್ಷಿಯೊಳಿರ್ದು ಕೌರವೇಶ್ವರನ್ ಆ ಭೀಮನ ಕಯ್ವೊಯ್ದೊಡೆ**=ಕೃಷ್ಣ ಮತ್ತು ಬಲರಾಮರನ್ನು ಸಾಕ್ಷಿಯಾಗಿಟ್ಟುಕೊಂಡು ದುರ್ಯೋಧನನು ಭೀಮನನ್ನು ಕಯ್ ತಟ್ಟಿ ಕಾಳೆಗಕ್ಕೆ ಕರೆಯಲು; ತತ್=ಆ; ನಿಕಾಯ=ಗುಂಪು/ಸಮೂಹ; ಅದಟು=ಪರಾಕ್ರಮ;

**ತತ್ ದೇವನಿಕಾಯಮ್ ಕುರುಪತಿಯಾ ಅದಟುಮನ್ ಪೊಗಳ್ದರ್**= ಗಗನದಲ್ಲಿದ್ದು ಇದೆಲ್ಲವನ್ನೂ ನೋಡುತ್ತಿರುವ ದೇವತೆಗಳ ಗುಂಪು ಒಬ್ಬಂಟಿಯಾಗಿದ್ದರೂ ಜೀವವನ್ನು ಉಳಿಸಿಕೊಳ್ಳುವುದಕ್ಕಾಗಿ ಹಿಂಜರಿಯದೆ ಗದಾಯುದ್ಧಕ್ಕೆ ಕರೆಯನ್ನು ನೀಡಿದ ದುರ್ಯೋಧನನ ಪರಾಕ್ರಮವನ್ನು ಹೊಗಳಿದರು; ಕಯ್+ಪೊಯ್ದು+ಆಗಳ್; **ಅಂತು ಧರ್ಮಯುದ್ಧಕ್ಕೆ**

**ಕೈವೊಯ್ದಾಗಳ್**=ಆ ರೀತಿ ಧರ್ಮಯುದ್ಧಕ್ಕೆ ಕರೆಕೊಟ್ಟು, ಇಬ್ಬರು ಅಣಿಯಾಗಿ ನಿಂತಾಗ; ಎಡೆ=ಜಾಗ; ಎನಿತು=ಎಷ್ಟು; ಅನಿತು=ಅಷ್ಟು; ಬರಿದು+ಇಲ್ಲದ+ ಅಂತು; ಶತ=ನೂರು; ತೆಕ್ಕನೆ ತೀವು=ಜಡಿದು ತುಂಬು/ತುಸುವಾದರೂ ಎಡೆಯಿಲ್ಲದಂತೆ ತುಂಬಿರುವುದು; **ಕುರುಕ್ಷೇತ್ರದೊಳ್ ಎಡೆ ಎನಿತು ಅನಿತುಮ್ ಬರಿದಿಲ್ಲದಂತು ಶವಶತದಿಮ್ ತೆಕ್ಕನೆ ತೀವೆ**=ಕುರುಕ್ಷೇತ್ರ ರಣರಂಗದ ಉದ್ದಗಲದಲ್ಲಿ ಎಷ್ಟು ಜಾಗವಿದೆಯೋ ಅಷ್ಟೆಲ್ಲಾ ಜಾಗದಲ್ಲಿ ತುಸುವಾದರೂ ಜಾಗ ತೆರಪಿಲ್ಲದಂತೆ ನೂರಾರು ಹೆಣಗಳಿಂದ ತುಂಬಿಹೋಗಿರಲು; ರಣ+ಉತ್ಸವದ+ ಇಂದೆ; ರಣ=ಕಾಳೆಗ/ಯುದ್ಧ; ಉತ್ಸವ=ಸಡಗರ; ಅನಿಲಸುತ=ವಾಯುದೇವನ ಮಗ/ಭೀಮ; ಕೊಳ್ಗುಳ=ರಣರಂಗ/ ಯುದ್ಧಭೂಮಿ; ಸಮರು=ಗುಡಿಸಿ ಶುಚಿಮಾಡು/ಬಾಚು/ಹಿಕ್ಕು;

**ರಣೋತ್ಸವದಿಂದೆ ಅನಿಲಸುತನ್ ತಾನೆ ಕೊಳ್ಗುಳಮನ್ ಸಮರಿದನ್**= ಕಾಳೆಗವನ್ನು ಮಾಡಬೇಕೆಂಬ ಸಡಗರದಿಂದ ಭೀಮಸೇನನು ತಾನೆ ಮುಂದೆ ಬಂದು, ರಣರಂಗದಲ್ಲಿ ತುಂಬಿದ್ದ ಹೆಣಗಳನ್ನು, ಆಯುಧಗಳನ್ನು ಮತ್ತು ಮುರಿದು ಬಿದ್ದ ರಥಗಳನ್ನು ಪಕ್ಕಕ್ಕೆ ದೂಡಿ, ಕಸಕಡ್ಡಿಗಳನ್ನು ತೆಗೆದು, ಎಲ್ಲವನ್ನೂ ಗುಡಿಸಿ ಶುಚಿಗೊಳಿಸಿ ಗದಾಯುದ್ಧಕ್ಕೆ ಅಗತ್ಯವಾದಷ್ಟು ಜಾಗವನ್ನು ಅಣಿಗೊಳಿಸಿದನು; ದುರ್ಯೋಧನನೊಡನೆ ಗದಾಯುದ್ಧವನ್ನು ಮಾಡಲು ಆಕ್ರೋಶದಿಂದ ಕುದಿಯುತ್ತಿದ್ದ ಭೀಮಸೇನನು ಹೋರಾಟಕ್ಕೆ ಜಾಗವನ್ನು ಸಿದ್ಧಗೊಳಿಸಿ, ಈ ರೀತಿ ನುಡಿಯತೊಡಗುತ್ತಾನೆ; ಪುದುವು+ಪೆತ್ತ; ಪುದುವು= ಸಮ/ಸಾಟಿ; ಪೆತ್ತ=ಪಡೆದ; ಪುದುವೆತ್ತ=ಸರಿಜೋಡಿಯಾಗಿರುವ/ ಸರಿ ಸಮಾನವಾದ; ಎಕ್ಕಟಿ+ಕಾಳೆಗಮ್; ಎಕ್ಕಟಿ=ಒಬ್ಬಂಟಿಗ/ಏಕಾಂಗಿ; ಎಕ್ಕಟಿಗಾಳೆಗ= ದ್ವಂದ್ವಯುದ್ದ/ಇಬ್ಬರ ನಡುವೆ ಮಾತ್ರ ನಡೆಯುವ ಯುದ್ದ; ಸಮನಿಸು=ಒದಗು/ ಉಂಟಾಗು; **ಪುದುವೆತ್ತ ಎಕ್ಕಟಿಗಾಳೆಗಮ್ ಸಮನಿಸಿತ್ತು**= ಸರಿಸಮಾನವಾದ ಬಲವುಳ್ಳ ನಮ್ಮಿಬ್ಬರ ನಡುವೆ ದ್ವಂದ್ವಯುದ್ದವು ಒದಗಿಬಂದಿದೆ; ತ್ರಿದಶ=ದೇವತೆ;

**ತ್ರಿದಶರ್ ಎಮ್ಮ ಈ ಗದಾಯುದ್ಧಮನ್ ನೋಡಲೆ ಕೌತುಕಮ್ ಬೆರಸಿ ನಭೋಭಾಗದೊಳ್ ಬಂದಿರ್ದರ್**=ನಮ್ಮಿಬ್ಬರ ಈ ಗದಾಯುದ್ಧವನ್ನು ನೋಡುವ ಕುತೂಹಲದಿಂದ ದೇವತೆಗಳು ಗಗನ ಮಂಡಲದಲ್ಲಿ ನೆರೆದಿದ್ದಾರೆ; ಮದವತ್= ಸೊಕ್ಕಿನಿಂದ ಮೆರೆಯುತ್ತಿರುವ; ಇಕ್ಕು=ಹೊಡೆ/ಬಡಿ/ಕೊಲ್ಲು; ಭೂವಳಯಮ್+ ಅಮ್; ಭೂವಳಯ=ಭೂಮಂಡಲ; ನಿಷ್ಕಂಟಕ=ಪೀಡೆಯಿಲ್ಲದಿರುವುದು/ ತೊಂದರೆಯಿಲ್ಲದಿರುವುದು;

**ಮದವತ್ ವೈರಿಯನ್ ಇಕ್ಕಿ... ಭೂವಳಯಮಮ್ ನಿಷ್ಕಂಟಕಮ್ ಮಾಳ್ಪೆನ್**

**ಎಂಬುದನ್ ಎಂದು**=ಸೊಕ್ಕಿನಿಂದ ಮೆರೆಯುತ್ತಿರುವ ಹಗೆಯಾದ ದುರ್ಯೋಧನನನ್ನು ಹೊಡೆದು ಕೊಂದು, ಭೂಮಂಡಲದಲ್ಲಿ ಯಾವುದೇ ಪೀಡೆಯಿಲ್ಲದಂತೆ ಮಾಡುತ್ತೇನೆ ಎಂದು ನುಡಿದು; ಆಹವ=ಯುದ್ಧ/ಕಾಳೆಗ; ಲಂಪಟನ್=ಅತಿಯಾದ ಆಸಕ್ತಿಯುಳ್ಳವನು/ಗೀಳು ಉಳ್ಳವನು; ಕಂಠೀರವ= ಸಿಂಹ; ಚಾಳುಕ್ಯಕಂಠೀರವ=ಇದು ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನಿಗೆ ಇದ್ದ ಬಿರುದು. ರನ್ನ ಕವಿಯು ತಾನು ರಚಿಸಿದ 'ಗದಾಯುದ್ದ' ಕಾವ್ಯದಲ್ಲಿ ಭೀಮಸೇನನ ಪಾತ್ರವನ್ನು ಚಕ್ರವರ್ತಿಯಾದ ಸತ್ಯಾಶ್ರಯನ ಹೆಸರಿನೊಡನೆ ಸಮೀಕರಿಸಿರುವು ದರಿಂದ, ಚಕ್ರವರ್ತಿಯ ಬಿರುದಿನಲ್ಲಿಯೇ ಭೀಮನನ್ನು ಚಿತ್ರಿಸಿದ್ದಾನೆ; ಮಸಗು= ಕೆರಳು/ಉತ್ಸಾಹಗೊಳ್ಳು/ಹುರುಪೇರು; **ಆಹವಲಂಪಟನ್ ಚಾಳುಕ್ಯಕಂಠೀರವನ್ ಮಸಗಿದನ್**=ಯುದ್ಧಪ್ರಿಯನಾದ ಭೀಮಸೇನನು ಹುರುಪಿನಿಂದ ಕಂಗೊಳಿಸಿದನು;

❖

## ನೋಟ–೨೩

# ಸಮಬಲರ ಗದಾಯುದ್ಧ

ಸಮರ=ಕಾಳೆಗ/ಯುದ್ಧ; ಉತ್ಸುಕ=ಚಟುವಟಿಕೆಯುಳ್ಳವನು/ವೇಗಶಾಲಿ; ಚಿತ್ತ=ಮನಸ್ಸು; **ಅಂತು ಸಮರ ಉತ್ಸುಕಚಿತ್ತನಾಗಿ ಸಾಹಸಭೀಮನು**=ಆ ರೀತಿ ದುರ್ಯೋಧನನೊಡನೆ ಯುದ್ಧವನ್ನು ಮಾಡುವ ಉತ್ಸಾಹದ ಮನದ ಪರಾಕ್ರಮಶಾಲಿ ಭೀಮನು; **ದ್ರೋಣಾಚಾರ್ಯರ್ಂಗೆ ಮನದೊಳ್ ನಮಸ್ಕಾರಮ್ ಮಾಡಿ**=ವಿದ್ಯಾಗುರು ದ್ರೋಣಾಚಾರ್ಯನಿಗೆ ಮನದಲ್ಲಿಯೇ ನಮಸ್ಕಾರವನ್ನು ಮಾಡಿ; ಬಲದೇವ=ಕೃಷ್ಣನ ಅಣ್ಣನಾದ ಬಲರಾಮನು ಭೀಮ ಮತ್ತು ದುರ್ಯೋಧನ ಇಬ್ಬರಿಗೂ ಕೆಲಕಾಲ ಗದಾವಿದ್ಯೆಯ ಕುಶಲತೆಯ ಕೆಲ ಸಂಗತಿಗಳನ್ನು ಹೇಳಿಕೊಟ್ಟಿದ್ದ ಗುರುವಾಗಿದ್ದನು; **ದುರ್ಯೋಧನನ್ ಬಲದೇವಂಗೆ ನಮಸ್ಕಾರಮ್ ಮಾಡಿ**=ದುರ್ಯೋಧನನು ಬಲರಾಮನಿಗೆ ನಮಸ್ಕಾರವನ್ನು ಮಾಡಿ; ಕನಕ=ಚಿನ್ನ; ರಜತ=ಬೆಳ್ಳಿ; ವಿಚಿತ್ರ=ಅನೇಕ ಬಣ್ಣಗಳಿಂದ ಕೂಡಿದ; ಅಲಂಕೃತ=ಸಿಂಗಾರಗೊಂಡ; ಸಮನ್ವಿತಂಗಳ್+ಅಪ್ಪ; ಸಮನ್ವಿತ=ಕೂಡಿದ;

**ಕನಕ ರಜತ ವಿಚಿತ್ರ ಅಲಂಕೃತ ಸ್ವರೂಪ ಸಮನ್ವಿತಂಗಳಪ್ಪ ಗದೆಗಳನ್ ಇರ್ವರುಮ್ ಆಯ್ದುಕೊಂಡು**=ಚಿನ್ನ ಬೆಳ್ಳಿಯ ಬಣ್ಣಬಣ್ಣದ ರೇಕುಗಳಿಂದ ಕೂಡಿ ಸಿಂಗಾರಗೊಂಡು ಸುಂದರವಾಗಿ ರೂಪುಗೊಂಡಿರುವ ಗದೆಗಳನ್ನು ಇಬ್ಬರೂ ಆಯ್ಕೆ ಮಾಡಿಕೊಂಡು; ವೈಶಾಖಸ್ಥಾನದ+ಒಳ್; **ವೈಶಾಖಸ್ಥಾನ**=ದ್ವಂದ್ವಯುದ್ಧದಲ್ಲಿ ತೊಡಗುವ ವ್ಯಕ್ತಿಗಳು ನಿಲ್ಲುವ ಆರು ಬಗೆಯ ನಿಲುವುಗಳಲ್ಲಿ/ಭಂಗಿಗಳಲ್ಲಿ ಇದು ಒಂದು ಬಗೆಯದು; **ವೈಶಾಖಸ್ಥಾನದೊಳ್ ನಿಂದು**=ಗದೆಗಳನ್ನು ಹಿಡಿದುಕೊಂಡು ವೈಶಾಖಸ್ಥಾನದ ಭಂಗಿಯಲ್ಲಿ ನಿಂತುಕೊಂಡು; ಸ್ಥಿರ=ಶಾಶ್ವತವಾದ; ಬದ್ಧ=

ಬಲವಾದ; ಮತ್ಸರ=ಹಗೆ/ಕೋಪ; ಸ್ಥಿರಬದ್ಧ ಮತ್ಸರರ್=ಶಾಶ್ವತವಾದ ಮತ್ತು ಪ್ರಬಲವಾದ ಹಗೆತನವುಳ್ಳವರು; ಭೀಕರಬದ್ಧ=ಭಯಂಕರವಾದ ರೀತಿಯಲ್ಲಿ; ಭ್ರುಕುಟಿ=ಗಂಟಿಕ್ಕಿದ ಹುಬ್ಬು; ಘಟಿತ=ಕೂಡಿದ/ಉಂಟಾದ;

**ಭೀಕರಬದ್ಧ ಭ್ರುಕುಟಿಘಟಿತರ್**=ಭಯಂಕರವಾಗಿ ಹುಬ್ಬುಗಂಟಿಕ್ಕಿದವರು; **ಅದ್ಭುತರ್**=ದೇಹ ಬಲ, ಪರಾಕ್ರಮ ಮತ್ತು ಹಗೆತನದಲ್ಲಿ ಅಚ್ಚರಿಯನ್ನುಂಟು ಮಾಡುವವರು; **ಅಟ್ಟಾಸುರರ್**=ಅತಿ ಭಯಂಕರವಾದ ವ್ಯಕ್ತಿಗಳು; ಪಾಟಲ=ತಿಳಿ ಕೆಂಪು ಬಣ್ಣ; ಪರುಷ+ಈಕ್ಷಣರ್; ಪರುಷ=ಗಡುಸಾದುದು/ಬಿರುಸಾದುದು; ಈಕ್ಷಣ=ಕಣ್ಣು; ದೃಷ್ಟಿಯುದ್ಧ=ರೆಪ್ಪೆಯನ್ನು ಮಿಟುಕಿಸಿದೆ ಒಂದೇ ಸಮನೆ ಎದುರಾಳಿಯನ್ನು ನೋಡುತ್ತಿರುವುದು. ದೃಷ್ಟಿಯುದ್ಧದಲ್ಲಿ ಯಾರು ಕಣ್ಣು ರೆಪ್ಪೆಯನ್ನು ಮೊದಲು ಮಿಟುಕಿಸುತ್ತಾರೆಯೋ ಅವರು ಸೋಲನ್ನಪ್ಪುತ್ತಾರೆ; **ಅಧಿಕ ಕೋಪ ಪಾಟಲ ಪರುಷೇಕ್ಷಣರ್ ಎನಿಸಿ ದೃಷ್ಟಿಯುದ್ಧಮ್ ಗೆಯ್ದರ್**=ಹೆಚ್ಚಿನ ಕೋಪೋದ್ರೇಕದಿಂದ ಇಬ್ಬರ ಕಣ್ಣುಗಳು ಕೆಂಪಗಾಗಿದ್ದವು. ಗದಾಯುದ್ಧಕ್ಕೆ ಮೊದಲು ಒಬ್ಬರನ್ನೊಬ್ಬರು ದುರುಗುಟ್ಟಿಕೊಂಡು ನೋಡುತ್ತ ದೃಷ್ಟಿಯುದ್ಧದಲ್ಲಿ ತೊಡಗಿದರು; ಕಡೆ+ಕಣ್ಣ್+ಒಳ್; ಕಡೆಗಣ್ಣು=ಕಣ್ಣಿನ ಅಂಚು/ತುದಿ; ಒಳ್=ಅಲ್ಲಿ; ಪಸರಿಸು=ಹರಡು; ಕಡುಗೆಂಪು=ದಟ್ಟವಾದ ಕೆಂಪುಬಣ್ಣ; ದೆಸೆ=ದಿಕ್ಕು; ಪ್ರಸೂನ= ಹೂವು; ಜಪಾಪ್ರಸೂನ=ಕೆಂಪನೆಯ ದಾಸವಾಳದ ಹೂವು; ಎಸೆ=ಕಂಗೊಳಿಸು;

**ಭೀಮದುರ್ಯೋಧನರಾ ಕಡೆಗಣ್ಣೊಳ್ ಪಸರಿಸೆ ಕಡುಗೆಂಪು ದೆಸೆದೇವತೆಗಳ್ಗೆ ಜಪಾಪ್ರಸೂನಮಮ್ ರಕ್ತಬಲಿಯುಮಮ್ ತಾಮ್ ಕುಡುವಂತೆ ಎಸೆದಿರ್ದರ್**= ಕೋಪೋದ್ರೇಕದಿಂದ ದೃಷ್ಟಿಯುದ್ಧದಲ್ಲಿ ತೊಡಗಿದ ಭೀಮ ದುರ್ಯೋಧನರ ಕಣ್ಣಂಚಿನಲ್ಲಿ ಕೆಂಪನೆಯ ಬಣ್ಣವು ಹರಡಲು, ಅವರಿಬ್ಬರೂ ಕೆಂಗಣ್ಣುಗಳಿಂದಲೇ ದಿಕ್ಕಿನ ದೇವತೆಗಳಿಗೆ ದಾಸವಾಳದ ಹೂವನ್ನು ಅರ್ಪಿಸುತ್ತಿರುವಂತೆಯೂ ರಕ್ತಬಲಿಯನ್ನು ಕೊಡುತ್ತಿರುವಂತೆಯೂ ಕಂಗೊಳಿಸುತ್ತಿದ್ದರು; ಬಿಚ್ಚನೆ= ಅಗಲವಾಗಿ; ಬಿಟ್ಟಿರ್ದ=ತೆರೆದಿದ್ದ; ಉರಿ=ಬೆಂಕಿ; ಉಗುಳ್=ಹೊರಸೂಸು; ಬಿಸುನೆತ್ತರ್=ಬಿಸಿಯಾದ ರಕ್ತ; ಎತ್ತಮ್= ಎಲ್ಲೆಡೆಯಲ್ಲಿಯೂ; ಸೂಸು=ಎರಚು/ ಚಿಮ್ಮು; ಎನಸುಮ್=ಬಹಳವಾಗಿ;

**ಬಿಚ್ಚನೆ ಬಿಟ್ಟಿರ್ದ ಎರಡುಮ್ ಕಣ್ಗಳೊಳ್ ಅವರ್ ಒರ್ಬರನ್ ಒರ್ಬರ್ ನುಂಗುವಂತೆ ಉರಿಯನ್ ಉಗುಳ್ವಂತೆ... ಬಿಸುನೆತ್ತರನ್ ಎತ್ತಮ್ ಸೂಸುವಂತೆ ಎನಸುಮ್ ನೋಡಿದರ್**=ಅಗಲವಾಗಿ ತೆರೆದಿದ್ದ ಎರಡು ಕಣ್ಣುಗಳಿಂದ ಅವರು ಒಬ್ಬರನ್ನು ಒಬ್ಬರು ನುಂಗುವಂತೆ ನೋಡುತ್ತ, ಬೆಂಕಿಯನ್ನು ಹೊರಸೂಸುವಂತೆ ಬಿಸಿರಕ್ತವನ್ನು ಎಲ್ಲೆಡೆಯಲ್ಲಿಯೂ ಎರಚುವಂತೆ ದುರುಗುಟ್ಟಿಕೊಂಡು ನೋಡಿದರು;

ಉದಯ+ಅದ್ರಿ+ಉಮ್; ಉದಯ=ಹುಟ್ಟು; ಅದ್ರಿ=ಬೆಟ್ಟ/ಪರ್ವತ; ಉದಯಾದ್ರಿ= ಸೂರ್ಯನು ಮೂಡುವ ಮೂಡಲ ದಿಕ್ಕಿನಲ್ಲಿರುವ ಬೆಟ್ಟ; ಅಸ್ತ+ಅದ್ರಿ+ಉಮ್; ಅಸ್ತ=ಮರೆಯಾದ; ಅಸ್ತಾದ್ರಿ=ಸೂರ್ಯನು ಮರೆಯಾಗುವ ಪಡುವಲ ದಿಕ್ಕಿನಲ್ಲಿರುವ ಬೆಟ್ಟ; ಉದಗ್ರ=ಹೆಚ್ಚಾದ/ಎತ್ತರವಾದ; ಉತ್ಕರ=ರಾಶಿ/ಗುಂಪು; **ಉದಯಾದ್ರಿಯುಮ್ ಅಸ್ತಾದ್ರಿಯುಮ್ ಉದಗ್ರ ಕೋಪ ಉತ್ಕರಂಗಳ್ ಇರ್ಪಂತಿರೆ**=ಮೂಡಣ ದಿಕ್ಕಿನ ಬೆಟ್ಟ ಮತ್ತು ಪಡುವಣ ದಿಕ್ಕಿನ ಬೆಟ್ಟಗಳು ಕೋಪೋದ್ರೇಕದಿಂದ ಕೂಡಿ ಪರಸ್ಪರ ಹೋರಾಡಲು ಅಣಿಯಾಗಿರುವಂತೆ; ಉನ್ನತಮೂರ್ತಿ=ಎತ್ತರವಾದ ದೇಹ; ಭುಜಗ=ಹಾವು; ಭುಜಗಧ್ವಜ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜ ಲಾಂಛನವಾಗುಳ್ಳವನು/ದುರ್ಯೋಧನ; ಒದವು=ಅಣಿಯಾಗು; ನೀಳ್=ಉದ್ದವಾಗು/ಮುನ್ನುಗ್ಗು;

**ಉನ್ನತಮೂರ್ತಿಗಳ್ ಭೀಮ ಭುಜಗಧ್ವಜರುಮ್ ಗದಾಯುಧದೆ ಒದವಿ ನೀಳ್ದು ಒದವಿದರ್**=ಎತ್ತರದ ಮಯ್ ಕಟ್ಟಿನ ಭೀಮ ದುರ್ಯೋಧನರು ಗದೆಗಳನ್ನು ಹಿಡಿದುಕೊಂಡು ಪರಸ್ಪರ ಎದುರುಬದುರಾಗಿ ಗದಾಯುದ್ಧಕ್ಕೆ ಮುನ್ನುಗ್ಗಿದರು; ಕಿರಿದು=ಚಿಕ್ಕದು/ಸಣ್ಣದು; ಮೆಟ್ಟು=ಹೆಜ್ಜೆ ಇಡು; **ಮುಂದಮ್ ಕಿರಿಕಿರಿದೆ ಮೆಟ್ಟಿ= ಮುಂದಕ್ಕೆ ಚಿಕ್ಕ ಚಿಕ್ಕದಾಗಿ ಹೆಜ್ಜೆಯಿಟ್ಟು; ಸಾರ್**=ಹತ್ತಿರಕ್ಕೆ ಬರು; ಕಿರಿಕಿರಿದನೆ ಸಾರ್ಚಿ=ತುಸು ತುಸು ಹತ್ತಿರಕ್ಕೆ ಬಂದು; **ಆಗಳ್ ತಮ್ಮ ಗದೆಗಳನ್ ಕಿರಿಕಿರಿದೆ ತಿರಿಪಿ**=ಆಗ ತಮ್ಮ ಗದೆಗಳನ್ನು ಸ್ವಲ್ಪ ಸ್ವಲ್ಪವೇ ತಿರುಗಿಸುತ್ತ; ಮಾಣದೆ=ಬಿಡದೆ/ ಸುಮ್ಮನಾಗದೆ; ತೂಂಕು=ಅತ್ತಿತ್ತ ಆಡಿಸು/ಹೊರಳಿಸು; ಎನಸುಮ್=ಬಹಳವಾಗಿ/ ಹೆಚ್ಚಾಗಿ; ನೂಂಕು=ತಳ್ಳು/ದೂಡು/ದಬ್ಬು; ಮಾಣದೆ ಕಿರಿಕಿರಿದನೆ ತೂಂಕಿ ತೂಂಕಿ ಎನಸುಮ್ ನೂಂಕಿದರ್=ಗದೆಯನ್ನು ತಿರುಗಿಸುತ್ತಲೇ ಸುಮ್ಮನೆ ನಿಲ್ಲದೆ... ಕಿರಿಕಿರಿದಾಗಿ ಗದೆಯನ್ನು ಅತ್ತಿತ್ತ ಹೊರಳಿಸುತ್ತ ಜೋರಾಗಿ ಮುಂದಕ್ಕೆ ತಳ್ಳಿದರು; ಅಡಿ=ಹೆಜ್ಜೆ; ಪುಗಿಸು=ಒಳಗಿಡು; ಪೊರಗೆ+ಇಡುವ; ದಂಡೆ=ಗದೆ; ನಿಳ್ಕು=ತಾಗು/ ಮುಟ್ಟು/ತಾಡಿಸು/ಹೊಡೆ; ಬೆಡಂಗು=ಗತ್ತು/ನಿಪುಣತೆ; ರಂಜಿಸು= ಮನೋಹರವಾಗು/ಶೋಭಿಸು;

**ಎಡದ ಅಡಿಯಮ್ ಪುಗಿಸುವ... ಬಲದ ಅಡಿಯಮ್ ಪೊರಗಿಡುವ... ದಂಡೆಯಮ್ ನಿಳ್ಕುವ... ಕಯ್ ನಡುಗದೆ ಗದೆಯನ್ ಬೀಸುವ ಭೀಮ ದುರ್ಯೋಧನರಾ ಬೆಡಂಗು ರಂಜಿಸಿತು**=ಎಡದ ಹೆಜ್ಜೆಯನ್ನು ಹಿಂದಕ್ಕಿಟ್ಟು... ಬಲದ ಹೆಜ್ಜೆಯನ್ನು ಮುಂದಕ್ಕೆ ಇಟ್ಟು... ಗದೆಯಿಂದ ಹೊಡೆಯುತ್ತ... ಕಯ್ ನಡುಗದೆ ಗದೆಯನ್ನು ಬೀಸುತ್ತಿರುವ ಭೀಮ ದುರ್ಯೋಧನರ ಗದಾಯುದ್ಧದ ನಿಪುಣತೆಯು ಮನೋಹರವಾಗಿ ಕಂಡುಬಂದಿತು; ದಪ್ಪರಿದಟ್ಟು/ಪೊಟ್ಟು/

ದೊಪ್ಪಧೊಗಪ್ಪು/ದಿಧಿಲ್/ಬುಧಿಲ್=ಇವೆಲ್ಲವೂ ಅನುಕರಣ ಪದಗಳು. ದೊಡ್ಡದಾಗಿ ಕೇಳಿಬರುವ ಶಬ್ದವನ್ನು ಸೂಚಿಸುವ ಪದಗಳಿಗೆ ಅನುಕರಣ ಪದಗಳೆಂದು ಹೆಸರು; ಉಕ್ಕು ಚಿನ್ನ ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿರುವ ಗದೆಗಳಿಂದ ಯುದ್ಧ ಮಾಡುತ್ತಿರುವಾಗ, ಗದೆಗಳ ಬಡಿಯುವಿಕೆಯಿಂದ ಮತ್ತು ಗದೆಯಿಂದ ದೇಹದ ಮೇಲೆ ಹೊಡೆದಾಗ, ಕಾದಾಡುವವರು ತೊಟ್ಟಿರುವ ಉಕ್ಕಿನ ಕವಚದ ಮೇಲೆ ಗದೆಯ ಹೊಡೆತ ಬಿದ್ದಾಗ ಉಂಟಾಗುತ್ತಿರುವ ಶಬ್ದವನ್ನು ಈ ಪದಗಳು ಸೂಚಿಸುತ್ತಿವೆ; ಪೊಟ್ಟ+ಎನೆ; ಎನೆ=ಎನ್ನುವಂತೆ; ಸೊಪ್ಪುಸೊವಡು+ ಅಪ್ಪಿನಮ್; ಸೊಪ್ಪುಸೊವಡು=ನಜ್ಜುಗುಜ್ಜಾಗು/ನುಗ್ಗುನುರಿಯಾಗು; ಸೂಳ್= ಸರದಿ; ಸೂಳ್ ತಪ್ಪದೆ=ತಮ್ಮ ಸರದಿಯನ್ನು ಬಿಡದೆ/ಒಬ್ಬರಿಗೊಬ್ಬರು ಹೊಡೆಯುವ ಅವಕಾಶವನ್ನು ಬಿಡದೆ; ಕಡುಕೆಯ್=ತೀವ್ರವಾಗು/ಶೂರತನವನ್ನು ತೋರು;

**ದಪ್ಪರಿದಟ್ಟುಮ್ ಪೊಟ್ಟೆನೆ... ದೊಪ್ಪಧೊಗಪ್ಪೆನೆ... ದಿಧಿಲ್ ಬುಧಿಲ್ಲೆನೆ ಮೆಯ್ಗಳ್ ಸೊಪ್ಪುಸೊವಡಪ್ಪಿನಮ್ ಸೂಳ್ ತಪ್ಪದೆ ಕಡುಕೆಯ್ದು... ಒರ್ವರನ್ ಒರ್ವರ್ ಪೊಯ್ದರ್**=ಭೀಮ ಮತ್ತು ದುರ್ಯೋಧನರು ಗದೆಗಳನ್ನು ಕುಶಲತೆಯಿಂದ ಬೀಸುತ್ತ, ಪರಸ್ಪರ ಬಡಿದಾಡುತ್ತಿರುವಾಗ ಗದೆಗಳ ತಿಕ್ಕಾಟದಿಂದ ಮತ್ತು ಮಯ್ ಮೇಲೆ ಬೀಳುತ್ತಿರುವ ಗದೆಗಳ ಪೆಟ್ಟಿನಿಂದ **'ದಪ್ಪರಿದಟ್ಟುಮ್ ಪೊಟ್ಟ್ ದೊಪ್ಪದೊಗಪ್ ದಿದಿಲ್ ಬುದಿಲ್'** ಎಂಬ ಶಬ್ದ ಹೊರಹೊಮ್ಮುತ್ತಿರಲು, ಮಯ್ ಮೇಲೆ ಬಿದ್ದ ಗದೆಯ ಪೆಟ್ಟಿನಿಂದ ಇಬ್ಬರ ದೇಹದ ಮಾಂಸ ಖಂಡಗಳು ನಜ್ಜುಗುಜ್ಜಾಗುತ್ತಿರಲು... ಹೊಡೆಯುವ ಅವಕಾಶವನ್ನು ಬಿಡದೆ, ತೀವ್ರತರವಾಗಿ ಒಬ್ಬರನ್ನೊಬ್ಬರು ಹೊಡೆಯತೊಡಗಿದರು; ಪಗಲ್=ಹಗಲು; ಉಳ್ಕ/ ಉಳ್ಕೆ=ಆಕಾಶದಿಂದ ಕೆಳಕ್ಕೆ ಬೀಳುವ ತೇಜಸ್ಸಿನಿಂದ ಕೂಡಿದ ವಸ್ತು; ಉಳ್ಕುವ+ಅಂದದಿನ್; ಉಳ್ಕು=ಅತಿ ಪ್ರಕಾಶಮಾನವಾಗು/ಪ್ರವಾಹವಾಗಿ ಹರಿ; ಒಗೆ=ಹುಟ್ಟು/ಕಾಣಿಸಿಕೊಳ್ಳು; ಶಲ್ಕ=ತುಂಡು/ಚೂರು;

**ಪಗಲ್ ಉಳ್ಕಮ್ ಉಳ್ಕುವಂದದಿನ್ ಒಗೆವ ಗದಾಶಲ್ಕಮ್ ಉಳ್ಕೆ**= ಹಗಲಿನಲ್ಲಿಯೇ ಗಗನದಿಂದ ಪ್ರಕಾಶಮಾನವಾದ ಆಕಾಶಕಾಯಗಳು ಕೆಳಕ್ಕೆ ಉರುಳುವಂತೆ ಗದೆಗಳ ಬಡಿತದಿಂದ ಚಿನ್ನ ಬೆಳ್ಳಿಯ ಲೋಹದ ಹೊಳೆ ಹೊಳೆಯುವ ಚಕ್ಕೆಗಳು ಹಾರಿ ಹಾರಿ ಬೀಳುತ್ತಿರಲು; ದಿವಿಜ=ದೇವತೆ; **ದಿವಿಜರ್ ಕಣ್ಣಮ್ ಮುಚ್ಚಲ್ ಬಗೆಯೆ**=ಕೋರೈಸುತ್ತ ಎಲ್ಲೆಡೆ ಹಾರಿ ಬೀಳುತ್ತಿರುವ ಗದೆಯ ಚಕ್ಕೆಗಳನ್ನು ನೋಡಲಾರದೆ ದೇವತೆಗಳು ಕಣ್ಣುಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿರಲು; ಆಹವ=ಯುದ್ಧ/ಕಾಳಗ; ಅಗುರ್ವು=ಉಗ್ರತೆ/ಭಯಂಕರತೆ; **ಕುರುಪಾಂಡವರ ಆ ಗದಾ ಆಹವಮ್ ಅಗುರ್ವುಮ್ ಅದ್ಭುತಮುಮ್**

**ಆಯ್ತು**=ದುರ್ಯೋಧನ ಮತ್ತು ಭೀಮನ ಗದಾಯುದ್ಧ ಭಯಂಕರವಾಗಿತ್ತು ಹಾಗೂ ಅತಿ ಅಚ್ಚರಿಯನ್ನುಂಟು ಮಾಡುತ್ತಿತ್ತು; ಘಟ್ಟಿಸು=ಹೊಡೆ/ಬಡಿ/ಅಪ್ಪಳಿಸು; ತಂಡ=ಸಮೂಹ; ಪುದಿ=ಆವರಿಸು/ತುಂಬಿಸು; ಪದಧೂಳಿ=ಕಾಲಿನ ದೂಳು; ಒದವು=ಉಂಟಾಗು; ಸುರ=ದೇವತೆ;

**ಗದೆ ಗದೆಯನ್ ಘಟ್ಟಿಸೆ... ಪುಟ್ಟಿದ ಕೆಂಡದ ಕಿಡಿಯ ತಂಡ... ಎಣ್ಬುಮ್ ದೆಸೆಯಮ್ ಪುದಿಯೆ... ಪದಧೂಳಿ ಗಗನದೊಳ್ ಒದವೆ... ಸುರರ್ ಬೆದರೆ... ಕಡುಗಲಿಗಳ್ ಕಾದಿದರ್**=ಭೀಮ ದುರ್ಯೋಧನರ ಗದೆಗಳ ಪರಸ್ಪರ ತಾಡನದಿಂದ ಹುಟ್ಟಿದ ಕೆಂಡದ ಕಿಡಿಗಳು ಎಂಟು ದಿಕ್ಕಿನಲ್ಲಿಯೂ ತುಂಬಿಕೊಳ್ಳಲು, ಭೀಮ ದುರ್ಯೋಧನರು ಯುದ್ಧ ಮಾಡುತ್ತ ಅತ್ತಿತ್ತ ಅಡಿಗಳನ್ನಿಡುತ್ತಿರುವಾಗ ಅವರ ಪಾದಗಳ ತುಳಿತದಿಂದ ದೂಳು ಮೇಲೇರುತ್ತಿರಲು, ಈ ಭಯಾನಕವಾದ ಗದಾಯುದ್ಧವನ್ನು ನೋಡನೋಡುತ್ತ ದೇವತೆಗಳು ಹೆದರಿಕೆಯಿಂದ ನಡುಗುತ್ತಿರಲು, ಕಡುಗಲಿಗಳಾದ ಭೀಮ ದುರ್ಯೋಧನರು ಪರಾಕ್ರಮದಿಂದ ಕಾದಾಡುತ್ತಿದ್ದರು; ಗದಾಯುದ್ಧದಲ್ಲಿ ತೊಡಗಿರುವ ಭೀಮ ಮತ್ತು ದುರ್ಯೋಧನರ ಮಯ್ ಮೇಲೆ ಬೀಳುತ್ತಿರುವ ಗದೆಯ ಹೊಡೆತದಿಂದ ಉಂಟಾದ ಗಾಯಗಳಿಂದ ನೆತ್ತರು ಹರಿಯುತ್ತಿರುವುದನ್ನು ರೂಪಕದ ನುಡಿಗಳ ಮೂಲಕ ಕವಿಯು ಚಿತ್ರಿಸಿದ್ದಾನೆ; ವಾರಣ=ಆನೆ; ಸಿಕ್ತ= ತೊಯ್ದು/ ನೆನೆದ/ ಒದ್ದೆಯಾದ; ಮೃಗರಾಜ=ಸಿಂಹ; ಯುಗ=ಜೋಡಿ/ಎರಡು; ಎಣೆ=ಸಾಟಿ/ಸಮ;

**ವಾರಣ ರಕ್ತಸಿಕ್ತ ಮೃಗರಾಜಯುಗಕ್ಕೆ ಎಣೆ**=ಆನೆಯೊಂದನ್ನು ಬೇಟೆಯಾಡು ತ್ತಿರುವಾಗ ಆನೆಯ ನೆತ್ತರಿನಲ್ಲಿ ತೊಯ್ದಿರುವ ಎರಡು ಸಿಂಹಗಳಿಗೆ ಸಾಟಿ ಎನ್ನುವಂತೆ; ನವ=ಹೊಸ; ಪ್ರಸೂನ=ಹೂವು; ನವಸೂನ=ಆಗ ತಾನೆ ಅರಳಿದ ಹೂವು; ರಾಗ=ಬಣ್ಣ; ಅರುಣ=ಕೆಂಪುಬಣ್ಣ; ಕಿಂಶುಕ=ಮುತ್ತುಗದ ಮರ; ದ್ರುಮ=ಮರ; **ನವಪ್ರಸೂನ ರಾಗ ಅರುಣ ಕಿಂಶುಕ ದ್ರುಮಯುಗಕ್ಕೆ ಎಣೆ**=ಆಗ ತಾನೇ ಅರಳಿರುವ ಕೆಂಪನೆಯ ಬಣ್ಣದ ಹೂಗಳಿಂದ ಕಂಗೊಳಿಸುತ್ತಿರುವ ಎರಡು ಮುತ್ತುಗದ ಮರಗಳಿಗೆ ಸಾಟಿ ಎನ್ನುವಂತೆ; ಧಾತು=ಕೆಂಪುಬಣ್ಣದ ಕಲ್ಲು; ಸಧಾತು=ಕೆಂಪುಬಣ್ಣದಿಂದ ಕೂಡಿರುವ ಕಲ್ಲು; ಕುಭೃತ್=ಬೆಟ್ಟ; **ಸಧಾತು ಕುಭೃತ್ ಯುಗಕ್ಕೆ ಎಣೆ**=ಕೆಂಪು ಬಣ್ಣದ ಕಲ್ಲು ಬಂಡೆಗಳಿಂದ ಕೂಡಿರುವ ಎರಡು ಬೆಟ್ಟಗಳಿಗೆ ಸಮ ಎನ್ನುವಂತೆ; ಸಿಂದೂರಿತ=ಕೇಸರಿ ಬಣ್ಣದಿಂದ ಕೂಡಿದ; ಗಂಧ= ಶ್ರೀಗಂಧ ಮರದ ಕೊರಡನ್ನು ನೀರಿನಲ್ಲಿ ತೇದಾಗ, ನಸುಗೆಂಪುಬಣ್ಣದ ಹಸಿಯಾದ ಗಂಧ ದೊರೆಯುತ್ತದೆ. ಅದನ್ನು ಹಣೆಗೆ ಮತ್ತು ತೋಳುಗಳಿಗೆ ಬೊಟ್ಟನ್ನಾಗಿ ಇಟ್ಟುಕೊಳ್ಳಲಾಗುತ್ತದೆ; ಸಿಂಧುರ=ಆನೆ; ಸಿಂಧುರಯುಗ=ಎರಡು ಆನೆಗಳು;

**ಸಿಂದೂರಿತ ಗಂಧ ಸಿಂಧುರಯುಗಕ್ಕೆ ಎಣೆ ಎಂಬಿನಮ್**=ಕೇಸರಿಬಣ್ಣದಿಂದ ಕೂಡಿ ಸಿರಿಗಂಧದ ಲೇಪನವನ್ನು ಬಳಿದುಕೊಂಡಿರುವ ಎರಡು ಆನೆಗಳಿಗೆ ಸಾಟಿ ಎನ್ನುವಂತೆ; ರುದಿರ+ಅಕ್ತ+ಮೂರ್ತಿಗಳ್; ರುದಿರ=ರಕ್ತ/ನೆತ್ತರು; ಅಕ್ತ=ಬಳಿದ/ ಲೇಪಿಸಿದ; ಮೂರ್ತಿ=ದೇಹ/ಶರೀರ; ಅಣ್ಮು=ಪರಾಕ್ರಮ; **ರುಧಿರಾಕ್ತಮೂರ್ತಿಗಳ್ ಕೌರವರಾಜನುಮ್ ಕುರುಕುಲಾಂತಕನುಮ್ ಅಣ್ಮಿ ಕಾದಿದರ್**=ನೆತ್ತರು ಮೆತ್ತಿಕೊಂಡಿರುವ ದುರ್ಯೋಧನನು ಮತ್ತು ಭೀಮಸೇನನು ಪರಾಕ್ರಮದಿಂದ ಹೋರಾಡುತ್ತಿದ್ದಾರೆ; ಇದುವರೆಗೆ ಯಾವ ಮಾತನ್ನು ಆಡದೆ ಗದಾಯುದ್ದದಲ್ಲಿ ತೊಡಗಿದ್ದ ದುರ್ಯೋಧನ ಮತ್ತು ಭೀಮಸೇನರು ಈಗ ಗದೆಯಿಂದ ಅಪ್ಪಳಿಸುವುದಕ್ಕೆ ಮುನ್ನ ಒಬ್ಬ ಮತ್ತೊಬ್ಬನನ್ನು ಹಂಗಿಸುತ್ತ ಹೊಡೆಯತೊಡಗುತ್ತಾರೆ; ಮೊದಲು ದುರ್ಯೋಧನನು ಭೀಮಸೇನನನ್ನು ಹಂಗಿಸುತ್ತ ಹೊಡೆಯುತ್ತಾನೆ; ಕರಿ=ಆನೆ; ನುಂಗು=ಕೊಲ್ಲು; ಕಳಿಂಗ=ಕಳಿಂಗ ದೇಶದ ರಾಜ ಭಗದತ್ತ; ನೊಣೆ=ನುಂಗು/ಕಬಳಿಸು/ನಾಶಮಾಡು;

**ಕರಿಯಮ್ ನುಂಗಿ ಕಳಿಂಗನನ್ ನೊಣೆದ ದರ್ಪಕ್ಕೆ ಒಂದುಗೊಳ್**=ಕುರುಕ್ಷೇತ್ರ ರಣರಂಗದಲ್ಲಿ ಆನೆಯನ್ನು ಕೊಂದು ಕಳಿಂಗ ದೇಶದ ರಾಜ ಭಗದತ್ತನನ್ನು ಬಲಿ ತೆಗೆದುಕೊಂಡ ಸೊಕ್ಕಿಗೆ ಈ ಒಂದು ಹೊಡೆತವನ್ನು ತಿನ್ನು; ಮತ್=ನನ್ನ; **ಮತ್ ಸಹೋದರರಮ್ ಕೋಪದೆ ತಿಂದುದರ್ಕೆ ಎರಡುಗೊಳ್**=ನನ್ನ ತಮ್ಮಂದಿರನ್ನು ಕೋಪದಿಂದ ಕೊಂದುದಕ್ಕೆ ಎರಡು ಹೊಡೆತವನ್ನು ತಿನ್ನು; ಉರಸ್ಸ್ಥಳ=ಎದೆಯ ಭಾಗ; ಕ್ಷರತ್=ಚಿಮ್ಮುತ್ತಿರುವ; ಅಸ್ರ+ಅಂಬು+ಅನ್; ಅಸ್ರ=ರಕ್ತ; ಅಂಬು=ನೀರು; ಅಸ್ರಾಂಬು=ನೆತ್ತರಿನ ಕೋಡಿ; ಆರ್=ತಣಿ; ಮುಳಿಸು=ಕೋಪ/ಆಕ್ರೋಶ; ಮಚ್ಚರ=ಹೊಟ್ಟೆಕಿಚ್ಚು; ಓವು=ದಯೆ/ಕರುಣೆ; ಓವದೆ=ಕರುಣೆಯಿಲ್ಲದೆ; **ದುಶ್ಶಾಸನ ಉರಸ್ಸ್ಥಳ ಕ್ಷರತ್ ಅಸ್ರಾಂಬುವನ್ ಆರ್ದು ಪೀರ್ದ ಮುಳಿಸಿಂಗಮ್ ಮೂರುಗೊಳ್ಳ್ ಎಂದು ಮಚ್ಚರದಿಂದೆ ಓವದೆ ದುರ್ಯೋಧನನ್ ಗದೆಯಮ್ ಎತ್ತಿ ಭೀಮನನ್ ಪೊಯ್ದನ್**=ನನ್ನ ತಮ್ಮನಾದ ದುಶ್ಶಾಸನನ ಎದೆಯನ್ನು ಸೀಳಿದಾಗ ಚಿಮ್ಮಿದ ನೆತ್ತರಿನ ಕೋಡಿಯಲ್ಲಿ ಮನ ತಣಿಯುವ ತನಕ ನೆತ್ತರನ್ನು ಕುಡಿದ ನಿನ್ನ ಆಕ್ರೋಶಕ್ಕೆ ಮೂರು ಹೊಡೆತವನ್ನು ತಿನ್ನು ಎನ್ನುತ್ತ ದುರ್ಯೋಧನನು ಹೊಟ್ಟೆಕಿಚ್ಚಿನಿಂದ ಯಾವುದೇ ಕರುಣೆಯಿಲ್ಲದೆ ಗದೆಯನ್ನು ಎತ್ತಿ ಬೀಸುತ್ತ ಭೀಮನನ್ನು ಹೊಡೆದನು;

**ಎಂದು ಮುಟ್ಟಿ ಮೂದಲಿಸೆ**=ಈ ರೀತಿ ದುರ್ಯೋಧನನು ಭೀಮಸೇನನ ಮನಸ್ಸು ಗಾಸಿಗೊಳ್ಳುವಂತೆ ಹಂಗಿಸುತ್ತ ಹೊಡೆಯಲು, ಅದಕ್ಕೆ ಪ್ರತಿಯಾಗಿ ಭೀಮಸೇನನು ದುರ್ಯೋಧನನು ಇದುವರೆಗೂ ಪಾಂಡವರಾದ ತಮಗೆ

ಮಾಡಿದ್ದ ಕಪಟತನದ, ಅಪಮಾನದ ಮತ್ತು ಕೇಡಿನ ಕೆಲಸಗಳೆಲ್ಲವನ್ನೂ ಎತ್ತಿ ಆಡುತ್ತ ಗದೆಯಿಂದ ಅಪ್ಪಳಿಸತೊಡಗುತ್ತಾನೆ; ಲಾಕ್ಷಾಗೇಹ=ಅರಗಿನ ಮನೆ; ದಾಹ=ಕಿಚ್ಚು/ಬೆಂಕಿ; **ಇದು ಲಾಕ್ಷಾಗೇಹದಾಹಕ್ಕೆ**=ಈ ನನ್ನ ಗದೆಯ ಹೊಡೆತವು ಅಂದು ನೀನು ನಮ್ಮನ್ನು ಅರಗಿನ ಮನೆಯಲ್ಲಿ ಸುಡಲು ಮಾಡಿದ್ದ ಸಂಚಿಗೆ; **ಇದು ವಿಷಮವಿಷಾನ್ನಕ್ಕೆ**=ಈ ಹೊಡೆತವು ಅಂದು ಚಿಕ್ಕಂದಿನಲ್ಲಿ ನನಗೆ ವಿಷದ ಲಡ್ಡುಗೆಗಳನ್ನು ತಿನ್ನಿಸಿ ಸಾಯಿಸಲು ಪ್ರಯತ್ನಿಸಿದ್ದಕ್ಕೆ; ನಾಡಿ=ಸಂಚು/ಮೋಸ; ಜೂದು= ಜೂಜು/ಪಣವನ್ನಿಟ್ಟು ಆಡುವ ಪಂದ್ಯ; **ಇದು ಆ ನಾಡ ಜೂದಿಂಗೆ**=ಈ ಹೊಡೆತವು ಅಂದು ಹಸ್ತಿನಾವತಿಗೆ ನಮ್ಮನ್ನು ಕರೆಸಿಕೊಂಡು ಶಕುನಿಯೊಡನೆ ಕೂಡಿಕೊಂಡು ಅಣ್ಣ ಧರ್ಮರಾಯನನ್ನು ಜೂಜಿಗೆ ಕರೆದು, ನಮ್ಮೆಲ್ಲ ಸಂಪತ್ತನ್ನು ಅಪಹರಿಸಿದ ಮೋಸದ ಪಗಡೆಯಾಟಕ್ಕೆ; ಪಾಂಚಾಲೀ=ಪಾಂಚಾಲ ದೇಶದ ರಾಜ ದ್ರುಪದನ ಮಗಳು/ದ್ರೌಪದಿ; ಪ್ರಪಂಚ=ಸಂಗತಿ;

**ಇದು ಪಾಂಚಾಲೀ ಪ್ರಪಂಚಕ್ಕೆ**=ಈ ಹೊಡೆತವು ಅಂದು ಜೂಜಿನ ಸನ್ನಿವೇಶದಲ್ಲಿ ಧರ್ಮರಾಯನು ದ್ರೌಪದಿಯನ್ನು ಪಣವಾಗಿ ಒಡ್ಡಿ ಸೋತ ನಂತರ, ನಿನ್ನ ಆದೇಶದಂತೆ ದುಶ್ಶಾಸನನು ರಾಣಿವಾಸದ ಕೊಠಡಿಯಲ್ಲಿದ್ದ ದ್ರೌಪದಿಯ ಮುಡಿ ಹಿಡಿದು ರಾಜಸಭೆಗೆ ಎಳೆ ತಂದು, ದ್ರೌಪದಿಯ ಸೀರೆಯನ್ನು ಸುಲಿದು ಅಪಮಾನ ಮಾಡಿದ್ದಕ್ಕಾಗಿ: ಕೃತಕ=ನಿರ್ಮಾಣ/ರಚನೆ; ಸಭಾ+ಆಲೋಕನ; ಆಲೋಕನ=ನೋಡುವುದು; ಭ್ರಾಂತಿ=ಹುಚ್ಚು/ಉನ್ಮಾದ; **ಇದು ಕೃತಕ ಸಭಾಲೋಕನ ಭ್ರಾಂತಿಗೆ ಎಂದು**=ಪಾಂಡವರು ಇಂದ್ರಪ್ರಸ್ಥದಲ್ಲಿ ಮಯನಿಂದ ನಿರ್ಮಿತವಾದ ಸುಂದರ ಅರಮನೆಯಂತೆಯೇ ದುರ್ಯೋಧನನು ತಾನು ಕೂಡ ಒಂದು ಅರಮನೆಯನ್ನು ನಿರ್ಮಿಸಿ, ಪಾಂಡವರನ್ನು ಅದನ್ನು ನೋಡಲು ಬನ್ನಿರೆಂದು ಕರೆಸಿ, ಜೂಜಿಗೆ ಎಳೆದು ವಂಚನೆಯನ್ನು ಮಾಡಿದ ಕುತಂತ್ರಕ್ಕೆ ಎಂದು ಹಂಗಿಸಿ ನುಡಿಯುತ್ತ; ಅಗಲ್+ಉರಮ್+ಅಮ್; ಉರ=ಎದೆ; ಅಗಲುರ=ಅಗಲವಾದ ಎದೆ; ನೆತ್ತಿ=ತಲೆ; ದುರ್ನಯ=ಕೆಟ್ಟ ನಡೆನುಡಿ; ಉರು=ದೊಡ್ಡ/ಉತ್ತಮವಾದ;

**ಕಾಲ್ಗಳಮ್... ತೋಳ್ಗಳಮ್... ಅಗಲುರಮಮ್... ಕೆನ್ನೆಯಮ್... ನೆತ್ತಿಯಮ್ ಅಯ್ದುಮ್ ದುರ್ನಯಕ್ಕೆ... ಅಯ್ದು ಎಡೆಯನ್... ಭೀಮಸೇನನ್ ಕೋಪದಿನ್ ಉರು ಗದಾದಂಡದಿಮ್ ಓವದೆ ಪೊಯ್ದನ್**=ಭೀಮಸೇನನು ದುರ್ಯೋಧನನ ಅಯ್ದು ಬಗೆಯ ಕೆಟ್ಟ ನಡೆನುಡಿಗಳಿಗೆ ಒಂದೊಂದರಂತೆ ಅವನ ಕಾಲುಗಳನ್ನು ತೋಳುಗಳನ್ನು ಅಗಲವಾದ ಎದೆಯನ್ನು ಕೆನ್ನೆಯನ್ನು ತಲೆಯ ನೆತ್ತಿಯನ್ನು ಈ ಅಯ್ದು ಎಡೆಗಳನ್ನು ಗುರಿಮಾಡಿಕೊಂಡು ಕೋಪದಿಂದ ತನ್ನ ದೊಡ್ಡ

ಗದಾದಂಡದಿಂದ ಯಾವುದೇ ಕರುಣೆಯನ್ನು ತೋರಿಸದೆ ದುರ್ಯೋಧನನಿಗೆ ಹೊಡೆದನು; ಚರಣ+ಆಕ್ರಾಂತಮ್; ಚರಣ=ಪಾದ; ಆಕ್ರಾಂತ=ದಾಳಿಗೆ ಗುರಿಯಾದುದ್ದು/ ಆಕ್ರಮಿಸಲ್ಪಟ್ಟ; ಮಹೀಮಂಡಲ=ಭೂಮಂಡಲ; ಅದಿರ್=ನಡುಗು/ಕಂಪಿಸು; **ಚರಣಾಕ್ರಾಂತಮ್ ಮಹೀಮಂಡಲಮ್ ಅದಿರೆ=** ಗದಾಯುದ್ಧದಲ್ಲಿ ತೊಡಗಿರುವ ಭೀಮ ದುರ್ಯೋಧನರ ಪಾದಗಳ ತುಳಿತಕ್ಕೆ ಭೂಮಂಡಲವು ನಡುಗಲು; ಭುಜ+ಆಕ್ರಾಂತಮ್; ಆಶಾಗಜೇಂದ್ರ=ದಿಕ್ಕನ್ನು ಹೊತ್ತಿರುವ ಗಂಡಾನೆ; ಉತ್ಕರ=ಗುಂಪು/ಸಮೂಹ; ಆಶಾಭಿತ್ತಿ+ಇಂದಮ್; ಆಶಾಭಿತ್ತಿ=ದಿಕ್ಕಿನ ಗೋಡೆ; ಪೆರದೆಗೆ=ಹಿಂಜರಿ/ಹಿಮ್ಮೆಟ್ಟು;

**ಭುಜಾಕ್ರಾಂತಮ್ ಆಶಾಗಜೇಂದ್ರ ಉತ್ಕರಮ್ ಆಶಾಭಿತ್ತಿಯಿಂದಮ್ ಪೆರದೆಗೆಯೆ**=ಭೀಮ ದುರ್ಯೋಧನರ ಭುಜಬಲದ ಆಕ್ರಮಣಕ್ಕೆ ಎಂಟು ದಿಕ್ಕುಗಳನ್ನು ಹೊತ್ತಿರುವ ಸಲಗಗಳ ಗುಂಪು ಹೊರೆಯನ್ನು ಕಳಚಿಕೊಂಡು, ದಿಕ್ಕುಗಳ ಗೋಡೆಗಳ ಅಂಚಿನಿಂದ ಹಿಮ್ಮೆಟ್ಟಲು; ಭೂಮಂಡಲದ ಎಂಟು ದಿಕ್ಕುಗಳನ್ನು ಎಂಟು ಸಲಗಗಳು ಹೊತ್ತುಕೊಂಡಿವೆ ಎಂಬ ಕಲ್ಪನೆಯು ಜನಮನದಲ್ಲಿದೆ; ಗದಾ+ಆಕ್ರಾಂತಮ್; ಗದಾಕ್ರಾಂತಮ್=ಗದೆಗಳ ಡಿಕ್ಕಿಯಿಂದ; ಉದ್ಭ್ರಾಂತ=ಗಾಬರಿಗೊಂಡ; ಚಕ್ರ=ಸಮೂಹ/ಗುಂಪು; ವಿದ್ಯಾಧರ= ದೇವತೆಗಳಲ್ಲಿ ಒಂದು ಪಂಗಡದವರನ್ನು ಈ ಹೆಸರನಿಂದ ಗುರುತಿಸಲಾಗುತ್ತದೆ; ನಿಜ=ತಮ್ಮ; ಗೆಂಟುಗೆಂಟಾಗಿ+ಇರಿಸೆ; ಗೆಂಟು=ದೂರ/ಅಂತರ; ಗೆಂಟುಗೆಂಟಾಗಿರಿಸೆ=ದೂರದೂರದಲ್ಲಿ ನಿಲ್ಲಿಸಿಕೊಳ್ಳಲು;

**ಗದಾಕ್ರಾಂತಮ್ ಉದ್ಭ್ರಾಂತ ವಿದ್ಯಾಧರಚಕ್ರಮ್ ನಿಜವಿಮಾನಂಗಳಮ್ ಗೆಂಟುಗೆಂಟಾಗಿರಿಸೆ**=ಭೀಮ ದುರ್ಯೋಧನರು ಗದೆಗಳನ್ನು ಕುಶಲತೆಯಿಂದ ಬೀಸುತ್ತ ಹೊಡೆದಾಡುತ್ತಿರುವಾಗ ಕೇಳಿಬರುತ್ತಿರುವ ಶಬ್ದ ಮತ್ತು ಹಾರಿ ಬರುತ್ತಿರುವ ಕಿಡಿಗಳಿಂದ ಗಾಬರಿಗೊಂಡ ವಿದ್ಯಾಧರರೆಂಬ ದೇವತೆಗಳ ಗುಂಪು ಗಗನ ಮಂಡಲದಲ್ಲಿದ್ದ ತಮ್ಮ ವಿಮಾನಗಳನ್ನು ಕಿಡಿಗಳು ತಾಕದಂತೆ ದೂರದಲ್ಲಿ ನಿಲ್ಲಿಸಿಕೊಂಡರು; ಕಲ್ಪಾಂತಕಾಲ=ಪ್ರಳಯ ಕಾಲ; ಭೈರವ=ಶಿವನು ರುದ್ರವಾದ ರೂಪವನ್ನು ತಳೆದಾಗ ಈ ಹೆಸರಿನಿಂದ ಕರೆಯುತ್ತಾರೆ; ಆಡಂಬರ=ಮೆರೆತ; ನೆಗಳ್=ಉಂಟಾಗು/ ಹೆಸರುವಾಸಿಯಾಗು; **ಆ ಕಲ್ಪಾಂತಕಾಲಮ್ ಭೈರವ ಆಡಂಬರಮ್ ಭೀಮ ದುರ್ಯೋಧನೀಯಮ್ ಸಮರಮ್ ನೆಗಳ್ದುದು**= ಪ್ರಳಯ ಕಾಲದಲ್ಲಿ ಇಡೀ ಜಗತ್ತನ್ನು ನಾಶಮಾಡಲೆಂದು ಶಿವನು ರುದ್ರರೂಪವನ್ನು ತಳೆದು ಅಬ್ಬರಿಸುತ್ತ ಮೆರೆಯುವಂತೆ ಭೀಮ ದುರ್ಯೋಧನರ ಗದಾಯುದ್ಧ ನಡೆಯ ತೊಡಗಿತು; ನೆಲಸು=ಸ್ಥಿರವಾಗಿರುವ/ನೆಲೆಗೊಂಡಿರುವ; ಬಿನ್ನಣ=ನಿಪುಣತೆ/ ಕುಶಲತೆ; ಸೆಣಸು=ಕಾದಾಡು/ಹೋರಾಡು;

**ನೆಲಸಿದ ಬಿನ್ನಣಮ್ ಸೆಣಸಿ ಬಿನ್ನಣಮಮ್ ಗೆಲೆ**=ಭೀಮ ದುರ್ಯೋಧನರ ಕಾದಾಟದಲ್ಲಿ ಗದಾವಿದ್ಯೆಯ ನಿಪುಣತೆಯು ನಿಪುಣತೆಯನ್ನು ಗೆಲ್ಲಲು; ಕಾಣ್ಕೆ=ನೋಟ; **ಕಾಣ್ಕೆ ಕಾಣ್ಕೆಯಮ್ ಗೆಲೆ**=ಗದಾವಿದ್ಯೆಯಲ್ಲಿ ಪಡೆದಿರುವ ಪರಿಣತಿಯು ಪರಿಣತಿಯನ್ನು ಗೆಲ್ಲಲು; ಜವ=ವೇಗ; **ಜವಮಮ್ ಜವಮ್ ಗೆಲೆ**=ಗದೆಗಳನ್ನು ಬೀಸುತ್ತಿರುವ ವೇಗವು ವೇಗವನ್ನು ಗೆಲ್ಲಲು; **ಬಲಮ್ ಬಲಮಮ್ ಗೆಲೆ**=ಗದೆಗಳನ್ನು ಬೀಸುತ್ತಿರುವ ಶಕ್ತಿಯು ಶಕ್ತಿಯನ್ನು ಗೆಲ್ಲಲು; ದಂಡೆ=ದ್ವಂದ್ವ ಯುದ್ಧದಲ್ಲಿ ತೊಡಗಿದ ಕಲಿಗಳು ತೋರಿಸುವ ಹೋರಾಟದ ಒಂದು ವರಸೆ; **ದಂಡೆ ದಂಡೆಯಮ್ ಗೆಲೆ**=ಗದೆಗಳನ್ನು ತಿರುಗಿಸುತ್ತ ತೋರಿಸುತ್ತಿರುವ ವರಸೆಯು ವರಸೆಯನ್ನು ಗೆಲ್ಲಲು; ಮುಳಿಸು=ಕೋಪ; ಉಣ್ಮು=ಉಕ್ಕಿಬರು; ಪೊಣ್ಮು=ಹೊರಹೊಮ್ಮು;

**ಮುಳಿಸು ಉಣ್ಮೆ ಪೊಣ್ಮೆ ಮುಳಿಸಮ್ ಗೆಲೆ**=ಉಕ್ಕಿಬಂದು ಹೊರಹೊಮ್ಮಿದ ಕೋಪವು ಕೋಪವನ್ನು ಗೆಲ್ಲಲು; ಸತ್ತ್ವ= ಕೆಚ್ಚು/ ಮನೋಬಲ; ಅಳುರ್ಕೆ=ಹೆಚ್ಚಳ/ ಅತಿಶಯ; **ಸತ್ತ್ವದ ಅಳುರ್ಕೆ ಸತ್ತ್ವಮಮ್ ಗೆಲೆ**=ಇಬ್ಬರಲ್ಲಿಯೂ ಇರುವ ಕೆಚ್ಚಿನ ಅತಿಶಯತೆಯು ಕೆಚ್ಚನ್ನು ಗೆಲ್ಲಲು; ಆರ್=ಶಕ್ತವಾಗು; ಆರ್ತರ್=ಶಕ್ತರು; **ಕುರು ಪಾಂಡುತನೂಭವರ್ ಒರ್ವರ್ ಒರ್ವರಮ್ ಗೆಲಲ್ ಆರ್ತರಿಲ್ಲ**=ಕುರುಕುಲದ ದುರ್ಯೋಧನ ಮತ್ತು ಪಾಂಡುರಾಜನ ಮಗ ಭೀಮಸೇನರು ಗದಾವಿದ್ಯೆಯ ನಿಪುಣತೆಯಲ್ಲಿ ಸಮಬಲರಾದ್ದರಿಂದ ಒಬ್ಬರು ಮತ್ತೊಬ್ಬರ ಮೇಲೆ ಗೆಲುವನ್ನು ಪಡೆಯಲು ಶಕ್ತರಾಗಲಿಲ್ಲ;

❖

## ನೋಟ-೨೪

# ದುರ್ಯೋಧನನ ಧರ್ಮಯುದ್ಧ... ಭೀಮಸೇನನ ಗೆಲುವು

ಅಂತು=ಆ ರೀತಿ; ಪೋರ್ಕುಳಿ+ಆಡುವಂತೆ; ಪೋರ್ಕುಳಿ=ಹೋರಾಟ; ನೆರೆ=ಸಾಕಾಗು/ಉಂಟಾಗು; ಕರ=ಹೆಚ್ಚಾಗಿ/ಅತಿಯಾಗಿ; **ಅಂತು ನೆಳಲೊಳ್ ಪೋರ್ಕುಳಿಯಾಡುವಂತೆ ಒರ್ವರ್ ಒರ್ವರಮ್ ಗೆಲಲ್ ನೆರೆಯದಿರೆ ದುರ್ಯೋಧನನ್ ಕರಮ್ ಮುಳಿದು**=ಭೀಮ ಮತ್ತು ದುರ್ಯೋಧನರು ಸಮಬಲರಾದ್ದರಿಂದ ನೆರಳಿನ ಸಂಗಡ ಹೋರಾಡುವಂತೆ ಒಬ್ಬರು ಮತ್ತೊಬ್ಬರನ್ನು ಗೆಲಲಾಗದೆ ಗದಾಯುದ್ಧ ಮುಂದುವರಿಯುತ್ತಿರುವುದನ್ನು ಕಂಡು ದುರ್ಯೋಧನನು ಅತಿಯಾಗಿ ಕೋಪೋದ್ರೇಕಕ್ಕೆ ಒಳಗಾಗಿ; **ವಿದ್ಯಾಧರಕರಣ**= ಗದಾಯುದ್ಧದ ಒಂದು ವರಸೆ. ಹೋರಾಡುವವನು ಗದೆಯನ್ನು ಚಕ್ರಾಕಾರವಾಗಿ ವೇಗವಾಗಿ ತಿರುಗಿಸುತ್ತ, ಮೇಲಕ್ಕೆ ನೆಗೆದು ಎದುರಾಳಿಯ ಮೇಲೆ ಗದೆಯಿಂದ ಆಕ್ರಮಣ ಮಾಡುವುದು; ಅಂಬರ=ಆಕಾಶ; **ಕುರುರಾಜನ್ ವಿದ್ಯಾಧರಕರಣದೆ ಅಂಬರಕ್ಕೆ ನೆಗೆದು ಗದೆಯಮ್ ಕ್ರಮದಿಮ್ ತಿರಿಪೆ**=ದುರ್ಯೋಧನನು ವಿದ್ಯಾಧರಕರಣದ ವರಸೆಯಿಂದ ಮೇಲಕ್ಕೆ ನೆಗೆದು ಗದೆಯನ್ನು ಚಕ್ರಾಕಾರವಾಗಿ ತಿರುಗಿಸತೊಡಗಲು; ಧರಾಚಕ್ರ=ಭೂಮಂಡಲ; ಕೋವ=ಕುಂಬಾರ; ಎನಸುಮ್= ಬಹಳವಾಗಿ/ಅತಿಯಾಗಿ; ತಿರಿ=ತಿರುಗು/ಚಕ್ರಾಕಾರವಾಗಿ ತಿರುಗುವುದು;

**ಧರಾಚಕ್ರಮ್ ಕೋವರ ಚಕ್ರಮ್ ತಿರಿವ ತೆರದೆ ಎನಸುಮ್ ತಿರಿದತ್ತು**=ಇಡೀ ಭೂಮಂಡಲವು ಕುಂಬಾರನು ಮಡಕೆಯನ್ನು ಮಾಡುವಾಗ ರೊಯ್ಯನೆ ತಿರುಗಿಸುತ್ತಿರುವ ಚಕ್ರದಂತೆ ಅತಿಯಾದ ವೇಗದಿಂದ ತಿರುಗತೊಡಗಿತು. ಅಂದರೆ

ಕಣ್ಣ ಮುಂದಿನ ಎಲ್ಲವೂ ಗದೆಯ ಚಕ್ರಾಕಾರದ ಸುತ್ತುವಿಕೆಯೊಡನೆ ತಿರುಗುತ್ತಿರುವಂತೆ ತೋರುತ್ತಿತ್ತು; ಮೂದಲಿಸು=ಹೀಯಾಳಿಸು/ ಮನೋಬಲವನ್ನು ಕುಗ್ಗಿಸುವಂತೆ ಮಾತನಾಡುವುದು; ಇರಿ=ಹೊಡೆ/ ಹೋರಾಡು/ಕೊಲ್ಲು; ತುಳಿಲಾಯ್ತಮ್+ಅಲ್ಲ+ಎಂದು; ತುಳಿಲಾಯ್ತ=ವೀರವೃತ್ತಿ/ ಪರಾಕ್ರಮದ ಗುಣ; **ಮುಟ್ಟೆ ಮೂದಲಿಸಿ**=ಮನಸ್ಸನ್ನು ಗಾಸಿಗೊಳಿಸುವಂತೆ ಹಂಗಿಸಿ ನುಡಿಯುವುದು; **ಅಂತು ಮೂದಲಿಸದೆ ಇರಿವುದು ತುಳಿಲಾಯ್ತಮಲ್ಲೆಂದು ಮುಟ್ಟೆ ಮೂದಲಿಸಿ**=ದ್ವಂದ್ವಯುದ್ಧದಲ್ಲಿ ಎದುರಾಳಿಯ ಮನೋಬಲವನ್ನು ಕುಗ್ಗಿಸುವಂತೆ ಹಂಗಿಸಿ ನುಡಿಯದೆ, ಕೇವಲ ಹೋರಾಡುವುದು ವೀರನಾದವನಿಗೆ ತಕ್ಕುದಲ್ಲವೆಂದು ಭಾವಿಸಿದ ದುರ್ಯೋಧನನು ಭೀಮನನ್ನು ಹಂಗಿಸಿ ಅಪಮಾನಗೊಳಿಸುತ್ತ; ತೆರಪು=ಎಡೆ/ಜಾಗ; ನಿಟ್ಟಿಸು=ಗಮನವಿಟ್ಟು ನೋಡು; ಎರಗು=ಆಕ್ರಮಣಮಾಡು/ಮೇಲೆ ಬೀಳು;

**ತೆರಪಮ್ ನಿಟ್ಟಿಸಿ ಕುರುಪತಿ ಬರಸಿಡಿಲ್ ಎರಗುವವೊಲ್ ಎರಗಿ ಪೊಯ್ಯಲೊಡಮ್**=ದುರ್ಯೋಧನನು ಭೀಮನ ದೇಹದ ಮೇಲೆ ಯಾವ ಕಡೆ ಹೊಡೆಯಬೇಕೆಂಬುದನ್ನು ಸರಿಯಾಗಿ ಗಮನಿಸಿ, ಬರಸಿಡಿಲು ಬಡಿಯುವಂತೆ ಭೀಮನ ಮೇಲೆ ಎರಗಿ ಗದೆಯಿಂದ ಹೊಡೆಯಲು; ಪವನಜ=ವಾಯುಪುತ್ರನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿರುವವನು/ಭೀಮ; ಮತಿವಿಕಳನ್+ಆಗಿ; ಮತಿವಿಕಳ=ಅರಿವನ್ನು ಕಳೆದುಕೊಂಡವನು; **ಪವನಜನುಮ್ ಏನೆಂದು ಅರಿಯದೆ ಮತಿವಿಕಳನಾಗಿ ಮೆಯ್ ಮರೆದು ಮೂರ್ಛೆಗೆ ಸಂದನ್**=ಭೀಮನು ಏನಾಯಿತು ಎಂಬುದನ್ನು ತಿಳಿಯದವನಾಗಿ, ಬಿದ್ದ ಬಲವಾದ ಪೆಟ್ಟಿಗೆ ಮಯ್ ಮೇಲಿನ ಪ್ರಜ್ಞೆಯನ್ನು ಕಳೆದುಕೊಂಡು ಕೆಳಕ್ಕೆ ಉರುಳಿ ಬಿದ್ದನು; ಕುಲಿಶ+ಅಭಿಘಾತದ+ಒಳ್; ಕುಲಿಶ=ಇಂದ್ರನ ವಜ್ರಾಯುಧ; ಅಭಿಘಾತ=ಹೊಡೆತ/ಪೆಟ್ಟು; ಕುಲಿಶಾಭಿಘಾತ=ಬೆಟ್ಟಗಳಿಗೆ ರೆಕ್ಕೆಗಳಿದ್ದು, ಅವು ತಮ್ಮ ಇಚ್ಚೆ ಬಂದ ಕಡೆ ಹಾರಾಡುತ್ತಿದ್ದುವೆಂದೂ, ಅವುಗಳ ರೆಕ್ಕೆಯನ್ನು ಇಂದ್ರನು ಕುಲಿಶವೆಂಬ ಆಯುಧದಿಂದ ಕತ್ತರಿಸುತ್ತಿದ್ದನೆಂಬ ಕಲ್ಪನೆಯು ಜನಮನದಲ್ಲಿದೆ; ನೀಲ+ಅಚಲ; ಅಚಲ=ಬೆಟ್ಟ; ನೀಲಾಚಲ=ನೀಲಗಿರಿ; ಆಟೋಪ=ಅಬ್ಬರ;

**ಅಂತು ಕುಲಿಶಾಭಿಘಾತದೊಳ್ ನೀಲಾಚಲಮೆ ಕೆಡೆವಂತೆ ಕೆಡೆದು ಮೂರ್ಛಾಗತನಾಗಿರ್ದ ಭೀಮಸೇನನ ಇರವಮ್ ಕಂಡು ಗಾಂಡೀವಿ ಕೋಪಾತುರ ಆಟೋಪಮನ್ ತಾಳ್ದಿ**=ಆ ರೀತಿ ಇಂದ್ರನ ವಜ್ರಾಯುಧದ ಹೊಡೆತಕ್ಕೆ ಸಿಲುಕಿ ನೀಲಗಿರಿಯು ಕೆಳಕ್ಕೆ ಬೀಳುವಂತೆ ದುರ್ಯೋಧನನ ಗದೆಯ ಹೊಡೆತಕ್ಕೆ ಸಿಲುಕಿ ಮಯ್ ಮರೆತು ಕೆಳಕ್ಕೆ ಬಿದ್ದಿರುವ ಭೀಮಸೇನನ ಸ್ಥಿತಿಯನ್ನು ಕಂಡ ಅರ್ಜುನನು ಕೋಪೋದ್ರೇಕದಿಂದ ಅಬ್ಬರಿಸತೊಡಗಿದನು; ಅಣ್ಣ ಭೀಮಸೇನನು ಕೆಳಕ್ಕೆ

ಬಿದ್ದಿರುವಾಗ ಯಾರನ್ನು ಲೆಕ್ಕಿಸದೆ ಸರಿ–ತಪ್ಪುಗಳನ್ನು ಗಮನಿಸಿದೆ ದುರ್ಯೋಧನನನ್ನು ಕೊಲ್ಲುವುದಾಗಿ ಹೇಳುತ್ತ ಅರ್ಜುನನು ಯುದ್ಧಕ್ಕೆ ಸಿದ್ಧನಾಗುತ್ತಾನೆ; **ಎಲ್ಲಿಯ ಬಲದೇವನ್**=ದುರ್ಯೋಧನನಿಗೆ ಬೆಂಬಲವಾಗಿ ನಿಂತಿರುವ ಬಲದೇವನನ್ನು ನಾನು ಲೆಕ್ಕಸುವುದಿಲ್ಲ; ಮತ್ತೆ+ಎಲ್ಲಿಯ; ಸತ್ಯವ್ಯವಸ್ಥೆ= **"ದುರ್ಯೋಧನನೊಡನೆ ಅಯ್ದು ಮಂದಿ ಪಾಂಡವರಲ್ಲಿ ಒಬ್ಬ ಮಾತ್ರ ಯುದ್ಧವನ್ನು ಮಾಡಬೇಕು. ಆ ಯುದ್ಧದಲ್ಲಿ ಗೆಲ್ಲುವ ದುರ್ಯೋಧನನಿಗೆ ಉಳಿದ ನಾಲ್ವರು ಅಡಿಯಾಳುಗಳಾಗಿ ಸೇವೆಮಾಡಬೇಕು"** ಎಂದು ಬಲರಾಮನು ಹಾಕಿದ್ದ ಕರಾರು;

**ಮತ್ತೆಲ್ಲಿಯ ಸತ್ಯವ್ಯವಸ್ಥೆ**=ಇನ್ನೆಲ್ಲಿಯ ಕರಾರು. ಅದನ್ನು ಈಗ ನಾನು ಕಡೆಗಣಿಸುತ್ತೇನೆ; ಭಾರತ ಮಲ್ಲ=ಅರ್ಜುನ; ಗಾಂಡಿವ=ಅರ್ಜುನನ ಬಿಲ್ಲು. ಅಗ್ನಿದೇವನು ಅರ್ಜುನನಿಗೆ ಕೊಟ್ಟಿದ್ದ ಬಿಲ್ಲು; ಕರತಳ=ಅಂಗಯ್/ಹಸ್ತ; ನೇರು=ನೀಡು/ಚಾಚು; **ದುರ್ಯೋಧನನನ್ ಕೊಲ್ಲದಿರೆನ್ ಎಂದು ಭಾರತ ಮಲ್ಲನ್ ಗಾಂಡಿವಕೆ ಕರತಳಮಮ್ ನೇರಿದನ್**=ದುರ್ಯೋಧನನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಅರ್ಜುನನು ಗಾಂಡಿವದತ್ತ ಕಯ್ ಚಾಚಿದನು; ಅರ್ಜುನನ ರೀತಿಯಲ್ಲಿಯೇ ನಕುಲ ಸಹದೇವರು ಕೋಪೋದ್ರೇಕದಿಂದ ಕುದಿಯುತ್ತ **"ಬಲರಾಮನು ಒಡ್ಡಿರುವ ಕರಾರರನ್ನು ಮೀರಿ ಈಗ ನಾವು ದುರ್ಯೋಧನನೊಡನೆ ಯುದ್ಧ ಮಾಡಲು ನಿಶ್ಚಯಿಸಿ, ಯಾರು ಕೋಪಿಸಿಕೊಂಡರೂ ಯಾರು ಅಡ್ಡ ಬಂದರೂ ಲೆಕ್ಕಿಸುವುದಿಲ್ಲ"** ಎಂದು ಅಬ್ಬರಿಸತೊಡಗುತ್ತಾರೆ; ಹಲಿ=ಬಲರಾಮ; ಮುಳಿ=ಕೆರಳು/ ಕೋಪಗೊಳ್ಳು; ಏವನ್=ಏನನ್ನು ತಾನೆ ಮಾಡಬಲ್ಲ; ಹಲಿ ಮುಳಿದು ಏವನ್=ಬಲರಾಮನು ಕೋಪಿಸಿಕೊಂಡು ಏನನ್ನು ತಾನೆ ಮಾಡಬಲ್ಲ;

**ಕೃಷ್ಣನ್ ಮುಳಿದು ಏವನ್**=ಕೃಷ್ಣನು ಕೋಪಿಸಿಕೊಂಡು ಏನನ್ನು ತಾನೆ ಮಾಡಬಲ್ಲ; ಧರ್ಮನಂದನನ್ ಮುಳಿದು ಏವನ್=ಧರ್ಮರಾಯನು ಕೋಪಿಸಿ ಕೊಂಡು ಏನನ್ನು ತಾನೆ ಮಾಡಬಲ್ಲ; ಉಮ್ಮಳಿಸು=ತವಕಿಸು; **ಮುಳಿದರನ್ ಇಕ್ಕುವೆವು ಎಂದು ನಕುಲಸಹದೇವರ್ಕಳ್ ಇರಿಯಲ್ಕೆ ಉಮ್ಮಳಿಸಿದರ್**= ಕೋಪಿಸಿಕೊಂಡವರನ್ನು... ತಡೆಯಬಂದವರನ್ನು ಕೊಲ್ಲುವೆವು ಎಂದು ನಕುಲ ಸಹದೇವನು ಹೋರಾಡಲು ತವಕಿಸಿದರು; ತನ್ನ ತಮ್ಮಂದಿರಾದ ಅರ್ಜುನ, ನಕುಲ, ಸಹದೇವರು ಕೋಪೋದ್ರೇಕದಿಂದ ದುರ್ಯೋಧನನ ಮೇಲೆ ಬೀಳಲು ಸಿದ್ಧರಾಗುತ್ತಿರುವುದನ್ನು ಕಂಡ ಧರ್ಮರಾಯನು ಬಲರಾಮನೊಡ್ಡಿರುವ ಕರಾರಿಗೆ ಹಾನಿಯುಂಟಾಗುವುದೆಂಬ ಆತಂಕದಿಂದ; ಅರಿ=ಹಗೆ/ಶತ್ರು; ಇಂಬು+ಆಯ್ತು; ಇಂಬು=ಒಳಿತು/ಲೇಸು; ಅರಿಗೆ ಇಂಬಾಯ್ತು=ಹಗೆಯಾದ ದುರ್ಯೋಧನನಿಗೆ ಒಳಿತಾಯಿತು; ಮರುತ್ ಸುತ=ವಾಯುದೇವನ ಅನುಗ್ರಹದಿಂದ ಕುಂತಿಯ

ಹೊಟ್ಟೆಯಲ್ಲಿ ಹುಟ್ಟಿರುವ ಮಗ/ಭೀಮಸೇನ; ಅಳಿ=ಕೇಡು; ಮರುತ್ ಸುತಂಗೆ ಅಳಿವಾದುದು=ಭೀಮಸೇನನಿಗೆ ಕೇಡಾಯಿತು;

**ಅರ್ಜುನಾದಿಗಳ್ ಮೂವರುಮ್ ಮುಳಿದರ್**=ಅರ್ಜುನನನ್ನು ಒಳಗೊಂಡಂತೆ ನಕುಲ ಸಹದೇವರು ಕೋಪೋದ್ರೇಕಗೊಂಡು ಯುದ್ಧಕ್ಕೆ ಅಣಿಯಾದರು; ನನ್ನಿ=ಸತ್ಯ/ದಿಟ; ಪರಿಭವ=ಸೋಲು/ಹಾನಿ; **ಎನ್ನ ನನ್ನಿಗೆ ಈಗಳೆ ಪರಿಭವಮ್ ಆಯ್ತು ಎಂದು ಧರ್ಮಜನ್ ಚಿಂತಿಸಿದನ್=“ಗದಾಯುದ್ಧದಲ್ಲಿ ಭೀಮನು ಸೋತು, ದುರ್ಯೋಧನನು ಗೆದ್ದರೆ, ಉಳಿದ ಪಾಂಡವರಾದ ನಾವು ನಾಲ್ಕು ಮಂದಿ ದುರ್ಯೋಧನನಿಗೆ ಅಡಿಯಾಳುಗಳಾಗಿ ಬಾಳುತ್ತೇವೆ”** ಎಂದು ಬಲರಾಮನಿಗೆ ಕೊಟ್ಟಿರುವ ಮಾತಿಗೆ ತಪ್ಪಿನಡೆದಂತಾಗುತ್ತದೆ ಎಂದು ಧರ್ಮರಾಯನು ಚಿಂತಿಸತೊಡಗಿದನು. ಧರ್ಮರಾಯನ ಪಾಲಿಗೆ ಭೀಮಸೇನನ ಸೋಲು ಇಲ್ಲವೇ ಸಾವಿಗಿಂತಲೂ ತನ್ನ ನನ್ನಿಗೆ ಹಾನಿಯುಂಟಾಗುವ ಕಾಲ ಬಂದಿತಲ್ಲ ಎನ್ನುವ ಚಿಂತೆಯೇ ದೊಡ್ಡದಾಗಿದೆ; ಹಲಧರ= ಬಲರಾಮ; ಅಲರ್=ಅರಳು/ಬಿರಿ; **ಹಲಧರನ ಅಲರ್ದ ಮೊಗಮನ್**=ಬಲರಾಮನ ಅರಳಿದ ಮೊಗವನ್ನು; ದುರ್ಯೋಧನನ ಗೆಲುವು ಬಲರಾಮನಿಗೆ ಅಪಾರವಾದ ಆನಂದವನ್ನುಂಟು ಮಾಡಿದೆ;

**ಧರ್ಮತನಯನ ತಲೆಯಮ್ ಬಾಗಿರ್ದ ಮೊಗಮನ್**=ಧರ್ಮರಾಯನ ತಲೆಬಾಗಿದ ಮೊಗವನ್ನು; ಭೀಮಸೇನನು ಕೆಳಕ್ಕೆ ಉರುಳಿಬಿದ್ದಿರುವುದನ್ನು ಕಂಡ ಧರ್ಮರಾಯನು ಸಂಕಟದಿಂದ ತಲೆಬಗ್ಗಿಸಿದ್ದಾನೆ; ಜಲರುಹ=ತಾವರೆ; ಜಲರುಹನಾಭ=ಕೃಷ್ಣ; **ಜಲರುಹನಾಭನ್ ಕಂಡು**=ಕೃಷ್ಣನು ಬಲರಾಮನ ಆನಂದ ಮತ್ತು ಧರ್ಮರಾಯನ ಸಂಕಟವನ್ನು ಗಮನಿಸಿ; ಎರ್ದೆ=ಮನಸ್ಸು; ಕಲಂಕಿ= ಕದಡು; **ಎರ್ದೆ ಕಲಂಕಿ=ಮನ ನೊಂದು; ಕಣ್**+**ಜರ್ಬು; ಜರ್ಬು**= ಭಾವನೆಯನ್ನು ಪ್ರಕಟಿಸುವುದು/ಸನ್ನೆ ಮಾಡುವುದು/ಗದರಿಸು; **ಗಾಂಡಿವಿಯನ್ ಕಣ್ಜರ್ಬು ಜರ್ಬಿದನ್**=ಅರ್ಜುನನನ್ನು ಕಣ್ಸನ್ನೆಯಿಂದಲೇ ಗದರಿಸಿದನು; ದುರ್ಯೋಧನ ನೊಡನೆ ಯುದ್ಧಕ್ಕೆ ಸನ್ನದ್ಧನಾಗುತ್ತಿರುವ ಅರ್ಜುನನನ್ನು ಆ ರೀತಿ ಮಾಡಬೇಡವೆಂದು ಕೃಷ್ಣನು ಕಣ್ಸನ್ನೆಯಿಂದಲೇ ಎಚ್ಚರಿಸಿದನು; ಪ್ರಸ್ತಾವ= ಸಮಯ; **ಆ ಪ್ರಸ್ತಾವದೊಳ್**=ಆ ಸಮಯದಲ್ಲಿ; ಭೀಮಸೇನನು ಕೆಳಕ್ಕೆ ಬಿದ್ದಿರುವಾಗ ಅರ್ಜುನ ನಕುಲ ಸಹದೇವರು ಯುದ್ಧಕ್ಕೆ ಸಿದ್ಧರಾಗುತ್ತಿದ್ದಾಗ ಧರ್ಮರಾಯನು ಸಂಕಟದಿಂದ ಆತಂಕಗೊಂಡಿದ್ದಾಗ ಇದೆಲ್ಲವನ್ನೂ ಕಂಡು ಕೃಷ್ಣನು ಮನನೊಂದು ಅರ್ಜುನನನ್ನು ಯುದ್ಧಕ್ಕೆ ಮುನ್ನುಗ್ಗದಂತೆ ಎಚ್ಚರಿಸುತ್ತಿದ್ದಾಗ; ಧಾತು=ಕೆಂಪು ಬಣ್ಣದ ಕಲ್ಲು; ನಿರ್ಜರ=ಬೆಟ್ಟದಿಂದ ಕೆಳಕ್ಕೆ

ಹರಿಯುವ ಪ್ರವಾಹ/ಬೆಟ್ಟದ ಹೊಳೆ; ಗಿರಿ=ಬೆಟ್ಟ; ಧಾತುನಿರ್ಜರಗಿರಿ=ಕೆಂಪು ಬಣ್ಣದ ಕಲ್ಲುಗಳಿಂದ ಮತ್ತು ದುಮ್ಮಿಕ್ಕುವ ಹೊಳೆಯಿಂದ ಕೂಡಿದ ಮೇರು ಪರ್ವತ; ಕೆಡೆ=ಬೀಳು/ಕುಸಿ/ಉರುಳು;

**ಧಾತು ನಿರ್ಜರಗಿರಿ ಕೆಡೆವಂತು ಕೆಡೆದಿರ್ದ ಪಗೆಯಮ್ ನೋಡಿ**=ಆ ಸಮಯದಲ್ಲಿ ಮೇರು ಪರ್ವತವು ಕುಸಿದು ಬಿದ್ದಿರುವಂತೆ ರಣರಂಗದಲ್ಲಿ ಬಿದ್ದಿದ್ದ ಹಗೆಯಾದ ಭೀಮಸೇನನನ್ನು ದುರ್ಯೋಧನನು ನೋಡಿ; **ಧರ್ಮಯುದ್ಧಮಮ್ ನೆನೆದು**=ಧರ್ಮಯುದ್ಧದ ನಿಯಮವನ್ನು ನೆನಪಿಸಿಕೊಂಡು; ಬಿರುಬು= ಉದಾತ್ತ ಭಾವನೆ/ಹೆಚ್ಚುಗಾರಿಕೆ/ಹಿರಿಮೆ/ದೊಡ್ಡಸ್ತಿಕೆ; **ಬಿಳ್ದನನ್ ಇರಿಯೆನ್ ಎಂಬ ಈ ಬಿರುಬಿಂದಮ್ ಬೀಸೆ**=ಬಿದ್ದವನನ್ನು ಕೊಲ್ಲುವುದಿಲ್ಲ ಎಂಬ ಉದಾತ್ತ ಭಾವನೆ ಯಿಂದ ಭೀಮಸೇನನ ಮಯ್ ಮೇಲೆ ಗದೆಯನ್ನು ಬೀಸಿ ಗಾಳಿಯನ್ನಾಡಿಸಲು; ಕೋಳ್=ತಂಪು/ತಣ್ಣನೆಯ ಹವ; **ಗದೆಯ ಗಾಳಿಯ ಕೋಳ್ ಮೆಯ್ ಮರೆದವನನ್ ಭೀಮನನ್ ಎಳ್ಚರಿಸಿದುದು**=ಗದೆಯನ್ನು ಬೀಸಿದಾಗ ಉಂಟಾದ ಗಾಳಿಯ ತಂಪು ಮೆಯ್ ಮರೆತು ನೆಲದ ಮೇಲೆ ಬಿದ್ದಿದ್ದ ಭೀಮನನ್ನು ಎಚ್ಚರಿಸಿತು; ಸುತ=ಮಗ; ಕೂರ್=ಪ್ರೀತಿ/ಒಲವು; ಕೂರದರ್=ಪ್ರೀತಿಸದವರು; ಒಳರೇ=ಇದ್ದಾರೆಯೇ; **ಸುತರ್ಗೆ ಕೂರದರ್ ತಂದೆ ಒಳರೇ**=ಮಗನನ್ನು ಪ್ರೀತಿಸದ ತಂದೆಯಿರುವನೇ/ಮಗನನ್ನು ಪ್ರೀತಿಸದ ತಂದೆಯೇ ಜಗತ್ತಿನಲ್ಲಿ ಇಲ್ಲ ಎಂಬ ಅತಿಶಯದ ನುಡಿ; ಈ ಪ್ರಸಂಗದಲ್ಲಿ ಭೀಮನು ಮಗನಾಗಿದ್ದಾನೆ; ತಂದೆ ವಾಯುದೇವನ ತಣ್ಣನೆಯ ಗಾಳಿಯ ತೀಡುವಿಕೆಯಿಂದ ಮಯ್ ಮರೆತು ಬಿದ್ದಿದ್ದ ಭೀಮನು ಚೇತರಿಸಿಕೊಳ್ಳಲು ನೆರವಾಯಿತು;

**ಅಂತು ಮೂರ್ಛೆಯಿಮ್ ಮಾರುತಿ ಎಳ್ಚತ್ತಾಗಳ್**=ಆ ರೀತಿ ಪ್ರಜ್ಞೆ ತಪ್ಪಿ ಕೆಳಗುರುಳಿದ್ದ ಭೀಮನು ದುರ್ಯೋಧನನ ದೊಡ್ಡ ಮನಸ್ಸಿನ ಕ್ರಿಯೆಯಿಂದ ಎಚ್ಚರಗೊಳ್ಳಲು; ಪೊಡೆ+ಅಲರ್+ಆತನ್; ಪೊಡೆ=ಹೊಟ್ಟೆ; ಅಲರ್=ಹೂವು; ಪೊಡೆಯಲರಾತನ್=ಹೊಕ್ಕುಳಲ್ಲಿ ತಾವರೆಯ ಹೂವುಳ್ಳವನು/ವಿಷ್ಣು; ರಾಗ= ಆಸಕ್ತಿ; ಪೊಯ್ದು=ತಟ್ಟಿ; ಆರ್=ಅಬ್ಬರಿಸು/ಗರ್ಜಿಸು; ನೆವ=ನೆಪ; ನೆರ=ಮರ್ಮ ಸ್ಥಾನ/ಆಯಕಟ್ಟು/ಮುಖ್ಯವಾದ ಜಾಗ; ಎಡೆ=ಜಾಗ; **ಪೊಡೆಯಲರಾತನ್ ರಾಗದೆ ತೊಡೆಯಮ್ ಪೊಯ್ದು ಆರ್ವ ನೆವದೆ... ಈತಂಗೆ ನೆರನ್ ಈ ಎಡೆಯೆಂದು ತೋರಿ ಕುಡೆ**=ಕೃಷ್ಣನು ಭೀಮನನ್ನು ಹುರಿದುಂಬಿಸುವಂತೆ ತನ್ನ ತೊಡೆಯನ್ನು ತಟ್ಟಿ ಅಬ್ಬರಿಸುವ ನೆಪದಲ್ಲಿ, ಈ ದುರ್ಯೋಧನನ ಮರ್ಮಸ್ಥಾನವು ಈ ಜಾಗವೆಂದು ತೋರಿಸಿಕೊಡಲು; ಪವನಸುತ=ಭೀಮ; ಪೊಲಗಿಡು=ದಾರಿ ತಪ್ಪು/ತಪ್ಪಾಗಿ ತಿಳಿ; ಪೊಲಗಿಡದೆ=ತಪ್ಪಾಗಿ ತಿಳಿಯದೆ/ಸರಿಯಾಗಿ ತಿಳಿದುಕೊಂಡು; **ಪರಮಪಂಡಿತನ್ ಪವನಸುತನ್ ಪೊಲಗಿಡದೆ ಅರಿದನ್**=ಪರಮ ಜ್ಞಾನಿಯಾದ ಭೀಮನು ಕೃಷ್ಣನ

ಸನ್ನೆಯನ್ನು ಸರಿಯಾಗಿಯೇ ಅರಿತುಕೊಂಡನು;

**ನೆರನ್ ಇಂತುಟೆಂದು ತಿಳಿದಾಗಳ್**=ದುರ್ಯೋಧನನ ಸಾವಿಗೆ ಕಾರಣವಾಗುವ ಮರ್ಮಸ್ಥಾನ ಯಾವುದೆಂದು ತಿಳಿದ ನಂತರ; ಮಾರುದ್ದು=ಒಂದನ್ನೊಂದು ತಿಕ್ಕು; **ಕಯ್ಯಿಮ್ ನೆಲನಮ್ ಮಾರುದ್ದಿ**=ಕಯ್ಯಿಂದ ನೆಲವನ್ನು ಬಡಿದು; ಎಚ್ಚರಗೊಂಡ ನಂತರ ನೆಲದ ಮೇಲೆಯೇ ಕುಳಿತಿದ್ದ ಭೀಮಸೇನನು ಆಕ್ರೋಶವನ್ನು ವ್ಯಕ್ತಪಡಿಸುವಂತೆ ನೆಲವನ್ನು ಕಯ್ಯಿಂದ ಒಮ್ಮೆ ಜೋರಾಗಿ ಬಡಿದು ಮೇಲಕ್ಕೆ ಎದ್ದು ನಿಂತು; ಸೂಸು=ಎಸೆ/ಬಿಸುಡು; **ಧರಾತಳದೊಳ್ ಸೂಸಿದ ತನ್ನ ತೀವ್ರ ಗದೆಯನ್ ಕಂಡು ಎತ್ತಿಕೊಂಡು**= ಭೂಮಿಯ ಮೇಲೆ ಬಿದ್ದಿದ್ದ ತನ್ನ ಭಯಂಕರವಾದ ಗದೆಯನ್ನು ನೋಡಿ, ಅದನ್ನು ಅಲ್ಲಿಂದ ಎತ್ತಿಕೊಂಡು; ಸತ್ತಿಗ=ಸತ್ಯಾಶ್ರಯ ಚಕ್ರವರ್ತಿ/ಭೀಮ; ರನ್ನ ಕವಿಯು ತಾನು ರಚಿಸಿದ ಗದಾಯುದ್ಧ ಕಾವ್ಯದಲ್ಲಿ ಭೀಮನ ಪಾತ್ರದೊಡನೆ ಸತ್ಯಾಶ್ರಯ ಚಕ್ರವರ್ತಿಯ ಹೆಸರನ್ನು ಸಮೀಕರಿಸಿದ್ದಾನೆ; ಅಂಬರ=ಆಕಾಶ; ಸಿಡಿಲ್ ಏಳ್ಗೆ=ಮೇಲೇರುವಿಕೆ; ಸಿಡಿಲ್ ಏಳ್ಗೆ=ಸಿಡಿಲು ಬಡಿಯುವುದು; ಕುಭೃತ್=ರಾಜ; ಚಂಡ=ಬಲಯುತವಾದ/ಶಕ್ತಿಯುತವಾದ; ಊರು=ತೊಡೆ; ಊರುದಂಡ= ದೊಡ್ಡ ತೊಡೆ;

**ಕಲಿ ಸತ್ತಿಗನ್ ಅಂಬರ ಸ್ಥಳದಿಂದಮ್ ಸಿಡಿಲ್ ಏಳ್ಗೆಯಿಂದೆ ಎರಗಿ... ಗದಾದಂಡದಿಮ್ ಪೊಯ್ವಾಗಳ್... ಕುರುಕುಭೃತ್ ಚಂಡ ಊರುದಂಡಂಗಳಮ್ ಮುಳಿದು ಇಟ್ಟನ್**=ಭೀಮಸೇನನು ಆಕಾಶದಿಂದ ಬರಸಿಡಿಲು ಬಂದು ಬಡಿಯುವಂತೆ ದುರ್ಯೋಧನನ ಮೇಲೆ ಎರಗಿ, ಗದಾದಂಡದಿಂದ ಕುರುರಾಜನ ಬಲಯುತವಾದ ತೊಡೆಗಳನ್ನು ಕೋಪೋದ್ರೇಕದಿಂದ ಹೊಡೆದನು; **ತೊಡೆಯಮ್ ಇಡೆ**=ತೊಡೆಯನ್ನು ಗದೆಯಿಂದ ಹೊಡೆಯಲು; ಉಡಿ=ಮುರಿ/ ತುಂಡಾಗು; ನೆಟ್ಟನೆ= ಕೂಡಲೇ; **ಉಡಿದು ನೆಟ್ಟನೆ ಕೆಡೆಯುತ್ತುಮ್**=ತೊಡೆ ಮುರಿದು ಕೂಡಲೇ ನೆಲದ ಮೇಲೆ ದೊಪ್ ಎಂದು ಬೀಳುತ್ತ; ಕರ್ಚು=ತಬ್ಬಿ ಹಿಡಿದು/ಬಲವಾಗಿ ಹಿಡಿದು; **ನೆಲನನ್ ಇದನ್ ಆನ್ ಎಂತುಮ್ ಬಿಡೆನ್ ಎಂಬ ತೆರದೆ ಕರ್ಚಿ**=ಈ ಭೂಮಂಡಲವನ್ನು ಇದನ್ನು ನಾನು ಯಾವ ರೀತಿಯಿಂದಲೂ ಯಾರಿಗೂ ಬಿಡುವುದಿಲ್ಲ ಎಂಬ ರೀತಿಯಲ್ಲಿ ನೆಲವನ್ನು ತಬ್ಬಿ ಹಿಡಿದುಕೊಂಡು; ಕುಲಗಿರಿ=ಏಳು ಬೆಟ್ಟಗಳ ಗುಂಪು/ದೊಡ್ಡ ಬೆಟ್ಟ;

**ಕುಲಗಿರಿ ಕೆಡೆವ ಅಂದದೆ ಆಗಳ್ ಕೌರವೇಂದ್ರನ್ ಕೆಡೆದನ್**=ದೊಡ್ಡ ಬೆಟ್ಟ ಕುಸಿದು ಕೆಳಕ್ಕೆ ಬೀಳುವಂತೆ ಆಗ ದುರ್ಯೋಧನನು ರಣರಂಗದಲ್ಲಿ ನೆಲದ ಮೇಲೆ ಉರುಳಿಬಿದ್ದನು; ಅಂತು=ಆ ರೀತಿ; ದಿಕ್+ಕರಿ+ಕರ+ಅನುಕಾರಿ+ಗಳ್+ಅಪ್ಪ;

ಕರಿ=ಆನೆ; ಕರ=ಸೊಂಡಿಲು; ಅನುಕಾರಿ=ಹೋಲುವಂತಹ; ನಿಜ+ಭುಜ+ಸ್ತಂಭಮ್+ಗಳ್+ಇಮ್; ನಿಜ=ತನ್ನ; ಭುಜ=ತೋಳು; ಸ್ತಂಭ=ಕಂಬ; **ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಮ್**=ಆ ರೀತಿಯಲ್ಲಿ ಭೀಮಸೇನನು ದಿಕ್ಕನ್ನು ಹೊತ್ತಿರುವ ಆನೆಯ ಸೊಂಡಿಲನ್ನು ಹೋಲುವ ತನ್ನ ದೊಡ್ಡ ಬಾಹುಗಳಿಂದ; ಕದಳೀಸ್ತಂಭ=ಬಾಳೆಯ ಗಿಡದ ದಿಂಡು; ಅನುಕರಿಸು=ಹೋಲುವ; ಮಹೀಶ=ರಾಜ; ಅಶ್ರಮ=ತೊಂದರೆಯಿಲ್ಲದೆ /ದಣಿವಿಲ್ಲದೆ/ಆಯಾಸವಿಲ್ಲದೆ; **ಕದಳೀಸ್ತಂಭಂಗಳನ್ ಅನುಕರಿಸುವ ಕುರುಕುಲ ಮಹೀಶನ ತೊಡೆಗಳನ್ ಅಶ್ರಮದೊಳ್ ಉಡಿದು**=ಬಾಳೆಯ ಗಿಡದ ದಿಂಡನ್ನು ಹೋಲುವ ದುರ್ಯೋಧನನ ನುಣ್ಣನೆಯ ತೊಡೆಗಳನ್ನು ಅನಾಯಾಸವಾಗಿ ಮುರಿದು; ಪುಡಿ=ಮಣ್ಣು;

**ಪುಡಿಯೊಳ್ ಪೊರಳ್ಚಿ**=ನೆಲದ ಮಣ್ಣಿನಲ್ಲಿ ಹೊರಳಾಡಿಸಿ; **ಊರುಭಂಗ ಪ್ರತಿಜ್ಞೆ**=ತೊಡೆಯನ್ನು ಮುರಿಯುವುದಾಗಿ ತೊಟ್ಟಿದ್ದ ಪ್ರತಿಜ್ಞೆ. ಕಪಟ ದ್ಯೂತದಲ್ಲಿ ಧರ್ಮರಾಯನನ್ನು ಸೋಲಿಸಿ, ದ್ರೌಪದಿಯನ್ನು ಒಳಗೊಂಡಂತೆ ಪಾಂಡವರ ಸಕಲ ಸಂಪತ್ತನ್ನು ವಶಪಡಿಸಿಕೊಂಡಿದ್ದ ದುರ್ಯೋಧನನು ಆ ಸಭೆಯಲ್ಲಿ ತನ್ನ ತೊಡೆಯನ್ನೇರಿ ಕುಳಿತುಕೊಳ್ಳುವಂತೆ ದ್ರೌಪದಿಯನ್ನು ಕರೆದು ಅಪಮಾನಗೊಳಿಸಿದ್ದನು. ಆಗ ಕೋಪಾವೇಶದಿಂದ ಕೆರಳಿದ ಭೀಮಸೇನನು ದುರ್ಯೋಧನನ ತೊಡೆಯನ್ನು ಮುರಿಯುವುದಾಗಿ ಪ್ರತಿಜ್ಞೆಯನ್ನು ಕಯ್ಗೊಂಡಿದ್ದನು; **ತನ್ನ ಮುನ್ನ ನುಡಿದ ಊರುಭಂಗ ಪ್ರತಿಜ್ಞೆಯಮ್ ತೀರ್ಚಿ**=ಈ ಮೊದಲು ತಾನು ನುಡಿದಿದ್ದ **"ದುರ್ಯೋಧನನ ತೊಡೆಯನ್ನು ಮುರಿಯುವುದಾಗಿ"** ತೊಟ್ಟಿದ್ದ ಪ್ರತಿಜ್ಞೆಯನ್ನು ಈಡೇರಿಸಿಕೊಂಡು; ಮಕುಟ=ಕಿರೀಟ; ಭಂಗ=ನಾಶ; **ಮಕುಟಭಂಗಪ್ರತಿಜ್ಞೆಯಮ್ ತೀರ್ಚಲೆಂದು**= ಕಿರೀಟವನ್ನು ನಾಶಮಾಡುವ ಮತ್ತೊಂದು ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳಲೆಂದು; ಕುರುಕುಲ+ಅಂತಕನ್; ಅಂತಕ=ಯಮ; ಕುರುಕುಲಾಂತಕ=ಕುರುಕುಲಕ್ಕೆ ಯಮನಾಗಿರುವವನು/ಕುರುಕುಲವನ್ನು ನಾಶಮಾಡುವವನು/ ಭೀಮಸೇನ; ಮಹಾ+ಮಸಕಮ್; ಮಸಕ=ಕೋಪ/ಸಿಟ್ಟು; ಮಸಗು=ಕೆರಳು;

**ಕುರುಕುಲಾಂತಕನ್ ಮಾಮಸಕಮ್ ಮಸಗಿ**=ಭೀಮಸೇನನು ಅತಿಯಾದ ಕೋಪೋದ್ರೇಕದಿಂದ ಕೆರಳಿ, ಕಿರೀಟವನ್ನು ಹಾನಿಗೊಳಿಸುವ ಮುನ್ನ ಈ ರೀತಿ ಅಬ್ಬರಿಸುತ್ತಾನೆ; ಭುವನ+ಆಧಿಪತ್ಯ+ಸವನ+ಉದಕದ+ಇಮ್; ಭುವನ=ಜಗತ್ತು/ಭೂಮಿ; ಆಧಿಪತ್ಯ=ಒಡೆತನ; ಸವನ=ರಾಜನಿಗೆ ಪಟ್ಟವನ್ನು ಕಟ್ಟುವಾಗ ಮಾಡಿಸುವ ಸ್ನಾನ; ಉದಕ=ನೀರು; **ಭುವನಾಧಿಪತ್ಯಸವನೋದಕ**=ರಾಜ್ಯದ ಒಡೆತನದ ಪಟ್ಟಾಭಿಷೇಕವನ್ನು ಮಾಡುವಾಗ ಎರೆಯುವ ನೀರು; ಪೂತಮ್+

ಆದುದು; ಪೂತ=ಪವಿತ್ರವಾದ; ಇದು **ಭುವನಾಧಿಪತ್ಯಸವನೋದಕದಿಮ್ ಪೂತಮಾದುದು ಗಡ**=ಈ ಕಿರೀಟವು ಪಟ್ಟಾಭಿಷೇಕದ ನೀರಿನಿಂದ ಪವಿತ್ರವಾದುದು ಕಂಡೆಯಾ; ಧವಳ+ಆತಪತ್ರದ; ಧವಳ=ಬಿಳುಪು; ಆತಪತ್ರ= ಕೊಡೆ; ಧವಳಾತಪತ್ರ=ಬೆಳ್ಗೊಡೆ; ರಾಜಲಾಂಛನವಾಗಿ ಬಳಸುತ್ತಿದ್ದ ಬೆಳ್ಳನೆಯ ಬಣ್ಣದ ಕೊಡೆ; **ಇಂತು ಇದು ಧವಳಾತಪತ್ರದ ನೆಳಲ್ಗೆ ಗುರಿಯಾದುದು ಗಡಮ್**= ಈ ರೀತಿ ಈ ಕಿರೀಟವು ಬೆಳ್ಗೊಡೆಯ ನೆರಳಿನಲ್ಲಿ ಆಶ್ರಯವನ್ನು ಹೊಂದಿತ್ತು ಕಂಡೆಯಾ; ಆರ್ಗಮ್=ಯಾರಿಗೂ; **ಆರ್ಗಮ್ ಇಂತು ಇದು ಬಾಗದು..ಗಡ**= ಯಾರಿಗೂ ಈ ಕಿರೀಟವು ತಲೆಬಾಗದು ಕಂಡೆಯಾ; ಸಾರು=ಹತ್ತಿರಕ್ಕೆ ಬರು; ಸಪತ್ನ=ಹಗೆ/ಶತ್ರು; ಹತ+ಊರು; ಹತೋರು=ಮುರಿದ ತೊಡೆ; ಶೃಂಗ= ತುದಿ/ ಉನ್ನತಿಕೆ; ಕಿರೀಟಶೃಂಗ=ಉನ್ನತವಾದ ಕಿರೀಟವನ್ನು;

**ಈ ತಲೆಗೆ ತಕ್ಕುದನ್ ಈಗಳೆ ಮಾಳ್ಪೆನ್ ಎಂದು ಕೋಪದಿನ್... ಸಪತ್ನ ಹತೋರು ಕಿರೀಟಶೃಂಗಮಮ್ ಒದೆಯಲ್ಕೆ ಸಾರ್ತರೆ**=ಈ ತಲೆಗೆ ಸರಿಯಾದುದನ್ನು ಈಗಲೇ ಮಾಡುತ್ತೇನೆ ಎಂದು ಕೋಪದಿಂದ ಅಬ್ಬರಿಸುತ್ತ... ಹಗೆಯಾದ ದುರ್ಯೋಧನನ ಮುರಿದ ತೊಡೆಯನ್ನು ಮತ್ತು ಉನ್ನತವಾದ ಕಿರೀಟವನ್ನು ಒದೆಯಲೆಂದು ಬಳಿಗೆ ಬರುತ್ತಿರಲು; **ಬಲದೇವಾದಿಗಳ್**=ಬಲದೇವ ಮತ್ತು ಇತರರು; **ಆಗದು ಆಗದು ಒದೆಯಲ್ಕೆ**=ಆಗದು ಆಗದು ಆ ರೀತಿ ಒದೆಯಬಾರದು; **ಏಕಾದಶಾಕ್ಷೋಹಿಣೀ ಬಲ ಲಕ್ಷ್ಮೀಪತಿಯನ್ ಪರಾಭವಿಸದಿರ್**= ಹನ್ನೊಂದು ಅಕ್ಷೋಹಿಣಿ ಸೇನೆಗೆ ಒಡೆಯನಾಗಿದ್ದ ಚಕ್ರವರ್ತಿಯನ್ನು ಅಪಮಾನಿಸಬೇಡ; ಮಾರ್ಕೊಳ್= ತಡೆಗಟ್ಟು/ ವಿರೋದಿಸು/ನಿಂದಿಸು;

**ಚಿಃ... ತಕ್ಕುದಲ್ತು ಎಂದು ಬಲದೇವಾದಿಗಳ್ ಮಾರ್ಕೊಳೆಯುಮ್**=ಚಿಃ ಇದು ನಿನ್ನಂತಹ ವೀರನಿಗೆ ಯೋಗ್ಯವಾದ ನಡತೆಯಲ್ಲ ಎಂದು ಬಲದೇವ ಮತ್ತು ಅಲ್ಲಿದ್ದ ಕೆಲವರು ತಡೆದು ನಿಲ್ಲಿಸಲು ಪ್ರಯತ್ನಿಸಿದರೂ; ಮಾಣದೆ=ಸುಮ್ಮನಾಗದೆ; ಜ್ವಲತ್+ಮಕುಟಮನ್; ಜ್ವಲತ್=ಹೊಳೆಯುವ/ಬೆಳಗುವ; ವಾಮ+ಅಂಘ್ರಿ+ ಇಮ್; ವಾಮ=ಎಡಗಡೆಯ; ಅಂಘ್ರಿ=ಪಾದ; **ಮಾಣದೆ ಭೀಮಸೇನನ್ ಕೌರವ್ಯ ರಾಜೇಂದ್ರನಾ ರತ್ನಮಂಡಲ ರಶ್ಮಿಪ್ರಕಟ ಜ್ವಲನ್ಮಕುಟಮನ್ ವಾಮಾಂಘ್ರಿಯಿಮ್ ಒದೆದನ್**=ಭೀಮಸೇನನು ಸುಮ್ಮನಾಗದೆ, ಮುಂದಕ್ಕೆ ಅಡಿಯಿಟ್ಟು ರತ್ನ ಮುತ್ತು ವಜ್ರಗಳ ಕಾಂತಿಯನ್ನು ಚೆಲ್ಲುತ್ತ ಹೊಳೆಹೊಳೆಯುತ್ತಿದ್ದ ದುರ್ಯೋಧನನ ಕಿರೀಟವನ್ನು ತನ್ನ ಎಡಗಾಲಿನಿಂದ ಒದ್ದನು; ಗುಣ+ರತ್ನ+ಅರ್ಣವನ್; ಗುಣರತ್ನ= ಒಳ್ಳೆಯ ನಡೆನುಡಿ; ಅರ್ಣವ=ಕಡಲು/ಸಮುದ್ರ; ಗುಣರತ್ನಾರ್ಣವ=ಒಳ್ಳೆಯ ನಡೆನುಡಿಗಳಿಂದ ಕೂಡಿರುವುದು ಎಂಬ ರೂಪಕದ ತಿರುಳು; ಸತ್ಯಾಶ್ರಯ ಚಕ್ರವರ್ತಿಗೆ ಇದ್ದ ಬಿರುದು;

**ಅಂತು ಗುಣರತ್ನಾರ್ಣವನ್ ಪ್ರತಿಜ್ಞಾಪೂರ್ಣನುಮ್ ಆಗೆ**=ಆ ರೀತಿ ಗುಣರತ್ನಾರ್ಣವನಾದ ಭೀಮಸೇನನು ಪ್ರತಿಜ್ಞೆಯನ್ನು ಈಡೇರಿಸಿಕೊಂಡವನಾಗಿರಲು; ಸುರ+ಅಂಗನೆ+ಅರ್; ಸುರ=ದೇವತೆ; ಅಂಗನೆ=ಹೆಣ್ಣು; ಸುರತರು=ದೇವಲೋಕದಲ್ಲಿ ಮರ/ಕಲ್ಪವೃಕ್ಷ; ಕುಸುಮ+ಉತ್ಕರಮ್+ಅಮ್; ಕುಸುಮ=ಹೂವು; ಉತ್ಕರ=ರಾಶಿ; ದುಂದುಭಿ=ನಗಾರಿ/ದೊಡ್ಡ ಚರ್ಮವಾದ್ಯ; ಉಲಿ=ದನಿಮಾಡು; ಪರಂಪರೆ+ಇಂದಮ್; ಪರಂಪರೆ=ಸಂಪ್ರದಾಯ/ಹಿಂದಿನಿಂದಲೂ ನಡೆದು ಬಂದಿರುವ ಆಚರಣೆ; ಸತ್ತಿಗ=ಸತ್ಯಾಶ್ರಯ/ಭೀಮಸೇನ;

**ಸುರಾಂಗನೆಯರ್ ಸುರತರು ಕುಸುಮೋತ್ಕರಮಮ್ ಸುರಿಯೆ ಸುರದುಂದುಭಿಗಳ್ ಉಲಿಯೆ... ಸತ್ತಿಗನನ್ ಮೆಚ್ಚಿ ಪರಮ ಆಶೀರ್ವಚನ ಪರಂಪರೆಯಿಂದಮ್ ಪರಸಿದರ್**=ದೇವಲೋಕದ ಹೆಂಗಸರು ಕಲ್ಪತರುವಿನ ಹೂವುಗಳನ್ನು ರಾಶಿರಾಶಿಯಾಗಿ ಸುರಿಯುತ್ತಿರಲು, ದೇವಲೋಕದ ಚರ್ಮವಾದ್ಯಗಳು ಮಂಗಳದ ದನಿ ಮಾಡುತ್ತಿರಲು, ಭೀಮಸೇನನನ್ನು ಮೆಚ್ಚಿಕೊಂಡು ಒಳ್ಳೆಯ ಆಶೀರ್ವಾದದ ನುಡಿಗಳಿಂದ ಹರಸಿದರು; ಏವ=ಅಳಲು/ಸಂಕಟ; ಅಲೆ=ಹಿಂಸೆ/ಕಾಟ; ಬಳದೇವನ್ ಭೀಮನ ಭುಜ ಬಳದ ಏವಮ್ ಮನಮನ್ ಅಲೆಯೆ=ಬಲರಾಮನು ಭೀಮನ ಹೊಡೆತದಿಂದ ದುರ್ಯೋಧನನಿಗೆ ಆದ ಸೋಲು ಮತ್ತು ಭೀಮನ ಪಾದದ ಒದೆತದಿಂದ ಉಂಟಾದ ಅಪಮಾನವು ತನ್ನ ಮನಸ್ಸಿಗೆ ಗಾಸಿಯನ್ನುಂಟುಮಾಡಲು; ಮಾರ್ಕೊಳ್= ತಡೆಗಟ್ಟು/ ವಿರೋಧಿಸು/ ಬೇಡವೆಂದು ಹೇಳು; ಕೆಳರ್=ಉದ್ವಿಗ್ನಗೊಳ್ಳು/ಉದ್ರಿಕ್ತನಾಗು; ಅಳವು+ಅಲ್ಲದೆ; ಅಳವು=ಅಳತೆ; ಅಳವಲ್ಲದೆ= ಮಿತಿಮೀರಿ/ಹೆಚ್ಚಿನ;

**ಮಾರ್ಕೊಳೆಯುಮ್ ಕುರುಪತಿಯನ್ ಪರಿಭವಿಸಿದನ್ ಎಂದು ಅಳವಲ್ಲದೆ ಮುಳಿದು ಕೆಳರ್ದು ನೋಡುತ್ತಿರ್ದನ್**=ನಾನು ಬೇಡವೆಂದು ಹೇಳುತ್ತಿದ್ದರೂ ಕುರುಪತಿಯನ್ನು ಅಪಮಾನಗೊಳಿಸಿದನು ಎಂದು ಭೀಮಸೇನನ ಬಗ್ಗೆ ತುಂಬಾ ಕೋಪಗೊಂಡು, ಕೋಪಾವೇಶದಿಂದ ಉದ್ವಿಗ್ನನಾಗಿ ಭೀಮಸೇನನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದನು; **ಅಂತು ಮುಳಿದಿರ್ದು**=ಆ ರೀತಿ ಭೀಮಸೇನನ ಬಗ್ಗೆ ತುಂಬಾ ಕೋಪಗೊಂಡು; **ತನ್ನ ತಮ್ಮನನ್ ನೋಯಿಸಲಾರದೆಯುಮ್ ದುರ್ಯೋಧನಂಗೆ ಆದ ಅವಸ್ಥೆಯುಮ್ ನೋಡಲಾರದೆಯುಮ್ ಬಲದೇವನ್ ದ್ವಾರಾವತಿಗೆ ಪೋದನ್**=ಭೀಮಸೇನನ ಮೇಲೆ ಆಕ್ರಮಣವನ್ನು ಮಾಡಿ ತನ್ನ ತಮ್ಮನಾದ ಕೃಷ್ಣನ ಮನಸ್ಸನ್ನು ನೋಯಿಸಲು ಬಯಸದೆ, ದುರ್ಯೋಧನನಿಗೆ ಆದ ದುರಂತವನ್ನೂ ನೋಡಲಾರದೆ ಬಲರಾಮನು ದ್ವಾರಾವತಿಯತ್ತ ನಡೆದನು;

❖

## ನೋಟ–೨೫

# ದ್ರೌಪದಿಯ ಮುಡಿಕಟ್ಟಿದ ಭೀಮಸೇನ

ಬಲರಾಮನು ದುರ್ಯೋಧನನಿಗೆ ಉಂಟಾದ ದುರಂತವನ್ನು ಕಂಡು ಕುಪಿತನಾಗಿ, ಮನನೊಂದು ದ್ವಾರಾವತಿಯತ್ತ ನಡೆಯಲು, **ಅನ್ನೆಗಮ್ ಇತ್ತಲ್**=ಅದೇ ಸಮಯದಲ್ಲಿ ಇತ್ತ ವೈಶಂಪಾಯನ ಸರೋವರದ ತೀರದಲ್ಲಿ ದುರ್ಯೋಧನನು ತೊಡೆಮುರಿದು ಬಿದ್ದು ನರಳುತ್ತಿರಲು; ಮರುತ್= ವಾಯುದೇವ; ಮರುತ್ ಪುತ್ರ=ಭೀಮಸೇನ; ಧಾತ್ರೀಪತಿ=ಭೂಮಂಡಲದ ಒಡೆಯ/ಧರ್ಮರಾಯ; ಅರಿಪಿ=ಹೇಳಿ; **ಮರುತ್ ಪುತ್ರನ್ ಧಾತ್ರೀಪತಿಗೆ ಅರಿಪಿ**=ವಾಯುಪುತ್ರನಾದ ಭೀಮಸೇನನು ಧರ್ಮರಾಯನಿಗೆ ದ್ರೌಪದಿಯನ್ನು ಇಲ್ಲಿಗೆ ಕರೆತರೆಸುವುದಾಗಿ ತಿಳಿಸಿ, ಅವನ ಅನುಮತಿಯನ್ನು ಪಡೆದುಕೊಂಡು; ಏಕತ್+ ಛತ್ರೀಕೃತ+ ಜಗತ್+ಅಹಿತ; ಏಕಚ್ಛತ್ರೀಕೃತ=ಒಂದೇ ಬೆಳ್ಗೊಡೆಯ ಆಡಳಿತಕ್ಕೆ ಒಳಪಟ್ಟ ರಾಜ್ಯವನ್ನು ಆಳುತ್ತಿದ್ದ; ಅಹಿತ=ಹಗೆ/ಶತ್ರು; ಕ್ಷತ್ರಿಯ ಕುಳ=ಕ್ಷತ್ರಿಯ ವಂಶ; ಕಾಳರಾತ್ರಿ=ಪ್ರಳಯ ಕಾಲದ ರಾತ್ರಿ; ಬಳಿಯಟ್ಟಿ ಕರೆಸಿ=ಅವಳ ಬಳಿಗೆ ಒಬ್ಬ ದೂತನನ್ನು ಕಳುಹಿಸಿ ಕರೆಸಿಕೊಂಡು;

**ಏಕಚ್ಛತ್ರೀಕೃತಜಗತ್ ಅಹಿತ ಕ್ಷತ್ರಿಯ ಕುಳ ಕಾಳರಾತ್ರಿಯಮ್ ದ್ರೌಪದಿಯನ್ ಬಳಿಯಟ್ಟಿ ಕರೆಸಿ ತೋರಲ್ಕೆ**=ಒಂದೇ ಬೆಳ್ಗೊಡೆಯ ಆಡಳಿತಕ್ಕೆ ಒಳಪಟ್ಟ ಹಸ್ತಿನಾವತಿಯನ್ನು ಆಳುತ್ತಿದ್ದ ಹಗೆಯ ವಂಶವಾದ ಕುರುಕುಲಕ್ಕೆ ಪ್ರಳಯ ಕಾಲದ ರಾತ್ರಿಯಂತಿರುವ ದ್ರೌಪದಿಯನ್ನು ದೂತನೊಬ್ಬನನ್ನು ಕಳುಹಿಸಿ ಕರೆಯಿಸಿಕೊಂಡು, ಆಕೆಗೆ ತೊಡೆಮುರಿದು ಬಿದ್ದಿರುವ ದುರ್ಯೋಧನನ್ನು ತೋರಿಸಿ, ನುಡಿಯತೊಡಗುತ್ತಾನೆ; ಪಂಕೇಜ=ತಾವರೆ; ವಕ್ತ್ರ=ಮೊಗ;

ಪಂಕೇಜವಕ್ತ್ರೆ=ತಾವರೆ ಮೊಗದವಳು; ಮುಳಿಸು=ಹೊಟ್ಟೆಕಿಚ್ಚು; ನಂಜು+ಇಕ್ಕಿ; ನಂಜು=ವಿಷ; ಕೊಲ್ವಂದಿನ=ಕೊಲ್ಲಲು ಸಂಚನ್ನು ಹೂಡಿದ; **ಪಂಕೇಜವಕ್ತ್ರೇ ಇದಮ್ ನೋಡು ಮುಳಿಸಿಮ್ ನಂಜಿಕ್ಕಿ ಕೊಲ್ವಂದಿನ ಆ ನೀಚನ**=ತಾವರೆಮೊಗದ ದ್ರೌಪದಿಯೇ, ಇದನ್ನು ನೋಡು ಚಿಕ್ಕಂದಿನಲ್ಲಿ ಹೊಟ್ಟೆಕಿಚ್ಚಿನಿಂದ ನನಗೆ ವಿಷದ ಲಡ್ಡುಗೆಯನ್ನು ತಿನ್ನಿಸಿ ಕೊಲ್ಲಲು ಸಂಚುಹೂಡಿದ್ದ ಆ ನೀಚನನ್ನು ನೋಡು; ಜತುಗೃಹದ+ಒಳ್; ಜತುಗೃಹ=ಅರಗಿನ ಮನೆ; **ಜತುಗೃಹದೊಳ್ ಸುಟ್ಟು ಕೊಲ್ವಂದಿನ ಆ ದ್ರೋಹನ**=ಅರಗಿನ ಮನೆಯಲ್ಲಿ ತಾಯಿ ಕುಂತಿಯೊಡನೆ ಅಯ್ದು ಮಂದಿ ಅಣ್ಣತಮ್ಮಂದಿರಾದ ನಮ್ಮೆಲ್ಲರನ್ನೂ ಸುಡಲು ಹೊಂಚುಹಾಕಿದ್ದ ಆ ದ್ರೋಹಿಯನ್ನು ನೋಡು; ಉರ್ವೀತಳಮ್+ಅಮ್; ಉರ್ವೀತಳ= ಭೂಮಂಡಲ; ಜೂದಾಡು=ಜೂಜನ್ನು ಆಡು/ದ್ಯೂತವನ್ನಾಡು; ಸಂಚಳನ್= ದುಡುಕುತನವುಳ್ಳವನು/ಮುಂದೆ ಏನಾಗುವುದು ಎಂಬುದನ್ನು ಗಮನಿಸದೆ ಕೆಲಸಕ್ಕೆ ತೊಡಗುವವನು/ತಿಳಿಗೇಡಿ;

**ಉರ್ವೀತಳಮಮ್ ಜೂದಾಡಿ ಗೆಲ್ವಂದಿನ ಆ ಸಂಚಳನ**=ಮುಂದೆ ಎಂತಹ ದುರಂತ ಉಂಟಾಗುವುದೆಂಬುದನ್ನು ಗಮನಿಸದೆ ನಮ್ಮ ಇಡೀ ರಾಜ್ಯಸಂಪತ್ತನ್ನು ಜೂಜಾಟದ ಮೂಲಕ ಗೆದ್ದ ಆ ತಿಳಿಗೇಡಿಯನ್ನು ನೋಡು; ಸತ್ತ್ವ+ ಉಜ್ಜ್ವಳ+ ಇಂದಮ್; ಸತ್ತ್ವ=ಶಕ್ತಿ/ಬಲ; ಉಜ್ಜ್ವಳ=ಚೆನ್ನಾಗಿ ಉರಿಯುತ್ತಿರುವ; ನಿಜ=ನಿನ್ನ; ಕಬರೀಬಂಧಮ್+ಅನ್; ಕಬರೀ=ಹೆಣೆದು ಜಡೆಹಾಕಿದ ತಲೆಗೂದಲು; ಕಬರೀಬಂಧ=ಕಟ್ಟಿದ ಮುಡಿ ಚಂಡಾಲ=ಕ್ರೂರಿ; ಪಾತಕ=ಕೆಟ್ಟ ಕೆಲಸವನ್ನು ಮಾಡಿದವನು/ಪಾಪಿ; **ತನ್ನ ಸತ್ತ್ವೋಜ್ಜ್ವಳದಿಂದಮ್ ತಮ್ಮನಿಂದಮ್ ನಿಜಕಬರೀಬಂಧಮನ್ ತೆಗೆಯಿಸಿ ನಡೆದ ಆ ಚಂಡಾಲನ ಪಾತಕನ ಇರವನ್**= ತನ್ನಲ್ಲಿದ್ದ ರಾಜಬಲ ಮತ್ತು ತೋಳ್ಬಲದ ಅಹಂಕಾರದಿಂದ ಮೆರೆಯುತ್ತ ತಮ್ಮನಾದ ದುಶ್ಶಾಸನನಿಂದ ನಿನ್ನನ್ನು ರಾಜಸಭೆಗೆ ಎಳೆದು ತರಿಸುವಾಗ ನಿನ್ನ ಕಟ್ಟಿದ ಮುಡಿಯನ್ನು ತೆಗೆಯಿಸಿ ಅಪಮಾನ ಮಾಡಿದ ಕ್ರೂರಿಯಾದ ಆ ಪಾಪಿಗೆ ಬಂದಿರುವ ಹೀನಸ್ಥಿತಿಯನ್ನು ನೋಡು; ಅಗ್ನಿಜೆ=ಯಾಗದ ಬೆಂಕಿಯ ಕುಂಡದಲ್ಲಿ ಹುಟ್ಟಿದವಳು/ದ್ರೌಪದಿ; ಸಂಗರ+ಅಧ್ವರದ+ಒಳ್; ಸಂಗರ=ಯುದ್ಧ/ಕಾಳೆಗ; ಅಧ್ವರ=ಯಾಗ; ಅರಸ=ಧರ್ಮರಾಯ; ದೀಕ್ಷಿತ=ಯಾಗವನ್ನು ಮಾಡುವವನು;

**ಅಗ್ನಿಜೇ, ಸಂಗರಾಧ್ವರದೊಳ್ ಅರಸನ್ ದೀಕ್ಷಿತನ್**=ದ್ರೌಪದಿಯೇ ಕೇಳು ಈ ಕುರುಕ್ಷೇತ್ರ ಯುದ್ಧವೆಂಬ ಯಾಗವನ್ನು ಧರ್ಮರಾಯನು ಕಯ್ಗೊಂಡಿದ್ದಾನೆ; ಋತ್ವಿಜ=ಯಾಗದ ಪುರೋಹಿತ; **ಇಲ್ಲಿ ಎಮ್ಮ ಈ ನಾಲ್ವರುಮ್ ಋತ್ವಿಜರುಮ್**= ಈ ಯಾಗದ ಆಚರಣೆಗಳನ್ನು ಮಾಡುವುದಕ್ಕಾಗಿ ಧರ್ಮರಾಯನ ತಮ್ಮಂದಿರಾದ ನಾವು ನಾಲ್ಕು ಮಂದಿ ಪುರೋಹಿತರಾಗಿದ್ದೇವೆ; ಮುರಹರ=

ಮುರನೆಂಬ ರಕ್ಕಸನನ್ನು ಕೊಂದವನು/ಕೃಷ್ಣ; ಉಪದೇಶಕ=ಮಂತ್ರವನ್ನು ಹೇಳಿಕೊಡುವವನು/ತಿಳುವಳಿಕೆಯನ್ನು ನೀಡುವವನು; **ಮುರಹರನ್ ತಾನ್ ಉಪದೇಶಕನ್**=ಕೃಷ್ಣನು ಮಂತ್ರಗಳನ್ನು ಹೇಳಿಕೊಡುತ್ತಿದ್ದಾನೆ; ಗೃಹೀತ+ವ್ರತ+ ಆಚರಣ; ಗೃಹೀತ=ಸ್ವೀಕರಿಸಿದ/ಕಯ್ಗೊಂಡ; ವ್ಯಾಪಿಕೆ+ಉಮ್; ವ್ಯಾಪಿಕೆ= ಆಚರಿಸುವವಳು; **ನೀನುಮ್ ಗೃಹೀತ ವ್ರತಾಚರಣ ವ್ಯಾಪಿಕೆಯುಮ್**= ನೀನೂ ಕೂಡ ಈ ಕುರುಕ್ಷೇತ್ರಯುದ್ಧದ ಯಾಗದ ವ್ರತಾಚರಣೆಯನ್ನು ಕಯ್ಗೊಂಡು ಆಚರಿಸುತ್ತಿದ್ದೀಯೆ; ಭವತ್=ನಿನ್ನ; ಪರಿಭವ=ಅಪಮಾನ; ಸಂಚಾರಕ= ಮುಂದಾಳು/ಮೂಲ ಪ್ರೇರಣೆ;

**ಭವತ್ ಪರಿಭವಮ್ ಸಂಚಾರಕಮ್**=ಅಂದು ದುರ್ಯೋಧನನ ಆದೇಶದಂತೆ ದುಶ್ಶಾಸನನು ನಿನ್ನನ್ನು ರಾಜಸಭೆಗೆ ಮುಡಿಬಿಚ್ಚಿಹೋಗುವಂತೆ ಎಳೆತಂದು, ಸೀರೆಯನ್ನು ಸುಲಿದು ಮಾಡಿದ ಅಪಮಾನವೇ ಕುರುಕ್ಷೇತ್ರ ಯುದ್ಧ ಯಾಗಕ್ಕೆ ಮೂಲಪ್ರೇರಣೆಯಾಗಿದೆ; ಪಶು=ಯಾಗದಲ್ಲಿ ಬಲಿಕೊಡುವ ಪ್ರಾಣಿ; **ಕೌರವೇಶ್ವರನ್ ಈತನ್ ಪಶುವಾಗೆ**= ದುರ್ಯೋಧನನು ಈ ಯುದ್ಧ ಯಾಗದಲ್ಲಿ ಬಲಿಪಶುವಾಗಿದ್ದಾನೆ; ಬೇಳ್=ಹವಿಸ್ಸನ್ನು ಅರ್ಪಿಸು/ಯಾಗದ ಬೆಂಕಿಕುಂಡಕ್ಕೆ ವಸ್ತುಗಳನ್ನು ಮತ್ತು ಬಲಿ ಕೊಡುವ ಪ್ರಾಣಿಯನ್ನು ಹಾಕುವುದು; **ಇವನನ್ ಕೋಪಾಗ್ನಿಯಿಂದೆ ಬೇಳ್ದೆನ್**=ಈ ದುರ್ಯೋಧನನನ್ನು ನನ್ನ ಕೋಪವೆಂಬ ಬೆಂಕಿಗೆ ಆಹುತಿ ಕೊಡುತ್ತಿದ್ದೇನೆ; ಕ್ರವ್ಯ=ಮಾಂಸ/ಹಸಿಯಾದ ಮಾಂಸ; ಹವ್ಯ= ಹವಿಸ್ಸು/ಯಾಗದ ಬೆಂಕಿಯ ಕುಂಡಕ್ಕೆ ಹಾಕುವ ವಸ್ತುಗಳು/ಯಾಗದ ಮೂಲಕ ದೇವತೆಗಳಿಗೆ ಕೊಡುವ ಆಹುತಿ; ಹವ್ಯವಹ=ಅಗ್ನಿದೇವ/ಹವಿಸ್ಸನ್ನು ದೇವತೆಗಳಿಗೆ ತಲುಪಿಸುವವನು; ಸುಹುತ=ಚೆನ್ನಾಗಿ ಬೆಂಕಿಯಲ್ಲಿ ಅರ್ಪಿತವಾಗುವುದು/ ಪೂರ್ಣಾಹುತಿಯಾಗುವುದು;

**ಕೌರವ್ಯ ಕ್ರವ್ಯ ಹವ್ಯದಿಂದೆ ಎನ್ನ ಕೋಪ ಹವ್ಯವಹಮ್ ಸುಹುತಮ್**= ದುರ್ಯೋಧನನ ಹಸಿಯಾದ ಮಾಂಸವನ್ನು ಕುರುಕ್ಷೇತ್ರ ಯುದ್ಧದ ಯಾಗದ ಬೆಂಕಿಯಲ್ಲಿ ಬಲಿಕೊಟ್ಟಿದ್ದರಿಂದ ನನ್ನ ಕೋಪಾಗ್ನಿಯು ತಣಿಯಿತು; ದುರ್ವಹ=ತಡೆಯಲಾಗದ; ಪ್ರಹರಣ=ಹೊಡೆತ/ಹೋರಾಟ; ಲೋಹಿತ=ರಕ್ತ; ಅವಭೃಥಸವನ=ಯಾಗದ ಆಚರಣೆಯು ಪಶುಬಲಿಯಿಂದ ಮುಕ್ತಾಯ ಗೊಂಡಾಗ ಮಾಡುವ ಸ್ನಾನ; **ದುರ್ವಹ ದುರ್ಯೋಧನ ದೇಹ ಪ್ರಹರಣ ಲೋಹಿತದಿನ್ ಅವಭೃಥ ಸವನಮ್ ಆದುದು ಎಂದು**=ಯಾರಿಂದಲೂ ಸೋಲನ್ನಪ್ಪದ ಕಾದಾಳುವಾಗಿದ್ದ ದುರ್ಯೋಧನನ ದೇಹಕ್ಕೆ ಹೊಡೆದ ಗದಾ ಪೆಟ್ಟಿನಿಂದ ಚಿಮ್ಮಿದ ನೆತ್ತರಿನಿಂದ ನನ್ನ ದೇಹಕ್ಕೆ ಯಾಗದ ಕೊನೆಯಲ್ಲಿ

ಮಾಡಬೇಕಾಗಿದ್ದ ಸ್ನಾನವಾಯಿತು ಎಂದು ನುಡಿದು; ಯಾಜ್ಞಸೇನಿ=ದ್ರೌಪದಿ; ಆದಿತ್ಯ=ಸೂರ್ಯ; ಆದಿತ್ಯನ ಸಾರಥಿ=ಸೂರ್ಯನ ತೇರನ್ನು ಮುನ್ನಡೆಸುವ ಅರುಣದೇವ. ಈತನು ನಡೆಯಲಾಗದ ಹೆಳವನಾಗಿದ್ದನು ಎಂಬ ಪುರಾಣ ಕಲ್ಪನೆಯಿದೆ; ನಿಜ+ಊರು+ಯುಗಳ; ನಿಜ=ತನ್ನ; ಊರು=ತೊಡೆ; ಯುಗಳ=ಜೋಡಿ; ವಿಕಲ=ಊನವಾದ/ಅಂಗಹೀನವಾದ;

**ಭೀಮಸೇನನ್ ಯಾಜ್ಞಸೇನಿಗೆ ಆದಿತ್ಯನ ಸಾರಥಿ ಇರ್ಪಂತೆ ನಿಜೋರುಯುಗಳ ವಿಕಳನಾಗಿರ್ದ ದುರ್ಯೋಧನನನ್ ತೋರಿ**=ಭೀಮಸೇನನು ದ್ರೌಪದಿಗೆ ಸೂರ್ಯನ ಸಾರಥಿ ಹೆಳವ ಅರುಣದೇವನಂತೆ ನಡೆಯಲಾಗದೆ ತನ್ನೆರಡು ತೊಡೆಗಳನ್ನು ಮುರಿಸಿಕೊಂಡು ಅಂಗಹೀನನಾಗಿ ನೆಲದ ಮೇಲೆ ಉರುಳಿ ಬಿದ್ದಿರುವ ದುರ್ಯೋಧನನನ್ನು ತೋರಿಸಿ; ಮುಡಿ=ಕೊನೆಯಾಗು/ಮುಗಿ; **ಪಗೆ ಮಡಿದುದು ಮುಡಿ ಎನೆ**=ಹಗೆತನ ಕೊನೆಗೊಂಡಿತು. ಈಗ ಮುಡಿಯನ್ನು ಕಟ್ಟಿಕೊ ಎಂದು ದ್ರೌಪದಿಗೆ ಭೀಮಸೇನನು ಹೇಳಲು; ಪಾಂಚಾಲೆ=ಪಾಂಚಾಲ ದೇಶದ ರಾಜ ದ್ರುಪದನ ಮಗಳು/ದ್ರೌಪದಿ; **ನಗೆಮೊಗದಿಮ್ ಪಾಂಚಾಲೆ**= ನಗೆಮೊಗದಿಂದ ದ್ರೌಪದಿಯು; ಸತ್ತಿಗ=ಸತ್ಯಾಶ್ರಯ ರಾಜ/ಭೀಮಸೇನ; ಪಲಕಾಲಮ್=ಹಲವು ವರುಶಗಳಿಂದ; ವಿಗತ=ತಪ್ಪಿಹೋದ; ಆನ್=ನಾನು; ಸತ್ತಿಗ, **ಪಲಕಾಲಮ್ ವಿಗತ ಅಭ್ಯಾಸದೆ ಆನ್ ಮರೆದೆನ್**=ಸತ್ತಿಗನೇ ಹಲವು ವರುಶಗಳ ಅರಣ್ಯವಾಸ ಮತ್ತು ಅಜ್ಞಾತವಾಸದ ಸಮಯದಲ್ಲಿ ಮುಡಿಯನ್ನು ಕಟ್ಟಿಕೊಳ್ಳದೆ ಇದ್ದುದರಿಂದ, ಮುಡಿಯನ್ನು ಹೇಗೆ ಕಟ್ಟಿಕೊಳ್ಳಬೇಕೆಂಬುದನ್ನೇ ಮರೆತಿದ್ದೇನೆ;

**ಪಗೆಯಮ್ ಮಡಿಯಿಸಿದ ನೀನೆ ಮುಡಿಯಲ್ವೇಳ್ಕುಮ್ ಎಂದು ತನ್ನ ಕಯ್ಯಮ್ ಪಿಡಿದು ತೆಗೆವುದುಮ್**=ಹಗೆಯನ್ನು ಕೊನೆಗಾಣಿಸಿದ ನೀನೇ ನನಗೆ ಮುಡಿಯನ್ನು ಕಟ್ಟಬೇಕು ಎಂದು ನುಡಿದು ಭೀಮಸೇನನ ಕಯ್ಯನ್ನು ಹಿಡಿದು ತನ್ನ ತುರುಬಿನತ್ತ ಎಳೆದುಕೊಳ್ಳಲು; ವೇಣಿ= ಜಡೆ/ ತುರುಬು/ ಕೂದಲಿನ ಗಂಟು; ಸಂಹಾರ=ಕೂಡಿಸಿ ಕಟ್ಟುವುದು; ವೇಣೀಸಂಹಾರ=ತಲೆಗೂದಲನ್ನು ಹೆಣೆದು ಕಟ್ಟುವುದು; **ಅಂತೆ ಗೆಯ್ವೆನ್ ಎಂದುಮ್ ಆಕೆಯ ವೇಣೀಸಂಹಾರಮಮ್ ತಾನೆ ಮಾಡಿ**=ನೀನು ಹೇಳಿದಂತೆಯೇ ಮಾಡುತ್ತೇನೆ ಎಂದು ನುಡಿದ ಭೀಮಸೇನನು ದ್ರೌಪದಿಯ ಹರಡಿಕೊಂಡಿದ್ದ ತಲೆಗೂದಲನ್ನು ಒಟ್ಟುಗೂಡಿಸಿ ಹೆಣೆದು ಮುಡಿಯನ್ನು ತಾನೆ ಕಟ್ಟಿಬಿಗಿಯುತ್ತ, ಈ ರೀತಿ ನುಡಿಯುತ್ತಾನೆ; ಕೃಷ್ಣೆ=ದ್ರೌಪದಿ; ಮುನ್ನಮ್=ಮೊದಲು; **ಇದರಲ್ಲಿ**=ಈ ನಿನ್ನ ಮುಡಿಯಲ್ಲಿ; ಮೂರ್ಧ+ಅಭಿಷಕ್ತರ್; ಮೂರ್ಧ=ತಲೆ; ಅಭಿಷಕ್ತರ್=ರಾಜಪಟ್ಟಕ್ಕೆ ಏರುವಾಗ ಮಂಗಳಸ್ನಾನವನ್ನು ಮಾಡಿದವರು; ಮೂರ್ಧಾಭಿಷೇಕ=ರಾಜನಾಗುವ ವ್ಯಕ್ತಿಗೆ

ರಾಜ್ಯಭಾರದ ಅಧಿಕಾರವನ್ನು ವಹಿಸಿಕೊಡುವಾಗ ಮಂಗಳ ಸ್ನಾನವನ್ನು ಮಾಡಿಸಿ, ತಲೆಗೆ ಕಿರೀಟವನ್ನು ತೊಡಿಸಿ ಪಟ್ಟವನ್ನು ಕಟ್ಟುವುದು; **ಮೂರ್ಧಾಭಿಷಕ್ತರ್**= ರಾಜರು; ಮಣಿ=ಮುತ್ತು, ರತ್ನ, ವಜ್ರ ಮುಂತಾದ ಬೆಲೆಬಾಳುವ ಹರಳುಗಳು; ಮಕುಟ=ಕಿರೀಟ; **ಮಣಿಮಕುಟಧರರ್**=ಮುತ್ತು/ರತ್ನ/ವಜ್ರದ ಹರಳುಗಳಿಂದ ಕೂಡಿದ ಕಿರೀಟವನ್ನು ತೊಟ್ಟಿರುವ ರಾಜರು; ಬಾಹಾಬಳ+ಅಗ್ರ್ಯರ್; ಬಾಹಾಬಳ= ತೋಳ್ಬಲ/ಬಾಹುಬಲ; ಅಗ್ರ=ಅತಿಶಯವಾದ/ಹೆಚ್ಚಾದ/ಅತ್ಯುತ್ತಮವಾದ; **ಬಾಹಾಬಳಾಗ್ರ್ಯರ್**=ಅತಿಶಯವಾದ ತೋಳ್ಬಲವುಳ್ಳವರು; ಕದನ=ಯುದ್ಧ/ಕಾಳೆಗ; ಪ್ರೋಚ್ಚಂಡ=ಅತಿ ಭಯಾನಕವಾದ/ಹೆಚ್ಚಾದ; ದಂಡಕ್ರಮ=ಆಯುಧಗಳನ್ನು ಪ್ರಯೋಗಿಸುವುದು; ವಿಜಿತ=ಗೆಲ್ಲಲ್ಪಟ್ಟ/ಜಯಿಸಲ್ಪಟ್ಟ; ರಿಪು=ಹಗೆ/ಶತ್ರು; **ವಿಜಿತರಿಪು**=ಹಗೆಗಳ ಮೇಲೆ ಜಯವನ್ನು ಪಡೆದವರು; ಸದನ=ಮನೆ/ನಿವಾಸ; ಸೋಮ+ಅಮೃತ+ ಆಸ್ವಾದನ; ಸೋಮ=ಒಂದು ಬಗೆಯ ಸಸ್ಯ; ಅಮೃತ= ಒಂದು ಬಗೆಯ ಪಾನೀಯ; ಸೋಮಾಮೃತ=ಸೋಮವೆಂಬ ಬಳ್ಳಿಯಿಂದ ತಯಾರಿಸಿದ ರಸ; ಇದು ದೇವಲೋಕದಲ್ಲಿ ದೇವತೆಗಳ ಪಾನೀಯವೆಂದು ಹೆಸರನ್ನು ಪಡೆದಿದೆ; ಆಸ್ವಾದನ=ಸವಿಯುವುದು; ವದನ=ಬಾಯಿ; **ರುಚಿವದನರ್**=ಬಾಯ್ ರುಚಿಯುಳ್ಳವರು; ಅಳ್ಕಾಡು=ಪೂರ್ತಿ ನಾಶವಾಗು/ ಲಯಗೊಳಿಸು;

**ಕೃಷ್ಣೆ, ಇದರೊಳ್ ಮುನ್ನಮ್ ಮೂರ್ಧಾಭಿಷಕ್ತರ್ ಮಣಿಮಕುಟಧರರ್ ಬಾಹಾಬಳಾಗ್ರ್ಯರ್... ಕದನ ಪ್ರೋಚ್ಚಂಡ ದಂಡಕ್ರಮ ವಿಜಿತರಿಪು ಕ್ಷತ್ರಿಯರ್... ವೀರಲಕ್ಷ್ಮೀ ಸದನರ್... ಸೋಮಾಮೃತಾಸ್ವಾದನ ರುಚಿವದನರ್ ಅಳ್ಕಾಡಿದರ್**= ದ್ರೌಪದಿಯೇ ಈ ನಿನ್ನ ಕೆದರಿದ ಮುಡಿಯ ಅಪಮಾನದಿಂದಾಗಿ ನಡೆದ ಕುರುಕ್ಷೇತ್ರ ಯುದ್ಧದಲ್ಲಿ ಈ ಮೊದಲು ತಲೆಗೆ ಮಂಗಳಸ್ನಾನವನ್ನು ಮಾಡಿ ಕೊಂಡು ರಾಜಪಟ್ಟಕ್ಕೇರಿದವರು, ರತ್ನ ಮುತ್ತು ವಜ್ರಗಳಿಂದ ಕಂಗೊಳಿಸುತ್ತಿದ್ದ ಕಿರೀಟಧಾರಿಗಳು, ಅತಿಶಯವಾದ ತೋಳ್ಬಲವುಳ್ಳ ಗಂಡುಗಲಿಗಳು ರಣರಂಗದಲ್ಲಿ ಭಯಾನಕವಾದ ಆಯುಧಗಳನ್ನು ಪ್ರಯೋಗಿಸಿ ಶತ್ರುಗಳನ್ನು ಸದೆಬಡಿದ ಕ್ಷತ್ರಿಯರು, ವೀರಲಕ್ಷ್ಮಿಗೆ ನೆಲೆಯಾಗಿದ್ದವರು, ದೇವತೆಗಳ ಪಾನೀಯವಾದ ಸೋಮರಸದ ಸವಿದ ಬಾಯ್ ರುಚಿಯುಳ್ಳವರು, ಇವರೆಲ್ಲರೂ ಕುರುಕ್ಷೇತ್ರ ಕಾಳೆಗದಲ್ಲಿ ಲಯವಾಗಿ ಹೋದರು; ಕೇಶ=ತಲೆಗೂದಲು; ಪಾಶ=ಕೊರಳಿಗೆ ಹಾಕುವ ನೇಣಿನ ಕುಣಿಕೆ; ಕೀನಾಶ=ಯಮ; ನೋಡ ಇದು ನಿನ್ನ **ಈ ಕೇಶಪಾಶಮ್ ಕುರುಕುಲಪತಿಗೆ ಕೀನಾಶಪಾಶಮ್ ಆಯ್ತುತ್ತೆ ಎಂದು ಪೊಗಳ್ದು**= ನೋಡುವಂತಹಳಾಗು ದ್ರೌಪದಿ ಈ ನಿನ್ನ ಬಿಚ್ಚಿದ ತಲೆಗೂದಲೆಂಬ ನೇಣಿನ ಕುಣಿಕೆಯು ಕುರುವಂಶದ ರಾಜನಾದ ದುರ್ಯೋಧನನ ಕೊರಳಿಗೆ

ಯಮಪಾಶವಾಯಿತಲ್ಲವೇ ಎಂದು ಆಕೆಯನ್ನು ಹೊಗಳಿ ಕೊಂಡಾಡುತ್ತ; ಮಾಂಗಲ್ಯ=ಮಂಗಳಕರವಾದ/ಒಳಿತನ್ನುಂಟುಮಾಡುವ;

**ಮಾಂಗಲ್ಯ ಮಾಲಾಲಂಕೃತಮ್ ಮಾಡೆ**=ದ್ರೌಪದಿಯ ಮುಡಿಯನ್ನು ಹೆಣೆದು ಕಟ್ಟಿ, ಆಕೆಯ ಮುಡಿಯನ್ನು ಮಂಗಳಕರವಾದ ಹೂಮಾಲೆಯಿಂದ ಸಿಂಗರಿಸಲು; ಸ್ಮರ=ಕಾಮದೇವ/ಮನ್ಮಥ; ಸಂಜೀವನೆ=ಚೈತನ್ಯವನ್ನುಂಟುಮಾಡುವವಳು/ ಉದ್ದೀಪನಗೊಳಿಸುವವಳು; **ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳ್**=ಕಾಮದ ಒಳಮಿಡಿತಗಳನ್ನು ಉದ್ದೀಪನಗೊಳಿಸುವಂತಿರುವ ದ್ರೌಪದಿಯು ಹೂವನಿಂದ ಸಿಂಗಾರಗೊಂಡಳು; ನೆಗಳ್=ಮೂಡು/ಉಂಟಾಗು/ಮಯ್ ತಳೆ; ಪರಿಜ= ರೂಪ; ವಿಭ್ರಮ=ಅಂದ/ಲಾವಣ್ಯ; ಬೆಡಂಗು=ಒಯ್ಯಾರ; ಬಿಂಕ=ಗತ್ತು; ತರಳ+ ಅಪಾಂಗ+ವಿಲಾಸಮ್; ತರಳ=ಹೊಳೆಯುವ/ಚಂಚಲವಾದ; ಅಪಾಂಗ= ಕಡೆಗಣ್ಣು; ವಿಲಾಸ=ಉಲ್ಲಾಸ; ಲಟಹ=ಸೊಗಸು; ದರಹಾಸ=ನಸು ನಗೆ/ ಮಂದಹಾಸ; ಕಂದರ್ಪ=ಕಾಮದೇವ/ಮದನ; ಚಾಳುಕ್ಯಕಂದರ್ಪ=ಸತ್ಯಾಶ್ರಯ ರಾಜನಿಗಿದ್ದ ಬಿರುದು. ಭೀಮಸೇನನನ್ನು ಗದಾಯುದ್ಧ ಕಾವ್ಯದಲ್ಲಿ ರನ್ನ ಕವಿಯು ಸತ್ಯಾಶ್ರಯ ಚಕ್ರವರ್ತಿಯ ಹೆಸರಿನೊಡನೆ ಸಮೀಕರಿಸಿದ್ದಾನೆ; ಏನ್=ಯಾವ ಬಗೆಯಲ್ಲಿ; ಮನಂಗೊಳಿಸು=ಮನಸ್ಸನ್ನು ಸೆಳೆದುಕೊಳ್ಳುವುದು;

**ನೆಗಳ್ದ ಆ ಶೃಂಗಾರಮ್... ಆ ಭಾವಮ್... ಆ ಪರಿಜ ಆ ವಿಭ್ರಮಮ್... ಆ ಬೆಡಂಗು ಆ ಸೌಂದರ್ಯಮ್... ಆ ಬಿಂಕಮ್... ಆ ತರಳಾಪಾಂಗವಿಲಾಸಮ್... ಆ ಲಟಹಮ್... ಆ ಲಾವಣ್ಯಮ್... ಆ ಪುಣ್ಯಮ್... ಆ ದರಹಾಸ ಅಮೃತಮ್... ಚಾಳುಕ್ಯಕಂದರ್ಪನನ್ ಏನ್ ಮನಂಗೊಳಿಸಿತೋ**=ಕಟ್ಟಿದ ಮುಡಿಯೊಡನೆ ಹೂ ಮಾಲೆಯಿಂದ ಅಲಂಕಾರಗೊಂಡ ದ್ರೌಪದಿಯ ಆ ಸಿಂಗಾರ, ಆ ಭಾವ, ಆ ರೂಪ, ಆ ಬೆಡಗು, ಆ ಸೌಂದರ್ಯ, ಆ ಬಿಂಕ, ಆ ಚಂಚಲವಾದ ಕಣ್ಣಂಚಿನ ನೋಟದ ಸೊಬಗು, ಆ ಸೊಗಸು, ಆ ಲಾವಣ್ಯಮ್, ಆ ಪುಣ್ಯಮ್, ಆ ನಸುನಗೆಯ ಮನೋಹರತೆಯು ಭೀಮಸೇನನನ್ನು ಯಾವ ಯಾವ ರೀತಿಗಳಲ್ಲಿ ಮನಸೆಳೆಯಿತೋ ಎಂಬುದು ಕಲ್ಪನಾತೀತವಾದುದು; ಬರಿಸ=ವರುಶ; ಅಲಸು=ದಣಿ/ಆಯಾಸಗೊಳ್ಳು/ ಜುಗುಪ್ಸೆ ಹೊಂದು; ಬನ್ನ=ಅಪಮಾನ/ಸಂಕಟ/ ಸೋಲು; ಕೂಳ್+ಉಂಡು; ಕೂಳ್= ಅನ್ನ/ಆಹಾರ; ಬರ್ದು=ಬಾಡು/ನವೆ/ ಕೊರಗು; ಅಳಲ್=ಶೋಕ/ ಕಳವಳ/ವೇದನೆ; ಪಿಂಗು=ಕಡಿಮೆಯಾಗು/ತಗ್ಗು;

**ಪನ್ನೆರಡು ಬರಿಸಮ್ ಅಲಸದೆ ಬನ್ನದ ಕೂಳುಂಡು ಬರ್ದ ಅಳಲ್ ಪಿಂಗಲೊಡಮ್**=ಹನ್ನೆರಡು ವರುಶಗಳ ಕಾಲ ದಣಿದು ಕುಸಿಯದೆ ಅಪಮಾನದ ಕೂಳನ್ನು ಉಂಡು ನವೆದ ಸಂಕಟವು ತೀರುತ್ತಿದ್ದಂತೆಯೇ; ಕಾಳಿಕೆ=ಕಿಲುಬು;

ಎಸೆ=ಕಂಗೊಳಿಸು/ಒಪ್ಪು; **ತನ್ನಿಮ್ ಕಾಳಿಕೆ ಪಿಂಗಿದ ಪೊನ್ನಂತೆ ಆ ಕಾಂತೆ ಕಣ್ಗೆ ಕರಮ್ ಎಸೆದಿರ್ದಳ್**=ತನ್ನಲ್ಲಿ ಸೇರಿಕೊಂಡಿದ್ದ ಕಿಲುಬನ್ನು ಕಳೆದುಕೊಂಡು ಶುದ್ಧವಾದ ಅಪ್ಪಟ ಚಿನ್ನದಂತೆ ಆ ದ್ರೌಪದಿಯು ಭೀಮಸೇನನ ಕಣ್ಣಿಗೆ ಸೊಗಸಾಗಿ ಕಂಗೊಳಿಸಿದಳು; ಅಂತು+ಇರ್ದ; ಜಾತವೇದ=ಬೆಂಕಿ; **ಜಾತವೇದೋಜಾತೆ**= ಯಾಗದ ಬೆಂಕಿಯ ಕುಂಡದಿಂದ ಹುಟ್ಟಿಬಂದವಳು/ದ್ರೌಪದಿ; ಈಕೆಯ ತಂದೆಯಾದ ದ್ರುಪದ ರಾಜನು ಮಾಡಿದ ಯಾಗ ಕುಂಡದಿಂದ ಈಕೆಯು ಹುಟ್ಟಿ ಬಂದಳು ಎಂಬ ದಂತ ಕತೆಯಿದೆ; ಕರತಳ=ಅಂಗಯ್; ಕಟಾಕ್ಷತ್+ಛಟ; ಕಟಾಕ್ಷ=ಕುಡಿನೋಟ/ಕಡೆಗಣ್ಣಿನ ನೋಟ; ಛಟ=ಕಾಂತಿ; ಕಟಾಕ್ಷಚ್ಛಟ=ಕಡೆಗಣ್ಣಿನ ಕಾಂತಿ/ಕಣ್ಣಂಚಿನ ನೋಟದ ಕಾಂತಿ; ಆಚ್ಛೋಟನ=ಹುಡುಕಾಟ/ಅರಸುವಿಕೆ; ಅಪಗತ=ಬಿಟ್ಟುಹೋದ/ತೊಲಗಿದ; ಸಮರ=ಯುದ್ಧ/ಕಾಳೆಗ; ಗುರುಪಾದ+ ಅಂಬುರುಹಕ್ಕೆ; ಗುರು=ಮಾರ್ಗದರ್ಶಕನಾದ ಕೃಷ್ಣ; ಅಂಬುರುಹ= ತಾವರೆ;

**ಅಂತಿರ್ದ ಜಾತವೇದೋಜಾತೆಯ ಕೋಮಲ ಕರತಳ ಸ್ಪರ್ಶನದೊಳಮ್... ಕಟಾಕ್ಷಚ್ಛಟಾ ಆಚ್ಛೋಟನದೊಳಮ್ ಅಪಗತ ಸಮರ ಪರಿಶ್ರಮನಾಗಿ ಇರಿವ ಬೆಡಂಗನ್ ಗುರುಪಾದಾಂಬುರುಹಕ್ಕೆ ಪೊಡೆವಟ್ಟು**=ಅಂತು ಮನೋಹರವಾದ ಅಂದಚೆಂದದಿಂದ ಕಂಗೊಳಿಸುತ್ತಿದ್ದ ದ್ರೌಪದಿಯ ಕೋಮಲವಾದ ಅಂಗಯ್ ಸೋಂಕುವಿಕೆಯಿಂದ, ಕಣ್ಣಂಚಿನ ಕಾಂತಿಯುತವಾದ ಮೋಹಕ ನೋಟಕ್ಕೆ ಪಾತ್ರನಾಗಿ, ಯುದ್ಧದಿಂದ ಉಂಟಾಗಿದ್ದ ಆಯಾಸವೆಲ್ಲವೂ ಪರಿಹಾರಗೊಂಡವನಾದ ಇರಿವ ಬೆಡಂಗ ಭೀಮಸೇನನು ಗುರುವಾದ ಕೃಷ್ಣನ ಪಾದಕಮಲಗಳಿಗೆ ಅಡ್ಡಬಿದ್ದು ನಮಸ್ಕರಿಸಿ; ಸುರೇಂದ್ರಸುತ=ದೇವೇಂದ್ರನ ಮಗ/ ಅರ್ಜುನ; **ಹರಿ ಕೇಳ್, ಧರ್ಮಜ ಕೇಳ್, ಸುರೇಂದ್ರಸುತ ಕೇಳ್, ಮಾದ್ರೀಸುತರ್ ಇರ್ಬರುಮ್ ಕೇಳಿಮ್**=ಕೃಷ್ಣನೇ ಕೇಳು ಧರ್ಮರಾಯ ಕೇಳು, ಅರ್ಜುನ ಕೇಳು, ಮಾದ್ರಿಯ ಮಕ್ಕಳಾದ ನಕುಲ ಸಹದೇವರೇ ನೀವಿಬ್ಬರೂ ಕೇಳಿರಿ; ಹತಿ=ಸಂಹಾರ/ಕೊಲ್ಲು; ವ್ಯಾಪಾರ=ಉದ್ಯೋಗ; ದುರ್ಧರ=ಉಗ್ರವಾದ/ ಅಪಾಯಕಾರಿಯಾದ; ದ್ರೋಹದುರ್ಧರ= ಮಹಾದ್ರೋಹಿಯಾದ; ವಿಧಿ=ಕೆಲಸ/ ನೇಮ; ಪಾಂಚಾಲಿ=ದ್ರೌಪದಿ/ಪಾಂಚಾಲ ರಾಜನ ಮಗಳು; ಕಚ+ಉತ್ತಂಸನ್+ ಅಮ್; ಕಚ=ತಲೆಗೂದಲು/ಮುಡಿ; ಕಚೋತ್ತಂಸನಮ್=ಬಿಚ್ಚಿದ್ದ ಮುಡಿಯನ್ನು ಮತ್ತೆ ಕಟ್ಟುವ ಕೆಲಸ; ಊರು=ತೊಡೆ; ತಾಟಿಸು=ಹೊಡೆ/ಬಡಿ;

**ಕೌರವಹತಿ ವ್ಯಾಪಾರದೊಳ್ ದ್ರೋಹದುರ್ಧರ ದುಶ್ಶಾಸನ ರಕ್ತಪಾನ ವಿಧಿ ಪಾಂಚಾಲೀ ಕಚೋತ್ತಂಸನಮ್... ಕುರುರಾಜ ಊರು ಕಿರೀಟಭಂಗಮ್... ಇನಿತುಮ್ ಭೀಮಪ್ರತಿಜ್ಞಾಕ್ಷರಮ್ ಇಂತು ಎಯ್ದುದುದಲ್ತೆ ಎಂದು... ಭೇರಿಯಮ್**

**ತಾಟಿಸಿದಂತೆ ಗಂಭೀರಧ್ವನಿಯಿಮ್ ಗರ್ಜಿಸೆ**=ದುರ್ಯೋಧನನನ್ನು ಹೊಡೆದು ಉರುಳಿಸಿದ ಕಾರ್ಯ, ಕುರುಕ್ಷೇತ್ರದ ಕಾಳೆಗದ ಕಣದಲ್ಲಿ ಮಹಾದ್ರೋಹಿಯಾದ ದುಶ್ಶಾಸನನ ನೆತ್ತರನ್ನು ಹೀರಿದ ಕೆಲಸ, ಪಾಂಚಾಲಿಯ ಬಿಚ್ಚಿದ ಮುಡಿಯನ್ನು ಮತ್ತೆ ಕಟ್ಟಿದ ಕೆಲಸ, ದುರ್ಯೋಧನನ ತೊಡೆಗಳನ್ನು ಮುರಿದು ಕಿರೀಟವನ್ನು ಒದ್ದು ನೆಲದ ದೂಳಿನಲ್ಲಿ ಹೊರಳಾಡುವಂತೆ ಮಾಡಿದ ಕೆಲಸ, ಇವೆಲ್ಲವೂ ಕಲಿ ಭೀಮನಾಡಿದ್ದ ಪ್ರತಿಜ್ಞೆಯ ಮಾತುಗಳು ಈ ರೀತಿ ಈಡೇರಿದವಲ್ಲವೇ ಎಂದು ನಗಾರಿಯನ್ನು ಬಡಿದಾಗ ಹೊರಹೊಮ್ಮುವ ಮಹಾನಾದದಂತೆ ಗಂಭೀರವಾದ ದನಿಯಿಂದ ಗರ್ಜಿಸಿ ನುಡಿಯಲು; ದೋರ್ದಂಡ=ದಂಡದಂತೆ ಉದ್ದವಾದ ತೋಳು; ತೀರ್ಥಜಲ=ದೇಗುಲಗಳ ಬಳಿ ಹರಿಯುವ ನದಿಗಳಿಂದ ಮತ್ತು ಸರೋವರಗಳಿಂದ ತಂದಿರುವ ನೀರು. ಈ ನೀರನ್ನು ಪವಿತ್ರವಾದುದೆಂದು ಜನಸಮುದಾಯ ನಂಬಿದೆ; ಕರ್ಚಿ=ತೊಳೆದು;

**ಹರಿಯುಮ್ ಧರ್ಮಜನುಮ್ ಸುರೇಂದ್ರಸುತನುಮ್ ಮಾದ್ರೀಜರುಮ್ ಕೃಷ್ಣೆಯುಮ್ ಪರಮಾನಂದದೆ ಭೀಮನಾ ಆ ದೋರ್ದಂಡಮಮ್ ತೀರ್ಥಜಲದಿಮ್ ಕರ್ಚಿ**=ಕೃಷ್ಣ, ಧರ್ಮರಾಯ, ಅರ್ಜುನ, ನಕುಲ ,ಸಹದೇವ ಮತ್ತು ದ್ರೌಪದಿ ಜತೆಗೂಡಿ ಅತಿಹೆಚ್ಚಿನ ಆನಂದದಿಂದ ಭೀಮಸೇನನ ಉದ್ದನೆಯ ಎರಡು ತೋಳುಗಳನ್ನು ತೀರ್ಥಜಲದಿಂದ ತೊಳೆದು; ಕಸ್ತೂರಿ=ಒಂದು ಬಗೆಯ ಪರಿಮಳ ದ್ರವ್ಯ; ಕಸ್ತೂರಿ ಎಂಬ ಪ್ರಾಣಿಯ ಹೊಕ್ಕುಳಿನಲ್ಲಿ ದೊರೆಯುವ ವಸ್ತು; ಚಂದನ=ಶ್ರೀಗಂಧದ ಕೊರಡನ್ನು ನೀರಿನಲ್ಲಿ ತೇದು ಸಿದ್ಧಪಡಿಸಿದ ದ್ರವ್ಯ; ಅಗರು=ಒಂದು ಬಗೆಯ ಪರಿಮಳ ದ್ರವ್ಯ; ಕಾಶ್ಮೀರಜ=ಕುಂಕುಮ ಕೇಸರಿ; ಪಂಕ=ದೇಹಕ್ಕೆ ಬಳಿದುಕೊಳ್ಳಲೆಂದು ಕಸ್ತೂರಿ–ಸಿರಿಗಂಧ–ಅಗರು–ಕುಂಕುಮ ಕೇಸರಿ ಮುಂತಾದುವೆಲ್ಲವನ್ನೂ ಜತೆಗೂಡಿಸಿ ಅರೆದು ತಯಾರಿಸಿದ ದ್ರವ್ಯ; ತೊಡೆ=ಸವರು/ಲೇಪಿಸು/ಹಚ್ಚು/ಬಳಿ; **ಕಸ್ತೂರಿಕಾ ಚಂದನಾ ಅಗರು ಕಾಶ್ಮೀರಜ ಪಂಕದಿಮ್ ತೊಡೆದು**=ಕಸ್ತೂರಿ–ಚಂದನ–ಅಗರು–ಕುಂಕುಮ ಕೇಸರಿಗಳೆಲ್ಲವನ್ನೂ ಜತೆಗೂಡಿಸಿ ಅರೆದು ಸಿದ್ಧಪಡಿಸಿದ ಪರಿಮಳ ದ್ರವ್ಯವನ್ನು ಭೀಮಸೇನನ ನಿಡಿದಾದ ಎರಡು ತೋಳುಗಳಿಗೂ ಬಳಿದು; ಕೇಯೂರ+ಆದಿಯಮ್; ಕೇಯೂರ= ತೋಳಬಂದಿ/ಕಡಗ; ಭೂಷಣ+ಉತ್ಕರಮ್+ ಅಮ್; ಭೂಷಣ=ಒಡವೆ/ ಆಭರಣ; ಉತ್ಕರ=ಸಮೂಹ/ರಾಶಿ; ನೇರ್ಪು=ಅಂದ/ಸೊಗಸು;

**ಕೇಯೂರಾದಿಯಮ್ ಭೂಷಣೋತ್ಕರಮಮ್ ನೇರ್ಪಡೆ ಕಟ್ಟಿ ಪೂಜಿಸಿದರ್**= ಭೀಮಸೇನನ ಎರಡು ತೋಳುಗಳಿಗೆ ತೋಳಬಂದಿ, ಕಡಗ ಮುಂತಾದ ಒಡವೆಗಳನ್ನು ಸೊಗಸಾಗಿ ಕಾಣುವಂತೆ ತೊಡಿಸಿ, ತೋಳುಗಳಿಗೆ ಪೂಜೆಯನ್ನು

ಮಾಡಿದರು; ಪ್ರಸ್ತಾವ=ಸಮಯ/ಸನ್ನಿವೇಶ/ವೇಳೆ; **ಆ ಪ್ರಸ್ತಾವದೊಳ್ ಸಾಹಸಭೀಮನ್ ಗದಾದಂಡಮಮ್ ಉತ್ಸಾಹದಿಮ್ ತಾನೆ ಪೂಜಿಸಿದನ್**=ಅದೇ ಸನ್ನಿವೇಶದಲ್ಲಿ ಸಾಹಸ ಭೀಮನು ತನ್ನ ಗದಾದಂಡವನ್ನು ಉತ್ಸಾಹದಿಂದ ತಾನೇ ಪೂಜಿಸಿದನು; **ಅಂತು ಭುಜಾದಂಡಮುಮನ್ ಗದಾದಂಡಮುಮನ್ ಪೂಜಿಸಿ**=ಆ ರೀತಿ ಭೀಮಸೇನನ ತೋಳುಗಳೆಂಬ ದಂಡಕ್ಕೆ ಮತ್ತು ಗದಾದಂಡಕ್ಕೆ ಪೂಜೆಯನ್ನು ಸಲ್ಲಿಸಿದ ನಂತರ; ಆತೋದ್ಯ+ರವ+ಅಮ್; ಆತೋದ್ಯ=ವಾದ್ಯ; ರವ=ಶಬ್ದ/ದನಿ; ಪೊದಳ್= ಹೊರಹೊಮ್ಮು; **ವಿವಿಧ ಆತೋದ್ಯರವಮ್ ಪೊದಳ್ದು**=ನಗಾರಿ, ತಮಟೆ, ಡಮರುಗ ಮುಂತಾದ ಬಗೆಬಗೆಯ ವಾದ್ಯಗಳಿಂದ ಮಂಗಳಕರವಾದ ದನಿಯು ಹೊರಹೊಮ್ಮುತ್ತ; ದಿಕ್ಚಕ್ರ=ಭೂಮಂಡಲದ ದಿಕ್ಕುಗಳು; ಪೊಣ್ಮು=ಹಬ್ಬು/ವ್ಯಾಪಿಸು;

**ಅಖಿಳ ದಿಕ್ ಚಕ್ರಂಬರಮ್ ಕೂಡೆ ಪೊಣ್ಮುವಿನಮ್**= ಭೂಮಂಡಲದ ಎಲ್ಲಾ ದಿಕ್ಕುಗಳವರೆಗೂ ವಾದ್ಯಗಳ ದನಿಯು ಹಬ್ಬುತ್ತಿರಲು; ಕರ್ಣ+ಅಮೃತ+ಸ್ಯಂದಿ; ಕರ್ಣ=ಕಿವಿ; ಕರ್ಣಾಮೃತ=ಕೇಳುವುದಕ್ಕೆ ಇಂಪಾದುದು/ಮನೋಹರವಾದುದು; ಸ್ಯಂದಿ=ಒಸರುವ/ಕರಗಿ ಹರಿಯುವ; ಉಣ್ಮು=ಹೊರಸೂಸು; **ಕರ್ಣಾಮೃತಸ್ಯಂದಿ ಮಂಗಳಗೀತ ಮಂಗಳರವಮ್ ಉಣ್ಮುವಿನಮ್**=ವಾದ್ಯಗಳಿಂದ ಹೊರ ಹೊಮ್ಮುತ್ತಿರುವ ಇಂಪಾದ ನಾದವು ಕಿವಿಗಳಿಗೆ ಮನೋಹರವಾಗಿ ಕೇಳಿ ಬರುತ್ತಿರಲು; ನಿನಾದ=ಶಬ್ದ/ದನಿ; ದೇವನಿನಾದ=ಗಗನದಲ್ಲಿ ದೇವತೆಗಳು ದನಿ ಮಾಡುತ್ತಿರಲು;

**ದೇವನಿನಾದಮ್ ಉಣ್ಮುವಿನಮ್**=ಗಗನದಿಂದ ದೇವತೆಗಳ ಜಯಕಾರವು ಹೊರಹೊಮ್ಮುತ್ತಿರಲು; ಉತ್ಸವ=ಮೆರವಣಿಗೆ/ಸಡಗರ/ಸಂಭ್ರಮ; ಸ್ವನ=ದನಿ/ಶಬ್ದ; ರಮ್ಯ=ಚೆಲುವು/ಸುಂದರ; ಚಾಳುಕ್ಯಕಂಠೀರವನ್=ಸತ್ಯಾಶ್ರಯ ಚಕ್ರವರ್ತಿಗೆ ಇದ್ದ ಬಿರುದು/ಭೀಮಸೇನ; ತತ್=ಆ; ಶಿಬಿರ=ಸೇನೆಯು ತಾತ್ಕಾಲಿಕವಾಗಿ ನೆಲೆಸಿರುವ ತಂಗುದಾಣ; ಕುರುಕ್ಷೇತ್ರ ಯುದ್ಧ ನಡೆಯುವಾಗ ಪಾಂಡವರು ಹಾಕಿದ್ದ ಸೇನಾಶಿಬಿರ; **ಉತ್ಸವಬದ್ಧ ಸ್ವನರಮ್ಯ ಚಾಳುಕ್ಯಕಂಠೀರವನ್ ಅತ್ಯುತ್ಸಾಹದಿಮ್ ತತ್ ಶಿಬಿರಮಮ್ ಪೊಕ್ಕನ್**=ಸಡಗರದಿಂದ ಕೂಡಿ ವಾದ್ಯಗಳ ನಾದ ಮತ್ತು ಜಯಕಾರದ ದನಿಗಳಿಂದ ರಮಣೀಯನಾಗಿ ಕಂಗೊಳಿಸುತ್ತಿರುವ ಭೀಮಸೇನನು ಅತಿಯಾದ ಉತ್ಸಾಹದಿಂದ ತನ್ನ ಸೇನಾಶಿಬಿರವನ್ನು ಹೊಕ್ಕನು.

❖

## ನೋಟ–೨೬

# ಲಕ್ಷ್ಮಿಯನ್ನು ಅಡ್ಡಗಟ್ಟಿ ಎಳೆತಂದ ಅಶ್ವತ್ಥಾಮ

ಅನ್ನೆಗಮ್=ಅಷ್ಟರಲ್ಲಿ/ಆ ಸನ್ನಿವೇಶದಲ್ಲಿ; ಚಕ್ರಿ=ಕೃಷ್ಣ; ಅಸಮ=ಎಣೆಯಿಲ್ಲದ; ಉದ್ದಾಮನ್+ಅಪ್ಪ; ಉದ್ದಾಮನ್=ಉತ್ತಮನಾದ; **ಅನ್ನೆಗಮ್ ಚಕ್ರಿ ಅಸಮ ಸಾಹಸ ಉದ್ದಾಮನಪ್ಪ ಅಶ್ವತ್ಥಾಮನ ಬರವನ್ ಅರಿದು**=ಭೀಮನು ತನ್ನ ಪ್ರತಿಜ್ಞೆಗಳನ್ನು ಪೂರೈಸಿಕೊಂಡು, ತನ್ನ ಸೇನಾ ಶಿಬಿರವನ್ನು ಹೊಕ್ಕಾಗ, ಕೃಷ್ಣನು ಸರಿಸಾಟಿಯಿಲ್ಲದ ಪರಾಕ್ರಮಿಯಾದ ಅಶ್ವತ್ಥಾಮನು ಕುರುಕ್ಷೇತ್ರ ರಣರಂಗದ ವೈಶಂಪಾಯನ ಸರೋವರದ ದಂಡೆಯಲ್ಲಿ ತೊಡೆಯುಡಿದು ಬಿದ್ದಿರುವ ದುರ್ಯೋಧನನ ಬಳಿಗೆ ಬರುತ್ತಿದ್ದಾನೆ ಎಂಬ ಸುದ್ದಿಯನ್ನು ತಿಳಿದು; ಅನಾಗತ= ಮುಂದೆ ಬರಲಿರುವ/ಉಂಟಾಗಲಿರುವ; ಬಾಧೆ=ಆಪತ್ತು/ಅಪಾಯ/ಕೇಡು; ಪರಿಚ್ಛೇದ=ಕತ್ತರಿಸುವುದು/ತುಂಡುಮಾಡುವುದು; **ಅನಾಗತಬಾಧಾ ಪರಿಚ್ಛೇದಮಮ್ ಮಾಡಲೆಂದು**=ಅಶ್ವತ್ತಾಮನಿಂದ ಪಾಂಡವರಿಗೆ ಉಂಟಾಗಲಿರುವ ಕೇಡನ್ನು ತಡೆಗಟ್ಟಲೆಂದು; ಪಾಂಡವ+ಸೂನುಗಳ್+ಅಪ್ಪ; ಸೂನು=ಮಗ;ಅಪ್ಪ=ಆಗಿರುವ; ಪಂಚ ಪಾಂಡವರು=ದ್ರೌಪದಿಯ ಹೊಟ್ಟೆಯಿಂದ ಅಯ್ದು ಮಂದಿ ಪಾಂಡವರಿಗೆ ಹುಟ್ಟಿದ ಅಯ್ದು ಮಂದಿ ಮಕ್ಕಳು; ಶ್ರುತ–ಸೋಮಕ–ಪ್ರತಿವಿಂಧ್ಯ–ಶ್ರುತಕೀರ್ತಿ–ಶತಾನೀಕ ಎಂಬ ಹೆಸರಿನ ಅಯ್ದು ಮಂದಿ ಮಕ್ಕಳು; ಬೀಡು=ಸೇನಾ ಶಿಬಿರ; ಕಾಪು+ಪೇಳ್ದು; ಕಾಪು=ಕಾವಲು;

**ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸರುವಮ್ ಶ್ರುತ ಸೋಮಕ ಪ್ರಮುಖರಪ್ಪ ಪಾಂಡವಸೂನುಗಳಪ್ಪ ಪಂಚ ಪಾಂಡವರುಮಮ್**

**ಬೀಡಿಂಗೆ ಕಾಪುವೇಳ್ದು**=ಪಾಂಡವರ ಕಡೆಯ ವೀರರಾದ ಧೃಷ್ಟದ್ಯುಮ್ನ–ಶಿಖಂಡಿ–ಚೇಕಿತಾನ–ಯುಧಾಮನ್ಯು ಮತ್ತು ಉತ್ತಮೌಜಸರನ್ನು ಮತ್ತು ಪಾಂಡವರ ಮಕ್ಕಳಾದ ಶ್ರುತ–ಸೋಮಕ–ಪ್ರತಿವಿಂದ್ಯ–ಶ್ರುತಕೀರ್ತಿ–ಶತಾನೀಕರನ್ನು ಒಳಗೊಂಡ ಪ್ರಮುಖ ವ್ಯಕ್ತಿಗಳನ್ನು ಹಸ್ತಿನಾಪುರದ ಸೇನಾ ಶಿಬಿರಕ್ಕೆ ಕಾವಲಿರುವಂತೆ ಹೇಳಿ; ಹಸ್ತಿ+ಅಶ್ವ+ರಥ+ಪದಾತಿ+ಬಲಮ್; ಹಸ್ತಿ=ಆನೆ; ಅಶ್ವ=ಕುದುರೆ; ಪದಾತಿ=ನೆಲದ ಮೇಲೆ ನಿಂತು ಯುದ್ಧ ಮಾಡುವ ಕಾದಾಳುಗಳು; **ಹಸ್ತ್ಯಶ್ವರಥಪದಾತಿಬಲಮ್ ಬೆರಸು ಹಸ್ತಿನಾಪುರಕ್ಕೆ ಕಳಿಪಿ**=ಕುರುಕ್ಷೇತ್ರ ರಣರಂಗದಲ್ಲಿ ಅಳಿದುಳಿದಿದ್ದ ಆನೆ–ಕುದುರೆ–ತೇರು–ಕಾಲ್ದಳದ ಸೇನೆಯನ್ನು ಹಸ್ತಿನಾಪುರಕ್ಕೆ ಕಳುಹಿಸಿ; ನೀಳಾಚರ=ನೀಲಗಿರಿ ಪರ್ವತ; ನೀಲಾಂಗ=ಕೃಷ್ಣ; **ಪಾಂಡವರ್ ಅಯ್ವರುಮನ್ ಒಡಗೊಂಡು ನೀಳಾಚಲಕ್ಕೆ ನೀಲಾಂಗನ್ ಪೋದನ್**=ಕೃಷ್ಣನು ಅಯ್ದು ಮಂದಿ ಪಾಂಡವರಾದ ಧರ್ಮರಾಯ–ಭೀಮಸೇನ–ಅರ್ಜುನ–ನಕುಲ–ಸಹದೇವರನ್ನು ಜತೆಯಲ್ಲಿ ಕರೆದುಕೊಂಡು ನೀಲಗಿರಿ ಪರ್ವತ ಪ್ರಾಂತ್ಯಕ್ಕೆ ಹೋದನು;

**ಅನ್ನೆಗಮ್ ಇತ್ತ ಗಾಂಗೇಯನ್ ಅರಿಪೆ ಕೌರವೇಶ್ವರನ್ ಇರ್ದ ಎಡೆಯಮ್ ಅಶ್ವತ್ಥಾಮನ್ ಅರಿದು ಬರ್ಪಾಗಳ್**=ಅಷ್ಟರಲ್ಲಿ ಈ ಕಡೆ ಅಶ್ವತ್ಥಾಮನು ಭೀಷ್ಮನಿಂದ ದುರ್ಯೋಧನನು ವೈಶಂಪಾಯನ ಸರೋವರದ ಬಳಿಗೆ ಹೋದನು ಎಂಬ ಸುದ್ದಿಯನ್ನು ಕೇಳಿ ತಿಳಿದುಕೊಂಡು, ವೈಶಂಪಾಯನ ಸರೋವರದ ಕಡೆಗೆ ಬರುತ್ತಿರುವಾಗ; ಕನತ್+ಕನಕ; ಕನತ್=ಹೊಳೆಯುವ; ಕನಕ=ಚಿನ್ನ; ತಾಮರ=ತಾವರೆಯ ಹೂವು; ಕನತ್ಕನಕ ತಾಮರ=ಕೆಂದಾವರೆ; ಧವಳ=ಬಿಳಿಯ ಬಣ್ಣ; ಚಾಮರ=ಚಮರವೆಂಬ ಪ್ರಾಣಿಯ ಬಾಲದ ಕೂದಲುಗಳಿಂದ ಮಾಡಿದ ಬೀಸಣಿಗೆ; **ಕಯ್ಗಳೊಳ್ ಕನತ್ಕನಕ ತಾಮರಮ್ ಧವಳ ಚಾಮರಮ್**=ಒಂದು ಕಯ್ಯಲ್ಲಿ ಕೆಂದಾವರೆಯ ಹೂವನ್ನು ಮತ್ತೊಂದು ಕಯ್ಯಲ್ಲಿ ಬಿಳಿಯ ಚಾಮರವನ್ನು ಹಿಡಿದುಕೊಂಡಿರುವ; ಮಾಸು=ಕೊಳೆಯಾದ/ ಮಲಿನವಾದ; ತಾರು=ಒಣಗು/ ಬಾಡು/ಸೊರಗು; ಕುರುಳ್=ಮುಂಗೂದಲು/ಕೂದಲು; **ಮಾಸಿ ತಾರಿದ ಕುರುಳ್ಗಳುಮ್**=ಕೊಳೆಯಾಗಿ ಬಾಡಿ ಕೆದರಿದ ತಲೆಗೂದಲಿನಿಂದಿರುವ; ಬಿನ್ನನೆ+ಇರ್ದ; ಬಿನ್ನನೆ=ಚಿಂತೆಯಿಂದ ಕೂಡಿ/ಕೊರಗಿನಿಂದ;

**ಮನಮ್ ಚಲಿಸೆ ತನ್ನ ಬಿನ್ನನಿರ್ದ ಮೊಗದಿಮ್**=ಮನಸ್ಸು ಚಂಚಲ ಗೊಂಡಿರಲು; ಚಿಂತೆಯಿಂದ ಕೂಡಿ ಕಳಾಹೀನವಾಗಿದ್ದ ಮೊಗದಿಂದ; ವಿಲಾಸ= ಉಲ್ಲಾಸ/ಸೊಬಗು/ಅಂದ; ತವಿಲ್=ಕುಗ್ಗು/ಕುಂದು; **ವಿಲಾಸಮುಮ್ ತವಿಲ್ದಿರೆ**= ಉಲ್ಲಾಸವು ಕುಂದಿರುವ; **ಕಮಳಾಕ್ಷಿಯನ್ ಲಕ್ಷ್ಮಿಯನ್**=ತಾವರೆಗಣ್ಣಿನವಳಾದ

ಲಕ್ಷ್ಮಿಯನ್ನು; ವೃಷಭ=ಎತ್ತು; ಲಕ್ಷಣ=ಗುರುತು/ ಸಂಕೇತ; ವೃಷಭಲಕ್ಷಣನ್= ಎತ್ತಿನ ಚಿತ್ರವನ್ನು ತನ್ನ ಬಾವುಟದಲ್ಲಿ ಲಾಂಛನವಾಗಿ ಉಳ್ಳವನು/ಅಶ್ವತ್ಥಾಮ; **ವೃಷಭಲಕ್ಷಣನ್ ಅಲ್ಲಿ ಮುಂದೆ ಕಂಡನ್**=ದುರ್ಯೋಧನನನ್ನು ಕಾಣಲೆಂದು ವೈಶಂಪಾಯನ ಸರೋವರದತ್ತ ಬರುತ್ತಿರುವ ಅಶ್ವತ್ಥಾಮನು ರಣರಂಗದ ನಡುವೆ ಅಲ್ಲಿ ತನ್ನ ಮುಂದೆ ಲಕ್ಷ್ಮಿ ದೇವತೆಯನ್ನು ನೋಡಿದನು; ಕುಂಭಸಂಭವ= ದ್ರೋಣಾಚಾರ್ಯ; ಅಮೃತ+ಅಬ್ಧಿ; ಅಮೃತ=ಹಾಲು; ಅಬ್ಧಿ=ಕಡಲು; ಸಂಭವೆ=ಹುಟ್ಟಿದವಳು; ಅಮೃತಾಬ್ಧಿ ಸಂಭವೆ=ಹಾಲಿನ ಕಡಲನ್ನು ದೇವತೆಗಳು ಮತ್ತು ರಕ್ಕಸರು ಕಡೆದಾಗ ಲಕ್ಷ್ಮಿಯು ಹುಟ್ಟಿದಳು ಎಂಬ ದಂತಕತೆಯು ಜನಮನದಲ್ಲಿದೆ;

**ಅಂತು ಕುಂಭಸಂಭವಸಂಭವನ್ ಅಮೃತಾಬ್ಧಿ ಸಂಭವೆಯನ್ ಕಂಡು**=ಆ ರೀತಿ ಕುರುಕ್ಷೇತ್ರ ರಣರಂಗದ ನಡುವೆ ಅಶ್ವತ್ಥಾಮನು ಲಕ್ಷ್ಮಿದೇವತೆಯನ್ನು ಕಂಡು, ಆಕೆಯನ್ನು ಪ್ರಶ್ನಿಸತೊಡಗುತ್ತಾನೆ; ಬೆಸಗೊಳ್=ಕೇಳು/ವಿಚಾರಿಸು/ಪ್ರಶ್ನಿಸು; **ನೀನಾರ್ಗೆ... ಎತ್ತಣಿಂದಮ್... ಬಂದೆ ಎಲ್ಲಿಗೆ ಪೋದಪೆ ಎಂದು ಬೆಸಗೊಳೆ**=ನೀನು ಯಾರು ಯಾವ ಕಡೆಯಿಂದ ಬಂದೆ ಎಲ್ಲಿಗೆ ಹೋಗುತ್ತಿರುವೆ ಎಂದು ವಿಚಾರಿಸಲು; ಅಮೃತ=ಹಾಲು; ಪಯೋಧಿ=ಕಡಲು/ಸಮುದ್ರ; ಮಂಥನ= ಕಡೆಯುವುದು; **ಅಮೃತಪಯೋಧಿ ಮಂಥನದೆ ಪುಟ್ಟಿದ**=ಹಾಲಿನ ಕಡಲನ್ನು ಕಡೆದಾಗ ಹುಟ್ಟಿದ; ಪದ್ಮವನ+ಅಂತರಾಳದೊಳ್; ಪದ್ಮವನ=ತಾವರೆ ಹೂಗಳ ಉದ್ಯಾನ; ಅಂತರಾಳ=ಒಳಗೆ; ರಮಿಯಿಪ=ಆನಂದಪಡುವ; **ಪದ್ಮವನಾಂತ ರಾಳದೊಳ್ ರಮಿಯಿಪ**=ತಾವರೆಯ ತೋಟದಲ್ಲಿ ಆನಂದದಿಂದಿರುವ; ಪದ್ಮನಾಭ=ವಿಷ್ಣು; ಉರ=ಎದೆ; ಪದ್ಮನಾಭನ ಉರದೊಳ್ ನೆಲಸಿರ್ಪ=ವಿಷ್ಣು ಪರಮಾತ್ಮನ ಎದೆಯಲ್ಲಿ ನೆಲೆಸಿರುವ;

**ಮಹಾನುಭಾವೆಯೆನ್ ಕಮಳೆಯೆನ್**=ಹಿರಿಮೆಯನ್ನು ಹೊಂದಿದವಳು ನಾನು ಲಕ್ಷ್ಮಿ ಎಂದು ನನ್ನ ಹೆಸರು; **ಇನ್ನೆಗಮ್ ಕುರುಮಹೀಪತಿಯೊಳ್ ನೆಲೆಸಿರ್ದೆನ್**= ಇದುವರೆಗೂ ದುರ್ಯೋಧನನ ಬಳಿಯಲ್ಲಿ ನೆಲೆಸಿದ್ದೆನು; ಪುರುಷೋತ್ತಮ= ಕೃಷ್ಣ; **ಈಗಳ್ ಉತ್ತಮ ಪುರುಷೋತ್ತಮನ್ ಬೆಸಸೆ**=ಈಗ ಉತ್ತಮ ದೇವನಾದ ಕೃಷ್ಣನು ಆಜ್ಞಾಪಿಸಲು; **ಪಾಂಡವರೊಳ್ ನೆಲಸಲ್ಕೆ ಪೋದಪೆನ್ ಎಂಬುದುಮ್**= ಪಾಂಡವರಲ್ಲಿ ನೆಲಸಲೆಂದು ಹೋಗುತ್ತಿದ್ದೇನೆ ಎಂದು ನುಡಿಯಲು; ಅವಧಾರಿಸು=ಮನಸ್ಸಿಟ್ಟು ಕೇಳು; **"ನಾರಾಯಣನ್ ಬೆಸಸೆ ಪೋದಪೆನ್"** ಎಂದ ಲಕ್ಷ್ಮಿಯ ಮಾತನ್ ದ್ರೋಣನಂದನನ್ ಅವಧಾರಿಸಿ ಮುಗುಳ್ನಗೆ ನಕ್ಕು= **"ಕೃಷ್ಣನು ಆಜ್ಞಾಪಿಸಿದ್ದರಿಂದ ಹೋಗುತ್ತಿದ್ದೇನೆ"** ಎಂದ ಲಕ್ಷ್ಮಿಯ ಮಾತನ್ನು ಅಶ್ವತ್ಥಾಮನು

ಆಲಿಸಿ ಲಕ್ಷ್ಮಿಯು ದುರ್ಯೋಧನನಿಗೆ ಎಂತಹ ಅಪಚಾರವನ್ನು ಮಾಡುತ್ತಿದ್ದಾಳೆ ಎಂಬ ಕೋಪಬೆರೆತ ತಿರಸ್ಕಾರದಿಂದ ಮುಗುಳ್ ನಕ್ಕು; ಜಡಧಿ+ಸಂಭವೆ+ ಅಪ್ಪುದರಿಮ್; ಜಡಧಿ=ಕಡಲು/ ಸಮುದ್ರ; ಸಂಭವೆ=ಹುಟ್ಟಿದವಳು; ಚಳಮತಿ= ಚಂಚಲ ಮನಸ್ಸಿನ ವ್ಯಕ್ತಿ;

**ಜಡಧಿಸಂಭವೆಯಪ್ಪುದರಿಮ್ ನೀನ್ ಚಳಮತಿಯಾದೆ**=ಹಾಲಿನ ಕಡಲನ್ನು ಕಡೆದಾಗ ಹುಟ್ಟಿದ ನೀನು, ಕಡಲಿನ ಅಲೆಗಳ ಉಬ್ಬರವಿಳಿತದಂತೆಯೇ ಚಂಚಲ ಮನದವಳಾಗಿರುವೆ; ಸರೋಜ+ಸಂಕುಲ+ರಜದ+ಇಂದೆ; ಸರೋಜ=ತಾವರೆ; ಸಂಕುಲ=ಸಮೂಹ/ಗುಂಪು; ರಜ=ಹೂವಿನ ಪರಾಗ; ಪೊರೆ=ಮೆತ್ತಿಕೊಳ್ಳು/ ಅಂಟು; ರಾಜಸ=ಕಾಮ ಮತ್ತು ಕೋಪತಾಪದ ಕೂಡಿದ ನಡೆನುಡಿ; **ಸರೋಜಸಂಕುಲರಜದಿಂದೆ ನೀನ್ ಪೊರೆದು ರಾಜಸದೊಳ್ ನೆಲೆಸಿರ್ಪೆ**= ತಾವರೆಯ ಹೂವುಗಳ ಪರಾಗದ ಕಣಗಳಿಂದ ಲೇಪಿತಳಾಗಿರುವ ನೀನು ಕಾಮ ಕ್ರೋಧದ ನಡೆನುಡಿಯ ವ್ಯಕ್ತಿಗಳಲ್ಲಿ ನೆಲೆಸಿರುವೆ; ಗೋವು+ಕಾದು; ಕಾಯ್=ಕಾಪಾಡು; ಅಳವು=ಶಕ್ತಿ/ಪರಾಕ್ರಮ; ಅಳಿದು+ಇರ್ದ; ಅಳಿ=ಕೆಡು; ಗೋವಿ=ಗೊಲ್ಲತಿ; **ಗೋವುಗಾದು ಅಳವು ಅಳಿದಿರ್ದ ಕೃಷ್ಣನೊಡನೆ ಇರ್ದುದರಿಂದಮೆ ಗೋವಿಯಾದೆ**=ದನ ಮೇಯಿಸಿ ಬಳಲಿರುವ ಕೃಷ್ಣನೊಡನೆ ಸೇರಿಕೊಂಡು ನೀನು ಗೊಲ್ಲತಿಯಾಗಿರುವೆ; ಅಗ್ಗಳ=ಹಿರಿಮೆ/ಉತ್ತಮತನ; ವಿವೇಕ=ಯಾವುದು ಸರಿ–ಯಾವುದು ತಪ್ಪು ಎಂಬ ಅರಿವು;

**ನಿನಗೆ ಅಗ್ಗಳದ ವಿವೇಕಮಿಲ್ಲ**=ನಿನ್ನಲ್ಲಿ ಉತ್ತಮವಾದ ವಿವೇಕವಿಲ್ಲ; ಪುರುಷ+ಅಂತರಮ್+ಗಳಾ; ಪುರುಷಾಂತರಮ್=ಒಬ್ಬ ಗಂಡಸಿಗೂ ಮತ್ತೊಬ್ಬ ಗಂಡಸಿಗೂ ನಡೆನುಡಿಯಲ್ಲಿರುವ ವ್ಯತ್ಯಾಸ; **ಆ ಪುರುಷಾಂತರಂಗಳಾ ಎತ್ತ ಅರಿವೆ**=ಗಂಡಸರಲ್ಲಿ ಇರುವ ಬಹುಬಗೆಯ ನಡೆನುಡಿಗಳ ಅಂತರ ನಿನಗೆ ಹೇಗೆ ತಾನೆ ತಿಳಿಯುತ್ತದೆ; ಗಂಡಸರಲ್ಲಿ ಯಾರು ಒಳ್ಳೆಯವನು/ಯಾರು ಕೆಟ್ಟವನು; ಯಾರು ಪರಾಕ್ರಮಿ–ಯಾರು ಹೇಡಿ ಎಂಬುದನ್ನು ನೀನು ಹೇಗೆ ತಾನೆ ತಿಳಿಯಬಲ್ಲೆ; ಕಲಿ=ಶೂರ/ಪರಾಕ್ರಮಿ; ಪಂದೆ=ಹೇಡಿ/ಪುಕ್ಕಲ; ಬಗೆ=ಅರಿ/ತಿಳಿ/ ಆಲೋಚಿಸು; **ಕಲಿ ಪಂದೆಯೆಂದು ಬಗೆಯದೆ**=ಗಂಡಸರ ವರ್ತನೆಯನ್ನು ಒರೆಹಚ್ಚಿನೋಡಿ ಯಾರು ಶೂರ–ಯಾರು ಹೇಡಿ ಎಂಬುದನ್ನು ತಿಳಿಯದೆ; **ಕುಲಜನ್ ಕುಲಹೀನನೆಂದು ಬಗೆಯದೆ**=ಮೇಲು ಕುಲದಲ್ಲಿ ಹುಟ್ಟಿದವನು ಯಾರು–ಕೀಳು ಕುಲದಲ್ಲಿ ಹುಟ್ಟಿದವನು ಯಾರು ಎಂದು ಗಮನಿಸದೆ; ಸಲೆ=ನಿಜವಾಗಿ/ವಾಸ್ತವವಾಗಿ;

**ತರುಣನ್ ಸಲೆ ವೃದ್ಧನೆಂದು ಬಗೆಯದೆ**=ನಿಜವಾಗಿಯೂ ವ್ಯಕ್ತಿಯೊಬ್ಬನು

ತರುಣನೋ ಇಲ್ಲವೇ ಮುಪ್ಪಿನವನೋ ಎಂದು ತಿಳಿಯದೆ; **ನೆಲಸುವೆ**= ಗಂಡಸರಲ್ಲಿರುವ ಗುಣಾವಗುಣಗಳನ್ನು, ಹುಟ್ಟಿನ ಕುಲದ ಮೇಲು ಕೀಳನ್ನು ಹಾಗೂ ವಯಸ್ಸಿನ ಅಂತರವನ್ನು ಗಮನಿಸದೆ ಸಂಪತ್ತು ಮತ್ತು ಅಧಿಕಾರ ಗದ್ದುಗೆಯ ದೇವತೆಯಾದ ನೀನು ಯಾರಲ್ಲಿ ಬೇಕಾದರೂ ನೆಲಸುತ್ತಿಯೆ; ನಿಕೃಷ್ಟ= ನೀಚವಾದುದು/ಕೀಳಾದುದು; ಎಂಬರುಮ್=ಎನ್ನುವವರು; **ನಿನ್ನಿಮ್ ನಿಕೃಷ್ಟರ್ ಎಂಬರುಮ್ ಒಳರೇ**=ನಿನಗಿಂತಲೂ ಕೀಳಾದವರು ಎನ್ನುವವರು ಯಾರಾದರೂ ಈ ಲೋಕದಲ್ಲಿದ್ದಾರೆಯೇ ಇದ್ದಾರೆಯೇ; ಇರಿ= ಹೊಡೆ/ ಚುಚ್ಚು/ ಕೊಲ್ಲು/ ಹೋರಾಡು; **ತಂದೆ ಮಕ್ಕಳನ್ ಇರಿಯಿಸುವೆ**=ಹಣ ಒಡವೆ ವಸ್ತು ಮತ್ತು ಅಧಿಕಾರ ಗದ್ದುಗೆಯ ದೇವತೆಯಾದ ನಿನ್ನನ್ನು ಪಡೆಯುವುದಕ್ಕಾಗಿ ತಂದೆ ಮಕ್ಕಳು ಪರಸ್ಪರ ಹೊಡೆದಾಡಿ ಒಬ್ಬರೊಬ್ಬರನ್ನು ಕೊಲ್ಲುವಂತೆ ಮಾಡುತ್ತೀಯೆ; **ಸೋದರರ್ಕಳಮ್ ಇರಿಯಿಸುವಯ್**=ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣ ತಮ್ಮಂದಿರು ಹೊಡೆದಾಡಿಕೊಂಡು ಸಾಯುವಂತೆ ಮಾಡುತ್ತೀಯೆ; ತಳ್ತು=ಮೇಲೆ ಬಿದ್ದು/ ಆಕ್ರಮಣ ಮಾಡಿ;

**ಗುರುಶಿಷ್ಯರನ್ ತಮ್ಮೊಳ್ ತಳ್ತು ಇರಿಯಿಸುವಯ್**=ಗುರುಶಿಷ್ಯರು ತಮ್ಮಲ್ಲಿ ತಾವೇ ಹೊಡೆದಾಡಿಕೊಂಡು ಸಾಯುವಂತೆ ಮಾಡುವೆ; ಅರ+ಕುಲಿ; ಅರ=ಧರ್ಮ; ಕುಲಿ=ಕೊಲ್ಲುವ ವ್ಯಕ್ತಿ; ಅರಗುಲಿ=ಧರ್ಮದ್ರೋಹಿ; ವಿಡಂಬನ= ಅಲ್ಲಗಳೆಯುವಿಕೆ/ತಿರಸ್ಕಾರ; ವಿಡಂಬನ ಗೆಯ್=ಮೂದಲಿಸು/ಹೀಯಾಳಿಸು; **ಅರಗುಲಿ, ನಿನ್ನಿಮ್ ನಿಕೃಷ್ಟರಾದರುಮ್ ಒಳರೇ ಎಂದು ಲಕ್ಷ್ಮಿಯನ್ ವಿಡಂಬನಮ್ ಗೆಯ್ದು**=ಧರ್ಮದ್ರೋಹಿಯೇ, ನಿನಗಿಂತಲೂ ಕೀಳಾದವರೂ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೇ ಎಂದು ಲಕ್ಷ್ಮಿಯನ್ನು ಹೀಗಳೆದು; ಮಾಣ್=ನಿಲ್ಲು/ ಸುಮ್ಮನಿರು/ಬಿಟ್ಟುಬಿಡು; **ಪೋ, ಮಾಣ**=ದುರ್ಯೋಧನನ ಬಳಿಗೆ ಮತ್ತೆ ಹಿಂತಿರುಗಿ ಹೋಗು... ಅವನನ್ನು ಬಿಟ್ಟು ಬರಬೇಡ; ಗಡ=ಕಂಡೆಯಾ/ ನೋಡಿದೆಯಾ ಹೇಗಿದೆ ಎಂದು ಅಚ್ಚರಿಯನ್ನು ವ್ಯಕ್ತಪಡಿಸುವಾಗ ಇಲ್ಲವೇ ಅಣಕ ಮಾಡುವಾಗ ಇಲ್ಲವೇ ಯಾರನ್ನಾದರೂ ಅಲ್ಲಗಳೆಯುವಾಗ ಬಳಸುವ ಉದ್ಗಾರ ಸೂಚಕ ಪದ;

**ಧರ್ಮಜನ್ ಗಡ=ಧರ್ಮರಾಯನಂತೆ ಕಂಡೆಯಾ; ಭೀಮನ್ ಗಡ**= ಭೀಮನಂತೆ ಕಂಡೆಯಾ; **ಫಲ್ಗುಣನ್ ಗಡ**=ಅರ್ಜುನನಂತೆ ಕಂಡೆಯಾ; **ಅಮಳ್ಗಳ್ ಗಡ**=ಅವಳಿಜವಳಿಗಳಾದ ನಕುಲ ಸಹದೇವರಂತೆ ಕಂಡೆಯಾ; ಆಪೋಶನ=ಊಟಕ್ಕೆ ಮೊದಲು ಮತ್ತು ಅನಂತರ ಮಂತ್ರವನ್ನು ಉಚ್ಚರಿಸುತ್ತ ಅಂಗಯ್ಯಲ್ಲಿರುವ ನೀರನ್ನು ಹೀರುವುದು; ನೆರೆ=ಸಾಕಾಗು/ಸಾಲು; **ಅವಂದಿರ್**

**ಅಶ್ವತ್ಥಾಮಂಗೆ ಸಂಗ್ರಾಮದೊಳ್ ಆಪೋಶನಗೊಳಲ್ ನೆರೆದಪರೇ**=ಅವರೆಲ್ಲಾ ಈ ಅಶ್ವತ್ಥಾಮನಾದ ನನಗೆ ರಣರಂಗದಲ್ಲಿ ಒಂದು ಗುಟುಕಿಗೆ ಸಾಕಾಗುತ್ತಾರೆಯೇ; ಎಲಗೆ=ಹೆಂಗಸನ್ನು ಕುರಿತು ಏಕವಚನದಲ್ಲಿ ಮಾತನಾಡಿಸುವಾಗ ಬಳಸುವ ಪದ; ಮುರವೈರಿ=ಕೃಷ್ಣ; ಅಳವು=ಶಕ್ತಿ/ಪರಾಕ್ರಮ; **ಎಲಗೆ, ನಿನ್ನ ಮುರವೈರಿಯ ಅಳವುಮನ್... ಎನ್ನ ಅಳವುಮನ್... ಕಾಣ್ಬೆ**=ಎಲೆ ಲಕ್ಷ್ಮಿಯೇ ನಿನಗೆ ಆಜ್ಞೆಮಾಡಿದ ಕೃಷ್ಣನ ಶಕ್ತಿಯನ್ನು ನಿನ್ನನ್ನು ತಡೆದಿರುವ ನನ್ನ ಶಕ್ತಿಯನ್ನು ನೀನೇ ನೋಡಲಿರುವೆ; ಮುನ್ನಮ್=ಈಗ; ತ್ವತ್=ನನ್ನ; ತ್ವತ್ ಪತಿ=ನನ್ನ ಒಡೆಯನಾದ ದುರ್ಯೋಧನ; ಅಗಲು=ಬಿಟ್ಟುಹೋಗು/ತೊರೆ;

**ಮುನ್ನಮ್ ತ್ವತ್ ಪತಿಯಿಂದಮ್ ಕುರುಪತಿಯಿಂದಮ್ ನಿನ್ನನ್ ಅಗಲ್ಚಲ್ಕೆ ಕಪಟಗೋಪನ್ ಪ್ರಭುವೇ**=ಈಗ ನನ್ನ ಒಡೆಯನಾದ ದುರ್ಯೋಧನನಿಂದ ನಿನ್ನನ್ನು ತೊರೆಯುವಂತೆ ಆಜ್ಞೆಯನ್ನು ಮಾಡಿರುವ ಕಪಟಿಗೊಲ್ಲನೇನು ಚಕ್ರವರ್ತಿಯೇ; **ಕುರುರಾಜನ್ ರಾಜರಾಜನ್ ಸಕಲ ವಸುಮತಿಕಾಂತನ್ ಇರ್ದಂತೆ**= ಕುರುಭೂಮಿಗೆ ಒಡೆಯನೂ ಚಕ್ರವರ್ತಿಯೂ ಸಕಲ ಭೂಮಂಡಲಕ್ಕೆ ಒಡೆಯನಾದ ದುರ್ಯೋಧನನು ಜೀವಂತವಾಗಿರುವಾಗಲೇ; ಯುದ್ಧ+ಆತುರನ್; ಆತುರ= ಬಲವಾದ ಆಸೆ; ಸಾಹಸಾಂಕ=ಹೆಸರಾಂತ ವೀರ; **ಯುದ್ಧಾತುರನ್ ಇನ್ನು ಈ ಸಾಹಸಾಂಕನ್ ಕುರುಕುಳಪತಿಯಿರ್ದಂತೆ**=ರಣರಂಗದಲ್ಲಿ ಹಗೆಯ ಎದುರು ಹೋರಾಡಬೇಕೆಂಬ ಬಲವಾದ ಆಸೆಯುಳ್ಳವನಾದ ದುರ್ಯೋಧನನು ಇನ್ನು ಈ ಹೆಸರಾಂತ ವೀರನಾದ ಕುರುಕುಲದ ಒಡೆಯನು ಬದುಕಿರುವಾಗಲೇ; ಮೆಲ್ಪಡು= ಮರುಳಾಗು/ತಿಳಿಗೇಡಿಯಾಗು; ದಾಮೋದರ=ಕೃಷ್ಣ; ಕಜ್ಜ=ಕೆಲಸ; ಮರುಳೆ= ಬುದ್ಧಿಗೇಡಿಯೇ; ತೊಡರ್=ತೊಡಗು; ಬೆಂಡಾಗು=ಹಗುರವಾಗುವುದು/ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದು ಎಂಬ ರೂಪಕದ ತಿರುಳು;

**ಮೆಳ್ಪಟ್ಟು ದಾಮೋದರನ್ ಎಂದ ಈ ಕಜ್ಜದೊಳ್ ನೀನ್ ತೊಡರ್ದು... ಮರುಳೆ, ಬೆಂಡಾಗದಿರ್**=ತಿಳಿಗೇಡಿಯಾಗಿ ಕೃಷ್ಣನು ಹೇಳಿದ ಕೆಲಸದಲ್ಲಿ ನೀನು ತೊಡಗಿಕೊಂಡು... ಬುದ್ಧಿಗೇಡಿಯೇ ನಿನ್ನ ದೇವತಾ ವ್ಯಕ್ತಿತ್ವವನ್ನು ಕಳೆದುಕೊಂಡು ಹಗುರಾಗಬೇಡ; ಚೆಚ್ಚರ=ಬೇಗನೆ; **ನೀನ್ ಚೆಚ್ಚರಮ್ ಅತ್ತ ಪೋಗು**=ನೀನು ಬೇಗನೆ ಅತ್ತ ದುರ್ಯೋಧನನ ಬಳಿಗೆ ಹೋಗು; ಪೋಪೌ=ಹೋದೆಯಾದರೆ; ಪರಿಭವ=ಅಪಮಾನ/ತಿರಸ್ಕಾರ/ಸೋಲು; **ಇನ್ನೆತ್ತ ಪೋಪೌ ಪರಿಭವಿಸಿದಪೆನ್**= ಇನ್ನು ಯಾವ ಕಡೆಗೆ ಹೋದರೂ ನಿನ್ನನ್ನು ಸದೆಬಡಿಯುತ್ತೇನೆ; ಉದ್ದಾಮ=ಅತಿ ಹೆಚ್ಚಾದ; ಕೋಪ+ಆಟೋಪ+ಬದ್ಧ; ಆಟೋಪ=ಅಬ್ಬರ/ಸೊಕ್ಕು; ಭ್ರುಕುಟಿ+ ಉಮ್; ಭ್ರುಕುಟಿ=ಹುಬ್ಬುಗಂಟು; ತರಳ=ಹೊಳೆಯುವ; ತಾಮ್ರ=ಕೆಂಪುಬಣ್ಣ;

ಲೋಚನ=ಕಣ್ಣು; **ನಿನ್ನನ್ ಇನ್ ಕಾವನ್ ಆವೊನ್ ಎಂದು ಅಶ್ವತ್ಥಾಮನ್ ಉದ್ದಾಮ ಕೋಪಾಟೋಪಬದ್ಧ ಭ್ರುಕುಟಿಯುಮ್ ತರಳತಾಮ್ರ ಲೋಚನನುಮ್ ಆಗೆ**=ನಿನ್ನನ್ನು ಇನ್ನು ಕಾಪಾಡುವವನು ಯಾರು ಎಂದು ಅಶ್ವತ್ಥಾಮನು ಅತಿಶಯವಾದ ಕೋಪೋದ್ರೇಕದಿಂದ ಕೂಡಿದವನಾಗಿ ಹುಬ್ಬುಗಂಟಿಕ್ಕಿಕೊಂಡು ಹೊಳೆಯುವ ಕೆಂಗಣ್ಣಿನಿಂದ ಲಕ್ಷ್ಮಿಯನ್ನು ನೋಡುತ್ತಿರಲು; ಲಕ್ಷ್ಮಿಯು ತನ್ನಲ್ಲಿಯೇ ಈ ರೀತಿ ಹೇಳಿಕೊಳ್ಳತೊಡಗುತ್ತಾಳೆ; ಅಸುರ+ಅರಿ; ಅಸುರ=ರಕ್ಕಸ; ಅರಿ=ಶತ್ರು; ಅಸುರಾರಿ=ಕೃಷ್ಣ;

**ಅತ್ತಲ್ ಅಸುರಾರಿ ಬೆಸಸಿದನ್**=ಆ ಕಡೆ ಕೃಷ್ಣನು ಆಜ್ಞಾಪಿಸಿದ್ದಾನೆ; ರುದ್ರಾವತರನ್=ಅಶ್ವತ್ಥಾಮ; ಮುನಿದ ರೂಪಿನ ಶಿವನನ್ನು ರುದ್ರ ಎಂದು ಕರೆಯುತ್ತಾರೆ. ಆ ರುದ್ರನ ಅನುಗ್ರಹದಿಂದ ಅಶ್ವತ್ಥಾಮನು ಹುಟ್ಟಿದ್ದಾನೆ ಎಂಬ ಪುರಾಣ ಕತೆಯಿದೆ; **ಇತ್ತಲ್ ರುದ್ರಾವತಾರನ್ ಎಳೆದು ಒಯ್ದಪನ್**=ಈ ಕಡೆ ಅಶ್ವತ್ಥಾಮನು ಪಾಂಡವರ ಬಳಿಗೆ ಹೋಗದಂತೆ ತಡೆದು ನನ್ನನ್ನು ಮತ್ತೆ ದುರ್ಯೋಧನನ ಕಡೆಗೆ ಎಳೆದುಕೊಂಡು ಹೋಗಲು ಸಿದ್ಧನಾಗಿದ್ದಾನೆ; ದರಿ=ಆಳವಾದ ಹಳ್ಳ/ಕೊಳ್ಳ; ತಳವೆಳಗು+ಆದಳ್; ತಳವೆಳಗು=ದಿಗಿಲು/ಗಾಬರಿ/ ತಬ್ಬಿಬ್ಬಾಗುವುದು; **ಇಂತು ಅತ್ತ ಪುಲಿ... ಇತ್ತ ದರಿ ಎಂದು ಅತ್ತಿತ್ತ ಅಡಿಯಿಡದೆ ಲಕ್ಷ್ಮಿ ತಳವೆಳಗಾದಳ್**=ಈ ರೀತಿ ಅತ್ತ ಹುಲಿ ಇತ್ತ ಹಳ್ಳ ಎಂದು ಅತ್ತಿತ್ತ ಹೆಜ್ಜೆಯಿಡಲಾಗದೆ ಲಕ್ಷ್ಮಿಯು ಏನು ಮಾಡಬೇಕೆಂದು ತೋಚದೆ ತಬ್ಬಿಬ್ಬಾದಳು; ಚಳತ್=ಅತ್ತಿತ್ತ ಆಡುವ/ಚಲಿಸುವ; ಅಳಿ=ದುಂಬಿ; ವಿನೀಳ=ಕಡುನೀಲಿ ಬಣ್ಣ; ಕುಟಿಲ= ಗುಂಗುರಾದ; ಕುಂತಳ= ತಲೆಗೂದಲು; ತಳ=ಹಸ್ತ/ಅಂಗಯ್/ಬುಡ; ತಳಮಾರೆ=ಬುಡಸಮೇತ; ಅಂತು ತಳವೆಳಗಾದ=ಆ ರೀತಿ ತಬ್ಬಿಬ್ಬಾಗಿರುವ;

**ಲಕ್ಷ್ಮಿಯ ಚಳತ್ ಅಳಿವಿನೀಳ ಕುಟಿಲ ಕುಂತಳಂಗಳಮ್ ತಳಮಾರೆ ತೆಗೆದು**= ಲಕ್ಷ್ಮಿಯ ಅತ್ತಿತ್ತ ಆಡುತ್ತಿರುವ ದುಂಬಿಯಂತೆ ಕಡುನೀಲಿಬಣ್ಣದ ಗುಂಗುರು ತಲೆಗೂದಲನ್ನು ಬುಡಸಮೇತವಾಗಿ ಅಂಗಯ್ ನಿಂದ ಹಿಡಿದು ಎಳೆದುಕೊಂಡು; ಘಟಚೇಟಿ=ನೀರಿನ ಕೊಡವನ್ನು ಹೊತ್ತು ತರುವ ಸೇವಕಿ; ಮಗುಳ್=ಹಿಂತಿರುಗು/ ಮರಳು; **ಕುರುಕುಲ ಕುಟುಂಬನ ಘಟಚೇಟಿಯನ್ ಕೊಂಡು ಪೋಪಂತೆ ಮಗುಳೆ ಕೊಂಡು ಪೋಗಿ**=ಕುರುಕುಲದ ಮನೆತನದಲ್ಲಿ ನೀರಿನ ಕೊಡವನ್ನು ಹೊತ್ತು ತರುವ ಸೇವಕಿಯನ್ನು ಕರೆದುಕೊಂಡು ಹೋಗುವಂತೆ ಲಕ್ಷ್ಮಿಯನ್ನು ದುರ್ಯೋಧನನ ಬಳಿಗೆ ಹಿಂತಿರುಗಿಸಲೆಂದು ಅಶ್ವತ್ಥಾಮನು ಎಳೆದುಕೊಂಡು ಹೋಗಿ;

❖

## ನೋಟ–೨೭

# ದುರ್ಯೋಧನನ ಕಟ್ಟಕಡೆಯ ಆಸೆ

ಗದಾ+ಆಘಾತದ+ಒಳ್; ಆಘಾತ=ಹೊಡೆತ/ಪೆಟ್ಟು; ಊರು=ತೊಡೆ; ಭಂಗ=ಮುರಿಯುವಿಕೆ; **ಭೀಮಸೇನನ ಗದಾಘಾತದೊಳ್ ಊರುಭಂಗಮುಮ್**=ಭೀಮಸೇನನ ಗದೆಯ ಹೊಡೆತದಿಂದ ತೊಡೆ ಮುರಿದು; ಪದ+ಆಘಾತದ+ಒಳ್; ಪದ=ಪಾದ; ಮಕುಟ=ಕಿರೀಟ; **ಪದಾಘಾತದೊಳ್ ಮಕುಟಭಂಗಮುಮ್ ಆಗಿ**=ಭೀಮಸೇನನ ಪಾದದ ಒದೆತದಿಂದ ಕಿರೀಟ ತುಂಡುತುಂಡಾಗಿ; ಸುರುಳ್=ಕೆಡೆ/ಬೀಳು; ತೆರಳ್=ಮುದುಡು/ಮುರುಟಿಕೊಳ್ಳು; **ಸುರುಳ್ದು ತೆರಳ್ದು ಸುಯೋಧನನಿರೆ**=ದುರ್ಯೋಧನನು ನೆಲದ ಮೇಲೆ ಉರುಳಿ ಮುದುಡಿಕೊಂಡು ಬಿದ್ದಿರಲು; ತೊಡೆ+ಬೇನೆಗೆ; ಬೇನೆ=ನೋವು/ಯಾತನೆ; **ಕುರುರಾಜನ್ ತೊಡೆವೇನೆಗೆ ನರಳನೆ**=ಕುರುರಾಜನು ತೊಡೆಮುರಿತದಿಂದ ಉಂಟಾಗಿರುವ ಯಾತನೆಗಾಗಿ ನರಳುತ್ತಿರುವನೇ... ಇಲ್ಲ; ಕುರು+ಆದ; ಕುರು=ಗಾಯ; ಕಂಡರ್=ಇತರರು; **ಕುರುವಾದ ತೊಡೆಯ ಬೇನೆಗೆ ಕಂಡರ್ ನರಳ್ವಂತೆ ಅರಸನ್ ನರಳದೆ ವಿರೋಧಿಯಿಂದಾದ ಮಾನಹಾನಿಗೆ ನೊಂದನ್**=ಗಾಯಗೊಂಡ ತೊಡೆಯ ಯಾತನೆಗೆ ಇತರರು ನರಳುವಂತೆ ದುರ್ಯೋಧನನು ನರಳದೆ, ಹಗೆಯಾದ ಭೀಮಸೇನನಿಂದ ಉಂಟಾದ ಮಾನಹಾನಿಗೆ ನೊಂದನು; ಅಂತು+ಇರ್ದ; ನಂದನ=ಮಗ; ಕುರುನಂದನ=ದುರ್ಯೋಧನ; ಗುರುನಂದನ=ಅಶ್ವತ್ಥಾಮ;

**ಅಂತಿರ್ದ ಕುರುನಂದನನನ್ ಗುರುನಂದನನ್ ನೋಡಿ**=ಆ ರೀತಿ

ವೈಶಂಪಾಯನ ಸರೋವರದ ತೀರದ ರಣರಂಗದಲ್ಲಿ ತೊಡೆಮುರಿದು ನೆಲದ ಮೇಲೆ ಉರುಳಿಬಿದ್ದು, ದೇಹದ ಯಾತನೆಗಿಂತ ಹೆಚ್ಚಾಗಿ ಮಾನಸಿಕವಾಗಿ ಗಾಸಿಗೊಂಡು ನರಳುತ್ತಿರುವ ದುರ್ಯೋಧನನನ್ನು ಅಶ್ವತ್ಥಾಮನು ನೋಡಿ; ಕುಳಿಕ=ವಿಷದ ಹಾವು; ಪಲ್+ಗಳ್+ಅಮ್; ಪಲ್=ಹಲ್ಲು; ಮೋದು=ಹೊಡೆ/ಅಪ್ಪಳಿಸು; **ಕುಳಿಕನ ಪಲ್ಗಳಮ್ ಮುರಿಯೆ ಮೋದಿದರ್ ಆರ್**=ವಿಷದ ಹಾವಿನ ಹಲ್ಲುಗಳು ಮುರಿದುಹೋಗುವಂತೆ ಹೊಡೆದವರು ಯಾರು; ಪಿಡಿದು+ಒತ್ತಿ; ದಾಡೆ=ಹಲ್ಲು; ಮುಳಿಯಿಸು=ಕೆರಳಿಸು/ರೊಚ್ಚಿಗೆಬ್ಬಿಸು; **ಸಿಂಹಮಮ್ ಪಿಡಿದೊತ್ತಿ ಮುಳಿಯಿಸಿ... ದಾಡೆಯಮ್ ಪಿಡಿದು ಕಿಳ್ತವರ್ ಆರ್**=ಸಿಂಹವನ್ನು ಹಿಡಿದು ಅದುಮಿಕೊಂಡು ಕೆರಳಿಸಿ, ಅದರ ಹಲ್ಲುಗಳನ್ನು ಹಿಡಿದು ಕಿತ್ತವರು ಯಾರು; ಹಸ್ತಿ=ಆನೆ; ಮದಹಸ್ತಿ=ಸೊಕ್ಕಿದ ಆನೆ; ನೆರಂಗೊಳ್=ಮರ್ಮಸ್ಥಾನಕ್ಕೆ ಪೆಟ್ಟು ಬೀಳುವಂತೆ; ಕೋಡು+ಎರಡುಮನ್; ಕೋಡು=ಕೊಂಬು/ಆನೆಯ ದಂತ; ಕುಸಿ+ಒತ್ತಿದರ್; ಕುಸಿ=ಬಾಗಿಸು/ಕುಗ್ಗು;

**ಮದಹಸ್ತಿಯಮ್ ನೆರಂಗೊಳೆ ನೆಲಕಿಕ್ಕಿ ಕೋಡೆರಡುಮನ್ ಕುಸಿಯೊತ್ತಿದರ್ ಆರ್**=ಸೊಕ್ಕಿದ ಆನೆಯನ್ನು ಮರ್ಮಸ್ಥಾನಕ್ಕೆ ಪೆಟ್ಟು ಬೀಳುವಂತೆ ಹೊಡೆದು ನೆಲದ ಮೇಲೆ ಕೆಡವಿಕೊಂಡು ಅದರ ಎರಡು ದಂತಗಳನ್ನು ಬಗ್ಗುವಂತೆ ಒತ್ತಿದವರು ಯಾರು; ಫಣಿ=ಹಾವು; ಫಣಿರಾಜ=ಹಾವುಗಳ ಒಡೆಯ ಆದಿಶೇಷ; ಕೇತನ=ಬಾವುಟ; ಫಣಿರಾಜಕೇತನ=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ರಾಜಲಾಂಛನವಾಗುಳ್ಳವನು/ದುರ್ಯೋಧನ; ಸುರ+ಅದ್ರಿ; ಸುರ=ದೇವತೆ; ಅದ್ರಿ=ಬೆಟ್ಟ/ಪರ್ವತ; ಸುರಾದ್ರಿ=ಮೇರು ಪರ್ವತ; ನಿಶ್ಚಲ=ಅಲುಗಾಡದೆ ಇರುವುದು; ನಿಬಿಡ=ದಟ್ಟವಾದುದು; ಊರು=ತೊಡೆ; ಮಂಡಲ=ದೇಹದ ಒಂದು ಅಂಗ; ಉಡಿ=ಮುರಿ/ಮುರಿದು ಹಾಕು;

**ಫಣಿರಾಜಕೇತನಾ, ಸುರಾದ್ರಿ ನಿಶ್ಚಲ ನಿಬಿಡ ಊರು ಮಂಡಲಮನ್ ಆರ್ ಉಡಿದರ್**=ಫಣಿರಾಜಕೇತನಾ, ಮೇರು ಪರ್ವತದಂತೆ ಅಚಲವಾಗಿಯೂ ದೊಡ್ಡದಾಗಿಯೂ ಇದ್ದ ನಿನ್ನ ತೊಡೆಗಳನ್ನು ಯಾರು ಮುರಿದರು; ಕಮಲ+ಆಕರ; ಆಕರ=ಹುಟ್ಟುವ ಜಾಗ; ಕಮಲಾಕರ=ಕಮಲಗಳು ಹುಟ್ಟುವ ಜಾಗ/ಸರೋವರ; ಕಲಹಂಸ=ಬೂದು ಬಣ್ಣದ ರೆಕ್ಕೆಗಳಿರುವ ಹಂಸವೆಂಬ ಹಕ್ಕಿ; ಸಮುದ್ರ+ಅಂತ; ಅಂತ=ಕೊನೆ; ಧರಿತ್ರೀ=ಭೂಮಿ; ಕಾಂತ=ಒಡೆಯ; ಫಣೀಂದ್ರ=ಆದಿಶೇಷ; ವಿಧಿವಶ=ಹಣೆ ಬರಹದ ಕಾರಣದಿಂದಾಗಿ; ಮಗುವೊಂದು ಹುಟ್ಟಿದಾಗಲೇ ಅದರ ಜೀವನದಲ್ಲಿ ಏನೇನಾಗಬೇಕು ಎಂಬುದನ್ನು ಹಣೆಯಲ್ಲಿ ಬರೆದಿರುತ್ತದೆ ಎಂಬ ನಂಬಿಕೆಯು ಜನಮನದಲ್ಲಿದೆ. ಇದನ್ನು ವಿಧಿ ಬರಹ/ಹಣೆಬರಹ ಎನ್ನುತ್ತಾರೆ; ವಿಪ್ರಲಾಪ=ಗೋಳಾಡುವುದು/ಅಳುವುದು;

**ಹಾ ಕುರುವಂಶ ಮಹಾ ಕಮಲಾಕರ ಕಲಹಂಸ... ಹಾ ಸಮುದ್ರಾಂತ ಧರಿತ್ರೀಕಾಂತ... ಹಾ ಫಣೀಂದ್ರ ಪತಾಕಾ... ವಿಧಿವಶದೆ ನಿನಗಮ್ ಈ ಪರಿಯಾಯ್ತೇ ಎಂದು ಗುರುನಂದನನ್ ವಿಪ್ರಳಾಪಮ್ ಗೆಯ್ದು**=ಅಯ್ಯೋ ಕುರುವಂಶದ ದೊಡ್ಡ ಸರೋವರದಲ್ಲಿ ಕಲಹಂಸನಂತೆ ವಿಹರಿಸುತ್ತಿದ್ದವನೇ... ಸಮುದ್ರದ ಕೊನೆಯ ವರೆಗೆ ಹಬ್ಬಿರುವ ಭೂಮಂಡಲಕ್ಕೆ ಒಡೆಯನಾದವನೇ... ಅಯ್ಯೋ... ಆದಿಶೇಷನ ಚಿತ್ರವನ್ನು ಬಾವುಟವನ್ನಾಗಿ ಉಳ್ಳ ರಾಜನೇ, ಕೆಟ್ಟ ಹಣೆಬರಹದ ಕಾರಣದಿಂದಾಗಿ ನಿನ್ನಂತಹ ಮಹಾ ವ್ಯಕ್ತಿಗೂ ಇಂತಹ ದುರಂತದ ಗತಿ ಬಂದಿತೇ ಎಂದು ಅಶ್ವತ್ಥಾಮನು ಗೋಳಾಡುತ್ತ; ಮೇಲುದ=ಮಯ್ ಮೇಲೆ ಹೊದ್ದುಕೊಳ್ಳುವ ಬಟ್ಟೆ/ಶಲ್ಯ/ಉತ್ತರೀಯ; ಸೆರಗು=ಅಂಚು/ತುದಿ; ಕೆದರಿ+ಇರ್ದ; ಕೆದರು=ಹರಡು; ಚರಣ=ಪಾದ; ರಜ=ದೂಳು; ತೊಡೆ=ಒರೆಸು; ಕಟ್ಟುಕಡೆ=ಅತಿಯಾಗಿ ಸಂಕಟಪಡು;

**ತನ್ನ ಮೇಲುದರ ಸೆರಂಗಿಂದೆ ಆತನ ತಲೆಯ ಮೇಲೆ ಕೆದರಿರ್ದ ಭೀಮಸೇನನ ಚರಣರಜಮಮ್ ತೊಡೆದು ಕಳೆದು, ಮನದೊಳ್ ಕಟ್ಟುಕಡೆದು**=ಅಶ್ವತ್ಥಾಮನು ತನ್ನ ಶಲ್ಯದ ಅಂಚಿನಿಂದ ದುರ್ಯೋಧನನ ತಲೆಯ ಮೇಲೆ ಮೆತ್ತಿಕೊಂಡಿದ್ದ ಭೀಮಸೇನನ ಕಾಲಿನ ದೂಳನ್ನು ಒರೆಸಿ ತೆಗೆದು, ಮನದಲ್ಲಿ ಅತಿಹೆಚ್ಚಿನ ಸಂಕಟದಿಂದ ಮರುಗುತ್ತ; ವಂಚಿಸು=ಮರೆಮಾಚು/ಮುಚ್ಚು/ಅಡಗಿಸು; **ಕುರುರಾಜಾ, ಎನ್ನನ್ ವಂಚಿಸಿ ಬಂದುದರಿನ್ ನಿನಗೆ ಇನಿತಾಯ್ತು ಅವಸ್ಥೆ**=ಕುರುರಾಜಾ, ನನಗೆ ತಿಳಿಸದೆ ಬಂದುದರಿಂದ ನಿನಗೆ ಈ ರೀತಿಯ ದುರಂತವುಂಟಾಯಿತು; ಪ್ರತಿಕಾರಮ್+ಅನ್; ಪ್ರತಿಕಾರ=ಸೇಡಿಗೆ ಸೇಡು/ ಮುಯ್ಯಿಗೆ ಮುಯ್ಯಿ; ಅರಿಪು=ತಿಳಿಸು/ಬಿನ್ನವಿಸು/ಅರಿಕೆ ಮಾಡಿಕೊಳ್ಳು; **ನೀನ್ ಇನ್ನುಮ್ ಪ್ರತಿಕಾರಮನ್ ಅರಿಪೆ**=ನೀನು ಇನ್ನೂ ಆ ಪಾಂಡವರ ಮೇಲೆ ಸೇಡನ್ನು ತೀರಿಸಿಕೊಳ್ಳಬೇಕೆಂದು ಹಂಬಲಿಸುತ್ತಿದ್ದು, ಅದನ್ನು ನನಗೆ ತಿಳಿಸುವೆಯಾದರೆ;

**ಎನ್ನನ್ ನೋಡು**=ನನ್ನನ್ನು ನೋಡು. ನನ್ನಿಂದ ಆ ಸೇಡನ್ನು ತೀರಿಸಿಕೊ; ಭಕ್ತಿ+ಉಮ್+ಅನ್; ಭಕ್ತಿ=ದೇವರು, ಗುರುಹಿರಿಯರು ಮತ್ತು ತಂದೆತಾಯಿಯರಲ್ಲಿ ತೋರುವ ನಂಬಿಕೆ/ವಿಶ್ವಾಸ; ಭಾರದ್ವಾಜ=ದ್ರೋಣ; ತನೂಜ=ಮಗ; ಅವಧಾರಿಸು=ಮನಸ್ಸಿಟ್ಟು ಕೇಳು; **ಎನ್ನ ಶಕ್ತಿಯನ್ ಭಕ್ತಿಯುಮನ್ ಎಂದು ನುಡಿದ ಭಾರದ್ವಾಜ ತನೂಜನ ನುಡಿಗೆ ರಾಜರಾಜನ್ ಅವಧಾರಿಸಿ**=ನನ್ನ ಶಕ್ತಿಯನ್ನು ಮತ್ತು ನಾನು ನಿನ್ನಲ್ಲಿ ಇಟ್ಟಿರುವ ವಿಶ್ವಾಸವನ್ನು ನೋಡು ಎಂದು ನುಡಿದ ಅಶ್ವತ್ಥಾಮನ ಮಾತನ್ನು ದುರ್ಯೋಧನನು ಮನಗೊಟ್ಟು ಕೇಳಿಸಿಕೊಂಡು ಈ ರೀತಿ ನುಡಿಯತೊಡಗುತ್ತಾನೆ; ಹತ=ಹೊಡೆದ/ ಗಾಯಗೊಳಿಸಿದ/ ಮುರಿದ/

ಛಿದ್ರಗೊಂಡ/ ತೊಂದರೆಗೊಳಗಾದ; ಹೃತ್=ಮನಸ್ಸು/ಹೃದಯ;

**ಹತದೇಹ... ಹತಭುಜದ್ವಯ... ಹತೋರು... ಹತಜೀವ ಹತಕಿರೀಟಮ್... ಹತಹೃತ್ ಪ್ರತೀಕಾರಮ್ ಎಂಬುದುಂಟೇ**=ಗಾಯಗೊಂಡ ದೇಹ... ಮುರಿದಿರುವ ಎರಡು ತೋಳುಗಳು... ತುಂಡಾಗಿರುವ ತೊಡೆಗಳು ಸಂಕಟದಿಂದ ಪರಿತಪಿಸುತ್ತಿರುವ ಜೀವ ಚೂರುಚೂರಾಗಿರುವ ಕಿರೀಟ... ಗಾಸಿಗೊಂಡಿರುವ ಮನಸ್ಸಿನ ನನ್ನ ಪಾಲಿಗೆ ಪ್ರತೀಕಾರ ಎನ್ನುವುದಾದರೂ ಇದೆಯೇ; **ತಾನ್ ಗತಿಯಮ್ ಸಾಧಿಸುವುದಲ್ತೆ ಪ್ರತೀಕಾರಮ್**=ಇನ್ನೇನಿದ್ದರೂ ಸತ್ತು ಸದ್ಗತಿಯನ್ನು ಪಡೆಯುವುದಲ್ಲವೇ ನಾನು ಮಾಡಬೇಕಾಗಿರುವ ಕೆಲಸ; ಅರಿ=ಶತ್ರು/ಹಗೆ; ಚರಣ=ಪಾದ; ಪಾಂಸು= ದೂಳು/ಮಣ್ಣಿನ ಹುಡಿ; ಪತ್ತು=ಅಂಟಿಕೊಂಡಿರು/ಮೆತ್ತು; ವಸ್ತ್ರ+ಅಂಚಲದ+ಇಮ್; ವಸ್ತ್ರ=ಬಟ್ಟೆ; ಅಂಚಲ=ತುದಿ/ಸೆರಗು; ತೊಡೆ=ಒರಸು; ಕಳೆ=ನಿವಾರಿಸು;

**ಗುರುನಂದನ, ಅರಿ ಚರಣ ಪಾಂಸು ಶರೀರಮಮ್ ಪತ್ತಿರೆ... ವಸ್ತ್ರಾಂಚಲದಿಮ್ ತೊಡೆದು ಕಳೆದೆ**=ಅಶ್ವತ್ಥಾಮನೇ, ಹಗೆಯಾದ ಭೀಮನ ಪಾದದ ದೂಳು ನನ್ನ ದೇಹಕ್ಕೆ ಮೆತ್ತಿಕೊಂಡಿರಲು, ಅದನ್ನು ನಿನ್ನ ಶಲ್ಯದ ಸೆರಗಿನಿಂದ ಒರೆಸಿ ಹೋಗಲಾಡಿಸಿದೆ; ಪರಿಭವ=ಸೋಲು/ಅಪಮಾನ; ಪರಮ=ಬಹಳ/ಅತಿ ಹೆಚ್ಚಿನ; ನಿರ್ವೇಗ=ವಿರಕ್ತಿ/ಯಾವದೇ ಆಸೆಗಳಿಲ್ಲದಿರುವುದು; ಪರಾಯಣನ್+ಆಗಿ; ಪರಾಯಣ=ಹೆಚ್ಚಿನ ಆಸಕ್ತಿಯುಳ್ಳವನು/ಗಮನವುಳ್ಳವನು; **ನೀನ್ ಎನ್ನ ಪರಿಭವ ಪಾಂಸುವನ್ ಅದೆಂತು ಕಳೆದಪೆಯೋ ಪೇಳ್ ಎಂದು ಪರಮನಿರ್ವೇಗ ಪರಾಯಣನಾಗಿ ನುಡಿದು**=ಹಗೆಯಿಂದ ಉಂಟಾಗಿರುವ ಅಪಮಾನ ಮತ್ತು ಸೋಲಿನ ದೂಳನ್ನು ಅಂದರೆ ಕೆಟ್ಟ ಹೆಸರನ್ನು ಅದು ಹೇಗೆ ಹೋಗಲಾಡಿಸುತ್ತೀಯೇ ಹೇಳು ಎಂದು ದುರ್ಯೋಧನನು ಬಹಳ ವಿರಕ್ತಿಯಲ್ಲಿ ಮುಳುಗಿದವನಾಗಿ ನುಡಿದು, ಮತ್ತೆ ತನ್ನ ಮನದಲ್ಲಿ ಈ ರೀತಿ ಆಲೋಚಿಸುತ್ತಾನೆ; ಹರಿ=ಕೃಷ್ಣ; ಅನುಬಲ=ಒತ್ತಾಸೆ/ಬೆಂಬಲ/ಸಹಾಯ; ಅರಿದು=ಅಸಾಧ್ಯವಾದ;

**ಹರಿಯ ಅನುಬಲದಿಮ್ ಪಾಂಡವರ್ ಗೆಲಲ್ ಅರಿಯರ್**=ಕೃಷ್ಣನ ಬೆಂಬಲವುಳ್ಳ ಪಾಂಡವರನ್ನು ಗೆಲ್ಲುವುದಕ್ಕೆ ಯಾರಿಂದಲೂ ಆಗುವುದಿಲ್ಲ; ಈಶ್ವರ+ಅಂಗನ್; **ಅಶ್ವತ್ಥಾಮನ್ ಈಶ್ವರಾಂಗನ್**=ಅಶ್ವತ್ಥಾಮನಾದರೋ ಈಶ್ವರನ ರುದ್ರಾವತಾರದ ಅಂಶವನ್ನುಳ್ಳವನು; ಈ ಬಗೆಯ ದಂತಕತೆಯೊಂದು ಅಶ್ವತ್ಥಾಮನ ಹುಟ್ಟಿನ ಹಿನ್ನೆಲೆಯಲ್ಲಿದೆ; ಅಂತರ=ವ್ಯತ್ಯಾಸ; ಪರಬಲ=ಶತ್ರುಸೇನೆ; ಅಜೇಯನ್=ಸೋಲದವನು; ಅಂತರ=ವ್ಯತ್ಯಾಸ; **ಪರಬಲಕೆ ಅಜೇಯನ್ ಎಂದು ನೃಪನ್ ಅಂತರಂಗದೊಳ್ ಅಂತರಮನ್ ಚಿಂತಿಸಿದನ್**="**ಶತ್ರುಸೇನೆಯಿಂದ**

**ರುದ್ರನ ಅಂಶವನ್ನೊಳಗೊಂಡ ಅಶ್ವತ್ಥಾಮನನ್ನು ಸೋಲಿಸಲಾಗದು"** ಎಂದು ತನ್ನ ಕಡೆಯ ಇನ್ನಿತರ ಕಾದಾಳುಗಳಿಗೂ ಮತ್ತು ಅಶ್ವತ್ಥಾಮನಿಗೂ ಶಕ್ತಿಯಲ್ಲಿರುವ ವ್ಯತ್ಯಾಸವನ್ನು ದುರ್ಯೋಧನನು ತನ್ನ ಮನದೊಳಗೆ ಚಿಂತಿಸಿದನು. ಈಗ ಮತ್ತೆ ಅಶ್ವತ್ಥಾಮನನ್ನು ಕುರಿತು ದುರ್ಯೋಧನನು ಈ ರೀತಿ ನುಡಿಯತೊಡಗುತ್ತಾನೆ;

**ಇದುವಮ್ ನೋಡುವೆನ್**=ಪಾಂಡವರ ನಾಶಕ್ಕಾಗಿ ನೀನು ಮಾಡುವ ಹೋರಾಟವನ್ನು ನೋಡಿಯೇ ಬಿಡುತ್ತೇನೆ; ಒಡಲ=ದೇಹ/ಶರೀರ; ಕೌಂತೇಯರು=ಕುಂತಿಯ ಮಕ್ಕಳು; ಪಂದಲೆ=ರಕ್ತ ಬಸಿಯುತ್ತಿರುವ ತಲೆ/ಆಗ ತಾನೇ ಕತ್ತರಿಸಿದ ತಲೆಯಿಂದ ರಕ್ತ ತೊಟ್ಟಿಕ್ಕುತ್ತಿರುವುದು; ಓವು=ಕರುಣೆ/ದಯೆ; **ಇನ್ನುಮ್ ಎನ್ನ ಒಡಲೊಳ್ ಎನ್ನ ಈ ಪ್ರಾಣಮ್ ಉಳ್ಳನ್ನಮ್ ಕೌಂತೇಯರನ್ ಓವದೆ ಇಕ್ಕಿ... ಪಂದಲೆಗಳಮ್ ತಂದು ಎನ್ನ ಮುಂದಿಕ್ಕು**=ಇನ್ನು ನನ್ನ ಒಡಲಿನಲ್ಲಿ ಜೀವ ಇರುವುದರ ಒಳಗೆ ಕುಂತಿಯ ಮಕ್ಕಳನ್ನು ಕರುಣೆಯಿಲ್ಲದೆ ಕೊಂದು, ನೆತ್ತರು ತೊಟ್ಟಿಕ್ಕುತ್ತಿರುವ ಹಸಿತಲೆಗಳನ್ನು ತಂದು ನನ್ನ ಮುಂದಿಡು; ಕೂರದ=ಹಗೆಗಳಾದ; ಮಿಗು=ಉಳಿದ/ಸೋಲಿಸು; **ಕೂರದ ದಾಯಾದರ ಮಿಕ್ಕ ಪಂದಲೆಗಳಮ್ ಕಣ್ಣಾರೆ ಕಂಡು**=ಹಗೆಗಳಾಗಿದ್ದ ದಾಯಾದಿಗಳ ನೆತ್ತರು ಸೋರುತ್ತಿರುವ ತಲೆಗಳನ್ನು ಕಣ್ಣಾರೆ ನೋಡಿ; ಚಿತ್ತ=ಮನಸ್ಸು; ತೊದಳ್+ಇಲ್ಲದೆ; ತೊದಳ್=ಶಂಕೆ/ ಸಂಶಯ; ತೊದಳಿಲ್ಲದೆ=ನಿಶ್ಚಿಂತೆಯಿಂದ; ಅಸು=ಜೀವ/ಪ್ರಾಣ/ಉಸಿರು; ಗಣ=ಗುಂಪು; ಅಸುಗಣ=ಜೀವಂತವಾದ ಶರೀರದಲ್ಲಿ ಅಯ್ದು ಬಗೆಗಳಲ್ಲಿ ಗಾಳಿಯ ಸಂಚಾರವಿರುತ್ತದೆ; ಉತ್ಕ್ರಾಂತಿ=ಬಿಟ್ಟುಹೋಗುವಿಕೆ/ಹೊರಟುಹೋಗುವಿಕೆ;

**ಎನ್ನ ಚಿತ್ತದೊಳ್ ಒಂದುಮ್ ತೊದಳಿಲ್ಲದೆ ಎನ್ನ ಅಸುಗಣಕ್ಕೆ ಉತ್ಕ್ರಾಂತಿಯಮ್ ಮಾಡುವೆನ್ ಎಂಬುದುಮ್**=ನನ್ನ ಮನದಲ್ಲಿ ಯಾವುದೇ ಒಂದು ನೋವಿಲ್ಲದೆ ನಿಶ್ಚಿಂತೆಯಿಂದ ನನ್ನ ಜೀವವನ್ನು ಬಿಡುತ್ತೇನೆ ಎಂದು ದುರ್ಯೋಧನನು ತನ್ನ ಜೀವನದ ಕಟ್ಟಕಡೆಯ ಆಸೆಯನ್ನು ಹೇಳಿಕೊಳ್ಳಲು; ಅದು+ಆವ; ಆವ=ಯಾವ; ಗಹನ=ದೊಡ್ಡದಾದ/ಅಸಾಧ್ಯವಾದ; ಪೂಣ್= ಮಾತು ಕೊಡು/ವಚನ ಕೊಡು; **ಅದಾವ ಗಹನಮ್ ಅಂತೆ ಗೆಯ್ವೆನ್ ಎಂದು ಪೂಣ್ದು**=ಅದಾವ ದೊಡ್ಡ ಸಂಗತಿ. ಒಡೆಯನಾದ ನೀನು ಹೇಳಿದಂತೆ ಮಾಡುತ್ತೇನೆ ಎಂದು ಮಾತು ಕೊಟ್ಟು; ಮಹೀಕಾಂತೆ=ಭೂದೇವಿ; ಶ್ರೀಕಾಂತೆ= ಲಕ್ಷ್ಮೀದೇವಿ/ಶ್ರೀದೇವಿ; ಕಣ್+ಕಿಡೆ; ಕಣ್ಗಿಡು=ಕಂಗೆಡು/ಕಕ್ಕಾಬಿಕ್ಕಿಯಾಗು/ ಗಾಬರಿಯಾಗು; ಜಡಿ=ಗದರಿಸು/ಬೆದರಿಸು; **ಮಹೀಕಾಂತೆಯುಮನ್ ಶ್ರೀಕಾಂತೆಯುಮನ್ ಕಣ್ಗಿಡೆ ಜಡಿಯೆ**=ಭೂದೇವಿ ಮತ್ತು ಶ್ರೀದೇವಿಯರನ್ನು ಕಂಗೆಡುವಂತೆ ಗದರಿಸಿ; ಉರಗ+ಇಂದ್ರ; ಉರಗ=ಹಾವು; ಇಂದ್ರ=ಒಡೆಯ; ಉರಗೇಂದ್ರ=ಹಾವುಗಳ ಒಡೆಯನಾದ ಆದಿಶೇಷ; ಫಣಾಮಣಿ=ಹಣೆಯಲ್ಲಿರುವ

ರತ್ನ; ನೂಪುರ=ಕಾಲಂದುಗೆ; ನೂಪುರಮಣಿ=ಕಾಲಂದುಗೆಯ ರತ್ನ; ಜಲರಾಶಿ=ಸಮುದ್ರ; ಮೇಖಲೆ=ಡಾಬು; ಕುರುಧರೆ=ಕುರುವಂಶಕ್ಕೆ ಸೇರಿದ ಭೂದೇವಿ; ಗುರುಸೂನು=ಗುರುಪುತ್ರನಾದ ಅಶ್ವತ್ಥಾಮ; ಅಳ್ಕು=ಹೆದರು;

**ಉರಗೇಂದ್ರ ಫಣಾಮಣಿ ನೂಪುರಮಣಿ... ಜಲರಾಶಿ ರತ್ನಮೇಖಲೆ ಎನಿಪ ಆ ಕುರುಧರೆ ಆ ಗುರುಸೂನುಗೆ ಅಳ್ಕಿ ನಿಜರೂಪದೆ ಬಂದು ಇರದೆ**=ಆದಿಶೇಷನ ಹಣೆಯ ರತ್ನವನ್ನೇ ತನ್ನ ಕಾಲಂದುಗೆಯ ರತ್ನದ ಒಡವೆಯಾಗಿ ಮತ್ತು ಕಡಲನ್ನೇ ರತ್ನದ ಡಾಬನ್ನಾಗಿ ತೊಟ್ಟಿರುವ ಆ ಕುರುನಾಡಿನ ಭೂದೇವಿಯು ತನ್ನ ಮುಂದೆ ಅಬ್ಬರಿಸುತ್ತಿರುವ ಅಶ್ವತ್ಥಾಮನಿಗೆ ಹೆದರಿ, ದೇವತೆಯ ರೂಪದಲ್ಲಿ ಅವನ ಮುಂದೆ ಬಂದು, ಸುಮ್ಮನೆ ನಿಲ್ಲದೆ ಆತನನ್ನು ಕೇಳುತ್ತಾಳೆ; **ಬೆಸನ್ ಏನ್ ಎಂದಳ್**=ನನ್ನಿಂದಾಗಬೇಕಾದ ಕೆಲಸವೇನು ಎಂದು ಕೇಳಿದಳು;

**ಆನ್ ಬರ್ಪಿನಮ್ ಕುರುವಂಶ ಉರ್ವೀಪತಿಗೆ ಒರ್ವಳ್ ಕೊಡೆವಿಡಿವುದು... ಮತ್ತೊರ್ವಳ್ ಚಾಮರಮನ್ ಇಕ್ಕುತಿರ್ಪುದು... ಇರ್ವರುಮ್ ಇಂತು ಇರ್ಪುದು ಎಂದನ್ ಅಶ್ವತ್ಥಾಮನ್**=ಆಗ ಅಶ್ವತ್ಥಾಮನು ಭೂದೇವಿ ಮತ್ತು ಶ್ರೀದೇವಿಗೆ ಈ ರೀತಿ ಆದೇಶಿಸುತ್ತಾನೆ. **"ನಾನು ಹಿಂತಿರುಗಿ ಬರುವ ತನಕ ಕುರುರಾಜನಾದ ದುರ್ಯೋಧನನಿಗೆ ನಿಮ್ಮಿಬ್ಬರಲ್ಲಿ ಒಬ್ಬಳು ಬೆಳ್ಗೊಡೆಯನ್ನು ಹಿಡಿದುಕೊಂಡಿರುವುದು ಮತ್ತೊಬ್ಬಳು ಚಾಮರವನ್ನು ಬೀಸುತ್ತಿರುವುದು ಇಬ್ಬರೂ ನಾನು ಹೇಳಿದಂತೆ ನಡೆದುಕೊಳ್ಳುವುದು."** ನಿಯೋಜಿಸು=ನೇಮಿಸು; ನೇಸರ್=ಸೂರ್ಯ; ಪಡು= ಪಶ್ಚಿಮ ದಿಕ್ಕು; ನಿಜಪತಿ=ತನ್ನ ಒಡೆಯನಾದ ದುರ್ಯೋಧನ;

**ಅಂತು ಅವರಮ್ ನಿಯೋಜಿಸಿ... ನೇಸರ್ ಪಡುವಿನಮ್ ಇರ್ದು... ನಿಜಪತಿಯನ್ ಬೀಳ್ಕೊಂಡು**=ಅಶ್ವತ್ಥಾಮನು ಆ ರೀತಿ ಅವರಿಬ್ಬರನ್ನು ನೇಮಿಸಿ, ಸೂರ್ಯನು ಪಶ್ಚಿಮದ ದಿಕ್ಕಿನಲ್ಲಿ ಮರೆಯಾಗುವ ತನಕ ದುರ್ಯೋಧನನ ಬಳಿಯಲ್ಲಿದ್ದು, ಅನಂತರ ದುರ್ಯೋಧನನಿಂದ ಬೀಳ್ಕೊಂಡು ಹಸ್ತಿನಾವತಿಯತ್ತ ನಡೆದನು;

❖

## ನೋಟ–೨೮

# ದುರ್ಯೋಧನನ ಸಾವು

ಅಂತು=ಆ ರೀತಿ; ಅವರಮ್=ಭೂದೇವಿ ಮತ್ತು ಶ್ರೀದೇವಿಯರನ್ನು; ನಿಯೋಜಿಸಿ=ನೇಮಿಸಿ; ಪಡು=ಪಶ್ಚಿಮ ದಿಕ್ಕು; ನಿಜ ಪತಿ=ತನ್ನ ಒಡೆಯನಾದ ದುರ್ಯೋಧನ; **ಅಂತು ಅವರಮ್ ನಿಯೋಜಿಸಿ... ನೇಸರ್ ಪಡುವಿನಮ್ ಇರ್ದು ನಿಜಪತಿಯನ್ ಬೀಳ್ಕೊಂಡು ಪಯಣಮ್ ಪೋಗಿ ಹಸ್ತಿನಪುರಮನ್ ಪೊಕ್ಕು**=ಅಶ್ವತ್ಥಾಮನು ಆ ರೀತಿ ಅವರಿಬ್ಬರನ್ನು ನೇಮಿಸಿ, ಸೂರ್ಯನು ಪಶ್ಚಿಮದ ದಿಕ್ಕಿನಲ್ಲಿ ಮರೆಯಾಗುವ ತನಕ ದುರ್ಯೋಧನನ ಬಳಿಯಲ್ಲಿದ್ದು, ಅನಂತರ ದುರ್ಯೋಧನನಿಂದ ಬೀಳ್ಕೊಂಡು ಪಯಣಿಸುತ್ತ ಹಸ್ತಿನಾವತಿಯನ್ನು ಹೊಕ್ಕು; ಅಲ್ಲಿ=ಪಾಂಡವರ ಸೇನಾಬಲ ಬೀಡುಬಿಟ್ಟಿದ್ದ ಶಿಬಿರದಲ್ಲಿ; ಹಸ್ತಿನಾವತಿಯಲ್ಲಿ ಪಾಂಡವ ಸೇನೆಯು ಬೀಡುಬಿಟ್ಟಿದ್ದ ಶಿಬಿರದ ವರ್ಣನೆಯನ್ನು ಮಾಡಲಾಗುತ್ತಿದೆ; ಕಂಜವನ=ತಾವರೆ ಹೂವಿನ ಸರೋವರ; ಲಕ್ಷ್ಮಿ=ಸಿರಿ/ಸಂಪತ್ತು; ರಂಜಿತ= ಚೆಲುವು/ಮನೋಹರ; ಲಕ್ಷ್ಮೀರಂಜಿತ=ಸಂಪತ್ತಿನಿಂದ ಕೂಡಿ ಮನೋಹರವಾದುದು;

**ಕಂಜವನದಂತೆ ಲಕ್ಷ್ಮೀರಂಜಿತಮುಮ್**=ತಾವರೆ ಹೂಗಳಿಂದ ಕಂಗೊಳಿಸುತ್ತಿರುವ ಸರೋವರದಂತೆ ಸಿರಿಸಂಪತ್ತಿನಿಂದ ಮನೋಹರ ವಾಗಿಯೂ; **ಚಿತ್ರಪತ್ರಮುಮ್**=ಬಗೆಬಗೆಯ ಬಣ್ಣದ ಎಲೆಗಳ ಚಿತ್ರಗಳಿಂದ ಕೂಡಿರುವ ತೇರು; ಚಕ್ರಾಂಕ=ಚಕ್ರವಾಕ ಎಂಬ ಹಕ್ಕಿ; ವ್ಯಂಜಿತಮುಮ್+ಅಪ್ಪ; ವ್ಯಂಜಿತ=ಗುರುತು/ಚಿಹ್ನೆ; ಬೀಡು=ಸೇನಾ ಶಿಬಿರ; **ಚಕ್ರಾಂಕ ವ್ಯಂಜಿತಮುಮಪ್ಪ ಬೀಡಮ್**=ಚಕ್ರವಾಕ ಹಕ್ಕಿಗಳ ಚಿತ್ರದ ರಾಜಲಾಂಛನವುಳ್ಳ ಪಾಂಡವರ

ಶಿಬಿರವನ್ನು; ಇರುಳ್+ಒಳ್; ಇರುಳ್=ರಾತ್ರಿ; ಮಂಜು+ಇರಿವಂತೆ; ಮಂಜು=ಹಿಮ; ಮಂಜು+ಇರಿವ+ಅಂತೆ; ಇರಿ= ನಾಶಗೊಳಿಸು/ಹೊಡೆ/ಕೊಲ್ಲು; **ಇರುಳೊಳ್ ಮಂಜಿರಿವಂತೆ ಇರಿದನ್**=ಹಗಲಿನಲ್ಲಿ ಅರಳಿದ್ದ ತಾವರೆ ಹೂವಿನ ಮೇಲೆ ರಾತ್ರಿಯಲ್ಲಿ ಮಂಜು ಸುರಿದು ಹೂವೆಲ್ಲವನ್ನೂ ನಾಶಗೊಳಿಸುವಂತೆ ಹಗಲಿನ ಗದಾಯುದ್ಧದಲ್ಲಿ ಗೆದ್ದಿದ್ದ ಪಾಂಡವ ಸೇನಾಬಲದ ಮೇಲೆ ಅಶ್ವತ್ಥಾಮನು ರಾತ್ರಿಯಲ್ಲಿ ದಾಳಿ ಮಾಡಿ ಶಿಬಿರದಲ್ಲಿದ್ದವರನ್ನು ಕಡಿದು ಕೊಚ್ಚತೊಡಗಿದನು;

**ಅಂತು ಅಶ್ವತ್ಥಾಮನ್ ಇರಿವಾಗಳ್**=ಆ ರೀತಿ ಅಶ್ವತ್ಥಾಮನು ಪಾಂಡವರ ಶಿಬಿರದಲ್ಲಿದ್ದವರ ಮೇಲೆ ಆಕ್ರಮಣ ಮಾಡಿ ಸದೆಬಡಿದು ಕೊಲ್ಲುತ್ತಿರುವಾಗ; **ಕೋರೈಸು**=ಅಟ್ಟಹಾಸ ಮಾಡು; ಮುಟ್ಟೆ+ಬಂದ+ಆಗಳ್; ಮುಟ್ಟೆವಂದಾಗಳ್= ಅತಿ ಹತ್ತಿರಕ್ಕೆ ಬಂದಾಗ; **ಪಲವು ದಿವಸಮ್ ಕಾದಿ, ಪಿರಿದುಮ್ ಪಯಣಮ್ ಬಂದು ಬಳಲ್ದು ನಿದ್ರೆ ಗೆಯ್ದವರ್ ಕೋರೈಸಿ ಮುಟ್ಟೆವಂದಾಗಳ್**=ಹದಿನೆಂಟು ದಿನಗಳ ಕಾಲ ನಡೆದಿದ್ದ ಕುರುಕ್ಷೇತ್ರ ಕಾಳೆಗದಲ್ಲಿ ಹೋರಾಡಿ, ಬಹುದೂರದ ರಣರಂಗದಿಂದ ಹಸ್ತಿನಾವತಿಗೆ ಪಯಣಿಸಿ ಬಂದ ಆಯಾಸದಿಂದ ಮಯ್ ಮರೆತು ನಿದ್ರೆ ಮಾಡುತ್ತಿದ್ದವರು, ಅಶ್ವತ್ಥಾಮನು ಅಟ್ಟಹಾಸ ಮಾಡುತ್ತ ಅತಿ ಹತ್ತಿರಕ್ಕೆ ಬಂದಾಗ; ತೊಟ್ಟನೆ=ಒಮ್ಮೆಲೆ; ಎಳ್ಚತ್ತು=ಎಚ್ಚರಗೊಂಡು; **ತೊಟ್ಟನೆ ನಿದ್ರೆಯಿಂದೆ ಎಳ್ಚತ್ತು**=ಒಮ್ಮೆಲೆ ನಿದ್ರೆಯಿಂದ ಎಚ್ಚರಗೊಂಡು; ಕಳಕಳಮ್+ಅನ್; ಕಳಕಳ=ಗದ್ದಲ/ಗಲಾಟೆ; ಪೊಸೆ= ಹೊಸೆ/ತಿಕ್ಕು/ ಉಜ್ಜು;

**ಆ ಕಳಕಳಮನ್ ಕೇಳ್ದು... ಕರತಳದಿಮ್ ಕಣ್ಣಮ್ ಪೊಸೆಯುತ್ತುಮ್ ಎಳ್ದು**= ಅರಚಾಟ ಗೋಳಾಟದ ದನಿಯನ್ನು ಕೇಳಿ, ಹಸ್ತಿನಾವತಿಯ ಪಾಂಡವರ ಶಿಬಿರದಲ್ಲಿದ್ದ ಸೈನಿಕರು ಅಂಗಯ್ ಗಳಿಂದ ತಮ್ಮ ಕಣ್ಣಗಳನ್ನು ಉಜ್ಜಿಕೊಳ್ಳುತ್ತ ಸಂಪೂರ್ಣವಾಗಿ ಎಚ್ಚರಗೊಂಡು; ಕರವಾಳ್=ಕತ್ತಿ; **ತಂತಮ್ಮ ತಲೆದೆಸೆಯೊಳ್ ಇರ್ದ ಕರವಾಳಮ್ ಕೊಂಡು ನಿಂದ ನೆಲೆಯೊಳ್**=ತಮ್ಮ ತಮ್ಮ ತಲೆಯ ಬಳಿಯಿದ್ದ ಕತ್ತಿಯನ್ನು ಹೊರಸೆಳೆದು ನಿಂದ ಜಾಗದಲ್ಲಿಯೇ;ತಳರದೆ+ಇರ್ದ; ತಳರ್= ಅಲುಗಾಡು; ತಲೆ+ಕಾಪಿನ+ ಆಳ್; ಕಾಪು=ಕಾಯುವಿಕೆ/ಪಹರೆ; ಆಳ್=ಸೈನಿಕ/ ಕಾದಾಳು; **ತಲೆಗಾಪಿನಾಳ್**=ಅಂಗರಕ್ಷಕ ಪಡೆಯ ಸೈನಿಕ; ಉಕ್ಕಡ=ಊರಿನ ಗಡೆ/ ನಗರದ ಎಲ್ಲೆ; ಉಕ್ಕಡದ ಆಳ್=ಗಡಿಯಲ್ಲಿ ಕಾವಲು ಇರುವ ಸೈನಿಕ; **ತಳರದಿರ್ದ ತಲೆಗಾಪಿನಾಳ ಉಕ್ಕಡದ ಆಳ ಮೇಲಿಕ್ಕಿ**=ಗಾಬರಿಯಿಂದ ಅತ್ತಿತ್ತ ಅಲ್ಲಾಡದೆ ನಿಂತಿದ್ದ ಪಾಂಡವರ ಯೋಧರನ್ನು ಅಶ್ವತ್ಥಾಮನು ಕೊಂದು ಅವರ ಹೆಣಗಳನ್ನು ಉಕ್ಕಡದ ಯೋಧರ ಮೇಲೆ ಎಸೆದು; ಘರವಟ್ಟಿಗೆ+ಆಳ್; ಘರವಟ/ ಗರವಟ=ಗಸ್ತು/ಪಹರೆ; ಘರವಟ್ಟಿಗೆ=ಕಾವಲು ಕಾಯುವ/ಗಸ್ತು ತಿರುಗುವ; ಘಟರವಟ್ಟಿಗೆಯ ಆಳು=ನಗರದೊಳಗೆ ಗಸ್ತು ತಿರುಗುವ ಸೈನಿಕ;

**ಉಕ್ಕಡದಾಳ ಘರವಟ್ಟಿಗೆಯಾಳ ಮೇಲಿಕ್ಕಿ**=ಉಕ್ಕಡದ ಯೋಧರ ಹೆಣಗಳನ್ನು ಗಸ್ತು ತಿರುಗುವ ಸೈನಿಕರ ಮೇಲೆ ಎಸೆದು; ಗರವಟ್ಟಿಗೆ/ಘರವಟ್ಟಿಗೆ=ಸದ್ದು/ಗದ್ದಲ; ಘರವಟ್ಟಿಗೆಯಾಗೆ=ಮಹಾಗದ್ದಲವಾಗುತ್ತಿರಲು; ಮಹಾ+ಮಸಕಮ್; ಮಸಕ= ಸಿಟ್ಟು/ಕೋಪ; ಮಸಗು=ಕೆರಳು; ಜವ=ಯಮ; ನೇರಿ/ನೇರ್=ಛ ನೇರವಾಗಿ; ಬರ್ಚಿ=ಶೂಲ; **ಮಾಮಸಕಮ್ ಮಸಗಿ ಜವಮ್ ನೇರಿ ಬರ್ಚಿದಂತೆ**= ಅತಿಯಾದ ಕೋಪದಿಂದ ಕೆರಳಿದ ಯಮನು ನೇರವಾಗಿ ಶೂಲದಿಂದ ಇರಿದಂತೆ; ನಿವಳಿವಟ್ಟಮ್+ ಅಪ್ಪಿನಮ್; ನಿವಳಿವಟ್ಟ=ಸಂಪೂರ್ಣವಾಗಿ ನಾಶಗೊಳ್ಳುವದು; ಅಕ್ಷೋಹಿಣಿ ಬಲ=೨೧,೮೭೦ ಆನೆಗಳು–೨೧,೮೭೦ ಕುದುರೆಗಳು–೨೧,೮೭೦ ತೇರುಗಳು–೧,೦೯,೩೫೦ ಕಾಲಾಳುಗಳ ಸಂಕೆಯಲ್ಲಿರುವ ಸೇನಾಬಲ; **ಪೆಂಡಿರ್ ಮಕ್ಕಳ್ ಎನ್ನದೆ ನಿವಳಿವಟ್ಟಮಪ್ಪಿನಮ್ ಒಂದು ಅಕ್ಷೋಹಿಣೀ ಬಲಮ್ ಎಲ್ಲಮಮ್ ಪೇಳ ಪೆಸರಿಲ್ಲವೆಂಬಂತೆ ಕೊಂದು**=ಅಶ್ವತ್ಥಾಮನು ಶಿಬಿರದಲ್ಲಿದ್ದ ಹೆಂಗಸರು ಮಕ್ಕಳಿಗೂ ಕರುಣೆಯನ್ನು ತೋರಿಸದೆ, ಸಂಪೂರ್ಣವಾಗಿ ಒಂದು ಅಕ್ಷೋಹಿಣಿ ಸೇನಾಬಲವೆಲ್ಲವನ್ನೂ ಹೇಳಲು ಹೆಸರಿಲ್ಲದಂತೆ ಅಂದರೆ ಒಂದು ಜೀವಿಯನ್ನು ಬಿಡದಂತೆ ಕೊಂದು; ಕಟ್ಟಿದಿರ್+ಒಳ್; ಕಟ್ಟಿದಿರು=ಎದುರಾಗಿ/ ಮುಂದುಗಡೆ; ಮುಟ್ಟಿ ಮೂದಲಿಸು=ಹೀನಾಯವಾಗಿ ತೆಗಳುವುದು/ ನಿಂದಿಸುವುದು;

**ತನಗೆ ಕಟ್ಟಿದಿರೊಳ್ ಇರ್ದ ಧೃಷ್ಟದ್ಯುಮ್ನನುಮನ್ ಮುಟ್ಟಿ ಮೂದಲಿಸಿ**= ಅಶ್ವತ್ಥಾಮನು ತನ್ನ ಎದುರಿಗೆ ಕಂಡುಬಂದ ಧೃಷ್ಟದ್ಯುಮ್ನನನ್ನು ಹೀನಾಯವಾಗಿ ತೆಗಳಿ; ಅಯ್ಯ=ಅಪ್ಪ/ತಂದೆ; ತಮ್ಮಯ್ಯ=ಅಶ್ವತ್ಥಾಮನ ತಂದೆಯಾದ ದ್ರೋಣಾಚಾರ್ಯ; ಪರಿಭವ=ಅಪಮಾನ/ಸೋಲು; ದೆಸೆ+ಬಲಿ+ಗೆಯ್ದು; ದೆಸೆ=ದಿಕ್ಕು; ಬಲಿ=ದೇವತೆಗಳನ್ನು ಇಲ್ಲವೇ ದೇವರನ್ನು ಪೂಜಿಸುವಾಗ ಹೂವು ಹಣ್ಣು ಬಟ್ಟೆ ಮುಂತಾದುವುದರ ಜತೆ ಪ್ರಾಣಿಗಳನ್ನು ಕೊಂದು ರಕ್ತ ಮಾಂಸವನ್ನು ಅರ್ಪಿಸುವುದು/ಚೆಲ್ಲುವುದು; ದೆಸೆವಲಿ=ಎಂಟು ದಿಕ್ಕಿನ ದೇವತೆಗಳಿಗೆ ಬಲಿಕೊಡುವುದು;

**ತಮ್ಮಯ್ಯನನ್ ಪರಿಭವಿಸಿದ ಪಗೆಯನ್ ಕೊಂದು ದೆಸೆವಲಿಗೆಯ್ದು**=ತನ್ನ ತಂದೆಯಾದ ದ್ರೋಣಾಚಾರ್ಯನನ್ನು ಅಪಮಾನಿಸಿ ಕೊಂದಿದ್ದ ಹಗೆಯಾದ ಧೃಷ್ಟದ್ಯುಮ್ನನನ್ನು ಕೊಂದು ಎಂಟು ದಿಕ್ಕಿನತ್ತ ಅವನ ರಕ್ತ ಮಾಂಸಗಳನ್ನು ಚೆಲ್ಲಿ; ಕುರುಕ್ಷೇತ್ರ ಯುದ್ಧರಂಗದಲ್ಲಿ ದುರ್ಯೋಧನನ ಸೇನಾಪಡೆಯಲ್ಲಿದ್ದ 'ಅಶ್ವತ್ಥಾಮ' ಎಂಬ ಹೆಸರಿನ ಆನೆಯೊಂದು ಸತ್ತಾಗ, ಕ್ರಿಷ್ಣನ ಸೂಚನೆಯಂತೆ ಧರ್ಮರಾಯನು 'ಅಶ್ವತ್ಥಾಮ ಆನೆ ಸತ್ತಿತು' ಎಂದು ಗಟ್ಟಿಯಾದ ದನಿಯಲ್ಲಿ ಕೂಗಿ ಹೇಳುತ್ತಾನೆ. ಇದನ್ನು ಕೇಳಿಸಿಕೊಂಡ ದ್ರೋಣಾಚಾರ್ಯನು ತನ್ನ ಮಗ ಅಶ್ವತ್ಥಾಮನೇ

ಸತ್ತನೆಂದು ತಪ್ಪಾಗಿ ತಿಳಿದು, ತಮ್ಮ ಕಯ್ಯಲ್ಲಿದ್ದ ಬಿಲ್ಲುಬಾಣಗಳನ್ನು ಕೆಳಗಿಟ್ಟು ಪುತ್ರಶೋಕದಿಂದ ರಥದಲ್ಲಿ ಕುಳಿತುಕೊಳ್ಳುತ್ತಾರೆ. ಅದೇ ಗಳಿಗೆಯಲ್ಲಿ ದ್ರುಪದನ ಮಗನಾದ ಧೃಷ್ಟದ್ಯುಮ್ನನು ತನ್ನ ತಂದೆಗೆ ದ್ರೋಣರಿಂದ ಆಗಿದ್ದ ಅಪಮಾನದ ಪ್ರತೀಕಾರವಾಗಿ ರಥವನ್ನೇರಿ ಬಂದು ದ್ರೋಣರ ತಲೆಯನ್ನು ಕತ್ತರಿಸಿದ್ದನು; ಪ್ರಭೃತಿಗಳ್+ಅನ್; ಪ್ರಭೃತಿಗಳು=ಮೊದಲಾದವರು;

**ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸ ಪ್ರಭೃತಿಗಳನ್ ಇಕ್ಕಿ=** ಶಿಖಂಡಿ, ಚೇಕಿತಾನ, ಯುಧಾಮನ್ಯು, ಉತ್ತಮೌಜಸ ಮೊದಲಾದ ಪಾಂಡವರ ಕಡೆಯ ವ್ಯಕ್ತಿಗಳನ್ನು ಕೊಂದು; ಶಂಕೆ+ಇಮ್; ಶಂಕೆ=ತಪ್ಪಾಗಿ ಗ್ರಹಿಸಿ; ಪಂಚಪಾಂಡವರು=ಅಯ್ದು ಮಂದಿ ಪಾಂಡವರಿಗೆ ದ್ರೌಪದಿಯ ಹೊಟ್ಟೆಯಲ್ಲಿ ಹುಟ್ಟಿದ ಅಯ್ದು ಮಂದಿ ಮಕ್ಕಳು. ಶ್ರುತಸೋಮ–ಪ್ರತಿವಿಂದ್ಯ–ಶ್ರುತಕೀರ್ತಿ–ಶತಾನೀಕ–ಶ್ರುತಸೇನ ಎಂಬ ಹೆಸರಿನವರು; **ಪಾಂಡವರ ಶಂಕೆಯಿಮ್ ಶ್ರುತಸೋಮಕ ಪ್ರಭೃತಿಗಳಪ್ಪ ಪಂಚಪಾಂಡವರ ತಲೆಗಳಮ್ ಕೊಂಡು**= ಅಶ್ವತ್ಥಾಮನು ಆ ಶಿಬಿರದಲ್ಲಿದ್ದ ಪಾಂಡವರ ಅಯ್ದು ಮಂದಿ ಗಂಡುಮಕ್ಕಳಾದ ಶ್ರುತಸೋಮ–ಪ್ರತಿವಿಂದ್ಯ–ಶ್ರುತಕೀರ್ತಿ–ಶತಾನೀಕ–ಶ್ರುತಸೇನರನ್ನು ಪಾಂಡವರೆಂದೇ ತಪ್ಪಾಗಿ ತಿಳಿದು, ಆ ಅಯ್ದು ಮಂದಿಯ ತಲೆಗಳನ್ನು ಕತ್ತರಿಸಿ ತೆಗೆದುಕೊಂಡು; ನೇಸರ್=ಸೂರ್ಯ; **ಥಳಥಳನೆ ನೇಸರ್ ಮೂಡುವಾಗಳ್ ಬಂದು**=ಬೆಳಕಿನ ಕಿರಣಗಳನ್ನು ಚೆಲ್ಲುತ್ತ ಪ್ರಕಾಶಮಾನವಾಗಿ ಸೂರ್ಯನು ಮೂಡುತ್ತಿರುವಾಗ, ಅಶ್ವತ್ಥಾಮನು ವೈಶಂಪಾಯನ ಸರೋವರದ ಸಮೀಪದ ರಣರಂಗದಲ್ಲಿ ಬಿದ್ದಿದ್ದ ದುರ್ಯೋಧನನ ಬಳಿಗೆ ಬಂದು; ನಚ್ಚು=ಹಂಬಲ/ಬಯಸು;

**ಕೊಳ್... ನಿನ್ನ ನಚ್ಚಿನ ಪಾಂಡವರ ತಲೆಗಳಿವೆ ಎಂದು ದುರ್ಯೋಧನನ ಮುಂದಿಕ್ಕಿದೊಡೆ=ತೆಗೆದುಕೊ... ನೀನು ಜೀವನದ ಉದ್ದಕ್ಕೂ ಬಲಿ ತೆಗೆದುಕೊಳ್ಳಬೇಕು ಎಂದು ಹಂಬಲಿಸುತ್ತಿದ್ದ ಪಾಂಡವರ ತಲೆಗಳು ಇಲ್ಲಿವೆ ನೋಡು"** ಎಂದು ನುಡಿದು ದುರ್ಯೋಧನನ ಮುಂದೆ ತಲೆಗಳನ್ನು ಇಟ್ಟಾಗ; ನೀಡು=ಬಹಳ ಹೊತ್ತು/ಹೆಚ್ಚಿನ ಸಮಯ; **ಆ ಮಹಾನುಭಾವನ್ ಆ ತಲೆಗಳಮ್ ನೀಡುಮ್ ಭಾವಿಸಿ ನೋಡಿ**=ಆ ಮಹಾನುಭಾವನಾದ ದುರ್ಯೋಧನನು ತನ್ನ ಮುಂದಿದ್ದ ಅಯ್ದು ತಲೆಗಳನ್ನು ಬಹಳ ಹೊತ್ತು ಚೆನ್ನಾಗಿ ಗಮನಿಸಿ ನೋಡಿ; ಪವನಜ=ವಾಯುದೇವನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು/ಭೀಮ; ಆಸ್ಯಮ್+ಅಲ್ತು+ಇದು; ಆಸ್ಯ=ಮೊಗ; **ಪವನಜನ ಆಸ್ಯಮಲ್ತಿದು**=ಇದು ಭೀಮನ ಮೊಗವಲ್ಲ; ತನ್ನ ಮುಂದಿದ್ದ ಅಯ್ದು ತಲೆಗಳಲ್ಲಿ

ದುರ್ಯೋಧನನು ಭೀಮನ ತಲೆ ಯಾವುದೆಂಬುದನ್ನು ಹುಡುಕಿದ್ದಾನೆ. ಅವನ ಕಣ್ಣಿಗೆ ಭೀಮನ ತಲೆ ಕಾಣಲಿಲ್ಲ; ಆನನಮ್+ಅಪ್ಪೊಡೆ; ಆನನ=ಮೊಗ; ಮದೀಯ=ನನ್ನ; ವಕ್ತ್ರ=ಮೊಗ; ಮಟ್ಟಮ್+ಇರ್ದು; ಮಟ್ಟ=ಸುಮ್ಮನೆ/ತೆಪ್ಪಗೆ;

**ಅವನ ಆನನಮಪ್ಪೊಡೆ ಮದೀಯ ವಕ್ತ್ರಮನೆ ಮಟ್ಟಮಿರ್ದು ನೋಡುವುದೆ**= ಭೀಮನ ಮೊಗವಾಗಿದ್ದರೆ… ಅದು ನನ್ನ ಮೊಗವನ್ನು ಸುಮ್ಮನೆ ನೋಡುತ್ತಿತ್ತೆ; ಭೀಮನದಾಗಿದ್ದರೆ ನೋಡನೋಡುತ್ತಿದ್ದಂತೆಯೇ ಸೇಡನ್ನು ತೀರಿಸಿಕೊಳ್ಳುವಂತೆ ನನ್ನ ಮೇಲೆ ಹಾರಿಬಂದು ಡಿಕ್ಕಿ ಹೊಡೆಯುತ್ತಿತ್ತು; **ಕೆಮ್ಮನೆ ಪೋಯ್ತು**=ನಿನ್ನ ಹೋರಾಟದಿಂದ ಯಾವ ಪ್ರಯೋಜನವೂ ಆಗಲಿಲ್ಲ; ಅರಿವು+ಇಲ್ಲದೆ+ಆಯ್ತು; ಅರಿವು=ತಿಳುವಳಿಕೆ; **ಅರಿವಿಲ್ಲದಾಯ್ತು**=ಸರಿಯಾದ ತಿಳುವಳಿಕೆಯಿಲ್ಲದೆ ಇಂತಹ ದುರಂತವಾಗಿದೆ; **ಪಾಂಡವರ ಶಿರಂಗಳಲ್ಲವು**=ಪಾಂಡುಪುತ್ರರಾದ ಧರ್ಮರಾಯ –ಭೀಮ–ಅರ್ಜುನ–ನಕುಲ–ಸಹದೇವರ ತಲೆಗಳಲ್ಲ; ಸೂನುಗಳ್+ ಅಪ್ಪ; ಸೂನು=ಮಗ; ಇವು ಪಾಂಡವ ಸೂನುಗಳಪ್ಪ ಪಂಚಪಾಂಡವರ ಶಿರಂಗಳಮ್=ಇವು ಪಾಂಡವರ ಮಕ್ಕಳಾದ ಪಂಚಪಾಂಡವರಾದ ಶ್ರುತಸೋಮ–ಪ್ರತಿವಿಂದ್ಯ–ಶ್ರುತಕೀರ್ತಿ–ಶತಾನೀಕ–ಶ್ರುತಸೇನರ ಈ ತಲೆಗಳನ್ನು; ಅಕ್ಕಟ=ಅಯ್ಯೋ; ನೆರೆ=ಚೆನ್ನಾಗಿ/ ಹೆಚ್ಚಾಗಿ;

**ಅಕ್ಕಟ… ನೆರೆ ವಿಚಾರಿಸದೆ ಕೊಂಡು ಬರ್ಪುದೇ**=ಅಯ್ಯೋ… ಸರಿಯಾಗಿ ಗಮನಿಸದೆ ಕತ್ತರಿಸಿಕೊಂಡು ಬರುವುದೇ; ವಿಕಳರ+ವೊಲ್; ವಿಕಲ=ಭ್ರಮೆ/ ಭ್ರಾಂತಿ/ ಉದ್ವಿಗ್ನತೆ; ವೊಲ್=ಅಂತೆ; ಅರಿದು=ಕತ್ತರಿಸು; ಪರಮೇಶ್ವರ=ಶಿವ/ರುದ್ರ; **ಪರಮೇಶ್ವರ ಅವತಾರನೆ… ಪರಮಜ್ಞಾನಿಯೆ… ವಿವೇಕವಿಕಳರವೊಲ್ ಬಾಲರ ತಲೆಯಮ್ ಅರಿದು ತಂದೆಯೊ**=ರುದ್ರನ ಅಂಶದಿಂದ ರೂಪುತಳೆದವನೇ ಮಹಾ ಅರಿವುಳ್ಳವನಾದ ಅಶ್ವತ್ಥಾಮನೇ ಬುದ್ಧಿಗೇಡಿಗಳಂತೆ ಬಾಲಕರ ತಲೆಯನ್ನು ಕತ್ತರಿಸಿ ತಂದೆಯಲ್ಲಾ; ದೊರೆಕೊಳ್ಳು=ಉಂಟಾಗು; **ನಿನಗೆ ಬಾಲವಧಮ್ ಪಾತಕಮ್ ದೊರೆಕೊಂಡುದು**=ನಿನಗೆ ಬಾಲಕರನ್ನು ಕೊಂದ ಪಾಪ ಸುತ್ತಿಕೊಂಡಿತು; ರೌದ್ರ= ಭಯಂಕರ; **ಪ್ರಾಯಶ್ಚಿತ್ತ**=ಮಾಡಿದ ತಪ್ಪನ್ನು ತಿಳಿದುಕೊಂಡು, ಅದನ್ನು ಸರಿಪಡಿಸಿಕೊಂಡು ಬಾಳುವುದಕ್ಕಾಗಿ ಮಯ್ ಮನಸ್ಸಿಗೆ ದಂಡನೆಯನ್ನು ಕೊಟ್ಟುಕೊಳ್ಳುವುದು; ಪ್ರವರ್ತನ+ಅರ್ಥಮ್; ಪ್ರವರ್ತನ=ಮುನ್ನಡೆ/ ಮುಂದುವರಿಸುವಿಕೆ; ಅರ್ಥ=ಉದ್ದೇಶ;

**ಅದು ಕಾರಣಮ್ ರೌದ್ರಪ್ರಾಯಶ್ಚಿತ್ತ ಪ್ರವರ್ತನಾರ್ಥಮ್ ಹಿಮವತ್ ಪರ್ವತಕ್ಕೆ ಪೋಪುದು ಎಂದು ಚಿತ್ತ ಸಮಾಧಾನಮ್ ಗೆಯ್ದು**=ಬಾಲಕರನ್ನು ಕೊಂದಿರುವ ಕಾರಣದಿಂದ ನಿನಗೆ ತಟ್ಟಿರುವ ಭಯಂಕರವಾದ ಪಾಪವನ್ನು

ಪರಿಹರಿಸಿಕೊಳ್ಳುವುದಕ್ಕಾಗಿ ನೀನು ಹಿಮಾಲಯ ಪರ್ವತಕ್ಕೆ ಹೋಗುವುದು ಎಂದು ಬಾಲಕರ ಕೊಲೆಯಿಂದ ಕಂಗಾಲಾಗಿರುವ ಅಶ್ವತ್ಥಾಮನಿಗೆ ಸಮಾಧಾನವನ್ನು ಹೇಳಿ; ಅಜಿತನ್=ವಿಷ್ಣು; ಸ್ಮರಿಯಿಸು=ನೆನಪಿಸಿಕೊಳ್ಳು/ ಜಪಮಾಡು/ಧ್ಯಾನಿಸು; ಸಾಧಿಸು=ಪಡೆ/ದೊರಕಿಸಿಕೊಳ್ಳು; ವಿಸರ್ಜಿಸು=ಬಿಡು/ ತ್ಯಜಿಸು; **ಅಜಿತನಮ್ ಸ್ಮರಿಯಿಸಿ ಸುರಲೋಕಮಮ್ ಸಾಧಿಸುವೆನ್ ಎಂದು ಅಶ್ವತ್ಥಾಮಾದಿಗಳಮ್ ವಿಸರ್ಜಿಸಿ**=ವಿಷ್ಣುವಿನ ನಾಮಸ್ಮರಣೆಯನ್ನು ಮಾಡುತ್ತ ದೇವಲೋಕದಲ್ಲಿ ನೆಲೆಯನ್ನು ಪಡೆದುಕೊಳ್ಳುತ್ತೇನೆ ಎಂದು ಹೇಳಿ, ಅಶ್ವತ್ಥಾಮ, ಕೃಪ, ಕೃತವರ್ಮ ಮುಂತಾದವರನ್ನು ಅಲ್ಲಿಂದ ಕಳುಹಿಸಿ; ಅವಸಾನ=ಕೊನೆ/ ಅಂತ್ಯ; ಉನ್ಮುಖ=ಸಿದ್ಧವಾಗಿರುವ;

**ತತ್ ದಿನ ಅವಸಾನದೊಳ್ ದುರ್ಯೋಧನನ್ ಪ್ರಾಣವಿಸರ್ಜನ ಉನ್ಮುಖನಾದನ್**= ಕುರುಕ್ಷೇತ್ರ ಯುದ್ಧದ ಹದಿನೆಂಟನೆಯ ದಿನದ ಕೊನೆಯಲ್ಲಿ ಸೂರ್ಯನು ಮುಳುಗುತ್ತಿರುವ ಸಮಯದಲ್ಲಿ ದುರ್ಯೋಧನನು ತನ್ನ ಪ್ರಾಣವನ್ನು ಬಿಡಲು ಸಿದ್ಧನಾದನು; ಕವಿಯು ಪಶ್ಚಿಮ ದಿಕ್ಕಿನಲ್ಲಿ ಮರೆಯಾಗುತ್ತಿರುವ ಸೂರ್ಯನ ನಿಸರ್ಗ ಚಿತ್ರಣದೊಡನೆ ದುರ್ಯೋಧನನ ಸಾವಿನ ಸಂಗತಿಯನ್ನು ಸಮೀಕರಿಸುತ್ತ, ಅಸ್ತಂಗತನಾಗುವ ಸೂರ್ಯನಂತೆಯೇ ದುರ್ಯೋಧನನು ಮರಣಹೊಂದಿ ಭೂಮಿಯಿಂದ ಕಣ್ಮರೆಯಾದನು ಎಂದು ಚಿತ್ರಿಸಿದ್ದಾನೆ; ಪಂಕಜ=ತಾವರೆ; ಸುಹೃತ್=ಒಳ್ಳೆಯ ಮನಸ್ಸು; ಮುಗಿವ+ಅನ್ನಮ್; ಮುಗಿ=ಹೂವಿನ ದಳಗಳು ಮುಚ್ಚಿಕೊಳ್ಳುವುದು; ಅನ್ನಮ್=ರೀತಿಯಲ್ಲಿ;

**ಪಂಕಜಮುಮ್ ಸುಹೃತ್ ವದನ ಪಂಕಜಮುಮ್ ಮುಗಿವನ್ನಮ್**= ಸೂರ್ಯ ಕಿರಣಗಳು ಮರೆಯಾಗುತ್ತಿದ್ದಂತೆಯೇ ಸರೋವರದಲ್ಲಿನ ತಾವರೆ ಹೂವುಗಳ ದಳಗಳು ಮುಚ್ಚಿಕೊಳ್ಳುವಂತೆ ಸಾವಿನ ಕೊನೆಯ ಗಳಿಗೆಯಲ್ಲಿ ದೇವರ ನಾಮ ಸ್ಮರಣೆಯನ್ನು ಮಾಡುತ್ತ ಪ್ರಶಾಂತವಾಗಿದ್ದ ದುರ್ಯೋಧನನು ಮೊಗವು ಮುದುಡಿಕೊಳ್ಳುತ್ತಿರಲು; ಉಗ್ರ=ಬಿಸಿ/ಸುಡುವ; ತೇಜ=ಕಾಂತಿ; ಕಿಡು=ಮಸುಕಾಗು /ಇಲ್ಲವಾಗು; **ಉಗ್ರತೇಜಮ್ ಕಿಡುತಿರ್ಪಿನಮ್**=ಉರಿಯುತ್ತಿದ್ದ ಸೂರ್ಯನ ಪ್ರಖರವಾದ ಕಾಂತಿಯು ಮಸುಕಾಗುವಂತೆಯೇ ಚಕ್ರವರ್ತಿಯಾಗಿ ಮೆರೆದಿದ್ದ ದುರ್ಯೋಧನನ ಮೊಗದ ಕಾಂತಿಯು ಮಸುಕಾಗುತ್ತಿರಲು; ನಿಜ=ತನ್ನ; ಕರ=ಕಿರಣ/ಕಾಂತಿ; ನಿಜಕರ=ಸೂರ್ಯನು ತನ್ನ ಕಿರಣಗಳನ್ನು; ಉಡುಗು=ಕುಗ್ಗು/ಅಡಗು;

**ನಿಜಕರಂಗಳನ್ ಅಂದು ಉಡುಗುತ್ತುಮ್ ಇರ್ದು**=ಪಶ್ಚಿಮದ ದಿಕ್ಕಿನಲ್ಲಿ ಮರೆಯಾಗುತ್ತಿರುವ ಸೂರ್ಯ ಕಿರಣಗಳ ಕಾಂತಿಯು ಕುಗ್ಗುತ್ತಿರುವಂತೆಯೇ

ದುರ್ಯೋಧನನ ದೇಹದ ಕಾಂತಿಯು ಅಡಗುತ್ತಿರಲು; ಚಕ್ರಾಂಕ=ಚಕ್ರವಾಕ ಎಂಬ ಹೆಸರಿನ ಹಕ್ಕಿ. ಚಕ್ರವಾಕ ಗಂಡು ಮತ್ತು ಹೆಣ್ಣು ಹಕ್ಕಿಗಳು ಹಗಲಿನಲ್ಲಿ ಜತೆಯಾಗಿದ್ದು, ಇರುಳಿನಲ್ಲಿ ಬೇರೆಬೇರೆಯಾಗಿರುತ್ತವೆ ಎಂಬ ಒಂದು ಗ್ರಹಿಕೆ ಜನಮನದಲ್ಲಿದೆ; ಅಗಲ್=ಬಿಟ್ಟುಹೋಗು/ತೊರೆ; **ಚಕ್ರಾಂಕಮ್ ಅಗಲ್ವಿನಮ್**= ಗಂಡು ಹೆಣ್ಣು ಚಕ್ರವಾಕ ಹಕ್ಕಿಗಳು ಒಂದನ್ನೊಂದು ಅಗಲುವಂತೆ... ಬೆಳಗುತ್ತಿದ್ದ ಸೂರ್ಯನು ಭೂಮಿಯ ಆ ಎಡೆಯಿಂದ ಅಗಲಿದನು ಅಂತೆಯೇ ದುರ್ಯೋಧನನು ಭೂಮಿಯನ್ನು ತ್ಯಜಿಸುತ್ತಿದ್ದಾನೆ; ಕ್ರಮ=ಮುಂದುವರಿಯುವಿಕೆ; ಅಂಬರ=ಆಕಾಶ; ಬಿಸುಟು=ತ್ಯಜಿಸಿ; ಉರ್ವಿ=ಭೂಮಿ; ಕವಿ=ಮುಸುಕು; ಅರ್ಕ= ಸೂರ್ಯ; **ಕುರುಕುಲ ಅರ್ಕ**=ಕುರುವಂಶದ ಸೂರ್ಯನಾಗಿದ್ದ ದುರ್ಯೋಧನ; ಅಸ್ತ=ಮರೆಯಾಗುವುದು; ಎಯ್ದು=ಹೊಂದು;

**ಕ್ರಮದಿನ್ ಅಂಬರಮಮ್ ಬಿಸುಟು ಉರ್ವಿಗೆ ಅಂಧಕಾರಮ್ ಕವಿತರ್ಪಿನಮ್... ಕುರುಕುಲ ಅರ್ಕನುಮ್ ಅರ್ಕನುಮ್ ಅಸ್ತಮ್ ಎಯ್ದಿದರ್**= ಬೆಳಗುತ್ತಿದ್ದ ಸೂರ್ಯನು ಆಕಾಶವನ್ನು ಬಿಟ್ಟು ಪಶ್ಚಿಮದ ದಿಕ್ಕಿನತ್ತ ಸಾಗುತ್ತಿದ್ದಂತೆಯೇ... ಭೂಮಂಡಲಕ್ಕೆ ಕತ್ತಲೆಯು ಕವಿಯುತ್ತಿರಲು ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಮರೆಯಾದನು ಮತ್ತು ಕುರುಕುಲದ ಸೂರ್ಯನಾದ ದುರ್ಯೋಧನನ ಪ್ರಾಣ ಭೂಮಂಡಲವನ್ನು ಬಿಟ್ಟುಹೋಯಿತು; ಸೂರ್ಯದೇವನೂ ದುರ್ಯೋಧನನೂ ಕಣ್ಮರೆಯಾದರು;

❖

## ನೋಟ–೨೯

# ಭೀಮಸೇನನ ಪಟ್ಟಾಭಿಷೇಕ

ಜಯಲಕ್ಷ್ಮೀ+ಪ್ರಿಯನ್+ಒಳ್; ಲಕ್ಷ್ಮಿ=ಸಂಪತ್ತು ಮತ್ತು ಅಧಿಕಾರದ ಗದ್ದುಗೆಯ ದೇವತೆ; ಪ್ರಿಯ=ಗಂಡ; ಜಯಲಕ್ಷ್ಮಿಪ್ರಿಯ=ಭೀಮಸೇನ; **ಜಯಲಕ್ಷ್ಮೀಪ್ರಿಯನೊಳ್**=ಜಯಲಕ್ಷ್ಮಿಪ್ರಿಯನಾದ ಭೀಮಸೇನನಲ್ಲಿ; ಪರಾಕ್ರಮ+ ಕೃತ+ ಅಲಂಕಾರನ್+ ಒಳ್; ಕೃತ=ಮಾಡಿದ; ಅಲಂಕಾರನ್= ಸಿಂಗಾರಗೊಂಡವನು; **ಪರಾಕ್ರಮಕೃತಾಲಂಕಾರನೊಳ್**=ಪರಾಕ್ರಮವನ್ನೇ ಅಲಂಕಾರದ ಒಡವೆಯನ್ನಾಗಿ ತೊಟ್ಟಿರುವ ಭೀಮಸೇನನಲ್ಲಿ; **ಸತ್ಯವಾದಿಯೊಳ್**= ಸತ್ಯದ ನಡೆನುಡಿಯುಳ್ಳವನಾದ ಭೀಮಸೇನನಲ್ಲಿ; ಅರ್ಥಿ=ಬೇಡುವವನು; ಅರ್ಥಿಪ್ರಿಯ=ಬೇಡುವವರ ಪಾಲಿಗೆ ಮೆಚ್ಚಿನವನು; **ಅರ್ಥಿಪ್ರಿಯನೊಳ್**= ಬೇಡಿದವರ ಬಯಕೆಗಳನ್ನು ಈಡೇರಿಸುವ ವ್ಯಕ್ತಿಯಾದ ಭೀಮಸೇನನನಲ್ಲಿ; ಧರಾ=ಭೂಮಂಡಲ; ಪ್ರಣಯಿ=ಅನುರಾಗ/ಪ್ರೀತಿ; **ಧರಾಪ್ರಣಯಿಯೊಳ್**= ಭೂಮಂಡಲದ ನಲ್ಲನಾದ ಭೀಮಸೇನನಲ್ಲಿ;

**ನಿರ್ದ್ವೇಷಿಯೊಳ್**= ಹಗೆಗಳೇ ಇಲ್ಲದವನಾದ ಭೀಮಸೇನನಲ್ಲಿ; **ಪಂಡಿತಾಶ್ರಯನೊಳ್**= ಪಂಡಿತರಿಗೆ ಮನ್ನಣೆಯನ್ನಿತ್ತು ಆಶ್ರಯವನ್ನು ನೀಡಿರುವ ಭೀಮಸೇನನಲ್ಲಿ; ರಾಜಿತ=ಹೊಳೆಯುವ/ಕಂಗೊಳಿಸುವ; ರಾಜಚಿಹ್ನ=ರಾಜತ್ವದ ಗುರುತು; ರಾಜಲಾಂಛನಗಳಾದ ಬೆಳ್ಗೊಡೆ ಮತ್ತು ಚಾಮರಗಳು; **ರಾಜಿತರಾಜಚಿಹ್ನಸಹಿತಮ್**=ಹೊಳೆಯುತ್ತಿರುವ ರಾಜಲಾಂಛನಗಳಾದ ಬೆಳ್ಗೊಡೆ ಮತ್ತು ಚಾಮರಗಳ ಜತೆಗೂಡಿ; ಕಂದರ್ಪ=ಮನ್ಮಥ/ಮದನ; ಚಾಳುಕ್ಯಕಂದರ್ಪ=ಚಾಳುಕ್ಯ ರಾಜಮನೆತನದಲ್ಲಿ ಮನ್ಮಥನಂತೆ ರೂಪವುಳ್ಳವನು

ಸತ್ಯಾಶ್ರಯ; ಚಾಳುಕ್ಯವಂಶದ ಸತ್ಯಾಶ್ರಯ ಚಕ್ರವರ್ತಿಗಿದ್ದ ಬಿರುದು; ರನ್ನ ಕವಿಯು ತನ್ನ ಗದಾಯುದ್ಧ ಕಾವ್ಯದಲ್ಲಿ ಭೀಮಸೇನನನ್ನು ಸತ್ಯಾಶ್ರಯ ಚಕ್ರವರ್ತಿಯ ಹೆಸರಿನೊಂದಿಗೆ ಸಮೀಕರಿಸಿದ್ದಾನೆ; **ಶ್ರೀಕಾಂತೆಯುಮ್ ಭೂಮಿದೇವಿಯುಮ್ ಅತ್ಯುತ್ಸವದಿಂದೆ ಚಾಳುಕ್ಯಕಂದರ್ಪನೊಳ್ ಬಂದು ನೆರೆದರ್**=ಶ್ರೀದೇವಿಯೂ ಭೂದೇವಿಯು ಹೆಚ್ಚಿನ ಸಡಗರದಿಂದ ಚಾಳುಕ್ಯಕಂದರ್ಪನೆಂದು ಹೆಸರಾಂತ ಭೀಮಸೇನನಲ್ಲಿ ಬಂದು ಸೇರಿದರು; ಶ್ರೀ=ಎಲ್ಲಾ ಬಗೆಯ ಸಂಪತ್ತು ಮತ್ತು ಅಧಿಕಾರಕ್ಕೆ ಒಡತಿಯಾದ ಲಕ್ಷ್ಮಿ ಎಂಬ ದೇವತೆ; ವಚನ=ನುಡಿ/ಮಾತು; ಮನೋರಮಣ=ಪ್ರಿಯಕರ/ಮನದೊಡೆಯ;

**ಶ್ರೀಗೆ ಜಯಶ್ರೀಗೆ ವಚಃಶ್ರೀಗೆ ಮನೋರಮಣನ್ ಎನಿಸಿ**=ಲಕ್ಷ್ಮಿಗೆ ಜಯಲಕ್ಷ್ಮಿಗೆ ವಚನಲಕ್ಷ್ಮಿಗೆ ಮನದೊಡೆಯನೆಂದು ಹೆಸರನ್ನು ಪಡೆದು; ಎಸೆ=ಕಂಗೊಳಿಸು/ಒಪ್ಪು; ನೆಗಳ್ದು+ಇರ್ದನ್; ನೆಗಳ್= ಹೆಸರುವಾಸಿ/ಕೀರ್ತಿ/ಪ್ರಸಿದ್ಧಿ; **ಸಕಲ ಧರಿತ್ರೀ ಭಾಗದೆ ದಿಗ್ಭಾಗದೊಳ್ ಕೀರ್ತಿ ಎಸೆಯಲ್ಕೆ ಸಾಹಸಭೀಮನ್ ನೆಗಳ್ದಿರ್ದನ್**=ಇಡೀ ಜಗತ್ತಿನ ಎಲ್ಲ ಕಡೆಯ ದಿಕ್ಕುಗಳಲ್ಲಿಯೂ ಕೀರ್ತಿಯು ಹಬ್ಬಿ ಕಂಗೊಳಿಸುತ್ತಿರಲು ಸಾಹಸ ಭೀಮನು ಹೆಸರುವಾಸಿಯಾಗಿದ್ದನು; ಮುರ=ಒಬ್ಬ ರಕ್ಕಸನ ಹೆಸರು; ಅಂತಕ=ಯಮ; ಮುರಾಂತಕ=ಮುರನೆಂಬ ರಕ್ಕಸನನ್ನು ಕೊಂದವನು/ಕೃಷ್ಣ; **ಆಗಳ್ ಮುರಾಂತಕನ್ ಸಾಹಸಭೀಮನ ಸಾಹಸಕ್ಕೆ ಮೆಚ್ಚಿ**=ಭೀಮನು ದುರ್ಯೋಧನನನ್ನು ಕೊಂದು ತನ್ನೆಲ್ಲಾ ಪ್ರತಿಜ್ಞೆಗಳನ್ನು ಈಡೇರಿಸಿಕೊಂಡಿರುವ ಸಮಯದಲ್ಲಿ ಕೃಷ್ಣನು ಸಾಹಸ ಭೀಮನ ಪರಾಕ್ರಮವನ್ನು ಮೆಚ್ಚಿಕೊಂಡು;

**ಧರ್ಮನಂದನಾದಿಗಳ ಮೊಗಮಮ್ ನೋಡಿ**=ಕೃಷ್ಣನು ಧರ್ಮರಾಯ ಮತ್ತು ಇನ್ನಿತರರ ಮೊಗವನ್ನು ನೋಡುತ್ತ ನುಡಿಯತೊಡಗುತ್ತಾನೆ; ಈಗ ಕೃಷ್ಣನು ಸಾಹಸ ಭೀಮನು ಮಾಡಿದ ಹೋರಾಟ ಮತ್ತು ಅದರಿಂದ ಉಂಟಾದ ಪರಿಣಾಮವನ್ನು ಕುರಿತು **'ಬೇಸಾಯದ ರೂಪಕ'**ದ ಮೂಲಕ ಹೊಗಳ ತೊಡಗಿದ್ದಾನೆ. ನೆಲವನ್ನು ನೇಗಿಲಿನಿಂದ ಉತ್ತು, ಬೀಜವನ್ನು ಬಿತ್ತಿ, ಹುಲುಸಾದ ಬೆಳೆಯನ್ನು ತೆಗೆಯುವ ಬೇಸಾಯಗಾರನಂತೆ ಪರಾಕ್ರಮಶಾಲಿಯಾದ ಭೀಮಸೇನನು ಶತ್ರುವಾದ ದುರ್ಯೋಧನನ ಸಾಮ್ರಾಜ್ಯವನ್ನು ತನ್ನ ಗದೆಯೆಂಬ ನೇಗಿಲಿನಿಂದ ಉತ್ತು, ಕುರುಬಲದ ರಾಜರನ್ನು ಕೊಂದು, ಅವರ ರಕ್ತಕೋಡಿಯಿಂದಲೇ ನೆಲವನ್ನು ಹದಗೊಳಿಸಿ, ಮದಿಸಿದ ಆನೆಗಳ ಕುಂಭಸ್ಥಲವನ್ನು ಬಡಿದು ಹೊರಚೆಲ್ಲಿದ ಹೊಸಮುತ್ತುಗಳನ್ನೇ ಬಿತ್ತನೆಯ ಬೀಜಗಳಾಗಿ ಸಾಲಾರಂಬ ಮಾಡಿ, ಹುಲುಸಾದ ಬೆಳೆಯನ್ನು ಪಡೆಯುವಂತೆ ನಿರ್ಮಲವಾದ ಕೀರ್ತಿಯನ್ನು ಪಡೆದನು; ಪರಸೈನ್ಯ=ಶತ್ರುವಿನ ಸೇನೆ; ಭೈರವ=ಶಿವ/ರುದ್ರರೂಪವನ್ನು ತಳೆದಾಗ

ಕಂಡುಬರುವ ಶಿವನ ರೂಪ; ಪರಸೈನ್ಯಭೈರವ=ಚಾಳುಕ್ಯ ಚಕ್ರವರ್ತಿ ಸತ್ಯಾಶ್ರಯನಿಗಿದ್ದ ಬಿರುದು/ಭೀಮಸೇನ; ಕುರುಧರೆಯಮ್= ಕುರುಭೂಮಿಯನ್ನು; ನಿಜ+ಉಗ್ರ+ಗದೆ; ಏರ್=ನೆಲವನ್ನು ಉಳುವುದಕ್ಕೆ ಬಳಸುವ ನೇಗಿಲು; ಉಳ್ತು= ಉತ್ತು;

**ಪರಸೈನ್ಯಭೈರವನ್ ಕುರುಧರೆಯಮ್ ನಿಜೋಗ್ರಗದೆಯ ಏರ್ಗಳಿನ್ ಉಳ್ತು**= ಶತ್ರುಸೇನೆಗೆ ಭೈರವನು ಎನಿಸಿದ ಭೀಮಸೇನನು ಕುರುಭೂಮಿಯನ್ನು ತನ್ನ ಭಯಂಕರವಾದ ಗದೆಯೆಂಬ ನೇಗಿಲಿನಿಂದ ಉತ್ತು; ಸಮಸ್ತ=ಎಲ್ಲ/ಸಕಲ; ಭೂಪ=ರಾಜ; ವೈರಿಭೂಪರು=ಶತ್ರುಸೇನಾಬಲದಲ್ಲಿದ್ದ ರಾಜರು; ರುಧಿರ+ಅಂಬು+ಇಂದೆ; ರುಧಿರ=ಕೆಂಪುಬಣ್ಣ/ನೆತ್ತರು/ರಕ್ತ; ಅಂಬು=ನೀರು; ರುಧಿರಾಂಬು=ಕೆಂಪುಬಣ್ಣದಲ್ಲಿರುವ ನೆತ್ತರು; ಬೆದೆ=ಉಳುಮೆ ಮಾಡಿರುವ ಭೂಮಿಯಲ್ಲಿ ಬೀಜವನ್ನು ಬಿತ್ತುವುದಕ್ಕೆ ಇಲ್ಲವೇ ಪಯಿರನ್ನು ನೆಡುವುದಕ್ಕೆ ಹದವಾದ ಕಾಲ; **ಸಮಸ್ತ ವೈರಿಭೂಪರ ರುಧಿರಾಂಬುವಿಂದೆ ಬೆದೆಮಾಡಿಯೆ**= ಶತ್ರುವಾದ ದುರ್ಯೋಧನನ ಸೇನಾಬಲದಲ್ಲಿದ್ದ ರಾಜರೆಲ್ಲರ ರಕ್ತಕೋಡಿ ಯಿಂದಲೇ ಕುರಭೂಮಿಯನ್ನು ಹದಗೊಳಿಸಿ; ಘಟ್ಟಿತ=ಹೊಡೆದ/ಕುಟ್ಟಿದ; ಕುಂಭಿ=ಆನೆ; ಘಟ್ಟಿತ ಕುಂಭಿ=ಆನೆಗಳ ತಲೆಗಳನ್ನು ಸೀಳಿ; ಮುಕ್ತ=ಬಿಡುಗಡೆ ಹೊಂದಿದ/ಬಿಚ್ಚಿದ; ಭಾಸುರ=ಹೊಳೆಯುವ; ನವ=ಹೊಸ; ಮೌಕ್ತಿಕ=ಮುತ್ತು; **ಮುಕ್ತ ಭಾಸುರ ನವಮೌಕ್ತಿಕ**=ಹೊರಚೆಲ್ಲಿದ ಹೊಳೆಯುವ ಹೊಸಮುತ್ತುಗಳು; ಆನೆಯ ತಲೆಯ ಮೇಲೆ ಉಬ್ಬಿರುವ ಜಾಗವನ್ನು 'ಕುಂಭಸ್ಥಲ' ಎನ್ನುತ್ತಾರೆ. ಈ ಜಾಗದಲ್ಲಿ ಮುತ್ತುಗಳು ಇರುತ್ತವೆ ಎಂಬ ದಂತಕತೆಯು ಜನಮನದಲ್ಲಿದೆ; ಪ್ರಸರ=ಹರಡುವುದು; ಓಳಿ=ಕ್ರಮ/ಓರಣ; ಸೂಸಿ=ಚೆಲ್ಲಿ;

**ಘಟ್ಟಿತ ಕುಂಭಿ ಮುಕ್ತ ಭಾಸುರ ನವಮೌಕ್ತಿಕ ಪ್ರಸರ ಬೀಜಮನ್ ಓಳಿಯೆ ಸೂಸಿ**=ಆನೆಯ ಕುಂಭಸ್ತಲವನ್ನು ಸೀಳಿದಾಗ ಹೊರಬಿದ್ದ ಹೊಸಮುತ್ತುಗಳನ್ನೇ ಬೀಜಗಳನ್ನಾಗಿ ಮಾಡಿಕೊಂಡು ಶತ್ರುವಿನ ಭೂಮಿಯಲ್ಲಿ ಸಾಲು ಸಾಲಾಗಿ ಬಿತ್ತಿ; ತಾರ=ಬೆಳ್ಳಿ; ಭೂಧರ=ಬೆಟ್ಟ; ಸಿತ=ಬಿಳಿಯ ಬಣ್ಣ; ಸಿತಕೀರ್ತಿ=ಒಳ್ಳೆಯ ಯಶಸ್ಸು; **ತಾರ ಭೂಧರ ಸಿತಕೀರ್ತಿಯೆಂಬ ಬೆಳಸಮ್ ಬೆಳೆದನ್ ಎಂದು ಪೊಗಳ್ದು**= ಕಪ್ಪುಕಲೆಯಿಲ್ಲದ ಬೆಳ್ಳಿಬೆಟ್ಟದಂತೆ ನಿರ್ಮಲವಾದ ಯಶಸ್ಸೆಂಬ ಬೆಳೆಯನ್ನು ಬೆಳೆದನು ಎಂದು ಭೀಮಸೇನನನ್ನು ಕೃಷ್ಣನು ಹಾಡಿಹೊಗಳಿ; ಮುರಾಂತಕ=ಕೃಷ್ಣ; ಕುರುಕುಲಾಂತಕ=ಭೀಮಸೇನ; **ಮುರಾಂತಕನ್ ಕುರುಕುಲಾಂತಕನ ಮೊಗಮಮ್ ನೋಡಿ**=ಕೃಷ್ಣನು ಭೀಮಸೇನನ ಮೊಗವನ್ನು ನೋಡಿ; ಮುನಿಯಿಸಿದ=ಕೋಪೋದ್ರೇಕ ಉಂಟಾಗುವಂತೆ ಕೆರಳಿಸಿದ; ಅರಾತಿ+ಅನ್;

ಅರಾತಿ=ಶತ್ರು/ಹಗೆ; ಪೂಣ್=ಪ್ರತಿಜ್ಞೆ/ಆಣೆ ಮಾಡು/ ಶಪಥ ತೊಡು; ತೀರ್=ಸಾಧ್ಯವಾಗು/ಪೂರೈಸು/ಈಡೇರಿಸು;

**ಮುನಿಯಿಸಿದ ಅರಾತಿಯನ್ ಕೊಲ್ವೆನೆಂದು ಪೂಣ್ದಂತೆ ಪೂಣ್ಕೆ ತಪ್ಪದೆ ಕೊಲಲುಮ್... ಗೆಲ್ವೆನ್ ಎಂದು ನುಡಿದಂತೆ ಗೆಲಲುಮ್... ಇರಿವಬೆಡಂಗಾ, ನಿನಗಲ್ಲದೆ ತೀರ್ಗುಮೆ**=ಕೇಡನ್ನು ಬಗೆದು ಕೆರಳಿಸಿದ ಹಗೆಯನ್ನು ಕೊಲ್ಲುತ್ತೇನೆ ಎಂದು ಪ್ರತಿಜ್ಞೆಯನ್ನು ತೊಟ್ಟಂತೆಯೇ, ತೊಟ್ಟ ಪ್ರತಿಜ್ಞೆಗೆ ತಪ್ಪಿನಡೆಯದೆ ಹಗೆಯನ್ನು ಕೊಲ್ಲಲು... ಗೆದ್ದೇ ಗೆಲ್ಲುತ್ತೇನೆ ಎಂದು ನುಡಿದಂತೆ ಗೆಲವನ್ನು ಪಡೆಯಲು... ಇರಿವಬೆಡಂಗಾ ನಿನಗಲ್ಲದೆ ಬೇರೆಯವರಿಂದ ಆಗುತ್ತದೆಯೇ; ಪೆರರ್=ಬೇರೆಯವರು/ಇತರರು; ಆಳ್=ಹೋರಾಡುವ ವ್ಯಕ್ತಿ; ಪೆರ್ವಲದ+ಇಂದಮ್; ಪಿರಿದು+ಬಲ=ಪೆರ್ವಲ; ಪೆರ್ವಲ=ದೊಡ್ಡ ಸೇನೆ; **ಪೆರರ ಆಳ... ಪೆರರ ಕುದುರೆಯ... ಪೆರರ ಆನೆಯ... ಪೆರರ ರಥದ... ಪೆರ್ವಲದಿಂದಮ್ ಪೆರರ್ ಇರಿವರ್**=ಇತರ ರಾಜರ ಸೇನಾಬಲದಲ್ಲಿರುವ ಕಾದಾಳುಗಳ ಕುದುರೆಗಳ.... ಆನೆಗಳ.... ರಥಗಳ... ದೊಡ್ಡಸೇನಾಬಲದಿಂದ ಯುದ್ಧರಂಗದಲ್ಲಿ ಶತ್ರುಗಳನ್ನು ಕೊಂದು ಬೇರೆಯ ರಾಜರು ಜಯವನ್ನು ಪಡೆಯುತ್ತಾರೆ; ಏಕಾಂಗದಿನ್= ಒಬ್ಬಂಟಿಯಾಗಿ;

**ಇರಿವಬೆಡಂಗಾ, ನಿನ್ನ ತೆರದಿನ್ ಏಕಾಂಗದಿನ್ ಇರಿವವರ್ ಆರ್**= ಇರಿವಬೆಡಂಗನೇ, ಬೇರೆಯ ರಾಜರ ಸೇನಾಬಲದ ನೆರವನ್ನು ಪಡೆಯದೇ ನಿನ್ನ ರೀತಿಯಲ್ಲಿ ಒಬ್ಬಂಟಿಯಾಗಿಯೇ ಹೋರಾಡಿ ಶತ್ರುವನ್ನು ಕೊಲ್ಲುವವರು ಈ ಜಗತ್ತಿನಲ್ಲಿ ಯಾರು ತಾನೇ ಇದ್ದಾರೆ; ಚಾಳುಕ್ಯನಾರಾಯಣ=ಚಾಳುಕ್ಯ ವಂಶದ ಚಕ್ರವರ್ತಿಯಾದ ಸತ್ಯಾಶ್ರಯನಿಗಿದ್ದ ಬಿರುದು. ಇದು ಭೀಮಸೇನನಿಗೆ ಅನ್ವಯವಾಗುತ್ತದೆ. ಏಕೆಂದರೆ ರನ್ನ ಕವಿಯು 'ಗದಾಯುದ್ಧ' ಕಾವ್ಯದಲ್ಲಿ ಭೀಮಸೇನನ ವ್ಯಕ್ತಿತ್ವವನ್ನು ಸತ್ಯಾಶ್ರಯ ಚಕ್ರವರ್ತಿಯೊಡನೆ ಸಮೀಕರಿಸಿದ್ದಾನೆ; **ಎಂದು ನಾರಾಯಣನ್ ಚಾಳುಕ್ಯನಾರಾಯಣನನ್ ವರ್ಣಿಸುತಿರ್ಪಿನಮ್**= ಎಂದು ಕೃಷ್ಣನು ಭೀಮಸೇನನ ಪರಾಕ್ರಮವನ್ನು ಬಣ್ಣಿಸುತ್ತಿರುವಾಗ;

**ಆ ಪ್ರಸ್ತಾವದೊಳ್ ದುರ್ಯೋಧನನ ಜನನೀ ಜನಕರಪ್ಪ ಗಾಂಧಾರಿಯುಮ್ ಧೃತರಾಷ್ಟ್ರನುಮ್ ಬರೆ**=ಆ ಸಮಯದಲ್ಲಿ ದುರ್ಯೋಧನನ ತಾಯಿತಂದೆಯರಾದ ಗಾಂಧಾರಿ ಮತ್ತು ಧೃತರಾಷ್ಟ್ರರು ಅಲ್ಲಿಗೆ ಬರಲು; ಆತನ=ದುರ್ಯೋಧನನ; ಮಹಾದೇವಿಯರ್+ಅಪ್ಪ; ಮಹಾದೇವಿ=ಪಟ್ಟದ ರಾಣಿ/ಮಹಾರಾಣಿ; ಶುದ್ಧಾಂತ= ರಾಣಿವಾಸ; ನಿತಂಬಿನೀ ಜನ=ಹೆಂಗಸರು; ಜೀವಿತೇಶ್ವರ=ಗಂಡ/ಪತಿ;

**ಆತನ ಮಹಾದೇವಿಯರಪ್ಪ ಭಾನುಮತಿಯುಮ್ ಚಂದ್ರಮತಿಯುಮ್**

**ಮೊದಲಾದ ಶುದ್ಧಾಂತ ನಿತಂಬಿನೀ ಜನಂಗಳುಮ್ ತಂತಮ್ಮ ಜೀವಿತೇಶ್ವರರಮ್ ಸಂಗ್ರಾಮಭೂಮಿಯೊಳ್ ಅರಸುತ್ತುಮ್ ಬಂದು ಕಾಣದೆ**=ದುರ್ಯೋಧನನ ಪಟ್ಟದ ರಾಣಿಯರಾದ ಭಾನುಮತಿ ಮತ್ತು ಚಂದ್ರಮತಿಯರು ಮತ್ತು ಇನ್ನಿತರ ರಾಣಿವಾಸದ ಹೆಂಗಸರು ತಮ್ಮ ತಮ್ಮ ಗಂಡಂದಿರನ್ನು ಕುರುಕ್ಷೇತ್ರ ರಣರಂಗದಲ್ಲಿ ಹುಡುಕುತ್ತ ಬಂದು, ಎಲ್ಲಿಯೂ ತಮ್ಮ ಗಂಡಂದಿರನ್ನು ಕಾಣದೆ; **ಗಾಂಧಾರೀ ಧೃತರಾಷ್ಟ್ರರ ಕಾಲ ಮೇಲೆ ಕವಿದು ಬಿಳ್ದು**=ಗಾಂಧಾರಿ ಧೃತರಾಷ್ಟ್ರರ ಪಾದಗಳ ಮೇಲೆ ಉರುಳಿ ದೊಪ್ಪನೆ ಬಿದ್ದು; ಮಹೀ=ಭೂಮಿ; ಮಹೀಪತಿ=ರಾಜ; ವಲ್ಲಭ=ಪತಿ/ಒಡೆಯ; **ಕುರುಮಹೀಪತಿ, ಎಲ್ಲಿದನ್ ಎಲ್ಲಿದನ್**=ಕುರುಪತಿಯಾದ ದುರ್ಯೋಧನನು ಎಲ್ಲಿದ್ದಾನೆ... ಎಲ್ಲಿದ್ದಾನೆ; **ಮಹೀವಲ್ಲಭನ್, ಎಲ್ಲಿದನ್ ಎಲ್ಲಿದನ್**=ಭೂಮಂಡಲದ ಒಡೆಯನಾದ ದುರ್ಯೋಧನನು ಎಲ್ಲಿದ್ದಾನೆ ಎಲ್ಲಿದ್ದಾನೆ; ಇಂದು=ಚಂದ್ರ; ತಿಲಕ+ಆಹ್ವಯನ್; ತಿಲಕ=ಹಣೆಗೆ ಇಟ್ಟುಕೊಳ್ಳುವ ಬೊಟ್ಟು/ಉತ್ತಮ ವ್ಯಕ್ತಿ; ಆಹ್ವಯ=ಹೆಸರು;

**ಇಂದುವಂಶ ತಿಲಕಾಹ್ವಯನ್ ಎಲ್ಲಿದನ್ ಎಲ್ಲಿದನ್**=ಚಂದ್ರವಂಶದ ತಿಲಕನೆಂದು ಹೆಸರನ್ನು ಪಡೆದಿದ್ದ ದುರ್ಯೋಧನನು ಎಲ್ಲಿದ್ದಾನೆ... ಎಲ್ಲಿದ್ದಾನೆ; ಲಸತ್=ಹೊಳೆಯುವ/ಪ್ರಕಾಶಿಸುವ; ಪಲ್ಲವ=ಚಿಗುರು; **ಲಸತ್ ಪಲ್ಲವ ಕೀರ್ತಿ**=ಹೊಳೆಯುತ್ತಿರುವ ಚಿಗುರಿನಂತೆ ಕೀರ್ತಿಯುಳ್ಳವನು; ಚಾರುತರ=ಹೆಚ್ಚು ಚೆಲುವಾದ/ಅತಿ ಸುಂದರವಾದ; **ಚಾರುತರ ಮೂರ್ತಿ**=ಅತಿ ಸುಂದರವಾದ ರೂಪುಳ್ಳವನು; ಫಣಿ+ಇಂದ್ರ; ಫಣಿ=ಹಾವು; ಇಂದ್ರ=ಒಡೆಯ; ಫಣೀಂದ್ರ=ಹಾವುಗಳ ಒಡೆಯನಾದ ಆದಿಶೇಷ; ಪತಾಕೆ=ಬಾವುಟ; **ಫಣೀಂದ್ರಪತಾಕ**=ಹಾವಿನ ಚಿತ್ರವನ್ನು ತನ್ನ ಬಾವುಟದಲ್ಲಿ ಲಾಂಛನವಾಗುಳ್ಳವನು/ದುರ್ಯೋಧನ; **ಫಣೀಂದ್ರ ಪತಾಕನ್ ಎಲ್ಲಿ ತಾನ್ ಎಲ್ಲಿದನ್ ಎಲ್ಲಿದನ್**=ದುರ್ಯೋಧನನು ಎಲ್ಲಿದ್ದಾನೆ... ಅವನು ಎಲ್ಲಿದ್ದಾನೆ... ಎಲ್ಲಿದ್ದಾನೆ; ಗಡ=ಕಂಡೆಯಾ/ನೋಡಿದೆಯಾ; ಕರುಣ+ಆಕ್ರಂದನಮ್; ಆಕ್ರಂದನ=ಜೋರಾಗಿ ಅಳುವುದು;

**ಗಡ ಮನಃಪ್ರಿಯನ್ ಸುಯೋಧನನ್ ಎಲ್ಲಿದನೋ ಎಂದು ಕರುಣಾಕ್ರಂದನಮ್ ಗೆಯ್ವುದುಮ್**=ಕಂಡಿರಾ... ನಮ್ಮ ಮನದನ್ನನಾದ ದುರ್ಯೋಧನನು ಎಲ್ಲಿದ್ದಾನೆ ಎಂದು ಕರುಣೆ ಉಕ್ಕುವಂತೆ ಗಟ್ಟಿಯಾದ ದನಿಯಲ್ಲಿ ಅರಚುತ್ತ ಗೋಳಾಡುತ್ತಿರಲು; **ಆಗಳ್ ಅದಮ್ ಕಂಡು ಧರ್ಮನಂದನನ್ ಧೃತರಾಷ್ಟ್ರಂಗಮ್ ಗಾಂಧಾರಿಗಮ್ ಎರಗಿ ಪೊಡೆವಟ್ಟು**=ಆಗ ದುರ್ಯೋಧನನ ರಾಣಿವಾಸದ ಹೆಂಗಸರು ತೀವ್ರವಾಗಿ ಗೋಳಾಡುತ್ತಿರುವುದನ್ನು ಕಂಡ ಧರ್ಮರಾಯನು ಧೃತರಾಷ್ಟ್ರ ಮತ್ತು ಗಾಂಧಾರಿಯ ಬಳಿಗೆ ಬಂದು ತಲೆಬಾಗಿ ನಮಸ್ಕರಿಸಿ,

ದೊಡ್ಡಪ್ಪನಾದ ಧೃತರಾಷ್ಟ್ರನನ್ನು ಕುರಿತು ಈ ರೀತಿ ನುಡಿಯತೊಡಗುತ್ತಾನೆ; ಅಯ್ಯ=ತಂದೆ/ಅಪ್ಪ; ಬಾಡ=ಊರು; **ಅಯ್ಯ, ಎಮಗೆ ಬಾಡಮ್ ಅಯ್ದನ್ ಈಯದೆ... ಸಂಧಿಯನ್ ಒಲ್ಲದೆ ನಿಮ್ಮ ಗಾಂಗೇಯರ ಮಾತು ಕೇಳದೆ ಕುರುರಾಜನ್ ಅಳಿದನ್**=ಅಯ್ಯ, ಪಾಂಡುವಿನ ಅಯ್ದು ಮಂದಿ ಮಕ್ಕಳಾದ ನಮಗೆ ಅಯ್ದು ಊರುಗಳನ್ನು ಕೊಡದೆ, ಕೃಷ್ಣನು ಮಾಡಲು ಯತ್ನಿಸಿದ ಸಂಧಿಯನ್ನು ನಿರಾಕರಿಸಿ, ಕುರುಕುಲದ ಹಿರಿಯರಾದ ಗಾಂಗೇಯರ ಹಿತನುಡಿಗಳನ್ನು ಕೇಳದೆ ದುರ್ಯೋಧನನು ಸಾವನ್ನಪ್ಪಿದನು; ಬಾಯಳಿಯಲ್+ಬೇಡ; ಬಾಯಳಿ= ಗೋಳಾಡು/ಸಂಕಟಪಡು;

**ಅದರ್ಕೆ ದುಃಖದಿಮ್ ಬಾಯಳಿಯಲ್ಕೆವೇಡ**= ದುರ್ಯೋಧನನ ಸಾವಿಗಾಗಿ ಸಂಕಟದಿಂದ ಗೋಳಾಡಬೇಡಿರಿ; **ನಿಮಗೆ ಆನ್ ಮಗನಲ್ಲನೆ**=ನಿಮಗೆ ನಾನು ಮಗನಲ್ಲವೇ; ಅಮೋಘ=ಅತಿಶಯವಾಗಿ; ಅಗ್ಗಳ=ಹಿರಿಮೆ/ಹೆಚ್ಚುಗಾರಿಕೆ; **ಇನ್ ಎಮಗೆ ಅಮೋಘಮ್ ಪಾಂಡುಮಹೀಪತಿಯಿಂದಮ್ ಅಗ್ಗಳಮ್ ನೀಮೆ ತಂದೆಯುಮ್ ತಾಯುಮ್**=ಇನ್ನು ಮುಂದೆ ನಮಗೆ ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ತಂದೆ ಪಾಂಡುರಾಜನಿಗಿಂತಲೂ ಹಿರಿಮೆಯುಳ್ಳವರಾಗಿ ನೀವೇ ತಂದೆಯೂ ತಾಯಿಯೂ ಆಗಿರುತ್ತೀರಿ; ಬೆಸಕೆಯ್=ಹೇಳಿದ ಕೆಲಸವನ್ನು ಮಾಡು; ನಿಮಗೆ **ಅಯ್ವರ್ ಬೆಸಕೆಯ್ವೆಮ್**=ಪಾಂಡವರಾದ ನಾವು ಅಯ್ದು ಮಂದಿಯು ನಿಮ್ಮ ಸೇವೆಯನ್ನು ಮಾಡಿಕೊಂಡಿರುತ್ತೇವೆ; ಕ್ರಮ=ಪರಂಪರೆ/ಪದ್ಧತಿ; ಎಮ್ಮಿನ್= ನಮ್ಮನ್ನು; **ಕ್ರಮದೆ ಎಮ್ಮಿನ್ ಕೂಡಿಕೊಂಡು ಪೂರ್ವಕ್ರಮದಿಂದೆ ನೆಲನಮ್ ಆಳ್ವುದು**=ಕುರುವಂಶದ ಪರಂಪರೆಯಂತೆ ನಮ್ಮನ್ನು ನಿಮ್ಮ ಜತೆ ಸೇರಿಸಿಕೊಂಡು, ಹಿಂದಿನಿಂದ ನಡೆದುಬಂದ ರೀತಿಯಲ್ಲಿಯೇ ರಾಜ್ಯವನ್ನು ನೀವೇ ಆಳುವುದು; ಅಂಧ=ಕುರುಡ; ನೃಪಾಲ=ರಾಜ; ಅಂಧನೃಪಾಲ=ರಾಜ ಧೃತರಾಷ್ಟ್ರನು ಹುಟ್ಟು ಕುರುಡನಾಗಿದ್ದನು;

**ಅಂಧನೃಪಾಲಾ, ಎಮ್ಮನ್ ನೋಡಿ... ಇನ್ ನಿಮ್ಮ ಸುತರನ್ ಮರೆವುದು ಎಂದು ಧರ್ಮನಂದನನ್ ನುಡಿಯೆ**=ತಂದೆಯೇ, ನಮ್ಮನ್ನು ನೋಡಿ, ಇನ್ನು ಮುಂದೆ ನಿಮ್ಮ ಮಕ್ಕಳ ಬಗೆಗಿನ ಸಂಕಟವನ್ನು ಮರೆಯುವುದು ಎಂದು ಧರ್ಮರಾಯನು ಬೇಡಿಕೊಳ್ಳಲು; ಅವಧಾರಿಸು=ಮನಸ್ಸಿಗೆ ತಂದುಕೊಂಡು/ಕೇಳು; **ಧೃತರಾಷ್ಟ್ರನ್ ಅವಧಾರಿಸಿ**=ಧೃತರಾಷ್ಟ್ರನು ಧರ್ಮರಾಯನ ಮಾತುಗಳನ್ನು ಮನಸ್ಸಿಗೆ ತಂದುಕೊಂಡು; ಮಾನಸ+ಬಾಳ್; ಮಾನಸ=ಮಾನವ; ಯಮನಂದನ=ಯಮ ದೇವತೆಯ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು/ ಧರ್ಮರಾಯ; ಮಾನಸವಾಳ್=ಲೋಕದಲ್ಲಿ ಹಣ,ಒಡವೆ,ವಸ್ತು, ಅಧಿಕಾರವನ್ನು

ಸಂಪಾದಿಸಿ, ಒಲವು ನಲಿವು ನೆಮ್ಮದಿಯಿಂದ ಮಾನವ ಬಾಳನ್ನು ನಡೆಸುವುದು; ಮೋಹಮ್+ಇಲ್ಲ; ಮೋಹ=ಪ್ರೀತಿ; **ಯಮನಂದನ, ಎಮಗೆ ಇನ್ನುಮ್ ಮಾನಸವಾಳ ಮೋಹಮಿಲ್ಲ**=ಧರ್ಮರಾಯನೇ, ನಮಗೆ ಇನ್ನೂ ಹೆಚ್ಚು ಕಾಲ ಈ ಜಗತ್ತಿನಲ್ಲಿ ಮಾನವ ಬದುಕನ್ನು ನಡೆಸಬೇಕೆಂಬ ಆಸೆಯಿಲ್ಲ; ಇನಿತು=ಇಷ್ಟು; ಬೇಳ್ಪೆನ್=ಬೇಡುತ್ತೇನೆ;

**ಇಂದು ನಿನ್ನನ್ ಇನಿತಮ್ ಬೇಳ್ಪೆನ್**=ಇಂದು ನಿನ್ನನ್ನು ಇಷ್ಟು ಮಾತ್ರ ಬೇಡಿಕೊಳ್ಳುತ್ತೇನೆ; ಅಸು+ಒಸರ್+ದ; ಅಸು=ಪ್ರಾಣ; ಒಸರ್=ಜಿನುಗು/ಸೋರು/ತೊಟ್ಟಿಕ್ಕು; ವನಿತೆ=ಹೆಂಗಸು/ಹೆಂಡತಿ; **ಅಸುವೊಸರ್ದ ಅರಸು ಮಕ್ಕಳಮ್ ಈಗಳ್ ಅವರ ವನಿತೆಯರ್ಗೆ ಕುಡುವುದು ಎನೆ**=ಕುರುಕ್ಷೇತ್ರ ರಣರಂಗದಲ್ಲಿ ಹೋರಾಡಿ ಸಾವನ್ನಪ್ಪಿರುವ ಅರಸು ಮಕ್ಕಳ ಹೆಣಗಳನ್ನು ಈಗ ಅವರವರ ಹೆಂಗಸರಿಗೆ ಕೊಡುವುದು ಎನ್ನಲು; ಗಹನ=ದೊಡ್ಡ ಸಂಗತಿ/ವಿಚಾರ; ಸಂಸ್ಕಾರ ವಿಧಿ=ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ಹೆಣಗಳನ್ನು ಹೂಳುವ ಇಲ್ಲವೇ ಸುಡುವ ಕ್ರಿಯೆ ಮತ್ತು ನಂತರದ ಆಚರಣೆಗಳು;

**ಇದಾವ ಗಹನಮ್. ಅವರ್ಗಳ್ಗಮ್ ಸಂಸ್ಕಾರ ವಿಧಿಯಮ್ ಮಾಳ್ಪೆನ್ ಎಂದಾಗಳ್**=ಇದು ಯಾವ ದೊಡ್ಡ ಸಂಗತಿ ಎಂದು ನನ್ನನ್ನು ಕೇಳಿಕೊಳ್ಳುತ್ತಿರುವಿರಿ. ರಣರಂಗದಲ್ಲಿ ಸಾವನ್ನಪ್ಪಿದವರೆಲ್ಲರ ಅವರು ಕುರುವಂಶದವರಾಗಿರಲಿ ಇಲ್ಲವೇ ಯಾರೇ ಆಗಿರಲಿ ಅವರೆಲ್ಲರ ಸಂಸ್ಕಾರ ಕ್ರಿಯೆಗಳನ್ನು ಮಾಡುತ್ತೇನೆ ಎಂದು ಧರ್ಮರಾಯನು ಧೃತರಾಷ್ಟ್ರನಿಗೆ ಹೇಳುತ್ತಿರುವಾಗ; ಚೊಚ್ಚಿಲು=ಮೊದಲನೆಯ ಬಸಿರು; ಚೊಚ್ಚಿಲ ಮಗ=ಮೊದಲನೆಯ ಮಗ; ದಿನೇಶ=ಸೂರ್ಯ; ಸುತ=ಮಗ; ದಿನೇಶಸುತ=ಸೂರ್ಯ ದೇವತೆಯ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗ/ಕರ್ಣ; ಅಂಗ+ಮಹಿತಳ+ಅಧಿಪ; ಮಹಿತಳ=ಭೂಪ್ರದೇಶ/ಪ್ರಾಂತ್ಯ; ಅಧಿಪ=ಒಡೆಯ/ರಾಜ; ರಾಧಾತನಯ=ರಾಧೆಯ ಮಗ; ರಾಧೆ ಎನ್ನುವವಳು ಕರ್ಣನ ಸಾಕು ತಾಯಿ; ಕುಂತಿಯು ಪಾಂಡುರಾಜನನ್ನು ಮದುವೆಯಾಗುವುದಕ್ಕೆ ಮುನ್ನವೇ ವಿಶ್ವಾಮಿತ್ರ ಮುನಿಯು ಕೊಟ್ಟಿದ್ದ ವರಗಳು ದಿಟವೋ ಸಟೆಯೋ ಎಂಬುದನ್ನು ಒರೆಹಚ್ಚಿ ನೋಡಲೆಂದು ಸೂರ್ಯದೇವನನ್ನು ಕರೆದಾಗ, ಸೂರ್ಯನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಗಂಡು ಮಗು ಹುಟ್ಟುತ್ತದೆ. ಲೋಕಾಪವಾದಕ್ಕೆ ಹೆದರಿ ಕುಂತಿಯು ಮಗುವನ್ನು ತೊಟ್ಟಿಲಲ್ಲಿಟ್ಟು ಗಂಗಾ ನದಿಯಲ್ಲಿ ಬಿಡುತ್ತಾಳೆ. ನದಿಯ ದಂಡೆಯಲ್ಲಿದ್ದ ಬೆಸ್ತನೊಬ್ಬನು ಮಗುವನ್ನು ಕಂಡು ಮೋಹಗೊಂಡು, ಮನೆಗೆ ಕೊಂಡೊಯ್ದು ತನ್ನ ಹೆಂಡತಿ ರಾಧೆಗೆ

ಕೊಡುತ್ತಾನೆ. ಈ ಗಂಡಹೆಂಡತಿಯು ಆ ಮಗುವಿನ ಸಾಕು ತಾಯಿತಂದೆಯಾಗಿ ಬೆಳಸುತ್ತಾರೆ. ಈ ಮಗುವೇ ಮುಂದೆ ಕರ್ಣನೆಂಬ ಹೆಸರಿನಲ್ಲಿ ಕೀರ್ತಿವಂತನಾಗುತ್ತಾನೆ; **ಕಳೇಬರ**=ಹೆಣ; ಭೋಂಕನೆ=ಇದ್ದಕ್ಕಿದ್ದಂತೆಯೇ;

**ಕುಂತಿ ತನ್ನ ಚೊಚ್ಚಿಲ ಮಗನನ್ ದಿನೇಶಸುತನ್ ಅಂಗಮಹಿತಳಾಧಿಪ ರಾಧಾತನಯನ ಕಳೇಬರಮನ್ ಭೋಂಕನೆ ಕಂಡಳ್**=ಕುಂತಿಯು ತನ್ನ ಚೊಚ್ಚಿಲ ಮಗನೂ ಸೂರ್ಯಪುತ್ರನೂ ಅಂಗರಾಜ್ಯದ ಒಡೆಯನೂ ರಾಧೆಯ ಮಗನೂ ಆದ ಕರ್ಣನ ಹೆಣವನ್ನು ಆ ರಣರಂಗದ ಎಡೆಯೊಂದರಲ್ಲಿ ಭೋಂಕನೆ ಕಂಡಳು; ತನು+ಶೋಕ+ಅನಳನ್; ತನು=ದೇಹ; ಅನಳ/ಲ=ಬೆಂಕಿ; ಅಳುರು=ಆವರಿಸು/ ಸುಡು; **ತನು ಶೋಕಾನಳನ್ ಅಳುರಲ್**=ಕುಂತಿಯ ಮಯ್ ಮನದಲ್ಲಿ ಸಂಕಟದ ಬೆಂಕಿಯು ಸುಡುತ್ತಿರಲು; ತಳ್ಕೈಸು=ತಬ್ಬು/ಅಪ್ಪು; ಪಳಯಿಸು=ಗೋಳಾಡು/ ಪ್ರಲಾಪಿಸು; ನಿಜ=ತನ್ನ; **ಅಂತು ಕರ್ಣನ ಕಳೇಬರಮನ್ ತಳ್ಕೈಸಿ ಪಳಯಿಸುವ ನಿಜ ಜನನಿಯಮ್ ಧರ್ಮನಂದನನ್**=ಆ ರೀತಿ ಕರ್ಣನ ಹೆಣವನ್ನು ತಬ್ಬಿಕೊಂಡು ಗೋಳಾಡುತ್ತಿರುವ ತನ್ನ ತಾಯಿ ಕುಂತಿಯನ್ನು ನೋಡಿ ಗಾಸಿಗೊಂಡ ಧರ್ಮರಾಯನು; ಇವನ್+ಆರ್ಗೆ; ಆರ್=ಯಾರು; ಬೆಸಗೊಳ್=ಕೇಳು/ ವಿಚಾರಿಸು;

**ಇವನಾರ್ಗೆ ಎಂದು ಬೆಸಗೊಳ್ವುದುಮ್**=ಇವನು ಯಾರ ಮಗ ಎಂದು ತಾಯಿ ಕುಂತಿಯನ್ನು ಧರ್ಮರಾಯನು ಕೇಳಲು; ವನ+ಜಾತ+ಪ್ರಿಯ+ ಬಂಧುಗೆ; ವನ=ನೀರು; ಜಾತ=ಹುಟ್ಟಿದ್ದು; ವನಜಾತ=ತಾವರೆ; ವನಜಾತಪ್ರಿಯಬಂಧು= ಸೂರ್ಯ; ಅಂಗಪತಿ=ಅಂಗದೇಶದ ರಾಜನಾದ ಕರ್ಣ; ಧರ್ಮ=ಯಮನೆಂಬ ದೇವತೆ; ಹುತಾಶನ=ಅಗ್ನಿ ಎಂಬ ದೇವತೆ; ಹುತಾಶನಮಿತ್ರ=ವಾಯು ಎಂಬ ದೇವತೆ; ಬಕಾರಿ=ಬಕನೆಂಬ ರಕ್ಕಸನಿಗೆ ಶತ್ರುವಾದವನು/ಭೀಮ; ಕುಲಿಶಿ= ವಜ್ರಾಯುಧ; ಕುಲಿಶಿಗ=ವಜ್ರಾಯುಧವನ್ನುಳ್ಳ ದೇವೇಂದ್ರ; ಗಾಂಡೀವಿ= ಗಾಂಡೀವವೆಂಬ ಬಿಲ್ಲನ್ನುಳ್ಳವನು/ಅರ್ಜುನ; **ವನಜಾತಪ್ರಿಯಬಂಧುಗೆ ಅಂಗಪತಿಯನ್... ಧರ್ಮಂಗೆ ನಿನ್ನನ್... ಹುತಾಶನಮಿತ್ರಂಗೆ ಬಕಾರಿಯನ್... ಕುಲಿಶಿಗಮ್ ಗಾಂಡೀವಿಯನ್ ಪೆತ್ತೆನ್**=ಸೂರ್ಯದೇವನಿಗೆ ಕರ್ಣನನ್ನು ಯಮದೇವನಿಂದ ನಿನ್ನನ್ನು... ವಾಯುದೇವನಿಂದ ಭೀಮನನ್ನು... ದೇವೇಂದ್ರನಿಂದ ಅರ್ಜುನನನ್ನು ಹೆತ್ತೆನು; ದಿನಕೃತ್=ಸೂರ್ಯದೇವ; ಅಗ್ರಜ=ಅಣ್ಣ;

**ಈ ದಿನಕೃತ್ ನಂದನನ್ ಎನ್ನ ಚೊಚ್ಚಿಲ ಮಗನ್. ಕರ್ಣನ್ ನಿಮ್ಮ ಅಗ್ರಜನ್**= ಈ ಕರ್ಣನು ನನ್ನ ಚೊಚ್ಚಿಲ ಮಗ. ಕರ್ಣ ನಿಮ್ಮ ಅಣ್ಣ; ಆನ್=ನಾನು; ಇನಿತಮ್=ಇದೆಲ್ಲವನ್ನು; ಮೋಹ=ಅಕ್ಕರೆ/ಪ್ರೀತಿ; ಉಸಿರದೆ+ಇರ್ದೆನ್;

ಉಸಿರು=ಹೇಳು; **ಆನ್ ಇನಿತಮ್ ನಿಮ್ಮಯ ಮೋಹದಿಂದೆ ಉಸಿರದಿರ್ದೆನ್**= ನಾನು ಇದೆಲ್ಲವನ್ನೂ ನಿಮ್ಮಗಳ ಮೋಹದಿಂದೆ ಇದುವರೆಗೂ ಹೇಳದೆ ಇದ್ದೆನು; **ಧರ್ಮಜಾ, ಕೊಂದೆನಯ್ ಎಂಬುದುಮ್**=ಧರ್ಮರಾಯನೇ, ನನ್ನ ಚೊಚ್ಚಿಲ ಮಗನನ್ನು ನಾನೇ ಕೊಂದೆ ಎಂದು ಕುಂತಿಯು ಗೋಳಾಡುತ್ತ ಹೇಳಲು; **ಮಕ್ಕಳ್ ಅತ್ಯಂತ ದುಃಖಿತರಾಗಿ**=ಕರ್ಣನು ತಮ್ಮೆಲ್ಲರ ಅಣ್ಣನೆಂಬ ಸುದ್ದಿಯನ್ನು ಕೇಳಿ ಪಾಂಡವರು ಅತ್ಯಂತ ಸಂಕಟಕ್ಕೆ ಒಳಗಾಗಿ; ಕರಮ್=ಹೆಚ್ಚಾಗಿ/ಬಹಳವಾಗಿ; ನೆಗಳ್=ಮಾಡು; **ಕರಮ್ ಇಂತು ಒಂದು ಅವಿವೇಕಮಮ್ ನೆಗಳ್ದಿರ್**=ಎಲ್ಲಕ್ಕಿಂತ ಮಿಗಿಲಾಗಿ ಈ ರೀತಿ ವಿವೇಕವಿಲ್ಲದ ಕೆಲಸವನ್ನು ಮಾಡಿದಿರಿ;

**ಅಂದೇಕೆ ಇಂತುಟಮ್ ಪೇಳದಿರ್ದಿರೊ**=ಮೊದಲೇ ಏಕೆ ಈ ಸಂಗತಿಯನ್ನು ನಮಗೆ ಹೇಳದೆ ಸುಮ್ಮನಿದ್ದಿರಿ; **ಮುನ್ ಪೇಳ್ದೊಡೆ ಇದೇಕೆ ಕೂಡಿದಪುದು**=ನೀವು ಮೊದಲೇ ಈ ಸಂಗತಿಯನ್ನು ಹೇಳಿದ್ದರೆ, ಕುರುಕ್ಷೇತ್ರ ರಣರಂಗದಲ್ಲಿ ಇಂತಹ ದುರಂತವೇ ನಡೆಯುತ್ತಿರಲಿಲ್ಲ; ಉರ್ವರೆ=ಭೂಮಿ; ಸೌದರ್ಯ= ಅಣ್ಣತಮ್ಮಂದಿರ ಪ್ರೀತಿ; **ಎಮ್ಮ ಅಣ್ಣಂಗೆ ಉರ್ವರೆಯಮ್ ಕೊಟ್ಟು... ಅವನ್ ಆಳ್ದನ್ ಆಗೆ... ಬಳಿಕ ಆವು ಆಳಾಗಿ ಸೌದರ್ಯದಿಂದೆ ಇರೆವೇ**=ನಮ್ಮ ಅಣ್ಣನಾದ ಕರ್ಣನಿಗೆ ಭೂಮಂಡಲವನ್ನು ಕೊಟ್ಟು, ಅವನು ರಾಜನಾಗಿ ಆಳುತ್ತಿರಲು, ಬಳಿಕ ನಾವು ಅವನ ಸೇವೆಯನ್ನು ಮಾಡುತ್ತ ಅಣ್ಣತಮ್ಮಂದಿರು ಪ್ರೀತಿಯಿಂದ ಜತೆಗೂಡಿ ಬಾಳುತ್ತಿರಲಿಲ್ಲವೇ; ಪೊಲ್ಲದು=ಸರಿಯಲ್ಲದುದು/ಅಹಿತವಾದುದು; ಜಡಿ= ಗದರಿಸು; **ಪೊಲ್ಲದು ಗೆಯ್ದಿರಿ ಎಂದು ಕುಂತೀಸುತರ್ ಕೊಂತಿಯನ್ ಜಡಿದರು**= ಹಿತವಲ್ಲದ್ದನ್ನು ಮಾಡಿದಿರಿ ಎಂದು ಪಾಂಡುವರು ಕುಂತಿಯನ್ನು ಗದರಿಸಿದರು;

**ಎಂಬುದುಮ್ ನಾರಾಯಣನ್**=ತಾಯಿ ಕುಂತಿದೇವಿಯನ್ನು ಮಕ್ಕಳು ಈ ರೀತಿ ಗದರಿಸುತ್ತಿರುವುದನ್ನು ನೋಡಿದ ಕೃಷ್ಣನು ಅವರೆಲ್ಲರನ್ನೂ ಸಮಾಧಾನಪಡಿಸುವಂತಹ ಮಾತುಗಳನ್ನಾಡಲು ತೊಡಗುತ್ತಾನೆ; ವಲಮ್= ದಿಟವಾಗಿ/ನಿಶ್ಚಯವಾಗಿ; **ಕ್ಷತ್ರಿಯ ಧರ್ಮಮ್ ಇಂತುಟೆ ವಲಮ್**= ಕ್ಷತಿಯ ಧರ್ಮ ಇರುವುದೇ ಈ ರೀತಿಯಾಗಿ; ಈ ಧರ್ಮದಲ್ಲಿ ಹುಟ್ಟಿಬೆಳೆದವರು ದಾಯಾದಿಗಳಾಗಿ ಕಾಳೆಗದಲ್ಲಿ ತೊಡಗಿ ಸಾವುನೋವುಗಳಿಗೆ ಕಾರಣರಾಗುತ್ತಿರುತ್ತಾರೆ. ಇಂತಹ ದುರಂತ ಕ್ಷತ್ರಿಯರಲ್ಲಿ ರಾಜ್ಯದ ಅಧಿಕಾರದ ಗದ್ದುಗೆಗಾಗಿ ನಡೆಯುತ್ತಲೇ ಇರುತ್ತದೆ; ಕ್ಷತ=ಪೆಟ್ಟು/ಗಾಯ; ಮನಃಕ್ಷತ=ಮನಸ್ಸಿಗೆ ಬಿದ್ದ ಪೆಟ್ಟು/ಮಾನಸಿಕವಾಗಿ ಉಂಟಾದ ನೋವು; **ಮನಃಕ್ಷತಮ್ ಪಡಲ್ವೇಡಿಮ್**= ಮಾನಸಿಕವಾಗಿ ಗಾಸಿಗೊಳ್ಳಬೇಡಿ; ಸಂಸಾರ=ಲೋಕದಲ್ಲಿ ಮಾನವ ಜೀವಿಯ ಬದುಕು; ಸಂಸಾರ ಸ್ವರೂಪ=ಮಾನವ ಜೀವಿಯ ಬದುಕಿನಲ್ಲಿ ಉಂಟಾಗುವ

ಒಳಿತು ಕೆಡುಕು/ಸಾವುನೋವಿನ ಪ್ರಸಂಗಗಳು; ಸೈರಿಸು= ತಾಳು/ಸಹಿಸು; ವಿಗತ=ಇಲ್ಲದಿರುವ; ವಿಗತ ಶೋಕರ್=ಸಂಕಟವಿಲ್ಲದವರು;

**ಸಂಸಾರ ಸ್ವರೂಪಮನ್ ಅರಿದು ಸೈರಿಸುವುದು ಎಂದು ಅವರಮ್ ವಿಗತ ಶೋಕರ್ ಮಾಡೆ**=ಮಾನವ ಜೀವನದಲ್ಲಿ ಒಳಿತು ಕೆಡುಕು... ಸಾವು ನೋವು ಎಂಬುವು ಇದ್ದೇ ಇರುತ್ತವೆ ಎಂಬ ವಾಸ್ತವವನ್ನು ಅರಿತು ತಾಳ್ಮೆಯಿಂದ ಬಾಳುವುದು ಒಳ್ಳೆಯದು ಎಂದು ಕೃಷ್ಣನು ನುಡಿದು, ಅವರೆಲ್ಲರ ಮನದ ಸಂಕಟವನ್ನು ಪರಿಹರಿಸಲು; ಪ್ರಭೃತಿಗಳ=ಮೊದಲಾದವರ; ದ್ವಿಜ=ಬ್ರಾಹ್ಮಣ; ನಿರ್ವತಿಸು=ಮಾಡು/ನೆರವೇರಿಸು; **ದುರ್ಯೋಧನ ಪ್ರಭೃತಿಗಳ ಪೆಣಂಗಳನ್ ಒಂದೆಡೆಯೊಳ್ ಇಟ್ಟು, ದ್ವಿಜರಿಮ್ ಸಂಸ್ಕಾರ ಕರ್ಮಮನ್ ನಿರ್ವರ್ತಿಸಿ**= ದುರ್ಯೋಧನನನ್ನು ಮೊದಲುಗೊಂಡು ರಣರಂಗದಲ್ಲಿ ಸತ್ತಬಿದ್ದಿದ್ದವರ ಹೆಣಗಳನ್ನು ಒಂದು ಎಡೆಯಲ್ಲಿ ಇಟ್ಟು, ಬ್ರಾಹ್ಮಣರಿಂದ ಉತ್ತರಕ್ರಿಯೆಗಳನ್ನು ನೆರವೇರಿಸಿ; **ಕರ್ಣನ ಕಳೇಬರಮನ್ ಬ್ರಾಹ್ಮಣರಿಮ್ ತಾವೆ ಸಂಸ್ಕಾರಮಮ್ ಮಾಡಿ**=ಕರ್ಣನ ಶವಕ್ಕೆ ಬ್ರಾಹ್ಮಣರ ಜತೆಗೆ ಪಾಂಡವರು ತಾವು ಸೇರಿಕೊಂಡು ಉತ್ತರಕ್ರಿಯೆಯನ್ನು ಮಾಡಿ;

**ಸಮಸ್ತರ್ಗಮ್ ಜಲದಾನ ಕ್ರಿಯೆಗಳಮ್ ನಿರ್ವರ್ತಿಸಿ**=ಹೆಣಗಳನ್ನು ಒಪ್ಪ ಮಾಡಿದ ನಂತರ ಎಲ್ಲರಿಗೂ ನೀರನ್ನು ತರ್ಪಣವಾಗಿ ಬಿಡುವ ಆಚರಣೆಗಳನ್ನು ಮಾಡಿ; ಅನಶನ=ಉಪವಾಸ/ಆಹಾರವನ್ನು ಸೇವಿಸದಿರುವುದು; ದೀಕ್ಷೆ= ನೋಂಪಿ/ ವ್ರತ; ತಾಳ್ದು+ಇಮ್; ಇಮ್=ಮತ್ತೆ/ಇಲ್ಲಿಂದ ಮುಂದೆ; ತಾಳ್ದು=ಹೊಂದು/ಪಡೆ; **ತದನಂತರ ಕೊಂತಿಯುಮ್ ಗಾಂಧಾರಿಯುಮ್ ಧೃತರಾಷ್ಟ್ರನುಮ್ ಕುರು ನರೇಂದ್ರನ ಅರಸಿಯರ್ ಮೊದಲಾಗೆ ಎಲ್ಲರುಮ್ ಅನಶನ ದೀಕ್ಷೆಯಮ್ ಕೈಕೊಂಡು ಉತ್ತಮ ಮೋಕ್ಷಮಮ್ ತಾಳ್ದಿದರ್**= ಉತ್ತರ ಕ್ರಿಯಾದಿಗಳು ಮುಗಿದ ನಂತರ ಕುಂತಿ, ಗಾಂಧಾರಿ, ಧೃತರಾಷ್ಟ್ರ ಮತ್ತು ಕುರುರಾಜನ ಅರಸಿಯರು ಮೊದಲುಗೊಂಡು ರಾಣಿವಾಸದವರೆಲ್ಲರೂ ಉಪವಾಸ ವ್ರತವನ್ನು ಸ್ವೀಕರಿಸಿ ಉತ್ತಮವಾದ ಮೋಕ್ಷವನ್ನು ಹೊಂದಿದರು;

ಇತ್ತಲ್ ಧರ್ಮನಂದನನ್ **ಮುಕುಂದಂಗೆ ಕಯ್ಯಮ್ ಮುಗಿದು=ಈ ಕಡೆ ಧರ್ಮರಾಯನು ಕೃಷ್ಣನಿಗೆ ಕಯ್ಯನ್ನು ಮುಗಿದು; ಇನಿತು+ಒಂದು; ಇನಿತು**=ಇಷ್ಟು; ಉಗ್ರ=ಭಯಂಕರ; ಸಮಸ್ತ=ಸಕಲ/ಎಲ್ಲವನ್ನೂ ಒಳಗೊಂಡ; ಮಹಾಭಾರ+ಅತಿ+ಯುದ್ಧಮ್; ಭಾರ=ಕಷ್ಟಕರವಾದುದು; ಅರಾತಿ=ಹಗೆ/ಶತ್ರು; **ಇನಿತೊಂದು ಉಗ್ರ ಸಮಸ್ತ ಭಾರತ ಮಹಾಭಾರಾತಿಯುದ್ಧಮ್**=ಸಮಸ್ತ ಭಾರತದ ರಾಜರ ಸೇನಾಬಲಗಳನ್ನು ಒಳಗೊಂಡು ಅತಿದೊಡ್ಡ ಹಗೆಯೊಡನೆ ಇಷ್ಟೊಂದು

ಭಯಂಕರವಾಗಿ ನಡೆದ ಮಹಾಯುದ್ಧವು; ನಿಜ+ಅನುಗ್ರಹದ+ಇಂದಮ್+ಆಯ್ತು; ನಿಜ=ನಿನ್ನ; ಅನುಗ್ರಹ=ಕರುಣೆ/ದಯೆ; **ಮುಕುಂದ, ನಿಜಾನುಗ್ರಹದಿಂದಮಾಯ್ತು**=ಕೃಷ್ಣನೇ, ನಿನ್ನ ದಯೆಯಿಂದ ಜಯದಲ್ಲಿ ಮುಕ್ತಾಯಗೊಂಡಿತು; **ಪಾರ್ಥನ್ ಕಿರಿಯನ್**=ಅರ್ಜುನನು ಚಿಕ್ಕವನು; ಮಹೀ=ಭೂಮಿ; **ಎನಗೆ ಮಹೀ ಮೋಹಮಿಲ್ಲ**=ನನಗೆ ರಾಜನಾಗಿ ರಾಜ್ಯವನ್ನು ಆಳಬೇಕೆಂಬ ಮೋಹವಿಲ್ಲ; ಪಟ್ಟಬಂಧಮ್+ಅನ್; ಪಟ್ಟಬಂಧ=ಶಾಸ್ತ್ರೋಕ್ತವಾದ ಆಚರಣೆಗಳಿಂದ ವ್ಯಕ್ತಿಯೊಬ್ಬನಿಗೆ ರಾಜಪದವಿಯನ್ನು ನೀಡುವುದು/ಕಿರೀಟವನ್ನು ತೊಡಿಸಿ ಸಿಂಹಾಸನದ ಮೇಲೆ ರಾಜನನ್ನಾಗಿ ಕುಳ್ಳಿರಿಸುವ ಆಚರಣೆ;

**ಈ ಭೀಮಂಗೆ ನೀನ್ ಪಟ್ಟಬಂಧಮನ್ ಮಾಳ್ಪುದು**=ಈ ಭೀಮನಿಗೆ ನೀನು ಪಟ್ಟವನ್ನು ಕಟ್ಟಿ ಅವನನ್ನು ರಾಜನನ್ನಾಗಿ ಮಾಡುವುದು; ಲಬ್ಧ=ದೊರಕಿದ/ಪ್ರಾಪ್ತವಾದ; **ಈತನ್ ಕುರುಯುದ್ಧ ಲಬ್ಧ ಜಯನ್**=ಈತನು ಕುರುಕ್ಷೇತ್ರ ಯುದ್ಧದಲ್ಲಿ ಜಯಶಾಲಿಯಾಗಿದ್ದಾನೆ; ಪ್ರಸ್ಥಾನಮ್+ಅಮ್; ಪ್ರಸ್ಥಾನ=ಪ್ರಯಾಣ; **ಅದರ್ಕೆ ಹಸ್ತಿನಪುರ ಪ್ರಸ್ಥಾನಮಮ್ ಮಾಡುವಮ್ ಎಂಬುದುಮ್**=ಅದಕ್ಕಾಗಿ ಹಸ್ತಿನಪುರದತ್ತ ಪ್ರಯಾಣವನ್ನು ಮಾಡೋಣ ಎಂದು ನುಡಿಯಲು; ಮುಂತಾಗಿ=ಮುಂದೆ ಬಂದು ನಿಂತು/ಮುಂದಾಳತ್ವವನ್ನು ವಹಿಸಿಕೊಂಡು;

**ಭೀಮಂಗೆ ಪಟ್ಟಬಂಧಮನ್ ಮಾಳ್ಪುದೆಂದು ವಾಸುದೇವನ್ ಮುಂತಾಗಿ**=ಭೀಮನಿಗೆ ಪಟ್ಟಕಟ್ಟುವ ಮಹೋತ್ಸವವನ್ನು ಮಾಡಬೇಕೆಂದು ಕೃಷ್ಣನೇ ಮುಂದಾಳತ್ವವನ್ನು ವಹಿಸಿಕೊಂಡು; ನಿರೂಪಿಸು=ಅಣಿಗೊಳಿಸು/ಸಿದ್ಧಗೊಳಿಸು/ಗೊತ್ತುಪಡಿಸಿದ; **ಸಹದೇವನ್ ನಿರೂಪಿಸಿದ ಶುಭ ಮುಹೂರ್ತದೊಳ್ ಹಸ್ತಿನಪುರಮನ್ ಪೊಕ್ಕು**=ಸಹದೇವನು ಗೊತ್ತುಪಡಿಸಿದ ಒಳ್ಳೆಯ ಕಾಲದಲ್ಲಿ ಹಸ್ತಿನಪುರವನ್ನು ಹೊಕ್ಕು; ತಾಟಿಸು=ಹೊಡೆ/ಬಡಿ; ಮಹಾ+ಭೇರಿ+ರವಮ್; ಮಹಾ=ದೊಡ್ಡ; ಭೇರಿ=ದುಂದುಬಿ/ಒಂದು ಬಗೆಯ ಚರ್ಮವಾದ್ಯ/ನಗಾರಿ; ರವ=ದನಿ/ಶಬ್ದ; ದೆಸೆ=ದಿಕ್ಕು; ತೆಕ್ಕನೆ=ಕೂಡಲೇ/ಅತಿಶಯವಾಗಿ/ಹೆಚ್ಚಾಗಿ; ತೀವು=ಹರಡು/ ವ್ಯಾಪಿಸು;

**ತಾಟಿತ ಮಹಾಭೇರೀರವಮ್ ದೆಸೆಯಮ್ ತೆಕ್ಕನೆ ತೀವೆ**=ಬಡಿಯುತ್ತಿರುವ ದೊಡ್ಡ ದೊಡ್ಡ ನಗಾರಿಗಳಿಂದ ಹೊರಹೊಮ್ಮುತ್ತಿರುವ ದನಿಯು ದಿಕ್ಕುಗಳೆಲ್ಲಕ್ಕೂ ಹೆಚ್ಚಾಗಿ ಹಬ್ಬುತ್ತಿರಲು; ವಿಪ್ರ=ಬ್ರಾಹ್ಮಣ; ಎಂಟು+ದೆಸೆ+ಒಳ್; ಎಣ್ದೆಸೆ=ಎಂಟು ದಿಕ್ಕು; ವೇದ+ನಿನಾದದ+ಇಮ್; ನಿನಾದ=ದನಿ/ಶಬ್ದ; ಪರಸು=ಒಳ್ಳೆಯದನ್ನು ಹಾರಯಿಸು; **ವಿಪ್ರರ್ ಎಣ್ದೆಸೆಯೊಳ್ ವೇದನಿನಾದದಿಮ್ ಪರಸೆ**=ಬ್ರಾಹ್ಮಣರು ಎತ್ತರದ ದನಿಯಲ್ಲಿ ಉಚ್ಚರಿಸುತ್ತಿರುವ ವೇದದ ಮಂತ್ರಗಳು ಎಂಟು

ದಿಕ್ಕುಗಳಲ್ಲಿಯೂ ಒಳಿತನ್ನು ಹಾರೈಸುತ್ತಿರಲು; ಪಂಕೇಜ+ಅಕ್ಷಿ+ಅರ್; ಪಂಕೇಜ= ತಾವರೆ; ಅಕ್ಷಿ=ಕಣ್ಣು; ಸೇಸೆ+ಅನ್+ಇಕ್ಕೆ; ಸೇಸೆ=ಅರಿಸಿನ ಇಲ್ಲವೇ ಕುಂಕುಮವನ್ನು ಬಳಿದಿರುವ ಅಕ್ಕಿಯ ಕಾಳುಗಳು. ಇದನ್ನು ಮಂಗಳಕರವಾದ ಪೂಜೆಯ ಆಚರಣೆ ಗಳಲ್ಲಿ ಬಳಸುತ್ತಾರೆ; **ಪಂಕೇಜಾಕ್ಷಿಯರ್ ಕೂಡಿ ಸಂತಸದಿಮ್ ಸೇಸೆಯನಿಕ್ಕೆ**= ತಾವರೆಗಣ್ಣಿನ ಹೆಂಗಸರು ಜತೆಗೂಡಿ ಆನಂದದಿಂದ ಮಂಗಳಕರವಾದ ಅಕ್ಷತೆಯ ಕಾಳುಗಳನ್ನು ಎರಚುತ್ತಿರಲು; ಪ್ರಾಕಾರ= ಸುತ್ತಲೂ ಕಟ್ಟಿರುವ ಗೋಡೆ; ಮುದ=ಹಿಗ್ಗು;

**ಪಾಂಡವಬಲ ಪ್ರಾಕಾರ ವೀರಂಗೆ ಸಾಹಸ ಭೀಮಂಗೆ ಮನೋಮುದಮ್ ಬೆರಸು ಕೃಷ್ಣನ್ ಪಟ್ಟಮಮ್ ಕಟ್ಟಿದನ್**=ಪಾಂಡವಬಲವನ್ನು ಸುತ್ತುವರಿದು ಕಾಪಾಡುವ ವೀರನಾದ ಸಾಹಸ ಭೀಮನಿಗೆ ಕೃಷ್ಣನು ಮನದ ಹಿಗ್ಗಿನಿಂದ ಕೂಡಿ ಪಟ್ಟವನ್ನು ಕಟ್ಟಿದನು; ಶ್ರೀ+ಅಮ್; ಶ್ರೀ=ಸಂಪತ್ತು ಮತ್ತು ರಾಜ್ಯದ ಗದ್ದುಗೆಯ ದೇವತೆಯಾದ ಲಕ್ಷ್ಮಿ; ಕುರು+ಭೂಭೃತ್+ಬಲ; ಭೂಭೃತ್=ರಾಜ; ಬಲ=ಸೇನೆ; ತೋಯಧಿ+ಒಳ್; ತೋಯಧಿ=ಕಡಲು/ ಸಾಗರ; ಮಂದರ=ಒಂದು ಪರ್ವತದ ಹೆಸರು; ಕಡೆದು=ಮಂತುಗೋಲಿನಿಂದ ಹೊಸೆಯುವುದು/ಕಲಕುವುದು;

**ಕುರುಭೂಭೃದ್ಬಲ ತೋಯಧಿಯೊಳ್ ಭುಜಮಂದರದಿಮ್ ಕಡೆದು ಶ್ರೀಯಮ್ ಪಡೆದು**=ಕುರುರಾಜನ ಸೇನಾಸಾಗರವನ್ನು ತನ್ನ ಬಾಹುವೆಂಬ ಮಂದರ ಪರ್ವತದಿಂದ ಕಡೆದು ಸಂಪತ್ತು ಮತ್ತು ಅಧಿಕಾರದ ಗದ್ದುಗೆಯ ದೇವತೆಯಾದ ಲಕ್ಷ್ಮಿಯನ್ನು ಪಡೆದುಕೊಂಡು; ದಾಯಾದಿ=ಆಸ್ತಿಯಲ್ಲಿ ಪಾಲುದಾರರಾದ ಕುಟುಂಬ ವರ್ಗದವರು; ದಾಯಾದಮಲ್ಲ=ದಾಯಾದಿಗಳಿಗೆ ಜಟ್ಟಿಯಂತಿರುವವನು/ದಾಯಾದಿಗಳನ್ನು ಸದೆಬಡಿಯಬಲ್ಲ ಜಟ್ಟಿ; ಅಜೇಯ= ಸೋಲಿಲ್ಲದವನು; ವಿಭಾಸಿ=ಕಾಂತಿಯಿಂದ ಕಂಗೊಳಿಸುವವನು; **ದಾಯಾದಮಲ್ಲನ್ ಎನಿಸಿದ ಅಜೇಯನ್ ಭುಜಬಲ ವಿಭಾಸಿ ಸಾಹಸಭೀಮನ್**= ದಾಯಾದಿಗಳನ್ನು ಸದೆಬಡಿದ ಜಟ್ಟಿ ಎನಿಸಿದ ಸೋಲರಿಯದ ಸಾಹಸಿಯಾದ ಭೀಮಸೇನನು ತೋಳ್ಬಲದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದನು;

❖

## ಬರಹಗಾರ

**ಹೆಸರು** : ಸಿ.ಪಿ.ನಾಗರಾಜ ( ೧೯೪೫ )

**ತಾಯಿ** : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

**ತಂದೆ** : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

**ಓದು** : ಎಂ.ಎ., ಪಿಎಚ್.ಡಿ.,

**ಕೆಲಸ** : ಕನ್ನಡ ಅಧ್ಯಾಪಕ

೧೯೭೧–೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨–೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬–೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

### ಬರಹ

**೧. ಮುದ್ರಿತ ಪುಸ್ತಕಗಳು**

**ನಾಟಕ:** ಭಾಗೀರಥಿ –– ಅಂಬೆ –– ಹಾವು –– ಅಂಗಿಬಟ್ಟೆ –– ಒಂದು ರೂಪಾಯಿ –– ಕಳ್ಳರಿದ್ದಾರೆ ಎಚ್ಚರಿಕೆ –– ಹೆಣದ ಹಣ –– ಮೂರು ಸಾಮಾಜಿಕ ನಾಟಕಗಳು

**ಗದ್ಯ:** ಕರಿಯನ ಪುರಾಣ –– ಕನಕನ ಅವ್ವ –– ಹಳ್ಳಿಗಾಡಿನ ರೂವಾರಿ –– ಡಾ.ಬಂದೀಗೌಡ –– ಆಣೆ ಪ್ರಮಾಣಗಳು –– ಬಯ್ಗುಳ –– ಸರ್ವಜ್ಞವಚನಗಳ ಓದು –– ಅಲ್ಲಮ ವಚನಗಳ ಓದು –– ಶಿವಶರಣೆಯರ ವಚನಗಳ ಓದು ––

ಶಿವಶರಣರ ವಚನಗಳ ಓದು –– ಬಸವಣ್ಣ ವಚನಗಳ ಓದು –– ಮುದ್ದೆಗಂಟು –– ಶಿವಶರಣಶರಣೆಯರ ವಚನಗಳ ಓದು –– ಪಂಪ ಭಾರತ ಓದು ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು –– ವಚನದಿಂದ ಆಯ್ದ ಸಾಲುಗಳ ಓದು –– ಕುವೆಂಪು ಕವನಗಳ ಓದು –– ಕನ್ನಡ ಬಯ್ಗುಳ ಓದು –– ಬಸವಯುಗದ ವಚನಕಾರರು –– ಕನಕದಾಸರ ರಾಮಧಾನ್ಯ ಪ್ರಸಂಗ ಓದು –– ಬ್ರೆಕ್ಟ್ ಕವನಗಳ ಓದು –– ರವೀಂದ್ರನಾಥ ಠಾಕೂರ್ ಕವನಗಳ ಓದು –– ಸೀತಾ ಪರಿತ್ಯಾಗ ಪ್ರಸಂಗ –– ಕುಮಾರವ್ಯಾಸ ಭಾರತ ಓದು: ಕೀಚಕನ ಪ್ರಸಂಗ ಮತ್ತು ಉತ್ತರ ಕುಮಾರನ ಪ್ರಸಂಗ –– ರಾಘವಾಂಕ : ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು. –– ವಚನಗಳ ಓದು –– ರನ್ನ : ಗದಾಯುದ್ಧ ಕಾವ್ಯ ಪ್ರಸಂಗ ಓದು.

## ೨. ಡಿಜಿಟಲ್ ಪುಸ್ತಕಗಳು:

೧. ಕನ್ನಡ ಸಾಹಿತ್ಯ ಸಂಚಯ
   https://cpnagaraj.sanchaya.net
೨. ಮೈಲಾಂಗ್–ಕನ್ನಡ ಇ ಬುಕ್ಸ್ – ಆಡಿಯೋ ಬುಕ್ಸ್
   https://mylang.in
೩. ಋತುಮಾನ
   https://ruthumana.com

## 3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್
ಕುವೆಂಪು ಕವನಗಳ ಓದು–೧೩ ಎಪಿಸೋಡ್
ಪಂಪ ಭಾರತ ಪ್ರಸಂಗಗಳು – ೯ ಎಪಿಸೋಡ್
ಆಣೆ ಪ್ರಮಾಣಗಳ ಓದು–೧೦

ಕನಕದಾಸರ ರಾಮಧಾನ್ಯ ಪ್ರಸಂಗ–೧
ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ–೬
ಡಿ.ಎನ್. ಶಂಕರ ಭಟ್ – ಭಾಷೆಯ ಬಗೆಗೆ ನೀವೇನು ಬಲ್ಲಿರಿ–೪೧
ಸಿ.ಎಚ್. ರಾಜಶೇಖರ್– ಸಮಗ್ರ ಬುದ್ಧ ಸಾಹಿತ್ಯ ಮಾಲೆ–೩೦
ಕೆ.ವಿ. ನಾರಾಯಣ– ನುಡಿಯರಿಮೆ ಬರಹಗಳು–೨೬
ಕೆ.ವಿ. ನಾರಾಯಣ– ಕನ್ನಡ ಜಗತ್ತು : ಅರ್ಧ ಶತಮಾನ – ೯೧
ದೇವನೂರು ಮಹಾದೇವ – ಎದೆಗೆ ಬಿದ್ದ ಅಕ್ಷರ–೨೯
ಬಿ.ವಿ. ವೀರಭದ್ರಪ್ಪ – ವೇದಗಳಲ್ಲಿ ಜನಸಾಮಾನ್ಯರು–೪೦

ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–೧೩
(ಅನುವಾದ : ಎಚ್.ಎಸ್. ನಾಗಭೂಷಣ)

ಮುರಳಿಧರ ಜಗತಾಪ – ಸಮಾಜ ಸುಧಾರಕ ಮಹಾತ್ಮ ಫುಲೆ – ೨೭
(ಅನುವಾದ : ಅಕಿಂಚನ)

ಬರ್ಟ್ರೆಂಡ್ ರಸೆಲ್ – ಸುಖ ಸಾಧನೆ – ೬೪
(ಅನು : ಯೋಗನರಸಿಂಹಮ್)

ರೈನರ್ ಮಾರಿಯಾ ರಿಲ್ಕ್ – ಯುವಕವಿಗೆ ಬರೆದ ಪತ್ರಗಳು – ೧೦
(ಅನು : ಓ.ಎಲ್. ನಾಗಭೂಷಣ ಸ್ವಾಮಿ)

ರವೀಂದ್ರನಾಥ ಠಾಕೂರ್ ಕವನಗಳ ಓದು–೧೬

ಬ್ರೆಕ್ಟ್ ಕವನಗಳ ಓದು–೧೯

ಕನ್ನಡ ಬಯ್ಗುಳ ಓದು–ಪಿಎಚ್.ಡಿ. ಬರಹ–೨೦

ಮಹಾಶ್ವೇತಾದೇವಿಯವರ ಬದುಕು ಬರಹ – ೨೬
(ಲೇಖಕರು : ಎಚ್.ಎಸ್. ಶ್ರೀಮತಿ)

ಕುಮಾರವ್ಯಾಸ ಭಾರತ ಓದು : ಕೀಚಕನ ಪ್ರಸಂಗ – ೧೩
ಕುಮಾರವ್ಯಾಸ ಭಾರತ ಓದು : ಉತ್ತರ ಕುಮಾರನ ಪ್ರಸಂಗ – ೧೦
ಎಸ್. ಶಿವಾಜಿ ಜೋಯಿಸ್ – ತಥಾಗತ ಬುದ್ಧ ತೋರಿದ ಧರ್ಮಪದ – ೧೦

---

**ವಿಳಾಸ :** ಸಿ.ಪಿ.ನಾಗರಾಜ, 75, 5ನೇ ಕ್ರಾಸ್, 'ಎ' ಬ್ಲಾಕ್, ಕೃಷ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521
e-mail : ngy7777@gmail.com

ಕನ್ನಡ ಸಾಹಿತ್ಯದ ಮಹಾಕವಿಗಳಲ್ಲಿ ರನ್ನ ಪ್ರಧಾನತಃ ' ಶಕ್ತಿ' ಕವಿ. ಆತನಲ್ಲಿರುವ ಉದ್ದಾಮವಾದ ಇತರ ಕಾವ್ಯಗುಣಗಳು ಶ್ರೇಷ್ಠರಾದ ಬೇರೆ ಕನ್ನಡ ಕವಿಗಳಲ್ಲಿ ಸಮ ಪ್ರಮಾಣದಲ್ಲಿಯೋ ಸಮಧಿಕ ಪ್ರಮಾಣದಲ್ಲಿಯೋ ದೊರೆಯುತ್ತವೆ. ಆದರೆ ರನ್ನನ ವಿಶಿಷ್ಟ ಗುಣವಾದ ' ಶಕ್ತಿ ' ಅದೇ ಪ್ರಮಾಣದಲ್ಲಿ ಆ ತೂಕದಲ್ಲಿ ಆ ವೇಗದಲ್ಲಿ ಆ ಮಿಂಚಿನಲ್ಲಿ ಮತ್ತೆಲ್ಲಿಯೂ ಲಭಿಸುವುದಿಲ್ಲ. ರನ್ನನ ' ಶಕ್ತಿ ' ಯ ಭವ್ಯತೆಯೇ ಬೇರೆ; ಅದರ ಭೀಮ ಬಲವೇ ಬೇರೆ; ಅದರ ದುರ್ಯೋಧನ ಧೈರ್ಯವೇ ಬೇರೆ.

ಯಾವ ಪುಟವನ್ನು ತೆರೆಯಲಿ, ಯಾವ ಸನ್ನಿವೇಶವನ್ನು ಗಮನಿಸಲಿ, ಯಾವ ಸಂವಾದವನ್ನು ಆಲಿಸಲಿ, ಯಾವ ವೀರಾಲಾಪವನ್ನು ವಾಚಿಸಲಿ, ಯಾವ ವರ್ಣನೆಯನ್ನು ಆಲಿಸಲಿ ಪೂರ್ವಪರಿಚಿತವಾದ ಅದೇ ' ಶಕ್ತಿ ' ಹೃದಯವಿಹಾರಿಯಾಗುತ್ತದೆ. ಪ್ರಾಣಸಂಚಾರಿಯಾಗುತ್ತದೆ. ಉತ್ಸಾಹ, ರೋಷ, ಔದಾರ್ಯ, ಪ್ರತೀಕಾರಾದಿ ರಜೋಗುಣಪ್ಲಾವಿತ ಸನ್ನಿವೇಶಗಳ ಮಾತಿರಲಿ; ವಿಲಾಪ, ವಿಷಾದ, ನಿರಾಶೆ, ಶೋಕ, ಚಲ, ದೈನ್ಯ, ಮರಣ ಇತ್ಯಾದಿ ತಮೋಗುಣ ಪ್ರಚುರವಾದ ಸನ್ನಿವೇಶಗಳಲ್ಲಿಯೂ ಆ ದುರ್ದಮ್ಯ ' ಶಕ್ತಿ ' ಓದುಗನ ಧಮನಿಗಳಲ್ಲಿ ಅಗ್ನಿಜ್ವಾಲೆಯಂತೆ ಧುಮುಧುಮುಕುವ ಅನುಭವವಾಗುತ್ತದೆ;

ಭೀಮ ದುರ್ಯೋಧನರ ಗದಾಯುದ್ಧ ಪ್ರಸಂಗದಲ್ಲಿ ಹೇಗೋ ಹಾಗೆಯೇ ಆಕ್ರಂದಿಸುತ್ತಿರುವ ' ಕುರುಕುಲ ವಿಲಯಜ್ವಾಲೆ ಪಾಂಚಾಲಿ ' ಯನ್ನು ಸಮೀರ ಕುಮಾರನು ಸಂತೈಸುತ್ತಿರುವ ಸನ್ನಿವೇಶದಲ್ಲಿಯೂ ಆ ' ಶಕ್ತಿ ' ಯ ಮಿಂಚುದೋಳು ನಮ್ಮನ್ನು ಆಲಂಗಿಸುತ್ತದೆ. ದುರ್ಯೋಧನನು ಪಾಂಡವ ಪ್ರಶಂಸಾಪರನಾದ ಸಂಜಯನನ್ನು ತಿರಸ್ಕರಿಸುವ ದೃಶ್ಯದಲ್ಲಿ ಹೇಗೋ ಹಾಗೆಯೇ ಮಡಿದ ಕರ್ಣನ ಕಳೇಬರವನ್ನು ಕಂಡು ಆತನು ಪ್ರಲಾಪಿಸುವಾಗಲೂ ನಮಗೆ ಆ ' ಶಕ್ತಿ ' ಸ್ಪರ್ಶನವಾಗುತ್ತದೆ. ಭೀಮನ ರೌದ್ರ ಪ್ರತಿಜ್ಞೆಯಲ್ಲಿ ಎಂತೊ ಅಂತೆಯೆ ಶರಶಯ್ಯಾಗತರಾದ ಗಾಂಗೇಯರನ್ನು ಬೀಳ್ಕೊಳ್ಳುವ ದುರ್ಯೋಧನನ ಅಮರ್ಷತೆಯಲ್ಲಿಯೂ ಅದೇ ' ಶಕ್ತಿ ' ದರ್ಶಿತವಾಗುತ್ತದೆ.

ಕುವೆಂಪು
' ಶಕ್ತಿ ಕವಿ ' ರನ್ನ
ವಿಭೂತಿ ಪೂಜೆ
೧೯೫೩

ನಾಗು ಸ್ಮಾರಕ ಪ್ರಕಾಶನ
ಬೆಂಗಳೂರು

ರೂ.450/-